ತೇಜಸ್ವಿ ಹಾಗೂ ನಾಗೇಶ್ ಹೆಗಡೆ ಅವರ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯ ಸ್ವರೂಪ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿಎಚ್‌.ಡಿ ಪದವಿಗಾಗಿ

ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಗುಣವತಿ.ಎಸ್

ಮಾರ್ಗದರ್ಶಕರು:

ಡಾ. ಎಂ. ಮಲ್ಲಿಕಾರ್ಜುನ ಗೌಡ

ಸಹಾಯಕ ಪ್ರಾಧ್ಯಾಪಕರು

ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ, ಹಂಪಿ

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

ತೇಜಸ್ವಿ ಹಾಗೂ ನಾಗೇಶ ಹೆಗಡೆ ಅವರ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯ ಸ್ವರೂಪ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಗುಣವತಿ.ಎಸ್

ಮಾರ್ಗದರ್ಶಕರು:
ಡಾ. ಎಂ. ಮಲ್ಲಿಕಾರ್ಜುನ ಗೌಡ
ಸಹ ಪ್ರಾಧ್ಯಾಪಕರು

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

೨೦೧೮-೧೯

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀಮತಿ ಗುಣವತಿ.ಎಸ್ ಅವರು ನನ್ನ ಮಾರ್ಗದರ್ಶನದಲ್ಲಿ **'ತೇಜಸ್ವಿ ಹಾಗೂ ನಾಗೇಶ ಹೆಗಡೆ ಅವರ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯ ಸ್ವರೂಪ'** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್‌ಡಿ ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೇ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಎಂ ಮಲ್ಲಿಕಾರ್ಜುನ ಗೌಡ)
ಮಾರ್ಗದರ್ಶಕರು ಹಾಗೂ ಸಹ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ದಿನಾಂಕ: 21. 12. 18.
ಸ್ಥಳ: ವಿದ್ಯಾರಣ್ಯ

ಘೋಷಣಾ ಪತ್ರ

ಡಾ. ಎಂ. ಮಲ್ಲಿಕಾರ್ಜುನ ಗೌಡ, ಸಹ ಪ್ರಾಧ್ಯಾಪಕರು ಕನ್ನಡ ಭಾಷಾ ಅಧ್ಯಯನ ವಿಭಾಗ ಇವರ ಮಾರ್ಗದರ್ಶನದಲ್ಲಿ **'ತೇಜಸ್ವಿ ಹಾಗೂ ನಾಗೇಶ ಹೆಗಡೆ ಅವರ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯ ಸ್ವರೂಪ'** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಸಿದ್ಧಪಡಿಸಿ ಪಿಎಚ್‌ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿದ್ದೇನೆ. ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಗುಣವತಿ. ಎಸ್.

(ಗುಣವತಿ ಎಸ್)
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ದಿನಾಂಕ: 21.12.18.
ಸ್ಥಳ: ವಿದ್ಯಾರಣ್ಯ

" ತೇಜಸ್ವಿ ಹಾಗೂ ನಾಗೇಶ ಹೆಗಡೆ ಅವರ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯ ಸ್ವರೂಪ "

ಪರಿವಿಡಿ

ಅಧ್ಯಾಯ-ಒಂದು

ಅಧ್ಯಯನದ ಪ್ರಸ್ತುತತೆ, ಉದ್ದೇಶ ಮತ್ತು ವ್ಯಾಪ್ತಿ

೧.೧ ಪ್ರಸ್ತಾವನೆ

೧.೨ ಸಂಶೋಧನೆಯ ಪ್ರಸ್ತುತತೆ

೧.೩ ಸಂಶೋಧನೆಯ ಉದ್ದೇಶಗಳು

೧.೪ ಸಂಶೋಧನೆಯ ವ್ಯಾಪ್ತಿ

೧.೫ ಅಧ್ಯಯನದ ವಿಧಾನಗಳು

೧.೬ ಕೃತಿಕಾರರ ಪರಿಚಯ

ಅಧ್ಯಾಯ-ಒಂದು

ಅಧ್ಯಯನದ ಪ್ರಸ್ತುತತೆ, ಉದ್ದೇಶ ಮತ್ತು ವ್ಯಾಪ್ತಿ

೧.೧ ಪ್ರಸ್ತಾವನೆ:

ಸಾವಿರಾರು ವರ್ಷಗಳಿಂದ ಪರಿಸರದ ತೊಟ್ಟಿಲಲ್ಲಿ ಮನುಕುಲದ ಸಂಸ್ಕೃತಿ ಅರಳಿದೆ ಮತ್ತು ಆಕಾರಗೊಂಡಿದೆ. ಸುತ್ತಲಿನ ಗಾಳಿ, ನೀರು, ನೆಲ, ಬೆಟ್ಟ, ಗಿಡ, ಮರ, ಪಕ್ಷಿ, ಪ್ರಾಣಿ, ಇವುಗಳ ಒಡನಾಟದಲ್ಲಿ ಮನುಷ್ಯನ ಭಾವಕೋಶ ಮತ್ತು ಬುದ್ಧಿಕೋಶಗಳು ಬಲಗೊಂಡಿವೆ. ನಮ್ಮ ಸಂಸ್ಕೃತಿಯ ಮೂಲ ಸ್ಥರದಲ್ಲೇ ಪರಿಸರ ಪ್ರಜ್ಞೆಯ ಅಗತ್ಯವನ್ನು ಒಪ್ಪಿಕೊಳ್ಳಲಾಗಿದೆ. ಸುತ್ತಮುತ್ತಲಿನ ಎಲ್ಲಾ ವಿವರಗಳನ್ನು ಮನುಷ್ಯನ ಬದುಕು ಅವಲಂಬಿಸಿರುವುದು ಮಾತ್ರವಲ್ಲ, ಒಳಗೊಂಡಿದೆಯೆಂಬ ಅರಿವು ಆರಂಭಕಾಲದಿಂದಲೂ ಇದ್ದಂತೆ ತೋರುತ್ತದೆ. ಜಾನಪದ ನೆಲೆಯಿಂದ ಎದ್ದುನಿಂತ ಪರಂಪರೆಯಲ್ಲೂ ಇದು ಹಾಸುಹೊಕ್ಕಾಗಿದೆ. ಇನ್ನು ವೈದಿಕ, ಸಂಸ್ಕೃತ, ಪ್ರಾಕೃತ ಕಾವ್ಯ ನಾಟಕಗಳಲ್ಲೂ, ದೇಶಭಾಷಾ ಕಾವ್ಯ ನಾಟಕಗಳಲ್ಲೂ ಈ ಮನೋಧರ್ಮ ಎದ್ದುಕಾಣುತ್ತದೆ. ವಿಚಾರಮಾಡಿದರೆ ನಮ್ಮ ಮೌಲ್ಯಗಳು ಪರಿಸರ ಪ್ರಜ್ಞೆಯಿಂದಲೇ ಮೈದಳೆದಿವೆ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಆಚಾರ ವ್ಯವಹಾರಗಳಲ್ಲೂ ನಿಸರ್ಗವನ್ನು ಕುರಿತಂತೆ ಗೌರವ ಮತ್ತು ಕೃತಜ್ಞತಾ ಭಾವನೆಗಳಿದ್ದವು. ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯಿಂದಾಗಿ ನಮ್ಮ ಮೌಲ್ಯಗಳು ಬದಲಾಗುತ್ತಿದ್ದು ಪರಿಸರ ಪ್ರಜ್ಞೆಯೂ ಮರೆಯಾಗುತ್ತಿದೆ. ಪರಿಸರವನ್ನು ಕುರಿತಂತೆ ಇದ್ದ ಆದರವೂ ಇಳಿಮುಖವಾಗುತ್ತಿದೆ.

ಮಹಾತ್ಮ ಗಾಂಧೀಜಿ ಜಗತ್ತು ಕಂಡ ಮಹಾನ್ ದಾರ್ಶನಿಕ ಹಾಗೂ ತತ್ವಜ್ಞಾನಿ. ಅವರ ಬದುಕೇ ದುರಾಸೆಯಿಂದ ಎಲ್ಲರೂ ದೂರ ಉಳಿಯಬೇಕೆನ್ನುವ ಸಂದೇಶ ನೀಡುತ್ತದೆ. ಇಂದಿನ ಯುವಪೀಳಿಗೆಗೆ ಗಾಂಧೀಜಿ ಅವರ ಪರಿಸರ ಪ್ರಜ್ಞೆಯೂ ಹೆಚ್ಚು ಪ್ರಸ್ತುತವಾಗುವ ಸಂಗತಿ. ಗಾಂಧೀಜಿ ವಸಾಹತುಶಾಹಿಯ ಮುಷ್ಟಿಯಿಂದ ಈ ಭಾರತವನ್ನು ಬಿಡುಗಡೆಗೊಳಿಸಲು ಮಾತ್ರ ಚಿಂತಿಸಲಿಲ್ಲ. ಭಾರತದ ಗ್ರಾಮ ಜಗತ್ತನ್ನು ಸ್ವಾವಲಂಬಿಯಾಗಿ ಬೆಳೆಸುವ ಬಗ್ಗೆ ಸದಾ ಆಲೋಚಿಸುತ್ತಿದ್ದರು. ಭಾರತ ಹೇಗಿರಬೇಕೆಂದು ಉತ್ಕೃಷ್ಟ ಕನಸು ಕಂಡವರು. ಪರಿಸರ ವಿಜ್ಞಾನವನ್ನು ಅಭ್ಯಾಸ ಮಾಡದಿದ್ದರೂ ಪ್ರಕೃತಿ ಪ್ರಜ್ಞೆಯನ್ನು ಗಾಢವಾಗಿ ಬೆಳೆಸಿಕೊಂಡಿದ್ದರು.

ಗಾಂಧೀಜಿ ಅವರ ಜೀವನಕ್ಕೆ ಒಂದು ಚಾರಿತ್ರಿಕ ತಿರುವನ್ನು ಒದಗಿಸಿದ ಐತಿಹಾಸಿಕ ಪುಸ್ತಕವೆಂದರೆ ಜಾನ್ ರಸ್ಕಿನ್ ಅವರ 'ಅನ್‌ಟು ದಿಸ್ ಲಾಸ್ಟ್'. ಈ ಪುಸ್ತಕ ಪರಿಸರವಾದಿ ಗಾಂಧೀಜಿಯನ್ನು ರೂಪಿಸಿ ಬೆಳೆಸುವಲ್ಲಿ ಮಹತ್ತರ ಪಾತ್ರ ವಹಿಸಿತು. ಪರಿಸರವಾದಿ ಗಾಂಧೀಜಿಯ ಪೂರ್ಣ ಪರಿಚಯವಾಗುವುದು ಅವರು ೧೯೦೮ರಲ್ಲಿ ರಚಿಸಿದ 'ಹಿಂದ್ ಸ್ವರಾಜ್' ಮತ್ತು 'ಸರ್ವೋದಯ'ದ ಪುಸ್ತಕಗಳಲ್ಲಿ. ಭಾರತದ ಹಳ್ಳಿಗಳು ಹೇಗೆ ಸಂಶೋಧನೆಯ ಪ್ರಕೃತಿ ಆರಾಧನೆಯ ಸಂಕೀರ್ಣ ಅರ್ಥಪೂರ್ಣ ಘಟಕಗಳಾಗಬೇಕೆಂದು ಅದರಲ್ಲಿ ಬರೆದಿದ್ದಾರಲ್ಲದೆ ಈ ದೇಶದ ಭವಿಷ್ಯವನ್ನು ಅರಿತಿದ್ದ ಗಾಂಧೀಜಿ ಪಶ್ಚಿಮದ ಯಂತ್ರನಾಗರೀಕತೆಯನ್ನು ಬಲವಾಗಿ ವಿರೋಧಿಸಿದರು. **'ಯಾರು ಏನೇ ಹೇಳಿದರೂ ನಾನು ವಿಘಾತಕ ಯಂತ್ರಗಳನ್ನು ವಿರೋಧಿಸುವೆ. ಯಂತ್ರಗಳೇ ಭಾರತವನ್ನು ಬಡವಾಗಿಸಿವೆ'** ಎಂದು ಪ್ರತಿಪಾದಿಸಿದ್ದು ಮಾತ್ರವಲ್ಲದೆ ಪರಿಸರ ಪೂರಕ ಸಿದ್ಧಾಂತವಾಗಿ ಮರುಬಳಕೆ ಮತ್ತು ಪುನರ್‌ಬಳಕೆ ಸಿದ್ಧಾಂತವನ್ನು ಪ್ರತಿಪಾದಿಸಿದರು. ತಮ್ಮ ಪತ್ರ ವ್ಯವಹಾರ ಮತ್ತು ಲೇಖನಗಳಿಗೆ ಉಪಯೋಗಿಸಿದ ಕಾಗದದ ಖಾಲಿ ಭಾಗವನ್ನು ಮರುಬಳಕೆ ಮಾಡುತ್ತಿದ್ದರು.

ಇಂದು ಎಲ್ಲೆಲ್ಲೂ ನೀರು. ಜಲಕಂಪನ ಮತ್ತು ಭೂಕಂಪನಗಳೆರಡೂ ಒಟ್ಟೊಟ್ಟಿಗೆ. ಮಾಧ್ಯಮಗಳಲ್ಲಿ ಊರು ಊರೇ ಮುಳುಗುತ್ತಿರುವ ಚಿತ್ರಗಳ ದೃಶ್ಯ. ಗುಡ್ಡಗಳು ಕುಸಿಯುತ್ತಿವೆ. ಮಾನವ ನಿರ್ಮಿತ ಅಣೆಕಟ್ಟುಗಳೇ ಸ್ವಾಭಾವಿಕ ಪ್ರಕೃತಿಯ ಮುನಿಸಿಗೆ ಗಡಗಡ ನಡುಗುತ್ತಿವೆ. ಜಲಪ್ರಳಯದಿಂದಾಗಿ ಜೀವನವನ್ನು ಮತ್ತೆ ಶೂನ್ಯದಿಂದಲೇ ಆರಂಭಿಸಬೇಕಾದ ಸ್ಥಿತಿ ಎದುರಿಸುತ್ತಿರುವ ಸಮೂಹ ದೃಶ್ಯ ಕರ್ನಾಟಕದ ಕೊಡಗು ಹಾಗೂ ಕೇರಳ ರಾಜ್ಯದಲ್ಲಿ. ಈ ರೀತಿಯ ಪ್ರಕೃತಿ ವಿಕೋಪ, ಅತಿವೃಷ್ಟಿ, ಅನಾವೃಷ್ಟಿಗೆ ನೇರ ಹೊಣೆಗಾರರು ನಾವೆಲ್ಲರೂ ಆಗಿದ್ದೇವೆ. ಪರಿಸರದ ಮೇಲಿನ ಅತಿಕ್ರಮಣ ಚಟುವಟಿಕೆಗಳು ಮತ್ತು ವಿವೇಕರಹಿತ ಅಭಿವೃದ್ಧಿ ಕ್ರಮಗಳೇ ನಮ್ಮನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸಿವೆ. ಬೋಳಾದ ಘಟ್ಟಗಳು, ಹೆದ್ದಾರಿಗಾಗಿ ನೆಲಕ್ಕುರುಳಿದ ಶತಮಾನದ ಮರಗಳು, ನಗರಗಳಿಗಾಗಿ ಹಸಿರು ಭೂಮಿಗಳ ಪಲ್ಲಟಗಳು, ಕೊಡಲಿ ಸನಿಕೆಗಳ ಜಾಗಕ್ಕೆ ಕ್ರೇನ್ ಬುಲ್‌ಡೋಜರ್ ಜೆಸಿಬಿಗಳು ಒಂದೆಡೆಯಾದರೆ, ಗ್ರಾಮದ ಕೆರೆ, ಗೋಮಾಳಗಳೆಲ್ಲವೂ ದುರಾಸೆಯ ಲಾಭಿಗಳಾಗಿವೆ. ಜೌಗುಭೂಮಿಗಳು ಒತ್ತುವರಿಯಾಗಿವೆ. ಸುರಂಗ ಕೊರೆದು ಭೂ ಸತ್ವದ ಗಟ್ಟಿಯನ್ನೇ ಅಲುಗಾಡಿಸುತ್ತಿರುವ ಯಂತ್ರ ನಾಗರೀಕತೆಗಳು ಮಿತಿ ಮೀರಿದ್ದು ಮನುಷ್ಯನ ಬದುಕಿನ ಪರಮಾವಧಿಯ ಹಂತವನ್ನು ತಲುಪಿವೆ. ಸರಳವಾಗಿ ಬದುಕಿದ ಗಾಂಧೀ ನಮಗೆಲ್ಲಾ ಬರೀ ಆದರ್ಶದ ಮೂರ್ತಿ ಅಷ್ಟೇ. ಅವರ ವಿಚಾರಧಾರೆಗಳಲ್ಲಿ ಅವರು ಪ್ರತಿಪಾದಿಸಿದ ಒಂದು ಪರಿಸರ ನೀತಿಯೆಂದರೆ, **'ಪ್ರಕೃತಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲದು, ಆದರೆ ಅದು ಒಬ್ಬನ ದುರಾಸೆಯನ್ನು ಪೂರೈಸಲಾರದು'** ಎಂಬುದು. ಎಂತಹ ಆಲೋಚನೆ!

ಆದರಿಂದು! ಪ್ರತಿಯೊಬ್ಬರೂ ದುರಾಸೆಯಿಂದಲೇ ಈ ಪ್ರಕೃತಿಯ ಅಗತ್ಯಕ್ಕಾಗಿ ಮೇಲಿಂದ ಮೇಲೆ ಮುಗಿ ಬಿದ್ದಿದ್ದೇವೆ. ಆದರೆ ಅದನ್ನು ಉಳಿಸಿ ಬೆಳೆಸುವ ಪ್ರಜ್ಞೆ ಮಾತ್ರ ಸುಶಿಕ್ಷಿತರಲ್ಲೂ ಮೂಡದಿರುವುದು ದುರಂತವೇ ಸರಿ. ಪ್ರಕೃತಿಯ ತಾಣ ನಾಶವಾಯಿತೆಂದರೆ ಒಂದು ನಾಗರೀಕತೆ, ಜೀವನ ವಿಧಾನ, ಕನಸು, ಕಲ್ಪನೆ ನಾಶವಾದಂತೆ. ಪ್ರಕೃತಿಯೊಂದಿಗೆ

ಬೆಸೆದುಕೊಂಡಿದ್ದ ಅದೆಷ್ಟೋ ಜೀವವೈವಿಧ್ಯಗಳನ್ನು, ನಿಸರ್ಗ ನಂಟಿನಲ್ಲಿದ್ದ ಅದೆಷ್ಟೋ ಸಾವಯವ ಬಂಧಗಳನ್ನು ನಾವೀಗ ಕಳಚಿಕೊಂಡಿದ್ದೇವೆ. ಸರಿಪಡಿಸಲಾಗದ ಅವಸ್ಥೆ ತಲುಪಿದ್ದೇವೆ. **'ಈ ಭೂಮಿ ತಾತ ಮುತ್ತಾತರಿಂದ ಪಡೆದ ಬಳುವಳಿಯಲ್ಲ; ಅದು ಮಕ್ಕಳು ಮೊಮ್ಮಕ್ಕಳಿಂದ ಎರವಲಾಗಿ ಪಡೆದ ಸಾಲ'** ಎನ್ನುತ್ತಾರೆ ಪರಿಸರ ತಜ್ಞ ನಾಗೇಶ ಹೆಗಡೆ ಅವರು. ಪರಿಸರವನ್ನು ಸಮತೋಲನದಲ್ಲಿಡಬೇಕಾದ ನೆಲೆಗಳನ್ನೆಲ್ಲಾ ಒಸಕಿ ಹಾಕುತ್ತಿರುವ ಮಾನವ ಈಗ ನಿಂತಿರುವುದಾದರೂ ಎಲ್ಲಿ? ನೀರು ಅದೆಲ್ಲಿಂದಲೋ ಓತಪ್ರೋತವಾಗಿ ಹರಿದು ಬಂದು ನಮ್ಮ ಬದುಕೇ ಮೂರಾಬಟ್ಟೆಯಾಗುವ ಕಾಲಕ್ಕೆ ನಿಂತಿರುವುದೆಲ್ಲಿ ಎಂದು ತಿಳಿಯುತ್ತದೆ ಅಲ್ಲವೇ? ಆಗ ನೆನಪಾಗುತ್ತದೆ **'ಗಾಂಧಿ'** ಎಂಬುದು ಹೆಸರು ಮಾತ್ರವಲ್ಲ; ಅದು ಸರ್ವಕಾಲಿಕ ಸತ್ಯ ಎಂಬುದು.

ಪರಿಸರವನ್ನು ಅಸಡ್ಡೆಯಿಂದ ಕಾಣುವುದಾಗಲಿ, ಪರಿಸರದೊಂದಿಗೆ ಹೋರಾಟದಲ್ಲಿ ತೊಡಗುವುದಾಗಲಿ ಪರಿಸರದ ಮೇಲೆ ತನ್ನ ಒಡೆತನವನ್ನು ಸ್ಥಾಪಿಸಿಕೊಳ್ಳಬೇಕೆಂಬ ಬಯಕೆಯಾಗಲಿ ನಮ್ಮ ಸಂಸ್ಕೃತಿಗೆ ಸಹಜವಾದುದಲ್ಲ. ಪರಿಸರದ ಹಂಗಿರದೆ ಮನುಷ್ಯ ಬಾಳಬಲ್ಲನೆಂದು ನಮ್ಮ ಸಂಸ್ಕೃತಿ ಎಂದಾದರೂ ನಂಬಿತ್ತು ಎಂಬುದಕ್ಕೆ ಪುರಾವೆಗಳಿಲ್ಲ. ನಾಗರೀಕತೆಗಳು ಉಗಮಗೊಂಡದ್ದೇ ಈ ಪ್ರಕೃತಿಯ ಮಡಿಲಲ್ಲಿ. ಇನ್ನೂ ಸಾಹಿತ್ಯ ಕ್ಷೇತ್ರಕ್ಕೆ ಪೂರಕವಾಗಿ ಪ್ರಸ್ತಾಪಿಸುವುದಾದರೆ ವಿ. ಚಂದ್ರಶೇಖರ ನಂಗಲಿ ಅವರು "ಕನ್ನಡ ನಾಡಿನ ಒಂದು ನಿಸರ್ಗದ ತಾಣ ನಾಶವಾಗುವುದೆಂದರೆ, ಸಂಬಂಧಪಟ್ಟ ಜೈವಿಕ ಪರಿಸರಗಳ ನಾಶ ಮಾತ್ರವಲ್ಲ. ಕನ್ನಡ ನಾಡು – ಕನ್ನಡ ನುಡಿ– ಕನ್ನಡ ಸಂಸ್ಕೃತಿಗಳ ನಾಶವೂ ಹೌದು ಎಂಬುದನ್ನು ಚಿಂತಿಸಬೇಕು. ಭಾಷೆ – ಶಿಕ್ಷಣ – ಸ್ಥಳೀಯ ಭೂಗೋಳ – ಜೈವಿಕ ಪರಿಸರ – ಆರ್ಥಿಕ ಅಭಿವೃದ್ಧಿ – ರಾಜ್ಯದ ಆಡಳಿತ – ಸಂಸ್ಕೃತಿಯ ಸಂಕೀರ್ಣ ಸಂಬಂಧಗಳು ... ಇವೆಲ್ಲವೂಗಳನ್ನು ನಾವು ಅಖಂಡವಾಗಿಯೇ ಗ್ರಹಿಸಬೇಕು. ಆದರೆ ಭೌಗೋಳಿಕ ಬದ್ಧತೆಯ ನಾಡಿನ ಏಕೀಕರಣ ಮತ್ತು ಭಾಷಾ ಬದ್ಧತೆಯ ಕನ್ನಡ ಚಳುವಳಿಗಳ ಹೋರಾಟದಲ್ಲಿ ಅಖಂಡ ಗ್ರಹಿಕೆಯ ಅಭಾವವಿರುವುದರಿಂದ ಅಂತರ್ ಸಂಬಂಧಿಯಾದ ಮತ್ತು ಒಂದರೊಳಗೊಂದು ಹೆಣೆದುಕೊಂಡಿರುವ ಬಹುರೂಪಾತ್ಮಕ ನೆಲೆಗಳು ನಿರ್ಲಕ್ಷಿತವಾಗಿವೆ. ಕನ್ನಡ ನಾಡಿನ ಜೈವಿಕ ಪರಿಸರ ಇಲ್ಲದೆಯೇ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಗಳು ಇರಲು ಸಾಧ್ಯವೇ ಎಂಬುದನ್ನು ಊಹಿಸಿಕೊಳ್ಳಲು ಆಗುತ್ತಿಲ್ಲ. ಉದಾಹರಣೆಗೆ, ಕನ್ನಡ ನಾಡಿನ ನಿಸರ್ಗದ ತಾಣ ಒಂದರಲ್ಲಿ ಬಹುರಾಷ್ಟ್ರೀಯ ಕಂಪನಿಯ ಉದ್ಯಮ ಒಂದು ಆರಂಭವಾಯಿತೆಂದು ಭಾವಿಸಿಕೊಳ್ಳೋಣ. ಆಗ ಅಲ್ಲಿನ ಪರಿಸರಕ್ಕೆ ಅನ್ಯವಾದ ತಂತ್ರಜ್ಞಾನ – ಸಿಬ್ಬಂದಿ ವರ್ಗ – ಹೈಟೆಕ್ ಸೌಲಭ್ಯಗಳು – ವಾಣಿಜ್ಯ ಸಂಕೀರ್ಣಗಳು – ಕಿಂಡರ್ ಗಾರ್ಟನ್ ಸ್ಕೂಲ್‌ಗಳು – ಆಟದ ಮೈದಾನಗಳು – ಉದ್ಯಾನವನಗಳು – ಕ್ರೀಡಾ ಕ್ಲಬ್‌ಗಳು ಒಂದರ ಹಿಂದೆ ಒಂದರಂತೆ ಪ್ರವೇಶ ಪಡೆಯುತ್ತವೆ. ಇಂಥ ವ್ಯವಸ್ಥಿತವಾದ ಪ್ರತಿಷ್ಠಾಪನೆಯ ಮೂಲಕ ಕನ್ನಡ ನುಡಿ ಮತ್ತು ಕನ್ನಡ ಸಂಸ್ಕೃತಿಗಳ ಉಚ್ಚಾಟನೆಯ ತಂತ್ರವೊಂದು ಕೃತಿಗಿಳಿಯುತ್ತದೆ. ಜಗತ್‌ವ್ಯಾಪ್ತಿಯಾದ ಒಂದು ಭಾಷೆ ಮತ್ತು ಒಂದು ಸಂಸ್ಕೃತಿ ಮೇಲುಗೈ ಪಡೆಯುತ್ತದೆ. ಇದನ್ನು ತಪ್ಪಿಸಬೇಕಾದರೆ ನೈಸರ್ಗಿಕ ತಾಣಗಳನ್ನು ಸಂರಕ್ಷಿಸಿಕೊಳ್ಳುವುದರೊಂದಿಗೆ ಕನ್ನಡ ನಾಡಿನ ಸಸ್ಯ ಪರಿಸರ ಮತ್ತು ತಿರ್ಯಕ ಪರಿಸರಗಳ ಬಗ್ಗೆ ಸೂಕ್ಷ್ಮ ಹಾಗೂ ಸಮಗ್ರ ದೃಷ್ಟಿಯ ಅಧ್ಯಯನಗಳು ನಡೆಯಬೇಕು.

ಯಾವುದೇ ಯೂನಿವರ್ಸಿಟಿ, ಅಕಾಡೆಮಿ ಸಾಹಿತ್ಯ ಪರಿಷತ್ತು, ವಿಜ್ಞಾನ ಪರಿಷತ್ತುಗಳು ಇಂತಹ ಯೋಜನೆಗಳನ್ನು ರೂಪಿಸಿಲ್ಲದಿರುವುದು ಒಂದು ದುರಂತ ವ್ಯಂಗ್ಯವೆಂದಿದ್ದಾರೆ." [೧]

ಕನ್ನಡ ಸಾಹಿತ್ಯದಲ್ಲಿ ಪ್ರಾಕೃತಿಕ ಪರಿಸರವನ್ನು ಕೇಂದ್ರೀಕರಿಸಿ ಪರಿಸರದ ಕಾಳಜಿಯಿಂದ ವಿವೇಚಿಸುವಂತಹ ಹಿನ್ನೆಲೆಯಲ್ಲಿ ರಚನೆಯಾದ ಸಾಹಿತ್ಯಗಳು ತುಂಬಾ ವಿರಳ. ಮಹಾನ್ ಕವಿ ಕುವೆಂಪು ಅವರು ಪ್ರಕೃತಿಯನ್ನು ಆಧ್ಯಾತ್ಮದಿಂದಲೇ ಆರಾಧಿಸಿದರು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಜೈವಿಕ ಮಾನವನನ್ನು ಪ್ರಪ್ರಥಮವಾಗಿ ಸೃಷ್ಟಿಸಿದರು. 'ಮಾನವ ಪ್ರತ್ಯೇಕಿತ' ಪರಿಸರ ಮುಖ್ಯವಲ್ಲ ಎಂಬುದನ್ನು ಅವರ ಕೃತಿಗಳಲ್ಲಿ ಕಾಣಬಹುದಾಗಿದೆ. ಕೆಲವು ಬರಹಗಾರರು ಪರಿಸರವನ್ನು ಒಂದು ಆಕರ್ಷಣೆ ಇಲ್ಲವೇ ಶೃಂಗಾರವಾಗಿ ನೋಡಿದ್ದಾರೆ. ಮತ್ತೆ ಕೆಲವರು ನಾಡಿನ ಪ್ರಕೃತಿಯ ರಮಣೀಯತೆಯನ್ನು ಆಸ್ವಾದಿಸುತ್ತಾ ವರ್ಣಿಸಿದರು. ಕೆಲವರು ಅವುಗಳನ್ನು ಭಾವಚಿತ್ತರಾಗಿ ಹಾಡಿದರು. ಆದರೆ ಜೈವಿಕ ಪರಿಸರದ ಒಡನಾಡಿಯಾಗಿ ಅದರ ಅಗತ್ಯತೆಯ ಮಿತಿ ಮತ್ತು ಅದು ಎದುರಿಸುತ್ತಿರುವ ಅಪಾಯವನ್ನು ವಸ್ತುನಿಷ್ಠವಾಗಿ ಶೋಧಿಸಿ ಅದಕ್ಕನುಗುಣವಾದ ವಸ್ತು ವಿಷಯವನ್ನು ಆಯ್ಕೆಮಾಡಿ ಬರೆದ ಬರಹಗಾರರು ಮಾತ್ರ ಬೆರಳೆಣಿಕೆಯಷ್ಟು ಮಾತ್ರ. ಡಾ.ಶಿವರಾಮ ಕಾರಂತರು 'ಪ್ರಾಣಿ ಪ್ರಪಂಚ'ದಂತಹ ವಿಸ್ಮಯಕಾರಿ ವಿಚಾರಗಳ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಪ್ರಕಾರದ ಸಂಚಲನಕ್ಕೆ ಕಾರಣೀಭೂತರಾದರು. ಬಿ.ಜಿ.ಎಲ್.ಸ್ವಾಮಿ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ನಾ.ಡಿಸೋಜ, ನಾಗೇಶ ಹೆಗಡೆ ಹಾಗೂ ಇನ್ನಿತರೆ ಕೆಲವೇ ಸಾಹಿತಿಗಳು ಪರಿಸರವನ್ನು ವೈಜ್ಞಾನಿಕ ಮತ್ತು ವೈಚಾರಿಕ ನೆಲೆಗಟ್ಟಿನಲ್ಲಿ ಗ್ರಹಿಸಿ ಬರೆಯಲು ಮನಸ್ಸು ಮಾಡಿದರು. ಈ ಬರಹಗಾರರು ಪರಿಸರವನ್ನು ವಿಜ್ಞಾನವಾಗಿ, ಸಾಮಾಜಿಕ ವಿಜ್ಞಾನವಾಗಿ, ಜೀವಸ್ತೋಮ ಮತ್ತು ಮಾನವ ಸಂಕುಲದ ಅಗತ್ಯವಾಗಿ ನೋಡಿದ್ದರಿಂದಲೇ ಕರ್ವಾಲೋ, ಚಿದಂಬರರಹಸ್ಯ, ವಿಸ್ಮಯ, ಪರಿಸರದ ಕತೆ, ಮಿಂಚುಳ್ಳಿ, ಬೆಟ್ಟದ ಜೀವ, ಚಿಗುರಿದ ಕನಸು, ಹಸಿರು ಹೊನ್ನು, ಇರುವುದೊಂದೇ ಭೂಮಿ, ಅಭಿವೃದ್ಧಿಯ ಅಂಧಯುಗ, ಪ್ರತಿದಿನ ಪರಿಸರ ದಿನ, ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು, ಕೆರೆಯಲಿ ಚಿನ್ನ; ಕೆರಯೇ ಚಿನ್ನ, ಮುಳುಗಡೆ, ದ್ವೀಪ, ಒಡ್ಡು ಇತ್ಯಾದಿ ಪರಿಸರ ಪ್ರಜ್ಞೆ ದೃಷ್ಟಿಕೋನದ ಮಹತ್ವದ ಕೃತಿಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸೇರ್ಪಡೆಗೊಂಡವು. ಇವುಗಳೊಂದಿಗೆ ಡಾ.ಶಿವರಾಮ ಕಾರಂತರು ಸಾಮಾಜಿಕ ಬದುಕಿನ ಸಂಕೀರ್ಣಗಳ ಜೊತೆ ಪರಿಸರದ ಬಗ್ಗೆಯೂ ಕೆಲಸ ಮಾಡಿದ್ದು ಶ್ಲಾಘನೀಯ. ಇಲ್ಲಿ ನಾವು ಕಾರಂತರು ಪರಿಸರದ ಬಗ್ಗೆ ಎಷ್ಟು ಬರೆದಿರುವರು ಎನ್ನುವುದಕ್ಕಿಂತ ಅವರು ಪರಿಸರ ರಕ್ಷಣೆಗಾಗಿ ಮಾಡಿದ ಚಳುವಳಿ ಕುರಿತು ಗಮನಹರಿಸಲೇಬೇಕು. ಮೊಟ್ಟಮೊದಲ ಬಾರಿಗೆ ಭಾರತದ ಅಭಿವೃದ್ಧಿ ಪಥವನ್ನು ಪ್ರಶ್ನಿಸುವ ನಿಟ್ಟಿನಲ್ಲಿ ಶಿರಸಿಯಲ್ಲಿ ಲಿಂಗೇಶ್‌ಶರ್ಮ ಆಯೋಜಿಸಿದ್ದ ನಾಲ್ಕು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಕಾರಂತರು ಅಧ್ಯಕ್ಷತೆಯನ್ನು ವಹಿಸಿದ್ದರು. ದಕ್ಷಿಣ ಕನ್ನಡದಲ್ಲಿ ಅಣುಸ್ಥಾವರ ಸ್ಥಾಪನೆಯನ್ನು ಅವರು ತಮ್ಮ ಬದುಕಿನುದ್ದಕ್ಕೂ ವಿರೋಧಿಸುತ್ತಲೇ ಬಂದರು.[೨] ಇಂತಹ ಪರಿಸರಾತ್ಮಕ ಹೋರಾಟದ ಮನೋಭಾವ ಹೆಚ್ಚಿನ ಲೇಖಕರಿಂದ ವ್ಯಕ್ತವಾಗಿದ್ದು ಮತ್ತು ಆ ಬಗ್ಗೆ ಸ್ಪಂದಿಸಿದ್ದು ಕನ್ನಡದಲ್ಲಿ ಕಡಿಮೆಯೇ.

ಜನರನ್ನು ಬಹುಬೇಗನೆ ತಲುಪಬಲ್ಲ ಪರಿಣಾಮಕಾರಿ ಮಾಧ್ಯಮಗಳಲ್ಲಿ ಸಾಹಿತ್ಯವು ಒಂದು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪರಿಸರ ಕಾಳಜಿಯಿಂದ ವಿವೇಚಿಸುವ ದೃಷ್ಟಿಕೋನವೊಂದು ನಿರಂತರವಾಗಿದ್ದಲ್ಲಿ, ಅರಿವಿನ ಸಾಕ್ಷರತೆಯಿಂದಾಗಿಯಾದರೂ ನಾಶವಾಗುತ್ತಿರುವ ಪರಿಸರವನ್ನು ಖಂಡಿತವಾಗಿ ನಾವು ನಮ್ಮ ಮಕ್ಕಳಿಗಾಗಿ ಉಳಿಸಿಕೊಳ್ಳಬಹುದು. ಪರಿಸರ ಮಾನವನ ಬದುಕಿನ ಬಹುಮುಖ್ಯ ಅಗತ್ಯತೆಗಳಲ್ಲೊಂದಾಗಿದೆ. ಇಂತದೊಂದು ನಿಸರ್ಗ ನಮ್ಮೆಲ್ಲರ ಬದುಕಿನ ಭಾಗವೂ ಆಗಿದ್ದು ಇದರ ರಕ್ಷಣೆ ಎಲ್ಲರ ಋಣಭಾರವೂ ಹೌದು.

ಪ್ರತಿಯೊಬ್ಬ ವ್ಯಕ್ತಿ ತನ್ನ ಜೀವಿತಾವಧಿಯ ಉದ್ದಕ್ಕೂ ಪರಿಸರದಿಂದ ಪಡೆದುಕೊಳ್ಳುವುದು ನಮ್ಮ ಅಂಕಿ ಸಂಖ್ಯೆಗೂ ನಿಲುಕದ ಲೆಕ್ಕವದು. ಹೀಗಿದ್ದೂ ಮನುಷ್ಯ ಪರಿಸರಕ್ಕೆ ಕೃತಜ್ಞನಾಗಿರದೆ ಕೃತಘ್ನನಾಗಿರುವುದೇ ಹೆಚ್ಚು. ಮಾನವನ ಅನಾಗರೀಕ ಆಟಾಟೋಪಗಳಿಗೆ ಒಳಗಾಗಿ ದಿನೆ ದಿನೆ ನಮ್ಮ ಸುತ್ತಲ ಪರಿಸರ ಬಲಿಯಾಗುತ್ತಿದೆ. ನಾಗರಿಕ ಸಮಾಜ ನಿರಂತರವಾಗಿ ಪರಿಸರವನ್ನು ಹಾಳುಗೆಡುವುತ್ತ ಅದನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸಿದೆ. ಇದು ಹೀಗೆಯೇ ಮುಂದುವರೆದಲ್ಲಿ ನಾವು ನಮ್ಮ ನಂತರದ ಪೀಳಿಗೆಯನ್ನು ಉಸಿರು ಕಟ್ಟುವಂತಹ ವಾತಾವರಣದಲ್ಲಿ ಬಿಟ್ಟು ಹೋಗಬೇಕಾದಿತು.

೧.೨ ಸಂಶೋಧನೆಯ ಪ್ರಸ್ತುತತೆ:

ಕನ್ನಡ ಸಾಹಿತ್ಯ ಕ್ಷೇತ್ರದ ವಿಸ್ತೀರ್ಣತೆ ಅಗಾಧವಾದುದು. ಇದರಲ್ಲಿ ತಪಸ್ಸಿನಂತೆ ತೊಡಗಿಕೊಂಡ ಸಾಧಕರ ಪಟ್ಟಿಯು ಅಷ್ಟೇ ವಿಶಾಲವಾದುದು. ಪ್ರತಿಯೊಬ್ಬ ಕವಿಯಾಗಲಿ, ಸಾಹಿತಿಯಾಗಲಿ, ವಿಮರ್ಶಕರಾಗಲಿ ಆಯಾಯ ಕಾಲಘಟ್ಟಕ್ಕೆ ಮತ್ತು ಸಮಕಾಲೀನ ಸಂದರ್ಭಗಳಿಗೆ ತಮ್ಮ ಬರಹಗಳ ಒಳಹುಗಳಿಂದಾಗಿ ಅವರದ್ದೇ ಆದಂತಹ ಶೈಲಿಯಿಂದಾಗಿ ವಿಶಿಷ್ಟತೆ ಹೊಂದುತ್ತಾರೆ. ಆದ್ದರಿಂದಲೇ ಈ ಜಗತ್ತಿನಲ್ಲಿ ಪ್ರತಿಯೊಬ್ಬರೂ ತಮ್ಮ ಪ್ರತಿಭೆಗಳನ್ನು ವ್ಯಕ್ತಪಡಿಸುವಲ್ಲಿ ವಿಶಿಷ್ಟವೇ (ಯುನಿಕ್) ಆಗುವರು. ಒಬ್ಬರೊಂದಿಗೆ ಮತ್ತೊಬ್ಬರನ್ನು ಹೋಲಿಸಿ, ಉತ್ಕೃಷ್ಟ ಮತ್ತು ನಿಕೃಷ್ಟ ಎಂದು ಹೇಳಲು ಬರುವುದೇ ಇಲ್ಲ. ಅದು ಸಲ್ಲದು. ಆದರೆ ಆಯಾಯ ಸಂದರ್ಭದಲ್ಲಿ ಅವರು ಮಂಡಿಸಿದ ವಿಚಾರಧಾರೆಗಳಲ್ಲಿನ ತಾತ್ವಿಕ ಚಿಂತನೆಯನ್ನು ಪ್ರಸ್ತುತದ ಚಿಂತನೆಯಲ್ಲಿರಿಸಿ ಆಗಾಗ್ಗೆ ಪರಾಮರ್ಶನೆಗೆ ಒಳಪಡಿಸುವುದು ಮತ್ತು ಒಳಹುಗಳ ಹೊಸತನಕ್ಕೆ ಅಥವಾ ಅದರಿಂದಾಗಿ ಪಡೆದುಕೊಳ್ಳಬಹುದಾದ ಹೊಸ ದೃಷ್ಟಿಕೋನಕ್ಕೆ ಪ್ರಯತ್ನಿಸುವುದು ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗುತ್ತದೆ.

'ಪರಿಸರ ಪ್ರಜ್ಞೆ' ಎಂಬ ಪರಿಕಲ್ಪನೆಯನ್ನು ಗ್ರಹಿಸುವ ಬಗೆಯೇ ವಿಶಿಷ್ಟವಾಗಿದ್ದು ಇದುವೆ ಸಂಶೋಧನೆಯ ಆಸಕ್ತಿಗೆ ಆರಂಭದಲ್ಲಿ ಕಾರಣವಾಯಿತು. ಏಕೆಂದರೆ ಈ ಪರಿಸರ ಪ್ರಜ್ಞೆ ಎಂಬುದು ಹಲವು ಅರ್ಥಗಳನ್ನು ತನ್ನಲ್ಲಿ ಒಟ್ಟಾಗಿ ಅಡಗಿಸಿಕೊಂಡಿರುವ ಸಂಕೀರ್ಣ ಕಲ್ಪನೆಯಾಗಿದೆ. ಈ ಕಲ್ಪನೆಯನ್ನು ಬಿಡಿಸಿಕೊಳ್ಳುವಲ್ಲಿ ಮುಖ್ಯವಾಗಿ ಕಾಡಿದ ಅಂಶಗಳೆಂದರೆ, **'ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಸಂಘರ್ಷಗಳಿಗೆ ಮುಖಾಮುಖಿಯಾಗುವುದು ಮತ್ತು ಸಮಸ್ಯೆಗಳನ್ನು ಅನಾವರಣಗೊಳಿಸುವುದು ಪರಿಸರ ಪ್ರಜ್ಞೆಯೇ?' 'ಮನುಕುಲದ ವಿವೇಕರಹಿತ ವರ್ತನೆಗಳ ಖಂಡನೆಗಳೊಂದಿಗೆ ಕೃತಿಗಳಲ್ಲಿ ಬರುವ ಜೀವಿಗಳ ಉಳಿವಿನ ಪ್ರಸ್ತಾಪಗಳು ಜೀವಿ ಪ್ರಜ್ಞೆಯಾಗಬಲ್ಲದೇ?' 'ಜಾಗತೀಕರಣ ಅಥವಾ ಅಭಿವೃದ್ಧಿಯ ವಿರೋಧದ ಚಿಂತನೆಯೇ ಪರಿಸರ**

ಪ್ರಜ್ಞೆಯೇ?' 'ಕೃತಿಗಳ ರಚನೆಯಲ್ಲಿ ಪರಿಸರವನ್ನು ಹೇರಳವಾಗಿ ಬಳಕೆ ಮಾಡಿಕೊಳ್ಳುವುದು ಪರಿಸರ ಪ್ರಜ್ಞೆಯೇ?' 'ಪರಿಸರ ಹೋರಾಟದಲ್ಲಿ ಭಾಗಿಯಾಗುವುದು ಅಥವಾ ಹೋರಾಟಗಳಿಗೆ ಸಾಹಿತ್ಯಾತ್ಮಕವಾಗಿ ತೊಡಗಿಸಿಕೊಳ್ಳುವುದು ಪರಿಸರ ಪ್ರಜ್ಞೆಯೇ?' ಎಂಬುದರ ಗ್ರಹಿಕೆ. ಸಂಶೋಧನೆಯ ಅಧ್ಯಯನದಲ್ಲಿ ಇವುಗಳಿಗೆ ಮುಖಾಮುಖಿಯಾಗುತ್ತಾ ಕೆಲವನ್ನು ಮಾತ್ರ ಸೀಮಿತಗೊಳಿಸಿಕೊಂಡು ಆಯ್ಕೆಮಾಡಿಕೊಂಡ ಕೃತಿಗಳಿಗೆ ಪೂರಕವಾಗಿ ಲೇಖಕರ ಪರಿಸರ ಪ್ರಜ್ಞೆಯ ಸ್ವರೂಪವನ್ನು ಒರೆಹಚ್ಚುವುದು ಸದ್ಯದ ಸಂಶೋಧನೆಯ ಪ್ರಸ್ತುತತೆ ಎನಿಸಿಕೊಳ್ಳುತ್ತದೆ. ಹಾಗೆಯೇ ಪರಿಸರ ಪ್ರಜ್ಞೆಯಲ್ಲಿ ಯಾವುದನ್ನು ಕೃತಿಕಾರರು ತಮ್ಮ ಕಲಾ ಪ್ರತಿಮೆಯಲ್ಲಿ ಆದ್ಯತೀಕರಿಸುತ್ತಾರೆ ಮತ್ತು ಯಾರು ಯಾವ ಬಗೆಯ ಪರಿಸರ ಪ್ರಜ್ಞೆಯ ಆಲೋಚನೆಗಳಿಗೆ ತಮ್ಮನ್ನು ಹೆಚ್ಚು ತೆರೆದುಕೊಳ್ಳುತ್ತಾರೆ ಎಂಬುದಕ್ಕೆ ಮುಖಾಮುಖಿಯಾಗುವುದು ಸಹ ಸಂಶೋಧನೆಯ ಮತ್ತೊಂದು ಪ್ರಯತ್ನವಾಗುತ್ತದೆ.

ನಮಗೆ ಇಷ್ಟವಿರಲಿ, ಇಲ್ಲದಿರಲಿ ನಾವು ಈ ವ್ಯವಸ್ಥೆಗೆ ಬಂಧಿಗಳಾಗಿದ್ದೇವೆ. ಇಲ್ಲಿ ಸುಂದರವಾದುದನ್ನು ಮತ್ತು ವಿಕೃತವಾದುದುನ್ನು ಅನುಭವಿಸಬೇಕಾಗಿದೆ. ಜಾಗತೀಕರಣದ ಕರಿಛಾಯೆಯ ನೆರಳಿನಲ್ಲಿ ಅಖಂಡ ಪರಿಸರದ ಜಗತ್ತಿನಲ್ಲಿ ಆಗುತ್ತಿರುವ ತೀವ್ರಗತಿಯ ಪರಿವರ್ತನೆಯನ್ನು ಗ್ರಹಿಸುವಲ್ಲಿ ನಮ್ಮ ಪರಿಸರ ಪ್ರಜ್ಞೆ ತತ್ತರಿಸುತ್ತಿದೆ. ಈ ತತ್ತರಿಸುವ ಪರಿಸರ ಪ್ರಜ್ಞೆಗೆ ಸ್ವಯಂ ಅಧ್ಯಯನದ ಮೂಲಕ ನನ್ನೊಳಗಿನ ಸುಪ್ತವಾದ ಮನಸ್ಸಿನಲ್ಲಿ ಒಂದು ಜಾಗೃತಕಾರಿ ದೃಷ್ಟಿಕೋನ ಪಡೆದುಕೊಳ್ಳುವ ಪ್ರಯತ್ನವೇ ಈ ಅಧ್ಯಯನದ ಪ್ರಸ್ತುತತೆ ಎಂದಾಗಿಯೂ ಪರಿಗಣಿಸಬಹುದು. ಲೇಖಕರ ಕೃತಿಗಳಲ್ಲಿನ ವಿಚಾರಗಳಲ್ಲಿ 'ಜೀವಿ ಪ್ರಜ್ಞೆ', 'ಮಾನವ ಕಲ್ಪನೆ,' 'ಅಭಿವೃದ್ಧಿ ನೆಲೆಯಲ್ಲಿ ಕೃತಿಕಾರರ ಪರಿಸರ ಪ್ರಜ್ಞೆ ' ಮತ್ತು 'ತೌಲನಿಕ ಗ್ರಹಿಕೆಯ ವಿಚಾರಗಳು' ಇತ್ಯಾದಿ ನೆಲೆಯಲ್ಲಿ ಪರಿಸರ ಪ್ರಜ್ಞೆಯನ್ನು ಮುಖ್ಯವಾಗಿ ಅಧ್ಯಯನಕ್ಕೆ ಒಳಪಡಿಸಿದ್ದು, ಅವುಗಳ ಮೂಲಕ ವ್ಯಕ್ತಗೊಳ್ಳುವ ಫಲಿತಗಳಿಗೆ ಸಂಬಂಧಿಸಿದಂತೆ ಆರೋಗ್ಯಕಾರಿ ನಿಲುವು ಹೊಂದಲು ಮತ್ತು ಸ್ವ ಅಧ್ಯಯನದ ಮೂಲಕ ಅಗತ್ಯ ಜ್ಞಾನ ಸಂರಚನೆಗೆ ಹೊಸದಾದ ದೃಷ್ಟಿಕೋನವನ್ನು ಪಡೆದುಕೊಳ್ಳಲು ಈ ಅಧ್ಯಯನವು ಪ್ರಚೋದಿಸುತ್ತದೆ.

ಸಾಹಿತ್ಯ ಕಂಡ ಅಪರೂಪದ ಪರಿಸರ ಅನುಭಾವಿ ತೇಜಸ್ವಿ, ತಮ್ಮ ಬರವಣಿಗೆಗಳ ಮೂಲಕ ತಮ್ಮ ಕನ್ನಡ ಸಾಹಿತ್ಯದ ಗಡಿಯನ್ನು ವಿಸ್ತರಿಸಿದವರು. ಸಾರ್ಥಕ ಸಾಹಸಿ ಬದುಕನ್ನು ಬಾಳಿದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಜೀವಿತಾವಧಿಯಲ್ಲಿ ನಂಬಿಕೊಂಡು ಬಂದಿದ್ದ ಹಾಗೂ ಅಳವಡಿಕೆಗೆ ಪ್ರಯತ್ನಿಸಿದ್ದ ವೈಜ್ಞಾನಿಕ ಸತ್ಯಗಳು, ವೈಚಾರಿಕ ಮೌಲ್ಯಗಳು, ಪರಿಸರ ಪ್ರಜ್ಞೆಯಲ್ಲಿ ಅನಾವರಣಗೊಳ್ಳುವ ಪ್ರಯೋಗಶೀಲ ಸಾಹಸಗಾಥೆಗಳು, ನಾಡು ನುಡಿಯ ಬಗೆಗಿನ ನಿಖರ ಹಾಗೂ ವಾಸ್ತವವಾದಿ ನಿಲುವುಗಳನ್ನು ಅತ್ಯಂತ ಸಮರ್ಥವಾಗಿ ಹಾಗೂ ಸಮರ್ಪಕವಾಗಿ ಕಾರ್ಯರೂಪಕ್ಕಿಳಿಸುವ ಮೂಲಕವಾಗಿಯೇ ಹೆಚ್ಚು ಜನಪ್ರಿಯಗೊಂಡವರು.

ಕನ್ನಡ ಸಾಹಿತ್ಯದಲ್ಲಿ ತಮ್ಮ ಸೃಜನಶೀಲ ವೈಚಾರಿಕ ತಿಳುವಳಿಕೆಗಳಿಂದ ಲೋಕದ ನಿಗೂಢತೆಗಳಿಗೆ ಮುಖಾಮುಖಿಯಾಗಿ ಅಭಿವ್ಯಕ್ತಿಸಿದವರು. ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ತಮಗಿರುವ ವೈಜ್ಞಾನಿಕ ಮನೋಧರ್ಮ ಮತ್ತು ಪರಿಸರ ಪ್ರಜ್ಞೆಯ ಆಸಕ್ತಿಯಿಂದಾಗಿ ಮತ್ತು ಅವರನ್ನು ಕಾಡಿದ ಪರಿಸರದ ನಿಗೂಢತೆ ಮೇಲಿನ ಪ್ರಶ್ನೆಗಳಿಂದಾಗಿ ತಾನು ಜೀವಿಸುತ್ತಿರುವ

ಪರಿಸರದಲ್ಲಿ ಮಾನವ ಸಂಬಂಧದ ಸಹಸಂಬಂಧತೆಯ ನಂಟಿನಿಂದಾಗಿ ಜೀವಜಗತ್ತಿನ ಮಂಡನೆಯನ್ನು ಮತ್ತು ಅವುಗಳ ವೈವಿಧ್ಯತೆಯನ್ನು ಸಂದರ್ಭಾನುಸಾರ ಹಾಗೂ ಕ್ರಿಯಾಶೀಲವಾದ ಸನ್ನಿವೇಶಗಳೊಂದಿಗೆ ಮತು ತಮ್ಮ ಕ್ಯಾಮೆರಾಗೆ ಸಿಕ್ಕ ಅಪರೂಪದ ಚಿತ್ರಗಳನ್ನು ಸೆರೆಹಿಡಿಯುವ ಮುಖಾಂತರವಾಗಿಯೇ ದಕ್ಕಿದ ಅನುಭವಗಳನ್ನೆಲ್ಲಾ ಬರಹಗಳ ಮೂಲಕ ಓದುಗರಿಗೆ ಜೀವಂತವಾಗಿ ಕಟ್ಟಿಕೊಟ್ಟವರು. ಕರ್ವಾಲೋ, ಚಿದಂಬರ ರಹಸ್ಯ, ಅಲೆಮಾರಿಯ ಅಂಡಮಾನ್, ವಿಸ್ಮಯ, ಪರಿಸರದ ಕಥೆ, ಹೆಜ್ಜೆ ಮೂಡದ ಹಾದಿ, ಮಿಂಚುಳ್ಳಿ, ಮಾಯೆಯ ಮುಖಗಳು, ಮಾಯಾಲೋಕ, ಫ್ಲೈಯಿಂಗ್ ಸಾಸರ್ಸ್, ಮಿಸ್ಸಿಂಗ್ ಲಿಂಕ್ಸ್, ಇತ್ಯಾದಿ ಬರಹಗಳು ಪ್ರಕೃತಿಯಲ್ಲಿನ ಜೀವ ಜಗತ್ತುಗಳ ಸಹಸಂಬಂಧಗಳೆಡೆಗೆ ನಮ್ಮ ಗಮನವನ್ನು ಕೊಂಡೊಯ್ಯುತ್ತವೆ. ಅಂತದೊಂದು ಜಗತ್ತು ನಮ್ಮ ವಾಸಸ್ಥಳದ ಸುತ್ತಲಿನ ಪರಿಸರದ ಭಾಗವೂ ಹೌದಲ್ಲವೇ? ಪರಿಸರ ಕುರಿತು ತೇಜಸ್ವಿ ಶಾಸ್ತ್ರೀಯವಾಗಿ ಅಧ್ಯಯನ ಮಾಡದಿದ್ದರೂ, ಮೂಲಭೂತ ಅಂಶಗಳ ಅವಲೋಕನದೊಂದಿಗೆ ಅಗತ್ಯ ಅಂತರ್ ಪಠ್ಯ ಶಿಸ್ತನ್ನು ಅನ್ವಯಮಾಡಿಕೊಳ್ಳುತ್ತಾ, ಮಾನವ ಮತ್ತು ಜೀವಜಗತ್ತಿನ ಸಂಬಂಧಗಳ ನಡುವಿನ ವೈಶಿಷ್ಟ್ಯತೆಯನ್ನು, ಅವುಗಳ ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಡುವಲ್ಲಿ ಮೂಡಿಬರುವ ಅವರ ಕೃತಿಗಳಲ್ಲಿನ ಪರಿಸರ ಪ್ರಜ್ಞೆಯ ವಿಚಾರಗಳು ಯಾವತ್ತೂ ಅಧ್ಯಯನ ಯೋಗ್ಯವಾಗಿ ನಿಲ್ಲುತ್ತವೆ. ಇನ್ನೂ ಜಾಗತಿಕವಾಗಿರಲಿ ಪ್ರಾದೇಶಿಕವಾಗಿರಲಿ ಪರಿಸರಾತ್ಮಕ ಗಂಭೀರ ಸಮಸ್ಯೆಗಳನ್ನು ಆಯ್ಕೆಮಾಡಿ ಜನಸಾಮಾನ್ಯರಿಗೆ ಸರಳವಾಗಿ ಅರ್ಥೈಸುತ್ತಾ, ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತಾ, ಅಪಾಯದ ಅಂಚಿನಲ್ಲಿರುವ ಪರಿಸರದ ಸಂಗತಿಗಳನ್ನು ಎಳೆಎಳೆಯಾಗಿ ಬಿಡಿಸುತ್ತಾ, ಪರಿಕಲ್ಪನೆಯ ಮೂಲಾಂಶಗಳಿಗೆ ದತ್ತಾಂಶಗಳ ಸಹಿತ ವಿವರಗಳನ್ನು ದಾಖಲಿಸುತ್ತಾ, ಅಂತಿಮವಾಗಿ ಈ 'ಭೂಮಿಯ ಉಳಿವೇ ನಮ್ಮೆಲ್ಲರ ಉಳಿವು' ಎಂಬ ದೂರದರ್ಶಿತ್ವದೊಂದಿಗೆ 'ಹಸಿರು ಆರ್ಥಿಕತೆ' 'ನಿಸರ್ಗಪರವಾದ ಜಿ.ಡಿ.ಪಿ.' ಪ್ರತಿಪಾದನೆಯಂತಹ ಪರಿಸರ ಚಿಂತನೆಯಾಧಾರಿತ ಸಾಹಿತ್ಯ ಕೃಷಿಯನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಹಾಗೂ ವೈಜ್ಞಾನಿಕ ಮತ್ತು ವೈಚಾರಿಕ ಪ್ರಜ್ಞೆಯ ಬರಹಗಳ ವಿಶಿಷ್ಟತೆಯಿಂದಾಗಿ ಹೆಸರಾದ ಕನ್ನಡ ನಾಡಿನ ಮತ್ತೋರ್ವ ಸಾಹಿತಿಯೇ ನಾಗೇಶ ಹೆಗಡೆ.

ಹೆಗಡೆ ಅವರು ತಮ್ಮ ಬರಹಗಳ ಮೂಲಕ ಪಶ್ಚಿಮಘಟ್ಟಗಳ ಸಮಸ್ಯೆ ಮತ್ತು ಆ ಭಾಗದಲ್ಲಿ ಹುಟ್ಟಿಕೊಂಡ ಆತಂಕಗಳ ಬಗ್ಗೆ ಎಚ್ಚರಿಸುವ ಹಾಗೂ ಜಾಗತಿಕ ಪರಿಸರದ ಸವಾಲುಗಳ ಬಗ್ಗೆ ಅರಿವು ಮೂಡಿಸುವ ಸಂಕಲ್ಪದಲ್ಲಿ ತೊಡಗಿಕೊಂಡಿದ್ದಾರೆ. ಇದೊಂದು ಅರಿವಿನ ಸಾಕ್ಷರತೆಯ ಕಾರ್ಯ. ಕರ್ನಾಟಕದಲ್ಲಿ ಕಂಡುಬಂದ ಅಪ್ಪಿಕೋ ಚಳುವಳಿಯ ಪ್ರಮುಖ ನಾಯಕರುಗಳಲ್ಲಿ ನಾಗೇಶ ಹೆಗಡೆ ಅವರ ಪಾತ್ರ ಸ್ಮರಣೀಯವಾದುದು. ಚಳುವಳಿಯ ಸಂಘಟನೆಗೆ ಬೇಕಾದ ಪೂರಕ ಮಾಹಿತಿಯನ್ನು ಕಾಲಕಾಲಕ್ಕೆ ಒದಗಿಸಿಕೊಟ್ಟು ಯುವಕರನ್ನು ತೊಡಗಿಸುವ ಮೂಲಕ ಆಂದೋಲನಕ್ಕೆ ಬೆಂಬಲವಾಗಿ ನಿಂತವರು. ಇವರ ಪರಿಸರ ಪ್ರಜ್ಞೆಯ ವಿಚಾರಗಳು ಎಂದಿಗೂ ಅನನ್ಯವಾಗಿದ್ದು ಈ ಕುರಿತ ಅಧ್ಯಯನವು ಇತ್ತೀಚಿನ ದಿನಗಳಲ್ಲಿ ಹೆಚ್ಚು ಪ್ರಸ್ತುತವೆನಿಸಿಕೊಳ್ಳುತ್ತದೆ.

ನಾಗೇಶ ಹೆಗಡೆ ಅವರ 'ಇರುವುದೊಂದೇ ಭೂಮಿ', 'ಕೆರೆಯಲಿ ಚಿನ್ನ ಕೆರೆಯೇ ಚಿನ್ನ' ಮತ್ತು 'ಆಚಿನ ಲೋಕಕ್ಕೆ ಕಾಲಕೋಶ' ಪುಸ್ತಕಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,

ಜೊತೆಗೆ ಶಿವರಾಮಕಾರಂತ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಜೀವಮಾನ ಸಾಧನೆಗಾಗಿ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಬಂದಿದ್ದರೂ, 'ಕೆರೆಯಲಿ ಚಿನ್ನ ಕೆರೆಯೇ ಚಿನ್ನ' ಕೃತಿಯು ೨೦ನೇ ಶತಮಾನದ ಶ್ರೇಷ್ಠ ಮಕ್ಕಳ ಕತೆಗಳ ಸಾಲಿಗೆ ಸೇರ್ಪಡೆಗೊಂಡಿದ್ದರೂ, ಕನ್ನಡ ಸಾಹಿತ್ಯ ಕ್ಷೇತ್ರದ ಅವಜ್ಞತೆಯೋ ಏನೋ! ಇವರ ಕೃತಿಗಳು ಸಾಹಿತಿಕಾರರ ವಿಮರ್ಶೆಯಲ್ಲಿ ಅಷ್ಟಾಗಿ ಪರಿಗಣಿಸಲ್ಪಟ್ಟಂತೆ ಕಂಡುಬರುವುದಿಲ್ಲ. ಹೆಗಡೆ ಅವರದ್ದು ಬಹುಮುಖ ವ್ಯಕ್ತಿತ್ವ, ಆಡುಮುಟ್ಟದ ಸೊಪ್ಪಿಲ್ಲ ಎಂಬಂತೆ. ಆದರೂ ಸಮಕಾಲೀನ ಸಾಹಿತಿಗಳು ಅವರ ಕೃತಿಗಳನ್ನು ಬಹುಮುಖಿ ಅವಲೋಕನಕ್ಕೆ ಒಳಪಡಿಸಿರುವ ಉದಾಹರಣೆಗಳು ಸಾಹಿತ್ಯ ಕ್ಷೇತ್ರದಲ್ಲಿ ಲಭ್ಯವಾಗುವುದು ಅಪರೂಪ. ಈ ನಿಟ್ಟಿನಲ್ಲಿಯೂ ಅಧ್ಯಯನದ ಪ್ರಸ್ತುತತೆಯನ್ನು ಗುರುತಿಸಿಕೊಳ್ಳಬಹುದಾಗಿದೆ.

ಕನ್ನಡ ನಾಡಿನ ಪ್ರಾಕೃತಿಕ ಪರಿಸರದೊಂದಿಗೆ ಸಾಂಸ್ಕೃತಿಕ ಪರಿಸರವು ಹೆಣೆದುಕೊಂಡಿರುವುದರಿಂದ ನೆಲಮೂಲ ಸಂಪತ್ತನ್ನು ಕಾಪಾಡುವುದು ಮುಖ್ಯ ಧ್ಯೇಯವಾಗಿದ್ದು, ಪೇಟೆಂಟ್ ಹೆಸರಲ್ಲಿ ಪರಭಾರೆ ಆಗದಂತೆ ನಮ್ಮ ನೆಲದ ಸಂಪತ್ತನ್ನು ರಕ್ಷಿಸುವುದು ಕನ್ನಡಿಗರ ಕೈಂಕರ್ಯವಾಗಿದೆ. ಅಖಂಡ ಪರಿಸರದ ಜೀವಸ್ತೋಮ ಮತ್ತು ಮನುಕುಲದ ರಕ್ಷಣೆಯ ಭಾಗವಾಗಿ ಪರಿಸರವನ್ನು ಉಳಿಸಿ ಬೆಳೆಸುವುದು ಇಂದಿನ ಆದ್ಯ ಕರ್ತವ್ಯವಾಗಿದೆ. ಇಂತಹ ಪರಿಸರ ಪ್ರಜ್ಞೆಯ ಹಿನ್ನೆಲೆಯಲ್ಲಿ ಕೃತಿಕಾರರ ಕೃತಿಗಳನ್ನು ಈ ಸಂದರ್ಭದಲ್ಲಿ ಅಧ್ಯಯನಕ್ಕೊಳಪಡಿಸುವುದು ಸಾಂಸ್ಕೃತಿಕ ಜವಾಬ್ದಾರಿಯಾಗಿದ್ದು ಇದು ಸಂಶೋಧನೆಯ ಪ್ರಸ್ತುತತೆ ಎನಿಸಿಕೊಳ್ಳುವುದು.

ಸಂಶೋಧನೆಯಲ್ಲಿ ಪರಿಗಣಿಸಲ್ಪಡುವ ಈ ಇಬ್ಬರೂ ಲೇಖಕರ ಪರಿಸರ ಪ್ರಜ್ಞೆಯಲ್ಲಿ ಒಬ್ಬರದು ನಿರ್ದಿಷ್ಟತೆಗೊಳಪಡಿಸಿದ ಪರಿಕಲ್ಪನೆ ಆಧಾರಿತ ಸೃಜನಾತ್ಮಕತೆ. ಮತ್ತೊಬ್ಬರದು ನಿಗೂಢ, ವಿಸ್ಮಯ ಮತ್ತು ಕುತೂಹಲದಿಂದಾಗಿ ಬೆನ್ನತ್ತುವ ಕ್ರಿಯಾಶೀಲ ಆಧಾರಿತ ಸೃಜನಾತ್ಮಕತೆ. ಈ ಇಬ್ಬರೂ ಲೇಖಕರ ಆಯ್ದ ಕೃತಿಗಳನ್ನು ಒಟ್ಟುಮಾಡಿ ನೋಡುತ್ತಾ, ಕೆಲವು ಆಯಾಮಗಳ ನೆಲೆಯಲ್ಲಿ ಅವುಗಳನ್ನು ನಿರ್ದಿಷ್ಟಪಡಿಸಿಕೊಂಡು ಪರಿಸರ ಪ್ರಜ್ಞೆಯ ಸ್ವರೂಪವನ್ನು ವಿಶ್ಲೇಷಣೆಗೊಳಪಡಿಸುವುದೇ ಈ ಸಂಶೋಧನೆಯ ವಿಶಿಷ್ಟತೆಯಾಗುವುದು.

೧.೩. ಸಂಶೋಧನೆಯ ಉದ್ದೇಶಗಳು:

'ಪರಿಸರ' ಎಂಬುದೇ ವ್ಯಾಪಕವಾದಂತಹ ವಿಷಯವಾಗಿರುದರಿಂದ, ಅದು ಬಹುಮುಖ ಆಯಾಮಗಳನ್ನು ಒಳಗೊಂಡಿರುವುದರಿಂದ ಅದರಲ್ಲಿನ ಎಲ್ಲಾ ಸಂಗತಿಗಳನ್ನು ಅಧ್ಯಯನಕ್ಕೆ ಒಳಪಡಿಸಲು ಸಾಧ್ಯವೂ ಆಗುವುದಿಲ್ಲ. ಪರಿಸರ ಸಂಬಂಧಿತವಾಗಿ ರಚನೆಗೊಂಡ ಸೃಜನೇತರ ಸಾಹಿತ್ಯಗಳ ಪರಿಕಲ್ಪನೆಗಳನ್ನು ಒಮ್ಮೆಲೇ ಗ್ರಹಿಸಿಕೊಳ್ಳುವುದು ಸಹ ಅಧ್ಯಯನದ ಸವಾಲು ಹೌದು. ಕನ್ನಡ ಸಾಹಿತ್ಯದಲ್ಲಿ ಇದುವರೆಗೂ ಪರಿಸರ ಪ್ರಜ್ಞೆಯ ನಿಟ್ಟಿನಲ್ಲಿ ಬರವಣಿಗೆಗಳ ಬಗ್ಗೆ ಸಾಕಷ್ಟು ಕೆಲಸಗಳಾಗಿದ್ದರೂ, ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಆಲೋಚನೆಗಳಿಗೆ ಹಾಗೂ ಪರಿಸರ ಮತ್ತು ವಿಜ್ಞಾನ ವಿಷಯಾಧಾರಿತ ಕೃತಿಗಳ ರಚನೆಗೆ ಭೂಮಿಕೆ ಒದಗಿಸಿದ ಡಾ.ಶಿವರಾಮ ಕಾರಂತರು ಕೆಲವು ಬರಹಗಾರರಿಗೆ ಪ್ರೇರಣೆಯಾಗಿದ್ದರೂ, ಭಿನ್ನನೆಲೆ ಮತ್ತು ಅಂತರ್‌ಶಿಸ್ತೀಯ ಶಿಸ್ತಿನ ಸಮನ್ವಯದೊಂದಿಗೆ ವಿಶಿಷ್ಟ ಆಸಕ್ತಿಗಳೊಂದಿಗೆ ಪರಿಸರದ ಕುತೂಹಲಗಳನ್ನು ಆದ್ಯತೆಯಲ್ಲಿರಿಸಿ 'ಕರ್ವಾಲೋ'ದಂತಹ ಕಲಾಪ್ರತಿಮೆಯನ್ನು ಸೃಜಿಸಿದ ಹಾಗೂ ಸೃಜನೇತರ ಕೃತಿಗಳನ್ನು

ರಚಿಸುವ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರು ಉಂಟುಮಾಡಿದ್ದ ಸಂಚಲನವನ್ನು ಎಂದಿಗೂ ಅಲ್ಲಗಳೆಯಲು ಸಾಧ್ಯವಿಲ್ಲ. ಶುದ್ಧ ವಿಜ್ಞಾನದಲ್ಲಿನ ಸಸ್ಯಶಾಸ್ತ್ರದ ವಿಷಯವನ್ನು ಮತ್ತು ಅದರೊಳಗಿನ ವೈಜ್ಞಾನಿಕತೆಯ ಅಂಶಗಳ ಅರ್ಥೈಸುವಿಕೆಯನ್ನು ಕಾಲೇಜು ವಿದ್ಯಾರ್ಥಿಗಳೆಲ್ಲರನ್ನು ಹೊರಾಂಗಣ ಕ್ಷೇತ್ರ ಪ್ರವಾಸಕ್ಕೆ ಕರೆದೊಯ್ಯುವ ಕಲಾ ಕಲ್ಪನೆಯೊಳಗಿರಿಸಿ, ಅಲ್ಲಿನ ಘಟನೆಗಳನ್ನು ಹಾಸ್ಯ, ರೂಪಕ, ಮತ್ತು ಚಿಕ್ಕ ಚಿಕ್ಕ ಉಪಮೆಗಳ ಬಳಕೆಯೊಂದಿಗೆ ಸುಲಲಿತವಾಗುವಂತೆ 'ಹಸಿರು ಹೊನ್ನು' ಸಾಹಿತ್ಯವನ್ನು ಸೃಜನಾತ್ಮಕವಾಗಿ ನಿರೂಪಿಸಿದ ಕೀರ್ತಿ ಬಿ.ಜಿ.ಎಲ್.ಸ್ವಾಮಿ ಅವರಿಗೂ ಸಲ್ಲುತ್ತದೆ. ಮತ್ತೊಂದೆಡೆ ಪ್ರಸ್ತುತ ಪರಿಸರದ ವೈಜ್ಞಾನಿಕ ಮತ್ತು ವೈಚಾರಿಕ ವಿಚಾರಗಳನ್ನು ಹಾಗೂ ಪರಿಸರದಲ್ಲಿ ಸೃಷ್ಟಿಯಾಗಿರುವ ಇಂದಿನ ಆತಂಕಗಳನ್ನು, ಭವಿಷ್ಯದ ಪರಿಣಾಮಗಳನ್ನು ಜನಸಾಮಾನ್ಯರಿಗೆ ಅರ್ಥೈಸಲು ಸೃಜನೇತರವಾದ ಪರಿಸರ ಸಾಹಿತ್ಯಗಳನ್ನು ರಚಿಸುವುದರ ಮೂಲಕ ಹಾಗೂ ವಿಚಾರ ಸಾಹಿತ್ಯದಲ್ಲಿ ಅಂಕಣ ಬರಹಗಳೊಂದಿಗೆ ಪರಿಸರದ ಅನೇಕ ಆಯಾಮಗಳನ್ನು ಚರ್ಚೆಗೆ ಒಳಪಡಿಸಿ ಸಮಾಜದಲ್ಲಿ ಪರಿಸರಮುಖಿಯಾಗಿ ತಮ್ಮದೇ ಹಾದಿಯಲ್ಲಿ ಭಿನ್ನವಾಗಿ ಕೆಲಸ ಮಾಡುತ್ತಿರುವ ನಾಗೇಶ ಹೆಗಡೆ ಅವರು ಸಹ ಪ್ರಮುಖ ಬರಹಗಾರರಾಗಿ ಗುರುತಿಸಿಕೊಳ್ಳುತ್ತಾರೆ. ಇಂತಹ ಹಿನ್ನೆಲೆಗಳೊಂದಿಗೆ ಪ್ರಸ್ತುತ ಸಂಶೋಧನೆಯಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಮತ್ತು ನಾಗೇಶ್‌ಹೆಗಡೆ ಅವರ ಆಯ್ದ ಸಾಹಿತ್ಯಗಳನ್ನು ಅಧ್ಯಯನಕ್ಕೊಳಪಡಿಸಿ ಪರಿಸರ ಪ್ರಜ್ಞೆಯ ಸ್ವರೂಪವನ್ನು ಗುರುತಿಸುತ್ತಾ, ಅವುಗಳಲ್ಲಿನ ಸಾಮ್ಯತೆ ಹಾಗೂ ಭಿನ್ನತೆಯನ್ನು ಗ್ರಹಿಸುವುದು ಹಾಗೂ ಪರಿಸರ ಪ್ರಜ್ಞೆಯ ಸ್ವರೂಪವನ್ನು ತಾತ್ವಿಕ ಹಾಗೂ ವೈಚಾರಿಕ ನೆಲೆಗಟ್ಟಿನಲ್ಲಿಯೂ ವಿಶ್ಲೇಷಿಸಿ ವ್ಯಾಖ್ಯಾನಿಸುವುದು ಅಧ್ಯಯನದ ಉದ್ದೇಶವಾಗಿದೆ.

'ಪೂರಕ ಸಾಹಿತ್ಯ ಸಮೀಕ್ಷೆಗಳು, 'ಗ್ರಹಿಕೆಯ ಅವಶ್ಯ ಪರಿಕಲ್ಪನೆಗಳು', 'ಪರಿಸರ ಪ್ರಜ್ಞೆಯಲ್ಲಿ ಪೂರ್ವದೃಷ್ಟಿಗಳು' 'ಕೃತಿಕಾರರ ಕೃತಿಗಳಲ್ಲಿ ಜೀವಿ ಪ್ರಜ್ಞೆ', 'ಪರಿಸರ ಪ್ರಜ್ಞೆಯಲ್ಲಿ ಮಾನವ ಕಲ್ಪನೆ', 'ಅಭಿವೃದ್ಧಿ ನೆಲೆಯಲ್ಲಿ ಕೃತಿಕಾರರ ಪರಿಸರಪ್ರಜ್ಞೆ,' 'ತೌಲನಿಕ ಗ್ರಹಿಕೆಯ ವಿಚಾರಗಳು' ಎಂಬ ಅಧ್ಯಯನಗಳ ವರ್ಗೀಕರಣದೊಂದಿಗೆ ಪರಿಸರ ಪ್ರಜ್ಞೆಯ ಸ್ವರೂಪಗಳನ್ನು ಸಾಹಿತ್ಯಾತ್ಮಕ ಮತ್ತು ವೈಚಾರಿಕ ಅಂಶಗಳಡಿಯಲ್ಲಿಯೂ ಅವಲೋಕಿಸಿ ತುಲನಾತ್ಮಕವಾಗಿ ವಿಶ್ಲೇಷಣೆಗೊಳಪಡಿಸುತ್ತಾ, ಕೆಲವು ಆನುಷಂಗಿಕ ಆಕರಗಳ ಶೋಧದೊಂದಿಗೆ ಸಂಶೋಧನೆಯನ್ನು ಹೆಚ್ಚು ಪುಷ್ಟೀಕರಿಸುವುದು ಪ್ರಮುಖ ಉದ್ದೇಶವಾಗಿದೆ. ಪರಿಸರ ಕಾಳಜಿಯಿಂದ ವಿವೇಚಿಸುವ ದೃಷ್ಟಿಕೋನದ ನೆಲೆಗಟ್ಟಿನಲ್ಲಿ ಲಭ್ಯಗೊಳ್ಳುವ ಇತರೆ ವಿಮರ್ಶೆ, ವರದಿಗಳ ಮೂಲಕ ಪರಿಸರ ಪ್ರಜ್ಞೆಯ ಸ್ವರೂಪವನ್ನು ಸಾಂದರ್ಭಿಕವಾಗಿ ವಿಶ್ಲೇಷಣೆಗೆ ಒಳಪಡಿಸುತ್ತಾ ಫಲಿತಗಳೊಂದಿಗೆ ಸಾಮಾನ್ಯೀಕರಿಸುವುದು ಸಹ ಅಧ್ಯಯನದ ಉದ್ದೇಶವಾಗಿದೆ.

ಕನ್ನಡದ ಬಹುಪಾಲು ಪರಿಸರ ಬರಹಗಾರರಿಗೆ 'ಪರಿಸರ' ಕೈಗಾರಿಕೆ, ವಾಯು ಮಾಲಿನ್ಯ, ಶಬ್ದ ಮಾಲಿನ್ಯ ಮತ್ತು ಜಲಮಾಲಿನ್ಯಗಳಾಗಿ ಮಾತ್ರ ಕಾಣುತ್ತವೆ. ಇಲ್ಲಿನ ಮೇಲ್ವರ್ಗಗಳ ಸಂಪನ್ಮೂಲಗಳ ಲೂಟಿ, ಸಾಮಾಜಿಕ ಅಸಮಾನತೆ, ಸಂಪನ್ಮೂಲಗಳ ಹಂಚಿಕೆಯಲ್ಲಿ ಮೇಲುಗೈ ಸಾಧಿಸಿರುವ ಶ್ರೀಮಂತರು ಹಾಗೂ ಅವರ ಕ್ರೌರ್ಯದ ಬಗ್ಗೆ ಈ ಜನ ಮೌನವಾಗಿಯೇ ಉಳಿಯುತ್ತಾರೆ. ಹಾಗೆಯೇ ಸ್ವಾರ್ಥಪರವಾದ ಚಳುವಳಿ ನಿರ್ಮಾಣಕಾರರು ಸಹ ಇವರಿಗೆ ದಿವ್ಯ

ಪರಿಸರ ಸಂರಕ್ಷಕರಾಗಿ ಕಾಣುತ್ತಾರೆ. ಮಾಧವ ಗಾಡ್ಗೀಳರು ಹೇಳುವಂತೆ ಇವರೇ ಸರ್ವಭಕ್ಷಕ ವರ್ಗದವರಾಗಿದ್ದಾರೆ ಅಥವಾ ನೂರು ಕೋಟಿ ಮೇಲಿನ 'ಚಿಲ್ಲರೆ ಶೂನ್ಯಗಳ' ಪಟ್ಟಿಯಲ್ಲಿ ನಿಲ್ಲುತ್ತಾರೆ. ಇಂತಹ ಒಂದು ವರ್ಗದವರ ಪರಿಸರ ಪ್ರಜ್ಞೆಯನ್ನು ಮೀರಿ ತೇಜಸ್ವಿ ಮತ್ತು ನಾಗೇಶ ಹೆಗಡೆ ಅವರ ಬರಹಗಳು ಓದುಗರ ಮುಂದೆ ನಿಲ್ಲುವುದರಿಂದ ಪ್ರಸ್ತುತದ ಸನ್ನಿವೇಶದಲ್ಲಿ ಇಬ್ಬರ ಪರಿಸರ ಪ್ರಜ್ಞೆಯ ಸ್ವರೂಪವನ್ನು ತೌಲನಿಕವಾಗಿ ಅರ್ಥೈಸಿಕೊಳ್ಳುವುದು ಸಂಶೋಧನೆಯ ಉದ್ದೇಶವಾಗುವುದು.

ತೇಜಸ್ವಿ ಅವರದು ಬಹುತೇಕ ಸೃಜನಾತ್ಮಕ ಸಾಹಿತ್ಯದ ರಚನೆಗಳಾಗಿದ್ದು, ಸೃಜನೇತರ ಸಾಹಿತ್ಯಗಳು ಕೂಡ ಅವರ ರಚನೆಯ ಪಟ್ಟಿಯಲ್ಲಿ ಸೇರಿವೆ. ನಾಗೇಶ ಹೆಗಡೆ ಅವರದು ಸೃಜನೇತರ ಸಾಹಿತ್ಯ/ಅಂಕಣ/ಲೇಖನಗಳ ರಚನೆಯೇ ಹೆಚ್ಚು. ಇವರ ಸೃಜನೇತರ ಸಾಹಿತ್ಯದೊಂದಿಗೆ ತೇಜಸ್ವಿ ಅವರ ಸೃಜನಾತ್ಮಕತೆ ಮತ್ತು ಸೃಜನೇತರ ಸಾಹಿತ್ಯವನ್ನೂ ಜೊತೆಗಿರಿಸಿ ತೌಲನಿಕವಾಗಿ ಪರಿಸರ ಪ್ರಜ್ಞೆಯ ಸ್ವರೂಪವನ್ನು ಶೋಧಿಸುವುದು ಸಂಶೋಧನೆಯ ಉದ್ದೇಶವಾಗಿದೆ.

೧.೪ ಸಂಶೋಧನೆಯ ವ್ಯಾಪ್ತಿ:

ಈ ಕಾಲಘಟ್ಟದ ಇತರೆ ಲೇಖಕರುಗಳಿಗಿಂತ ಭಿನ್ನ ಆಲೋಚನೆ ಹೊಂದಿದ್ದ ತೇಜಸ್ವಿ ಹಾಗೂ ಸೃಜನೇತರ ಸಾಹಿತ್ಯಗಳ ರಚನೆ ಮತ್ತು ಅಂಕಣಗಳ ಮೂಲಕ ಕೆಲಸ ಮಾಡುತ್ತಿರುವ ನಾಗೇಶ ಹೆಗಡೆ ಅವರ ಕೃತಿಗಳು ಪರಿಸರ ಪ್ರಜ್ಞೆಯ ಮೌಲ್ಯಗಳಾಗಿ ತುಡಿದಿವೆ. ಜೀವವೈವಿಧ್ಯದ ಅಸಮತೋಲನ, ಪರಿಸರ ಮತ್ತು ಮಾನವ ಸಂಬಂಧ, ಇಕಾಲಜಿ ಅರಿಯುವ ಅಗತ್ಯತೆ, ಅಸಮಾನತೆ, ಗ್ರಾಮಜೀವನ, ಅಜ್ಞಾನ, ಮೂಢನಂಬಿಕೆ, ಮೌಢ್ಯ, ಜಾಗತೀಕರಣ, ಉದಾರೀಕರಣ, ಆಧುನೀಕರಣ ಇವುಗಳೆಲ್ಲವೂ ಮನುಷ್ಯ ಜೀವನದಲ್ಲಿ ಒಡ್ಡುವ ಸಮಸ್ಯೆ ಮತ್ತು ಸವಾಲುಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಕಾರ್ಲ್‌ಮಾರ್ಕ್ಸ್, ಲೋಹಿಯಾ, ಜಯಪ್ರಕಾಶ್ ನಾರಾಯಣ, ಮಹಾತ್ಮ ಗಾಂಧೀಜಿ, ಮಸಾನೊಬೊ ಫುಕುವೂಕ ಅವರ ಚಿಂತನೆಗಳು ಈ ಇಬ್ಬರೂ ಲೇಖಕರನ್ನು ಪ್ರಭಾವಿಸಿವೆ. ೧೯೭೦-೮೦ರ ದಶಕದಲ್ಲಿ ಭಾರತದಲ್ಲಿ ಕಾಣಿಸಿಕೊಂಡ ಪರಿಸರವಾದ ಮತ್ತು ಚಳುವಳಿಗಳು ಸಹ ಇಬ್ಬರನ್ನೂ ಆಕರ್ಷಿಸಿವೆ. ಜಾಗತೀಕರಣ ಮತ್ತು ಆಧುನೀಕರಣದ ವ್ಯವಸ್ಥೆಯಲ್ಲಿ ಸಮಾನತೆಯ ಬದುಕಿಗಾಗಿ ಹಾಗೂ ಅಖಂಡ ಪರಿಸರದಲ್ಲಿ ಮನುಷ್ಯನಷ್ಟೇ ಮುಖ್ಯವಾಗಿರುವ ಜೀವಜಾಲದ ಉಳಿವಿನ ಪ್ರಜ್ಞೆಗಾಗಿ ಇವರ ಕೃತಿಗಳು ಓದುಗರಿಗೆ ಹತ್ತಿರವಾಗುತ್ತವೆ. ಸಂಶೋಧನೆಯು ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಹಾಗೂ ನಾಗೇಶ್ ಹೆಗಡೆರವರ ಆಯ್ದ ಮೂಲ ಸಾಹಿತ್ಯಗಳನ್ನು ಮಾತ್ರ ಕೇಂದ್ರೀಕರಿಸುತ್ತದೆ. ಪರಿಸರ ಪ್ರಜ್ಞೆಯ ಸ್ವರೂಪವನ್ನು ತಾತ್ವಿಕವಾಗಿ ಹಾಗೂ ಪರಿಸರಾತ್ಮಕವಾಗಿ ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡುವುದಷ್ಟಕ್ಕೇ ಸೀಮಿತವಾಗಿರುತ್ತದೆ. ಕೆಲವು ಆಯ್ದ ಆಕರ ಗ್ರಂಥಗಳಿಂದಲೂ ಹಾಗೂ ಅವುಗಳಲ್ಲಿನ ವಸ್ತು ವಿಚಾರಗಳಿಂದಲೂ ಪರಿಸರಾತ್ಮಕ ನೆಲೆಗಟ್ಟಿನಲ್ಲಿ ಅವುಗಳನ್ನು ವಿಶ್ಲೇಷಣೆಗೊಳಪಡಿಸುವ ವ್ಯಾಪ್ತಿಯನ್ನು ಸಂಶೋಧನೆಯಲ್ಲಿ ನಿಗದಿಪಡಿಸಿಕೊಳ್ಳಲಾಗಿದೆ. ಪರಿಸರದ ಹಲವು ವಿಚಾರಗಳನ್ನು ಕೃತಿಕಾರರ ಕೃತಿಗಳು ಚರ್ಚೆಗೆ ಒಳಪಡಿಸುವುದರಿಂದ ಮತ್ತು ವಿಭಿನ್ನ ದೃಷ್ಟಿಕೋನದಿಂದ ಸಾಹಿತ್ಯವನ್ನು ರಚಿಸಿರುವ ಕೃತಿಕಾರರ ಕೃತಿಗಳ ಬಗ್ಗೆ ಅಧ್ಯಯನ

ನಡೆಸುವುದು ಮತ್ತು ಹೊಸ ಒಳಹುಗಳನ್ನು ಕಂಡುಕೊಳ್ಳುವುದು ಸಾಂಸ್ಕೃತಿಕ ಜವಾಬ್ದಾರಿಯಾಗಿದೆ. ಪರಿಸರವು ಪ್ರತಿರೋಧದ ಮೂಲಕ ಹಿಂದೆಂದಿಗಿಂತಲೂ ಈಗ ಮನುಕುಲದ ಬದ್ಧತೆಯ ಅಗತ್ಯತೆಯ ತುರ್ತನ್ನು ಪ್ರಜ್ಞೆಗಾಗಿ ನೆನಪಿಸುತ್ತಿದೆ. ಈ ದೃಷ್ಟಿಯಿಂದ **"ತೇಜಸ್ವಿ ಮತ್ತು ನಾಗೇಶ ಹೆಗಡೆ ಅವರ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯ ಸ್ವರೂಪ"** ಎಂಬ ತೌಲನಿಕ ವಿಷಯವನ್ನು ಸಂಶೋಧನೆಗೆ ಒಳಪಡಿಸಿ ಮಹಾಪ್ರಬಂಧದ ಮೂಲಕವಾಗಿ ಪಿಎಚ್‌ಡಿ ಪದವಿಗಾಗಿ ಸಲ್ಲಿಸಲಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ಸಂಶೋಧನಾ ಮಹಾಪ್ರಬಂಧದಲ್ಲಿ ಒಟ್ಟು ಎಂಟು ಅಧ್ಯಾಯಗಳನ್ನು ಗುರುತಿಸಿಕೊಳ್ಳಲಾಗಿರುತ್ತದೆ. ಅವುಗಳೆಂದರೆ, ೧. ಅಧ್ಯಯನದ ಪ್ರಸ್ತುತತೆ, ಉದ್ದೇಶ ಮತ್ತು ವ್ಯಾಪ್ತಿ ೨. ಪೂರಕ ಅಧ್ಯಯನಗಳ ತಾತ್ವಿಕ ಸಮೀಕ್ಷೆ ೩. ಗ್ರಹಿಕೆಯ ಅವಶ್ಯ ಪರಿಕಲ್ಪನೆಗಳು ೪. ಪರಿಸರ ಪ್ರಜ್ಞೆಯ ಪೂರ್ವದೃಷ್ಟಿಗಳು ೫. ಕೃತಿಕಾರರ ಕೃತಿಗಳಲ್ಲಿ ಜೀವಿ ಪ್ರಜ್ಞೆ ೬. ಪರಿಸರ ಪ್ರಜ್ಞೆಯಲ್ಲಿ ಮಾನವ ಕಲ್ಪನೆ ೭. ಕೃತಿಗಳಲ್ಲಿ ಅಭಿವೃದ್ಧಿಯ ಪರಿಭಾಷೆಗಳು ೮. ತೌಲನಿಕ ಗ್ರಹಿಕೆಯ ವಿಚಾರಗಳು ಎಂಬುದಾಗಿವೆ. ಕೋರ್ ಅಧ್ಯಾಯಗಳಲ್ಲಿ ಅಪ್ಪಟ ಪರಿಸರದ ಪ್ರಜ್ಞೆಯ ದೃಷ್ಟಿಕೋನಕ್ಕಷ್ಟೇ ಕೃತಿಗಳ ವಸ್ತು ವಿಚಾರಗಳನ್ನು ಅವಲೋಕನಕ್ಕೊಳಪಡಿಸುತ್ತಾ ಸಂಶೋಧನೆಯ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಳ್ಳಲಾಗಿದೆ. ಅಧ್ಯಾಯಕ್ಕೆ ಪೂರಕವಾಗಿ ತೇಜಸ್ವಿ ಮತ್ತು ನಾಗೇಶ ಹೆಗಡೆ ಅವರ ಕೆಲವು ಮೂಲ ಕೃತಿಗಳನ್ನು ಆಯ್ಕೆಮಾಡಿ, ವರ್ಗೀಕರಿಸಿಕೊಂಡು ಅಧ್ಯಯನಕ್ಕೆ ತೊಡಗಿಸಿಕೊಳ್ಳಲಾಗಿದೆ. ಕೆಲವು ಅಧ್ಯಾಯದಲ್ಲಿ ಮಹತ್ವ ಹೊಂದುವ ಲೇಖಕರ ಕೃತಿಗಳು ಮತ್ತೊಂದು ಅಧ್ಯಾಯದಲ್ಲಿ ಅಷ್ಟೇ ಪ್ರಮಾಣದಿಂದಲೂ ಹೆಚ್ಚು ಮಹತ್ವದಾಗಿಯೂ ಪರಿಗಣಿಸಲಾರವು. ಅಧ್ಯಾಯದ ಶೀರ್ಷಿಕೆಗಳಿಗೆ ನಿರ್ದಿಷ್ಟ ನೆಲೆಗಟ್ಟನ್ನು ಒದಗಿಸುವ ಮತ್ತು ವಿಷಯವನ್ನು ಪುಷ್ಟೀಕರಿಸುವಂತಹ ಕೃತಿಗಳ ವಿಷಯಗಳ ಹುಡುಕಾಟವು ಸಹ ಸಂಶೋಧನೆಯ ವ್ಯಾಪ್ತಿಯಲ್ಲಿ ಮುಖ್ಯವೆನಿಸಿಕೊಳ್ಳುತ್ತದೆ.

ತೇಜಸ್ವಿ ಅವರದು ಬಹುತೇಕ ಸೃಜನಾತ್ಮಕ ಕೃತಿಗಳ ರಚನೆ. ನಾಗೇಶ ಹೆಗಡೆ ಅವರದು ಸೃಜನೇತರ ಕೃತಿಗಳ ರಚನೆ. ತೌಲನಿಕ ಅಧ್ಯಯನದಲ್ಲಿ ಎದುರುಗೊಳ್ಳುವ ಮಿತಿಯೆಂದರೆ ಯಾವುದೇ ಕತೆ, ಕಾದಂಬರಿಗಳ ಪ್ರಕಾರಗಳನ್ನಾಗಲಿ ಜೊತೆಯಲ್ಲಿ ಇಟ್ಟು ನೋಡಿದಂತೆ ಇಲ್ಲಿನ ಸಂಶೋಧನೆಯ ಅಧ್ಯಯನ ತೌಲನಿಕವಾಗಿ ಸಾಗುವುದಿಲ್ಲ. ಹಾಗಾಗಿ ಸೃಜನಾತ್ಮಕ ಕೃತಿಗಳಲ್ಲಿರುವ ಪಾತ್ರಗಳನ್ನು, ಪಾತ್ರ ಪರಿಚಯಗಳಿಲ್ಲದ ಸೃಜನೇತರ ಕೃತಿಗಳಲ್ಲಿ ಬರುವ ಸನ್ನಿವೇಶಗಳು ಮತ್ತು ಪರಿಸರದ ಕಲ್ಪನೆಗಳೊಂದಿಗೆ ಜೊತೆಗೂಡಿಸಿ ತೌಲನಿಕನ ಮಾಡಲಾಗದು. ಇದೊಂದು ನನ್ನ ಸಂಶೋಧನೆಯ ಮಿತಿಯು ಹೌದು. ಪರಿಸರ ಪ್ರಜ್ಞೆಯ ಹುಡುಕಾಟದಲ್ಲಿ ಕೃತಿಕಾರರ ಪರಿಸರದ ಬಗೆಗಿನ ಕಲ್ಪನೆಗಳು ಮತ್ತು ವಿಷಯ ಕೇಂದ್ರಿತ ನಿರೂಪಣೆಗಳು ಮುಖ್ಯವಾಗುವುದರಿಂದ ಅದಕ್ಕನುಗುಣವಾದಂತಹ ಫಲಿತಗಳನ್ನಷ್ಟೇ ಪ್ರತಿ ಅಧ್ಯಾಯದ ಅಂತ್ಯಕ್ಕೆ ಕ್ರೋಢೀಕರಿಸಿರುವುದನ್ನು ಸಂಶೋಧನೆಯಲ್ಲಿ ಕಾಣಬಹುದಾಗಿದೆ.

೧.೫ ಅಧ್ಯಯನದ ವಿಧಾನಗಳು:

- ✓ ಆಶಯದ ಚರ್ಚೆಯನ್ನು ಕೃತಿಕಾರರ ಆಯ್ದ ಮೂಲ ಕೃತಿಗಳನ್ನು ಕೇಂದ್ರೀಕರಿಸಿದಂತೆ ವಿವಿಧ ಸಾಹಿತ್ಯಾಂಶಗಳ ಹಿನ್ನೆಲೆಯಲ್ಲಿ ತುಲನಾತ್ಮಕವಾಗಿ ಗ್ರಹಿಸುವುದು.

- ✓ ಕೃತಿ ಕೇಂದ್ರಿತ ಆಶಯ ಮತ್ತು ಕರ್ತೃವಿನ ಆಶಯದ ಮುಖಾಂತರವಾಗಿಯೂ ಕೃತಿಗಳಲ್ಲಿನ ವಸ್ತು ವಿಚಾರಗಳ ಗ್ರಹಿಕೆ ಕುರಿತಂತೆ ಅಧ್ಯಯನ ಮಾಡುವುದು.
- ✓ ನಾಗೇಶ ಹೆಗಡೆರವರನ್ನು ಸಂದರ್ಶಿಸುವ ಮೂಲಕ ಪರಿಸರ ಪ್ರಜ್ಞೆಯ ಪ್ರಸ್ತುತದ ಆಶಯಗಳನ್ನು ಅರ್ಥೈಸಿಕೊಂಡು ಅವರ ಮೂಲ ಪಠ್ಯ ಅಧ್ಯಯನದೊಂದಿಗೆ ಫಲಿತಗಳನ್ನು ನಿರ್ಧರಿಸುವುದು.
- ✓ ಇಬ್ಬರ ಕೃತಿಗಳಲ್ಲಿ ಮೂಡಿಬರುವ ಪರಿಸರ ಪ್ರಜ್ಞೆಯ ಪ್ರಮುಖ ನೆಲೆಗಳನ್ನು ಅವಲೋಕಿಸಿ, ಹೋಲಿಸುವುದರೊಂದಿಗೆ ಸ್ವರೂಪವನ್ನು ವಿಶ್ಲೇಷಿಸುವುದು.
- ✓ ಇತರೆ ವಿಮರ್ಶಾ ಲೇಖನಗಳನ್ನು ಮತ್ತು ಸಮೀಕ್ಷೆಗಳಲ್ಲಿ ಲಭ್ಯವಾಗುವ ಅಧ್ಯಯನಗಳನ್ನು ಬಳಸಿಕೊಂಡು ನಿರ್ದಿಷ್ಟಪಡಿಸಿಕೊಂಡ ಆಯಾಮಗಳಿಗೆ ಅನುಸಾರವಾಗಿ ವಸ್ತು ವಿಚಾರವನ್ನು ಮತ್ತಷ್ಟು ವಿಶ್ಲೇಷಣೆಗೆ ಒಳಪಡಿಸಿ ಸಂಶೋಧನೆಯನ್ನು ಪುಷ್ಟೀಕರಿಸುವುದು.

೧.೬ ಕೃತಿಕಾರರ ಪರಿಚಯ:

೧.೬.೧ ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರದು ಮೇರು ವ್ಯಕ್ತಿತ್ವ ಸಾಹಿತ್ಯದ ಹಲವು ಕ್ಷೇತ್ರಗಳಲ್ಲಿ ಜಲಚಿಹ್ನೆಯನ್ನು ಸೃಷ್ಟಿಸಿದ ಸಾಹಿತಿ ಎಂತಲೂ ಕರೆಯಲ್ಪಡುತ್ತಾರೆ. ಮಹಾನ್ ಲೇಖಕ ಕುವೆಂಪು ಅವರ ಪುತ್ರರಾದ ತೇಜಸ್ವಿ ಅವರು ಮೂಲತ: ಸಾಹಿತಿಯಾಗಿದ್ದು ವಿಜ್ಞಾನ ಮತ್ತು ಇತರ ಕೆಲವು ಸಾಹಿತ್ಯೇತರ ಕ್ಷೇತ್ರಗಳಲ್ಲಿಯೂ ತಮ್ಮ ತನವನ್ನು ಮೆರೆದಿರುವ ವಿಶಿಷ್ಟ ಲೇಖಕರಾಗಿದ್ದಾರೆ. ಈ ದೃಷ್ಟಿಯಲ್ಲಿ ಶಿವರಾಮ ಕಾರಂತರ ಸಾಧನೆ ನೆನಪಿಗೆ ಬರುತ್ತದೆಯಾದರೂ ಕಾರಂತರಂತೆಯೇ ತೇಜಸ್ವಿಯವರು ಎಲ್ಲಾ ಕ್ಷೇತ್ರಗಳಲ್ಲಿ ಕೈ ಆಡಿಸುವುದಕ್ಕೆ ಬದಲಾಗಿ ತಮ್ಮ ವಿಶಿಷ್ಟ ಆಸಕ್ತಿಯ ಹಾಗೂ ಅಧ್ಯಯನದ ವಲಯಗಳಿಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಂಡು ವಿಶಿಷ್ಟ ಕೃತಿಗಳನ್ನು ನೀಡಿದ ಹಿರಿಮೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಲೋಹಿಯಾ ಅವರ ಚಿಂತನೆಗಳಿಂದ ಪ್ರಭಾವಿತರಾಗಿರುವ ಅವರ ವಿಚಾರಧಾರೆಯೊಂದಿಗೆ ಹಲವು ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಂಡಿರುವುದಕ್ಕೆ ಸಹಜ ಕೃಷಿ, ಪರಿಸರದ ಕತೆ, ವಿಸ್ಮಯ, ಮೊದಲಾದ ಕೃತಿಗಳು ಸಾಕ್ಷಿಯಾಗಿವೆ. ಮಿಸ್ಸಿಂಗ್ ಲಿಂಕ್, ಕನ್ನಡ ನಾಡಿನ ಹಕ್ಕಿಗಳು, ಫ್ಲೈಯಿಂಗ್ ಸಾಸರ್ಸ್ ಅವರ ವೈಜ್ಞಾನಿಕ ಆಸಕ್ತಿಯ ನಿದರ್ಶನಗಳಾಗಿವೆ. ಯಾವುದೇ ಒಂದು ಪಂಥದ ಸಿದ್ಧಾಂತಕ್ಕೆ ಕಟ್ಟುಬೀಳದೆ, ಶುದ್ಧ ಸಾಹಿತ್ಯದ ಸತ್ಯದಲ್ಲಿ ನಂಬಿಕೆಯನ್ನಿರಿಸಿ, ಮೌಲಿಕ ಕೃತಿಗಳ ರಚನೆಯಿಂದ ರಾಷ್ಟ್ರಮಟ್ಟದ ಗೌರವಾದರಗಳನ್ನು ಗಳಿಸಿಕೊಂಡವರು. ತಮ್ಮ ಜೀವಿತಾವಧಿಯಲ್ಲಿ ಅಳವಡಿಸಿಕೊಂಡಿದ್ದ ವೈಜ್ಞಾನಿಕ ಸತ್ಯಗಳು, ವೈಚಾರಿಕ ಮೌಲ್ಯಗಳು, ಪರಿಸರ ಪ್ರಜ್ಞೆ, ಪ್ರಯೋಗಶೀಲತೆ, ಕನ್ನಡ ನಾಡುನುಡಿಯ ಬಗೆಗಿನ ನಿಖರತೆ ವಾಸ್ತವವಾದಿ ನಿಲುವನ್ನು ಅತ್ಯಂತ ಸಮರ್ಥವಾಗಿ ಕಾರ್ಯರೂಪಕ್ಕೆ ತಂದವರು. ತೇಜಸ್ವಿ ಅವರ ಬದುಕು ಬರಹ

ಸಾಮಾಜಿಕ, ರಾಜಕೀಯ, ಪ್ರಾಕೃತಿಕ, ಧಾರ್ಮಿಕ, ಸಾಹಿತ್ಯವಲಯದ ಎಲ್ಲಾ ಸಂವೇದನೆಗಳನ್ನು ಒಳಗೊಂಡಿದೆ.

ತೇಜಸ್ವಿ ಕಾಡಿನೊಳಗೆ ಅಲೆದು ಬಗೆ ಬಗೆಯ ಸಸ್ಯ, ಕೀಟಗಳನ್ನು ಕುರಿತು ವಿವರವಾಗಿ ಬರೆದರು. ಕಾಡಿನೊಂದಿಗೆ ನಿರಂತರ ಒಡನಾಟವಿಟ್ಟುಕೊಂಡು ಬದುಕುತ್ತಿದ್ದ ಮಂದಣ್ಣ, ಚೇಂಕ್ರ, ಅಣ್ಣಪ್ಪಣ್ಣ, ಪ್ಯಾರಾ, ಕರಾಟೆ ಮಂಜನಂಥವರು ಅವರ ಕಥೆ ಕಾದಂಬರಿಗಳಲ್ಲಿ ಪ್ರಾದೇಶಿಕ ಪರಿಸರದ ನಾಯಕರಾದರು. ತೇಜಸ್ವಿ ಅವರ ಕಥೆ ಕಾದಂಬರಿಗಳಲ್ಲಿ ಧಾರಾಕಾರ ಮಳೆ, ಕಾಡ್ಗಿಚ್ಚು, ಭೀಕರ ಗಾಳಿ ಮುಖ್ಯ ಸನ್ನಿವೇಶಗಳಾಗಿ ಬಂದಿವೆ. ಪರಿಸರದ ಆಪತ್ತು ಕುರಿತು ಪರಿಸರದ ವಿವಿಧ ಸನ್ನಿವೇಶಗಳನ್ನು ಸೃಜಿಸಿಕೊಂಡು ಪಾತ್ರ ಹೆಣೆಯುವ ಕಲಾಪ್ರೌಢಿಮೆ ಅವರ ಕೃತಿಗಳಲ್ಲಿ ಸೃಜನಶೀಲವಾಗಿವೆ. ಪರಿಸರದೊಂದಿಗೆ ತೇಜಸ್ವಿ ಅವರದು ನಿರಂತರ ಅನುಸಂಧಾನ. ಪ್ರಾತ್ಯಕ್ಷಿಕೆ, ಪ್ರಾಯೋಗಿಕತೆಗೆ ಒಳಗಾದ ಅನುಭವ ಅವರದ್ದು. ಹೀಗೆ ಪರಿಸರವನ್ನು ತನ್ನೊಳಗೆ ಆವಾಹಿಸಿಕೊಂಡು ಕತೆ ಕಾದಂಬರಿಗಳ ಮೂಲಕ ಸರಳವಾಗಿ ಬರೆದವರಲ್ಲಿ ಕನ್ನಡದ ಲೇಖಕ ತೇಜಸ್ವಿ ಅವರನ್ನು ಬಿಟ್ಟರೆ ಬೇರೊಬ್ಬರಿಲ್ಲ.

ರೈತ ಚಳುವಳಿ, ಮಲೆನಾಡು ಕಾಫಿ ಬೆಳೆಗಾರರ ಸಮಸ್ಯೆ, ಕುದುರೆಮುಖ ಗಣಿಗಾರಿಕೆ, ಭದ್ರಾನದಿ ಉಳಿವಿನ ಹೋರಾಟದಲ್ಲಿ ಭಾಗಿಯಾಗಿದ್ದ ತೇಜಸ್ವಿ ತಮ್ಮ ಬರಹಗಳಲ್ಲಿಯೂ ಇಂಥದೊಂದು ಕೊರತೆಯನ್ನು ಸಾಕಷ್ಟು ನೀಗಿಸಿದ್ದಾರೆ. ವಾಸ್ತವ ಸ್ಥಿತಿ ಬಿಂಬಿಸುವ ಸನ್ನಿವೇಶದ ಮೂಲಕ ಸಮಸ್ಯೆಗಳನ್ನು ಅನಾವರಣಗೊಳಿಸಿದ್ದಾರೆ. ಇವರ ಬಗೆಗಿನ ಪರಿಚಯಾತ್ಮಕ ಬರವಣಿಗೆ ಸಂಶೋಧನಾ ಪ್ರಬಂಧದ ಪ್ರಧಾನ ಉದ್ದೇಶವಾಗದು. ಪರಿಸರ ಪ್ರಜ್ಞೆಯ ಸ್ವರೂಪದಲ್ಲಿ ಇವರ ದೂರದರ್ಶಿತ್ವವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವರ ಪರಿಸರಾತ್ಮಕ ಬರವಣಿಗೆಗಳು ಸೃಷ್ಟಿಸಿದ ಪ್ರಯೋಗಗಳ ಸ್ವರೂಪವನ್ನು ಶೋಧಿಸುವುದು ಸಂಶೋಧನೆಯ ಪ್ರಮುಖ ಆಶಯವಾಗುತ್ತದೆ.

೧.೬.೨ ನಾಗೇಶ ಹೆಗಡೆ

ವಿಜ್ಞಾನ ಕ್ಷೇತ್ರದಲ್ಲಿ ನಾಗೇಶ್ ಹೆಗಡೆ ಅವರದು ಪ್ರಮುಖ ಹೆಸರು. ಉತ್ತರ ಕನ್ನಡ ಜಿಲ್ಲೆಯ ಬಕ್ಕೆಮನೆಯವರು. ಶಿರಸಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ. ಐ.ಐ.ಟಿ. ಖರಗ್‌ಪುರ್ ಮತ್ತು ದಿಲ್ಲಿಯ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಮಾಸ್ಟರ್ ಡಿಗ್ರಿ. ಕಲ್ಕತ್ತ ಮತ್ತು ದೆಹಲಿಯ ವಿಶ್ವವಿದ್ಯಾಲಯಗಳಿಂದ ಭೂವಿಜ್ಞಾನ ಮತ್ತು ಪರಿಸರ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ. ಕೆಲವು ಕಾಲ ನೈನಿತಾಲ್‌ನ ಕುಮಾವೊ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ವೃತ್ತಿ. ದಿಲ್ಲಿಯಲ್ಲಿ 'ಫ್ರೀ ಥಿಂಕರ್ಸ್' ತಂಡ ಕಟ್ಟುವ ಮೂಲಕ ಸಮಾಜ ಸೇವೆಗೆ ಸಿದ್ಧತೆ. ವರ್ಧದಲ್ಲಿ ನೆಲೆಸುವ ಮೂಲಕ 'ಸೈನ್ಸ್ ಫಾರ್ ವಿಲೇಜ್' ಪತ್ರಿಕೆ ಕಾರ್ಯ ಆರಂಭ. ನಂತರ ಪತ್ರಕರ್ತರಾಗಿ 'ಪ್ರಜಾವಾಣಿ' ಮತ್ತು 'ಸುಧಾ' ಬಳಗಕ್ಕೆ ಸೇರ್ಪಡೆ. ನಿವೃತ್ತಿಯ ನಂತರ 'ಅಂಕಣ' ಕಾರರಾಗಿ ಸೇವೆ ಸಲ್ಲಿಕೆ. 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ ಅಂಡ್ ನ್ಯೂಮೀಡಿಯಾ'ದಲ್ಲಿ ವಾರದ ಪ್ರಾಧ್ಯಾಪಕ; ಕೆಲವು ಕನ್ನಡ ಪತ್ರಿಕೆಗಳಲ್ಲಿ ಅಂಕಣಕಾರ. ವಿಜ್ಞಾನ, ಪರಿಸರ ಮತ್ತು ಅಭಿವೃದ್ಧಿ ವಿಷಯಗಳ ಬರಹಗಳಿಗಾಗಿ ಸಾಹಿತ್ಯ ಅಕಾಡೆಮಿಯಿಂದ ಮೂರು ಬಹುಮಾನ, ಕರ್ನಾಟಕ ಸರ್ಕಾರದ ಪರಿಸರ ಪ್ರಶಸ್ತಿ, ಮೀಡಿಯಾ ಅಕಾಡೆಮಿಯಿಂದ ಜೀವಮಾನ ಸಾಧನೆ

ಪ್ರಶಸ್ತಿ ಮತ್ತು ರಾಷ್ಟ್ರಪತಿ ಆಳ್ವಿಕೆಯ ಅವಧಿಯಲ್ಲಿ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಈಗ ಅರೆಕಾಲಿಕ ಕೃಷಿಕರಾಗಿಯೂ ತೊಡಗಿಸಿಕೊಂಡಿದ್ದಾರೆ. (೩)

ಪರಿಸರಕ್ಕೆ ಪೂರಕವಾಗಿ ರಚಿತಗೊಂಡ ಲೇಖನಗಳಾದ ಇರುವುದೊಂದೇ ಭೂಮಿ, ನಮ್ಮೊಳಗಿನ ಬ್ರಹ್ಮಾಂಡ, ಪ್ರತಿದಿನ ಪರಿಸರ ದಿನ, ಮುಷ್ಟಿಯಲ್ಲಿ ಮಿಲೇನಿಯಂ, ಅಕ್ಕರೆ ಅಕ್ಕಿ ಭಳಿರೇ ಭತ್ತ, ಕೊಪೆನ್ ಹೇಗನ್ ಋತುಸಂಹಾರ, ಅಭಿವೃದ್ಧಿಯ ಅಂಧಯುಗ, ದುಂದುಮಾರ, ವಿಜ್ಞಾನ ವಿಷಯವಾಗಿ ಮಂಗಳನಲ್ಲಿ ಜೀವಲೋಕ, ಅಂತರಿಕ್ಷಾದಲ್ಲಿ ಮಹಾಸಾಗರ, ಆಚಿನ ಲೋಕಕ್ಕೆ ಕಾಲಕೋಶ ಇತ್ಯಾದಿ; ಅನುವಾದಕರಾಗಿ ಕರ್ನಾಟಕ ಪರಿಸರ ಪರಿಸ್ಥಿತಿ (ನಾಲ್ಕು ಸಂಪುಟ), ಅಳಿವಿನಂಚಿನಲ್ಲಿ ಜೀವಿಗಳು, ಗಾಳಿಗೆ ವಿಷ–ನೀರಿಗೆ ವಿಷ, ಪರಿಸರ ಮಾಲಿನ್ಯ, ಕ್ಯಾನ್ಸರ್ ಕ್ರೀಡೆ, ವನ ಸಂಜೀವಿನಿ ಇತ್ಯಾದಿ ಕೃತಿಗಳು ಅವರ ಪರಿಸರ ಪ್ರಜ್ಞೆ ಮತ್ತು ವೈಜ್ಞಾನಿಕ ಮನೋಧರ್ಮಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

ನಾಗೇಶ ಹೆಗಡೆರವರು ತಮ್ಮ ಬರಹಗಳಲ್ಲಿ ಜೀವಗೋಳವಾದ ಭೂಮಿಯನ್ನು ಕೇಂದ್ರವಾಗಿರಿಸಿಕೊಂಡು, ಅದರ ಅಸ್ಥಿತ್ವ ಮತ್ತು ಅದರ ವಿನಾಶಕ್ಕೆ ಸುತ್ತಲಿನ ಮನುಕುಲದ ಪರಿಸರ ಹೇಗೆ ಕಾರಣವಾಗುತ್ತದೆ ಮತ್ತು ಜೀವಜಾಲದ ಬೆಸುಗೆಯ ನಿರ್ನಾಮ ಅಖಂಡ ಪರಿಸರದ ಅಸಮತೋಲನಕ್ಕೆ ಕಾರಣವಾಗುವ ಮೂಲಕ ಏನೆಲ್ಲಾ ಪರಿಣಾಮಗಳು ಭೂಪರಿಸರದಲ್ಲಿ ಘಟಿಸುತ್ತವೆ ಎಂಬುದನ್ನು ನೈಜ ಉದಾರಣೆಗಳ ಸಹಿತ ಮಂಡಿಸುವ ಪ್ರತಿಭಾವಂತ ಸಾಧಕ. ಅವರದು ಸೈದ್ಧಾಂತಿಕ ಖಚಿತತೆಯುಳ್ಳ ಬರಹ. ಜೌಗು ಭೂಮಿ, ಹರಿವ ತೊರೆ, ತೊರೆಯನ್ನು ಆವರಿಸಿಕೊಂಡ ಜೀವಸಂಕುಲ, ಬಯೋಮ್, ಬಯೋಡೈವರ್ಸಿಟಿಗಳಂತಹ ಇಕಾಲಜಿಯ ತಾತ್ವಿಕ ಪರಿಕಲ್ಪನೆಗಳನ್ನು ಪ್ರಾದೇಶಿಕ ಉದಾಹರಣೆಗಳೊಂದಿಗೆ ಸರಳವಾಗಿ ಮತ್ತು ವಿಸ್ತೃತವಾಗಿ ಮಂಡಿಸುತ್ತಾರೆ. ಅಭಿವೃದ್ಧಿಯ ಅಂಧಯುಗದಲ್ಲಿ ನಾವಿದ್ದೇವೆ ಎಂಬ ಎಚ್ಚರಿಕೆಯ ಘಂಟೆಯೊಂದಿಗೆ ಪರಿಸರ ವಿನಾಶಕ್ಕೆ ಪೂರಕವಾಗುತ್ತಿರುವ ಜಾಗತಿಕ ಘಟನೆಗಳನ್ನು ಮತ್ತು ಪ್ರಾದೇಶಿಕವಾಗಿ ಕಂಡುಬರುವ ಮನುಷ್ಯನ ವಿವೇಕರಹಿತ ಆಕ್ರಮಣಕಾರಿ ಜೈವಿಕ ಚಟುವಟಿಕೆಗಳ ವಿರಾಟ ರೂಪವನ್ನು ಕಣ್ಣಿಗೆ ಕಟ್ಟುವಂತೆ ಅನಾವರಣ ಮಾಡುವಲ್ಲಿ ಇವರ ಕಲಾಕೃತಿ ಅಪರೂಪವಾದುದು. ವೈಜ್ಞಾನಿಕ ಮತ್ತು ವೈಚಾರಿಕ ದೃಷ್ಟಿಕೋನವನ್ನು ಜನಸಾಮಾನ್ಯರು ಅರ್ಥಮಾಡಿಕೊಳ್ಳುವಂತೆ ಮಾಡುವಲ್ಲಿ ಇವರ ಲೇಖನಗಳು, ಅಂಕಣಗಳು ಮತ್ತು ಕೃತಿಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಮ್ಮೆಯ ಕೊಡುಗೆಗಳೆನಿಸಿವೆ. ರಾಜಕೀಯ ಧೋರಣೆಗಳು ಇಂದಿಗೂ ಹೇಗೆ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿ ಎಂಬ ಹೆಸರಲ್ಲಿ ಸದ್ದೃಶ್ಯಗೊಳಿಸುತ್ತಿವೆ ಎಂಬುದನ್ನು ಅಂಕಿ ಸಂಖ್ಯೆಗಳ ಮೂಲಕ ಮುಕ್ತವಾಗಿ ವ್ಯಕ್ತಪಡಿಸುವ ವ್ಯಕ್ತಿತ್ವ ಹೆಗಡೆ ಅವರದ್ದಾಗಿದೆ.

ಕನ್ನಡ ನಾಡು ಕಂಡ ಪ್ರತಿಭಾವಂತ ಬರಹಗಾರರಲ್ಲಿ ನಾಗೇಶ ಹೆಗಡೆ ಅವರು ಒಬ್ಬರಾಗಿದ್ದು, ಇವರೊಬ್ಬ ವೈಜ್ಞಾನಿಕ ಮತ್ತು ವೈಚಾರಿಕ ಚಿಂತನೆಗಳ ವೃತ್ತಿಪರ ಬರಹಗಾರರಾಗಿದ್ದಾರೆ. ಪರಿಸರ, ಅಭಿವೃದ್ಧಿ, ವಿಜ್ಞಾನ, ತಂತ್ರಜ್ಞಾನ ಇತ್ಯಾದಿ ವಿಷಯಗಳು ಮತ್ತು ಪರಿಕಲ್ಪನೆಗಳ ತಳಹದಿಯಲ್ಲಿ ವಿಚಾರಗಳನ್ನು ಮಂಡಿಸುವವರಾಗಿದ್ದಾರೆ. ಹೆಗಡೆ ಉತ್ತಮ ವಾಗ್ಮಿಯೂ ಹೌದು. ಆಯ್ಕೆ ಮಾಡಿಕೊಂಡ ಲೇಖಕರು ಮೇರು ವ್ಯಕ್ತಿತ್ವದವರಾಗಿದ್ದು, ಈ ಇಬ್ಬರ ಮೂಲ ಕೃತಿಗಳನ್ನು

ಆಯ್ದು, ಬರಹಗಳ ವಸ್ತು ಸೂಕ್ಷ್ಮತೆಯ ಒಳಹೊಕ್ಕು, ಪರಿಸರ ಪ್ರಜ್ಞೆಯ ಸ್ವರೂಪದಲ್ಲಿನ ವಿವಿಧತೆಯನ್ನು ಏಕತೆಯನ್ನು ಭಿನ್ನ ಆಯಾಮಗಳಲ್ಲಿ ಅರ್ಥೈಸಿಕೊಳ್ಳುತ್ತಾ, ಅವುಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿಕೊಳ್ಳುತ್ತಾ, ಸ್ವವಿಮರ್ಶೆಯೊಂದಿಗೆ ಫಲಿತಗಳನ್ನು ಕಂಡುಕೊಳ್ಳುವುದು ಸಂಶೋಧನೆಯ ಪ್ರಧಾನ ಉದ್ದೇಶವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ 'ಪರಿಸರ' ನಮ್ಮ ಸುತ್ತಲಿನ ಸಮೂಹ ಸ್ಥಿತಿಯಾಗಿದೆ. ವಸ್ತು, ವಿಷಯ, ಭಾವಗಳ ವಿಭಿನ್ನ ಪರಿಸರಗಳೆಲ್ಲವೂ ನಮ್ಮ ನಡುವಿನ ವಸ್ತು ಪರಿಸರ, ಸಾಂಸ್ಕೃತಿಕ ಪರಿಸರದಲ್ಲಿ ಇದ್ದರೂ, ಪ್ರಚಲಿತದಲ್ಲಿ ನೆಲ, ಜಲ, ವಾಯು, ಕಾಡು, ನದಿ, ಪ್ರಾಣಿ, ಪಕ್ಷಿಗಳ ಸಾವಯವ ಬದುಕಿನ ಒಪ್ಪಂದಕ್ಕೆ ಪರಿಸರ ಎಂದು ಬಳಸಲಾಗುತ್ತಿದೆ. ಈ ಸಂಶೋಧನೆಯಲ್ಲಿ ಕೃತಿಕಾರರ ಆಯ್ದ ಕೃತಿಗಳಲ್ಲಿ ಪ್ರಕೃತಿ ಪ್ರಧಾನ ಪರಿಸರದ ವಿವೇಚನೆಯನ್ನು ಮಾತ್ರ ನೋಡುವ ಪ್ರಯತ್ನ ಮಾಡಲಾಗಿದೆ.

ಈ ಭೂಮಿ ಮೇಲೆ ಹುಟ್ಟಿರುವ ಪ್ರತಿಯೊಬ್ಬ ಮನುಷ್ಯನಲ್ಲೂ ಪರಿಸರ ಪ್ರಜ್ಞೆ ಅವಿರತವಾಗಿರಲೇಬೇಕಿದ್ದು, ಗಂಭೀರವೆನಿಸುವ ಸನ್ನಿವೇಶಗಳಲ್ಲಿ ಮತ್ತು ನಿತ್ಯಜೀವನದೊಂದಿಗೆ ಸಂಬಂಧ ಕಲ್ಪಿಸುವ ಪರಿಸರದ ವಿವಿಧ ಸಂಗತಿಗಳಲ್ಲಿ ಅನುಸಂಧಾನ ನಿತ್ಯ ನಡೆಯುತ್ತಿರಲೇಬೇಕು. ಪರಿಸರದಿಂದ ಸಾಕಷ್ಟನ್ನು ತಲತಲಾಂತರದಿಂದ ಪಡೆದಿದ್ದೇವೆ. ಈ ಋಣಕ್ಕೆ ಪ್ರತಿಯಾಗಿ ಕೊಟ್ಟಿದ್ದಾದರೂ ಏನು???? ಪ್ರತಿಯೊಬ್ಬರೂ ಕೇಳಿಕೊಳ್ಳಲೇಬೇಕಾದ ಪ್ರಶ್ನೆಗಳಿವು. ಇತ್ತೀಚೆಗಷ್ಟೇ ಕೇರಳ ಮತ್ತು ಕೊಡಗಿನಲ್ಲಿ ಘಟಿಸಿದ ಜಲಕಂಪನ ಮತ್ತು ಭೂಕಂಪನದ ಪ್ರಾಕೃತಿಕ ವಿಪತ್ತುಗಳು, ಮತ್ತದರ ಘೋರ ಪರಿಣಾಮಗಳು ಉತ್ತರಕ್ಕಾಗಿ ನಮ್ಮನ್ನು ಪ್ರೇರೇಪಿಸಿವೆ. ಈ ಹಿನ್ನಲೆಯಲ್ಲಿ ಅಖಂಡ ಪ್ರಾಕೃತಿಕ ಪರಿಸರವನ್ನು ನಮ್ಮ ಮಕ್ಕಳು ಮೊಮ್ಮಕ್ಕಳಿಗಾಗಿ ಉಳಿಸುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ. ನಮ್ಮ ಬದ್ಧತೆಯನ್ನು ಎಚ್ಚರಗೊಳಿಸುವುದು ಈ ಸಂಶೋಧನೆಯ ಪುಟ್ಟ ಪ್ರಯತ್ನವೆಂದು ಅಭಿಪ್ರಾಯಿಸಲಾಗಿದೆ.

ಕೊನೆ ಟಿಪ್ಪಣಿಗಳು:

೧. ಡಾ.ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳು, ಕುವೆಂಪು ಕಾದಂಬರಿಗಳಲ್ಲಿ ಜೈವಿಕ ಜಾಲ-ಪುಟ ಸಂ:೩೪೧

೨. ನಾಗೇಶ ಹೆಗಡೆ, ದುಂದುಮಾರ, ಪುಟ: ೫೨

೩. ನಾಗೇಶ ಹೆಗಡೆ, ಅಭಿವೃದ್ಧಿಯ ಅಂಧಯುಗ, ಪರಿಚಯಾತ್ಮಕ ವಿವರಗಳು-ಬೆನ್ನುಡಿ

ಅಧ್ಯಾಯ-ಎರಡು

ಪೂರಕ ಅಧ್ಯಯನಗಳ ತಾತ್ವಿಕ ಸಮೀಕ್ಷೆ

೨.೧ ಇದುವರೆಗಿನ ಅಧ್ಯಯನಗಳು, ವರದಿಗಳು ಮತ್ತು ಲೇಖನಗಳು

ಅಧ್ಯಾಯ–ಎರಡು

ಪೂರಕ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಈ ಅಧ್ಯಾಯದಲ್ಲಿ ಕೃತಿಕಾರರ ಪರಿಸರ ಪ್ರಜ್ಞೆಯ ವಿವಿಧ ಸ್ವರೂಪಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಸಂಶೋಧನೆಗೆ ಪೂರಕವಾಗಿ ಲಭ್ಯವಾಗುವ ಇದುವರೆಗಿನ ಕೆಲವು ಅಧ್ಯಯನಗಳನ್ನು, ಪ್ರಮುಖ ವರದಿ ಮತ್ತು ಲೇಖನಗಳನ್ನು ಹಾಗೂ ಕೆಲವು ಆಂದೋಲನಗಳ ಮುಖ್ಯಾಂಶಗಳನ್ನು ಸಮೀಕ್ಷೆಗೊಳಿಸಿ ಅಲೋಕಿಸಲಾಗಿರುತ್ತದೆ. ಸಂಶೋಧನೆಯ ಅವಧಿಯ ಸಂದರ್ಭದಲ್ಲಿ ಕರ್ನಾಟಕದ ಪ್ರಮುಖ ವಿಶ್ವವಿದ್ಯಾಲಯಗಳಾದ ಹಂಪಿ ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ ಹಾಗೂ ಧಾರವಾಡ ವಿಶ್ವವಿದ್ಯಾಲಯದಲ್ಲೂ ಇದುವರೆಗಿನ ಪೂರ್ವ ಅಧ್ಯಯನಗಳ ಬಗ್ಗೆ ಶೋಧಿಸಿದಾಗ ಸಾಹಿತ್ಯ ಕ್ಷೇತ್ರದ ವಿಭಾಗಗಳಲ್ಲಿ ನಾಗೇಶ ಹೆಗಡೆ ಅವರ ಕೃತಿಗಳನ್ನು ಅಥವಾ ಅಂಕಣಗಳನ್ನು ಕುರಿತು ಸಂಶೋಧನೆ ಆಗಿಲ್ಲದಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಕೆ.ಆರ್.ನಗರದ ಪದವಿ ಕಾಲೇಜಿನ ಶಾಖೆಯಲ್ಲಿ ಕನ್ನಡ ವಿಷಯಕ್ಕೆ ಪೂರಕವಾಗಿ ಇತ್ತೀಚೆಗಷ್ಟೇ ನಾಗೇಶ ಹೆಗಡೆ ಅವರನ್ನು ಕುರಿತಂತೆ ೨೦೧೮ನೇ ಸಾಲಿನಲ್ಲಿ ಡಸರ್‌ಟೇಶನ್‌ವೊಂದನ್ನು ವಿದ್ಯಾರ್ಥಿಗೆ ನೀಡಿರುವ ಬಗ್ಗೆ ಗುರುತಿಸಿಕೊಳ್ಳಲಾಯಿತು. ಹಾಗೆಯೇ ಪ್ರತಿ ಯೂನಿವರ್ಸಿಟಿಯಲ್ಲಿಯೂ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಕುರಿತಂತೆ ವಿಫುಲವಾದ ಸಂಶೋಧನಾ ಮಹಾಪ್ರಬಂಧಗಳು ಲಭ್ಯವಾಗುತ್ತವೆ. ನವ್ಯ–ನವ್ಯೋತ್ತರ ಕಾದಂಬರಿಗಳು, ತೇಜಸ್ವಿ–ಲಂಕೇಶ್ ಅವರ ಕಾದಂಬರಿಗಳ ವಿವೇಚನೆ, ಕುವೆಂಪು–ತೇಜಸ್ವಿ ಬದುಕು ಬರಹಗಳ ವಿವೇಚನೆ, ತೇಜಸ್ವಿ ಕೃತಿಗಳಲ್ಲಿ ಪಾತ್ರಗಳು, ತೇಜಸ್ವಿ ಕೃತಿಗಳಲ್ಲಿ ಸ್ತ್ರೀ, ದಲಿತ ಪ್ರಜ್ಞೆ, ಪರಿಸರ, ಪ್ರಕೃತಿ.... ಹೀಗೆ ಹಲವಾರು ಸಂಶೋಧನ ಅಧ್ಯಯನಗಳ ಶೀರ್ಷಿಕೆಗಳಿರುವುದನ್ನು ಕಾಣಬಹುದಾಗಿದೆ. ಆದರೆ ಒಬ್ಬರ ಸೃಜನಾತ್ಮಕ ಕೃತಿಯೊಂದಿಗೆ ಮತ್ತೊಬ್ಬರ ಸೃಜನೇತರ ಕೃತಿಗಳನ್ನು ಹೋಲಿಸಿ ಅಧ್ಯಯನಕ್ಕೊಳಪಡಿಸಿದ ಸಂಶೋಧನೆಗಳು ಸಮೀಕ್ಷೆಯ ಸಂದರ್ಭದಲ್ಲಿ ಅವಲೋಕನಕ್ಕೆ ಸಾಕಷ್ಟು ಲಭ್ಯವಾಗಿರುವುದಿಲ್ಲ. ಇದ್ದರೂ ಇವು ಸೃಜನಾತ್ಮಕ ಮತ್ತು ಸೃಜನೇತರ ಕೃತಿಗಳಿಗೆ ಪ್ರತ್ಯೇಕಗೊಳಿಸಿದ ಸಂಶೋಧನೆಗಳಾಗಿರುತ್ತವೆ. ಉದಾಹರಣೆಗೆ ಹೆಗಡೆ ಅವರ ಕೃತಿಗಳನ್ನು, ಅಂಕಣಗಳನ್ನು ಹಾಗೂ ಅವರ ಬಿಡಿ ಬರಹಗಳನ್ನು ತೇಜಸ್ವಿ ಅವರ ಸೃಜನಾತ್ಮಕ ಕೃತಿಯೊಂದಿಗೆ ಸೇರಿಸಿ ಸಂಶೋಧನೆಯಲ್ಲಿ ತೌಲನಿಕ ಅಧ್ಯಯನ ನಡೆಸುವುದು ಒಂದು ಸವಾಲು. ತೇಜಸ್ವಿ ಅವರ ಕನ್ನಡನಾಡಿನ ಹಕ್ಕಿಗಳು, ವಿಸ್ಮಯ–

೧.೨.೩. ಕೀಟ ಪ್ರಪಂಚ ಕೃತಿಗಳು ಸೃಜನೇತರ ಕೃತಿಗಳು ಎನಿಸಿಕೊಳ್ಳುವುದರಿಂದ ಈ ಹಂತದಲ್ಲಿ ಇಬ್ಬರು ರಚಿಸಿರುವ ಸೃಜನೇತರ ಕೃತಿಗಳನ್ನು ಕುರಿತಂತೆ ನಡೆಸುವ ಅಧ್ಯಯನ ಸಂಶೋಧನೆಯಲ್ಲಿ ಸಲೀಸಾಗುವುದು. ಹಾಗೆಯೇ ಪ್ರತಿ ಅಧ್ಯಾಯದ ಅಂತ್ಯದಲ್ಲಿ ಫಲಿತಗಳನ್ನು ನಿರ್ಧರಿಸುವಾಗಲೂ ಇಂತಹ ಸಮಸ್ಯೆಗೆ ಸಂಶೋಧನಾರ್ಥಿ ಆಗಾಗ್ಗೆ ಒಳಗೊಳ್ಳುತ್ತಲೇ ಇರಬೇಕಾಗುವುದು ಕೂಡ ಸಂಶೋಧನೆಯಲ್ಲಿ ಕಂಡುಬರುವ ಸಮಸ್ಯೆ ಎಂಬುದನ್ನು ಗಮನಿಸಬಹುದಾಗಿದೆ. ಅದರಲ್ಲೂ ಇವರಿಬ್ಬರ ಅಪ್ಪಟ ಪರಿಸರ ಪ್ರಜ್ಞೆಯ ತಾತ್ವಿಕತೆಯನ್ನು ಕುರಿತಂತೆ ತೌಲನಿಕವಾಗಿ ನಡೆಸಿದ ಸಂಶೋಧನಾ ಅಧ್ಯಯನ ಇದುವರೆಗೂ ನಡೆದಿಲ್ಲವಾದ್ದರಿಂದ ಸಮೀಕ್ಷೆಯ ಸಂದರ್ಭದಲ್ಲಿ ಪೂರಕವಾಗುವಂತಹ ಯಾವುದೇ ಪೂರ್ವ ಅಧ್ಯಯನಗಳು ಲಭ್ಯವಾಗುವುದಿಲ್ಲ. ಆದರೆ ಪರಿಸರ ಪ್ರಜ್ಞೆಯ ಅರ್ಥೈಸುವಿಕೆಯ ದೃಷ್ಟಿಯಿಂದ ಕೆಲವು ಪರಿಸರಾಧಿತ ಆಕರಗಳ ಅಧ್ಯಯನ ಪ್ರಸ್ತುತವಾಗುತ್ತವೆ. ಅಂತಹ ಸಾಹಿತ್ಯ ಸಮೀಕ್ಷೆಗಳ ಪೂರಕ ಅಧ್ಯಯನದೊಂದಿಗೆ ಮೂಲ ಕೃತಿಗಳಲ್ಲಿನ ವಸ್ತು ವಿಚಾರಗಳ ಆಶಯವನ್ನು ಬಿಡಿಸಿಕೊಳ್ಳುತ್ತಾ, ಇಕಾಲಜಿ ಕಲ್ಪನೆಗಳ ಹಿಂದಿರುವ ತಾತ್ವಿಕತೆಯನ್ನು ಅರ್ಥಮಾಡಿಕೊಳ್ಳುತ್ತಾ ಮುಂದಿನ ಕೋರ್ ಅಧ್ಯಾಯಗಳಲ್ಲಿ ಫಲಿತಗಳನ್ನು ಕುರಿತು ವಿವೇಚಿಸಲಾಗಿದೆ.

ಕನ್ನಡದ ಪ್ರಕಟಿತ ಪರಿಸರ ಸಾಹಿತ್ಯದ ಬಗ್ಗೆ ಹೇಳುವುದಾದರೆ ಸಾಕಷ್ಟು ಅವಜ್ಞತೆಯು ಕಾಡುತ್ತದೆ. ಅಧ್ಯಯನಕ್ಕೆ ತೊಡಗಿಕೊಂಡಾಗ ಕನ್ನಡ ಮಾಧ್ಯಮದ ವಿದ್ಯಾರ್ಥಿಯೋರ್ವ ಆಂಗ್ಲ ಮಾಧ್ಯಮದ ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಂಡಂತಾಗುವ ಅನುಭವ ಮೂಡುವುದು. ಬಹುತೇಕ ಪರಿಸರಾಧಿತ ಕೃತಿಗಳು ಆಂಗ್ಲಭಾಷೆಯಲ್ಲಿಯೇ ಪ್ರಕಟಗೊಂಡಿದ್ದು, ಪರಿಸರದ ಪ್ರಬುದ್ಧ ಮಟ್ಟದ ಕೃತಿಗಳು ಕನ್ನಡದಲ್ಲಿ ಸಾಕಷ್ಟು ಅಧ್ಯಯನಕ್ಕೆ ಸಿಗಲಾರವು. ಸಿಕ್ಕರೂ ಕೆಲವು ಕೃತಿಗಳು ಪರಿಸರದ ನಿರ್ದಿಷ್ಟ ಪಠ್ಯಪುಸ್ತಕಗಳಂತೆ ಭಾಸವಾಗುತ್ತವೆ. ಅವುಗಳಲ್ಲಿ ಮಾಹಿತಿಯ ವಿಫುಲ ಜ್ಞಾನ ಸಂಗ್ರಹವಿರುತ್ತದೆ. ಆದರೆ ವಾಸ್ತವಿಕ ನೆಲೆಯಲ್ಲಿ ಪರಿಸರವನ್ನು ಕುರಿತು ಬಹುಮುಖ ಆಯಾಮದಲ್ಲಿ ಸಹಜತೆಯಿಂದ ಚರ್ಚಿಸುವ ಸಂಗತಿಗಳು ಕಡಿಮೆಯೇ. ಸಮಸ್ಯೆ, ಸವಾಲುಗಳು ಮತ್ತು ಪರಿಹಾರೋಪಾಯ ಸಂಗತಿಗಳ ಅನಾವರಣ ಕೃತಿಗಳಲ್ಲಿ ಗೌಣ್ಯವಾಗುವ ಸಾಧ್ಯತೆಯೇ ಹೆಚ್ಚು. ಕಳೆದ ೩–೪ ವರ್ಷಗಳಿಂದ 'ಪರಿಸರ ವಿಷಯ' ನೇಪಥ್ಯಕ್ಕೆ ಸರಿದಿದೆ ಎಂದೇ ಹೇಳಬಹುದು. ಆಧುನೀಕರಣದ ಭರಾಟೆಯಲ್ಲಿ ಚಳುವಳಿಗಳು, ಪರಿಸರ ಸಂರಕ್ಷಣೆಯ ಕಾರ್ಯಕ್ರಮಗಳು, ಚರ್ಚೆಗಳು ಇತ್ತೀಚೆಗೆ ಕಣ್ಮರೆಯಾಗುತ್ತಿವೆ. ವಿಶ್ವ ಭೂದಿನವನ್ನು ಸರ್ಕಾರ ಆಚರಿಸದಿದ್ದದ್ದು ಒಂದು ದುರಂತವೆಂಬುದನ್ನು ನಾಗೇಶ ಹೆಗಡೆ ಅವರು ತಮ್ಮ ಭಾಷಣದಲ್ಲಿ ಮಾತಾಡಿರುವುದನ್ನು ಗುರುತಿಸಬಹುದು. ಕನ್ನಡಿಗರಾದ ನಾವು ನೆಡುತೋಪು ವಿರುದ್ಧ-ಮೊಟ್ಟಮೊದಲ ಬಾರಿಗೆ ಶಿವರಾಮ ಕಾರಂತರ ಜೊತೆ ಕೋರ್ಟ್‌ನಲ್ಲಿ ದಾವೆ ಹೂಡಿ ಗೆದ್ದರೂ 'ನೆಡುತೋಪು ದಿನ' ಮಾತ್ರ ನಮಗೆ ಹೊಸದು ಎಂದು ಅವರು ನೆನಪಿಸಿಕೊಳ್ಳುತ್ತಾರೆ.

ಪ್ರಾಕೃತಿಕ ಪರಿಸರ ಕುರಿತು ಖಾಸಗಿ ಮಟ್ಟದಲ್ಲಿ ಜನರು ತೋರುತ್ತಿದ್ದ ಕಾಳಜಿಗಳೂ ಈಗೀಗ ಕಾಣುತ್ತಿಲ್ಲ. ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದಾದರೆ ಅಕ್ಷರ ಪ್ರಕಾಶನದ ರಾಮಚಂದ್ರ ಗುಹಾ ಅವರ 'ಜಾಗತಿಕ ಪರಿಸರ ಚರಿತ್ರೆ', ಶಿವ ವಿಶ್ವನಾಥನ್ ಅವರ 'ಪ್ರತಿಭೆಯ ಒಂದು

ಪ್ರವಾಹ' ಹಾಗೆಯೇ ಪುಸ್ತಕ ಪ್ರಾಧಿಕಾರ ಇತ್ತೀಚೆಗೆ ಹೊರತಂದಿರುವ 'ಪರಿಸರ ನ್ಯಾಯದ ತಕ್ಕಡಿಯಲ್ಲಿ' ಕೃತಿಗಳು ಮುಖ್ಯವಾಗುತ್ತವೆ. ಶಿವ ವಿಶ್ವನಾಥನ್ ಅವರ 'ಪ್ರತಿಭೆಯ ಒಂದು ಪ್ರವಾಹ' ಕೃತಿಯು ೨೧ನೇ ಶತಮಾನದ ಆಲೋಚನೆಗಳಿಗೆ ಮಾರ್ಗದರ್ಶಿಯಾಗುತ್ತದೆ. ಈ ಕೃತಿಯ ಅವಲೋಕನ ನಮ್ಮೆಲ್ಲಾ ಪರಿಸರ ಚಿಂತನೆಗಳ ಪುನರ್ವಿಮರ್ಶೆಗೆ ಒತ್ತಾಯಿಸುತ್ತದೆ ಎಂದೇ ಹೇಳಬಹುದು. ರಾಮಚಂದ್ರ ಗುಹಾ ಅವರ 'ಜಾಗತಿಕ ಪರಿಸರ ಚರಿತ್ರೆ' ಪರಿಸರದ ಚಿಂತನೆಗಳಿಗೆ ಗಟ್ಟಿಯಾದ ನೆಲೆಗಟ್ಟನ್ನು ಒದಗಿಸುತ್ತದೆ. ಭಾರತದ ಪರಿಸರೀಯತೆಯ ದಿಕ್ಕು ದೆಶೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಚಾರಿತ್ರಿಕ ಬೆಳವಣಿಗೆಯನ್ನು ಗ್ರಹಿಸಲು ಸಹಕಾರಿಯಾಗಿದೆ. ಇವುಗಳೊಂದಿಗೆ ಸಮೀಕ್ಷೆಯ ಇತ್ತೀಚಿನ ಕೆಲವು ಸಂಶೋಧನೆಗಳ ಮತ್ತು ಸಾಹಿತ್ಯಗಳ ಅಧ್ಯಯನಗಳು ಈ ಕೆಳಕಂಡಂತಿವೆ.

೨.೧ ಇದುವರೆಗಿನ ಅಧ್ಯಯನಗಳು, ವರದಿಗಳು ಮತ್ತು ಲೇಖನಗಳು

೨.೧.೧ ಕುವೆಂಪು ಮತ್ತು ತೇಜಸ್ವಿ : ಬದುಕು ಬರಹಗಳ ಸಾಮ್ಯ ಹಾಗೂ ವೈವಿಧ್ಯತೆ

ಈ ಸಂಶೋಧನಾ ಮಹಾಪ್ರಬಂಧದ ಕರ್ತೃ ಡಿ. ಪುರುಷೋತ್ತಮ. ಈ ಪ್ರಬಂಧವು ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ೨೦೧೬ರಲ್ಲಿ ಪಿ.ಹೆಚ್.ಡಿ ಪದವಿಗಾಗಿ ಸಾದರ ಪಡಿಸಿದ ಸಂಶೋಧನಾ ಮಹಾಪ್ರಬಂಧವಾಗಿದೆ. ಇದರಲ್ಲಿ ಕುವೆಂಪು ಮತ್ತು ತೇಜಸ್ವಿ ಅವರ ವೈಚಾರಿಕತೆಯ ನಿಲುವುಗಳು, ಸೃಷ್ಟಿಯ ಸ್ಥಿತಿ, ಲಯ, ಕಾಲದ ಮೊದಲ ಗತಿಸೃಷ್ಟಿ, ಪ್ರಕೃತಿಯೊಳಗಿನ ಕಾಲದ ಪರಿಮಿತಿಯಲ್ಲಿ ಮನುಷ್ಯ, ಇತ್ಯಾದಿ ವೈಜ್ಞಾನಿಕ ಮತ್ತು ವೈಚಾರಿಕ ವಿಚಾರಗಳನ್ನು ಚರ್ಚಿಸಲಾಗಿದೆ. ಇಕಾಲಜಿ ಬೇಸ್‌ನಲ್ಲಿ ಪರಿಸರ ಪ್ರಜ್ಞೆಯ ನೆಲೆಗಳ ಚರ್ಚೆಗಳನ್ನು ಸಾಕಷ್ಟು ಕಾಣಲು ಸಾಧ್ಯವಾಗುವುದಿಲ್ಲ. ತೌಲನಿಕ ಅಧ್ಯಯನದ ಗ್ರಹಿಕೆಗೆ ಒಂದು ಮಾದರಿಯಾಗಿ ಪರಿಗಣಿಸಬಹುದು.

೨.೧.೨ ಲಂಕೇಶ್–ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕಾದಂಬರಿಗಳ ತೌಲನಿಕ ಅಧ್ಯಯನ

ಈ ಸಂಶೋಧನಾ ಮಹಾಪ್ರಬಂಧದ ಕರ್ತೃ ಯೋಗೀಶ ಎಸ್.ಬಿ ಈ ಪ್ರಬಂಧವು ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ೨೦೧೬ರಲ್ಲಿ ಪಿ.ಹೆಚ್.ಡಿ ಪದವಿಗಾಗಿ ಸಾದರ ಪಡಿಸಿದ ಸಂಶೋಧನಾ ಮಹಾಪ್ರಬಂಧವಾಗಿದೆ. ಈ ಪ್ರಬಂಧದಲ್ಲಿ ಲಂಕೇಶ್ ಮತ್ತು ಕೆ.ಪಿ. ಪೂರ್ಣ ಚಂದ್ರ ತೇಜಸ್ವಿ ಅವರ ನವ್ಯ ಮತ್ತು ನವ್ಯೊತ್ತರ ಕಾದಂಬರಿಗಳ ಸ್ವರೂಪ ಮತ್ತು ಬೆಳವಣಿಗೆಯನ್ನು ಕುರಿತು ಅಧ್ಯಯನವನ್ನು ನಡೆಸಲಾಗಿದೆ. ತುಲನಾತ್ಮಕ ವಿಚಾರಗಳಲ್ಲಿ ಕೃತಿಗಳ ಅಧ್ಯಯನದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು. ಆದರೆ ಈ ಅಧ್ಯಯನದಲ್ಲಿ ಇಬ್ಬರದೂ ಸೃಜನಾತ್ಮಕ ಕೃತಿಗಳ ರಚನೆಯಾದ ಕಾರಣ ಇದರ ಕೆಲವು ತೌಲನಿಕ ಒಳಹುಗಳನ್ನಷ್ಟೇ ಗ್ರಹಿಸಿಕೊಳ್ಳಬಹುದಾಗಿದೆ.

೨.೧.೩ ಎ.ಓ ಆವಲ ಮೂರ್ತಿ ಅವರ ಸಂಶೋಧನ ಮಹಾಪ್ರಬಂಧ

– 'ಜನಪ್ರಿಯ ವಿಜ್ಞಾನ ಸಾಹಿತ್ಯ'

ಈ ಸಂಶೋಧನಾ ಮಹಾಪ್ರಬಂಧದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯವನ್ನು ಕುರಿತು ಚರ್ಚಿಸಲಾಗಿದೆ. ಇದು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ೨೦೧೨ರಲ್ಲಿ ಸಾದರಪಡಿಸಿರುವ ಮಹಾಪ್ರಬಂಧವಾಗಿದೆ. ಇದರ ಕತೃ ಎ.ಓ.ಆವಲ ಮೂರ್ತಿ. ಈ ಮಹಾಪ್ರಬಂಧದಲ್ಲಿ ವಿಜ್ಞಾನ ಮತ್ತು ಸಾಹಿತ್ಯ ಸಂಕರಗಳ ಸಾಧ್ಯತೆ, ಜನಪ್ರಿಯ ವಿಜ್ಞಾನ ಸಾಹಿತ್ಯದ ಭಿನ್ನನೆಲೆಗಳು, ಸಾಹಿತ್ಯದಲ್ಲಿ ರಸಭಾವ, ವಿಜ್ಞಾನ ಮತ್ತು ಸಾಹಿತ್ಯದ ನಡುವಿನ ಭಿಕ್ಕಟ್ಟು ಮತ್ತು ಜಿಜ್ಞಾಸೆಗಳನ್ನು ಕುರಿತು ಚರ್ಚಿಸಲಾಗಿದೆ. ಎ.ಓ.ಆವಲಮೂರ್ತಿಯವರು ತಮ್ಮ 'ಜನಪ್ರಿಯ ವಿಜ್ಞಾನ ಸಾಹಿತ್ಯ' ಕುರಿತ ಸಂಶೋಧನಾ ಪ್ರಬಂಧದಲ್ಲಿ ವಿಜ್ಞಾನ ಮತ್ತು ಸಾಹಿತ್ಯ ಸಂಕರಗಳ ಸಾಧ್ಯತೆಗಳನ್ನು ಕುರಿತು ಹೀಗೆ ವಿವೇಚಿಸಿದ್ದಾರೆ. "ತೀರಾ ಭಿನ್ನವಾದ ಎರಡು ಜ್ಞಾನ ಶಾಖೆಗಳಾದ ವಿಜ್ಞಾನ ಮತ್ತು ಸಾಹಿತ್ಯಗಳನ್ನು ಬೆರೆಸಿ ವಿಜ್ಞಾನ ಸಾಹಿತ್ಯವೆಂಬ ಹೊಸ ಸಂಕರ ಪ್ರಕಾರವನ್ನು ಸೃಷ್ಟಿಸುವುದು ಸಾಧ್ಯ ಎಂಬುದೇ ಬಹುಜನಕ್ಕೆ ಒಪ್ಪಿಗೆಯಾಗುವುದಿಲ್ಲ. ವಿಜ್ಞಾನ ಎಲ್ಲಿ? ಸಾಹಿತ್ಯ ಎಲ್ಲಿ? ಎರಡಕ್ಕೂ ಏನೇನೂ ಸಂಬಂಧವಿಲ್ಲ ಎಂದು ತಿಳಿದವರೇ ಹೆಚ್ಚು. ಇದಕ್ಕೆ ನಮ್ಮ ಶಿಕ್ಷಣ ಕ್ರಮವೂ ಬಹುಮುಖ್ಯ ಕಾರಣ. ಎರಡನ್ನೂ ಪ್ರತ್ಯೇಕ ಕಂಪಾರ್ಟ್‌ಮೆಂಟ್‌ಗಳನ್ನಾಗಿ ಮಾಡಿ ವಿಜ್ಞಾನಾಧ್ಯಯನಕ್ಕೂ, ಸಾಹಿತ್ಯಾಧ್ಯಯನಕ್ಕೂ ಏನೇನೂ ಸಂಬಂಧವಿಲ್ಲ ಎಂಬ ತಿಳುವಳಿಕೆಯನ್ನು ಅದು ಮೂಡಿಸಿದೆ. ಹೀಗಾಗಿ ವಿಜ್ಞಾನ ಮತ್ತು ಸಾಹಿತ್ಯ ಎಲ್ಲೆಡೆಯೂ ಪ್ರತ್ಯೇಕ ಅಸ್ಥಿತ್ವವನ್ನೇ ಹೊಂದಿರಬೇಕು. ಸಾಹಿತ್ಯದಲ್ಲಿ ವಿಜ್ಞಾನಾಂಶ, ವಿಜ್ಞಾನದಲ್ಲಿ ಸಾಹಿತ್ಯಾಂಶ ಬರಬಹುದೆಂಬ ಮಾತೇ ಅನೇಕರಲ್ಲಿ ಅಪನಂಬಿಕೆಯನ್ನು ಹುಟ್ಟಿಸುತ್ತದೆ. ಇದು ಸಾಹಿತಿ ಹಾಗೂ ವಿಜ್ಞಾನಿಗಳ ಧೋರಣೆಯಲ್ಲೂ ಅಷ್ಟಿಷ್ಟು ಕಾಣಿಸಿಕೊಂಡಿದೆ" ಎಂದು ಅಭಿಪ್ರಾಯಿಸಿದ್ದಾರೆ. ಪ್ರಸ್ತುತ ಸಂಶೋಧನೆಯ ನೆಲೆಯಲ್ಲಿ ವಿವೇಚಿಸುವುದಾದರೆ ಕೃತಿಕಾರರ ಸೃಜನೇತರ ಸಾಹಿತ್ಯದ ಅಧ್ಯಯನಕ್ಕೆ ಪೂರಕವಾಗಿ ಈ ಮಹಾಪ್ರಬಂಧದ ಕೆಲವು ಗ್ರಹಿಸುವುದು ಸಹಕಾರಿಯಾಗಬಲ್ಲದು.

೨.೧.೪ ಪರಿಸರ ಸಂರಕ್ಷಣೆ ಮತ್ತು ಮಹಿಳಾ ಆಂದೋಲನ:

ಪ್ರಜಾವಾಣಿ ದೈನಿಕದಲ್ಲಿ ಜೂನ್ ೪, ೨೦೧೧ರಲ್ಲಿ 'ಭೂಮಿಕಾ' ವಿಶೇಷ ಅಂಕಣದಲ್ಲಿ ಪ್ರಕಟಗೊಂಡ ಅಂಶಗಳು ವಿಚಾರದಲ್ಲಿ ಮಹಿಳಾ ಪರಿಸರ ಪ್ರಜ್ಞೆ ಮತ್ತು ಹೋರಾಟದ ಮನೋಭಾವಗಳು ಹೇಗಿದ್ದವು ಮತ್ತು ಅವು ಹೇಗೆ ಅವರ ಬದುಕಲ್ಲಿ ಸಮ್ಮಿಳಿತಗೊಂಡಿದ್ದವು ಎಂಬುದನ್ನು ತಿಳಿಯಲು ಪೂರಕವಾಗುತ್ತವೆ. ಬಹಳ ಹಿಂದಿನಿಂದಲೂ ಸದ್ದಿಲ್ಲದ್ದೇ, ಪರಿಸರದ ಸಖ್ಯದೊಡನೆ ತನ್ನ ಬದುಕನ್ನು ರೂಪಿಸಿಕೊಂಡವಳು ಮಹಿಳೆ. ಪ್ರಕೃತಿಯ ಒಂದು ಭಾಗವಾಗಿ ತನ್ನ ಸಂಸಾರದ ನಿತ್ಯ ನಿರ್ವಹಣೆಗೆ ಬೇಕಾದ ಆಹಾರ, ನೀರು, ಉರುವಲು, ಉಡುಗೆ, ಔಷಧ ಮುಂತಾದವುಗಳನ್ನು ಪಡೆದಿದ್ದಾಳೆ. ಕುಡಿವ ನೀರಿಗಾಗಿ ತಲೆಯ ಮೇಲೆ ಕೊಡ ಹೊತ್ತು ಸುಡು ಬಿಸಿಲಿನಲ್ಲಿ ನಡೆವಾಗ, ಮರಳನ್ನು ಬಳಸಿ ತನ್ನ ಪಾತ್ರೆಗಳನ್ನು ಶುಚಿಗೊಳಿಸುವಾಗ ಹನಿ ಹನಿ ನೀರಿನ ಬೆಲೆಯನ್ನು ತಿಳಿದಿದ್ದಾಳೆ. ತನ್ನ ಸುತ್ತಲಿನ ಪ್ರಕೃತಿಗೆ ಒದಗುವ ಯಾವುದೇ ಹಾನಿ ತನ್ನ ಬದುಕಿನ ಅವಶ್ಯಕತೆಗಳ ಮೂಲಕ್ಕೆ ಚ್ಯುತಿ ತರಬಹುದು ಎನ್ನುವ ಅರಿವು ಆಕೆಗಿದೆ. ಆದುದರಿಂದ

ಸಂಪನ್ಮೂಲಗಳನ್ನು ಸುಸ್ಥಿರವಾಗಿರಿಸಿಕೊಂಡು, ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಹೇಗೆ ಎನ್ನುವುದು ಮಹಿಳೆಗೆ ಬದುಕಿನ ಅನುಭವದಿಂದ ಬಂದ ಜ್ಞಾನವಾಗಿದೆ.

೭೦ರ ದಶಕದಲ್ಲಿ ಪಾಶ್ಚಿಮಾತ್ಯದಲ್ಲಿ ಮಹಿಳಾ ಪರಿಸರವಾದ(ಇಕೋಫೆಮಿನಿಸಂ)ಅಸ್ಥಿತ್ವಕ್ಕೆ ಬಂದಿರುವುದನ್ನು ಅದರ ಬೆಳವಣಿಗೆಯ ಭಾಗವಾಗಿ ಗುರುತಿಸಬಹುದು. ಈ ಹೆಸರನ್ನು ಕೊಟ್ಟವನು ಫ್ರೆಂಚ್ ಲೇಖಕ ಫ್ರಾಂಕೈಸ್-ಡಿ ಎಬೋನಿ. ೧೯೭೪ರಲ್ಲಿ ಎನಿಸ್ಟ್ರಾಕಿಂಗ್‌ನಿಂದ ಇದು ಪ್ರಚಾರ ಪಡೆಯಿತು. ೧೯೮೦ರಲ್ಲಿ ಅಮೆರಿಕಾದ ಮೆಸ್ಯಾಚುಸೆಟ್ಸ್‌ನ ಆಬರ್ಸ್ಟ್‌ನಲ್ಲಿ ಮೊಟ್ಟ ಮೊದಲ 'ಮಹಿಳಾ ಪರಿಸರವಾದಿಗಳ ಸಮ್ಮೇಳನ' ಜರುಗಿತು. 'ಮಹಿಳೆ ಮತ್ತು ಭೂಮಿಯ ಮೇಲಿನ ಜೀವ' ಎಂಬ ಶೀರ್ಷಿಕೆಯಡಿ ಮಹಿಳೆಯ ಜೀವನ ಮತ್ತು ಪ್ರಕೃತಿಯ ನಡುವಿನ ಸಂಬಂಧವನ್ನು ಈ ಸಂದರ್ಭದಲ್ಲಿ ಚರ್ಚಿಸಲಾಯಿತು. ಎನಿಸ್ಟ್ರಾಕಿಂಗ್ ಪ್ರಕಾರ ಈ ಮಹಿಳಾ ಪರಿಸರವಾದ 'ಪರಿಸರದ ಬಳಕೆ ಮತ್ತು ಸಂರಕ್ಷಣೆ'ಯ ಸಮಗ್ರ ಅರಿವಾಗಿದೆ. ನಂತರದ ದಿನಗಳಲ್ಲಿ ಸೂಸನ್ ಗಿಫನ್, ಮೇರಿ ಡೇಲಿ, ಕೆರೋಲಿನ್ ಮರ್ಚಂಟ್, ಏರಿಯಲ್ ಕೇ, ಕರೀನ್ ವಾರೆನ್, ವ್ಯಾಲ್ ಪ್ಲಮ್‌ವುಡ್ ಮುಂತಾದವರು 'ಮಹಿಳೆ ಮತ್ತು ಪರಿಸರ ಒಂದಕ್ಕೊಂದು ಪೂರಕ' ಎಂದು ಬಿಂಬಿಸಲು ಪ್ರಯತ್ನಿಸಿದರು. ಪ್ರತಿ ವಿಷಯದಂತೆ ಇದಕ್ಕೂ ವಾದ ಪ್ರತಿವಾದಗಳುಂಟು. ಇವೆಲ್ಲವೂ ಅನ್ಯದೇಶಗಳ ವಿಷಯಗಳಾದರೆ, ಭಾರತದಲ್ಲಿ ೧೭ನೇಯ ಶತಮಾನದಲ್ಲಿ ಮಹಿಳಾ ಪರಿಸರವಾದದ ಎಳೆಯನ್ನು ಗುರುತಿಸಬಹುದು. 'ಅಮೃತಾದೇವಿಯ ನೇತೃತ್ವದಲ್ಲಿ ೩೦೦ ಜನ ಭಾರತೀಯರು ತಮ್ಮ ಪವಿತ್ರವನ ರಕ್ಷಣೆಗಾಗಿ ಜೀವ ತೆತ್ತರು. ೧೯೭೪ರ ಮಾರ್ಚ್‌ನಲ್ಲಿ ಉತ್ತರ ಪ್ರದೇಶದ ಚಮೋರಿ ಜಿಲ್ಲೆಯಲ್ಲಿ ನಡೆದ ಚಿಪ್ಕೋ ಚಳುವಳಿಯಲ್ಲಿ ರಾಣಿ ಹಳ್ಳಿಯ ೨೭ ಜನ ಮಹಿಳೆಯರು 'ಗೌರಾ ದೇವಿ'ಯ ನೇತೃತ್ವದಲ್ಲಿ ಕಾಡನ್ನು ಉಳಿಸಿದರು. ಈ ಘಟನೆಗಳ ಹಿನ್ನೆಲೆಯೆಂದರೆ ಈ ಜನ ತಲಾ ತಲಾಂತರದಿಂದಲೂ ತಮ್ಮ ನಿತ್ಯಜೀವನದ ಮೂಲಭೂತ ಅಗತ್ಯಗಳಿಗೆ ಅವಶ್ಯವಾದಷ್ಟೇ ಮರಗಿಡಗಳನ್ನು ಕಡಿದುಕೊಂಡು ಬದುಕುತ್ತಿದ್ದರು. ಇವುಗಳನ್ನು ಕಡಿಯದಂತೆ ಕಾನೂನು ಹೇರಿದ ಸರ್ಕಾರ ಅಲಹಾಬಾದಿನ ಕ್ರೀಡಾ ಸಾಮಗ್ರಿ ತಯಾರಿಕೆಯ ಸಂಸ್ಥೆಯೊಂದಕ್ಕೆ ಇಡೀ ಕಾಡನ್ನು ಹರಾಜಿನಲ್ಲಿ ಹಸ್ತಾಂತರಿಸಿತ್ತು. ಇದರ ವಿರುದ್ಧ ಚಿಪ್ಕೋ ಚಳುವಳಿಯನ್ನು ಪ್ರಾರಂಭಿಸಿದ ಹಳ್ಳಿಯ ಜನ ಅವುಗಳನ್ನು ಕಡಿಯಲು ಬಂದವರಿಗೆ ಪ್ರತಿರೋಧವನ್ನು ಒಡ್ಡಿದರು.

೧೯೭೭ರಲ್ಲಿ ನೂರಾರು ಜನ ಮಹಿಳೆಯರು 'ಚಾಚನಿ ದೇವಿ'ಯ ನೇತೃತ್ವದಲ್ಲಿ ಅದ್ವಾನಿ ಕಾಡನ್ನು ಉಳಿಸಿದರು. ಹಳ್ಳಿಗಳಲ್ಲಿ ಸಂಘಟಿತವಾದ ಮಹಿಳಾ ಮಂಗಳ ದಳ ಸುತ್ತಲಿನ ಕಾಡನ್ನು ಕಾಯುತ್ತಿತ್ತು. ಇದೇ ರೀತಿ ಉತ್ತರ ಕರ್ನಾಟಕದ ಅಪ್ಪಿಕೋ ಚಳುವಳಿಯಲ್ಲೂ ಮಹಿಳೆಯರು ಭಾಗವಹಿಸಿದ್ದರು. 'ನರ್ಮದಾ ರಕ್ಷಿಸಿ' ಆಂದೋಲನದ ಮೇಧಾ ಪಾಟ್ಕರ್ ಹಾಗೂ ಯಾವ ಆಂದೋಲವನ್ನು ನಡೆಸದೇ ಮರಗಳನ್ನು ನೆಟ್ಟು ಮಕ್ಕಳಂತೆ ಅವುಗಳನ್ನು ಸಾಕಿ ಬೆಳೆಸಿದ ಸಾಲುಮರದ ತಿಮ್ಮಕ್ಕ, ಸದಾ ಪರಿಸರದ ವಿಷಯಗಳಿಗೆ ದನಿಯೆತ್ತುವ ವಂದನಾ ಶಿವ, ಪರಿಸರ ಪ್ರೇಮಿ ಗಾಂಧಿವಾದಿ ಕುಸುಮಾ ಸೊರಬಾ ಇವರೆಲ್ಲ ಕೇವಲ ಉದಾಹರಣೆಗಳು ಮಾತ್ರ. ಭಾರತದಲ್ಲಿ ಜಾಗೃತವಾದ ಮಹಿಳಾ ಪರಿಸರ ಹೋರಾಟಗಳು ಭವಿಷ್ಯತ್ತಿನಲ್ಲಿ ಪರಿಸರ ಪ್ರಜ್ಞೆ ಎಚ್ಚರಗೊಳ್ಳುವಿಕೆಗೆ ಆಗಲೇ ನಾಂದಿ ಹಾಡಿದ್ದವು. ಪರಿಸರ ಪ್ರಜ್ಞೆ ಎಂಬುದು ಅಗತ್ಯತೆ

ಮಾತ್ರವಲ್ಲ. ಪ್ರಕೃತಿಯೊಂದಿಗೆ ಬದುಕಿ ಬಾಳುವಲ್ಲಿ ಮತ್ತು ನಾಳಿನ ಪೀಳಿಗೆಗೆ ಬದುಕು ಕಟ್ಟಿಕೊಡಲು ಅನುಸರಿಲೇಬೇಕಾದ ಧರ್ಮದ ಹಾದಿ ಮತ್ತು ಅದೊಂದು ವೈಚಾರಿಕತೆಯ ಮಾರ್ಗ ಎಂಬುದನ್ನು ಮನಗಾಣಬೇಕು[೧]

೨.೧.೫ 'ಭೂಮಿಗೀತೆ' ಮತ್ತು 'ಜೀವ ಪಲ್ಲಟಗಳ ಆತ್ಮಕಥನ' ಕೃತಿಗಳು:

ಇವು ಡಾ. ಟಿ.ಎಸ್. ವಿವೇಕಾನಂದರ ಕೃತಿಗಳಾಗಿವೆ. ಕಳೆದ ಎರಡೂವರೆ ದಶಕಗಳಿಂದ ಪರಿಸರ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು. ಮೂಲತ: ಸಮಾಜಶಾಸ್ತ್ರದ ವಿದ್ಯಾರ್ಥಿಯಾದ ಇವರು ಪತ್ರಿಕೋದ್ಯಮ ವೃತ್ತಿಯಿಂದ ಹೊರಬಂದು ಪರಿಸರ ಕ್ಷೇತ್ರದ ಸಾಮಾಜಿಕ ನಿರ್ಲಕ್ಷಗಳನ್ನು ಜನರ ಮುಂದಿಟ್ಟವರು. ಈ ಪುಸ್ತಕಗಳು ಪರಿಸರದ ಬಗ್ಗೆ ಅರಿವು ಮೂಡಿಸುತ್ತವೆ ಮತ್ತು ಗಿಡ, ಮರ, ಪಕ್ಷಿ, ಪ್ರಾಣಿ, ಕಾಡು, ನದಿ, ಇವುಗಳು ಅಳಿದು ಹೋಗದಂತೆ ಮಾಡುವುದೇ ಪರಿಸರವಾದ ಎನ್ನುತ್ತವೆ. ಒಂದು ಗಿಡ ನೆಟ್ಟಿ, ಹುಲಿ–ಆನೆ ಸಂರಕ್ಷಣೆಗೆ ಕರೆ ನೀಡಿ, ಕೆರೆ–ನದಿ ನೀರನ್ನು ಶುದ್ಧ ಮಾಡಲು ಕೋಟ್ಯಾಂತರ ಖರ್ಚು ಮಾಡುವುದನ್ನು ಪರಿಸರವಾದವಲ್ಲ ಎಂಬುದನ್ನು ಕೃತಿಕಾರರು ವ್ಯಂಗ್ಯವಾಗಿ ಟೀಕಿಸುತ್ತಾರೆ. ಹಾಗಿದ್ದಲ್ಲಿ ಯಾವುದು ಪರಿಸರ ಪ್ರಜ್ಞೆ ಎಂಬ ಪ್ರಶ್ನೆ ಎದುರಾಗುತ್ತದೆ. ನಮ್ಮ ಎಲ್ಲಾ ಹೋರಾಟಗಳಲ್ಲಿ ಮನುಷ್ಯನೇ ಕಾಣೆಯಾಗಿದ್ದಾನೆ ಎಂಬ ಸಂಗತಿ ಅರಿವಿಗೆ ಬರಲಾರಂಭಿಸುತ್ತದೆ. ಮನುಷ್ಯ ಕೂಡ ಪರಿಸರದ ಭಾಗವೇ ಆಗಿದ್ದಾನೆ. ಹುಲಿ ಸಂರಕ್ಷಣೆಯ ಹೆಸರಿನಲ್ಲಿ ಆದಿವಾಸಿಗಳು ಪರಿಸರಕ್ಕೆ ಹಾನಿಕಾರಕ ಎಂದು ಒಕ್ಕಲೆಬ್ಬಿಸಿ ರೆಸಾರ್ಟ್ ನಿರ್ಮಾಣಕ್ಕೆ ಪರವಾನಿಗಿ ನೀಡುವುದು ಮತ್ತು ಹೆಚ್ಚು ಹಣ ತೆತ್ತವರಿಗೆ ಅವಕಾಶ ಕಲ್ಪಿಸುವುದು ಯಾವ ರೀತಿಯಿಂದ ಪರಿಸರಕ್ಕೆ ಪೂರಕ? "ಭಾರತದಲ್ಲಿ ಸಮಾಜವಾದ ಅಥವಾ ಸಮತಾವಾದಗಳು ಬೇಕಾದರೆ ವಾದಗಳಾಗಿ ನಿಲ್ಲಬಹುದೇ ವಿನಹ 'ಪರಿಸರ' ಎಂದೂ ವಾದವಾಗಲು ಸಾಧ್ಯವಿಲ್ಲ. ಯಾವುದು ಆಚರಣೆಗೆ ಬರದಿದ್ದರೂ ಚಿಂತೆ ಇಲ್ಲವೋ ಅದು ವಾದವಾಗುತ್ತದೆ. ಹೀಗಿರುವಾಗ ಪರಿಸರ ವಾದವಾಗಲು ಹೇಗೆ ಸಾಧ್ಯ? ಅದು ಆಚರಣೆಯಾಗಬೇಕಿತ್ತು" ಎಂಬುದು ಲೇಖಕರ ಅಭಿಪ್ರಾಯ. 'ಪರಿಸರವಾದ' ಎಂಬ ಸಾಂಸ್ಕೃತಿಕ ರಾಜಕೀಯದ ಹಿನ್ನೆಲೆಯಲ್ಲಿ ಚಿಂತಿಸುವುದಾದರೆ ಪರಿಸರ ವಿಷಯದ ಚರ್ಚೆಯಾಗಲಿ, ಬರಹಗಳಾಗಲಿ ವ್ಯಕ್ತವಾದಾಗ ಅಲ್ಲಿ ಜಾತಿ ಪ್ರವೇಶ ಪಡೆಯುವುದು ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ. ವರ್ಗಬೇಧದ ಚರ್ಚೆಗಳು ಸಹ ಇರುವುದಿಲ್ಲ. ಆಧುನಿಕ ಪರಿಸರವಾದ ಹೇಗೆ ಪ್ರಬಲ ಅಥವಾ ಮೇಲ್ವರ್ಗದ ಸಮೂಹಗಳ ಮೂಲಕ ಆದಿವಾಸಿಗಳ ಬದುಕುವ ನೆಲೆಯನ್ನು ಕಿತ್ತುಕೊಳ್ಳುತ್ತದೆ ಎಂಬುದನ್ನು ಗ್ರಹಿಸಬಹುದಾಗಿದೆ. ಅಡುಗೆಗೆ ಸೌದೆ, ಪುಳ್ಳೆ ಆರಿಸಿಕೊಳ್ಳುವ ಆದಿವಾಸಿ ಮಹಿಳೆ ಹೇಗೆ ತಾನೆ ಪರಿಸರಕ್ಕೆ ಅಪಾಯಕಾರಿ? ಇವರನ್ಯಾಕೆ ಕಾಡಿನಿಂದ ತೆರವು ಗೊಳಿಸಬೇಕು? ಐಷಾರಾಮಿಯಾದ ಬೆಲೆಬಾಳುವ ಮೇಜು ಕುರ್ಚಿಗಳು ಇವರ ಮನೆಯಲ್ಲಿದೆಯೇ? ಹುಲಿ ಚರ್ಮ ಜಿಂಕೆ ಕೊಂಬುಗಳಿವೆಯೇ? ಈ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ. ಸ್ಥಳೀಯರು ಪರಕೀಯರಾಗಿ, ಪರಕೀಯರು ಸ್ಥಳೀಯರಾಗಿ ಆಳುವಂತಾಗುತ್ತಾರೆ. ಜೀವಪಲ್ಲಟಗಳ ಆತ್ಮಕಥನದಲ್ಲಿ ಪರಿಸರದ ಜೊತೆ ಜೊತೆಗೆ ಕರೆಂಟಿನ ಖಾಸಗೀಕರಣ, ಸಗಣಿ ಮಾರಾಟದ ಹಿಂದಿನ ರಾಜಕೀಯ, ಇತ್ಯಾದಿ ಸಾಂಸ್ಕೃತಿಕ ಪ್ರಶ್ನೆಗಳು ಎದುರಾಗುತ್ತವೆ. ಡಾ. ಟಿ.ಎಸ್. ವಿವೇಕಾನಂದರ ನೀರಿನ ವ್ಯಾಪಾರ

ಕುರಿತ ಅಂಶಗಳು ಇಂದು ಅದರ ವಾಸ್ತವವನ್ನು ಮನವರಿಕೆ ಮಾಡಿಕೊಟ್ಟಿವೆ. ಹಣವಿಲ್ಲದ ಕಾರಣಕ್ಕೆ ನೀರು ದಕ್ಕದ ಸ್ಥಿತಿ ಕಾಡುವುದು ಮೇಲ್ಜಾತಿಯವರಿಗಲ್ಲ ಎಂಬ ವಾಸ್ತವ ಪರಿಸರವಾದನ್ನು ಕೃತಿಗಳು ಅನಾವರಣಗೊಳಿಸುತ್ತವೆ. ಪರಿಸರ ಸಂಬಂಧಿತ ಚಿಂತನೆಗಳಲ್ಲಿ ಮನುಷ್ಯನನ್ನು ಪ್ರತ್ಯೇಕಿಸಿದರೆ ಅದಂತೂ ಶೋಷಿತ ವರ್ಗಕ್ಕೂ ಅಪಾಯಕಾರಿ ಮತ್ತು ಪರಿಸರಕ್ಕೂ ಅಪಾಯಕಾರಿ ಎಂಬ ವಾಸ್ತವ ಪರಿಸರ ಪ್ರಜ್ಞೆಯ ಆಯಾಮದ ಗ್ರಹಿಕೆ ದೃಷ್ಟಿಯಿಂದ ಈ ಕೃತಿಗಳು ಮುಖ್ಯವಾಗುತ್ತವೆ.(೨)

೨.೧.೬ ಪರಿಸರ ಕಥನ:

ಈ ಕೃತಿಯ ಕರ್ತೃ ಡಾ. ಟಿ.ಎಸ್.ವಿವೇಕಾನಂದ. ಹಂಪಿ ವಿಶ್ವವಿದ್ಯಾಲಯದ ಡಿ.ಲಿಟ್ ಪದವಿಯನ್ನು ದೊರಕಿಸಿಕೊಟ್ಟ ಸುದೀರ್ಘ ಅಧ್ಯಯನದ ಪುಸ್ತಕವೇ 'ಪರಿಸರ ಕಥನ.' ಭಾರತೀಯ ಪರಿಸರವಾದದ ಅಬದ್ಧ ಚರಿತೆಯ ಅನಾವರಣ ಎಂಬ ವಾಕ್ಯವನ್ನು ಕೃತಿಯ ರಕ್ಷಾ ಪುಟದಲ್ಲಿ ಕಾಣಬಹುದಾಗಿದೆ. ಪರಿಸರವಾದದ ಸ್ವರೂಪವೇ ಈ ಕೃತಿಯ ಕೇಂದ್ರ ಭೂಮಿಕೆಯಾಗಿದೆ. ಪರಿಸರ ಸಂರಕ್ಷಣಾ ಯೋಜನೆಗಳ ಮೂಲ ಧ್ಯೇಯಗಳು ಸಹ ಈ ಕೇಂದ್ರ ಭೂಮಿಕೆಯನ್ನು ಸಮರ್ಥಿಸುತ್ತವೆ. ಏಕೆಂದರೆ ಸಾಮಾಜಿಕ ಅರಣ್ಯ ಯೋಜನೆಯ ಮೂಲ ಉದ್ದೇಶವೇ ದೈನಂದಿನ ಜೀವನೋಪಾಯಕ್ಕೆ ಪರದಾಡುವ ಗ್ರಾಮೀಣ ಬಡಜನರ ದಿನನಿತ್ಯದ ಅಗತ್ಯವಾದ ಕೂಲಿ, ಉರುವಲು, ಕೃಷಿ ಉಪಕರಣಗಳಿಗೆ ಅಗತ್ಯವಾದ ಮರ, ಸಣ್ಣಪುಟ್ಟ ಗೃಹ ಕುಟೀರ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಜನ ಸಹಭಾಗಿತ್ವದ ಮೂಲಕವೇ ಸೃಷ್ಟಿಸಿ, ಒದಗಿಸುವ ಉದ್ದೇಶಗಳ ಮೂಲ ನೆಲೆಗಳನ್ನು ಕೃತಿಯು ಚರ್ಚಿಸುತ್ತದೆ.

ಈ ಕೃತಿಯು ಪರಿಸರ ಕ್ಷೇತ್ರದ ಸಾಮಾಜಿಕ ನಿರ್ಲಕ್ಷಗಳನ್ನು, ಭಾರತೀಯ ಪರಿಸರವಾದದ ಸೋಗಲಾಡಿತನಗಳನ್ನು ಬಿಚ್ಚಿಡುತ್ತಾ ಪರಿಸರ ಸಂರಕ್ಷಣೆಗೆ ಹೊಸದೊಂದು ಆಯಾಮವನ್ನು ಸೃಷ್ಟಿಸಿದೆ. ಪರಿಸರವನ್ನು ಉಳಿಸಿಕೊಳ್ಳಲು ಮತ್ತು ನಮ್ಮ ಬದುಕನ್ನು ಉಳಿಸಿಕೊಳ್ಳಲು ನಮಗೆ ಮಾದರಿಗಳು ಇಲ್ಲವೇ ಎಂಬುದರ ಬಗ್ಗೆ ಕೃತಿಯು ಧ್ವನಿಸುತ್ತದೆ. 'ಆಧುನಿಕ ಅರಣ್ಯ ಇಲಾಖೆ' ಎನ್ನುವುದು ಜನ ಸಮುದಾಯಗಳನ್ನು ಪರಿಸರ ನೀತಿ ನಿರೂಪಣೆಯಲ್ಲಿ ದೂರವಿಟ್ಟಿದೆ ಎನ್ನುವುದನ್ನು ಕೃತಿಯು ಗಂಭೀರವಾಗಿ ಗುರುತಿಸಿಕೊಳ್ಳುತ್ತದೆ. ಸ್ಥಳೀಯರ ನಿರ್ವಹಣೆಯಲ್ಲಿ ಕಾಡುಗಳು ಇಲಾಖೆಯ 'ವೈಜ್ಞಾನಿಕ ನಿರ್ವಹಣೆಯಲ್ಲಿದ್ದಂತೆಯೇ, ಕೆಲವು ಕಡೆ ಅದಕ್ಕೂ ಉತ್ತಮವಾಗಿದ್ದವು. ಆದರೆ ಇಂತಹ ವನ ಪಂಚಾಯಿತಿಗಳನ್ನು ಗಟ್ಟಿಗೊಳಿಸುವ ಬದಲು ಅವನ್ನು ಶಕ್ತಿಹೀನಗೊಳಿಸಲಾಗುತ್ತದೆ. ಇಂತಹ ನಿಲುವಿನ ವಿರುದ್ಧ ಪ್ರತಿರೋಧವನ್ನು ತಾಳುವ ಮತ್ತು ನಮ್ಮ ಚಿಂತನಾಕ್ರಮಗಳು ಮತ್ತು ಬದುಕು ಜೀವಸಂಕುಲದ ಭಾಗವಾಗುವುದರತ್ತ ನಮ್ಮನ್ನು ಎಚ್ಚರಿಸುವ ಕೆಲಸವನ್ನು ಪರಿಸರ ಕಥನ ಕೃತಿಯು ಮಾಡುತ್ತಿದೆ.(೩)

೨.೧.೭ ವಿಜ್ಞಾನ ಪ್ರಪಂಚ-ಶಿವರಾಮ ಕಾರಂತರು

ನಾಲ್ಕು ಬೃಹತ್ ಸಂಪುಟಗಳನ್ನು ಬರೆದಿರುವ ಕೆ. ಶಿವರಾಮ ಕಾರಂತರು ವಸ್ತು ಚೈತನ್ಯವನ್ನು ಕುರಿತ ಮೂರನೇ ಸಂಪುಟಕ್ಕೆ ಬರೆದಿರುವ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ. "ವಸ್ತು ಚೈತನ್ಯಗಳಿಂದ ಈ ಭೌತ ಜಗತ್ತಿನ ಶಕ್ತಿಗಳ ನಿಕಟವಾದ ಪರಿಚಯವಾಗುವುದಕ್ಕೆ

ಅವುಗಳ ಸ್ಥೂಲ ತಿಳುವಳಿಕೆಯಾದರೂ ಓದುಗರಿಗೆ ಇರಬೇಕು. ಆ ಪರಿಚಯವೆಂದರೆ ಭೌತ, ರಾಸಾಯನ ಶಾಸ್ತ್ರಗಳ ವಿವಿಧ ಮುಖಗಳ ಪರಿಚಯವೆನಿಸುತ್ತದೆ. ಅದನ್ನೇ ಆದಷ್ಟು ಸರಳ ರೀತಿಯಲ್ಲಿ ತಿಳಿಸಲು ಹೋದರೂ, ರಸಾತ್ಮಕವಾಗಿ ಆಕರ್ಷಕವಾಗಿ ತಿಳಿಸುವ ಕೆಲಸವೂ ತುಂಬಾ ಕಷ್ಟದ್ದು" ಎಂದಿದ್ದಾರೆ.

೨.೧.೮ ಭಾರತೀಯ ಪರಿಸರ ಚಳುವಳಿ ಮತ್ತು ಪರಿಸರೀಯತೆ:

ಈ ಭಾಗದ ಪ್ರಮುಖಾಂಶಗಳು ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ಭಾರತದ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಹಾಗೂ ಇತಿಹಾಸ ವಿದ್ವಾಂಸರಾದ ರಾಮಚಂದ್ರ ಗುಹಾ ಅವರ ಲೇಖನಗಳನ್ನು ಆಧರಿಸಿವೆ–ಮಾರ್ಚ್೨೭, ೨೦೧೩, 'ದಿ ಪಾಸ್ಟ್ ಅಂಡ್ ಪ್ರಸೆಂಟ್ ಆಫ್ ಇಂಡಿಯನ್ ಎನ್‌ವಿರಾನ್‌ಮೆಂಟಲಿಸಮ್' [೪] ಈ ಲೇಖನದಲ್ಲಿ ೧೯೭೦ರ ದಶಕದಲ್ಲಿ ಹಿಮಾಲಯದಲ್ಲಿನ ಅಲಕಾನಂದ ಕಣಿವೆಯಲ್ಲಿನ ರೈತರ ಒಂದು ಗುಂಪು ಕಾಡಿನ ಮರಗಳ ತೇಪೆ ಬೀಳದಂತೆ ಲಾಗರ್ಸ್ ಗುಂಪನ್ನು ನಿಲ್ಲಿಸಿದ್ದರು. ಸಾರ್ವಜನಿಕವಾಗಿ ಕಾಡುಗಳನ್ನು ನಾಶಪಡಿಸುವುದನ್ನು ಅವರು ಯಶಸ್ವಿಯಾಗಿ ತಡೆಗಟ್ಟುತ್ತಿದ್ದರು. ಈ ಪ್ರತಿಭಟನೆಯು ಚಿಪ್ಕೋ ಆಂದೋಲನ ಮತ್ತು ಭಾರತೀಯ ಪರಿಸರ ಚಳುವಳಿ ವಿಸ್ತಾರವಾಗಿ ರೂಪುಗೊಳ್ಳಲು ಕಾರಣವಾಯಿತು ಎನ್ನುತ್ತಾರೆ ರಾಮಚಂದ್ರ ಗುಹಾ. ನಂತರ ದಾರ್ಶನಿಕ ಚಂಡಿಪ್ರಸಾದ್ ಭಟ್ ಅವರ ನೇತೃತ್ವದಲ್ಲಿ ಅವರು ಪ್ರತಿಭಟನೆಯಿಂದ ಪರಿಸರದ ಪುನರ್ ನಿರ್ಮಾಣಕ್ಕೆ ಮರಳಿದರು. ಬಂಜರು ಬೆಟ್ಟಗಳ ಮರುಸ್ಥಾಪನೆ ಮತ್ತು ಜೈವಿಕ ಅನಿಲ ಸ್ಥಾವರಗಳು ಮತ್ತು ಮೈಕ್ರೋಹೈಡಲ್ ಯೋಜನೆಗಳಂತಹ ನವೀಕರಿಸಬಹುದಾದ ಮೂಲಶಕ್ತಿಯನ್ನು ಆಂದೋಲನದಲ್ಲಿ ಉತ್ತೇಜಿಸಿದರು ಎಂಬ ವಿವರವನ್ನು ಕಾಣಬಹುದಾಗಿದೆ.

ಪರಿಸರ ಚಳುವಳಿ ಭಾರತದಲ್ಲಿ ಗ್ರಾಮೀಣ ಸಮುದಾಯಗಳ ಪ್ರತಿಭಟನೆಯ ಮೂಲಕ ಪ್ರಾರಂಭವಾಯಿತು ಎಂಬುದು ಸ್ಮರಣೀಯ. ಅರಣ್ಯ ತಪ್ಪಲು ಮತ್ತು ಅರಣ್ಯವನ್ನೇ ಆಶ್ರಯಿಸಿಕೊಂಡಿರುವ ಸ್ಥಳೀಯ ಸಮುದಾಯವನ್ನು ಒಕ್ಕಲೆಬ್ಬಿಸುತ್ತಿರುವ ಇಂದಿನ ಅಭಿವೃದ್ಧಿಯ ಚಿಂತನೆಗಳಲ್ಲಿ ಈ ಮೇಲಿನ ಹೇಳಿಕೆ ಮಹತ್ವ ಪಡೆಯುತ್ತದೆ. ಚಿಪ್ಕೋ ನಂತರ ಚೋಟಾನಾಗ್ಪುರ್ ಪ್ರಸ್ಥಭೂಮಿಯಲ್ಲಿರುವ ಬುಡಕಟ್ಟು ಜನರು ಅರಣ್ಯದಲ್ಲಿ ಸ್ಥಳೀಯ ಹಕ್ಕು ರಕ್ಷಿಸಲು ತಮ್ಮ ಸ್ವಂತ ಹೋರಾಟವನ್ನು ಪ್ರಾರಂಭಿಸಿದರು. ಕೇರಳದ ಕರಾವಳಿಯಲ್ಲಿ ಮೀನುಗಾರರು ದೊಡ್ಡ ಮೀನುಗಾರಿಕೆಯನ್ನು ಮತ್ತು ತಮ್ಮ ಮೀನಿನ ಸಾಕ್ಷ್ಯಗಳ ನಾಶದ ವಿರುದ್ಧ (ಕಲುಷಿತ ನೀರು ನದಿಗೆ ಸೇರುತ್ತಿರುವ ಮೂಲಕ) ಪ್ರತಿಭಟಿಸಿದರು. ಒರಿಸ್ಸಾದಲ್ಲಿ ಗಣಿಗಾರಿಕೆಯಿಂದ ಸ್ಥಳೀಯ ಬುಡಕಟ್ಟು ಜೀವನಶೈಲಿಗೆ ಹಾನಿಯಾಗುತ್ತಿರುವ ಬಗ್ಗೆ ಪ್ರತಿಭಟನೆ ಆರಂಭವಾಯಿತು ಎನ್ನಲಾಗಿದೆ.

ಭಾರತದಲ್ಲಿ ಪರಿಸರವಾದವು ಮಾನವ ಬದುಕುಳಿಯುವ ಅನಿವಾರ್ಯತೆಯ ಮೂಲಕ ಪ್ರೇರೇಪಿಸಲ್ಪಟ್ಟಿತು ಎನ್ನುತ್ತಾರೆ. ಅರಣ್ಯಗಳು, ಮೀನು, ನೀರು ಮತ್ತು ಹುಲ್ಲುಗಾವಲುನಂತಹ ಸಂಪನ್ಮೂಲಗಳ ಮೇಲೆ ಅಸಮಾನ ಸ್ಪರ್ಧೆ ನಡೆದಿದೆ. ಒಂದು ಕಡೆ ಜೀವಿತಾವಧಿಯನ್ನು ಅವಲಂಬಿಸಿರುವ ಸ್ಥಳೀಯ ಸಮುದಾಯಗಳು ಜೀವನಾಧಾರಕ್ಕಾಗಿ ನಗದು ಮತ್ತೊಂದರ

ಮೇಲೆ ಅವಲಂಬಿತಗೊಂಡವು. ಕೈಗಾರಿಕಾ ಹಿತಾಸಕ್ತಿಗಳು ಲಾಭಕ್ಕಾಗಿ ಅವುಗಳನ್ನು ವಶಪಡಿಸಿಕೊಂಡವು. ಈ ಮಧ್ಯೆ ರಾಜಕೀಯ ನೀತಿಗಳು ಎರಡನೆಯದನ್ನು ಬೆಂಬಲಿಸುವ ಪ್ರವೃತ್ತಿಯನ್ನು ಹೊಂದಿದ್ದವು ಎಂಬ ಅಂಶಗಳನ್ನು ದಾಖಲಿಸಲಾಗಿದೆ.

೧೯೭೦ರ ದಶಕದಲ್ಲಿ ಕೇಳಲು ಮತ್ತು ಪ್ರಶ್ನಿಸಲು ಹೆಣಗಾಡಿದರೆ ೧೯೮೦ರ ದಶಕದಲ್ಲಿ ಭಾರತೀಯ ಗ್ರೀನ್ಸ್ ಬೃಹತ್ ಮಾಧ್ಯಮದ ಗಮನವನ್ನು ಪಡೆದುಕೊಂಡಿತು. ಪತ್ರಕರ್ತರು ಮತ್ತು ವಿದ್ವಾಂಸರು ಭಾರತಾದ್ಯಂತ ಸಂಚರಿಸಿ ಸಾಮಾಜಿಕ ಜೀವನದಲ್ಲಿ ಆಗುತ್ತಿದ್ದ ಪರಿಸರದ ಅವನತಿಯ ಪರಿಣಾಮವನ್ನು ಹೆಚ್ಚು ವ್ಯವಸ್ಥಿತವಾಗಿ ಅಧ್ಯಯನ ಮಾಡಿದರು. ಪರಿಸರದ ವಿಷಯಗಳ ಬಗ್ಗೆ ಪತ್ರಕರ್ತರ ವರದಿಯ ನಿಜವಾದ ಪ್ರವಾಹ ಉಂಟಾಗಿದ್ದಲ್ಲದೆ ಅನೇಕ ಭಾಷೆಗಳಲ್ಲಿ ಹಸಿರು ಪ್ರತಿಭಟನೆ ಕುರಿತ ಬರವಣಿಗೆಗಳು ಕಾಣಿಸಿಕೊಂಡವು. ಇಂಗ್ಲೀಷಿನಲ್ಲಿ ಬರೆದವರಲ್ಲಿ ಅನಿಲ್ ಅಗರ್‌ವಾಲ್, ಡ್ಯಾರಿಲ್ ಡಿ ಮಾಂಟೆ, ಕಲ್ಪನಾ ಶರ್ಮ ಮತ್ತು ಉಷಾರಾಯ್ ಅವರ ಹೆಸರನ್ನು ಹಾಗೂ ಹಿಂದಿ ಭಾಷೆಯಲ್ಲಿ ರಾಜ್‌ಕುಮಾರ್ ಕೇಸ್ವಾನಿ ಮತ್ತು ಶೇಖರ್ ಪಾಠಕ್ ಮತ್ತು ಕನ್ನಡದಲ್ಲಿ ನಾಗೇಶ ಹೆಗಡೆ ಅವರು ಅತ್ಯುತ್ತಮ ಕೆಲಸವನ್ನು ಮಾಡಿದರು ಎಂಬುದನ್ನು ಈ ಲೇಖನದಲ್ಲಿ ಗುಹಾ ನೆನಪಿಸುತ್ತಾರೆ. ಪರಿಸರ ಸಮಸ್ಯೆಗಳ ಬಗ್ಗೆ ನಾಗರಿಕರಿಗೆ ಹೆಚ್ಚಿನ ಅರಿವು ಮೂಡಿಸುವಲ್ಲಿ ಈ ಕೆಲಸಗಳು ನಿರ್ಣಾಯಕ ಪಾತ್ರ ವಹಿಸಿವೆ ಎಂಬುದನ್ನು ಉಲ್ಲೇಖಿಸಿದ್ದಾರೆ. ಮಾಧ್ಯಮಗಳು ಪರಿಸರ ಸಂಬಂಧಿತ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದ್ದರಿಂದ ೧೯೮೦ರಲ್ಲಿ ಭಾರತದಲ್ಲಿ ಪರಿಸರ ಇಲಾಖೆಯನ್ನು ಸ್ಥಾಪಿಸಲಾಯಿತು. ರಾಜ್ಯ ಸರ್ಕಾರಗಳು ತಮ್ಮದೇ ಆದ ಪರಿಸರ ಸಚಿವಾಲಯವನ್ನು ಸ್ಥಾಪಿಸಿಕೊಂಡವು.

ಈ ಮೇಲಿನ ಪ್ಯಾರಾಗಳಲ್ಲಿ ಗಮನಿಸಿದಂತೆ ಮೊದಲಿಗೆ ಗ್ರಾಮ ಸಮುದಾಯದವರು ಮತ್ತು ರೈತರು ಪ್ರತಿಭಟಿಸಿದರು. ನಂತರ ಪತ್ರಕರ್ತರು ಈ ಪ್ರತಿಭಟನೆಗಳ ಬಗ್ಗೆ ಸಹಾನುಭೂತಿಯಿಂದ ವರದಿ ಮಾಡಿದರು. ಪ್ರಸ್ತುತ ನಾವೀಗ ಮೂರನೇ ಹಂತದಲ್ಲಿದ್ದೇವೆ. ಅದನ್ನು 'ವೃತ್ತಿಪರತೆ' ಎಂದು ಕರೆಯಬಹುದು. ವಿಜ್ಞಾನಿಗಳು ಮತ್ತು ಸಾಮಾಜಿಕ ವಿಜ್ಞಾನಿಗಳು ಪರಿಸರ ಸಂಘರ್ಷ ಬೇರುಗಳನ್ನು ವ್ಯವಸ್ಥಿತವಾಗಿ ವಿಶ್ಲೇಷಿಸಲು ಪ್ರಾರಂಭಿಸಿದರು. ಕೆಲವರು ತಾಂತ್ರಿಕ ಅಥವಾ ಸಾಂಸ್ಥಿಕ ಪರಿಹಾರಗಳನ್ನು ಕೋರಿ ಮುಂದೆ ಹೋದರು. ಬೆಂಗಳೂರಿನ ಪ್ರಮುಖ ಸಂಸ್ಥೆಯಾದ ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್ ಸೆಂಟರ್ ಫಾರ್ ಇಕಾಲಾಜಿಕಲ್ ಸೈನ್ಸ್ ಅನ್ನು ಪ್ರಾರಂಭಿಸಿತು. ಈ ಶೈಕ್ಷಣಿಕ ಆಸಕ್ತಿಯು ಸಾಮಾಜಿಕ ವಿಜ್ಞಾನಗಳಲ್ಲಿ ಸ್ಪಷ್ಟವಾಗಿತ್ತು.

೧೯೯೫ ರಲ್ಲಿ ಪರಿಸರ ವಿರೋಧಿ ಹಿಂಬಡಿತ ಆರಂಭವಾಯಿತು ಎಂಬುದನ್ನು ಗುಹಾ ಅವರು ಗುರುತಿಸಿದ್ದಾರೆ. ಕಾರಣ ಈ ಸಂದರ್ಭದಲ್ಲಿ ಭಾರತೀಯ ಆರ್ಥಿಕತೆ ಹೊರಹೊಮ್ಮಿಸಲು ಪ್ರಾರಂಭಿಸಿದಂತೆ ಹೊಸ ಯೋಜನೆಗಳ ಉಲ್ಬಣದ ತೇಲಾಟ ಕಾಣತೊಡಗಿತು. ಭಾರತದ ಪ್ರಗತಿಯ ಹಿನ್ನಡೆಗೆ ಗ್ರೀನ್ಸ್ ಅಡಚಣೆಯಾಗಿದೆ ಎಂಬ ಮನೋಧರ್ಮ ಆರ್ಥಿಕ ನೀತಿನಿರೂಪಕರಲ್ಲಿ ಮೂಡಿದಲ್ಲದೆ ಇವರನ್ನು ನಕರಾತ್ಮಕವಾಗಿ ನೋಡಲಾರಂಭಿಸಿದರು. ಕೇವಲ ಗ್ರೀನ್ಸ್ ಮಾತ್ರ ಯಾವುದೇ ಪ್ರಶ್ನೆಗಳನ್ನು ಕೇಳಲು ಸಿದ್ಧವಾಗಿತ್ತು. ಖಾಸಗಿ ಉದ್ಯಮವನ್ನು ನಿಗ್ರಹಿಸುವುದಲ್ಲದೆ ಹೊಸ ಯೋಜನೆಗಳಿಗೆ ಭೂಮಿ ಎಲ್ಲಿಂದ ಬರುತ್ತವೆ ಎಂಬ ಮೂಲಭೂತ ಪ್ರಶ್ನೆಯನ್ನು ಇದು ಕೇಳಿತ್ತು. ಉದಾಹರಣೆಗೆ ವಾಯು ಮತ್ತು

ನೀರಿನ ಸ್ಥಿತಿಯ ಮೇಲಿನ ಯೋಜನೆಗಳು ಯಾವ ರೀತಿಯ ಪರಿಣಾಮವನ್ನು ಬೀರುತ್ತವೆ ಎಂಬುದರ ಬಗ್ಗೆ ಗ್ರೀನ್ಸ್ ಎಚ್ಚರವಾಗಿತ್ತು.

ಕಳೆದ ಎರಡು ದಶಕಗಳ ಆರ್ಥಿಕ ಬೆಳವಣಿಗೆಯಲ್ಲಿ ನಗರೀಕರಣದ ಮಾದರಿಗಳನ್ನು ಗಮನಿಸಿದರೆ ನಗರಗಳು ಒಳನಾಡಿನಿಂದ ನೀರು, ಶಕ್ತಿ ಮತ್ತು ಇತರ ಸಂಪನ್ಮೂಲಗಳನ್ನು ಹೊರತೆಗೆಯುತ್ತವೆ ಮತ್ತು ವಿನಿಮಯದಲ್ಲಿ ಮಾಲಿನ್ಯವನ್ನು ಮಾತ್ರ ನೀಡುತ್ತವೆ. ನಗರದಲ್ಲಿ ಬಡವರು ಸುರಕ್ಷಿತ ವಸತಿಗೆ ಕಡಿಮೆ ಪ್ರದೇಶವನ್ನು ಹೊಂದಿದ್ದಾರೆ. ಈ ಪ್ರಕ್ರಿಯೆಗಳು ಲಕ್ಷಾಂತರ ಭಾರತೀಯರ ಮೇಲೆ ಪ್ರಭಾವ ಬೀರಿದರೂ ನಗರ ಪರಿಸರ ಯೋಜನೆ ಅದರ ಆಂತರಿಕ ಮತ್ತು ಬಾಹ್ಯ ಆಯಾಮಗಳೆರಡರಲ್ಲೂ ಮಾಧ್ಯಮಗಳಲ್ಲಾಗಲಿ, ರಾಜಕೀಯ ವಲಯಗಳಲ್ಲಾಗಲಿ ಗಂಭೀರವಾಗಿ ನಿರ್ಲಕ್ಷಿಸಲ್ಪಟ್ಟಿದೆ ಎಂಬ ಸತ್ಯವನ್ನು ಗುಹಾ ವ್ಯಕ್ತಪಡಿಸುತ್ತಾರೆ.

ಚಿಪ್ಕೋ ಬಗ್ಗೆ ನೆನಪಿಟ್ಟುಕೊಳ್ಳುವ ಮೊದಲ ವಿಷಯವೆಂದರೆ ಅದು ಅನನ್ಯವಾದುದಲ್ಲ. ಅದು ೧೯೭೦ ಮತ್ತು ೧೯೮೦ ರ ದಶಕಗಳಲ್ಲಿ ವ್ಯಾಪಕವಾದ ನೈಸರ್ಗಿಕ ಸಂಪನ್ಮೂಲ ಸಂಘರ್ಷಗಳ ಪ್ರತಿನಿಧಿಯಾಗಿತ್ತು. ಕಾಡುಗಳು, ಮೀನುಗಳು ಮತ್ತು ಹುಲ್ಲುಗಾವಲು ಮೇಲಿನ ಘರ್ಷಣೆಗಳು, ಬೃಹತ್ ಅಣೆಕಟ್ಟು ಬಗ್ಗೆ ಸಂಘರ್ಷಗಳು, ಅನಿಯಂತ್ರಿತ ಗಣಿಗಾರಿಕೆಯ ಸಾಮಾಜಿಕ ಮತ್ತು ಪರಿಸರದ ಪರಿಣಾಮಗಳ ಬಗೆಗಿನ ಸಂಘರ್ಷಗಳನ್ನು ಅದು ಪ್ರತಿನಿಧಿಸಿತ್ತು. ಈ ಎಲ್ಲಾ ಸಂದರ್ಭಗಳಲ್ಲಿ ನಗರಾಭಿವೃದ್ಧಿ ಮತ್ತು ಕೈಗಾರಿಕಾ ಅಭಿವೃದ್ಧಿಯ ಒತ್ತಡಗಳು ಸ್ಥಳೀಯರ ಜೀವನೋಪಾಯಕ್ಕೆ ಅಗತ್ಯವಾದ ಸಂಪನ್ಮೂಲಗಳ ಪ್ರದೇಶವನ್ನು ಕಸಿದುಕೊಂಡವು. ಕೃಷಿಕರು ತಮ್ಮ ಕಾಡುಗಳು ವಾಣಿಜ್ಯ ಶೋಷಣೆಗೆ ತಿರುಗಿದ್ದನ್ನು ಕಂಡರು. ಗ್ರಾಮೀಣವಾದಿಗಳು (ಪ್ಯಾಸ್ಟೋರಿಯಲಿಸ್ಟ್) ತಮ್ಮ ಮೇಯಿಸುವಿಕೆ ಮೈದಾನಗಳು ಕೈಗಾರಿಕೆ ಮತ್ತು ಎಂಜಿನಿಯರಿಂಗ್ ಕಾಲೇಜು ಸ್ಥಾಪನೆ ಪಾಲಾಗುತ್ತಿದ್ದುದ್ದನ್ನು ಕಂಡರು. ಕುಶಲಕರ್ಮಿ ಮೀನುಗಾರರು ದೊಡ್ಡ ಟ್ರಾವೆಲ್ ಬಳಸಿ ಮೀನನ್ನೆಲ್ಲಾ ಬಾಚುತ್ತಿದ್ದುದ್ದನ್ನು ಕಂಡರು.

ಸಾಮಾಜಿಕ ನ್ಯಾಯ ಮತ್ತು ಸಮರ್ಥನೀಯತೆ:

ಪಾಶ್ಚಿಮಾತ್ಯದಲ್ಲಿ ಮುಖ್ಯವಾಗಿ ಅಳಿವಿನಂಚಿನಲ್ಲಿರುವ ಪ್ರಾಣಿ ಜಾತಿಗಳು ಮತ್ತು ನೈಸರ್ಗಿಕ ಆವಾಸ ಸ್ಥಾನಗಳನ್ನು ರಕ್ಷಿಸಲು ಪರಿಸರ ಚಳುವಳಿ ಉದ್ಭವಿಸಿತು. ಆದರೆ ಭಾರತದಲ್ಲಿ ಹೇಗಾದರೂ ಮಾನವ ಬದುಕುಳಿಯುವ ಅನಿವಾರ್ಯತೆಯಿಂದ ಇದು ಹುಟ್ಟಿಕೊಂಡಿತು. ಇದನ್ನು ಬಡವರ ಪರಿಸರೀಯತೆ ಎಂದು ಬಿಂಬಿಸಲಾಗುತ್ತದೆ. ಇದು ಸಾಮಾಜಿಕ ನ್ಯಾಯದ ಬಗೆಗಿನ ಕಾಳಜಿಯೊಂದನ್ನು ಮತ್ತು ಮತ್ತೊಂದರಲ್ಲಿ ಸಮರ್ಥನೀಯತೆಯನ್ನು ವಿವಾಹವಾಯಿತು ಎನ್ನುತ್ತಾರೆ ಗುಹಾ ಅವರು. ಸಂಪನ್ಮೂಲಗಳ ಪ್ರಸ್ತುತ ಮಾದರಿಗಳು ಸ್ಥಳೀಯ ಸಮುದಾಯಗಳಿಗೆ ಅನನುಕೂಲವಾಗಿದ್ದು ಅವು ನೈಸರ್ಗಿಕ ಪರಿಸರವನ್ನು ಧ್ವಂಸಮಾಡಿವೆ ಎಂಬುದನ್ನು ಇದು ವಾದಿಸಿತು.

ಗ್ರಹಿಕೆಯ ಬದಲಾವಣೆ: (ಚೇಂಜ್ ಆಫ್ ಪರ್ಸೆಪ್ಷನ್)

೧೯೯೧ರಲ್ಲಿ ಭಾರತೀಯ ಆರ್ಥಿಕತೆಯ ಉದಾರೀಕರಣ ಆರಂಭವಾಯಿತು. ಪರವಾನಗಿ– ಅನುಮತಿ– ಕೋಟಾ–ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ನಿಗ್ರಹಿಸಿದ್ದಕ್ಕಾಗಿ ರಾಜ್ಯದ ನಿಯಂತ್ರಣಗಳನ್ನು ಕಿತ್ತುಹಾಕುವ ಭಾಗವು ಹೆಚ್ಚು ಸ್ವಾಗತಾರ್ಹವಾಯಿತು. ದುರಾದೃಷ್ಟವಾಶಾತ್ ಉದಾರೀಕರಣದ ಮತದಾರರು ಪರಿಸರ ಸಮಾಜವಾದಿಗಳ ಮೇಲೆ ಘೋರ ಆಕ್ರಮಣ ಮಾಡಿದರು. ಅವರ ಪ್ರಭಾವದ ಅಡಿಯಲ್ಲಿ ಮಾಧ್ಯಮಗಳು ಪರಿಸರೀಯತೆಯ ವಿಷಯಗಳಲ್ಲಿ ಸೂಕ್ಷ್ಮ ಗ್ರಾಹಿಯಾಗಿದ್ದವು. ನರ್ಮದಾ ಚಳುವಳಿಯ ಮೇಧಾ ಪಾಟ್ಕರ್‌ರಂತವರನ್ನು ದುಷ್ಟರಂತೆ ನೋಡಲಾರಂಭಿಸಿತು ಎಂಬಿತ್ಯಾದಿ ಅಂಶಗಳು ದಾಖಲಾಗಿದ್ದು ಪರಿಸರೀಯತೆ ಕುರಿತು ಹಂತಹಂತವಾಗಿ ಬದಲಾದ ಗ್ರಹಿಕೆಯ ಅಂಶಗಳನ್ನು ಲೇಖನದಲ್ಲಿ ಕಾಣಬಹುದಾಗಿದೆ.

ಕ್ರಮೇಣ ಉದಾರೀಕರಣದ ಮನೋಭಾವದಿಂದಾಗಿ ಪರಿಸರವಾದಿಗಳನ್ನು ದಾಳಿಗೊಳಿಸಲಾಯಿತು. ಅವರು ಹೊಸ ಕಾರ್ಖಾನೆ, ಹೆದ್ದಾರಿ, ಗಣಿಗಾರಿಕೆಯ ಯೋಜನೆ ಪ್ರಸ್ತಾಪಿಸಿದಾಗ ಭೂಮಿ ಎಲ್ಲಿಂದ ಬರುತ್ತವೆ ಎಂಬ ಸಂಕೀರ್ಣ ಪ್ರಶ್ನೆಗಳನ್ನು ಕೇಳಿದ್ದರು. ಗಾಳಿಯ ಗುಣಮಟ್ಟ, ಅರಣ್ಯಗಳು ಮತ್ತು ಜನರ ಜೀವನೋಪಾಯದ ಪರಿಣಾಮಗಳು ಏನು ಎಂದು ಪ್ರಶ್ನಿಸಿದರು. ಉದಾರೀಕರಣವು ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂಬುದನ್ನು ಅವರು ಅರಿತಿದ್ದರು.

೨.೧.೯ ಮಾಧವ ಗಾಡ್ಗೀಳ್ ವರದಿಯ ಪ್ರಮುಖಾಂಗಳು:

ಪರಿಸರ ವಿಜ್ಞಾನಿ ಮಾಧವ ಗಾಡ್ಗೀಳ್‌ರು ಕಾರಂತರಿಂದ ಸ್ಫೂರ್ತಿ ಪಡೆದಿದ್ದರು ಎನ್ನುತ್ತಾರೆ ಗುಹಾ ಅವರು. ಇವರು ತಮ್ಮ ಸಂಶೋಧನೆಯನ್ನು ಜನಸೇವೆಯತ್ತ ತಿರುಗಿಸಿಕೊಂಡಿದ್ದರು. ಘಟ್ಟದ ಎರಡೂ ಕಡೆ ಕೆಲಸ ಮಾಡಿದ ಅವರು ಜೀವನೋಪಾಯ ಭದ್ರತೆ ಮತ್ತು ಪರಿಸರ ಸುಸ್ಥಿರತೆಯ ಅನಿವಾರ್ಯ ಸಮರಸಕ್ಕಾಗಿ ದುಡಿಯುತ್ತಿದ್ದರು. ಪಶ್ಚಿಮ ಘಟ್ಟಗಳ ಸಮಸ್ಯೆಯನ್ನು ಅರ್ಥಮಾಡಿಕೊಂಡಿದ್ದ ಕೇಂದ್ರ ಸರ್ಕಾರದ ಅಂದಿನ ಪರಿಸರ ಮತ್ತು ಅರಣ್ಯ ಸಚಿವರಾಗಿದ್ದ ಜೈರಾಮ್ ರಮೇಶ್‌ರವರು ಪಶ್ಚಿಮ ಘಟ್ಟಗಳ ಸಮಗ್ರ ಸಂರಕ್ಷಣೆ ಮತ್ತು ಮಾರ್ಗೋಪಾಯಗಳನ್ನು ಸಲಹೆಗಳನ್ನು ನೀಡುವುದಕ್ಕಾಗಿ ಖ್ಯಾತ ಪರಿಸರ ತಜ್ಞರಾದ ಪ್ರೋ. ಮಾಧವ ಗಾಡ್ಗೀಳ್‌ರ ಅಧ್ಯಕ್ಷತೆಯಲ್ಲಿ 'ಪಶ್ಚಿಮ ಘಟ್ಟ ಜೀವಿ ಪರಿಸ್ಥಿತಿ ಪರಿಣಿತರ ತಂಡ' ವೊಂದನ್ನು ನೇಮಿಸಿ ಶೀಘ್ರವಾಗಿ ವರದಿ ನೀಡಲು ಕೋರಿದ್ದರು. ಅವರ ಕೋರಿಕೆಯ ಮೇರೆಗೆ ೧೮ ತಿಂಗಳು ಶ್ರಮಹಾಕಿ ಪರಿಣಿತ ತಂಡ ದಿನಾಂಕ: ೩೦–೦೮–೨೦೧೧ ರಂದು ಸರ್ಕಾರಕ್ಕೆ ವರದಿ ಸಲ್ಲಿಸಿತು. [೫] ಈ ಅವಧಿಯಲ್ಲಿ ಜೈರಾಮ್ ರಮೇಶ್ ಅವರ ಸ್ಥಾನದಲ್ಲಿ ಜಯಂತಿ ನಟರಾಜನ್ ಅವರು ಮಂತ್ರಿಯಾಗಿ ಬಂದಿದ್ದರು. ಪರಿಸರವಾದಿಗಳು, ಮಾಹಿತಿ ಹಕ್ಕು ಕಾರ್ಯಕರ್ತರ ಹೋರಾಟದ ಫಲವಾಗಿ ವರದಿಯು ಸಾರ್ವಜನಿಕರಿಗೆ ಲಭ್ಯವಾಯಿತು. ಈ ವರದಿ ಬಹಿರಂಗಗೊಂಡ ಮೇಲೆ ಪಶ್ಚಿಮಘಟ್ಟ ಸಂರಕ್ಷಣೆ ಮತ್ತು ಅಭಿವೃದ್ಧಿಯ ವಿಚಾರವಾಗಿ ಸಾರ್ವಜನಿಕ ವಿವಾದ ಆರಂಭಗೊಂಡಿದೆ. ಪಶ್ಚಿಮ ಘಟ್ಟಗಳಿರುವ ರಾಜ್ಯಗಳು, ಎಲ್ಲಾ

ರಾಜಕೀಯ ಪಕ್ಷಗಳು ಈ ಪರಿಣಿತರ ವರದಿಯ ಶಿಫಾರಸ್ಸುಗಳ ಬಗ್ಗೆ ತೀವ್ರ ವಿರೋಧ ಮತ್ತು ಆಕ್ಷೇಪಣೆಗಳನ್ನು ಎತ್ತಿದ್ದವು.

ಪಶ್ಚಿಮ ಘಟ್ಟ ಇಡೀ ಏಷ್ಯಾದಲ್ಲೇ ಅತ್ಯಂತ ಪ್ರಶಸ್ತ ಜೀವವೈವಿಧ್ಯ ತಾಣ. ಇದಕ್ಕೆ ಸಹ್ಯಾದ್ರಿ ಪರ್ವತ ಎಂದು ಹೆಸರಿದೆ. ಮಹಾರಾಷ್ಟ್ರ, ಗುಜರಾತ್ ಗಡಿಪ್ರದೇಶದಲ್ಲಿ ತಪತಿ ನದಿಯಿಂದ ಆರಂಭವಾಗಿ ದಕ್ಷಿಣದಲ್ಲಿ ಕನ್ಯಾಕುಮಾರಿವರೆಗೂ ಇದು ಹಬ್ಬಿದೆ. ಒಟ್ಟು ೧೬೦೦ ಕಿಲೋಮೀಟರ್ ಉದ್ದದ ರಾಜ್ಯಗಳಲ್ಲಿ ಹಬ್ಬಿದೆ. ಒಟ್ಟು ಶ್ರೇಣಿಯ ಅರ್ಧಕ್ಕಿಂತ ಹೆಚ್ಚು ಭಾಗ ಕರ್ನಾಟಕದಲ್ಲೇ ಸುಮಾರು ೬೦ ಸಾವಿರ ಚದರ ಕಿಲೋಮೀಟರ್ ವ್ಯಾಪಿಸಿದೆ. ಇಡೀ ಜಗತ್ತಿನ ೩೫ ಜೀವ ವೈವಿಧ್ಯತಾ ಸೂಕ್ಷ್ಮ ತಾಣಗಳಲ್ಲಿ (ಬಯೋ ಹಾಟ್‌ಸ್ಪಾಟ್ಸ್) ಪಶ್ಚಿಮ ಘಟ್ಟವೂ ಒಂದು ಪ್ರಮುಖ ತಾಣವಾಗಿದೆ. ಮಹಾ ವೈವಿಧ್ಯತೆಯ ಅತ್ಯಂತ ೮ ಸೂಕ್ಷ್ಮ ತಾಣಗಳ ಪೈಕಿ ಪಶ್ಚಿಮ ಘಟ್ಟವು ಒಂದು ತಾಣವಾಗಿದೆ. ೪೦೦೦ ಪ್ರಬೇಧದ ಹೂಬಿಡುವ ಸಸ್ಯಗಳು, ೬೪೫ ನಿತ್ಯಹರಿದ್ವರ್ಣ ಜಾತಿಯ ಮರಗಳು, ೩೫೦ ರೀತಿಯ ಇರುವೆಗಳು, ೩೩೦ ರೀತಿಯ ಚಿಟ್ಟೆಗಳು, ೧೭೪ ಜಾತಿಯ ಕೀಟಗಳು, ೨೮೮ ಪ್ರಬೇಧದ ಮೀನುಗಳು, ೨೨೦ ಉಭಯವಾಸಿ ಪ್ರಬೇಧಗಳು, ೨೨೫ ಸರಿಸೃಪ ಪ್ರಬೇಧಗಳು, ೧೨೦ ಸಸ್ತನಿ ಪ್ರಬೇಧಗಳು, ೫೦೦ಕ್ಕೂ ಅಧಿಕವಾದ ಪಕ್ಷಿ ಪ್ರಬೇಧಗಳು ಇಲ್ಲಿ ಆಶ್ರಯ ಪಡೆದಿವೆ. ಈ ಪ್ರಬೇಧಗಳಲ್ಲಿ ಅನೇಕವು ಈ ಪ್ರದೇಶದಲ್ಲಿ ಮಾತ್ರ ದೊರಕುವ ಮತ್ತು ಬೇರೆಲ್ಲೂ ಕಾಣಸಿಗದಿರುವ ಸ್ಥಳ ವಿಶಿಷ್ಟ ಅಂತ:ಸೀಮಿತ ಪ್ರಬೇಧಗಳೆಂಬುದು ಅತ್ಯಂತ ಮಹತ್ವಪೂರ್ಣ ಸಂಗತಿಯಾಗಿದೆ. ಈಗಲೂ ಈ ಪ್ರದೇಶದಲ್ಲಿ ಹೊಸ ಹೊಸ ಜೀವ ವೈವಿಧ್ಯತೆಯ ಪ್ರಬೇಧಗಳು ಪತ್ತೆ ಆಗುತ್ತಲೇ ಇವೆ ಎಂಬುದನ್ನು ಅವಲೋಕಿಸಬಹುದಾಗಿದೆ.

ಪಶ್ಚಿಮ ಘಟ್ಟಗಳು ಪ್ರಸ್ತುತ ಬಹಳಷ್ಟು ಒತ್ತಡಗಳಿಂದ ನಲುಗುತ್ತಿರುವುದನ್ನು ವರದಿಯಲ್ಲಿ ಗುರುತಿಸಲಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆ, ಅದಕ್ಕನುಗುಣವಾದ ಅಗತ್ಯಗಳು ಮತ್ತು ಅತಿಯಾಸೆ, ಆಧುನಿಕ ಅಗತ್ಯಗಳು ಸೃಷ್ಟಿಸಿರುವ ಬೇಡಿಕೆಗಳ ಪೂರೈಕೆಗಳು ಪಶ್ಚಿಮ ಘಟ್ಟಗಳ ವನರಾಶಿಯನ್ನು, ಖನಿಜವನ್ನು, ಜೀವ ವೈವಿಧ್ಯತೆಯನ್ನು ತರಿದು ಚೆಂಡಾಡುತ್ತಿದೆ. ಆಧುನಿಕ ದೇವಾಲಯಗಳೆಂದು ಪರಿಗಣಿತವಾದ ಅಣೆಕಟ್ಟುಗಳಿಗೆ, ಜಲವಿದ್ಯುತ್ ಯೋಜನೆಗಳಿಗೆ, ಅನೇಕ ರೀತಿಯ ಗಣಿಗಾರಿಕೆಗೆ, ರಸ್ತೆ ರೈಲು ಮುಂತಾದ ಮೂಲ ಸೌಕರ್ಯಗಳಿಗೆ, ವಿದ್ಯುತ್ ಸಾಗಾಣಿಕೆಯ ಲೈನುಗಳಿಗೆ, ಕೃಷಿಗೆ, ಪ್ರವಾಸೋದ್ಯಮಕ್ಕೆ ಇನ್ನೂ ಮುಂತಾದ ಚಟುವಟಿಕೆಗಳಿಗೆ ವಿಶಾಲವಾದ ಪಶ್ಚಿಮ ಘಟ್ಟ ಪ್ರದೇಶಗಳ ಪರಿಸರವನ್ನು ಅನಾಮತ್ತಾಗಿ ಹಾಳುಗೆಡವಲಾಗುತ್ತಿದೆ. ಈ ವಿನಾಶಕಾರಿ ಚಟುವಟಿಕೆಗಳ ಮೂಲಕ ವನ್ಯಜೀವಿಗಳನ್ನು, ಬುಡಕಟ್ಟು ಮತ್ತು ಗಿರಿಜನರನ್ನು ಅವರ ಮೂಲ ನೆಲೆಗಳಿಂದ ಒಕ್ಕಲೆಬ್ಬಿಸಿ, ನಿರಾಶ್ರಿತರನ್ನಾಗಿಸಿ ಅವುಗಳ ಸಂತತಿ ಕ್ರಮೇಣವಾಗಿ ಕರಗುತ್ತಾ ಸಾಗಿ ಶಾಶ್ವತವಾಗಿ ಕಣ್ಮರೆಯಾಗುವ ಅಪಾಯಕ್ಕೀಡಾಗುವಂತೆ, ವಿನಾಶವಾಗುವಂತೆ ಮಾಡಲಾಗುತ್ತಿದೆ ಎಂಬ ಗಂಭೀರ ಸಂಗತಿಯನ್ನು ವರದಿಗಳಲ್ಲಿ ಕಾಣಬಹುದು.

ಪಶ್ಚಿಮ ಘಟ್ಟಗಳನ್ನು ಸಂರಕ್ಷಿಸುವ ಹಲವಾರು ಪ್ರಯತ್ನಗಳು ನಡೆಯುತ್ತಿದ್ದರೂ ದಿನೇ ದಿನೇ ವಿಕೃತ ಅಭಿವೃದ್ಧಿಯ ಅವ್ಯಾಹತ ದಾಳಿಗೆ ಅದು ಬಲಿಯಾಗುತ್ತಾ ಸಾಗಿದೆ. ಅಭಿವೃದ್ಧಿ ಕಾರ್ಯಗಳು ಮತ್ತು ವಿವೇಚನಾರಹಿತ ಸಂರಕ್ಷಣೆಯ ಪ್ರಯತ್ನಗಳು ಇಂದು ಪಶ್ಚಿಮ ಘಟ್ಟಗಳ

ಅಸ್ಥಿತ್ವಕ್ಕೆ ಕಂಟಕವಾಗಿ ಪರಿಣಮಿಸಿವೆ. "ಮೌನ ಕಣಿವೆ ಉಳಿಸಿ ಆಂದೋಲನ" ಮತ್ತು "ಪಶ್ಚಿಮ ಘಟ್ಟ ಉಳಿಸಿ" ಎಂಬ ಅಭಿಯಾನ ಆರಂಭಗೊಂಡಿದ್ದು, ಸಂರಕ್ಷಣೆಯ ಚಳುವಳಿಗಳು ಮತ್ತು ಅನೇಕ ಚದುರಿದ ವೈವಿಧ್ಯಮಯ ಸಂರಕ್ಷಣಾ ಪ್ರಯತ್ನಗಳು ಮತ್ತು ಹೋರಾಟಗಳ ನಡುವೆಯೂ ಬೃಹತ್ ಪ್ರಮಾಣದ ವಿನಾಶಕಾರಿ ಚಟುವಟಿಕೆಗಳ ದಾಳಿ ವ್ಯಾಪಕವಾಗಿ ನಿರಂತರವಾಗಿ ಮುಂದುವರೆದಿದೆ ಎಂಬುದನ್ನು ದಾಖಲಿಸಲಾಗಿದೆ.

ವರದಿಯ ಶಿಫಾರಸ್ಸುಗಳು:

ಇಡೀ ಪಶ್ಚಿಮ ಘಟ್ಟ ಪ್ರದೇಶವನ್ನು 'ಜೀವಿ ಪರಿಸರಾತ್ಮಕ ಸೂಕ್ಷ್ಮ ಪ್ರದೇಶ'ವೆಂದು ಪರಿಗಣಿಸಬೇಕೆಂದು ಹೇಳಲಾಗಿದೆ. ಮುಂದುವರೆದು ಈ ವರದಿ ಪಶ್ಚಿಮಘಟ್ಟಗಳ ವಿವಿಧ ಪ್ರದೇಶಗಳ ಜೀವಿ ಪರಿಸರಾತ್ಮಕ ಸೂಕ್ಷ್ಮತೆಯನ್ನಾಧರಿಸಿ ಇಡೀ ಪ್ರದೇಶವನ್ನು ೩ ಜೀವಿ ಪರಿಸರಾತ್ಮಕ ಸೂಕ್ಷ್ಮ ವಲಯಗಳನ್ನಾಗಿ ಗುರುತಿಸಿದೆ. ಹಾಲಿ ಇರುವ ಸಂರಕ್ಷಿತ ಪ್ರದೇಶದ ಇ-೧ ವಿಸ್ತೀರ್ಣ ಶೇ. ೬೦ ಕ್ಕಿಂತ ಹೆಚ್ಚಾಗದಂತೆ ನೋಡಿಕೊಳ್ಳಲಾಗಿದೆ. ಇದರ ಜೊತೆಗೆ ಇ-೨ ಪ್ರದೇಶದ ವಿಸ್ತೀರ್ಣ ಸೇರಿಸಿಕೊಂಡರೆ ಒಟ್ಟು ಪಶ್ಚಿಮ ಘಟ್ಟದ ವಿಸ್ತೀರ್ಣ ೭೫ರಷ್ಟಾಗುತ್ತದೆ.

ಆದರೆ ವಲಯಗಳನ್ನು ಅಂತಿಮವಾಗಿ ನಿರ್ಧರಿಸುವ ಪರಮಾಧಿಕಾರವನ್ನು ಮುಂದೆ ರಚಿತವಾಗಲಿರುವ 'ಪಶ್ಚಿಮ ಘಟ್ಟ ಜೀವಿ ಪರಿಸರಾತ್ಮಕ ಪ್ರಾಧಿಕಾರ'ದ ಮಾರ್ಗದರ್ಶನದಲ್ಲಿ ಸ್ಥಳೀಯ ಸಂಸ್ಥೆಗಳು ಅಂತಿಮವಾಗಿ ನಿರ್ಧರಿಸಬೇಕೆಂದು ಹೇಳುತ್ತದೆ. ವಲಯವಾರು ವಿಂಗಡಣೆ ಮತ್ತು ಮರುಗುರುತಿಸುವಿಕೆಯನ್ನು ಅಧಿಕಾರಿಗಳಿಗೆ ಬಿಡಬಾರದು ಹಾಗೂ ಅದನ್ನು ಸ್ಥಳೀಯ ಜನ ನಿರ್ಧಾರ ಮಾಡಬೇಕೆಂದು ಹೇಳುವ ಮೂಲಕ ಅಭಿವೃದ್ಧಿ ಮತ್ತು ಸಂರಕ್ಷಣೆಯ ವಿಚಾರಗಳನ್ನು ಅತ್ಯಂತ ವಿಕೇಂದ್ರೀಕೃತ ಜನ ಸಹಭಾಗಿತ್ವದಲ್ಲಿ ನಿರ್ಧಾರಮಾಡಬೇಕೆಂದು ವರದಿ ತಿಳಿಸಿದೆ.

ವರದಿಯಲ್ಲಿ ಗುರುತಿಸಿದ ನಿಯಂತ್ರಣಗಳು:

ವಲಯ ೨ ಮತ್ತು ವಲಯ ೩ ರಲ್ಲಿ ಅನೇಕ ನಿಯಂತ್ರಣಗಳನ್ನು ಮತ್ತು ಸಡಿಲ ಅವಕಾಶಗಳನ್ನು ವರದಿ ಕಲ್ಪಿಸಿದೆ. ಕೆಲವು ನಿರ್ದಿಷ್ಟ ಪ್ರದೇಶಗಳನ್ನು 'ಹೋಗಬಹುದಾದ' ಪ್ರದೇಶಗಳೆಂದು ಮತ್ತೆ ಕೆಲವನ್ನು 'ಹೋಗಬಾರದಾದ' ಪ್ರದೇಶಗಳೆಂದು ಗುರುತಿಸುವುದು. ಈ ವಿಂಗಡಣೆಯ ಪ್ರಮುಖವಾದ ಉದ್ದೇಶವೆಂದರೆ, ನೀರು ಹರಿವ ದಾರಿ, ಜಲಾಗಾರಗಳು, ವಿಶೇಷ ಆವಾಸಗಳು, ಭೌಗೋಳಿಕ ನಿರ್ಮಾಣಗಳು, ಜೀವ ವೈವಿಧ್ಯತೆಯ ಶ್ರೀಮಂತ ಪ್ರದೇಶಗಳು, ಪವಿತ್ರ ವನಗಳು ಇತ್ಯಾದಿಗಳು ಹೋಗಬಾರದ ಪ್ರದೇಶಗಳಾಗಿವೆ. ಈ ಪ್ರದೇಶಗಳಲ್ಲಿ ಮಾನವ ಚಟುವಟಿಕೆಗಳ ಮಧ್ಯ ಪ್ರವೇಶ ಇರಲೇಬಾರದು. ಅನಿವಾರ್ಯವಾದರೆ ಕನಿಷ್ಠ ಪ್ರಮಾಣದಲ್ಲಿರಬೇಕು. ಮತ್ತೆ ಇನ್ನುಳಿದ ಪ್ರದೇಶಗಳಲ್ಲಿ ನಿಯಂತ್ರಿತ ಮಾನವ ಚಟುವಟಿಕೆಗಳಿಗೆ ಮತ್ತು ಸೀಮಿತ ಮಧ್ಯ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.

ಪ್ರೋತ್ಸಾಹಕ ಸಲಹೆಗಳು:

ಸಾವಯವ ಕೃಷಿ, ದೇಶಿಯ ದನಕರುಗಳ ಸಾಕಾಣೆ, ಗೋಮಾಳ ಹುಲ್ಲುಗಾವಲುಗಳ ಮರುಸ್ಥಾಪನೆ, ಜಲಾನಯನ ಅಭಿವೃದ್ಧಿ ಕಾರ್ಯಗಳ ಕೈಗೊಳ್ಳುವಿಕೆ, ಅತಿ ಎತ್ತರದ ಕಣಿವೆ ಮತ್ತು ಜೌಗು ಪ್ರದೇಶಗಳನ್ನು, ಜಲಾಗಾರಗಳನ್ನು ರಕ್ಷಿಸುವುದು, ಸಾವಯವ ಗೊಬ್ಬರ-ಗ್ಲೋಬಲ್ ಅನಿಲ ತಯಾರಿಕಾ ಚಟುವಟಿಕೆಗಳಿಗೆ ಪ್ರೋತ್ಸಾಹ, ಸಂರಕ್ಷಣಾ ಸೇವಾ ಶುಲ್ಕ ನೀಡುವ ಮೂಲಕ ಸಾಂಪ್ರಾದಾಯಿಕ ಬೆಳೆಗಳ ಬೀಜಗಳ ಸಂರಕ್ಷಣೆಗೆ ಕ್ರಮ, ಸ್ಥಳೀಯ ಮೀನಿನ ಪ್ರಬೇಧಗಳನ್ನು ಕೆರೆ-ಕೊಳಗಳಲ್ಲಿ ನದಿಗಳಲ್ಲಿ ಸಾಕಲು ಪ್ರೋತ್ಸಾಹ ನೀಡಬೇಕೆಂದು ವರದಿ ಶಿಫಾರಸ್ಸು ಮಾಡುತ್ತದೆ. ಅರಣ್ಯ ಹಕ್ಕು ಕಾಯಿದೆಯನ್ನು ಅದರ ಮೂಲ ಆಶಯದಂತೆ ಜಾರಿಗೊಳಿಸಬೇಕು. ಅರಣ್ಯ ಸಂಪನ್ಮೂಲಗಳ ಮೇಲೆ ಜನಗಳಿಗಿರುವ ಸಾಮೂದಾಯಿಕ ಹಕ್ಕು ಮತ್ತು ಅರಣ್ಯವಾಸಿಗಳ ಹಕ್ಕುಗಳು ಅವರಿಗೆ ನ್ಯಾಯಯುತವಾಗಿ ದೊರಕುವಂತಾಗಬೇಕು. ಜಂಟಿ ಅರಣ್ಯ ನಿರ್ವಹಣಾ ಕಾರ್ಯಕ್ರಮಗಳು ಪೂರ್ಣವಾಗಿ ಅರಣ್ಯವಾಸಿಗಳಿಗೆ ಹಸ್ತಾಂತರಿಸಲ್ಪಡಬೇಕು ಎಂಬುದಾಗಿ ವರದಿ ಅಭಿಪ್ರಾಯಿಸಿದೆ.

೨.೧.೧೦ ಕಸ್ತೂರಿ ರಂಗನ್ ವರದಿ:

ಡಾ. ಕಸ್ತೂರಿ ರಂಗನ್ ಅವರು ಭಾರತೀಯ ಬಾಹ್ಯಾಕಾಶ ವಿಜ್ಞಾನಿ. ೧೯೯೪ ರಿಂದ ೨೦೦೩ ರವರೆಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ನೇತೃತ್ವ ವಹಿಸಿದ್ದರು. ಕಸ್ತೂರಿ ರಂಗನ್ ಸಮಿತಿಯ ಅಧ್ಯಕ್ಷರು ಹೌದು. ಗಾಡ್ಗೀಳ್ ಸಮಿತಿ ವರದಿಯ ಕುಂದು ಕೊರತೆಗಳನ್ನು ನೀಗಿಸಲು ಕಸ್ತೂರಿ ರಂಗನ್ ವರದಿಯನ್ನು ನೇಮಿಸಲಾಯಿತು. ೨೦೧೩ ರ ಏಪ್ರಿಲ್ ೧೫ ರಂದು ಸಮಿತಿ ವರದಿಯನ್ನು ಸಲ್ಲಿಸಿತು. ಪಶ್ಚಿಮ ಘಟ್ಟ ಕುರಿತ ರಂಗನ್ ವರದಿಯನ್ನು ಸರ್ಕಾರ ಸ್ವೀಕರಿಸಿದೆ.(೬)

ಈ ವರದಿಯ ಪ್ರಕಾರ ಪಶ್ಚಿಮ ಘಟ್ಟ ವ್ಯಾಪ್ತಿಯು ೫೯,೯೪೦ ಸಾವಿರ ಚದರ ಕಿಲೋಮೀಟರ್ ಆಗಿದ್ದು, ಇದರಲ್ಲಿ ಶೇ ೩೬.೪೯ ರಷ್ಟು ಇಕೋ ಸೆನ್ಸಿಟಿವ್ ಏರಿಯಾ ಆಗಿದ್ದು, ನಿರ್ಬಂಧಿತವಾಗಿರುತ್ತದೆ. ಈ ಪ್ರದೇಶದಲ್ಲಿ ಗಣಿಗಾರಿಕೆ, ಕ್ವಾರಿ, ಮರಳುಗಾರಿಕೆ, ಪರಿಸರ ವಿರೋಧಿ ಚಟುವಟಿಕೆ, ಜಲವಿದ್ಯುತ್, ಪವನ ವಿದ್ಯುತ್ ಯೋಜನೆಗಳನ್ನು ನಿಷೇಧಿಸಲಾಗಿದೆ. ಎಲ್ಲಾ ರೀತಿಯ ಗಣಿಗಾರಿಕೆ ಮುಂದಿನ ೫ ವರ್ಷ ಮುಗಿಯುತ್ತಿದ್ದಂತೆ ಸ್ಥಗಿತಗೊಳಿಸಬೇಕು. ೨೦,೦೦೦ ಚ.ಮೀ ದೊಡ್ಡದಾದ ಯಾವುದೇ ಕಟ್ಟಡವನ್ನು ನಿರ್ಮಿಸುವಂತಿಲ್ಲ. ಇ ಎಸ್ಎ ಯಿಂದ ೧೦ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಕಾಮಗಾರಿಗೆ ಪರಿಸರ ಇಲಾಖೆ, ಸ್ಥಳೀಯ ಗ್ರಾಮಸಭೆ ಅನುಮತಿ ಪಡೆಯಬೇಕು. ಈ ಪ್ರದೇಶದಲ್ಲಿ ಸಿಮೆಂಟು, ಕಲ್ಲು ರಾಸಾಯನಿಕ ಬಳಸಲು, ಜನವಸತಿ ನಿರ್ಮಿಸಲು ಅವಕಾಶವಿಲ್ಲ. ಕರ್ನಾಟಕ ರಾಜ್ಯದ ೧೫೫೩ಕ್ಕೂ ಹೆಚ್ಚು ಹಳ್ಳಿಗಳ ೨೦.೬೬೮ ಚ.ಕಿ.ಮೀ ಪ್ರದೇಶ ಪರಿಸರದ ಸೂಕ್ಷ್ಮ ಪ್ರದೇಶವಾಗಿದೆ.

ವರದಿಯ ಪರಿಣಾಮಗಳು:

ಡಾ.ಕಸ್ತೂರಿರಂಗನ್ ವರದಿಯನ್ನು ಅನುಷ್ಠಾನ ಮಾಡಿದರೆ ಪಶ್ಚಿಮ ಘಟ್ಟ ಮತ್ತು ಮಲೆನಾಡು ಪ್ರದೇಶವನ್ನು ಅತೀ ಸೂಕ್ಷ್ಮ ಪರಿಸರ ವಲಯವೆಂದು ಘೋಷಣೆ ಮಾಡಲಾಗುತ್ತದೆ. ಒಂದು ಬಾರಿ ಸೂಕ್ಷ್ಮ ವಲಯವೆಂದು ಘೋಷಣೆ ಮಾಡಿದರೆ ಇಲ್ಲಿ ಯಾವುದೇ ರೀತಿಯ ಚಟುವಟಿಕೆಯನ್ನು ನಡೆಸುವಂತಿಲ್ಲ. ರಾಜ್ಯ ಸರ್ಕಾರ ಸಂಪೂರ್ಣವಾಗಿ ತನ್ನು ಹತೋಟಿಯನ್ನು ಕಳೆದುಕೊಂಡು ಕೇಂದ್ರ ಸರ್ಕಾರದ ಸುಪರ್ದಿಗೆ ನೀಡಬೇಕಾಗುತ್ತದೆ. ಪಶ್ಚಿಮ ಘಟ್ಟದಲ್ಲಿರುವ ಅಪರೂಪದ ಪ್ರಾಣಿಪಕ್ಷಿಗಳು, ಗಿಡಮೂಲಿಕೆಗಳು, ವನ್ಯಜೀವಿಗಳು ಇರುವುದರಿಂದ ಇವುಗಳ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತದೆ. ಅಲ್ಲದೆ ದಶಕಗಳಿಂದಲೂ ಅರಣ್ಯ ಪ್ರದೇಶದಲ್ಲಿರುವ ಆದಿವಾಸಿಗಳನ್ನು ಒಕ್ಕಲೆಬ್ಬಿಸಬೇಕಾಗುತ್ತದೆ. ಅಲ್ಲದೆ ವಿದ್ಯುತ್, ನೀರಾವರಿ, ಕೈಗಾರಿಕೆ ಸೇರಿದಂತೆ ಯಾವುದೇ ರೀತಿಯ ಹೊಸ ಯೋಜನೆಗಳನ್ನು ಜಾರಿ ಮಾಡಬೇಕಾದರೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಬೇಕಾಗಿದೆ.

ವರದಿಗೆ ವಿರೋಧ ಮತ್ತು ಪರವಾದ ಅಂಶಗಳು:

ಹಿಂದೆ ಕುದುರೆಮುಖ ರಾಷ್ಟ್ರೀಯ ಉದ್ಯಾನದ ಹೆಸರಿನಲ್ಲಿ ಸರ್ಕಾರ ಅಲೆಮಾರಿಗಳು, ಗಿರಿಜನರನ್ನು ಒಕ್ಕಲೆಬ್ಬಿಸಿತ್ತು. ಮಲೆನಾಡ ರೈತರು ಒಕ್ಕಲೆಬಿಸುವ ಭೀತಿಯಲ್ಲಿದ್ದರು. ಈ ಬಗ್ಗೆ ಸಾರ್ವತ್ರಿಕ ವಲಯದಲ್ಲಿ ಅಸಮಾಧಾನವಿದೆ. ಪಶ್ಚಿಮ ಘಟ್ಟ ಉಳಿಸಬೇಕು ಎನ್ನುವಲ್ಲಿ ಮಲೆನಾಡ ರೈತರ ಸಹಮತವಿದೆ. ಆದರೆ ಈ ಉದ್ದೇಶ ಈಡೇರಿಕೆಗೆ ಮಲೆನಾಡಿನ ಜನರ ಮೇಲೆ ನಿರ್ಬಂಧ ಹೇರುವುದು ಸರಿಯಲ್ಲ ಎಂಬ ಅಭಿಪ್ರಾಯ ಸಾರ್ವತ್ರಿಕ ವಲಯದ್ದು. ಈ ವರದಿ ರೂಪಿಸಿರುವುದರಲ್ಲೇ ದೋಷವಿದೆ. ಇದು ಜನ ಸಮುದಾಯದ ಬೇಡಿಕೆಯಲ್ಲ. ವರದಿ ಸಿದ್ಧಪಡಿಸುವಾಗ ಜನರ ಅಭಿಪ್ರಾಯಕ್ಕೆ ಮನ್ನಣೆ ನೀಡಿಲ್ಲ ಎಂಬ ಬೇಸರವು ಕೆಲವು ವಿಚಾರವಾದಿಗಳದ್ದಾಗಿದೆ. ಪ್ರಸ್ತುತ ಜಾರಿಯಲ್ಲಿರುವ ವಿವಿಧ ಕಾನೂನುಗಳಿಂದಲೇ ಪಶ್ಚಿಮ ಘಟ್ಟವನ್ನು ಸಂರಕ್ಷಿಸಬಹುದು ಹಾಗೂ ಅದನ್ನು ಉಳಿಸಬೇಕು ಎಂದು ಕೂಗೆಬ್ಬಿಸಿ ಹೋರಾಡಿದವರೇ ಮಲೆನಾಡಿಗರು. ಇಂದಿಗೂ ಅರಣ್ಯ ಉಳಿದಿರುವುದು ಆದಿವಾಸಿಗಳಿಂದಲೇ ಹೊರತು ಅಧಿಕಾರಿಗಳು ಸರ್ಕಾರಗಳಿಂದಲ್ಲ ಎಂದು ಪತ್ರಕರ್ತರಾದ ರಾಮಸ್ವಾಮಿ ಹುಲ್ಕೋಡು ಅಭಿಪ್ರಾಯಪಡುತ್ತಾರೆ. ಪ್ರಾಣಿ ಪಕ್ಷಿಗಳಂತೆ ಮನುಷ್ಯನಿಗೂ ಜೀವನ ನಡೆಸಲು ಅವಕಾಶವಿರಬೇಕು. ಕಸ್ತೂರಿ ರಂಗನ್ ವರದಿ ಜಾರಿಗೆ ಬಂದರೆ ಕಾಡಿನಲ್ಲೇ ವಾಸಿಸುವ ಮಲೆನಾಡಿಗರ ಬದುಕನ್ನೇ ಕಸಿದುಕೊಂಡಂತಾಗುತ್ತದೆ ಎಂಬುದು ರಾಜಕೀಯ ಕ್ಷೇತ್ರ ಪ್ರತಿನಿಧಿಗಳ ಅಭಿಪ್ರಾಯವಾಗಿದೆ.

ಪಶ್ಚಿಮ ಘಟ್ಟಗಳ ಪರಿಸರ ರಕ್ಷಣೆ ಕುರಿತ ಎರಡೂ ವರದಿಗಳು ಸರ್ಕಾರದ ಮುಂದಿವೆ. ಸರ್ಕಾರವೇ ಪ್ರಕಟಿಸಿರುವ ನಿಯಾಮಾವಳಿಗೆ ಆಧಾರವಾದ ಡಾ. ಕಸ್ತೂರಿರಂಗನ್ ವರದಿಯ ಪ್ರಕಟಣೆಯನ್ನು ಹಲವಾರು ಪರಿಸರವಾದಿಗಳು ಮತ್ತು ಸಂಘಟನೆಗಳು ವಿರೋಧಿಸಿದ್ದು, ಇದರೆ ಜೊತೆಗೆ ಗಾಡ್ಗೀಳ್‌ರವರ ವರದಿಯಲ್ಲಿ ಅಡಕವಾಗಿರುವ ಅಂಶಗಳನ್ನು ಮತ್ತು ನಿಯಮಗಳನ್ನು

ಪ್ರಕಟಿಸಬೇಕು ಎನ್ನುವುದು ಪರಿಸರವಾದಿಗಳ ವಾದವಾಗಿದೆ. ಕಸ್ತೂರಿರಂಗನ್ ವರದಿಯ ಮೂರನೇ ಕರಡು ಅಧಿಸೂಚನೆಯನ್ನು ೨೦೧೭ರ ಫೆಬ್ರವರಿ ೨೭ ರಂದು ಹೊರಡಿಸಿದೆ. ಸರ್ಕಾರ ಅಂತಿಮ ಅಧಿಸೂಚನೆ ಹೊಡಿಸುತ್ತಿಲ್ಲ ಎಂಬುದರ ಅರ್ಥೈಸುವಿಕೆಯೊಂದಿಗೆ ವಾಸ್ತವಾಂಶಗಳನ್ನು ಮನನಮಾಡಿಕೊಳ್ಳ ವರದಿಗಳು ಸಹಕಾರಿಯಾಗಬಲ್ಲವು.

೨.೧.೧೧ ಪರಿಸರ ಮತ್ತು ರಾಜಕೀಯ:

ದಿನಾಂಕ: ೬ ಜುಲೈ ೨೦೧೮ ರಂದು ಪ್ರಜಾವಾಣಿ ದೈನಿಕದಲ್ಲಿ ಪ್ರಕಟಗೊಂಡ ರಾಮಚಂದ್ರ ಗುಹಾ ಅವರ ಲೇಖನದಲ್ಲಿ ಪರಿಸರ ಸಂರಕ್ಷಣೆ ಕುರಿತಂತೆ ರಾಜಕೀಯ ಇಚ್ಛಾಶಕ್ತಿಯ ವಿವರಗಳು ಪ್ರದರ್ಶನಗೊಳ್ಳುತ್ತವೆ.[೭] ಪರಿಸರ ವ್ಯವಸ್ಥೆಯ ರಾಜಕೀಯ ಒಳನೋಟಗಳನ್ನು ನಿದರ್ಶನಗಳ ಸಹಿತ ಐತಿಹಾಸಿಕವಾಗಿಯೂ, ಪುರಾವೆ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿಯೂ ಮಂಡಿಸುವ ಗುಹಾ ಅವರ ಬರಹ ಪ್ರಜ್ಞೆ ಅನನ್ಯವಾದುದು. ಪರಿಸರ ಸುಸ್ಥಿರತೆಯ ಜತೆಗೆ ಆರ್ಥಿಕ ಪ್ರಗತಿಯನ್ನು ಸಮರಸಗೊಳಿಸುವುದಕ್ಕೆ ಬೇಕಾದ ನೈಸರ್ಗಿಕ ಮತ್ತು ಬೌದ್ಧಿಕ ಸಂಪತ್ತು ಕರ್ನಾಟಕದಲ್ಲಿದೆ. ಭಾರತೀಯ ವಿಜ್ಞಾನ ಸಂಸ್ಥೆಯು ದೇಶದ ಅತ್ಯುತ್ತಮ ವಿಶ್ವವಿದ್ಯಾಲಯ. ಭಾರತದಲ್ಲಿರುವ ಪರಿಸರ ಸಂಶೋಧನೆಯ ಎರಡು ಅತ್ಯುತ್ತಮ ಸಂಸ್ಥೆಗಳಾದ ಪರಿಸರ ವಿಜ್ಞಾನಗಳ ಕೇಂದ್ರ ಮತ್ತು ಅಶೋಕ ಟ್ರಸ್ಟ್ ಫಾರ್ ಇಕಾಲಜಿ ಅಂಡ್ ಎನ್‌ವಿರಾನ್‌ಮೆಂಟ್ ಈ ಬೆಂಗಳೂರಿನಲ್ಲಿಯೇ ಇವೆ. ನಗರ ಅಧ್ಯಯನದ ದೇಶದ ಏಕೈಕ ಸಂಸ್ಥೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಸೆಟಲ್‌ಮೆಂಟ್ ಕೂಡ ಬೆಂಗಳೂರಿನಲ್ಲಿಯೇ ಇದೆ ಎನ್ನುತ್ತಾ, ಪರಿಸರ ಮುಖಿಯಾಗಿ ಕೆಲಸ ಮಾಡುತ್ತಿರುವ ಪ್ರಧಾನ ಸಂಸ್ಥೆಗಳ ಉಪಲಬ್ಧದಲ್ಲಿ ಕರ್ನಾಟಕದ ಹೆಗ್ಗಳಿಕೆಯನ್ನು ಮುಂದಿಡುತ್ತಾರೆ.

ನೀರು, ವಿದ್ಯುತ್, ಸಾರಿಗೆ, ಕೃಷಿ ಮತ್ತು ನಗರಾಭಿವೃದ್ಧಿಯ ಸುಸ್ಥಿರ ನೀತಿಗಳನ್ನು ವಿನ್ಯಾಸಗೊಳಿಸಲು ಈ ಮೇಲ್ಕಂಡ ಸಂಸ್ಥೆಗಳ ಪರಿಣತರು ಕರ್ನಾಟಕ ಸರ್ಕಾರಕ್ಕೆ ನೆರವಾಗಬಹುದು. ಆದರೆ ಸರ್ಕಾರ ತಜ್ಞರ ಜತೆ ಸಮಾಲೋಚಿಸುವ ಕೆಲಸವನ್ನೇ ಮಾಡುವುದಿಲ್ಲ. ಬಿ.ಜೆ.ಪಿ, ಕಾಂಗ್ರೆಸ್ ಅಥವಾ ಜೆಡಿಎಸ್ ಯಾವುದೇ ಪಕ್ಷಕ್ಕೆ ಸೇರಿದ ರಾಜಕಾರಿಣಿಗಳಿಗೆ ವೈಜ್ಞಾನಿಕ ತಿಳುವಳಿಕೆ ಬಗ್ಗೆ ಅಪಥ್ಯವಿದೆ. ಈ ಜ್ಞಾನ ಕೈಯಳತೆಯ ದೂರದಲ್ಲಿದ್ದರೂ ಅವರು ಅದನ್ನು ಪಡೆದುಕೊಳ್ಳುತ್ತಿಲ್ಲ. ಈ ನಿರ್ಲಕ್ಷಕ್ಕೆ ಕಾರಣ ಕೆಡುಕಾಗಲಿ ಎಂಬ ಮನೋಭಾವವೇ ಹೊರತು ಅಜ್ಞಾನವಲ್ಲ. ವಿಜ್ಞಾನ ಮತ್ತು ಪಾಂಡಿತ್ಯದ ಬಗ್ಗೆ ನಿರ್ಲಕ್ಷ ತೋರಿ, ಅರ್ಹ ವೃತ್ತಿಪರ ಸಲಹೆಗಾರರನ್ನು ದೂರವೇ ಇರಿಸುವುದರಿಂದ ರಸ್ತೆ, ಅಣೆಕಟ್ಟು, ವಿದ್ಯುತ್ ಸ್ಥಾವರದಂತಹ ಯೋಜನೆಗಳ ಗುತ್ತಿಗೆಗಳನ್ನು ತಮ್ಮಿಷ್ಟದಂತೆ ನೀಡಿ ತಮ್ಮ ಜೇಬು ತುಂಬಿಸಿಕೊಳ್ಳುವುದು ಅಧಿಕಾರಸ್ಥ ರಾಜಕಾರಣಿಗಳಿಗೆ ಸುಲಭವಾಗಬಲ್ಲದು ಎಂಬ ಗುಹಾ ಅವರ ಬರಹಗಳು ರಾಜಕೀಯ ಇಚ್ಛಾಶಕ್ತಿಯ ಮುಖವನ್ನು ಪ್ರದರ್ಶಿಸುತ್ತವೆ.

ಕೇಂದ್ರ ಅಥವಾ ರಾಜ್ಯ ರಾಜಕಾರಣದಲ್ಲಿ ಪ್ರಕೃತಿ–ಪರಿಸರದ ಉಳಿವು ತೃತೀಯ ದರ್ಜೆಯದ್ದು. ಅಭಿವೃದ್ಧಿಯ ಪರಾಕ್ರಮದಲ್ಲಿ ಅಕ್ರಮವೋ ಅಥವಾ ಸಕ್ರಮವೋ ಗಣಿಗಾರಿಕೆಯೇ ಪ್ರಾಶಸ್ತ್ಯ ಪಡೆದುಕೊಳ್ಳುತ್ತಿದೆ. ನೆಲ ಬಗೆದು ಹಣಗಳಿಸುವ, ಮರಳು

ದಂಧೆಯಲ್ಲಿ ಮತ್ತೊಬ್ಬರನ್ನು ಮೀರಿಸಬೇಕೆನ್ನುವ ಮಾರ್ಗಕ್ಕೆ ನಾಮುಂದು ತಾಮುಂದು ಎಂಬಂತೆ ನಡೆಯುತ್ತಿರುವವರನ್ನು ಸಾಮಾನ್ಯ ಜನತೆ ನೋಡಲಾರಂಭಿಸಿದೆ. ಹಸಿರನ್ನು ಬಂಜರು ಮಾಡುವ ಯೋಜನೆಗಳಲ್ಲಿ ಕಾಣುವುದು ಕಮಿಷನ್ ರಾಜಕಾರಣವೇ ಹೊರತು ತಜ್ಞರ ಅಥವಾ ಪರಿಣತರ ಸಮಿತಿ ನೀಡಿದ ಯಾವುದೇ ಸಲಹೆಗಳಲ್ಲ. ವರದಿಗಳು ಕೇವಲ ನೆಪ ಮಾತ್ರ ಅಷ್ಟೇ. ಸಂರಕ್ಷಿತ ಪ್ರದೇಶಗಳ ಒಳಗೊಳಗೆ ಅದೆಷ್ಟು ಮರಮುಟ್ಟುಗಳು ಧನಿಕರ/ಮಾರುಕಟ್ಟೆಯ ಪಾಲಾದವೋ! ಅದೆಷ್ಟು ಬಗೆಯ ಜೀವ ವೈವಿಧ್ಯಗಳು ನಶಿಸಿದವೋ! ಅದೆಷ್ಟು ಸರಹದ್ದುಗಳು ಅತಿಕ್ರಮಣ ಪವೇಶಕ್ಕೆ ಒಳಪಟ್ಟು ಒತ್ತುವರಿಯಾದವೋ! ಇಕೋ ಫ್ರೆಂಡ್ಲಿ ರೆಸಾರ್ಟ್ ನಿರ್ಮಾಣ ನೆಪದಲ್ಲಿ ಗಿರಿಧಾಮಗಳು, ಅರಣ್ಯಗಳು ಬಲಿಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಅಲ್ಲೊಮ್ಮೆ ಇಲ್ಲೊಮ್ಮೆ ಸಾಹಿತ್ಯ ಸಮ್ಮೇಳನಗಳಲ್ಲಿ ವರದಿಗಳ ಬಗ್ಗೆ ಒಂದಿಷ್ಟು ಧ್ವನಿ ಕಾಣಬಲ್ಲೆವು. ಆ ನಂತರದ ಅನುಪಾಲನಾ ಕಾರ್ಯಚಟುವಟಿಕೆಗಳು ಮರೀಚಿಕೆಯಾಗಿಯೇ ಉಳಿಯುತ್ತಿವೆ. ಪರಿಸರ ಉಳಿಸಿ ಎಂಬ ಹೋರಾಟವು ತದನಂತರದಲ್ಲಿ ಅದರ ಉಳಿವಿಗಾಗಿ ನೇಮಿಸಿದ ಸಮಿತಿ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಿ ಎಂಬ ಹೋರಾಟದೆಡೆಗೆ ಸಾಗುವಂತಹ ವಿಪರ್ಯಾಸ ನಮ್ಮೊಳಗಿನ ಪರಿಸರ ಪ್ರಜ್ಞೆಯ ಸ್ವರೂಪವನ್ನು ನೆನಪಿಸುವುದು.

೨.೧.೧೨ ಕಾಳಿ ಕಣಿವೆ ಪುನರುಜ್ಜೀವನ ಯೋಜನೆ:

ಪ್ರಜಾವಾಣಿ ದೈನಿಕದಲ್ಲಿ ೨೦ ಜೂನ್ ೨೦೧೨ ರಲ್ಲಿ ಪ್ರಕಟವಾದ ಲೇಖನದ ಅಂಶಗಳಿವು. ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ಕೆರವಡಿಯಲ್ಲಿ ಭಾನುವಾರದಂದು ನಡೆದ 'ಕಾಳಿ ಕಣಿವೆ ಪರಿಸರ ಜಾಗೃತಿ ಸಮಾವೇಶ' ಕಾಳಿ ನದಿ ಸಂರಕ್ಷಣೆ ಹಾಗೂ ಜನರಿಗೆ ಮೂಲ ಸೌಕರ್ಯ ಒದಗಿಸುವ ಕುರಿತ ಮಹತ್ವದ ನಿರ್ಣಯ ಕೈಗೊಳ್ಳುವ ವೇದಿಕೆಯಾಗಿತ್ತು.[೮] ಕಾಳಿನದಿ ಕಣಿವೆಯು ಅಣೆಕಟ್ಟು, ಕಾರ್ಖಾನೆ, ಪರಮಾಣು ಸ್ಥಾವರದಂತಹ ದೊಡ್ಡ ಯೋಜನೆಗಳಿಂದ ಮಲಿನಗೊಳ್ಳತ್ತಿರುವುದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಾಳಿನದಿ ಕಣಿವೆಯ ಜೀವ ವೈವಿಧ್ಯ ಸಂರಕ್ಷಣೆಗೆ ವಿಶೇಷವಾದ 'ಸಮಗ್ರ ಕಾಳಿ ಕಣಿವೆ ಪುನರುಜ್ಜೀವನ ಯೋಜನೆ' ರೂಪಿಸಬೇಕು. ಅಣಶಿ, ದಾಂಡೇಲಿ ಅಭಯಾರಣ್ಯಗಳಲ್ಲಿರುವ ವನವಾಸಿಗಳು ಸೇರಿದಂತೆ ಕಾರವಾರ, ಜೋಯಿಡಾ, ಯಲ್ಲಾಪುರ, ಕಾಳಿಕಣಿವೆ ವನವಾಸಿಗಳಿಗೆ ಹಾಗೂ ರೈತರಿಗೆ ಸೌರವಿದ್ಯುತ್ ಸೌಲಭ್ಯ ನೀಡಲು ಸರ್ಕಾರ ಯೋಜನೆ ರೂಪಿಸಬೇಕು ಎನ್ನುವ ನಿರ್ಣಯವನ್ನು ಸಭೆ ಕೈಗೊಂಡಿತ್ತು ಎಂಬುದನ್ನು ಪರಿಸರ ಪ್ರಜ್ಞೆ ಸ್ವರೂಪದ ಅಧ್ಯಯನದ ದೃಷ್ಟಿಯಿಂದ ದಾಖಲಿಸಬಹುದಾಗಿದೆ.

ಕಾಳಿ ಕಣಿವೆಯಲ್ಲಿ ಪರಿಸರ ಸಭೆ ಹಾಗೂ ವೃಕ್ಷಾರೋಪಣಾ ಸಮಾರಂಭವು ದಿನಾಂಕ: ೧೭.೦೬.೨೦೧೨ ರಂದು ಆಯೋಜಿಸಲ್ಪಟ್ಟಿತ್ತು ಎಂಬುದನ್ನು ಪ್ರಜಾವಾಣಿ ದೈನಿಕದ ಲೇಖನವೊಂದು ಪ್ರಕಟಿಸುತ್ತದೆ. ಈ ಸಂದರ್ಭದಲ್ಲಿ ಕಾಳಿ ಕಣಿವೆ ಜೀವವೈವಿಧ್ಯಕ್ಕೆ ಹೆಸರಾಗಿದ್ದು ಮಾತ್ರವಲ್ಲದೆ, ಅದೇ ಹೊತ್ತಿಗೆ ಬೃಹತ್ ಜಲವಿದ್ಯುತ್ ಯೋಜನೆಗಳಿಗೆ ಕಣಿವೆಯು ದಟ್ಟ ಅರಣ್ಯಗಳನ್ನು ಕಳೆದುಕೊಂಡಿದೆ ಎಂಬ ಬಗ್ಗೆಯೂ ಚಿಂತಿಸಲಾಗಿತ್ತು. ಕೈಗಾ ಅಣುಸ್ಥಾವರದ ಅಣುವಿಕಿರಣದಿಂದಾಗುವ ಆರೋಗ್ಯ ದುಷ್ಪರಿಣಾಮಗಳ ಅರಿವಿನ ಬಗ್ಗೆ ಜನಧ್ವನಿ ಎದ್ದಿತ್ತು. ಕಾರವಾರ ಬಳಿ ಕಡವಾಡದಲ್ಲಿ ಭೂಕುಸಿತದಿಂದ ಜನ ಪ್ರಾಣ ಕೊಟ್ಟ ಘಟನೆ ಅಲ್ಲಿನವರನ್ನು

ಬಾಧಿಸಿದ್ದು ಮಾತ್ರವಲ್ಲದೆ ಪಶ್ಚಿಮ ಘಟ್ಟ ಕಾರ್ಯಪಡೆ ವಿಶೇಷ ಅಧ್ಯಯನ ನಡೆಸಿ ಈ ಕುರಿತು ಸರ್ಕಾರಕ್ಕೆ ಶಿಫಾರಸ್ಸು ನೀಡಿದ್ದು ಉಲ್ಲೇಖನೀಯ. ಕಾಳಿನದಿ ತೀರದ ಹಳ್ಳಿಗಳ ರೈತರು ಏತ ನೀರಾವರಿ ಯೋಜನೆಗೆ ಕಾರವಾರ ಪರಿಸರ ಸಮಿತಿಗೆ ಮನವಿ ಸಲ್ಲಿಸಿತ್ತು ಎಂಬುದು ಉಲ್ಲೇಖಾರ್ಹ.

ಈ ವಿಚಾರಗಳಿಂದಾಗಿ ಅನಿವಾರ್ಯ ಸಂದರ್ಭ ಎದುರಾದಾಗ ಪಶ್ಚಿಮ ಘಟ್ಟದಲ್ಲಿ ವಾಸಿಸುವವರಲ್ಲಿ ಪರಿಸರ ಸಂರಕ್ಷಣೆಯ ಹೋರಾಟ ಮತ್ತು ಅದನ್ನು ಉಳಿಸಿಕೊಳ್ಳಬೇಕೆಂಬ ಭಾವನಾತ್ಮಕ ಪ್ರಜ್ಞೆ ಹೇಗೆ ಸ್ವಯಂ ರೂಪುಗೊಳ್ಳುತ್ತಿತ್ತು ಎಂಬುದರ ಅರ್ಥಗ್ರಹಿಕೆ ಸಾಧ್ಯವಾಗುತ್ತದೆ. ಇಂದು ಹೋರಾಟಗಳು ವೇದಿಕೆ ನಿರ್ಮಾಣ, ಸಭೆಗಳ ಆಯೋಜನೆ, ವಿಚಾರಗಳ ಮಂಡನೆಯಲ್ಲೇ ಕಳೆದುಹೋಗುತ್ತಿದೆ. ಪರಿಸರದ ಉಳಿವು ಕೇವಲ ಮಂಡನೆಯ ಭಾಗವಾಗದು. ಅದೊಂದು ಅವಿರತ ಹೋರಾಟ. ಪರಿಸರ ವ್ಯವಸ್ಥೆ ಕುರಿತಂತೆ ಸರ್ಕಾರ ಜರುಗಿಸುವ ಕ್ರಮಗಳ ಮೇಲೆ ಯಾವತ್ತೂ ಕಣ್ಣಿಟ್ಟಿರಲೇಬೇಕು. ಅರಣ್ಯ ನೀತಿ ಕುರಿತು ಸಿದ್ಧಗೊಳ್ಳುವ ಆದೇಶ ಮತ್ತು ಅನುಷ್ಠಾನಾತ್ಮಕ ಸುತ್ತೋಲೆಗಳ ಅವಲೋಕನವು ಈ ದಿಸೆಯಲ್ಲಿ ಬಹುಮುಖ್ಯವೆನಿಸಿಕೊಳ್ಳುತ್ತದೆ. ಹಾಗೆಯೇ ನಿರ್ದಿಷ್ಟಪಡಿಸಿದ ಚಟುವಟಿಕೆಗಳಿಗೆ ಪರವಾನಿಗಿ ಪಡೆದು ಬೇರೆ, ಚಟುವಟಿಕೆಗಳನ್ನು ನಡೆಸುತ್ತಿರುವ ಪರಿಸರ ಚಟುವಟಿಕೆಗಳ ಬಗ್ಗೆಯೂ ನಮ್ಮ ಕಾಳಜಿಗಳು ಮತ್ತಷ್ಟು ಜಾಗೃತಗೊಳ್ಳಬೇಕಿದೆ.

ಕೊನೆ ಟಿಪ್ಪಣಿಗಳು:

೧. ಪ್ರಜಾವಾಣಿ ದೈನಿಕದ ಜೂನ್೪, ೨೦೧೧ರ 'ಭೂಮಿಕಾ' ವಿಶೇಷ ಅಂಕಣದಲ್ಲಿ ಪ್ರಕಟಗೊಂಡ ಅಂಶಗಳು
೨. ಟಿ.ಎಸ್.ವಿವೇಕಾನಂದ, ಭೂಮಿಗೀತೆ, ಪುಟ:೨೬
೩. ಟಿ.ಎಸ್.ವಿವೇಕಾನಂದ, ಪರಿಸರ ಕಥನ, ಪುಟ:೯೩
೪. ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ಮಾರ್ಚ್೨೭, ೨೦೧೩ ರ ಲೇಖನ
೫. ಮಾಧವ ಗಾಡ್ಗೀಳರ ವರದಿಯ ಅಂಶಗಳು
೬. ಕಸ್ತೂರಿ ರಂಗನ್ ವರದಿಯ ಅಂಶಗಳು
೭. ದಿನಾಂಕ:೬ ಜುಲೈ ೨೦೧೮ ರಂದು ಪ್ರಜಾವಾಣಿ ದೈನಿಕದಲ್ಲಿ ಪ್ರಕಟಗೊಂಡ ಗುಹಾ ಅವರ ಲೇಖನ
೮. ಪ್ರಜಾವಾಣಿ ದೈನಿಕದಲ್ಲಿ ೨೦ ಜೂನ್ ೨೦೧೨ ರಲ್ಲಿ ಪ್ರಕಟವಾದ ಲೇಖನದ ಅಂಶಗಳು

ಅಧ್ಯಾಯ-ಮೂರು

ಪರಿಸರ ಪ್ರಜ್ಞೆಗ್ರಹಿಕೆಯ ಅವಶ್ಯ ಪರಿಕಲ್ಪನೆಗಳು

೩.೧ ಪೀಠಿಕೆ

೩.೨ 'ಪರಿಸರ' ವಿಜ್ಞಾನ ಪದದ ನಿಷ್ಪತ್ತಿ

೩.೩ ಪರಿಸರ ವ್ಯವಸ್ಥೆ

೩.೪ ಪಾರಿಸರಿಕ ಪರಂಪರೆ

೩.೬ ಜೀವಿ ಸಮುದಾಯ

೩.೮ ಸಮಗ್ರ ಪರಿಸರದ ಪ್ರಕಾರಗಳು

೩.೯ ಪರಿಸರವಾದ ಮತ್ತು ಪರಿಸರ ವಿಜ್ಞಾನ

೩.೧೦ ಡಾರ್ವಿನ್ನನ ವಿಕಾಸವಾದ

ಅಧ್ಯಾಯ–ಮೂರು

ಪರಿಸರ ಪ್ರಜ್ಞೆ ಗ್ರಹಿಕೆಯ ಅವಶ್ಯ ಪರಿಕಲ್ಪನೆಗಳು

೩.೧ ಪೀಠಿಕೆ:

ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಪೂರಕವಾಗುವಂತೆ ಕೆಲವು ಇಕಾಲಜಿಯ ಮೂಲ ಪರಿಲ್ಪನೆಗಳನ್ನು ಗುರುತಿಸಿದ್ದು, ಕೃತಿಕಾರರ ಸೃಜನೇತರ ಸಾಹಿತ್ಯಗಳಲ್ಲಿ ಕಂಡುಬರುವ ಪರಿಸರ ಪ್ರಜ್ಞೆಯ ವಸ್ತು ವಿಚಾರಗಳ ಗ್ರಹಿಕೆಗೆ ಈ ಕಲ್ಪನೆಗಳ ತಿಳುವಳಿಕೆ ಸಹಕಾರಿಯಾಗುವುದೆಂದು ಅಭಿಪ್ರಾಯಿಸಿದೆ. ತೇಜಸ್ವಿ ಮತ್ತು ನಾಗೇಶ ಹೆಗಡೆ ಅವರ ಸೃಜನೇತರ ಕೃತಿಗಳು ಇಕಾಲಜಿಯ ವಿಶ್ವರೂಪ ದರ್ಶನದೆಡೆಗೆ ಬಹತೇಕ ಚಿಂತಿಸುವವು. ಅಲ್ಲಿನ ವೈಜ್ಞಾನಿಕ ಮತ್ತು ವೈಚಾರಿಕ ಸಂಗತಿಗಳನ್ನು ಬಹುಮುಖ ಆಯಾಮದ ಚರ್ಚೆಗೆ ಒಳಪಡಿಸುವವು. ಪರಿಸರದ ಕಲ್ಪನೆಗಳನ್ನು ಬಿಡಿಸಿಕೊಳ್ಳಲು ಈ ಇಬ್ಬರೂ ಲೇಖಕರು ಕೆಲವೊಮ್ಮೆ ಶುದ್ಧ ವಿಜ್ಞಾನದ ನಿರೂಪಣೆಗಳೊಂದಿಗೆ ಅದರ ವ್ಯಾಪಕತೆಯ ಕಡೆಗೂ ಚಲಿಸುವುದರಿಂದ ಈ ಹಿನ್ನೆಲೆಯಲ್ಲಿ ಕೃತಿಕಾರರ ಮೂಲ ಕೃತಿಗಳನ್ನು ಕುರಿತಂತೆ ಸಂಶೋಧನೆಯಲ್ಲಿ ಅಧ್ಯಯನವನ್ನು ಮತ್ತಷ್ಟು ಪರಿಣಾಮಕಾರಿಗೊಳಿಸಿಕೊಳ್ಳಲು ಮತ್ತು ಸೈದ್ಧಾಂತಿಕವಾಗಿ ಕೃತಿಕಾರರು ಎತ್ತಿಹಿಡಿಯುವ ಒಳಹುಗಳನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಅವಶ್ಯ ಪರಿಕಲ್ಪನೆಗಳನ್ನು ಮಾತ್ರ ಆಯ್ಕೆಗೊಳಿಸಿ ಈ ಅಧ್ಯಾಯದಲ್ಲಿ ಅವುಗಳ ಬಗ್ಗೆ ವಿವರಿಸಲಾಗಿದೆ. ಈ ವಿವರಗಳು ಮೇಲುನೋಟಕ್ಕೆ ಪಠ್ಯದ ಮಾಹಿತಿಯಂತೆ ತೋರಿದರೂ, ಈ ಮೂಲ ಪರಿಕಲ್ಪನೆಗಳು ಸಂಶೋಧನಾರ್ಥಿಗೆ ಆರಂಭದಲ್ಲಿ ಒಂದಿಷ್ಟು ಕಲಿಕೆಯ ಮೂಲ ವಿಷಯಗಳಾಗಲೇಬೇಕಿದೆ. ಅದರಲ್ಲೂ ನಾಗೇಶ ಹೆಗಡೆ ಅವರ ಸೃಜನೇತರ ಕೃತಿಗಳನ್ನು ಗ್ರಹಿಸುವ ಸಾಹಿತ್ಯ ಕ್ಷೇತ್ರದ ಯಾವುದೇ ವಿದ್ಯಾರ್ಥಿಗೆ ಇಂತಹ ಮೂಲ ಪರಿಕಲ್ಪನೆಗಳ ಗ್ರಹಿಕೆ ಖಂಡಿತಾ ಇರಲೇಬೇಕಾಗುತ್ತದೆ. ಹಾಗೆಯೇ ಪರಿಸರ ಪ್ರಜ್ಞೆಯಲ್ಲಿ ಎದುರುಗೊಳ್ಳುವ ಕೆಲವು ಪರಿಕಲ್ಪನೆಗಳ ತಾತ್ವಿಕತೆಯ ಸಿದ್ಧ ಸಮೀಕರಣವನ್ನು ಅಧ್ಯಯನದಲ್ಲಿ ಚರ್ಚೆಗಳೆಡೆಗೆ ವಿಸ್ತರಿಸಿಕೊಳ್ಳಲು ಅಗತ್ಯ ಚೌಕಟ್ಟನ್ನು ಅಥವಾ ಭೂಮಿಕೆಯನ್ನು ವಿಧಿಸಿಕೊಳ್ಳಲು ಇವು ನೆರವಾಗುತ್ತವೆ.

ಜಾಗತಿಕ ಪರಿಸರದ ಚರಿತ್ರೆಯನ್ನು ಯಾವುದೇ ಪೂರ್ವಾಗ್ರಹಗಳಿಲ್ಲದೇ ಸ್ವೀಕರಿಸುವುದಾದರೆ, 'ಪರಿಸರ ಪ್ರಜ್ಞೆ' ಎಂಬುದು ಅನಾದಿಯ ಅರಿವಾದರೂ ಇದಕ್ಕೊಂದು ಸಿದ್ಧಾಂತ, ತತ್ವ ರೂಪುಗೊಂಡು ಮುಖ್ಯ ಚರ್ಚೆಯ ವಿಷಯವಾಗಿ ಬೆಳೆದು, ಕಾರ್ಯಕಾರಣ ಸಂಬಂಧಗಳು ಕೂಡಿ 'ಪರಿಸರಾಂದೋಲನದ' ರೂಪು ಪಡೆದದ್ದು ೧೯೬೦ ರ ದಶಕದಿಂದೀಚೆಗೆ. ಈ ಅವಧಿಯಲ್ಲಿ ವಿಶ್ವದ ಬಹುಪಾಲು ರಾಷ್ಟ್ರಗಳಲ್ಲಿ ತಮ್ಮದೇ ಆದ ಪರಿಸರ ಸಿದ್ಧಾಂತಗಳು ರೂಪುಗೊಂಡಿವೆ. ಅನೇಕ ಚಳವಳಿಗಳು ಹುಟ್ಟಿಕೊಂಡಿವೆ. ಈ ಸಿದ್ಧಾಂತ ಚಳುವಳಿಗಳ ಆನುಷಂಗಿಕ ಪರಿಣಾಮಗಳೊ ಎನ್ನುವಂತೆ ಜಾಗತಿಕ ಮಟ್ಟದಲ್ಲಿ ಪರಿಸರ ಸಮ್ಮೇಳನಗಳು, ಚರ್ಚೆಗಳು, ಒಪ್ಪಂದಗಳೂ ಸಹ ಆಗಿವೆ. ಇದರ ಪರಿಣಾಮವಾಗಿ ಹಲವು ಪರಿಸರ ಸಂರಕ್ಷಣಾ ಯೋಜನೆಗಳು, ಕಾರ್ಯಕ್ರಮಗಳು ಅನುಷ್ಠಾನಗೊಂಡಿರುವುದನ್ನು ಗಮನಿಸಬಹುದು.[೧]

೩.೨ 'ಪರಿಸರ' ವಿಜ್ಞಾನ ಪದದ ನಿಷ್ಪತ್ತಿ:

'ಪರಿಸರ' ಎಂಬ ಪದವು **ಎನ್‌ವಿರಾನ್‌ಮೆಂಟ್** (**Environment**) ಎಂಬ ಇಂಗ್ಲಿಷ್ ಪದದ ಕನ್ನಡ ಅನುವಾದವಾಗಿದೆ. ಇದರ ಅರ್ಥ ಸನ್ನಿವೇಶ, ಸುತ್ತಮುತ್ತಲೂ ಇರುವ ವಸ್ತಗಳು, ಪ್ರದೇಶ, ಪರಿಸ್ಥಿತಿ ಮತ್ತು ಪರಿವೇಷ್ಟನೆ ಎಂದಾಗುತ್ತದೆ. ಅಂತೆಯೇ ಪರಿಸರವು ನಮ್ಮ ಸುತ್ತಮುತ್ತಲೂ ಇರುವ ಎಲ್ಲಾ ಜಲಚರ, ವನಚರ, ಮನಚರ, ಸಸ್ಯಸಂಕುಲ ಹಾಗೂ ಜಡಪದಾರ್ಥಗಳನ್ನು ಒಳಗೊಂಡಿದೆ. ನಮ್ಮ ಸುತ್ತಮುತ್ತಲಿನ ಒಟ್ಟಾರೆ ಜಗತ್ತನ್ನು ನಾವು ಪರಿಸರ ಎನ್ನುತ್ತೇವೆ. ಇದು ವಿಶ್ವವ್ಯಾಪಕವಾಗಿದೆ. ವೈವಿಧ್ಯತೆಯಿಂದ ಕೂಡಿದೆ. ಕಲಾತ್ಮಕವಾಗಿದೆ ಮತ್ತು ಚಿತ್ತಾಕರ್ಷಕವಾಗಿದೆ.ಮನುಷ್ಯನೂ ಸೇರಿದ ಹಾಗೆ ಪ್ರಕೃತಿಯಲ್ಲಿನ ಪ್ರಾಣಿ, ಪಕ್ಷಿ, ಕ್ರಿಮಿ-ಕೀಟ, ಸೂಕ್ಷ್ಮಾಣು ಜೀವಿಗಳ ಪ್ರತಿಯೊಂದು ಚಟುವಟಿಕೆಯೂ ತನ್ನ ಪರಿಣಾಮವನ್ನು ಮತ್ತೆಲ್ಲೋ ತೋರಿಸುತ್ತದೆ. ಕಣ್ಣಿಗೆ ಕಾಣದ ದೂರದಲ್ಲಿನ ನೂರಾರು ನೈಸರ್ಗಿಕ ಘಟನೆಗಳು ನಮ್ಮ ಅಳಿವು-ಉಳಿವುಗಳ ಮೇಲೆ ಪ್ರಭಾವ ಬೀರುತ್ತವೆ, ನಮ್ಮ ಜೀವನದ ಗತಿಯನ್ನು ನಿರ್ಧರಿಸುತ್ತವೆ. ಹೊರನೋಟಕ್ಕೆ ಅಸಂಬದ್ಧವೆನಿಸುವ ಆದರೆ ಅತ್ಯಂತ ವ್ಯವಸ್ಥಿತವಾಗಿ ನಡೆಯುವ ಪ್ರಕೃತಿಯಲ್ಲಿನ ಮಹತ್ವದ ಘಟನೆಗಳು ಹಾಗೂ ಅವು ತರುವ ಪರಿಣಾಮಗಳ ಬಗ್ಗೆ ನಮಗಿಂದು ಸ್ಪಷ್ಟವಾಗಿ ಅನೇಕ ವಿಷಯಗಳು ತಿಳಿಯುತ್ತಿವೆ. ಈ ಅಮೂಲ್ಯ ತಿಳುವಳಿಕೆ ಮೂಡಿಬರುತ್ತಿರುವುದು 'ಪರಿಸರ ವಿಜ್ಞಾನ'ದಿಂದ. ವಿಜ್ಞಾನದ ಈ ಪ್ರಕಾರಕ್ಕೆ ಇಂಗ್ಲಿಷಿನಲ್ಲಿ **'ಇಕಾಲಜಿ'** ಎನ್ನುತ್ತಾರೆ.

ಇಕಾಲಜಿಯ ಈ ಪದ ಬಳಕೆಗೆ ಬಂದದ್ದು ೧೮೬೯ ರಲ್ಲಿ. ಇದನ್ನು ಸೃಷ್ಟಿಸಿದಾತ ಜರ್ಮನ್ ದೇಶದ ಜೀವ ವಿಜ್ಞಾನಿ ಎರ್ನೆಸ್ಟ್ ಹೆಕಲ್ (೧೮೩೪-೧೯೧೯). ಇಕಾಲಜಿ ಎಂಬ ಪದವು 'ಮನೆ' ಎಂಬ ಅರ್ಥಕೊಡುವ ಗ್ರೀಕ್ ಭಾಷೆಯ ಪದ **'ಐಕೋಸ್'** ಎಂಬ ಶಬ್ದ ಮೂಲದಿಂದ ನಿಷ್ಪತ್ತಿ ಹೊಂದಿದೆ. ಅಂತೆಯೇ ಇದೊಂದು ಮನೆಯ ಅಧ್ಯಯನ. ಅಂದರೆ ಮನೆಗೆ ಸಂಬಂಧಿಸಿದ ಅಧ್ಯಯನ, ಮನೆಯಲ್ಲಿರುವವರಿಗೆ ಸಂಬಂಧಿಸಿದ ಅಧ್ಯಯನ, ಮನೆಯ ಮೇಲೆ ಪ್ರಭಾವ ಬೀರಬಹುದಾದುದರ ಅಧ್ಯಯನವು ಪರಿಸರ ವಿಜ್ಞಾನ ಎನಿಸುತ್ತದೆ.[೨] ಮನುಷ್ಯ ಏಕಾಂಗಿಯಲ್ಲ. ಅವರ ಸುತ್ತಮುತ್ತ ಮರಗಿಡಗಳಿವೆ, ಪ್ರಾಣಿಪಕ್ಷಿಗಳಿವೆ, ಸರೀಸೃಪಗಳಿವೆ, ವೈವಿಧ್ಯಮಯವಾದ ಕೀಟ ಪ್ರಪಂಚವಿದೆ. ಈ ಜೀವಿಗಳ ಜೊತೆಗೆ ನದಿ, ಸಾಗರ, ಸರೋವರ, ಪರ್ವತಗಳಿವೆ. ಗಾಳಿ, ಬೆಳಕು, ಮಣ್ಣು, ಖನಿಜ ಸಂಪನ್ಮೂಲಗಳೂ ಇವೆ. ಈ ಎಲ್ಲವೂ ನಮ್ಮ

'ಪರಿಸರ'ದಲ್ಲಿ ಸೇರುತ್ತವೆ; ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಮ್ಮ ಮೇಲೆ ಪ್ರಭಾವ ಬೀರುತ್ತವೆ; ನಮ್ಮ ಪ್ರಭಾವಕ್ಕೂ ಈಡಾಗುತ್ತವೆ. ಹೀಗಾಗಿ ಪರಿಸರಕ್ಕೆ ವೈಜ್ಞಾನಿಕ ನಿರೂಪಣೆಯನ್ನು ನೀಡುವುದಾದರೆ **"ಜೀವಿಯ ಮೇಲೆ ಜೈವಿಕವಾಗಿ ಪರಿಣಾಮ ಬೀರುವ ಎಲ್ಲ ಬಾಹ್ಯ ಕಾರಣಗಳನ್ನು ಒಟ್ಟಾರೆಯಾಗಿ ಪರಿಸರ"** ಎನ್ನಬಹುದು.

ಇಲ್ಲಿ ಮನೆ ಎಂಬ ಪರಿಕಲ್ಪನೆಯನ್ನು ಮನೆ, ಊರು, ಗ್ರಾಮ, ಪಟ್ಟಣ, ನಗರ, ಮಹಾನಗರ, ಹೋಬಳಿ, ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ, ವಿಶ್ವ, ಒಟ್ಟಾರೆ ಭೂಮಿ ಎಂಬುದಾಗಿ ವಿಸ್ತೃತಗೊಳಿಸಿದ್ದೇ ಆದರೆ, ಇಡೀ ವಿಶ್ವದ ಬಗೆಗಿನ ಅಧ್ಯಯನವು ಪರಿಸರ ವಿಜ್ಞಾನ ಎನಿಸುತ್ತದೆ. ಈ ಭೂಮಿಯು ಸೌರವ್ಯೂಹದಲ್ಲಿ ಸೂರ್ಯ ಎಂಬ ನಕ್ಷತ್ರದ ಸುತ್ತಲೂ ತನ್ನದೇ ಆದ ನಿಶ್ಚಿತ ಕಕ್ಷೆಯಲ್ಲಿ ಸದಾ ಸುತ್ತುತ್ತಿರುವ ಇತರ ಗ್ರಹಗಳ ಜೊತೆ, ಕ್ಷುದ್ರಗ್ರಹಗಳ ಜೊತೆ, ಉಲ್ಕೆಗಳು, ಧೂಮಕೇತುಗಳು ಇತರೆ ನಕ್ಷತ್ರಗಳು ಮೊದಲಾದ ವಿವಿಧ ಆಕಾಶಕಾಯಗಳ ಜೊತೆ ಸಂಬಂಧವುಳ್ಳದ್ದಾಗಿದೆ. ಇವೆಲ್ಲವೂ ಪರಿಸರ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳೇ ಆಗಿರುವವು.

೩.೩ ಪರಿಸರ ವ್ಯವಸ್ಥೆಯ ಸ್ವರೂಪ (Ecosystem)

ಪರಿಸರ ವಿಜ್ಞಾನಿ ಜೀವಿ ಸಮುದಾಯಗಳನ್ನು ಅಭ್ಯಾಸ ಮಾಡುತ್ತಾನೆ. ಇಂತಹ ಅಧ್ಯಯನದಲ್ಲಿ ಆತ ತನ್ನ ಗಮನವನ್ನು ಸಮುದಾಯದಲ್ಲಿರುವ ಜೀವಿಗಳಿಗೆ ಮಾತ್ರ ಸೀಮಿತಗೊಳಿಸುವುದಿಲ್ಲ. ಸಮುದಾಯದ ಭೌತಪರಿಸರಕ್ಕೂ ತನ್ನ ಅಧ್ಯಯನವನ್ನು ವಿಸ್ತರಿಸುತ್ತಾನೆ. ಈ ರೀತಿ ಮಾಡಿದಾಗ ಮಾತ್ರ ನಮಗೆ ಆ ಪ್ರದೇಶದ ಸಂಪೂರ್ಣ ಚಿತ್ರ ದೊರೆಯುತ್ತದೆ; ಏಕೆಂದರೆ ಜೀವಿಸಮುದಾಯ ಮತ್ತು ಭೌತಪರಿಸರಗಳು ಒಂದನ್ನು ಬಿಟ್ಟು ಒಂದು ಇರಲಾರವು. ಹೀಗೆ ಜೀವಿ ಸಮುದಾಯ ಮತ್ತು ಭೌತ ಪರಿಸರಗಳೆರಡನ್ನೂ ಸೇರಿಸಿ ನೋಡಿದಾಗ ಕಂಡುಬರುವುದೇ **'ಪರಿಸರ ವ್ಯವಸ್ಥೆ'** (Ecosystem). ಜೈವಿಕ ಹಾಗೂ ಅಜೈವಿಕ ಭಾಗಗಳ ನಡುವಿನ ಅಂತರ ಕ್ರಿಯೆಗಳು ಇಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅಂದರೆ, ಪರಿಸರ ವ್ಯವಸ್ಥೆಯಲ್ಲಿ ಎರಡು ಭಾಗಗಳಿವೆ ಎಂದಾಯಿತು. ಒಂದು – ಜೀವಿಸಮುದಾಯ; ಎರಡು – ಈ ಸಮುದಾಯದ ಅಜೈವಿಕ ಪರಿಸರ ಅಥವಾ ಭೌತ ಪರಿಸರ. ಈ ಎರಡೂ ಒಂದಕ್ಕೊಂದು ಪ್ರತಿಕ್ರಿಯೆ ತೋರಿಸುತ್ತವೆ. ಒಂದರ ಮೇಲೊಂದು ಪರಿಣಾಮ ಬೀರುತ್ತವೆ; ಜೊತೆ ಜೊತೆಯಾಗಿಯೇ ಕೆಲಸ ಮಾಡುತ್ತವೆ; ಇದರಿಂದ ಎಲ್ಲಾ ಬಗೆಯ ಜೀವಿಗಳು ಮತ್ತು ಗಾಳಿ, ಬೆಳಕು, ನೀರು, ರಾಸಾಯನಿಕ ವಸ್ತುಗಳು ಮುಂತಾದ ಅಜೈವಿಕ ಘಟಕಗಳ ಸಹಕಾರಿ ಪದ್ಧತಿಯೇ ಪರಿಸರ ವ್ಯವಸ್ಥೆಯಾಗುತ್ತದೆ. ಮನೆಗೆ ಇಟ್ಟಿಗೆಯಿದ್ದಂತೆ ಜೀವ ವಿಜ್ಞಾನಕ್ಕೆ ಜೀವಕೋಶ ಇದ್ದಂತೆ ಪರಿಸರ ವಿಜ್ಞಾನಕ್ಕೆ ಪರಿಸರ ವ್ಯವಸ್ಥೆಯೇ ಮೂಲಭೂತ ಘಟಕ.

ಜಾಗತಿಕ ಪರಿಸರ ವ್ಯವಸ್ಥೆ :

ನಾವು ವಾಸಿಸುತ್ತಿರುವ ಜೀವಗೋಳವೇ ಒಂದು ಬೃಹತ್ ಪರಿಸರ ವ್ಯವಸ್ಥೆ. ಇದೇ ಕಾರಣಕ್ಕಾಗಿ ಜೀವಗೋಳವನ್ನು 'ಜಾಗತಿಕ ಪರಿಸರ ವ್ಯವಸ್ಥೆ' ಎನ್ನುತ್ತಾರೆ. ಇದನ್ನು ವಿವಿಧ ಪರಿಸರ ವ್ಯವಸ್ಥೆಗಳಾಗಿ ಪರಿಶೀಲಿಸಬಹುದು. ಹೀಗೆ ಮಾಡಿದಾಗ ನಮಗೆ ಅರಣ್ಯ ಪರಿಸರ

ವ್ಯವಸ್ಥೆ, ಹುಲ್ಲುಗಾವಲು ಪರಿಸರ ವ್ಯವಸ್ಥೆ, ಜೌಗು ಪ್ರದೇಶ, ಸರೋವರ, ಕಡಲತೀರ, ಹವಳದ ದಿಬ್ಬ ಮುಂತಾದ ಪ್ರತ್ಯೇಕ ಪರಿಸರ ವ್ಯವಸ್ಥೆಗಳು ದೊರೆಯುತ್ತವೆ. ಪ್ರತಿಯೊಂದು ವ್ಯವಸ್ಥೆಯಲ್ಲೂ ಅಲ್ಲಿಗೆ ಹೊಂದಿಕೊಳ್ಳುವ ವಿಶಿಷ್ಟವಾದ ಜೀವಿಗಳನ್ನು ಅಲ್ಲಿನ ನಿರ್ದಿಷ್ಟ ಪರಿಸರದಲ್ಲಿ ಕಾಣಬಹುದು. ಈ ಜೀವಗೋಳವು ವಿವಿಧ ಪರಿಸರ ವ್ಯವಸ್ಥೆಗಳ ಜಾಲವಾಗಿದೆ. ಇದಕ್ಕೆ ಇಂತಿಷ್ಟೇ ಗಾತ್ರವಾಗಲಿ, ಇಂತಿಷ್ಟೇ ಜೀವ ವೈವಿಧ್ಯವಾಗಲಿ ಇರಬೇಕೆಂಬ ನಿಯಮವಿಲ್ಲ. ಉದಾಹರಣೆಗೆ ಒಂದು ಮರವನ್ನು ನಾವು ಆಯ್ಕೆ ಮಾಡಿಕೊಂಡರೆ ಅದರ ಎಲೆ, ರಂಬೆ, ಕಾಂಡ, ತೊಗಟೆ, ಬೇರುಗಳಲ್ಲಿ ಜೀವಿಸುವ ಜೀವಿಸಮುದಾಯಕ್ಕೂ ಅವುಗಳ ಜೈವಿಕ ಪರಿಸರಕ್ಕೂ ಇರುವ ಸಂಬಂಧವನ್ನು ಪರಿಶೀಲಿಸಬಹುದು. [೩]

೩.೫ ಪಾರಿಸರಿಕ ಪರಂಪರೆಯ ಅರ್ಥ ಮತ್ತು ಮಹತ್ವ:

ಜೀವರಹಿತವಾದ ಬಂಡೆಗಲ್ಲು ಈ ಬೆಳವಣಿಗೆಯ ಮೂಲ. ಇದು ಗಾಳಿ ಮಳೆಗಳ ಹೊಡೆತಕ್ಕೆ ಈಡಾಗುತ್ತದೆ. ಸೂರ್ಯನ ಶಾಖದಿಂದ ಹಿಗ್ಗುತ್ತದೆ. ಶೈತ್ಯದಿಂದ ಕುಗ್ಗುತ್ತದೆ. ಈ ಶಾಖ, ಶೈತ್ಯಗಳ ಪರಿಣಾಮಕ್ಕೆ ಒಳಗಾದ ಬಂಡೆಗಲ್ಲಿನಲ್ಲಿ ಬಿರುಕುಗಳು ಕಾಣಿಸಿಕೊಳ್ಳುತ್ತವೆ. ಈ ಬಿರುಕುಗಳಲ್ಲಿ ಬಂಡೆಗಲ್ಲಿನ ಸಣ್ಣಸಣ್ಣ ಕಣಗಳು ಸಂಗ್ರಹವಾಗುತ್ತವೆ. ಮಳೆಯಲ್ಲಿನ ದುರ್ಬಲ ಕಾರ್ಬಾನಿಕ್ ಆಮ್ಲ ಬಂಡೆಯಲ್ಲಿನ ಖನಿಜಾಂಶವನ್ನು ಕರಗಿಸಿ ಬಿರುಕಿನಲ್ಲಿ ಶೇಖರಗೊಳ್ಳುವಂತೆ ಮಾಡುತ್ತದೆ. ಬೆತ್ತಲೆ ಬಂಡೆಯ ಇಳಿಜಾರಿನಲ್ಲಿ ಕಾಣಿಸಿಕೊಳ್ಳುವ ಮೊದಲ ಜೀವಿಯೆಂದರೆ ಶಿಲಾವಲ್ಕ ಅಥವಾ ಕಲ್ಲು ಹೂ. ಗಾಳಿ ಹೊತ್ತು ತಂದ ಇದರ ಬೀಜಾಣುಗಳು ಬಂಡೆಗಳ ಮೇಲಿಳಿದು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುತ್ತವೆ. ಬಿರುಕುಗಳಲ್ಲಿ ಹರಡಿ, ಅಲ್ಲಿನ ಖನಿಜಾಂಶಗಳನ್ನು ಬಳಸಿಕೊಂಡು ಮತ್ತಷ್ಟು ಕಲ್ಲನ್ನು ಕರಗಿಸುತ್ತವೆ. ಬಂಡೆಯ ಮೇಲೆ ಕಾಣಿಸಿಕೊಂಡ ಶಿಲಾವಲ್ಕಗಳು ಅಲ್ಲಿಯೇ ಭದ್ರವಾಗಿ ನೆಲೆಯೂರಲು ಹಲವಾರು ವರ್ಷಗಳೇ ಬೇಕಾಗಬಹುದು. ಕಾಲಕ್ರಮೇಣ ಪ್ರತಿಯೊಂದು ಶಿಲಾವಲ್ಕ ಸತ್ತಾಗಲೂ ಅದರಲ್ಲಿನ ಸಾವಯವ ಪದಾರ್ಥಗಳು ಕೊಳೆತು ಹ್ಯೂಮಸ್ ಆಗಿ ಪರಿವರ್ತನೆಗೊಳ್ಳುತ್ತವೆ. ಎಲೆ, ಕಡ್ಡಿ, ತೊಗಟೆ ಮುಂತಾದ ಸಾವಯವ ಪದಾರ್ಥಗಳು ಸಾವಕಾಶವಾಗಿ ಕೊಳೆತು ಕಪ್ಪೇರಿದ ಪದಾರ್ಥವೇ ಹ್ಯೂಮಸ್. ಅತಿ ಸಣ್ಣ ಕಣಗಳ ಧೂಳು ಮತ್ತು ಹ್ಯೂಮಸ್ ಸೇರಿ ತೆಳುವಾದ ಮಣ್ಣಿನ ಪದರವೊಂದು ಸೃಷ್ಟಿಯಾಗುತ್ತದೆ. ಈ ಮಣ್ಣು ಜೇಡ, ಇರುವೆಗಳಂತಹ ಜೀವಿಗಳಿಗೆ ಆವಾಸವಾಗುತ್ತದೆ. ಪ್ರಾಣಿಜೀವಿ, ಸಸ್ಯಜೀವಿಗಳ ಈ ಪ್ರಪ್ರಥಮ ಸಮುದಾಯವನ್ನು **'ಆದಿಪ್ರವರ್ತಕ ಸಮುದಾಯ'** (**Pioneer community**) ಎನ್ನುತ್ತಾರೆ. ಈ ಸಮುದಾಯದಲ್ಲಿ ನಿಸರ್ಗದ ಅತಿ ಕಠೋರ ಪರಿಸ್ಥಿತಿಗಳನ್ನು ಎದುರಿಸುವಂತಹ ಜೀವಿಗಳು ಮಾತ್ರ ಇರುತ್ತವೆ.

೩.೬ ಜೀವಿ ಸಮುದಾಯಗಳ ವೈಶಿಷ್ಟ್ಯ (ಬಯೋಮ್‌ಗಳು)

ಯಾವುದೇ ಆವಾಸದಲ್ಲಿ ಒಟ್ಟಾಗಿ ಸೇರಿ ಬದುಕುವ ಪ್ರಾಣಿ, ಸಸ್ಯಗಳ ಗುಂಪಿಗೆ ಜೀವಿ ಸಮುದಾಯ ಎನ್ನುತ್ತಾರೆ ಎಂಬುದನ್ನು ನಾವು ಈಗಾಗಲೇ ತಿಳಿದಿದ್ದೇವೆ. ಜೀವಿ ಸಮುದಾಯದಲ್ಲಿರುವ ಜೀವಿಗಳ ವೈವಿಧ್ಯವನ್ನು ನಿರ್ಧರಿಸುವ ಅಂಶಗಳಲ್ಲಿ ಅಲ್ಲಿನ ವಾಯುಗುಣ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ನಮ್ಮ ಭೂಮಿಯಲ್ಲಿ ಭೂಮಧ್ಯ

ರೇಖೆಯಿಂದ ಧ್ರುವ ಪ್ರದೇಶದತ್ತ ಚಲಿಸಿದಂತೆ ವಾಯುಗುಣ ಬದಲಾಗುತ್ತಾ ಹೋಗುತ್ತದೆ. ತಾಪಮಾನ, ಮಳೆಯ ಪ್ರಮಾಣ, ಸೂರ್ಯನ ಬೆಳಕು, ಮಣ್ಣಿನ ಗುಣಲಕ್ಷಣಗಳಲ್ಲಿ ಎದ್ದು ಕಾಣುವಂತಹ ವ್ಯತ್ಯಾಸಗಳು ಗೋಚರಿಸುತ್ತವೆ. ಇಂತಹ ವಾಯುಗುಣದ ಬದಲಾವಣೆಗಳಿಗನುಸಾರವಾಗಿ ಸಸ್ಯ ಪ್ರಭೇದಗಳು ಬದಲಾಗುತ್ತವೆ. ಭೂಮಧ್ಯ ರೇಖೆಯ ಬಳಿ ಕಂಡುಬರುವ ಸಸ್ಯ, ಪ್ರಾಣಿ ಪ್ರಭೇದಗಳು ಧ್ರುವ ಪ್ರದೇಶದಲ್ಲಿ ಗೋಚರಿಸುವುದಿಲ್ಲ. ಈ ರೀತಿ ವಾಯುಗುಣಕ್ಕನುಸಾರವಾಗಿ ಆಯಾ ಪ್ರದೇಶದಲ್ಲಿ ಕಂಡುಬರುವ ನಿರ್ದಿಷ್ಟ ಸಸ್ಯಜೀವಿ, ಪ್ರಾಣಿಗಳ ಸಮುದಾಯವೇ ಬಯೋಮ್ ಅಥವಾ ಒಂದೇ ರೀತಿಯ ವಾಯುಗುಣ ಪರಿಸ್ಥಿತಿಯಿರುವ ಬೃಹತ್ ಪರಿಸರ ವ್ಯವಸ್ಥೆಯೇ 'ಬಯೋಮ್' ಎನ್ನಬಹುದು. ಬಯೋಮ್ ಬಹಳ ವಿಶಾಲವಾದ ಪ್ರದೇಶವಾಗಿದ್ದು ಎರಡು ಬಯೋಮ್‌ಗಳ ನಡುವೆ ಸಸ್ಯಜೀವಿ, ಪ್ರಾಣಿಜೀವಿಗಳಿಗೆ ಸಂಬಂಧಿಸಿದಂತೆ ಸ್ಪಷ್ಟವಾದ ವ್ಯತ್ಯಾಸವಿರುತ್ತದೆ. ಒಂದು ಬಯೋಮ್‌ನಲ್ಲಿ ಅನೇಕ ಪರಿಸರ ವ್ಯವಸ್ಥೆಗಳಿರುತ್ತವೆ.[೪]

೩.೭ ಸಮಗ್ರ ಪರಿಸರದ ಪ್ರಕಾರಗಳು :

೩.೭.೧ ಭೌತಿಕ ಪರಿಸರ:

ಇದನ್ನು ನೈಸರ್ಗಿಕ ಪರಿಸರ, ಭೌತಪರಿಸರ, ಭೌಗೋಳಿಕ ಪರಿಸರ, ಪ್ರಕೃತಿದತ್ತ ಪರಿಸರ ಎಂದು ಕರೆಯುತ್ತೇವೆ. ಇದು ನೆಲ, ಜಲ, ಗಾಳಿ, ಹಳ್ಳ, ಕೊಳ್ಳ, ನದಿ, ಸಮುದ್ರ, ಸಾಗರ, ಖನಿಜ ಸಂಪತ್ತು, ಬೆಟ್ಟ, ಗುಡ್ಡ, ಪರ್ವತ, ಗ್ರಹ, ನಕ್ಷತ್ರ ಮೊದಲಾದವುಗಳನ್ನು ಒಳಗೊಂಡಿರುತ್ತದೆ. ಇದನ್ನು ಭೂಗೋಳ, ಜಲಗೋಳ ಮತ್ತು ವಾಯುಗೋಳ ಎಂಬುದಾಗಿ ವಿಂಗಡಿಸಬಹುದಾಗಿದೆ. ಇವೆಲ್ಲವೂ ಸಹ ಮಾನವನ ಜೀವನದ ವಿವಿಧ ಕ್ಷೇತ್ರಗಳ ಮೇಲೆ ತಮ್ಮದೇ ಆದ ವಿಶಿಷ್ಟ ಬಗೆಯ ಪ್ರಭಾವವನ್ನು ಬೀರುತ್ತವೆ. ಇವು ಮಾನವನ ಜನಸಂಖ್ಯೆ, ಸಾಂಸ್ಕೃತಿಕ ಚಟುವಟಿಕೆಗಳು, ಆರೋಗ್ಯ, ಕಲೆ, ಸಾಹಿತ್ಯ, ಶಿಕ್ಷಣ, ಶ್ರಮವಿಭಜನೆ, ಮೊದಲಾದವುಗಳ ಮೇಲೆ ಗಮನಾರ್ಹ ರೀತಿಯ ಪ್ರಭಾವ ಬೀರುವುದನ್ನು ನಾವು ಕಾಣಬಹುದು.

ಭೌತಿಕ ಪರಿಸ್ಥಿತಿಗಳು ಅರ್ಥಾತ್ ಭೌಗೋಳಿಕ ಪರಿಸ್ಥಿತಿಗಳು ವ್ಯಕ್ತಿ ಮತ್ತು ಸಮೂಹಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರುತ್ತವೆ. ಉದಾಹರಣೆಗೆ ಬೆಟ್ಟಗುಡ್ಡಗಳಲ್ಲಿ ವಾಸಮಾಡುವ ಜನರ ಪರಿಸರವೇ ಬೇರೆಯಾಗಿರುತ್ತದೆ. ಅವರ ಆಹಾರ–ವಿಹಾರ, ಉಡುಗೆ–ತೊಡುಗೆ, ರೀತಿ–ನೀತಿ, ಭಾಷೆ ಮೊದಲಾದವು ಇತರ ಪ್ರದೇಶಗಳಲ್ಲಿ ವಾಸಿಸುವ ಜನರ ಈ ಬಗೆಯ ಅಂಶಗಳಿಂದ ಭಿನ್ನವಾಗಿರುತ್ತದೆ. ಮಾನವನು ಪ್ರಪ್ರಥಮವಾಗಿ ಕಾಡಿನಲ್ಲಿ ವಾಸಮಾಡತೊಡಗಿದಾಗ ಅವನಿಗೆ ಆಹಾರದ ಕೊರತೆ ಕಂಡುಬಂದ ಸಂದರ್ಭದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆಮಾರಿಗಳಾಗಿ ಅಲೆದು, ಆಹಾರವನ್ನು ಪಡೆಯುತ್ತಿದ್ದ ಎಂಬುದುದನ್ನು ತಿಳಿದಿದ್ದೇವೆ. ಕಾಲಗತಿಯಲ್ಲಿ ಎಲ್ಲಿ ಆಹಾರವನ್ನು ಬೆಳೆಯಲು ಫಲವತ್ತಾದ ಭೂಭಾಗ, ನೀರಿನ ಅನುಕೂಲ, ಹಿತಕರವಾದ ಹವಾಮಾನ ದೊರೆಯುತ್ತಿತ್ತೋ, ಅಲ್ಲಿ ನೆಲೆಸುವಿಕೆ ಪ್ರಾರಂಭಗೊಳ್ಳುತ್ತಾ ಹೋಗುತ್ತದೆ. ಬಹುತೇಕ ಮಾನವರ ಗುಂಪು ದೊಡ್ಡ ದೊಡ್ಡ

ನದಿಗಳ ದಡದಲ್ಲಿ ವಾಸಿಸುತ್ತಿದ್ದರಿಂದಾಗಿ, ನಾಗರೀಕತೆಗಳು ಬೆಳೆದು, ತದನಂತರದಲ್ಲಿ ಜನಸಂಖ್ಯೆ ಆ ನಿರ್ದಿಷ್ಟ ಪ್ರದೇಶದಲ್ಲಿ ಅಧಿಕಗೊಳ್ಳುತ್ತಿತ್ತು ಎಂಬುದನ್ನು ಇತಿಹಾಸದಿಂದ ಅರಿತಿದ್ದೇವೆ.

ಮರುಭೂಮಿ, ಸಮುದ್ರತೀರ ಪ್ರದೇಶದಂತಹ ಭೌಗೋಳಿಕ ಪರಿಸರದ ರೀತಿನೀತಿಗಳು ಸಹ ವಿಶಿಷ್ಟವೇ ಆಗಿರುತ್ತವೆ. ಇವುಗಳೊಂದಿಗೆ ಭೂಪದರದಲ್ಲಿನ ಖನಿಜ ನಿಕ್ಷೇಪಗಳ ಸಂಶೋಧನೆ ಆಧರಿಸಿ, ಕೈಗಾರಿಕೆ ವಲಯಗಳು ಅಲ್ಲಲ್ಲಿ ಬೆಳೆಯತೊಡಗುತ್ತವೆ. ಜನಸಂಖ್ಯೆಯ ಒತ್ತಡವೂ ಹೆಚ್ಚಾಗುತ್ತದೆ. ಜನಸಾಂದ್ರತೆಯೂ ಅಧಿಕಗೊಳ್ಳುತ್ತದೆ. ಹೀಗೆ ಮಾನವನ ಬದುಕಿಗೂ ಅವನು ವಾಸಿಸುತ್ತಿರುವ ಸ್ಥಳದ ಭೌಗೋಳಿಕ ಪರಿಸರಕ್ಕೂ ಬಹಳ ಸಂಬಂಧವಿರುವುದನ್ನು ವ್ಯಾಪಕವಾಗಿ ಗುರುತಿಸಬಹುದಾಗಿದೆ.

೩.೭.೨ ಜೈವಿಕ ಪರಿಸರ

ಇದು ಮಾನವ, ಪ್ರಾಣಿ, ಪಕ್ಷಿ, ಸಸ್ಯ ಸಂಕುಲಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ಕೋಟ್ಯಾನುಕೋಟಿ ಪ್ರಬೇಧಗಳ ಜೀವ ಜಗತ್ತು ಸೇರಿರುತ್ತದೆ. ವಿವಿಧ ಬಗೆಯ ಜೀವ ರಾಶಿಗಳಿಗೆ ಪೂರಕವಾದ ಹಾಗೂ ಪೋಷಕವಾದ ಪರಿಸರಗಳು ಈ ಭಾಗದಲ್ಲಿ ಗುರುತಿಸಲ್ಪಟ್ಟಿರುತ್ತವೆ. ಉಷ್ಣವಲಯ, ಶೀತವಲಯ, ಮತ್ತು ಸಮಶೀತೋಷ್ಣ ವಲಯಗಳು ಇದರ ಮೇಲೆ ತಮ್ಮದೇ ಆದ ರೀತಿಯ ವಿಶಿಷ್ಟ ಪ್ರಭಾವವನ್ನು ಬೀರುತ್ತದೆ. ಇದರ ಮೇಲೆ ದೇಶ, ಕಾಲ ಮತ್ತು ಪರಿಸ್ಥಿತಿಗಳ ಪ್ರಭಾವವಿರುತ್ತದೆ, ಭೂಭಾಗದ ಮೇಲಿರುವ ಅರಣ್ಯಗಳ ಪ್ರಮಾಣ, ಅವುಗಳ ಅಭಿವೃದ್ಧಿ, ಅವುಗಳ ನಾಶ, ಮಾಲಿನ್ಯಕಾರಕ ಅಂಶ ಮೊದಲಾದವುಗಳು ತಮ್ಮದೇ ಆದ ಪ್ರಭಾವವನ್ನು ಬೀರುತ್ತವೆ. ಈ ಪರಿಸರವನ್ನು ಪ್ರಭಾವಿಸುವಲ್ಲಿ ಅಲ್ಲಲ್ಲಿ ನಿರ್ಮಾಣಗೊಳ್ಳುವ ಬೃಹತ್ ಪ್ರಮಾಣದ ವಿವಿಧ ಯೋಜನೆಗಳು ಸಹ ಇವುಗಳೊಂದಿಗೆ ಸೇರಿಕೊಂಡಿವೆ.

೩.೭.೩ ಆರ್ಥಿಕ ಪರಿಸರ

ಇದು ಮಾನವನ ಒಟ್ಟಾರೆ ಆರ್ಥಿಕ ಕ್ಷೇತ್ರವನ್ನು ಒಳಗೊಂಡಿರುತ್ತದೆ. ಇದು ಮಾನವನ ಒಟ್ಟಾರೆ ಉತ್ಪಾದನೆ, ವಿತರಣೆ, ವಿನಿಮಯ, ಅನುಭೋಗ, ಅಭಿವೃದ್ಧಿ ಅಂಶಗಳು ಮುಂತಾದ ಆರ್ಥಿಕ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ಆದಿವಾಸಿ ಜೀವನ, ಗ್ರಾಮೀಣ ಜೀವನ ಮತ್ತು ನಗರ ಜೀವನ ಮತ್ತು ಕಾರ್ಪೋರೇಟ್ ಸಂಸ್ಕೃತಿಯ ಜೀವನ ಕ್ರಮಗಳು ವಿಶಿಷ್ಟ ರೀತಿಯಲ್ಲಿ ಪ್ರಭಾವಿತವಾಗುತ್ತವೆ. ಆಂತರಿಕ ವಲಸೆ ಮತ್ತು ಸಾಮಾನ್ಯ ವಲಸೆಗಳು ಕಂಡುಬರುತ್ತವೆ. ದುಸ್ಥಿತಿ, ಸುಸ್ಥಿತಿಗಳು ಗೋಚರಿಸುತ್ತವೆ.

೩.೭.೪ ಸಾಮಾಜಿಕ ಪರಿಸರ

ಇದು ಮಾನವನ ಸಾಮಾಜಿಕ ಕ್ಷೇತ್ರವನ್ನು ಒಳಗೊಂಡಿರುತ್ತದೆ. ಮಾನವನು ಒಂಟಿಯಾಗಿ ಬಾಳಲಾರ. ಅವನು ಸಾಮಾಜಿಕ ಜೀವಿ. ಅವನದು ಸಮೂಹ ಜೀವನ. ಮಾನವನಿಲ್ಲದೆ ಸಮಾಜವಿಲ್ಲ. ಸಮಾಜವಿಲ್ಲದೆ ಮಾನವನಿಲ್ಲ. ಸಮಾಜ ಜೀವಿಯಾದ ಮಾನವನು ಪ್ರತ್ಯೇಕ್ಷವಾಗಿ ಹಾಗೂ ಪರೋಕ್ಷವಾಗಿ ತಾನೇ ನಿರ್ಮಿಸಿಕೊಂಡ ಸಂಘ ಸಂಸ್ಥೆಗಳನ್ನೊಳಗೊಂಡ ವಿಶಿಷ್ಟ

ಜಾಲದ ಒಳಗೆ ಬದುಕುತ್ತಿರುತ್ತಾನೆ. ಇಡೀ ಸಮಾಜವೇ ಸಾಮಾಜಿಕ ಬಾಂಧವ್ಯಗಳ ಬಲೆಯೋಪಾದಿಯಲ್ಲಿ ಅಸ್ತಿತ್ವದಲ್ಲಿರುತ್ತದೆ. ಆ ಬಲೆಯ ಸ್ವರೂಪವನ್ನು ಅಷ್ಟು ಸುಲಭವಾಗಿ ಬಣ್ಣಿಸಲಾಗುವುದಿಲ್ಲ ಹಾಗೂ ಅದನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ.

ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯ ಜೊತೆಗೆ ಹೊಂದಿರಬಹುದಾದ ಸಂಬಂಧದ ಸ್ವರೂಪ ಒಂದು ರೀತಿಯಲ್ಲಿದ್ದರೆ, ಅದೇ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಜೊತೆಗೆ ಹೊಂದಿರಬಹುದಾದ ಸಂಬಂಧದ ಸ್ವರೂಪವೂ ಇನ್ನೊಂದು ರೀತಿಯಲ್ಲಿರುತ್ತದೆ. ವ್ಯಕ್ತಿಯು ತಂದೆ, ತಾಯಿ, ಮಗ, ಮಗಳು, ಪತಿ, ಪತ್ನಿ, ಸಹೋದರ, ಸಹೋದರಿ, ವ್ಯಾಪಾರಿ, ಗಿರಾಕಿ, ಉಮೇದುದಾರ, ಮತದಾರ ಮುಂತಾದ ವಿವಿಧ ಬಗೆಯ ಸ್ಥಾನದಲ್ಲಿದ್ದು ನಿರ್ವಹಣೆ ಮಾಡುವ ಪಾತ್ರವೂ ಸಹ ವಿಶಿಷ್ಟ ರೀತಿಯಲ್ಲಿರುತ್ತದೆ.

ಸಮಾಜದಲ್ಲಿನ ಆಚಾರ ವಿಚಾರಗಳು, ಲೋಕಾಚಾರಗಳು, ನೈತಿಕ ನಿಯಮಗಳು, ಧರ್ಮ, ಕಲೆ, ಸಾಹಿತ್ಯ, ಶಿಕ್ಷಣ, ಕಾನೂನು ಮೊದಲಾದವು ತಮ್ಮದೇ ಆದ ರೀತಿಯಲ್ಲಿ ಪ್ರಭಾವ ಬೀರುತ್ತಿರುತ್ತವೆ. ಈ ಅಂಶಗಳೊಂದಿಗೆ ಭಾಷೆಯು ಪ್ರಮುಖವಾಗಿ ಗುರುತಿಸಲ್ಪಡುತ್ತದೆ. ಜನರು ತಮ್ಮ ಸಾಮಾಜಿಕ ಒಡನಾಟದಲ್ಲಿ ಬಳಕೆಮಾಡುವ ಸಾಧನ ಸಾಮಗ್ರಿಗಳು ಬಹಳವಾಗಿ ಪ್ರಭಾವ ಬೀರುತ್ತಿರುತ್ತವೆ. ಮಾನವನ ಸಾಮಾಜಿಕ ಪರಿಸರವು ವಿಶಿಷ್ಟ ಸ್ವರೂಪದ್ದಾಗಿರುತ್ತದೆ. ಅದು ಪರಿಸರದ ಇತರ ಪ್ರಕಾರಗಳಿಂದಲೂ ಪ್ರಭಾವ ಬೀರಲ್ಪಡುತ್ತದೆ. ಜೊತೆಗೆ ಅದು ಪರಿಸರದ ಇತರ ಪ್ರಕಾರಗಳ ಮೇಲೂ ಪ್ರಭಾವ ಬೀರುತ್ತಿರುತ್ತದೆ.

ನಮ್ಮ ಸುತ್ತಮುತ್ತಲೂ ಇರುವ ನಿರ್ಜೀವ ಪದಾರ್ಥಗಳಾದ ನೆಲ, ನೀರು, ಗಾಳಿ, ಬೆಳಕು, ಶಾಖ, ಖನಿಜ, ಹವೆ, ಮೊದಲಾದವು ಹಾಗೂ ಸಜೀವಿಗಳೆನಿಸಿರುವ ಸೂಕ್ಷ್ಮಾಣು ಜೀವಿಗಳು, ಗಿಡ-ಮರಗಳು, ಪ್ರಾಣಿ-ಪಕ್ಷಿಗಳುಮತ್ತು ಮಾನವ ಸಮೂಹವೆಲ್ಲವೂ ಪರಿಸರಕ್ಕೆ ಸೇರಿರುವವು. ನಿರ್ಜೀವ ಪದಾರ್ಥಗಳಿಂದಾದುದನ್ನು ಜೈವಿಕಪರಿಸರ ಎನ್ನುತ್ತೇವೆ. ಭೌತ ಪರಿಸರವೂ ವೈವಿಧ್ಯತೆಯಿಂದ ಕೂಡಿದೆ. ಆದರೆ ಜೀವಿಗಳಲ್ಲಿ, ಜೈವಿಕ ಪರಿಸರದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದ ವೈವಿಧ್ಯತೆ ಕಂಡು ಬರುತ್ತದೆ. ಕಣ್ಣಿಗೆ ಕಾಣದ ಬ್ಯಾಕ್ಟೀರಿಯಾ, ಬರಿಯ ಕಣ್ಣಿಗೆ ಕಾಣುವ ಇರುವೆಗಳಿಂದ ಹಿಡಿದು ಬೃಹತ್ ಗಾತ್ರದ ಆನೆ, ತಿಮಿಂಗಲಗಳವರೆಗೂ ಅದರ ವೈವಿಧ್ಯತೆ ಗೋಚರವಾಗುತ್ತದೆ. ಪ್ರತಿಯೊಂದು ಪದಾರ್ಥ ಮತ್ತು ಜೀವಿಗಳ ನಡುವೆ ಅಷ್ಟು ಸುಲಭವಾಗಿ ಅರ್ಥಮಾಡಿಕೊಳ್ಳಲಾಗದಷ್ಟು ಪ್ರತ್ಯಕ್ಷ ಹಾಗೂ ಪರೋಕ್ಷ ಸಂಬಂಧಗಳು ಸಹ ವ್ಯಾಪಕವಾಗಿರುವುವು.

೩.೮ ಪರಿಸರವಾದ ಮತ್ತು ಪರಿಸರ ವಿಜ್ಞಾನ:

ಪರಿಸರವಾದವು ಹಸಿರು ಸಿದ್ಧಾಂತ ಮತ್ತು ರಾಜಕೀಯ ಪರಿಸರೀಯತೆ ಮತ್ತು ಪ್ರಕೃತಿ-ಸಂಬಂಧಿತ ಅಂಶಗಳ ಬಗ್ಗೆ ಹೆಚ್ಚು ಗಮನಹರಿಸುತ್ತದೆಯಾದರೂ, ಪರಿಸರ ವಿಜ್ಞಾನವು ಸಾಮಾಜಿಕ ಪರಿಸರ ಮತ್ತು ಪರಿಸರವಾದದ ಸಿದ್ಧಾಂತವನ್ನು ಸಂಯೋಜಿಸುತ್ತದೆ. ಭಾರತದಂತಹ ಅಭಿವೃದ್ಧಿ ಹೊಂದಿದಂತಹ ರಾಷ್ಟ್ರಗಳಿಗೆ ಹೋಲಿಸಿದರೆ ಪರಿಸರಶಾಸ್ತ್ರವು ಖಂಡಾಂತರ ಯುರೋಪಿಯನ್ ಭಾಷೆಗಳಲ್ಲಿ ಸಾಮಾನ್ಯವಾಗಿ ಬಳಸಲ್ಪಡುತ್ತದೆ.

ಪರಿಸರೀಯತೆಯು (Environmentalism) ನೈಸರ್ಗಿಕ ಪರಿಸರದ ಸಂರಕ್ಷಣೆ, ಪುನಃಸ್ಥಾಪನೆ ಮತ್ತು ಸುಧಾರಣೆಗೆ ಪ್ರತಿಪಾದಿಸುತ್ತದೆ ಹಾಗೂ ಮಾಲಿನ್ಯವನ್ನು ನಿಯಂತ್ರಿಸುವ ಅಥವಾ ಸಸ್ಯ ಮತ್ತು ಪ್ರಾಣಿ ವೈವಿಧ್ಯತೆಯನ್ನು ರಕ್ಷಿಸಲು ಒಂದು ಚಳುವಳಿಯಾಗಿಯೂ ಇದನ್ನು ಉಲ್ಲೇಖಿಸಬಹುದು. ಈ ಕಾರಣಕ್ಕಾಗಿ ಭೂಮಿ ನೀತಿ, ಪರಿಸರ ನೈತಿಕತೆ, ಜೀವವೈವಿಧ್ಯ ಇವು ಪರಿಸರ ವಿಜ್ಞಾನ ಸಿದ್ಧಾಂತದ ಪ್ರಮುಖ ಅಂಶಗಳಾಗಿವೆ. ಪರಿಸರವಾದವು ವಿವಿಧ ನೈಸರ್ಗಿಕ ವ್ಯವಸ್ಥೆ ಮತ್ತು ಮಾನವ ಸಂಬಂಧಗಳ ನಡುವೆ ಸಮತೋಲನವನ್ನು ಏರ್ಪಡಿಸುವ ಒಂದು ಪ್ರಯತ್ನವಾಗಿದ್ದು, ಪರಿಸರೀಯತೆಯ ವಾದವು ನೈಸರ್ಗಿಕ ವಾತಾವರಣ ಬದಲಾವಣೆಗೆ ಮಾನವನ ಕೊಡುಗೆಯನ್ನು ಹೆಚ್ಚಿಸುವಂತೆ ಪರಿಸರವಾದವನ್ನು ಚಿತ್ರಿಸುತ್ತದೆ ಮತ್ತು ಮಾನವ ಪ್ರಗತಿಯನ್ನು ಹಾಗೂ ಪರಿಸರ ಹೊರತಾದ ಅಭಿವೃದ್ಧಿ ಚಿಂತನೆಯನ್ನು ವಿರೋಧಿಸುತ್ತದೆ. ಪರಿಸರೀಯತೆಯು ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಪರಿಸರ ವ್ಯವಸ್ಥೆಗಳನ್ನು ರಕ್ಷಿಸಲು ಸಕ್ರಿಯವಾಗಿ ತೊಡಗಿಕೊಳ್ಳುವಂತೆ ಪ್ರೇರೆಪಿಸುತ್ತದೆ. ಪರಿಸರೀಯತೆಯು ಭೂಮಿಯ ಮೇಲೆ ಜೀವನದ ದೀರ್ಘಾವಧಿ ಉಳಿವಿಗೆ ಕಾರಣವಾದ ಭೂಗ್ರಹದ ಬಗ್ಗೆ ಹೆಚ್ಚು ಕಾಳಜಿವಹಿಸುವ ಮಾರ್ಗವಾಗಿ ಕಂಡುಬರುತ್ತದೆ. ಭೂಗ್ರಹದ ಪರಿಸರದ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗಿರುವ ಪರಿಹಾರವನ್ನು ಅರ್ಥೈಸುತ್ತದೆ.

"ಭಾರತದ ಸಂದರ್ಭದಲ್ಲಿ ಪರಿಸರವಾದವೆಂದರೆ ಹೊಟ್ಟೆತುಂಬಿದವರ ಸೂಕ್ಷ್ಮತೆ, ನಿಜ. ಅದೇ ಹೊತ್ತಿನಲ್ಲಿ ಅದು ಸಂಪನ್ಮೂಲಗಳ ಅಸಮಾನ ಹಂಚಿಕೆಯ ಚರಿತ್ರೆ ಹಾಗೂ ವಾಸ್ತವ. ಇದು ಅನ್ಯಾಯಕ್ಕೊಳಗಾದ ಜನರಿಗೆ ಅರ್ಥವಾಗದಂತೆ ಮಾಡಿರುವುದೇ ಇಂದಿನ ಪರಿಸರವಾದ." ಇದಕ್ಕೆ ಕಾರಣ ಇಂದಿನ ನಮ್ಮ ಈವರೆಗಿನ ಚಳುವಳಿಗಳೇ ಆಗಿವೆ. ಇದು ಶ್ರೀಮಂತರ ತೆವಲು, ಸೂಕ್ಷ್ಮತೆ, ಪ್ರತ್ಯೇಕ ಜ್ಞಾನಶಾಖೆ ಎಂದು ಉಳಿದ ಚಳುವಳಿಗಳು ಅದರಿಂದ ದೂರ ಸರಿದಂತೆಲ್ಲಾ ಓದು, ವಿಜ್ಞಾನ, ಸುಲಭಗಳಿಕೆಯ ದಾರಿಗಳನ್ನು ಮನಾಪಲಿ ಮಾಡಿಕೊಂಡ ವರ್ಗ ಆನಂದವಾಗಿ ಅದನ್ನು ಆಕ್ರಮಿಸಿಕೊಳ್ಳುತ್ತಾ ಹೋಯಿತು. ಈ ಮೂಲಕ ದೇಶದ ಎಂಬತ್ತು ಭಾಗ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಹಿಡಿತ ಕೇವಲ ಶೆಕಡಾ ಇಪ್ಪತ್ತು ಜನರ ಕೈ ಸೇರಲು ಕಾರಣವಾಯಿತು.[೫]

೩.೯ ಚಾರ್ಲ್ಸ್ ರಾಬರ್ಟ್ ಡಾರ್ವಿನ್: (ಫೆಬ್ರುವರಿ ೧೨.೧೮೦೯–ಏಪ್ರಿಲ್ ೧೯.೧೮೮೨)

ಈತ ಇಂಗ್ಲೆಂಡ್ ದೇಶದ ಪ್ರಸಿದ್ಧ ಜೀವವಿಜ್ಞಾನಿ. ಈತನು ೧೮೫೮ ರಲ್ಲಿ ಮಂಡಿಸಿದ ಜೀವ ವಿಕಾಸವಾದವು ಆಧುನಿಕ ಜೀವವಿಜ್ಞಾನದ ಬುನಾದಿಯಾಗಿದೆ. ಎಡಿನೆಬ್ರೊ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ನಡೆಸಿದ ಇವರು ೧೮೩೧ ರಿಂದ ೧೮೩೬ರ ಮಧ್ಯದಲ್ಲಿ ಹೆಚ್.ಎಂ.ಎಸ್. ಬೀಗಲ್ ಹಡಗಿನಲ್ಲಿ ಭೂರಚನಶಾಸ್ತ್ರ ವಿಜ್ಞಾನಿಯಾಗಿ ಪ್ರವಾಸ ಕೈಗೊಂಡಾಗ ನಡೆಸಿದ ಸಂಶೋಧನೆಯಿಂದ ಮೊದಲು ಪ್ರಖ್ಯಾತರಾದರು. ಅದೇ ಸಮಯದಲ್ಲಿ ಅನೇಕ ಜೀವ ಪಳೆಯುಳಿಕೆಗಳನ್ನು ಸಂಗ್ರಹಿಸಿ, ಅನೇಕ ಜೀವವಿಧಗಳನ್ನು ವೀಕ್ಷಿಸಿದರು. ಇದೆಲ್ಲವನ್ನೂ ವಿವರಿಸಲು 'ನೈಸರ್ಗಿಕ ಆಯ್ಕೆಯ ಜೀವ ವಿಕಾಸವಾದ' ಸಿದ್ಧಾಂತವನ್ನು ೧೮೫೮ರಲ್ಲಿ ಮಂಡಿಸಿದರು. ೧೮೫೯ರಲ್ಲಿ ಈ ಸಿದ್ಧಾಂತವನ್ನು ವಿವರವಾಗಿ ಬಣ್ಣಿಸುವ 'ಆನ್ ದ ಆರಿಜಿನ್ ಆಫ್ ಸ್ಪೀಶೀಸ್' ಎಂಬ ಭವ್ಯಕೃತಿಯನ್ನು ಪ್ರಕಟಿಸಿದರು.

ಬೀಗಲ್ ಹಡಗಿನಲ್ಲಿ ಕೈಗೊಂಡ ಪ್ರವಾಸವು ಪ್ಲೈಮೌಥ್ ಬಂದರನ್ನು ೧೮೩೧ ಡಿಸೆಂಬರ್ ೨೭ ರಂದು ಬಿಟ್ಟು ಸುಮಾರು ೫ ವರ್ಷಗಳ ನಂತರ ಅಂದರೆ ೧೮೩೬ರ ಅಕ್ಟೋಬರ್ ೨ ರಂದು ಹಿಂದಿರುಗಿತು. ಇಡೀ ಭೂಮಿಯನ್ನು ಸುತ್ತುವರೆದ ಈ ಪ್ರವಾಸದಲ್ಲಿ ಡಾರ್ವಿನ್ ಹೋದ ಕಡೆಗಳಲ್ಲೆಲ್ಲಾ ಅಲ್ಲಿನ ಭೂರಚನೆ ಮತ್ತು ಜೀವವಿಧಗಳನ್ನು ಅಧ್ಯಯನ ಮಾಡಿದರು. ಸಮುದ್ರಯಾನದಿಂದ ಅಸ್ವಸ್ಥರಾಗಿದ್ದರೂ ಈ ಅಧ್ಯಯನಗಳನ್ನು ಬಹಳ ಎಚ್ಚರಿಕೆಯಿಂದ ದಾಖಲಿಸಿದರು. ನೀರಿನಲ್ಲಿ ವಾಸಿಸುವ ಬೆನ್ನೆಲುಬುಳ್ಳದ ಪ್ರಾಣಿಗಳ ಬಗ್ಗೆ ಅತ್ಯಂತ ಹೆಚ್ಚು ಮಾಹಿತಿ ಸಂಗ್ರಹಿಸಿದರು. ಭೂರಚನೆಯ ಅಧ್ಯಯನದಲ್ಲಿ ಚಾರ್ಲ್ಸ್ ಲೈಲ್ ಅವರ "ಪ್ರಿನ್ಸಿಪಲ್ಸ್ ಆಫ್ ಜಿಯಾಲಜಿ" ಪುಸ್ತಕವನ್ನು ಹೆಚ್ಚಾಗಿ ಉಪಯೋಗಿಸಿದರು.

ಪೆಟಗೋನಿಯ ಪ್ರದೇಶದಲ್ಲಿ ಇದ್ದಾಗ ಇವರು ಅಳಿದುಹೋಗಿರುವ ಸಸ್ತನಿ ಪ್ರಾಣಿಗಳ ಒಂದು ದೊಡ್ಡ ಜೀವಪಳೆಯುಳಿಕೆ ಪ್ರದೇಶವನ್ನು ಕಂಡುಕೊಂಡರು. ಇಲ್ಲಿನ ಸಂಶೋಧನೆಗಳಿಂದ ಮತ್ತು ದಕ್ಷಿಣ ಅಮೇರಿಕದಲ್ಲಿ ಇವರು ಕಂಡ ಜೀವವಿಧಗಳ ಅಧ್ಯಯನದಿಂದ ಲೈಲ್ ಅವರು ಪ್ರಸ್ತಾಪಿಸಿದ್ದ ಜೀವಿಗಳ ಉಗಮದ ಸಿದ್ಧಾಂತದಲ್ಲಿನ ದೋಶಗಳನ್ನು ಕಾಣತೊಡಗಿದರು. ಆದರೆ ಇವರ ಮೇಲೆ ಅತ್ಯಂತ ಪ್ರಭಾವ ಬೀರಿದ ಪ್ರದೇಶವೆಂದರೆ ಗ್ಯಾಲಾಪಗೋಸ್ ದ್ವೀಪಗಳು. ಭೂರಚನಶಾಸ್ತ್ರದ ಮಾಪನದ ಪ್ರಕಾರ ಇತ್ತೀಚೆಗೆ ಸೃಷ್ಟಿತವಾಗಿರುವ ಈ ದ್ವೀಪಗಳಲ್ಲಿ ಅನೇಕ ಜೀವವಿಧಗಳನ್ನು ಡಾರ್ವಿನ್ ಕಂಡರು. ಈ ಜೀವವಿಧಗಳು ಪ್ರಪಂಚದ ಬೇರೆಲ್ಲೂ ಇಲ್ಲದಿದ್ದರಿಂದ, ಎಲ್ಲಾ ಜೀವವಿಧಗಳು ಒಮ್ಮೆಲೇ ಸೃಷ್ಟಿತವಾದವು ಎಂಬ ಸಿದ್ಧಾಂತದ ಬಗ್ಗೆ ತೀವ್ರ ಸಂಶಯ ಹೊಂದತೊಡಗಿದರು.

ಜೀವ ವಿಕಾಸವಾದದ ಮನವರಿಕೆ (The Evolution): ಡಾರ್ವಿನ್ ಅವರು ೧೮೩೬ರ ಅಕ್ಟೋಬರ್‌ನಲ್ಲಿ ಪ್ರವಾಸದಿಂದ ಹಿಂದಿರುಗಿದ ಹೊತ್ತಿಗೆ, ಇವರು ಹೆನ್ಸ್ಲೋ ಅವರಿಗೆ ಕಳುಹಿಸಿದ್ದ ಪತ್ರಗಳಿಂದ ಪ್ರಖ್ಯಾತರಾಗಿದ್ದರು. ತಂದೆಯವರ ಆರ್ಥಿಕ ಸಹಾಯದಿಂದ ಇವರು ಪ್ರವಾಸದ ವೇಳೆಯಲ್ಲಿ ಸಂಗ್ರಹಿಸಿದ್ದ ಜೀವಿಗಳನ್ನು ಮತ್ತು ಜೀವಪಳೆಯುಳಿಕೆಗಳನ್ನು ಗುರುತಿಸಿ ವರ್ಗೀಕರಣ ಮಾಡಿಸತೊಡಗಿದರು. ಜೀವರಚನಶಾಸ್ತ್ರ ತಜ್ಞರಾಗಿದ್ದ ರಿಚರ್ಡ್ ಒವೆನ್ ಇದರಲ್ಲಿ ಇವರಿಗೆ ಸಹಾಯ ಮಾಡಿದರು. ಪ್ರಮುಖವಾಗಿ ಇವರು ಗ್ಯಾಲಪಗೋಸ್ ದ್ವೀಪಗಳಲ್ಲಿ ಸಂಗ್ರಹಿಸಿದ್ದ ಪಕ್ಷಿಗಳು ಫಿಂಚ್ ಮತ್ತು ವ್ರೆನ್ ಕುಟುಂಬದ ೧೨ ವಿವಿಧ ಪ್ರಜಾತಿಗಳಿಗೆ ಸೇರಿರುವಂತಹವು ಎಂಬುದನ್ನು ಪಕ್ಷಿತಜ್ಞ ಗೊಲ್ಡ್ ಗುರುತಿಸಿದರು.

ಮಾರ್ಚ್ ಹೊತ್ತಿಗೆ ಡಾರ್ವಿನ್ ಲಂಡನ್ ನಗರಕ್ಕೆ ಸ್ಥಳಾಂತರಗೊಂಡರು. ಇಲ್ಲಿ ಚಾರ್ಲ್ಸ್ ಲೈಲ್ ಅವರು ಸೇರಿದ್ದ ಚಿಂತಕರ ಗುಂಪೊಂದನ್ನು ಸೇರಿದರು. ಅಲ್ಲಿ ಜೀವ ಪ್ರಜಾತಿಗಳ ಸೃಷ್ಟಿಯ ಬಗ್ಗೆ ಕೂಡ ಚಿಂತನೆ ನಡೆಯುತ್ತಿತ್ತು. ಆಗಿನ ಪ್ರಮುಖ ಚಿಂತಕರು ಎಲ್ಲಾ ಪ್ರಜಾತಿಗಳು ಒಮ್ಮೆಲೇ ಸೃಷ್ಟಿಹೊಂದಿದವು ಎಂಬ ವಾದವನ್ನು ನಂಬಿದ್ದರು. ಆದರೆ ಡಾರ್ವಿನ್ ತಮ್ಮ ಗ್ಯಾಲಪಗೋಸ್ ಪಕ್ಷಿಗಳ ವೈವಿಧ್ಯತೆಯ ಬಗ್ಗೆ ಯೋಚಿಸುತ್ತಾ, ಒಂದು ಪ್ರಜಾತಿ ಇತರ ಪ್ರಜಾತಿಗಳಾಗಿ ಪರಿವರ್ತನೆಗೊಳ್ಳಬಹುದೇನೊ ಎಂದು ಚಿಂತನೆ ಮಾಡತೊಡಗಿದರು. ಇದರ ಜೊತೆಗೆ ಇವರು ತಮ್ಮ ಪ್ರವಾಸದ ಬಗ್ಗೆ ಒಂದು ಪುಸ್ತಕವನ್ನು ಕೂಡ ಬರೆಯಲು ಪ್ರಾರಂಭಿಸಿದರು.

ನೈಸರ್ಗಿಕ ಆಯ್ಕೆಯ ಸಿದ್ಧಾಂತದ ಪ್ರಕಟಣೆ (Theory of Natural Selection): ಈ ಸಿದ್ಧಾಂತದ ಮೂಲ ಅಂಶವೇನೆಂದರೆ, ಪ್ರಕೃತಿಯು ತನಗೆ ಬೇಡದ ಹೆಚ್ಚಾಗಿ ಬದಲಾಗುತ್ತಿರುವ ನೈಸರ್ಗಿಕ ವಿಕೋಪಗಳನ್ನು ತಡೆದುಕೊಳ್ಳದೇ ಇರುವ ಜೀವಿಗಳನ್ನು ತೆಗೆದುಹಾಕುತ್ತದೆ. ಅಥವಾ ಆ ಜೀವಿಯು ತಂತಾನೆ ನಶಿಸುತ್ತದೆ. ನೈಸರ್ಗಿಕ ಆಯ್ಕೆಯ ಸಿದ್ಧಾಂತದ ಮೂಲ ಆಯಕಟ್ಟನ್ನು ಮನಸ್ಸಿನಲ್ಲಿ ಹೊಂದಿದ್ದೇನೆಂದು ಭಾವಿಸಿ, ಈ ಬಗ್ಗೆ ಹೆಚ್ಚು ಸಂಶೋಧನೆ ನಡೆಸತೊಡಗಿದರು. ಮುಂದಿನ ದಶಕದಲ್ಲಿ ತಮ್ಮ ಬೀಗಲ್ ಪ್ರವಾಸದ ವೈಜ್ಞಾನಿಕ ಫಲಿತಾಂಶಗಳನ್ನು ಪ್ರಕಟನೆ ಮಾಡುವಲ್ಲಿ ನಿರತರಾಗಿದ್ದರಿಂದ ತಮ್ಮ ಸಿದ್ಧಾಂತದ ಸಂಶೋಧನೆಯು ಹಿಂಬದಿಯಲ್ಲಿ ಉಳಿಯಿತು. ಮೂರು ವರ್ಷಗಳ ಕೆಲಸದ ನಂತರ ೧೮೪೨ರಲ್ಲಿ ಡಾರ್ವಿನ್ ಅವರು ಹವಳದ ಬಗ್ಗೆ ಒಂದು ದೊಡ್ಡ ಕೃತಿಯನ್ನು ಪ್ರಕಟಿಸಿದರು. ಕೆಲಸಗಳ ಒತ್ತಡದಿಂದ ವಿಶ್ರಾಂತಿ ಪಡೆಯಲು ಗ್ರಾಮಾಂತರ ಪ್ರದೇಶದಲ್ಲಿನ ತಮ್ಮ ಮನೆಯಾದ ಡೌನ್ ಹೌಸ್‌ಗೆ ತೆರಳಿದರು. ೧೮೪೪ರ ಜನವರಿಯಲ್ಲಿ ತಮ್ಮ ಸಿದ್ಧಾಂತದ ಬಗ್ಗೆ ಒಂದು ಕರಡು ಪ್ರತಿಯನ್ನು ರಚಿಸಿ, ಸಸ್ಯಶಾಸ್ತ್ರಜ್ಞ ಜೋಸೆಫ್ ಡಾಲ್ಟನ್ ಹೂಕರ್ ಅವರಿಗೆ ಇದರ ಬಗ್ಗೆ ತಿಳಿಸಿದರು. ಹೂಕರ್ ಇದರ ಬಗ್ಗೆ ಒಳ್ಳೆ ಅಭಿಪ್ರಾಯವನ್ನು ನೀಡಿದರು. ಜುಲೈ ಹೊತ್ತಿಗೆ ಈ ಕರಡು ಪ್ರತಿಯನ್ನು ೨೩೦ ಪುಟಗಳ ಪ್ರಬಂಧವಾಗಿ ಪರಿವರ್ತಿಸಿದ್ದರು.

೧೮೪೬ ರಲ್ಲಿ ಡಾರ್ವಿನ್ ತಮ್ಮ ಮೂರನೆಯ ಭೂರಚನಶಾಸ್ತ್ರದ ಬಗ್ಗೆಯ ಪುಸ್ತಕವನ್ನು ರಚಿಸಿದರು. ೧೮೪೭ ರಲ್ಲಿ ಹೂಕರ್ ಅವರಿಗೆ ತಮ್ಮ ಪ್ರಬಂಧವನ್ನು ಕಳುಹಿಸಿದರು ಮತ್ತು ಅವರಿಂದ ಕ್ರಿಯಾತ್ಮಕ ಪ್ರತ್ಯುತ್ತರಗಳನ್ನು ಪಡೆದರು. ೧೮೫೬ ರಲ್ಲಿ ಲೈಲ್ ಅವರು ಆಲ್ಫ್ರೆಡ್ ರಸೆಲ್ ವಾಲೇಸ್ ಅವರ ಒಂದು ಲೇಖನವನ್ನು ಓದಿದರು. ಅದರಲ್ಲಿನ ವಿಚಾರಗಳು ಡಾರ್ವಿನ್ ಅವರ ಸಿದ್ಧಾಂತಗಳನ್ನು ಹೋಲುವುದನ್ನು ನೋಡಿ, ಡಾರ್ವಿನ್ ಅವರಿಗೆ ತಮ್ಮ ವಾದವನ್ನು ಮೊದಲು ಪ್ರಕಟಿಸಲು ಎಚ್ಚರಿಸಿದರು. ಆದರೆ ಡಾರ್ವಿನ್ ಇದರ ಬಗ್ಗೆ ಒಂದು ಚಿಕ್ಕ ಲೇಖನವನ್ನು ರಚಿಸಿದರೂ, ಮುಖ್ಯವಾಗಿ ಇದರ ಬಗ್ಗೆ ದೊಡ್ಡ ಪುಸ್ತಕವನ್ನು ಬರೆಯುವುದರಲ್ಲಿ ಹೆಚ್ಚು ಮಗ್ನರಾಗಿದ್ದರು. ೧೮೫೮ರ ಜೂನ್ ೧೮ ರಂದು ವಾಲೇಸ್ ಅವರಿಂದ ತಮ್ಮ ವಾದವನ್ನು ಹೆಚ್ಚಾಗಿ ಹೋಲುವ ಲೇಖನವೊಂದನ್ನು ಪಡೆದರು. ಇದರಿಂದ ಗಿದಿಲುಗೊಂಡರೂ, ಇದನ್ನು ಲೈಲ್ ಅವರಿಗೆ ಕಳುಹಿಸಿ, ವಾಲೇಸ್ ಅವರಿಗೆ ಇದನ್ನು ಪ್ರಕಟಣೆ ಮಾಡುವಲ್ಲಿ ಸಹಕರಿಸುವ ಮಾತು ನೀಡಿದರು. ಮಾತುಕತೆಯ ನಂತರ ಈ ಲೆಖನವನ್ನು ತಮ್ಮ ಲೇಖನದೊಂದಿಗೆ ಲಿನ್ನಿಯನ್ ಸೊಸೈಟಿಯಲ್ಲಿ ಪ್ರಸ್ತಾಪಿಸಲು ನಿರ್ಧರಿಸಿದರು. ತಮ್ಮ ಚಿಕ್ಕ ಮಗ ಸ್ಕಾರ್ಲೆಟ್ ಜ್ವರದಿಂದ ಮರಣ ಹೊಂದಿದರಿಂದ, ಈ ಲೇಖನಗಳನ್ನು ಲೈಲ್ ಮತ್ತು ಹೂಕರ್ ಅವರು ಜುಲೈ ೦೧ ರಂದು ಮಂಡಿಸಿದರು.

ಈ ಪ್ರಕಟಣೆಗಳು ವಿಜ್ಞಾನಿಗಳಲ್ಲಿ ಮೊದಲಿಗೆ ಹೆಚ್ಚು ಆಸಕ್ತಿ ಉಂಟು ಮಾಡಲಿಲ್ಲ. ಮುಂದಿನ ೧೩ ತಿಂಗಳುಗಳಲ್ಲಿ ಡಾರ್ವಿನ್ ತಮ್ಮ ಪುಸ್ತಕದ ರಚನೆಯ ಮೇಲೆ ಹೆಚ್ಚಾಗಿ ಕೆಲಸ ನಡೆಸಿದರು. ೧೮೫೯ರ ನವೆಂಬರ್ ೨೨ ರಂದು 'ಆನ್ ದ ಆರಿಜಿನ್ ಆಫ್ ಸ್ಪೀಶೀಸ್' ಪುಸ್ತಕವು ಪ್ರಕಟನೆಗೊಂಡಿತು. ಮೊದಲ ಆವತರಣಿಕೆಯ ೧೨೫೦ ಪ್ರತಿಗಳು ಬಹಳ ಬೇಗನೆಯೇ ಮಾರಾಟಗೊಂಡವು.

ಅಸ್ತಿತ್ವಕ್ಕಾಗಿ ಹೋರಾಟ (**Struggle for Existance**): ನೈಸರ್ಗಿಕ ಆಯ್ಕೆಯ ಸಿದ್ಧಾಂತಕ್ಕನುಗುಣವಾಗಿ ಯಾವುದೇ ಜೀವಿಯು ತನ್ನ ಉಳಿವಿಗಾಗಿ ತನ್ನ ರಕ್ಷಣೆಯಲ್ಲಿ ತೊಡಗುತ್ತದೆ. ಆ ರಕ್ಷಣೆಯು ಇತರ ಬೇರೆ ಜೀವಿಗಳ ವಿರುದ್ಧವಾದ ಹೋರಾಟವಾಗಬಹುದು, ತಮ್ಮ ಆಹಾರಕ್ಕಾಗಿ, ವಸತಿಗಾಗಿ, ವಂಶಾಭಿವೃದ್ಧಿಗಾಗಿಯಾದರೂ ಸರಿ ತನ್ನದೇ ಅಥವಾ ಬೇರೆ ವರ್ಗಗಳ ಜೀವಿಯೊಡನೆಯ ಹೋರಾಟದಲ್ಲಿ ಯಾವ ಜೀವಿಯು ಆ ಉಳಿವಿನಲ್ಲಿ ಬದುಕುಳಿಯುತ್ತದೋ ಅದು ಮತ್ತು ಅದರ ಸಂತತಿಗಳು ಮಾತ್ರ ಬದುಕುಳಿಯುತ್ತವೆ ಎಂಬುದು ಈ ಸಿದ್ಧಾಂತದ ಅರ್ಥ. ಆ ಜೀವಿಯ ಹೋರಾಟವು ಇತರ ಜಾತಿಯ ಜೀವಿಗಳ ವಿರುದ್ಧವಾಗಬಹುದು ಅಥವಾ ಪ್ರಾಕೃತಿಕ ವಿಪತ್ತುಗಳ ವಿರುದ್ಧವಾಗಬಹುದು. ಎಲ್ಲವನ್ನೂ ಮೀರಿ ಉಳಿಯುವ ಜೀವಿ ಬದುಕಿ ಉಳಿಯುತ್ತದೆ. ಈ ರೀತಿ ಹೋರಾಟದ ಗುಣ ಅವುಗಳ ಜೀನುಗಳಲ್ಲಿ ಒಂದು ಸಂತತಿಯಿಂದ ಮತ್ತೊಂದು ಸಂತತಿಗೆ ಹರಿದುಬರುತ್ತದೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಸೊಳ್ಳೆಗಳು ಮತ್ತು ಡಿ.ಡಿ.ಟಿ ಕೀಟನಾಶಕ. ೧೯೫೦ರ ಸುಮಾರಿನಲ್ಲಿ ಭಾರತ ಮತ್ತಿತರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಲೇರಿಯಾದಿಂದ ಸಾವಿನ ಸಂಖ್ಯೆಗಳು ಹೆಚ್ಚತೊಡಗಿದವು ಹಾಗೂ ಮಲೇರಿಯಾ ಹರಡಲು 'ಆನಾಫಿಲೀಸ್' ಎಂಬ ಸೊಳ್ಳೆಯೇ ಕಾರಣವೆಂದರಿತ 'ವಿಶ್ವ ಆರೋಗ್ಯ ಸಂಸ್ಥೆ'ಯು ಸೊಳ್ಳೆಗಳು ಬರದಂತೆ ಡಿ.ಡಿ.ಟಿ ಕೀಟನಾಶಕವನ್ನು ಸಿಂಪಡಿಸಲು ಆರಂಭಿಸಿತು. ತಕ್ಷಣವೇ ಮಲೇರಿಯಾವು ಕಾಣಿಯಾಗತೊಡಗಿತು, ಸಾವಿನ ಸಂಖ್ಯೆಯಲ್ಲಿ ಗಣನೀಯ ಇಳಿಮುಖವಾಯಿತು. ಆದರೆ ೧೯೬೦ ಆಸುಪಾಸಿನಲ್ಲಿ ಈ ಮಹಾಮಾರಿ ಮತ್ತೆ ಬಂದೆರಗಿತ್ತು. ಅಷ್ಟೇಲ್ಲಾ ಡಿ.ಡಿ.ಟಿ ಸಿಂಪರಣೆಯಿಂದ ಸೊಳ್ಳೆಗಳು ಸಾಯಲೂ ಇಲ್ಲ. ಇದಕ್ಕೆ ಕಾರಣವನ್ನು ಅಭ್ಯಾಸಿಸಲು ಆ ಸೊಳ್ಳೆಗಳ ಸಂತತಿಗಳ 'ಜೀನ್' (Genes) ಗಳನ್ನು ಪರೀಕ್ಷಿಸಿದಾಗ ಅವುಗಳು ಡಿ.ಡಿ.ಟಿ.ಗೆ ಸಾಯದೇ ಅದನ್ನೇ ತಿಂದು ಬದುಕುವ ಶಕ್ತಿಯನ್ನು ಹೊಂದಿದ್ದವು. ಇದನಲ್ಲದೇ ಮತ್ತಷ್ಟು ಉದಾಹರಣೆಯೆಂದರೆ ಜಿರಾಫೆಯ ಕತ್ತು, ದೈತ್ಯ ಡೈನಾಸೋರ್‌ಗಳ ವಿನಾಶ, ಜೊತೆಗೆ ಅಳಿವಿನ ಅಂಚಿನಲ್ಲಿರುವ ಇತರ ಪ್ರಸ್ತುತ ಜೀವಿಗಳನ್ನೂ ನಾವು ಕಾಣಬಹುದು. (ಕೆಲ ಜೀವಿಗಳ ವಿನಾಶಕ್ಕೆ ನಾವು ಮತ್ತು ನಮ್ಮ ಸ್ವಾರ್ಥವೂ ಕಾರಣವಾದರೂ ಅವುಗಳಿಗೂ ಈ ಸಿದ್ಧಾಂತ ಅನ್ವಯವಾಗುತ್ತದೆ)

ಕೊನೆಟಿಪ್ಪಣಿಗಳು:

೧. ಡಾ.ಹೆಚ್.ಆರ್.ಕೃಷ್ಣಮೂರ್ತಿ, ಪರಿಸರ ಅಧ್ಯಯನ, ಪುಟ:೧೨,

೨. ಅದೇ ಪು ಪುಟ:೧೭

೩. ಅದೇ ಪು ಪುಟ:೧೯

೪. ಅದೇ ಪು ಪುಟ:೨೦-೨೧

೫. ಟಿ.ಎಸ್.ವಿವೇಕಾನಂದ, ಪರಿಸರ ಕಥನ, ಪುಟ:೦೭,

ಅಧ್ಯಾಯ–ನಾಲ್ಕು

ಪರಿಸರ ಪ್ರಜ್ಞೆಯ ಪೂರ್ವದೃಷ್ಟಿಗಳು

೪.೧ ವೇದ ವಾಙ್ಮಯಗಳ ದೃಷ್ಟಿ

೪.೨ ಧಾರ್ಮಿಕ ದೃಷ್ಟಿ

೪.೩ ಐತಿಹಾಸಿಕ ದೃಷ್ಟಿ

೪.೪ ಜನಪದರ ದೃಷ್ಟಿ

೪.೫ ಸಾಹಿತ್ಯದ ದೃಷ್ಟಿ

ಅಧ್ಯಾಯ–ನಾಲ್ಕು
ಪರಿಸರ ಪ್ರಜ್ಞೆಯ ಪೂರ್ವದೃಷ್ಟಿಗಳು

೪.೧ ವೇದವಾಙ್ಮಯದ ದೃಷ್ಟಿ

'ಕೆಹತೆ ಹೈ ವೇದ್ ಪುರಾಣ್, ಬಿನಾ ವೃಕ್ಷ ಕೆ ನಹೀ ಕಲ್ಯಾಣ್' (ಹೇಳುತ್ತವೆ ವೇದ ಪುರಾಣ, ವೃಕ್ಷಗಳಿಲ್ಲದೆ ಇಲ್ಲ ಕಲ್ಯಾಣ). ಅಂದರೆ ಈ ಘೋಷಣೆಯ ಪ್ರಕಾರ ಪರಿಸರವಾದ ವೇದಪುರಾಣಗಳಿಂದಲೇ ಪ್ರಾರಂಭಗೊಂಡದ್ದು ಎಂದಾಯಿತು. ನಮ್ಮ ಸಂಸ್ಕೃತಿಯ ಮೂಲಸ್ತರದಲ್ಲೇ ಪರಿಸರ ಪ್ರಜ್ಞೆಯ ಅಗತ್ಯವನ್ನು ಒಪ್ಪಿಕೊಂಡಿದ್ದಿದೆ. ಸುತ್ತಮುತ್ತಣ ಎಲ್ಲಾ ವಿವರಗಳನ್ನು ಮನುಷ್ಯನ ಬದುಕು ಅವಲಂಬಿಸಿರುವುದು ಮಾತ್ರವಲ್ಲ, ಒಳಗೊಂಡಿದೆಯೆಂಬ ಅರಿವು ಆರಂಭಕಾಲದಿಂದಲೂ ಇದ್ದಂತೆ ತೋರುತ್ತದೆ. ವೈದಿಕ ಸಾಹಿತ್ಯದಲ್ಲೇ ಇದನ್ನು ಕಾಣುತ್ತೇವೆ; ಜಾನಪದ ನೆಲೆಯಿಂದ ಎದ್ದುನಿಂತ ತಂತ್ರವಾಙ್ಮಯದಲ್ಲೂ ಇದು ಹಾಸುಹೊಕ್ಕಾಗಿದೆ. ಇನ್ನು ಸಂಸ್ಕೃತ–ಪ್ರಾಕೃತ, ಕಾವ್ಯ ನಾಟಕಗಳಲ್ಲೂ, ಕಳೆದ ದೇಶಭಾಷಾ ಕಾವ್ಯ ನಾಟಕಗಳಲ್ಲೂ ಈ ಮನೋಧರ್ಮ ಎದ್ದು ಕಾಣುತ್ತದೆ. ವಿಚಾರ ಮಾಡಿದರೆ, ನಮ್ಮ ಮೌಲ್ಯಗಳು ಪರಿಸರ ಪ್ರಜ್ಞೆಯಿಂದಲೇ ಮೈದಳೆದುವೆಂಬುದು ತಿಳಿಯುತ್ತದೆ. ನಮ್ಮ ಆಚಾರ–ವ್ಯವಹಾರಗಳಲ್ಲಿ ನಿಸರ್ಗವನ್ನು ಕುರಿತಂತೆ ಗೌರವ ಮತ್ತು ಕೃತಜ್ಞತಾ ಭಾವನೆಗಳಿದ್ದವು. ಪಾಶ್ಚಾತ್ಯ ಸಂಸ್ಕೃತಿಯ ಅವಲೋಕನ, ಆಧುನಿಕ ಜೀವನ ವಿಧಾನಗಳ ಅನ್ವಯ–ಅನುಕರಣೆಗಳಿಂದ ನಮ್ಮ ಮೌಲ್ಯಗಳು ಬದಲಾಗುತ್ತಿದ್ದು ನಮ್ಮಲ್ಲಿ ರೂಢಿಸಿಕೊಳ್ಳಬೇಕಾದ ಪರಿಸರ ಪ್ರಜ್ಞೆಯೂ ಮರೆಯಾಗುತ್ತಿದೆ. ಪರಿಸರವನ್ನು ಕುರಿತಂತೆ ಇದ್ದ ಆದರವೂ ಇಳಿಮುಖವಾಗುತ್ತಿದೆ.

ಪರಿಸರ ಪ್ರಜ್ಞೆ ಎಂಬುದು ಕೈಗಾರೀಕೃತ ನಾಗರೀಕತೆಯ ಜೊತೆಯಲ್ಲಿ ಹುಟ್ಟಿದ ಮನೋಸ್ಥಿತಿ ಎಂಬ ಸಿದ್ಧ ತಿಳುವಳಿಕೆಯನ್ನು ಪ್ರೊ.ಸಾ.ಕೃ.ರಾಮಚಂದ್ರರಾವ್ ಅವರ 'ವೇದವಾಙ್ಮಯದಲ್ಲಿ ಪರಿಸರ' ಎಂಬ ಲೇಖನವು ಹಲವು ಚರ್ಚಾಂಶಗಳಿಂದ ಬದಲಾಯಿಸುತ್ತದೆ. ವೇದವಾಙ್ಮಯವನ್ನು ಕೇಂದ್ರವಾಗಿರಿಸಿಕೊಂಡು, ನಿಸರ್ಗವು ಭಾರತೀಯ ಬದುಕು ಮತ್ತು ಸಂಸ್ಕೃತಿಗಳೊಂದಿಗೆ ಹೆಣೆದುಕೊಂಡಿರುವುದನ್ನು ಲೇಖನದ ಭಾಗದಲ್ಲಿ ವಿವೇಚಿಸಿದ್ದಾರೆ.

ವೇದವಾಙ್ಮಯದ ಮೊದಲ ಅಭಿವ್ಯಕ್ತಿಯಾದ ಋಗ್ವೇದದಲ್ಲಿ, ಪ್ರಪಂಚವೆಂಬ ಕಲ್ಪನೆಗೆ ಮೂರು ನೆಲೆಗಳಿದ್ದವು. ಭೂಮಿ (ಪೃಥ್ವೀ ಸ್ಥಾನ), ಅಂತರಿಕ್ಷ (ನಡುವಣ ಲೋಕ), ಮೇಲಿನದು (ದ್ಯೌಃ, ದ್ಯುಃಸ್ಥಾನ, ಆಕಾಶ) ಅಥವಾ ಭೂ, ಭುವ:, ಸುವಃ ಎಂಬ ಮೂರು ವ್ಯಾಹೃತಿಗಳು. ಇವು ಮೂರು ಪರಸ್ಪರ ಸಂಬಂಧವಾದುವು. ಜನರಿಗೆ ಭೂಮಿ ತಾಯಿಯಾದರೆ, ಅಗಸ ತಂದೆ('ದ್ಯೌಃ ಪಿತಾ ಪೃಥ್ವೀ ಮಾತಾ'). ಮೂರು ಲೋಕಗಳಲ್ಲಿ ಜನರ ಒಳಿತನ್ನು ಸಾಧಿಸಲು ಮೂವರು ದೇವತೆಗಳು; ಭೂಮಿಯ ಮೇಲೆ ಅಗ್ನಿ, ಅಂತರಿಕ್ಷದಲ್ಲಿ ವಾಯು, ಆಗಸದಲ್ಲಿ ಸೂರ್ಯ, ಒಂದೇ ತತ್ವದ ಮೂರು ರೂಪಗಳಿವು; ಆಯಾ ಸ್ಥಾನಗಳಲ್ಲಿ ವಿಶಿಷ್ಟವಾದ ಕೆಲಸಗಳನ್ನು ನಡೆಸುವವರು ('ತತ್ತತ್ ಸ್ಥಾನ ವಿಭಾಗೇನ'). ಭೂಮಿಯ ದೇವತೆಗಳಲ್ಲಿ ಅಗ್ನಿಯಲ್ಲದೆ ಪೃಥ್ವೀ, ಸೋಮ, ನದಿ, ಬೃಹಸ್ಪತಿಗಳೂ ಸೇರುತ್ತಾರೆ. ಅಂತರಿಕ್ಷ ಸ್ಥಾನ ದೇವತೆಗಳಲ್ಲಿ ವಾಯು, ಇಂದ್ರ, ಅಪಾಂನಪಾತ್, ರುದ್ರ, ಮರುದ್ಗಣ, ವಾತ, ಪರ್ಜನ್ಯ, ಆಪ ಇವರೂ ದು:ಸ್ಥಾನ ದೇವತೆಗಳಲ್ಲಿ ದೌ:, ವರುಣ, ಸೂರ್ಯ, ಅಶ್ವಿನೀ ದೇವತೆಗಳೂ, ಉಪಸ್ಸು, ರಾತ್ರಿ, ಆದಿತ್ಯರು, ವಿಷ್ಣು ಇವರುಗಳು ಸೇರುತ್ತಾರೆ. ಭೂ ಸ್ಥಾನದಲ್ಲಿ ವಸುಗಳು (ಎಂಟು), ಭೂವ ಸ್ಥಾನದಲ್ಲಿ ರುದ್ರರು (ಹನ್ನೊಂದು), ಸ್ವರ್ಸ್ಥಾನದಲ್ಲಿ ಆದಿತ್ಯರು (ಹನ್ನೆರಡು) ಎಂಬ ಎಣಿಕೆಯು ಉಂಟು. ಈ ದೇವತೆಗಳೆಲ್ಲ ಸ್ವರ್ಗವೆಂಬ ಯಾವುದೋ ಬೇರೊಂದು ಲೋಕದಲ್ಲಿರುವವರಲ್ಲ; ಈ ಮೂರು ನೆಲೆಗಳಲ್ಲೇ ವ್ಯಾಪಿಸಿಕೊಂಡಿರುವವರು. ಇವರಿಗೆಲ್ಲ ನಿರ್ದಿಷ್ಟವಾದ ಆಕಾರವಿದೆಯೆಂಬುದೂ ಇಲ್ಲ. ಪ್ರಕೃತಿಯಲ್ಲಿ ಸಾಗುವ ಕ್ರಿಯೆಗಳೇ ಅವರ ಆಕಾರ; ಸ್ವಭಾವ, ಸ್ವರೂಪ. ವೇದ ಮಂತ್ರಗಳಿಗೆ ಆಧ್ಯಾತ್ಮಿಕ, ಆದಿಭೌತಿಕ ಆದಿದೈವಿಕಗಳೆಂಬ ಅರ್ಥಗಳಿವೆ. ದೇವತೆಯಂತೆ ವರ್ಣನೆಯಿರುವುದು ಆದಿದೈವಿಕವಾದುದು. 'ದೇವ' ಎನ್ನುವ ಮಾತಿಗೆ ಬೆಳಗುವುದು, ಕಾಣಿಸಿಕೊಳ್ಳುವುದು, ದೂರ ಇರುವುದು ಎಂಬರ್ಥಗಳಿವೆ ('ದ್ಯೋತನಾದ್ವಾ ದೀಪನಾದ್ವಾ ದ್ಯು:ಸ್ಥಾನಾದ್ವಾ'. ವೈದಿಕ ಪರಿಭಾಷೆಯಲ್ಲಿ ನಮ್ಮ ಇಂದ್ರಿಯಗಳು, ಮನಸ್ಸಿನ ವೃತ್ತಿಯೂ ದೇವತೆಯೇ. ಇದು ಆಧ್ಯಾತ್ಮಿಕ ನೆಲೆಯ ಅರ್ಥ, ಹೊರಾಂಗಣ ಗಾಳಿ, ಬೆಳಕು, ನೆಲ, ನೀರು, ಮೋಡ, ಮಳೆ, ಬೆಂಕಿ, ಗುಡುಗು, ಸಿಡಿಲು, ಗಿಡ, ಮರ, ನದಿ, ಬೆಟ್ಟ, ಗುಡ್ಡ, ಎಲ್ಲವೂ ದೇವತೆಗಳೇ. ಇದು ಆದಿ ಭೌತಿಕವಾದ ನೆಲೆ. ಆದಿಭೌತಿಕವೆಂದರೆ ಹೊರಗಣ ವಿವರಗಳು. ಆದಿದೈವಿಕವೆಂದರೆ ಪ್ರಕೃತಿಯ ಒಂದೊಂದು ವ್ಯಾಪಾರಕ್ಕೂ ಚೇತನವಾಗಿ, ಸಾಮರ್ಥ್ಯವಾಗಿ ಇರುವ ಅಭಿಮಾನಿಗಳು; ಆಧ್ಯಾತ್ಮಿಕವೆಂದರೆ, ಮನುಷ್ಯನ ವ್ಯಕ್ತಿತ್ವದಲ್ಲಿ ಒಳಗೊಂಡಿರುವ ತತ್ವಗಳು. ಈ ಮೂರು ನೆಲೆಗಳಲ್ಲಿ ಮೊದಲೆರಡು ಪರಿಸರವೆನಿಸಿಕೊಳ್ಳುತ್ತವೆ. ಕಡೆಯದು ಈ ಪರಿಸರದಲ್ಲಿ ಪಾಲ್ಗೊಳ್ಳುವ ಜೀವವ್ಯಾಪಾರ. ವೈದಿಕ ದೇವತೆಗಳೆಲ್ಲ ಪರಿಸರದ ಬೇರೆ ಬೇರೆ ವಿವರಗಳಾಗಿವೆ. ಋಷಿಯಾದವನು ಇದನ್ನು ಕಂಡುಕೊಂಡು ತನ್ನ ಬದುಕಿನಲ್ಲಿ ನೆರವಾಗುವ ವಿವರಗಳನ್ನು ಉತ್ಸಾಹದಿಂದ, ಕೃತಜ್ಞತೆಯಿಂದ ಸ್ತುತಿಸುವುದೇ ಮಂತ್ರವೆನಿಸಿಕೊಳ್ಳುತ್ತದೆ. ಋಗ್ವೇದವಿಡೀ ಪರಿಸರದ ಪ್ರಶಂಸೆಯೇ ತುಂಬಿದೆ. ಈ ಪ್ರಶಂಸೆಯ ಹಿನ್ನೆಲೆಯಲ್ಲಿರುವ ಪರಿಸರ ಪ್ರಜ್ಞೆಯು ಅವಲೋಕನದಲ್ಲಿ ಮುಖ್ಯವಾದುದು.

ನದಿಗಳು ಬೆಟ್ಟದಲ್ಲಿ ಹುಟ್ಟಿ ಎಲ್ಲೂ ನಿಲ್ಲದೆ, ಹಿಡಿದ ದಾರಿ ಬದಲಿಸದೆ, ಸಮುದ್ರದ ಕಡೆ ಹರಿಯುವುದು ಋತ. ಮಳೆನೀರು ಮೇಲಿಂದ ಕೆಳಗೆ ಬೀಳುವುದು, ಗಿಡ ಮರಗಳು ಕೆಳಗಿನಿಂದ ಮುಗಿಲ ಕಡೆ ಬೆಳೆಯುವುದು; ಹಗಲು ಇರುಳುಗಳು ಒಂದಾದ ಮೇಲೊಂದು ಕ್ರಮ ತಪ್ಪಿಸದೆ

ಬಂದೊದಗುವುದು; ಸೂರ್ಯನು ಪೂರ್ವದಲ್ಲಿ ಕಾಣಿಸಿಕೊಂಡು ಪಶ್ಚಿಮದಲ್ಲಿ ಮರೆಯಾಗುವುದು; ಆಯಾ ಕಾಲದಲ್ಲಿ ಮಂಜು, ಬಿಸಿಲು, ಮಳೆ, ಗಾಳಿಗಳು ಕೆಲಸ ಮಾಡುವುದು; ಗಿಡ ಬೆಳೆಯುವಾಗ ಅನುಸರಿಸುವ ಕ್ರಮ; ಬೀಜಕ್ಕೆ ಅನುರೂಪವಾಗಿಯೇ ವೃಕ್ಷ ಇರುವುದು; ಪ್ರಾಣಿಗಳ ಬದುಕಿನಲ್ಲಿ ಕಾಣುವ ವ್ಯವಸ್ಥೆ; ಮೃಗ, ಪಕ್ಷಿ, ವೃಕ್ಷ, ನೆಲ, ಮುಗಿಲು ಇವುಗಳಲ್ಲಿರುವ ಅನ್ಯೋನ್ಯಾಶ್ರಯ; ಗಾಳಿಗಾಗಲಿ, ನೀರಿಗಾಗಲಿ ಇರುವ ಸ್ವಭಾವ – ಇವೆಲ್ಲಾ ಋತದ ನಿದರ್ಶನಗಳೇ.

ಅಂತೂ ವೈದಿಕವಾಙ್ಮಯದಲ್ಲಿನ ಋತವೆಂದರೆ, ನಮ್ಮ ಈಗಿನ ಕಲ್ಪನೆಯ ಪರಿಸರವೇ. ಅದರ ಪ್ರಜ್ಞೆಯಿರುವುದು ಸತ್ಯ; ಈ ಪ್ರಜ್ಞೆಯಿಂದ ಪರಿಸರದ ರಕ್ಷಣೆಗೆ ನಮ್ಮನ್ನು ನಾವು ತೊಡಗಿಸಿಕೊಳ್ಳುವುದು ಧರ್ಮ. ಋತವನ್ನು ಕಾಪಾಡಬೇಕೆಂಬ ಕಟ್ಟಳೆ ಸೃಷ್ಟಿಯ ಮೊದಲಲ್ಲೆ ಮೈದಳೆಯಿತಂತೆ ('ತಾನಿ ಧರ್ಮಾಣಿ ಪ್ರಥಮಾನ್ಯಾಸನ್'). ವೇದಸಾಹಿತ್ಯದಲ್ಲಿ ಈ ತವಕವೂ ಕಾಣುತ್ತದೆ. ನದಿಯ ನೀರು ಹರಿಯುವುದು ಋತ; ಅದನ್ನು ಯಾವ ಕಾರಣಕ್ಕಾಗಲಿ ತಡೆದು ನಿಲ್ಲಿಸುವುದು ಅನೃತ, ಅಧರ್ಮ, ಪಾಪ. ಋಷಿಯೊಬ್ಬ ಕಳಕಳಿಯಿಂದ ಹೀಗೆ ಹೇಳುತ್ತಾನೆ; ನದಿಗಳು ತಮಗೆ ಇಷ್ಟ ಬಂದಂತೆ ಹರಿಯಲು ಬಿಡಿ ('ಸಂ ಸಂ ಸ್ರವಂತು ಸಿಂಧವಃ') ಗಾಳಿಯನ್ನು ಕೆಡಿಸಬೇಡಿ, ತಿಳಿಯಾಗಿ ಬೀಸಲು ಬಿಡಿ ('ಸಂ ವಾತಾಃ'), ಹಕ್ಕಿಗಳು ಹೇಗೆ ಬೇಕೋ ಹಾಗೆ, ಎಲ್ಲಿ ಬೇಕೋ ಅಲ್ಲಿ ಹಾರಲು ಬಿಡಿ ('ಸಂ ಪತತ್ರಿಣಃ') (ಅಥರ್ವ ೧, ೨೫, ೧) ನೀರನ್ನು ಶುದ್ಧಿಗೊಳಿಸಲು ಗಾಳಿ ನೆರವಾಗುತ್ತದೆ; ನೀರು ಗಾಳಿ ಎರಡೂ ಹಕ್ಕಿಗಳ ಬದುಕಿಗೆ ನೆರವಾಗುತ್ತವೆ. ಋತದಲ್ಲಿ ಎಲ್ಲವೂ ಒಂದು ಇನ್ನೊಂದನ್ನು ಅವಲಂಬಿಸಿಕೊಂಡಿರುವುದನ್ನು ಕಾಣುತ್ತೇವೆ.[೧]

೪.೨ ಧಾರ್ಮಿಕ ದೃಷ್ಟಿ

ಧಾರ್ಮಿಕ ನಂಬಿಕೆಗಳಲ್ಲಿ ಪರಿಸರ ಪ್ರಜ್ಞೆಯು ಗಮನಾರ್ಹವಾಗಿದ್ದನ್ನು ವ್ಯಾಪಕವಾಗಿ ಗುರುತಿಸಬಹುದಾಗಿದೆ. ಬ್ರಹ್ಮನ ವಾಹನ ಹಂಸ. ವಿಷ್ಣುವಿನ ವಾಹನ ಗರುಡ. ಈಶ್ವರನ ವಾಹನ ನಂದಿ. ಸರಸ್ವತಿಯ ವಾಹನ ನವಿಲು. ಪಾರ್ವತಿಯ ವಾಹನ ಹುಲಿ. ಶನಿಯ ವಾಹನ ಕಾಗೆ. ಗಣಪತಿಯ ವಾಹನ ಇಲಿ. ಯಮಧರ್ಮರಾಯನ ವಾಹನ ಕೋಣ. ಇವೇ ಮೊದಲಾದವುಗಳ ಹಿಂದಿರುವ ಸತ್ಯವು ನಮ್ಮ ಪೂರ್ವಿಕರ ಪರಿಸರ ಪ್ರೇಮದ ದ್ಯೋತಕವೇ ಆಗಿರುವುದು. ಹಾಗೆಯೇ ಸೂರ್ಯನ ವಾಹನ ಸಪ್ತ ಅಶ್ವಗಳು ಅಥವಾ ಏಳು ಕುದುರೆಗಳು. ಇಂದ್ರನ ವಾಹನ ಐರಾವತ ಅಥವಾ ಆನೆ. ವರುಣನ ವಾಹನ ಮೊಸಳೆ. ಹನ್ನೆರಡು ರಾಶಿಗಳಲ್ಲಿ ವಿವಿಧ ಬಗೆಯ ಪ್ರಾಣಿಗಳನ್ನು ಬಳಸಲಾಗಿದೆ. ಅವುಗಳೆಂದರೆ ಮೇಷ ರಾಶಿಗೆ ಮೇಕೆ, ವೃಷಭ ರಾಶಿಗೆ ಎತ್ತು, ಕರ್ಕಾಟಕ ರಾಶಿಗೆ ಏಡಿ, ಸಿಂಹ ರಾಶಿಗೆ ಸಿಂಹ, ವೃಶ್ಚಿಕ ರಾಶಿಗೆ ಚೇಳು, ಮಕರ ರಾಶಿಗೆ ಮೊಸಳೆ ಮತ್ತು ಮೀನ ರಾಶಿಗೆ ಮೀನು ಇತ್ಯಾದಿ. ಭಾರತೀಯರಿಗೆ ಭೂಮಿಯ ಪಾವಿತ್ರ್ಯದ ಕಲ್ಪನೆ ಹೊಸದೇನಲ್ಲ. ಪುರಾತನ ಕಾಲದಿಂದಲೂ ಭೂಮಿಯನ್ನು 'ಭೂಮಾತೆ' ಎಂದು ಕರೆಯುತ್ತಾ, ಗೌರವಿಸಿಕೊಂಡು ಬಂದವರು ನಾವು.

ಸಮುದ್ರವಸನೇ ಪೃಥ್ವೀ ಪರ್ವತಸ್ತನ ಮಂಡಲೇ
ವಿಷ್ಣುಪತ್ನೀ ನಮಸ್ತುಭ್ಯಂ ಪಾದಸ್ಪರ್ಶಂಕ್ಷಮಸ್ವಮೇ

ಸಂಸ್ಕೃತ ಭಾಷೆಯಲ್ಲಿರುವ ಈ ಉಕ್ತಿಯ ಅರ್ಥ ಹೀಗಿದೆ: ಸಮುದ್ರವನ್ನೇ ವಸ್ತ್ರವನ್ನಾಗಿ ಧರಿಸಿದ, ಪರ್ವತಗಳನ್ನೇ ವಕ್ಷಸ್ಥಲವಾಗುಳ್ಳ ಹೇ ವಿಷ್ಣುಪತ್ನಿ ಭೂದೇವಿಯೇ ನಿನ್ನನ್ನು ನನ್ನ ಪಾದಗಳಿಂದ ಸ್ಪರ್ಶಿಸುತ್ತಿದ್ದೇನೆ. ಅದಕ್ಕಾಗಿ ನನ್ನನ್ನು ಕ್ಷಮಿಸು. ನಿನಗೆ ನಮಸ್ಕಾರ ಎಂದು ಪ್ರಾರ್ಥಿಸಿಯೇ ಬೆಳಗಿನ ಕೆಲಸಗಳನ್ನು ಆರಂಭಿಸಬೇಕೆಂದು ಹಿರಿಯರು ಹೇಳುತ್ತಿದ್ದರು. ಈ ಮಾತು ಕ್ರಮೇಣ ಸಂಸ್ಕೃತ ಪಂಡಿತರ ಶ್ಲೋಕಗಳಲ್ಲೇ ಉಳಿಯಿತು.[೨]

ಯಾವದ್ ಭೂಮಂಡಲಂ ಧತ್ತೆ ಸಶೈಲ ವನಕಾನನಂ
ತಾವತ್ ತಿಷ್ಠತಿ ಮೇದಿನ್ಯಾಂ ಸಂತತಿ ಪುತ್ರ ಪೌತ್ರಕೀ – ದುರ್ಗಾ ಸಪ್ತಶತಿ

ಸಂಸ್ಕೃತ ಭಾಷೆಯಲ್ಲಿರುವ ಈ ಶ್ಲೋಕದ ಅರ್ಥ ಹೀಗಿದೆ. ಈ ಭೂಮಂಡಲದಲ್ಲಿ ಕಾಡುಮೇಡು ಗಳು ಇರುವವರೆಗೆ ಮಾನವ ಸಂತತಿ, ಪಶುಪಕ್ಷಿಗಳು ಇರುತ್ತವೆ. ಸಸ್ಯನಾಶ ನಮ್ಮ ನಾಶವಾಗಿದೆ. ಅನೇಕ ನಾಗರೀಕತೆಗಳು, ನಮ್ಮ ಸಿಂಧೂ ಬಯಲಿನ ನಾಗರೀಕತರ ಕೂಡ ನಿಸರ್ಗ ನಾಶದಿಂದ ಉಂಟಾಗಿದೆ ಎಂಬುದಾಗಿ ವಿಜ್ಞಾನಿಗಳು ಮತ್ತು ವಿಜ್ಞಾನ ಹೇಳುತ್ತದೆ. ಸಸ್ಯ ಪ್ರಯೋಜನ ವರ್ಣಿಸಲಸದಳ. ನಮ್ಮ ಜನಪದ ಸಂಸ್ಕೃತಿ ಇದನ್ನು ಬಹಳವಾಗಿ ಕಂಡುಕೊಂಡಿದೆ. ಹಸಿರಿಲ್ಲದಿದ್ದರೆ ಉಸಿರೂ ಇಲ್ಲ, ಬದುಕು ಇಲ್ಲ. ಹಾಗೆಯೇ ಸಂಸ್ಕೃತಿ ಮತ್ತು ನಾಗರೀಕತೆಯು ಇಲ್ಲ.[೩]

೪.೩ ಐತಿಹಾಸಿಕ ದೃಷ್ಟಿ

ಸುಪ್ರಸಿದ್ಧ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅರಣ್ಯ ಸಂರಕ್ಷಣೆಯ ಔಚಿತ್ಯ ಹಾಗೂ ಮಹತ್ವದ ಬಗ್ಗೆ ಉಲ್ಲೇಖವಿದೆ. ಅರಣ್ಯವನ್ನು ಸಂರಕ್ಷಿಸುವವರಿಗೆ ಪುರಸ್ಕಾರ ಹಾಗೂ ಅರಣ್ಯವನ್ನು ಹಾಳು ಮಾಡವವರಿಗೆ ಶಿಕ್ಷೆ ಆ ಕಾಲದಲ್ಲಿಯೇ ಕೊಡಲ್ಪಡುತ್ತಿದ್ದವು ಎಂಬುದು ಗಮನಾರ್ಹವಾಗಿರುವುದು. ಭಗವಾನ್ ಬುದ್ಧನು ಅರಣ್ಯಗಳ ಬಗ್ಗೆ ಹೀಗೆ ಅಭಿಪ್ರಾಯ ಪಟ್ಟಿದ್ದಾನೆ. **"ಅರಣ್ಯವೆಂದರೆ ಒಂದು ವಿಶಿಷ್ಟ ಜೀವಕೋಶ. ಇದರ ಔದಾರ್ಯ ನಿಸ್ಸೀಮ. ಇದರ ಕಲ್ಯಾಣ ಗುಣ ಅನಂತ. ಇದು ತನಗಾಗಿ ಏನನ್ನೂ ಬೇಡದೆ ಬಂದ ಎಲ್ಲರಿಗೂ ತನ್ನ ಅಸ್ತಿತ್ವವನ್ನೇ ಧಾರೆ ಎರೆಯುತ್ತದೆ. ಎಲ್ಲಾ ಜೀವಿಗಳಿಗೂ ಆಶ್ರಯ ನೀಡುತ್ತದೆ. ತನ್ನನ್ನು ಕಡಿಯಲು ಕೊಡಲಿ ತಂದವನಿಗೂ ನೆರಳು ನೀಡುತ್ತದೆ"**. ಅಶೋಕ ಚಕ್ರವರ್ತಿಯು ಅಭಿಪ್ರಾಯ ಪಟ್ಟಿರುವಂತೆ ರಾಜನ ಕರ್ತವ್ಯಗಳು ಶಿಷ್ಟರ ರಕ್ಷಣೆ ಮತ್ತು ದುಷ್ಟರ ಶಿಕ್ಷೆಯ ಜೊತೆಗೆ ವನ್ಯಜೀವಿಗಳು ಹಾಗೂ ಅರಣ್ಯಗಳನ್ನು ಸಂರಕ್ಷಿಸುವುದು ಆಗಿರುತ್ತಿತ್ತು.

ಆದಿ ಕಾಲದಿಂದಲೂ ಪಶುಪಕ್ಷಿಗಳು ಮಾನವನ ಜೀವನದೊಂದಿಗೆ ಬೆರೆತು ಹೋಗಿವೆ. ಗೆಡ್ಡೆಗೆಣಸು ತಿನ್ನವುದರೊಂದಿಗೆ, ಕಾಲಗತಿಯಲ್ಲಿ ಆಡು, ಕುರಿ, ಹಸು, ಎತ್ತು, ಎಮ್ಮೆ, ಕೋಣ, ಕತ್ತೆ, ಕುದುರೆ, ಜಿಂಕೆ, ಒಂಟೆ, ಮೀನು, ಸೀಗಡಿ, ಏಡಿ, ಕೋಳಿ, ಪಾರಿವಾಳ, ಮೊದಲಾದ ಪ್ರಾಣಿ ಪಕ್ಷಿಗಳನ್ನು ಕೊಂದು ತಿನ್ನುವ ಮೂಲಕ ಬದುಕಲು ಪ್ರಾರಂಭಿಸಿದ್ದಾನೆ. ಹಸು, ಎಮ್ಮೆ,

ಕುರಿ, ಮೇಕೆಗಳನ್ನು ಮನೆಯಲ್ಲಿ ಸಾಕುತ್ತಾ, ಅವುಗಳಿಂದ ಹಾಲನ್ನು ಪಡೆದು ಉಪಯೋಗಿಸತೊಡಗಿದ್ದಾನೆ. ಮನೆಯ ರಕ್ಷಣೆಗಾಗಿ ನಾಯಿ ಮತ್ತು ಬೆಕ್ಕನ್ನು ಸಾಕಿರುವುದು ತಿಳಿದಿರುವ ಸಂಗತಿ. ಒಂದು ಕಡೆ ನೆಲೆ ನಿಂತು ಕೃಷಿಯನ್ನು ಒಂದು ಉದ್ಯೋಗವನ್ನಾಗಿ ಅವಲಂಬಿಸತೊಡಗಿದಾಗ ಹಸು, ಎತ್ತು, ಹೆಮ್ಮೆ, ಕೋಣ, ಕತ್ತೆ, ಕುದುರೆ, ಮೊದಲಾದವುಗಳನ್ನು ತನ್ನ ಪ್ರಯೋಜನಕ್ಕಾಗಿ ಸಾಕಿ ಬಳಸತೊಡಗಿದ್ದಾನೆ. ಮರದ ದಿಮ್ಮಿಗಳು, ಕಲ್ಲುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಶಕ್ತಿಶಾಲಿ ಮತ್ತು ಭೌಗೋಳಿಕ ಸನ್ನಿವೇಶದಲ್ಲಿ ಲಭ್ಯಗೊಳ್ಳುವ ಪ್ರಾಣಿಗಳನ್ನು ಬಳಸತೊಡಗಿದ್ದಾನೆ. ಉದಾಹಣೆಗೆ: ಒಂಟೆ, ಕತ್ತೆ, ಆನೆ ಇತ್ಯಾದಿ.

೪.೪ ಜನಪದರ ದೃಷ್ಟಿ

ಬಯಲು ಸೀಮೆಯ ಒಂದೊಂದು ಗ್ರಾಮವನ್ನೂ ಗಮನಿಸುವುದಾದರೆ, ಅಲ್ಲಲ್ಲಿ ಸಾಮಾನ್ಯವಾಗಿ ನೀರು ಶೇಖರಣೆಯಾಗುವ ಒಂದೊಂದು ತೊಟ್ಟಿ ಕಟ್ಟಲ್ಪಟ್ಟಿದೆ. ಇದು ಬಹು ಉಪಯೋಗಿಯಾಗಿ ಅಸ್ತಿತ್ವದಲ್ಲಿದೆ. ಊರಿನ ಬೀದಿಗಳಲ್ಲಿ, ಇತರ ಊರುಗಳಿಗೆ ಸಂಪರ್ಕಿಸುವ ಪ್ರಮುಖ ರಸ್ತೆಗಳ ಎರಡೂ ಬದಿಗಳಲ್ಲಿ ಸಾಲು ಸಾಲಾಗಿ ಗಿಡಮರಗಳು ಬಹಳ ವರ್ಷಗಳಿಂದಲೂ ಬೆಳೆಸಲ್ಪಟ್ಟಿವೆ. ಅವು ಬಹಳಮಟ್ಟಿಗೆ ಆಲ, ಬೇಲ, ಹುಣಸೆ, ಅರಳಿ, ಬೇವು, ಬಸರಿ, ನೇರಳೆ, ಮಾವು, ಮೊದಲಾದ ಮರಗಳೇ ಆಗಿರುವುವು. ಅವು ಮನುಷ್ಯರಿಗೆ ನೆರಳನ್ನು ಯಥೇಚ್ಚವಾಗಿ ನೀಡುವವು ಹಾಗೂ ಪ್ರಾಣಿಪಕ್ಷಿಗಳಿಗೆ ನೆರಳು ಹಾಗೂ ಆಹಾರವನ್ನು ಗಣನೀಯವಾಗಿ ನೀಡುವವು. ಪ್ರಾಣಿ ಪಕ್ಷಿಗಳಿಗೆ ಸರ್ವಋತುಗಳಲ್ಲಿಯೂ ಒಂದಲ್ಲಾ ಒಂದು ಬಗೆಯ ವೃಕ್ಷಗಳಿಂದ ನೆರಳು ಹಾಗೂ ಆಹಾರವನ್ನು ನೀಡಲ್ಪಡುವುವು. ಊರಿಗೆ ಹೊಂದಿಕೊಂಡಂತೆ ಬೇವಿನ ಮರಗಳ ತೋಪು, ಮಾವಿನ ಮರಗಳ ತೋಪು, ಹುಣಸೆ ಮರಗಳ ತೋಪು, ಹಿಪ್ಪೆಮರಗಳ ತೋಪು, ಹೊಂಗೆಮರಗಳ ತೋಪು, ಅರಳಿಮರ ಮತ್ತು ಬೇವಿನಮರ ಹೀಗೆ ವಿವಿಧ ವೃಕ್ಷಗಳ ಸಸಿಗಳನ್ನು ನೆಟ್ಟು ಬೆಳಸಿ, ಬಳಸಿ, ಉಳಿಸುವ ವ್ಯವಸ್ಥಿತ ಏರ್ಪಾಟು ಸತತವಾಗಿ ಸಾಗಿರುವುದನ್ನು ಗುರುತಿಸಬಹುದಾಗಿದೆ. ಗ್ರಾಮದ ಪಕ್ಕದಲ್ಲಿ ಇಲ್ಲವೇ, ಸಮೀಪದಲ್ಲಿ ಇರಬಹುದಾದ ತಿಟ್ಟು, ಗುಡ್ಡ, ಇಲ್ಲವೇ ಬೆಟ್ಟದ ತುದಿಯಲ್ಲಿ ಒಂದು ದೇವಸ್ಥಾನವನ್ನು ನಿರ್ಮಿಸಿಕೊಳ್ಳಲಾಗಿದೆ. ಆ ದೇವಾಲಯವನ್ನು ಗ್ರಾಮಕ್ಕೆ ಸೇರಿಸುವ ಬೀದಿ ಇಲ್ಲವೇ ರಸ್ತೆಯ ಎರಡೂ ಬದಿಗಳಲ್ಲಿ ಮಾವು, ಬೇವು, ನೇರಳೆ, ಅರಳಿ, ಬಸರಿ ಮೊದಲಾದ ಬಹುವಾರ್ಷಿಕ ಮರಗಳನ್ನು ಬೆಳಸಲಾಗಿರುತ್ತದೆ. ಅವುಗಳನ್ನು ಉಳಿಸಿ ಬೆಳೆಸಿಕೊಳ್ಳುವ ಕಡೆ ಕಟ್ಟುನಿಟ್ಟಾದ ನಿಯಮಗಳಿರುತ್ತವೆ. ಬಿಲ್ವಪತ್ರೆ, ಬೇವು, ಅರಳಿಮರ ಮೊದಲಾದವುಗಳನ್ನು ಅಲ್ಲಲ್ಲಿ ಬೆಳೆಸಲಾಗಿದೆ. ಮನೆಯ ಮುಂದೆ ತುಳಸೀಕಟ್ಟೆಯನ್ನು ಕಾಣುತ್ತೇವೆ. ಇನ್ನೂ ಸೂರ್ಯರಶ್ಮಿ ಕಂಡುಬರುವುದಕ್ಕೆ ಮುನ್ನವೇ ಅರಳಿಮರವನ್ನು ಪ್ರದಕ್ಷಿಣೆ ಹಾಕುವುದು, ಪ್ರಾತಃಕಾಲ ಸೂರ್ಯೋದಯದ ಸಮಯದಲ್ಲಿ ತುಳಸೀಕಟ್ಟೆಯನ್ನು ಪೂಜಿಸುವುದು, ಬೆಳೆಯನ್ನು ಬಿತ್ತಿ ಬೆಳವಣಿಗೆ ಹಂತಕ್ಕೆ ಬಂದ ಸಂದರ್ಭದಲ್ಲಿ ಹೊಲದಲ್ಲಿ ಮೂರು ಕಲ್ಲುಗಳನ್ನು ಪೂಜಿಸಿ, ಎಡೆಮಾಡಿ ಸ್ಯಾವಿಗೆ, ಬೆಲ್ಲದನ್ನ ಮೊದಲಾದ ಪ್ರಸಾದದೋಪಾದಿಯ ಪದಾರ್ಥಗಳನ್ನು ನಾಲ್ಕು ದಿಕ್ಕುಗಳಲ್ಲೂ ಎರಚುವುದು, ಕಟಾವು ಮಾಡುವುದಕ್ಕೆ ಮುನ್ನ ಮೂರು ಕಲ್ಲುಗಳನ್ನು ಪೂಜಿಸಿ, ಮೊಸರನ್ನ ಮೊದಲಾದ ಪ್ರಸಾದವನ್ನು ಎಡೆಮಾಡಿ "ಹೆಚ್ಚುಮಾಡುವುದು" ಇಂತಹ

ಆಚರಣೆಗಳೊಂದಿಗೆ, ವರ್ಷಕ್ಕೊಮ್ಮೆ ನಾಗರು ಮಾಡುವುದು, ಮುನಿಯಪ್ಪನನ್ನು ಮಾಡುವುದು, ಮಳೆರಾಯನನ್ನು ಪೂಜಿಸುವುದು, ವಿಘ್ನೇಶ್ವರನನ್ನು ಪೂಜಿಸುವುದು, ದೇವರು–ದೇವತೆಗಳನ್ನು ಆರಾಧಿಸುವುದು, ನಂದಿ, ಬಸವನನ್ನು ಪೂಜಿಸುವುದು ಇವೆಲ್ಲವುಗಳು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಮ್ಮ ಪೂರ್ವಿಕರಿಗಿದ್ದ ಪರಿಸರ ಪ್ರಜ್ಞೆಯನ್ನು ಬಹಳವಾಗಿ ಪರಿಚಯಿಸುವವು.

ಬಹಳ ಹಿಂದಿನ ಕಾಲದಿಂದಲೂ ಉಪಯುಕ್ತ ಸಸ್ಯಗಳಾದ ತುಳಸಿ, ತುಂಬೆ, ಮಧುನಾಸಿನಿ, ಸದಾಪು, ಲೋಳೆರಸ, ಸರ್ಪಗಂಧಿ, ಬ್ರಾಹ್ಮಿ(ಒಂದೆಲಗ) ಮೊದಲಾದವುಗಳ ಸದ್ಬಳಕೆಯನ್ನು, ಅವುಗಳ ಔಷಧೀಯ ಗುಣವನ್ನು, ವಿವಿಧ ರೋಗಗಳನ್ನು ಗುಣಪಡಿಸುವಲ್ಲಿ ಅವುಗಳ ಉಪಯುಕ್ತತೆಯನ್ನು ಮನಗಾಣಲಾಗಿದೆ. ಮಹಾಕಾವ್ಯಗಳಲ್ಲಿ ಒಂದಾದ ರಾಮಾಯಣದ ಕಾಲದಲ್ಲಿಯೇ ಸಂಜೀವಿನಿ ಸಸ್ಯವನ್ನು ತರಲು ಹೋದ ಆಂಜನೇಯನು ಇಡೀ ಪರ್ವತವನ್ನೇ ತಂದ ಕಥೆ ಜನಜನಿತವಾಗಿದೆ. ವಿವಿಧ ಬಗೆಯ ತಲೆಮಾರುಗಳಷ್ಟು ಹಿಂದೆ ಗಿಡಮೂಲಿಕೆಗಳ ಸದುಪಯೋಗವನ್ನು ಬಹಳವಾಗಿ ಪಡೆದುಕೊಳ್ಳಲಾಗುತ್ತಿತ್ತು ಎಂಬುದನ್ನು ನಾವು ಗ್ರಹಿಸಿದ್ದೇವೆ. ಪ್ರಾಚೀನ ಕಾಲದ ಆರ್ಯುವೇದ ಚಿಕಿತ್ಸೆ ಮತ್ತು ನಾಟಿ ಔಷಧಿಯ ಉಪಚಾರಗಳಂತಹ ಉಲ್ಲೇಖಗಳು ಸಹ ಹಿಂದಿನವರಿಗೆ ಇದ್ದ ಪರಿಸರ ಪ್ರಜ್ಞೆಯನ್ನು ತಿಳಿದುಕೊಳ್ಳಲು ಸಹಕರಿಸುತ್ತದೆ.

ನಮ್ಮ ಪ್ರಮುಖ ಹಬ್ಬ ಹರಿದಿನಗಳಲ್ಲಿ ವೃಕ್ಷಪೂಜೆ ಸಾಮಾನ್ಯವಾಗಿದೆ. ಗರಿಕೆ, ತುಳಸಿ, ಬಿಲ್ವ, ಮಾವು, ಬೇವು, ಬಾಳೆ, ತೆಂಗು, ಅರಳಿ, ಆಲ, ಬನ್ನಿ, ಶಮಿ (ಬನ್ನಿ), ಶ್ರೀಗಂಧ, ಅಶೋಕ ಮುಂತಾದವು ಶ್ರೇಷ್ಠವಾದವುಗಳೆನಿಸಿವೆ. ಜೀವವನ್ನು ಉಳಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಸ್ಯಗಳು ಅನಿವಾರ್ಯ. ಗರಿಕೆಯಿಂದ ಆಲದಮರದವರೆಗೆ ಎಲ್ಲವೂ ಉಪಯುಕ್ತ. ನೆಗ್ಗಿಲು ಮುಳ್ಳಿನಲ್ಲೂ ಔಷಧವಿದೆ. ನೆಲ್ಲಿಕಾಯಿಯಲ್ಲೂ ಔಷಧವಿದೆ. ಅಳಲೆಕಾಯಿಯಲ್ಲೂ ಔಷಧವಿದೆ. ಸಸ್ಯಗಳ ಔಷಧೀಯ ಗುಣವಿಶೇಷಗಳು ಪ್ರಾಣಿಗಳಿಗೂ ತಿಳಿದಿವೆ. ನಮ್ಮ ಆಹಾರ, ವಿಹಾರ, ಸುಗಂಧ, ಮನೆ–ಮಾರುಗಳಿಗೆ ಸಂಬಂಧಿಸಿದಂತೆ ಸಸ್ಯಗಳ ಉಪಯೋಗ ಅನನ್ಯವಾದುದು.

ಗಿಡಮರಗಳಿಗೆ ಗೌರವ ಕೊಡುವುದು, ಪೂಜ್ಯ ಭಾವನೆಯಿಂದ ನಡೆದುಕೊಳ್ಳುವುದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪ್ರಮುಖ ಅರ್ಥಪೂರ್ಣ ಆಚರಣೆಯಾಗಿದೆ. ಭಾರತೀಯ ಸಂಸ್ಕೃತಿಯ ಜೊತೆಯಲ್ಲಿ ಹಾಸುಹೊಕ್ಕಾಗಿದೆ.

'ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಲಿ,
ಎಳ್ಳು ಜೀರಿಗೆಯಾ ಬೆಳೆಯೋಳ
ಎಳ್ಳು ಜೀರಿಗೆಯಾ ಬೆಳೆಯೋಳ ಭೂಮ್ತಾಯ
ಎದ್ದೊಂದು ಗಳಿಗೆ ನೆನೆದೇನ....'

ರೈತ ಮಹಿಳೆಯರ ಇಂತಹ ಹಾಡುಗಳು ಗ್ರಾಮೀಣ ಭಾಗದಲ್ಲಿ ಕೇಳಿಬರುತ್ತಿದ್ದವು. ಆದರೆ ಮನುಷ್ಯರು ಆಧುನಿಕರಾಗುತ್ತಾ ಹೋದಂತೆ ಭೂಮಿಯನ್ನು ಕೊಂಡಾಡುವ ಜನಪದಗೀತೆಗಳು, ಸಂಸ್ಕೃತ ಶ್ಲೋಕಗಳು ಮೂಲೆಗುಂಪಾದವು. ರೈತರು ಆಚರಿಸುತ್ತಿದ್ದ ಭೂಮಿ ಹುಣ್ಣಿಮೆ ಹಬ್ಬ, ಬೆಳೆಯನ್ನು ರಾಶಿಮಾಡಿ ಪೂಜಿಸುತ್ತಿದ್ದಂತಹ ಸಂಕ್ರಾಂತಿ ಹಬ್ಬಗಳೆಲ್ಲ ಭೂಮಿಯನ್ನು

ನೆನಪಿಸುವ ನೆಪಮಾತ್ರದ ಆಚರಣೆಗಳಾಗತೊಡಗಿದವು. ಶತ ಶತಮಾನಗಳ ಹಿಂದಿನಿಂದಲೂ ರಾಜಮಹಾರಾಜರುಗಳು ತಮ್ಮ ಆಡಳಿತದ ಅವಧಿಯಲ್ಲಿ ಸಾಲು ಗಿಡಮರಗಳನ್ನು ನೆಡೆಸಿ ಬೆಳಸುವುದು, ಬಾವಿಗಳನ್ನು ತೋಡಿಸುವುದು, ಕೆರೆಕಟ್ಟೆಗಳನ್ನು ಕಟ್ಟಿಸುವುದು ಇವೇ ಮೊದಲಾದವುಗಳನ್ನು ಮಾಡುತ್ತಾ ಬಂದಿದ್ದಾರೆ. ಇವೆಲ್ಲಾ ಪರಿಸರ ಪ್ರಜ್ಞೆಯ ಹೆಗ್ಗುರುತುಗಳು.[೪]

೪.೫ ಸಾಹಿತ್ಯದ ದೃಷ್ಟಿ

"ಪುರಾತನ ಭಾರತದ ಶ್ರೇಷ್ಠ ಸಾಹಿತ್ಯಾಕಾರರಲೊಬ್ಬರಾದ ಕಾಳಿದಾಸನ ಬರಹಗಳಲ್ಲಿ ಗಾಢವಾದ ಪರಿಸರ ಪ್ರಜ್ಞೆ ಕಂಡುಬರುತ್ತದೆ. ಗುಡ್ಡ ಬೆಟ್ಟಗಳು, ನದಿಗಳು, ಕಾಡುಗಳು, ಪಕ್ಷಿಗಳು ಹಾಗೂ ಅವುಗಳ ವಲಸೆ ಕ್ರಮಗಳು ಆತನ ಕೃತಿಗಳ ಭಿತ್ತಿಯಲ್ಲಿ ಅಚ್ಚೊತ್ತಿ ನಿಂತಿವೆ. ಇಂಥದೆ ಮಾದರಿಯಲ್ಲಿ ತಮಿಳು ಭಾಷೆಯ ಸಂಘಂ ಸಾಹಿತ್ಯವು ಸಹ ದಟ್ಟವಾದ ಪ್ರಕೃತಿ ಪ್ರಜ್ಞೆಯನ್ನು ತೋರುತ್ತದೆ. ಈ ಸಾಧನೆ ಭಾರತದ ಸಾಹಿತ್ಯ ಗಳಿಗೆಯ ಅನನ್ಯವಾದ ಸಂಗತಿಯೇನಲ್ಲ."[೦೫] ಉದಾಹರಣೆಗೆ ಪ್ರಖ್ಯಾತ ಪ್ರಾಚೀನ ರೋಮನ್ ಕವಿ ವರ್ಜಿಲ್ ನಿಸರ್ಗದ ಬಗ್ಗೆ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭೂದೃಶ್ಯಗಳ ಬಗ್ಗೆ ಅತ್ಯಂತ ಭಾವತೀವ್ರತೆಯ ಪದ್ಯಗಳನ್ನು ರಚಿಸಿದ್ದಾನೆ. ಆತನ ಕಾವ್ಯದಲ್ಲಿ ಮನುಷ್ಯ ಏಕಮೇವನಾಗಿಯೋ ಏಕಾಂಗಿಯಾಗಿಯೋ ಚಿತ್ರಿತನಾಗದೆ ಆತ ಹಾಗೂ ಆತನ ಹೊಲಗದ್ದೆಗಳೂ ಮನೆಮಠಗಳೂ ನದಿ–ಗುಡ್ಡ–ಕಣಿವೆಗಳ ಮಡಿಲಿನಲ್ಲಿ ನೆಲೆಗೊಂಡಿರುವಂತೆ ವರ್ಣಿತಗೊಂಡಿದ್ದು ಇದು ಪ್ರಕೃತಿ ಹಾಗೂ ಮನುಷ್ಯನ ನಡುವಿನ ಸಮರಸ ಜೀವನದ ಧ್ಯೋತಕವೆಂಬಂತಿದೆ. ಈ ರೀತಿಯಲ್ಲಿ ಜಗತ್ತಿನಾದ್ಯಂತ ವಿಭಿನ್ನ ಧರ್ಮಗಳೂ, ಸಂಸ್ಕೃತಿಗಳೂ ಹಾಗೂ ಸಾಹಿತ್ಯಗಳೂ ಪರಿಸರದ ಬಗ್ಗೆ ಅತ್ಯಂತ ಸೂಕ್ಷ್ಮವೂ ವಿವೇಕಯುತವೂ ಆದ ಮನೋಧರ್ಮವನ್ನು ಪ್ರಕಟಿಸಿವೆ. ಪ್ರಕೃತಿಯ ಅಸಂಖ್ಯ ಅಂಶಗಳ ಬಗ್ಗೆ, ಅವುಗಳ ಅಗಣಿತ ಅರಿವನ್ನೂ ಆದರವನ್ನೂ ತೋರಿವೆ.

ಮೂಲಭೂತವಾಗಿ 'ಪ್ರಕೃತಿ ಆರಾಧನೆ' ಕುರಿತ ಪರಿಕಲ್ಪನೆ ಕನ್ನಡ ಸಾಹಿತ್ಯಕ್ಕೆ ಒದಗಿಬಂದದ್ದು ಪಶ್ಚಿಮದ ರೊಮ್ಯಾಂಟಿಕ್ ಕವಿಗಳಿಂದ. ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಕರ್ನಾಟಕದ ಇತಿಹಾಸ ಹೊಸ ಯುಗಕ್ಕೆ ಕಾಲಿಟ್ಟಂತೆ, ಕನ್ನಡದ ಕಾವ್ಯ ಕೂಡ ಹೊಸ ಆಯಾಮದತ್ತ ಹೊರಳಿತು. ಇದರಿಂದಾಗಿ ಕಾವ್ಯದ ನೋಟ, ಬಂಧ, ಕಾವ್ಯದ ಮೂಲಕ ಲೌಕಿಕ ಜಗತ್ತನ್ನು ಪರಿಭಾವಿಸುವ ಕ್ರಮಕೂಡ ಬದಲಾಯಿತು. ನಿಸರ್ಗ ಎಂದರೆ ಕೇವಲ ಒಂದು ದೃಶ್ಯ ಎಂಬ ಭಾವನೆ ಹಿಂದೆ ಸರಿದು ಮನಸ್ಸು ಮತ್ತು ನಿಸರ್ಗವು ಕನ್ನಡ ಸಾಹಿತ್ಯದಲ್ಲಿ ಮೊದಲಬಾರಿಗೆ ಮುಖಾಮುಖಿಯಾದವು.

"ಹತ್ತೊಂಬತ್ತನೇ ಶತಮಾನದ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯ ಮತ್ತು ಕನ್ನಡ ನವೋದಯದ ಪ್ರಕೃತಿ ದರ್ಶನದ ನಡುವೆ ಇರುವ ಸಾಮ್ಯ ಮತ್ತು ಭಿನ್ನತೆಗಳು ಸ್ಪಷ್ಟವಾದಾಗಲೇ ನವೋದಯ ಕಾವ್ಯದ ಪ್ರಕೃತಿ ದರ್ಶನ ಅರಿವಾಗುವುದು. ಸಾಮಾಜಿಕವಾಗಿ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದ ಸತ್ವ ಇರುವುದು ಇಂಗ್ಲಿಷ್ ಜನಾಂಗದ ದಣಿವು ಮತ್ತು ಪ್ರತಿಭಟನೆಯಲ್ಲಿ ಹಾಗೂ ಒಂದು ರೀತಿಯ ತಾತ್ವಿಕ ಹಿಂಜರಿತದಲ್ಲಿ. ಹತ್ತೊಂಬತ್ತನೇ ಶತಮಾನದ ಬಂಡವಾಳಶಾಹಿ ಜಗತ್ತು ಮತ್ತು ನಾಗರೀಕತೆ ತನ್ನ ಕುರೂಪಿ ಮುಖಗಳನ್ನು,

ಕ್ರೂರ ಹಸ್ತಗಳನ್ನು ಇಂಗ್ಲೆಂಡ್‌ನ ಬದುಕಿನಲ್ಲಿ ಪ್ರಕಟಿಸತೊಡಗಿತ್ತು. ವಾಸ್ತವವಾಗಿ ಇಂಗ್ಲೆಂಡ್‌ನಲ್ಲಿ ಬಂಡವಾಳಶಾಹಿ ನಾಗರೀಕತೆ ಹುಟ್ಟಿದ್ದೇ ತೀವ್ರ ಹಿಂಸೆಯ ಗರ್ಭದಿಂದ. ಹಳೆಯ ಸಾಮಾಜಿಕ, ಆರ್ಥಿಕ, ಮಾನಸಿಕ ರಚನೆಗಳನ್ನು ನಾಶಮಾಡಿ ಅದು ತನ್ನ ಹುಟ್ಟನ್ನು ಪಡೆಯಿತು. ಈ ಪ್ರಕ್ರಿಯೆ ಅತ್ಯಂತ ವಿನಾಶಕಾರಿ ಸ್ವರೂಪದ್ದಾಗಿತ್ತು. ಅದರಲ್ಲಿಯೂ ರೊಮ್ಯಾಂಟಿಕ್ ಕಾವ್ಯ ತನ್ನ ಸ್ಪಷ್ಟತೆಯನ್ನು ರೂಪಿಸಿಕೊಳ್ಳುವ ಹೊತ್ತಿಗೆ ಬಂಡವಾಳಶಾಹಿ ನಾಗರೀಕತೆಯ ಬಗ್ಗೆ ಇಂಗ್ಲಿಷ್ ಬುದ್ಧಿಜೀವಿಗಳ ಒಂದು ವರ್ಗಕ್ಕೆ ಯಾವ ಆಸೆಯೂ ಉಳಿದಿರಲಿಲ್ಲ. ಮುಂದೆ ಅದು ತಳೆಯದಿರುವ ಭಯಾನಕ ರೂಪದ ಅರಿವು ರೊಮ್ಯಾಂಟಿಕ್ ಪ್ರತಿಭೆಗೆ ಆಗಲೇ ಹೊಳೆದುಹೋಗಿತ್ತು'. ಮುಗಿಲು ಮುಟ್ಟುವ ಕುರೂಪಿ ಹೊಗೆ ಕೊಳವೆಗಳು, ನರಕದ ಚೂರುಗಳಂತಿರುವ ಕೂಲಿಕಾರ ಬಡಾವಣೆ ಇವೆಲ್ಲವೂ ಇಂಗ್ಲಿಷ್ ಮನಸ್ಸನ್ನು ಗಾಢವಾಗಿ ತಟ್ಟಿದ್ದವು.... ಈ ಕಾರಣಕ್ಕಾಗಿಯೇ ಪರಿಸರದ ಕರಾಳತೆಯ ವಿರುದ್ಧ ಹತಾಶೆ, ದಣಿವು, ಸಿಟ್ಟು, ಪಲಾಯನದ ಆಸೆ ಎಲ್ಲವೂ ಬೆರೆತು ರೊಮ್ಯಾಂಟಿಕ್ ಕಾವ್ಯದ ಚೌಕಟ್ಟು ಸಿದ್ಧವಾಯಿತು. ಒಂದು ನಾಗರೀಕತೆಯ ಎದೆಯೊಡೆದ ಮನಸ್ಸು, ವಾಸ್ತವವಾಗಿ ಅವರು ಪ್ರಕೃತಿಯ ಕಡೆಗೆ ತಿರುಗಿದ್ದು, ನಿಸರ್ಗದ ಆರಾಧಕರಾಗಿದ್ದೂ ಇದೇ ಕಾರಣದಿಂದಲೇ".[೦೬] ಕನ್ನಡ ನವೋದಯ ಕಾವ್ಯದ ಪ್ರಮುಖ ಲಕ್ಷಣವೆಂದರೆ ಪ್ರಕೃತಿಯ ದೈವೀಕರಣ. ಪ್ರಕೃತಿಯ ಪ್ರತಿಯೊಂದು ವಿದ್ಯಮಾನಕ್ಕೆ ಕಾಣದ ಶಕ್ತಿಯೊಂದರ ಅಥವಾ ದೈವದ ಕೃಪೆ ಎಂಬ ನಂಬಿಕೆ ಕುವೆಂಪು ಆದಿಯಾಗಿ ಎಲ್ಲ ಕವಿಗಳಲ್ಲಿ ಬೆಳೆದು ಬಂದಿದೆ. ಪ್ರಕೃತಿ ಕುರಿತು ಕುವೆಂಪುರವರ ವಿಶಿಷ್ಟ ನಿಲುವೆಂದರೆ ಅವರು ಅದನ್ನು ಮಾತೃ ಸ್ಥಾನದಲ್ಲಿರಿಸುತ್ತಾರೆ. 'ಮಾನವನ ಬಾಲ್ಯದೊಂದಿಗಿನ ಸಂಬಂಧದಲ್ಲಿ, ಬಾಲ್ಯದ ಮುಗ್ಧತನದಲ್ಲಿ, ಪ್ರಕೃತಿಯೊಂದಿಗಿನ ಸಂಬಂಧ ಸುಸೂತ್ರ, ಸಹಜ, ನಂತರದ ಹಂತಗಳಾಗಿ ಪ್ರಕೃತಿಯ ಬಗೆಗೆ ಭಕ್ತಿರೂಪಿ ಪ್ರೇಮ, ಒಡನಾಡಿಯೊಂದಿಗಿನ ಸ್ನೇಹಭಾವ, ವಿಶ್ವಮಾತೆಯೊಂದಿಗಿನ ವಿಸ್ಮಯ ಭಾವಗಳು ಒಡಮೂಡತೊಡಗುತ್ತವೆ. ಯಂತ್ರ ನಾಗರೀಕತೆಯ ನಿರ್ವಾತದಲ್ಲಿ ಬದುಕುವ ಭರವಸೆಯನ್ನು ಕಟ್ಟಿಕೊಂಡ ವರ್ಡ್ಸ್‌ವರ್ತ್‌ನ ತಾತ್ವಿಕತೆಯಿದು'. ಇಂತಹ ಪ್ರಕೃತಿ ಸೌಂದರ್ಯಾನುಭವವು ವಿಜ್ಞಾನದಂತೆ ಪ್ರತ್ಯಕ್ಷ ಪ್ರಮಾಣವನ್ನು ಹೊಂದಿಲ್ಲದ ತರ್ಕಾತೀತ ವ್ಯಕ್ತಿ ಸಾಮರ್ಥ್ಯವೆಂದು ಕುವೆಂಪು ಭಾವಿಸುತ್ತಾರೆ. ಆದಕಾರಣ ಪ್ರಕೃತಿಯನ್ನು ವಿಶ್ಲೇಷಣಾ ದೃಷ್ಟಿಯಿಂದ ಕಾಣುವ ವಿಜ್ಞಾನದ ರೀತಿಯನ್ನು ಅವರು ಟೀಕಿಸುತ್ತಾರೆ. ವಿಜ್ಞಾನದ ಈ ಪ್ರಕೃತಿ ಪೃಥಕ್ಕರಣದಿಂದ ಸೌಂದರ್ಯ ವಿಕೃತವಾಗಿ ಸತ್ಯದಿಂದ ದೂರವಾಗುವ ಸ್ಥಿತಿಯುಂಟಾಗುತ್ತದೆ ಎಂಬ ಆತಂಕ ಅವರದ್ದು.[೦೭]

'ಧರ್ಮೋ ರಕ್ಷತಿ ರಕ್ಷಿತ:' ಪರಿಸರವನ್ನು ನಾವು ರಕ್ಷಿಸಿದರೆ ಪರಿಸರವು ನಮ್ಮನ್ನು ರಕ್ಷಿಸುತ್ತದೆ. ಮನುಷ್ಯನಿಗೆ ಶುದ್ಧ ಗಾಳಿ, ಶುದ್ಧ ನೀರು, ಶಾಂತಜೀವನವನ್ನು ನೀಡುತ್ತಲೇ ಬಂದಿರುವ ಪರಿಸರವನ್ನು ಸಂರಕ್ಷಿಸುವುದು ನಮ್ಮ ಜವಾಬ್ದಾರಿಯು ಹೌದು. ನಮ್ಮ ಪ್ರಯೋಜನಕ್ಕೆ ಮಾತ್ರ ಪರಿಸರವನ್ನು ಹೆಚ್ಚಾಗಿ ದೋಚಿಕೊಂಡಲ್ಲದೆ ಮನುಷ್ಯನ ಸುಖ, ಸೌಲಭ್ಯ, ಸಂಪತ್ತುಗಳು ಬೆಳೆಯಲಾರವು ಎಂಬ ಮನೋವೃತ್ತಿ ನಮ್ಮ ಜನಕ್ಕೆ ಹತ್ತಿರವಾಗಿದ್ದು ಮಾತ್ರವಲ್ಲದೆ ನಮ್ಮ ಸಂಸ್ಕೃತಿಗೆ ಹೊರತಾದ ಮನೋಧರ್ಮವಾಗಿದೆ. ಆದರೆ ಈ ಮನೋವೃತ್ತಿಯೇ ಈಗ ಎಲ್ಲೆಲ್ಲೂ ವ್ಯಾಪಿಸಿಕೊಳ್ಳುತ್ತಿದೆ. ಉದ್ಯೋಗಾವಕಾಶಗಳೆಲ್ಲವೂ ಪರಿಸರ ಕ್ಷೋಭೆಯಿಂದಲೇ ಮೈದಳೆಯುವವು ಎಂಬಂತಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ವ್ಯಾಪಕತೆ ಮತ್ತು ಪರಿಣಾಮದಿಂದ ಪರಿಸರದ

ಮೇಲಿನ ಭಾವನೆಗಳು ಕ್ಷೀಣಗೊಳ್ಳುತ್ತಿವೆ. ವಿಜ್ಞಾನ ತಾಂತ್ರಿಕ ಅನ್ವಯವು ಜನರ ಮನಸ್ಸಿನ ಮೇಲೆ ಧನಾಕರ್ಷಕ ಯಂತ್ರದ ಪಡಿಯಚ್ಚನ್ನು ಪ್ರತಿಬಿಂಬಿಸಿದೆ. ಏನೇ ಆಗಲಿ, ಹಣ ಇರಲಿ ಎಂಬುದೇ ಮಂತ್ರವಾಗುತ್ತಿದ್ದು ಉಳಿದೆಲ್ಲ ಮೌಲ್ಯಗಳು ಮೂಲೆಗೆ ಬೀಳುತ್ತಿವೆ. ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಹಿಡಿತ ಸಾಧಿಸುವ ಛಲಕ್ಕೆ ಮುಗಿಬೀಳುತ್ತಿರುವ ಜನಸಮೂಹವನ್ನು ಎಲ್ಲಡೆ ಕಾಣುವಂತಾದುದು ಜನರ ದುರಾಲೋಚನೆಯೋ ಅಥವಾ ಭವಿಷ್ಯದ ದುರಂತವೋ ಎಂಬುದು ಮಾತ್ರ ತಿಳಿಯದಾಗುತ್ತಿದೆ.

ಕೊನೆ ಟಿಪ್ಪಣಿಗಳು:

೧. ಡಾ.ಪಿ. ಕೃಷ್ಣಪ್ಪ ಶೆಟ್ಟಿ., ಡಿ.ಆರ್.ನಟರಾಜ್. ಸಂಪಾದಕರು ಪರಿಸರ: ಮುಂದೇನು? ಪುಟ:೧–೪,

೨. ಪ್ರೊ.ಕೆ.ಭೈರಪ್ಪ, ಪರಿಸರ ಪ್ರಜ್ಞೆ, ಪುಟ:೧೨–೧೩,

೩. ಅದೇ ಪು ಪುಟ:೨೧

೪. ಕೆ.ಭೈರಪ್ಪ, ಪರಿಸರ ಪ್ರಜ್ಞೆ, ಪುಟ:೦೬

೫. ಶೂದ್ರ ಶ್ರೀನಿವಾಸ ಸಂಪಾದನೆ, ನೆಲದ ಮಾತು, ಪುಟ:೦೩

೬. ಡಿ.ಆರ್. ನಾಗರಾಜ್, ಶಕ್ತಿ ಶಾರದೆಯ ಮೇಳ, ಪುಟ:೧೬, ೧೭

೭. ಡಾ॥ ಎನ್. ಜಗದೀಶ್ ಕೊಪ್ಪ, ಉತ್ತರ–ದಕ್ಷಿಣ, ಬೇಂದ್ರೆ–ಕುವೆಂಪು ವ್ಯಕ್ತಿತ್ವ ಮತ್ತು ಕವಿತೆಗಳ ತೌಲನಿಕ ಅಧ್ಯಯನ ಪುಟ:೭೦

ಅಧ್ಯಾಯ–ಐದು

ಕೃತಿಕಾರರ ಕೃತಿಗಳಲ್ಲಿ 'ಜೀವಿ' ಪ್ರಜ್ಞೆ

೫.೧ ಪೀಠಿಕೆ

೫.೨ ಜೀವವೈವಿಧ್ಯದ ಅರ್ಥ ಮತ್ತು ಪ್ರಾಮುಖ್ಯತೆ

೫.೩ ತೇಜಸ್ವಿ ಕೃತಿಗಳಲ್ಲಿ 'ಜೀವಿ' ಪ್ರಜ್ಞೆ

೫.೪ ನಾಗೇಶ ಹೆಗಡೆ ಕೃತಿಗಳಲ್ಲಿ 'ಜೀವಿ' ಪ್ರಜ್ಞೆ

೫.೫ ಕೃತಿಕಾರರ 'ಜೀವಿ' ಪ್ರಜ್ಞೆಯ ಸಾಮ್ಯತೆ ಹಾಗೂ ಭಿನ್ನತೆಗಳು

ಅಧ್ಯಾಯ–ಐದು

ಕೃತಿಕಾರರ ಕೃತಿಗಳಲ್ಲಿ 'ಜೀವಿ' ಪ್ರಜ್ಞೆ

೫.೧ ಪೀಠಿಕೆ:

'ಮನುಕುಲದ ವಿವೇಕರಹಿತ ವರ್ತನೆಗಳ ಖಂಡನೆಗಳೊಂದಿಗೆ ಕೃತಿಗಳಲ್ಲಿ ಬರುವ ಜೀವಿಗಳ ಉಳಿವಿನ ಪ್ರಸ್ತಾಪಗಳು ಜೀವಿ ಪ್ರಜ್ಞೆಯಾಗಬಲ್ಲವೇ?' ಎಂಬ ಸಮಸ್ಯಾ ಹೇಳಿಕೆಯೊಂದಿಗೆ ಅಧ್ಯಯನಕ್ಕೆ ಪ್ರವೇಶಿಕೆ ಪಡೆದುಕೊಳ್ಳುತ್ತಾ ಕೃತಿಕಾರರ ಕೃತಿಗಳಲ್ಲಿ 'ಜೀವಿ' ಪ್ರಜ್ಞೆ ಕುರಿತಂತೆ ಈ ಅಧ್ಯಾಯದಲ್ಲಿ ಹೆಚ್ಚು ವಿವೇಚಿಸಲಾಗಿದೆ. ಜೀವಿ ಪ್ರಜ್ಞೆಯ ವಿವಿಧತೆಯ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳುವ ಪೂರ್ವದಲ್ಲಿ ನಾವು ಸುತ್ತಲಿನ ಪರಿಸರವನ್ನು ಒಮ್ಮೆ ಪರಿಶೀಲಿಸೋಣ. ನಮ್ಮ ಮನೆಯಲ್ಲಿ ತಂದೆ, ತಾಯಿ, ಅಕ್ಕ, ತಂಗಿ, ಅಣ್ಣ, ತಮ್ಮ ಇತರರು ಇರುವಂತೆಯೇ ಮನೆಯ ಅಂಗಳದಲ್ಲಿ ಸಣ್ಣ ಪುಟ್ಟ ಮರಗಿಡಗಳು ಇತರೆ ಜೀವಿಗಳು ಇರುತ್ತವೆ. ಸೊಳ್ಳೆ, ನೊಣ, ಜಿರಲೆ, ಹಲ್ಲಿಗಳನ್ನು ಕಾಣುವುದು ಸಾಮಾನ್ಯ. ಗಾಳಿ, ಬೆಳಕು, ನೀರು ನಮಗೆ ಬೇಕೇ ಬೇಕು. ಈ ಎಲ್ಲವೂ ನಮ್ಮ ಪರಿಸರದಲ್ಲಿ ಪ್ರಮುಖ ಘಟಕಗಳಾಗಿ ಸೇರುತ್ತವೆ. ಈ ದೃಷ್ಟಿಯಿಂದ ಪರಿಸರದಲ್ಲಿ ಎರಡು ಭಾಗಗಳನ್ನು ನಾವು ಗುರುತಿಸಬಹುದು. ಮೊದಲನೆಯದು ಗಾಳಿ, ಬೆಳಕು, ನೀರು, ಮಣ್ಣು, ಶಾಖ ಮುಂತಾದ ಅಜೀವ ವಸ್ತುಗಳು. ಎರಡನೆಯದು ಗಿಡ, ಮರ, ಕ್ರಿಮಿ, ಕೀಟ, ಪ್ರಾಣಿಗಳಂತಹ ಜೀವಿಗಳು. ಯಾವುದೇ ಪರಿಸರವನ್ನು ಗಮನಿಸಿದರೂ, ಈ ಎರಡು ಭಾಗಗಳನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಅಜೀವ ವಸ್ತುಗಳೆಲ್ಲ ಸೇರಿ 'ಭೌತಪರಿಸರ' ಎನಿಸಿಕೊಳ್ಳುತ್ತದೆ. ಹಾಗೆಯೇ ಜೀವಿಗಳೆಲ್ಲ ಸೇರಿ 'ಜೈವಿಕಪರಿಸರ'ವಾಗುತ್ತದೆ. ಇನ್ನೊಂದು ರೀತಿಯಲ್ಲಿ ಯಾವುದೇ ಪರಿಸರದಲ್ಲಿ 'ಅಜೈವಿಕ ಹಾಗೂ ಜೈವಿಕ' ಎಂಬ ಎರಡು ಪ್ರತ್ಯೇಕ ಘಟಕಗಳಿರುತ್ತವೆ ಎನ್ನಬಹುದು. ಅಜೀವ ವಸ್ತುಗಳೆಲ್ಲ ಸೇರಿ 'ಅಜೈವಿಕ ಘಟಕ'ವಾದರೆ ಜೀವಿಗಳೆಲ್ಲ ಸೇರಿ 'ಜೈವಿಕ ಘಟಕ'ವಾಗುತ್ತದೆ. ಭೌತಪರಿಸರ ಅಥವಾ ಅಜೈವಿಕ ಘಟಕದಲ್ಲಿ ಹೆಚ್ಚಿನ ವೈವಿಧ್ಯವಿಲ್ಲ. ಆದರೆ ಜೈವಿಕ ಘಟಕ ಇದಕ್ಕೆ ತೀರಾ ವಿರುದ್ಧ. ಇಲ್ಲಿ ಕಲ್ಪನೆಗೂ ನಿಲುಕದಷ್ಟು ವೈವಿಧ್ಯವಿದೆ. ಇಂದು ಸುಮಾರು ೫ ಕೋಟಿ ವಿವಿಧ ಪ್ರಭೇದಗಳಿರಬಹುದೆಂದು ವಿಜ್ಞಾನಿಗಳು ಊಹಿಸಿದ್ದಾರೆ. ಇವುಗಳಲ್ಲಿ ಮರ, ಗಿಡ, ಪೊದೆ, ಪ್ರಾಣಿ, ಪಕ್ಷಿ, ಕೀಟ, ಶೈವಲ, ಶಿಲೀಂಧ್ರ ಮುಂತಾದ ಸರ್ವ ಸಮಸ್ತ ಜೀವಿಗಳೂ ಸೇರಿವೆ. ಆದರೆ ಇಂತಹ ಅಪಾರ

ವೈವಿಧ್ಯವಿದ್ದರೂ ಯಾವ ಜೀವಿಯೂ ಸಂಪೂರ್ಣವಾಗಿ ಸ್ವತಂತ್ರವಲ್ಲ. ಸಮಸ್ತ ಜೀವಿಗಳೂ ತಮ್ಮ ಉಳಿವಿಗಾಗಿ ಒಂದರ ಮೇಲೊಂದು ಅವಲಂಬಿಸುತ್ತವೆ. ಪರಸ್ಪರ ವರ್ತಿಸುತ್ತವೆ. ಪರಿಣಾಮ ಬೀರುತ್ತವೆ. ಜೀವಿಗಳ ನಡುವೆ ಪರಸ್ಪರ ಅವಲಂಬನೆ ಇರುವಂತೆಯೇ ಜೀವಿಗಳು ಭೌತಪರಿಸರ ಅಥವಾ ಅಜೀವ ವಸ್ತುಗಳ ಮೇಲೆಯೂ ಅವಲಂಬಿತವಾಗಿವೆ. ಅವುಗಳೊಡನೆ ನಿಕಟ ಸಂಬಂಧ ಹೊಂದಿವೆ.

೫.೨ 'ಜೀವಿ' ಪ್ರಜ್ಞೆಯಲ್ಲಿ ವೈಜ್ಞಾನಿಕವೆನಿಸಿಕೊಳ್ಳುವ 'ಜೀವವೈವಿಧ್ಯದ' ಅರ್ಥ ಮತ್ತು ಪ್ರಾಮುಖ್ಯತೆ

ಭೂಮಿಯ ಉದ್ದಗಲಕ್ಕೂ ಹರಡಿರುವ ಚಿಕ್ಕಪುಟ್ಟ ಜೀವಿಗಳಿಂದ ಹಿಡಿದು, ದೈತ್ಯ ತಿಮಿಂಗಿಲಗಳವರೆಗಿನ ಸಮಸ್ತ ಜೀವಕೋಟಿಯ ಅಪಾರ ವಿಭಿನ್ನತೆಯೇ ಜೀವವೈದ್ಯ. ಜೀವವೈವಿಧ್ಯವು ಅನಾದಿ, ಅನಂತ. ಹಲವು ಮಜಲುಗಳ, ವಿಭಿನ್ನ ಹಂತಗಳ ಜೀವರಾಶಿಯ ವಿರಾಟರೂಪ ಯೋಚನೆಗೂ ಮೀರಿದ್ದು. ಜೀವ ವೈವಿಧ್ಯದ ಬಗೆಗಿನ ಚಿಂತನೆ ಹೊಸತೇನಲ್ಲ. ವೇದ ಪುರಾಣ ಕಾಲದಿಂದಲೂ ಅಸಂಖ್ಯ ಜೀವಿಗಳ ವರ್ಣನೆಯನ್ನು ಕೇಳಿದ್ದೇವೆ; ಓದಿದ್ದೇವೆ. ಆದರೂ 'ಜೀವ ವೈವಿಧ್ಯ' ಎಂಬ ಪದ ಸಾಮಾನ್ಯ ಬಳಕೆಗೆ ಬಂದುದು ೧೯೮೦ರ ದಶಕದಲ್ಲಿ. ಜಾಗತಿಕ ಸಂಶೋಧನಾ ಸಂಸ್ಥೆ, ಜಾಗತಿಕ ಬ್ಯಾಂಕ್, ಜಾಗತಿಕ ನಿಸರ್ಗ ನಿಧಿ ಮೊದಲಾದವರ ಮೂರ್ತ ಅಭಿವ್ಯಕ್ತಿಯಾದ ಜೀವವೈವಿಧ್ಯ ಹೊಸ ಆಯಾಮ ಪಡೆಯಿತು.[೧]

ವಿಶಾಲ ಜೈವಿಕ ಪರಿಸರದ ಜೀವಸಂಕುಲದಲ್ಲಿ ವೈವಿಧ್ಯಮಯವಾದ ಜೀವಿಗಳಿವೆ. ಜೀವ ವೈವಿಧ್ಯ (Bio-diversity) ಪರಿಸರದ ಸಮತೋಲನಕ್ಕೆ ಇವುಗಳ ಅಸ್ಥಿತ್ವ ತುಂಬಾ ಅಗತ್ಯವಾದುದು. ಈ ಪರಿಸರ ಸಮತೋಲನದಲ್ಲಿ ಜೀವವೈವಿಧ್ಯದ ಮಟ್ಟವನ್ನು ಕಾಪಾಡುವುದು ಮತ್ತು ಅಧ್ಯಯನ ಮಾಡುವುದು ಬಹು ಮುಖ್ಯವಾದ ವಿಷಯವಾಗಿದೆ ಎಂಬುದಕ್ಕೆ ಜೀವವೈವಿಧ್ಯ ವಿಜ್ಞಾನ (Bio-diversity Science) ಎಂಬ ವಿಜ್ಞಾನದ ಉಪಶಾಖೆ ರೂಪುಗೊಂಡಿರುವುದು ಸಾಕ್ಷಿಯಾಗಿದೆ. ಜೀವಿಗಳ ಸಂಪೂರ್ಣ ವೈಜ್ಞಾನಿಕ ತಿಳುವಳಿಕೆಯೊಂದಿಗೆ ಜೀವ ಪ್ರಭೇದಗಳ ಸಂರಕ್ಷಣೆ ಮತ್ತು ಅವುಗಳ ವಿವೇಚನಾ ಪೂರ್ಣ ಬಳಕೆ ಕುರಿತಂತೆ ಇತರೆ ಎಲ್ಲಾ ವಿಭಾಗಗಳು ಸಹ ಜೀವವೈವಿಧ್ಯ ವಿಜ್ಞಾನದ ಈ ಶಾಖೆಯೊಂದಿಗೆ ಸೇರುತ್ತವೆ. ಇದೊಂದು ಕೇವಲ ಅಕಾಡೆಮಿಕ್ ವಿಷಯವಾಗಿರದೆ ವ್ಯಾಪಕ ಹಿತಾಸಕ್ತಿಯ ಬಹುಮುಖ್ಯ ಜ್ಞಾನ ಪ್ರಕಾರವಾಗಿರುತ್ತದೆ.[೨]

ಸೃಜನೇತರ ಕೃತಿಗಳಲ್ಲಿ ವ್ಯಕ್ತಗೊಳ್ಳುವ 'ಜೀವಿ' ಪ್ರಜ್ಞೆಯ ಸಂಗತಿಗಳು ವೈಜ್ಞಾನಿಕ ಪರಿಕಲ್ಪನೆಯಾದ ಜೀವವೈವಿಧ್ಯದೊಂದಿಗೆ ಹೆಚ್ಚು ನಿರೂಪಿಸಲ್ಪಡುತ್ತವೆ. ಗ್ರಹಿಕೆಯ ದೃಷ್ಟಿಕೋನದಿಂದಾಗಿ ಈ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಬೇಕಾಗುವುದು. ಜೀವವೈವಿಧ್ಯ ಅಥವಾ ಜೈವಿಕ ವೈವಿಧ್ಯವು ಭೂಮಿಯ ಮೇಲೆ ವಿವಿಧ ಜೀವಿಗಳನ್ನು ವಿವರಿಸುವ ಪದವಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಇದನ್ನು ಜೀವನದ ಬದಲಾವಣೆಯ ಮಟ್ಟ ಎಂದು ವಿವರಿಸಲಾಗಿದೆ. ಜೈವಿಕ ವೈವಿಧ್ಯತೆಯು ಸೂಕ್ಷ್ಮಜೀವಿ, ಸಸ್ಯಗಳು, ಪ್ರಾಣಿಗಳು ಮತ್ತು ಹವಳದ ಬಂಡೆಗಳು, ಕಾಡುಗಳು, ಮಳೆಕಾಡುಗಳು, ಮರುಭೂಮಿಗಳು ಮುಂತಾದ ಪರಿಸರ ವ್ಯವಸ್ಥೆಗಳನ್ನು ಒಳಗೊಳ್ಳುತ್ತದೆ. ಜೀವ ವೈವಿಧ್ಯತೆಯೆಂದರೆ, ಎಲ್ಲಾ ಜೀವಿಗಳ ನಡುವಿನ

ವ್ಯತ್ಯಾಸ. ಅಂದರೆ ಭೂಮಿ, ಸಮುದ್ರ ಮತ್ತು ಇತರೆ ಜಲ ಪರಿಸರ ವ್ಯವಸ್ಥೆಗಳು ಅದರ ಭಾಗವಾಗಿವೆ. ಜೀವ ವೈವಿಧ್ಯತೆಯು ನಿರ್ದಿಷ್ಟ ಪ್ರದೇಶದೊಳಗೆ ವಾಸಿಸುವ ವಿವಿಧ ಜಾತಿಗಳ ಸಂಖ್ಯೆಯನ್ನು ಅಥವಾ ಸಮೃದ್ಧಿಯನ್ನು ಸೂಚಿಸುತ್ತದೆ. ಇದು ನಮಗೆ ಲಭ್ಯವಿರುವ ಜೈವಿಕ ಸಂಪನ್ಮೂಲಗಳ ಸಂಪತ್ತನ್ನು ಪ್ರತಿನಿಧಿಸುತ್ತದೆ. ಸಸ್ಯಗಳು, ಪ್ರಾಣಿಗಳು ಮತ್ತು ಇತರ ಜೀವಿಗಳ ಸಮುದಾಯದಿಂದ ನಿರ್ಮಿಸಲ್ಪಟ್ಟ ನೈಸರ್ಗಿಕ ಪ್ರದೇಶವು ಸ್ಥಿರವಾದುದಾಗಿದ್ದು, ಆವಾಸಸ್ಥಾನ ನಾಶದಿಂದಾಗಿ ಮಾನವ ಚಟುವಟಿಕೆಗಳನ್ನು ಯೋಜಿಸುವ ಮೂಲಕ ಅದರ ಸ್ಥಿರತೆಯ ಪ್ರಮಾಣ ಕಡಿಮೆಯಾಗುತ್ತದೆ. ಯುನೈಟೆಡ್ ನೇಷನ್ಸ್ ೨೦೧೧-೨೦೨೦ ಅನ್ನು ವಿಶ್ವಸಂಸ್ಥೆಯ ಜೀವವೈವಿಧ್ಯದ ದಶಕವೆಂದು ಘೋಷಿಸಿತು. ಜೈವಿಕ ವೈವಿಧ್ಯದಲ್ಲಿ ಪ್ರತಿ ಜಾತಿಯೂ, ಪರಿಸರ ವ್ಯವಸ್ಥೆಯಲ್ಲಿ ಎಷ್ಟು ದೊಡ್ಡದಾದ ಅಥವಾ ಚಿಕ್ಕದಾದ ಪ್ರಮಾಣದಲ್ಲಿರುತ್ತದೆ ಎನ್ನುವುದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ವಿವಿಧ ಸಸ್ಯ ಮತ್ತು ಪ್ರಾಣಿ ಜಾತಿಗಳು ಪರಸ್ಪರ ಪ್ರಯೋಜನವನ್ನು ನೀಡುತ್ತವೆ ಮತ್ತು ಈ ವಿಭಿನ್ನ ಪ್ರಭೇದಗಳು ಎಲ್ಲಾ ಜೀವಿಗಳ ನೈಸರ್ಗಿಕ ಸಮರ್ಥನೀಯತೆಯನ್ನು ಖಾತ್ರಿಗೊಳಿಸುತ್ತವೆ. ಒಂದು ಆರೋಗ್ಯಕರ ಮತ್ತು ಘನ ಜೀವ ವೈವಿಧ್ಯತೆಯು ವೈವಿಧ್ಯಮಯ ವಿಕೋಪಗಳಿಂದಲೂ ಸ್ವತ: ಚೇತರಿಸಿಕೊಳ್ಳಬಹುದು. ಜಾಗತಿಕವಾಗಿ ನೋಡುವುದಾದರೆ ಜೀವವೈವಿಧ್ಯವು ಅಸಮಾನವಾಗಿ ಹಂಚಲ್ಪಡುತ್ತದೆ ಮತ್ತು ಬದಲಾಗುತ್ತದೆ. ವಾಯುಗುಣ, ಮಳೆಯ ಪ್ರಮಾಣ, ಮಣ್ಣಿನ ವಿಧ, ಅಕ್ಷಾಂಶ ಮತ್ತು ರೇಖಾಂಶಗಳ ವಲಯಗಳು ಸಹ ಇದರ ಮೇಲೆ ಪ್ರಭಾವ ಬೀರುತ್ತವೆ.[೩]

ಪ್ರಖ್ಯಾತ ಜೀವ ವಿಜ್ಞಾನಿ ಡೇವಿಡ್ ಆಟೆನ್‌ಬರೋ ಮಾತಿನಲ್ಲಿ ಹೇಳುವುದಾದರೆ **"ನಮ್ಮ ಕೈಯಲ್ಲಿ ಇಂದು ನಮ್ಮ ಭವಿಷ್ಯ ಮಾತ್ರವಲ್ಲ, ಜೊತೆಗೆ ನಮ್ಮೊಂದಿಗೆ ಈ ಭೂಮಿಯನ್ನು ಹಂಚಿಕೊಂಡಿರುವ ಉಳಿದೆಲ್ಲ ಜೀವಜಂತುಗಳ ಭವಿಷ್ಯವೂ ಇದೆ".**

"ಒಂದು ದೇಶ ತನ್ನಲ್ಲಿನ ಜೀವಜಂತುಗಳನ್ನು ಹೇಗೆ ನೋಡಿಕೊಳ್ಳುತ್ತದೆ ಎಂಬುದರ ಮೇಲೆ ಆ ದೇಶದ ಘನತೆಯನ್ನು ಅಳೆಯಬಹುದು." – ಗಾಂಧೀಜಿ[೪]

ಪರಿಸರ ವ್ಯವಸ್ಥೆಯ ಸಮತೋಲನವನ್ನು ಕಾಪಾಡಿಕೊಳ್ಳವುದು, ವಾತಾವರಣವನ್ನು ಸ್ಥಿರಗೊಳಿಸುವುದು, ಮಣ್ಣಿನ ರಚನೆಯನ್ನು ಸಂರಕ್ಷಿಸುವುದು ಮಾತ್ರವಲ್ಲದೆ ವಿಶ್ವದ ಜನಸಂಖ್ಯೆಯು ಶೇ. ೮೦ ರಷ್ಟು ಔಷಧಿಗಳ ಉಪಯೋಗವನ್ನು ಪ್ರಕೃತಿಯಿಂದಲೇ ಪಡೆದುಕೊಳ್ಳುತ್ತಿದೆ. ಇಂದು ಭೂಮಿಯ ಮೇಲಿನ ಜೀವ ವೈವಿಧ್ಯವು ಗಂಭೀರ ಅಪಾಯದಲ್ಲಿದೆ. ಅಭಿವೃದ್ಧಿ ಹೆಸರಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಚಟುವಟಿಕೆಗಳು ಜೀವವೈವಿಧ್ಯದ ನಾಶಕ್ಕೆ ಕಾರಣವಾಗಿರುವ ಅಪಾಯಕಾರಿ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಈ ಕುರಿತ ಅಧ್ಯಯನಗಳು ಕೂಡ ಮುಂದಿನ ದಿನಗಳಲ್ಲಿ ಹೆಚ್ಚು ಪ್ರಸ್ತುತವಾಗುತ್ತವೆ.

೫.೩. ತೇಜಸ್ವಿ ಅವರ ಕೃತಿಗಳಲ್ಲಿ 'ಜೀವಿ' ಪ್ರಜ್ಞೆ:

ಪರಿಸರದಲ್ಲಿನ ವಿಸ್ಮಯ ಮತ್ತು ನಿಗೂಢತೆಯನ್ನು ಬೆನ್ನತ್ತಿ ಆ ಬಗ್ಗೆ ಎದುರಾಗುವ ಕೌತುಕಗಳನ್ನು ಅರಿಯಲು ಸದಾ ಜಾಗೃತರಾಗಿರುತ್ತಿದ್ದ ತೇಜಸ್ವಿ ಅವರ ಕೃತಿಗಳಲ್ಲಿ ಜೀವಿ ಪ್ರಜ್ಞೆಯು ಹೇಗೆ ಸಮನ್ವಯಗೊಂಡಿತ್ತು ಎಂಬುದನ್ನು ತಿಳಿಯಲು ಮತ್ತು ಜೀವಿ ಪ್ರಜ್ಞೆಯ

ಸ್ವರೂಪವನ್ನು ಅವಲೋಕಿಸಲು ಅವರ ಕೆಲವು ಕೃತಿಗಳನ್ನು ಮಾತ್ರ ಆಯ್ಕೆ ಮಾಡಿ ಅಧ್ಯಯನಕ್ಕೆ ಒಳಪಡಿಸಲಾಗಿದೆ ಹಾಗೂ ಅಧ್ಯಯನದ ಫಲಿತಗಳನ್ನು ಅಧ್ಯಾಯದ ಕೊನೆಭಾಗದಲ್ಲಿ ಚರ್ಚಿಸಲಾಗಿದೆ.

ತೇಜಸ್ವಿ ಅವರ 'ಪರಿಸರದ ಕಥೆ' ಕೃತಿಯ ಬೆನ್ನುಡಿ ಹೀಗೆ ಹೇಳುತ್ತದೆ. **"ನಾವೆಲ್ಲಾ ನೋಡಿದರೂ ಕಾಣದ ನಮ್ಮ ಸುತ್ತಲಿನ ಬದುಕು– ಪರಿಸರದಲ್ಲೇ ಸೂಕ್ಷ್ಮ ವಿವರಗಳನ್ನು ಕಾಣುವ, ಅದರ ಮೂಲಕ ಅರಿವಿನ ಮಿಂಚನ್ನು ತೋರಿಸುವ ತೇಜಸ್ವಿ ಅವರ ಈ ಕತೆಗಳು ಕನ್ನಡಕ್ಕೆ ಹೊಸದು. ಪರಿಸರ ಪ್ರಜ್ಞೆಯು ವಾದ, ಹೋರಾಟ, ಅಂಕಿ ಅಂಶಗಳಷ್ಟೇ ಅಲ್ಲ. ಪ್ರಕೃತಿಯೊಡನೆ ಸುಖ ದು:ಖದ ಸಂವಾದದ ಸಂಬಂಧವೂ ಹೌದು"** ಎಂದು. ಹಾಗೆಯೇ ಪರಿಸರ ಪ್ರಜ್ಞೆಗೆ ಕನ್ನಡಿ ಹಿಡಿಯುವ ಮತ್ತಷ್ಟು ಸಾಲುಗಳೆಂದರೆ **"ಸುಮ್ಮನೆ ನಮಗೆ ಅಗತ್ಯ ಇದ್ದಷ್ಟು ಮಾತ್ರ ತಿಳಿದುಕೊಂಡು, ಮಿಕ್ಕುದನ್ನು ನೋಡಿ ಅಚ್ಚರಿಪಡುತ್ತ ಇದ್ದು ಬಿಡುವುದು ಒಳ್ಳೆಯದು. ಯೋಚಿಸಿದಷ್ಟೂ ಪರಿಸರ ರಹಸ್ಯಮಯವಾಗುತ್ತದೆ. ಸಂಪೂರ್ಣವಾಗಿ ತಿಳಿಯುತ್ತೇನೆಂದು ಹೊರಡುವುದು ಮೂರ್ಖತನವೇ ಸರಿ"**– ಎಂಬುದಾಗಿದೆ.

ಕಾಡಿನ ಜೀವಿಗಳ ಬದುಕಿನೊಳಗೆ ಮನುಷ್ಯ ಹೋದಷ್ಟೂ ಅವುಗಳಿಗೆ ಅಪಾಯವೇ ಹೊರತು, ಉಳಿಗಾಲವಿಲ್ಲ ಎಂದು ತೇಜಸ್ವಿ ಅರಿತಿದ್ದರು. ಈ ಅರಿವು ಅವರಿಗೆ ಮಗಳು ಸುಶ್ಮಿತಾಳೊಂದಿಗೆ ಸೇರಿ ಪಿಕಳಾರ (ಬುಲ್ ಬುಲ್) ಮತ್ತು ಟುವ್ವಿ ಹಕ್ಕಿ ಮರಿಗಳನ್ನು ಸಾಕಲು ಮುಂದಾದಾಗಲೇ ಅರಿವಾಗಿತ್ತು. ಈ ಅನುಭವಗಳಿಂದ ಅವರು ಹೀಗೆ ಹೇಳುತ್ತಾರೆ, **"ನಾನು ಇನ್ನು ಕಾಡಿನ ಜೀವಿಗಳ ತಂಟೆಗೇ ಹೋಗಬಾರದೆಂದು ಅಖೈರಾಗಿ ನಿರ್ಧರಿಸಿದೆ. ಕಾಡಿನ ಜೀವಸಂಕುಲದೊಳಗೆ ನಾವು ಕೈಹಾಕಿದರೆ ಸಾಕು, ಅದು ಸಹಾಯ ಹಸ್ತವಾದರೂ ಅವುಗಳ ನಾಶ ತಪ್ಪಿದ್ದಲ್ಲವೆಂದು ನನಗೆ ಮನದಟ್ಟಾಯಿತು. ಅವುಗಳಲ್ಲಿ ತೊಂದರೆಗೆ ಸಿಕ್ಕಿದವನ್ನೂ, ತಬ್ಬಲಿಗಳಾದುವನ್ನೂ ರಕ್ಷಿಸುವುದು ನಮ್ಮ ನೈತಿಕ ಜಬಾಬ್ದಾರಿ ಎಂದು ಭಾವಿಸುವುದು, ಕಾಡಿನಲ್ಲಿರುವುದನ್ನೆಲ್ಲಾ ತಾನು ತಿನ್ನುವುದಕ್ಕೆ ದೇವರು ಸೃಷ್ಟಿ ಮಾಡಿದ್ದಾನೆಂದು ತಿಳಿದಿರುವ ಮಾರನ ಮೂರ್ಖತನಕ್ಕಿಂತ ದೊಡ್ಡ ಮೂರ್ಖತನವೆಂದು ಖಂಡಿತವಾಗಿ ಅನ್ನಿಸಿತು"**[೫]ಎಂಬ ನಿರ್ಣಯಕ್ಕೆ ಬರುತ್ತಾರೆ. ಹಾಗೆಯೇ ಪಕ್ಷಿಲೋಕವು ಮನುಷ್ಯ ಲೋಕಕ್ಕಿಂತ ಹೇಗೆ ಭಿನ್ನವಾಗಿದೆಯೆಂದು ತಿಳಿಸುತ್ತಾ, ಪಕ್ಷಿಗಳ ಬದುಕಿನಲ್ಲಿ ಮನುಷ್ಯನು ಹಸ್ತಕ್ಷೇಪ ಮಾಡಿದರೆ ಏನಾಗಬಹುದೆಂಬುದನ್ನು ಪ್ರಾಯೋಗಿಕ ದೃಷ್ಟಾಂತದ ಮೂಲಕ ವಿಶ್ಲೇಷಿಸಿದ್ದಾರೆ.

ಇದೊಂದು ದೃಷ್ಟಾಂತದಿಂದಲೇ ತೇಜಸ್ವಿ ಪರಿಸರದಲ್ಲಿನ ಜೀವಸಂಕುಲದ ಸೂಕ್ಷ್ಮತೆಯನ್ನು ಅರ್ಥಮಾಡಿಸುತ್ತಾರೆ. ಈ ದೃಷ್ಟಾಂತವೇ ಅವರ ಬರಹದ ಒತ್ತಡವೂ ಆಗುತ್ತದೆ. ತೇಜಸ್ವಿಯವರ ಬರಹಕ್ಕೆ ಇಂತಹ ಅನೇಕ ಸಣ್ಣ ಸಣ್ಣ ಸಂಗತಿಗಳು ಮೂಳೆ ಮಾಂಸಗಳಂತಾಗಿ ಪರಿಸರದಲ್ಲಿ ಅವುಗಳ ಪ್ರಾಮುಖ್ಯತೆಯನ್ನು ಹೇಳುತ್ತವೆ. ಇಲ್ಲಿ ನಾವು ಅರ್ಥಮಾಡಿಕೊಳ್ಳಬಹುದಾದ ವಿಷಯವೆಂದರೆ ಪರಿಸರ ಪ್ರಜ್ಞೆ ಎಂಬುದು ನಾವು ಬದುಕುತ್ತಿರುವ ಸುತ್ತಲಿನ ಪರಿಸರವನ್ನು ವಿಶಿಷ್ಟವಾಗಿ ನೋಡುವಂತಹ ಒಂದು ಮನೋಧರ್ಮ. ಇದು ನಿರಂತರ ಅಧ್ಯಯನದಿಂದ ಮೂಡುವಂತದ್ದಲ್ಲ. ಬದುಕಲ್ಲಿ ಅದು ರೂಢಿಗತವಾಗಬೇಕು. ಅದು ಅಭಿಪ್ರೇರಣೆಗೆ ಸಂಬಂಧಿಸಿದ್ದು. ಇಂತಹ ಒಂದು ಧ್ಯಾನಸ್ಥ ಸ್ಥಿತಿ ತೇಜಸ್ವಿ ಅವರಲ್ಲಿತ್ತು. ಆದರೆ ಅದು

ಆಧ್ಯಾತ್ಮದಂತಿರದೆ ಭಾವಪರವಶತೆಯಿಂದ ಹೊರಬಂದು ಹೆಚ್ಚು ಪ್ರಾಯೋಗಿಕವಾಗಿತ್ತು. ಇಲ್ಲಿನ ಕತೆಗಳು ಜೀವಿಗಳು ಮತ್ತು ಅವರು ಸಾಂಸ್ಕೃತಿಕವಾಗಿ ಕಟ್ಟಿಕೊಡುವ ಪಾತ್ರಗಳ ಸಮ್ಮಿಳತದೊಂದಿಗೆ ಪ್ರಾಯೋಗಿಕ ಅನುಭವದ ದರ್ಶನವನ್ನು ಮಾಡಿಸುತ್ತವೆ.

"ಇದನ್ನೆಲ್ಲಾ ನೋಡಿದರೆ ಈ ಪ್ರಕೃತಿ ನಮ್ಮ ಊಹೆಗೂ ನಿಲುಕದ ಎಂಥ ಜಟಿಲವಾದ ಜಾಲ ಎಂದು ಅಚ್ಚರಿಯಾಗುತ್ತದೆ. ತಾಯಿಹಕ್ಕಿ ಮರಿ ಹುಟ್ಟಿದಾಗಿನಿಂದ ದೊಟ್ಟದಾಗುವವರೆಗೆ ಆಹಾರ ಬದಲಾಯಿಸುತ್ತಾ ಬರುತ್ತದೆ. ರೆಕ್ಕೆ ಬಲಿತ ಮೇಲೆ ಗೂಡು ಬಿಟ್ಟು ಹೊರಬರುವಂತೆ ಪ್ರೇರೇಪಿಸುತ್ತವೆ. ಅವುಗಳೆದುರು ರೆಕ್ಕೆ ಬಡಿದು ಹಾರಬೇಕೆಂದು ತೋರಿಸಿಕೊಡುತ್ತವೆ. ಹೇಗೆ ಹುಳು ಹಿಡಿಯಬೇಕು, ಯಾವುದನ್ನು ತಿನ್ನಬಾರದು, ಯಾವುದನ್ನು ತಿನ್ನಬೇಕು, ಪ್ರತಿಯೊಂದನ್ನು ತೋರಿಸಿಕೊಡುತ್ತವೆ. ಈ ವಿದ್ಯೆಗಳಲ್ಲಿ ಯಾವೊಂದನ್ನು ತಿಳಿಯದಿದ್ದರೂ ಈ ಹಕ್ಕಿಮರಿ ಜೀವನ ಸಂಗ್ರಾಮದಲ್ಲಿ ಬದುಕುಳಿಯುವುದು ಅಸಂಭವ. ನಮಗೆ ಮೇಲುನೋಟಕ್ಕೆ ಎಲ್ಲಾ ಸಲೀಸಾಗಿ ತಂತಾನೇ ನಡೆದುಕೊಂಡು ಹೋಗುವಂತೆ ತೋರಿದರೂ ಮಾನವ ಸಮಾಜವನ್ನು ಮೀರಿದ ಜಟಿಲ ಕ್ರಿಯೆಗಳು ಅಲ್ಲಿ ನಡೆಯುತ್ತಿರುತ್ತವೆ"[೬] ಎಂದಿದ್ದಾರೆ ತೇಜಸ್ವಿ

ಹಕ್ಕಿಮರಿಯ ಜೀವನ ಸಂಗ್ರಾಮದಲ್ಲಿ ವಿಕಾಸವಾದದ ತತ್ವವನ್ನು ಅನ್ವಯ ಮಾಡುವ ತೇಜಸ್ವಿ ಅಂತಿಮವಾಗಿ ಯಾವುದೇ ಜೀವಿಯ ಬದುಕುಳಿಯುವ ತಾತ್ವಿಕತೆಯು ಮಾನವ ಸಮಾಜವನ್ನು ಮೀರಿ ನಿಲ್ಲುತ್ತದೆಯೆಂದೂ, ಅದು ಬದುಕುವುದೇ ಆದರೂ ಸುಲಭವಲ್ಲದ ಜಟಿಲ ಕ್ರಿಯಾವಳಿ ಆಗಿರುತ್ತದೆ ಎನ್ನುತ್ತಾ, ಜೀವವೈವಿಧ್ಯದ ಬದುಕಿನ ಸಂಕೀರ್ಣತೆಯನ್ನು ಅರ್ಥಮಾಡಿಸುತ್ತಾರೆ. ತೇಜಸ್ವಿ ಅವರ ಅನುಭವ ಜನ್ಯ ವಿಚಾರಗಳು ಜೀವಿ ಪ್ರಜ್ಞೆಯೊಂದಿಗೆ ಪರಿಸರವನ್ನು ಮಾತ್ರವಲ್ಲದೆ ಬದುಕನ್ನೇ ಬೇರೆ ರೀತಿಯಲ್ಲಿ ನೋಡಬಹುದಾದ ಪೂರ್ಣದೃಷ್ಟಿಯನ್ನು ಮನವರಿಕೆಮಾಡಿಕೊಡುವವು.

ಕರ್ವಾಲೋ ಕೃತಿಯಲ್ಲಿನ **"ಎಷ್ಟನ್ನು ನಾವು ಕಣ್ಣಿಗೆ ಕಂಡರೂ ನೋಡದೇ ಬಿಟ್ಟಿದ್ದೇವೋ ಏನೋ. ತಪ್ಪು ಸರಿ ಹೇಗೆ ಹೇಳ್ತೀರಿ. ನಮಗೆ ಈ ಕ್ಷಣ, ಇಲ್ಲಿ ಹೀಗನ್ನಿಸಿದೆ. ಜೀವವಿಕಾಸಕ್ಕೆ ಎಲ್ಲಿದೆ ಕೊನೆ!"** ಎಂಬ ಸಾಲುಗಳನ್ನು ಒಮ್ಮೆ ಅವಲೋಕಿಸಿದರೆ, ನಮ್ಮ ಸುತ್ತಲಿನ ಪರಿಸರದಲ್ಲಿ ಅದೆಷ್ಟೋ ಸಂಗತಿಗಳನ್ನು ನಾವು ಸೂಕ್ಷ್ಮವಾಗಿ ನೋಡಲೇ ಇಲ್ಲವೆನೋ ಎಂದೆನಿಸುತ್ತದೆ. ಒಮ್ಮೆ ನೋಡಿದ್ದರೂ, ಅವುಗಳನ್ನು ಏಕಾಗ್ರತೆಯಿಂದ ದೃಷ್ಟಿಸಿ ವೀಕ್ಷಿಸಲಿಲ್ಲವೇನೋ. ವೀಕ್ಷಿಸಿದ ತಕ್ಷಣಕ್ಕೆ ಕಾಣದಾದ ಜೀವಿಯನ್ನು ಮರುವೀಕ್ಷಿಸಿ ನೋಡುವ ಬಯಕೆಯಾದರೂ ನಮ್ಮಲ್ಲಿ ಮೂಡುವುದೇ? ಆದರೆ ಒಂದಂತು ನಿಜ, ನೋಡುವುದೇ ಬೇರೆ. ವೀಕ್ಷಿಸುವುದೇ ಬೇರೆ. ವೀಕ್ಷಿಸುವುದರಲ್ಲಿ ಆಸಕ್ತಿಯೊಂದಿಗೆ ತನ್ಮಯತೆಯನ್ನು ಜೊತೆಗೂಡಿಸುವುದು ತೇಜಸ್ವಿಗೆ ಒಲಿದು ಬಂದಿತ್ತು. ತೇಜಸ್ವಿ ಅವರ ಸಾಹಿತ್ಯದ ಕೇಂದ್ರ ಪ್ರಜ್ಞೆಯೇ 'ಪರಿಸರ' ಎಂದು ಸಾಕಷ್ಟು ವಿಮರ್ಶಕರು ಈಗಾಗಲೇ ಗುರುತಿಸಿರುವಂತೆ, ಅವರ ಪರಿಸರ ಪ್ರೀತಿ ಇದನ್ನೇ ಸ್ಪಷ್ಟಪಡಿಸುತ್ತದೆ. ಕರ್ವಾಲೋ, ಪರಿಸರದ ಕಥೆಗಳು, ಚಿದಂಬರ ರಹಸ್ಯ ಓದಿದವರಿಗೆ ಪರಿಸರದ ಬಗೆಗಿನ ಅವರ ಸೂಕ್ಷ್ಮತೆ ಮತ್ತು ಒಳನೋಟದ ಅರಿವಾಗುತ್ತದೆ.

ನಿಸರ್ಗದ ನಿಗೂಢತೆಯನ್ನು ಅರಿಯುವ ತವಕ ಅವರ ಕೃತಿಗಳಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಕರ್ವಾಲೋದಲ್ಲಿ ಬಿರಿಯಾನಿ ಕರಿಯಪ್ಪ ಹಕ್ಕಿಯೊಂದರತ್ತ ಕಲ್ಲು ಬೀಸಿದಾಗ ಕರ್ವಾಲೋ ಕಾಣಿಸಿಕೊಂಡು ಆತನ ಗುರಿ ತಪ್ಪಿಸುತ್ತಾರೆ. ಗುರಿ ತಪ್ಪಿ ಆ ಹಕ್ಕಿಗೆ ಅಪಾಯವಾಗದೆ, ಅದು ಜೀವಂತವಾಗಿ ಉಳಿದ ಮೇಲೆ ಆ ಹಕ್ಕಿಯ ಬಗ್ಗೆ ವಿವರಿಸುತ್ತಾ...."**ಮರದ ಮೇಲೆ ನೋಡುತ್ತೇನೆ ಒಂದು ದೊಡ್ಡ ಜಾತಿ ಮಂಗಾಟೆ ಹಕ್ಕಿ ಕೂತಿದೆ, ನೀವು ಕೊಕ್ಕಾನಕ್ಕಿ ಅಂತಿರಲ್ಲ ಅದು. ನನಗೆ ಅದರ ಇತ್ಯೋಪರಿಯೆಲ್ಲಾ ಒಂದು ಏಟಿಗೆ ಸ್ಮೃತಿಪಟಲದಲ್ಲಿ ಆವರಿಸಿತು. ಅದರ ಹೆಣ್ಣು ಹಕ್ಕಿ ಮರದ ಪೊಟರೆಯೊಳಗೆ ಗೂಡು ಮಾಡಿ ಮೊಟ್ಟೆ ಇಡುತ್ತದೆ. ಎಲ್ಲಾ ಆಗಿ ಕಾವು ಕೊಡಲು ಕುಳಿತ ನಂತರ ಗಂಡು ಹಕ್ಕಿ ಇನ್ನ್ಯಾವುದೂ ಗೂಡೊಳಗೆ ಹೋಗದಂತೆ ಬಲವಾದ ತೆರೆಯನ್ನು ಹೊರಗಿನಿಂದ ನೇಯ್ದು ಹೆಣ್ಣು ಹಕ್ಕಿಯ ಕೊಕ್ಕು ಮಾತ್ರ ಹೊರಬರುವಂತೆ ಕಂಡಿ ಬಿಟ್ಟಿರುತ್ತದೆ. ಗಂಡು ಹಕ್ಕಿ ತಂದು ಕೊಟ್ಟ ಆಹಾರವೇ ಹೆಣ್ಣು ಹಕ್ಕಿಗೆ ಆಧಾರ. ಗಂಡು ಹಕ್ಕಿಯನ್ನೇನಾದರು ಹೊಡೆದು ಬಿಟ್ಟರೆ ಹೆಣ್ಣು ಹಕ್ಕಿಗೆ ಆಹಾರವಿಲ್ಲದೆ ಅಲ್ಲೆ ಸೊರಗಿ ಮರಿಗಳೊಡನೆ ಸಾಯುತ್ತದೆ"**. ಈ ರೀತಿ ನಿಸರ್ಗದ ಸೂಕ್ಷ್ಮಗಳನ್ನು ಹೇಳುತ್ತಾ ಓದುಗನನ್ನು ಆ ಕ್ಷಣ ಅಲ್ಲೇ ಹಿಡಿದಿಡುವ ಹಾಗೆಯೇ ಪರಿಸರದ ಸಂಕೀರ್ಣ ವ್ಯವಸ್ಥೆಯ ಬೀಸೊಂದನ್ನು ತೇಜಸ್ವಿ ತಮ್ಮ ಕಲಾಕೃತಿಯಲ್ಲಿ ಕಾಣಿಸುತ್ತಾರೆ. ಈ ವಿಚಾರಗಳಲ್ಲಿ ತೇಜಸ್ವಿ ಅವರ ಬರಹ ಭಾವುಕತೆಯಿಂದ ತಪ್ಪಿಸಿಕೊಳ್ಳುತ್ತದೆ. ಆದರೆ ಕೆಲವೊಮ್ಮೆ ಅವರು ದಟ್ಟೈಸಿದ ಹಸಿರು ಪರಿಸರವನ್ನು ವಿವರಿಸುವಾಗ ಭಾವುಕರಾದರೂ, ಓದುಗ ಅದರಲ್ಲೇ ತೇಲಿ ಹೋಗದಂತೆ, ಆದರೆ ಆ ಕ್ಷಣ ಒಂದು ತಂಗುದಾಣದಲ್ಲಿ ನಿಂತು ವಾಸ್ತವವನ್ನು ಯೋಚಿಸುತ್ತಾ ಮತ್ತೆ ಓದಿನಲ್ಲಿ ಮುನ್ನಡೆಯುವಂತೆ ಮಾಡುವ ಶಕ್ತಿ ಅವರ ಬರಹದಲ್ಲಿರುವುದನ್ನು ಗುರುತಿಸಬಹುದು.

"ನಿಜಕ್ಕೂ ನಮಗಾರಿಗೂ ಅಷ್ಟೊಂದು ಬೇಸರವೇನೂ ಆಗಲಿಲ್ಲ. ಕಾಲ ದೇಶದ ಆಚೆಗಿನ ಯಾವುದೋ ವಿಸ್ಮೃತಿಯ ತುಣುಕು ನಮ್ಮೆದುರು ಮಿಂಚಿ ಮತ್ತೆ ಅದೇ ವಿಸ್ಮೃತಿಯಲ್ಲಿ ಲೀನವಾಗಿ ಹೋಗಿತ್ತು."[೨] ಮತ್ತು **"ಎಷ್ಟೊಂದನ್ನು ನಾವು ಕಣ್ಣಿಗೆ ಕಂಡೂ ನೋಡದೆ ಬಿಟ್ಟಿದ್ದೆವೋ ಏನೋ"** ಎಂದು ನಿರೂಪಕ ಹಿಂದೆ ಹೇಳಿದ್ದ ಮಾತು ಈ ಕಾರಣದಿಂದಲೇ ತುಂಬಾ ಮುಖ್ಯವಾಗುತ್ತದೆ. ಏಕೆಂದರೆ ತಮ್ಮ ಸುತ್ತಲ ಬದುಕನ್ನು, ಮನುಷ್ಯರನ್ನು, ಪ್ರಾಣಿ ಕೀಟಗಳನ್ನು ಅರಿಯಲು ಈ ಯಾತ್ರೆ ಅವರೆಲ್ಲರಿಗೂ ಒಂದು ವಿಶಿಷ್ಟ ಸಾಧನವಾಗಿ ಮೂಡಿಬರುತ್ತದೆ. ತಮ್ಮ ಸ್ಥಿತಿಯ ಮಿತಿಯಲ್ಲಿ ಪ್ರತಿಯೊಬ್ಬರೂ ಒಂದು ಹೊಸ ಅರಿವಿಗೆ ಬರುತ್ತಾರೆ ಮತ್ತು ಈ ಹೊಸ ಅರಿವಿನಲ್ಲಿ ತಮ್ಮ ಸ್ಥಿತಿಯನ್ನು ಮೀರಲು ಪ್ರಯತ್ನಿಸುತ್ತಾರೆ. 'ಕರ್ವಾಲೋ' ಬದುಕಿನ ವಿಸ್ಮಯವನ್ನು ಕುರಿತ ಕಾದಂಬರಿ ಎಂದಾಗ ಕೇವಲ ಬೆರಗಿನ ಪ್ರಪಂಚಕ್ಕೆ ನಮ್ಮನ್ನು ಆಹ್ವಾನಿಸುವುದು ತೇಜಸ್ವಿಯವರ ಉದ್ದೇಶವಲ್ಲ ಎಂಬುದನ್ನು ಗಮನಿಸಬೇಕು. ಕ್ರಿಯಾತ್ಮಕ ಸಾಧ್ಯತೆಗಳತ್ತ ನಮ್ಮ ಗಮನವನ್ನು ಸೆಳೆಯುವುದೇ ಅವರ ಪ್ರಧಾನ ಆಶಯ ಎನ್ನಬಹುದು.

"೬೦ಕೋಟಿ ವರ್ಷಗಳ ಹಿಂದೆ ಈ ಜೀವ ಜಗತ್ತಿನಲ್ಲಿ ಒಂದು ಹಾರುವ ಓತಿಯಿತ್ತು, ಅದಕ್ಕೆ ರೆಕ್ಕೆಗಳಿದ್ದವು. ಜೀವವಿಕಾಸದ ಮುನ್ನಡೆಯಲ್ಲಿ ಈ ಹಾರುವ ಓತಿ ಮೆದುಳನ್ನು ಮೀರಿ ಮೈ ಬೆಳೆಸಿಕೊಂಡಿತು. ಮುಂದೆ ಭೌಗೋಳಿಕ ಪರಿಸರದಲ್ಲಿ ವ್ಯತ್ಯಾಸ ಉಂಟಾದಾಗ ಬದಲಾದ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ ಹಾರುವ ಓತಿಯ ವಂಶ ಅಳಿಯಿತು. ಈ ಓತಿಯ ಒಂದೋ

ಎರಡೋ ಮಾದರಿ ಪ್ರಾಣಿಗಳು ಅದು ಹೇಗೋ ವಿನಾಶದ ಅಪಾಯದಿಂದ ತಪ್ಪಿಸಿಕೊಂಡು ಬದುಕಿ ಉಳಿದಿವೆ. ಅವಕ್ಕೆ ರೆಕ್ಕೆಗಳು ಹಕ್ಕಿಯಂತಿವೆಯೋ ಅಥವಾ ಅಳಿಲಿನಂತಿವೆಯೋ ಸ್ಪಷ್ಟವಿಲ್ಲ. ಅಂತೂ ಕೋಟಿಗಟ್ಟಲೇ ವರ್ಷದ ಹಿಂದಿನ ಗುಟ್ಟನ್ನೆಲ್ಲಾ ಹೊಟ್ಟೆಯೊಳಗೆ ಅರಗಿಸಿಕೊಂಡಿರುವ ಅಪೂರ್ವಜೀವಿ ಇದು. ಈ ಹಾರುವ ಓತಿಯ ಶೋಧನೆಗಾಗಿ ಜಗತ್ತಿನ ಪ್ರಾಣಿ ಪಕ್ಷಿಗಳ ತಜ್ಞರು ಓಡಾಡುತ್ತಿದ್ದಾರೆ. ಇದರ ಒಂದು ಮಿಂಚು ನೋಟ ಸಿಕ್ಕಿದರೂ ಸಾಕು ಅವರು ಧನ್ಯತೆಯ ಭಾವವನ್ನು ಪಡೆಯುವರು. ಆದರೆ ಯಾರಿಗೂ ಇಂದಿನವರೆಗೆ ಸದರ ಸುಳಿವು ಸಿಕ್ಕಿಲ್ಲ, ಸುದೈವದಿಂದ ಇದೇ ಮಲೆನಾಡಿನ ಕಾಡಿನ ಒಂದು ಕಡೆ ಮಂದಣ್ಣನ ಕಣ್ಣಿಗೆ ಕೆಲವು ಸಾರಿ ಕಂಡಿದೆ" ಎಂದು ನಿರೂಪಕ ಸೃಷ್ಟಿಯ ಅದ್ಭುತ ವಿಚಿತ್ರವನ್ನು ವಿವರಿಸುವಾಗ ಮಲೆನಾಡಿನ ಪಶ್ಚಿಮ ಘಟ್ಟಗಳಲ್ಲಿ ಅವಿತಿರುವ ಜೀವ ವೈಚಿತ್ರ್ಯದ ವಿಸ್ಮಯಗಳು ತೇಜಸ್ವಿಯನ್ನು ಯಾವೆಲ್ಲಾ ಬಗೆಯಲ್ಲಿ ಬಿಡದಂತೆ ಕಾಡುತ್ತಿದ್ದವು ಎಂಬುದನ್ನು ತಿಳಿಯಲು ಕೃತಿಯು ನೆರವಾಗುತ್ತವೆ.

'ಜೀವಿ' ಪ್ರಜ್ಞೆಯಲ್ಲಿ ಹಾರುವ ಓತಿಯು ಕಾದಂಬರಿಯ ಕಲಾ ಪ್ರತಿಮೆಯ ಕಲ್ಪನೆಯನ್ನು ಮೀರುತ್ತಾ, ವಿಜ್ಞಾನಿಯ ಆವಿಷ್ಕಾರಕ್ಕೆ ಸಡ್ಡು ಹೊಡೆದು ನಿಲ್ಲವಂತಹ ಸಂಗತಿಯಾದರೆ, ಮಂದಣ್ಣನಿಗೆ ಅದು ಊಹಾತೀತವಾಗಿರದೆ ಸಾಮಾನ್ಯವೆಂಬಂತಿರುತ್ತದೆ. ಪ್ರಕೃತಿಯ ಎರಡು ತುದಿಗಳ ನಡುವೆ ಕಾದಂಬರಿಯ ಪಾತ್ರಗಳು ಬಂದು ಹೋಗುತ್ತವೆ; ಅವುಗಳ ಬದುಕು ಅಸ್ತಿತ್ವ ಪಡೆದುಕೊಳ್ಳುತ್ತದೆ. ಈ ಪಾತ್ರಗಳಲ್ಲೂ ನಮಗೆ ಎರಡು ವಿರುದ್ಧವಾದ ತುದಿಗಳೇ ಕಂಡು ಬರುತ್ತವೆ. ವಿಜ್ಞಾನಿ ಕರ್ವಾಲೋ ಒಂದು ಕೊನೆಯಾದರೆ, ಮಂದಣ್ಣ ಮತ್ತೊಂದು ಕೊನೆ. ಕರ್ವಾಲೋ ಅವರ ಅಸ್ಥಿತ್ವದ ಬೇರುಗಳು ವಿಜ್ಞಾನ ಕ್ಷೇತ್ರದಲ್ಲಿ ನೆಲೆ ಪಡೆದುಕೊಂಡರೆ, ಮಂದಣ್ಣನ ಅಸ್ತಿತ್ವ ಇರುವುದು ಪ್ರಕೃತಿಯಲ್ಲಿ ಮತ್ತದರ ಒಡನಾಟದಲ್ಲಿ. ವಿಜ್ಞಾನ–ಪ್ರಕೃತಿಗಳ ನಡುವಣ ಕೊಂಡಿಯಾಗಿ, ಜೀವಜಂತುವಾಗಿ, ಜೀವವಿಕಾಸಪಥದ ಅವಶೇಷವಾಗಿ, ಕರ್ವಾಲೋ–ಮಂದಣ್ಣರ ನಡುವಣ ಸಂವಹನ ಕ್ರಿಯೆಯಾಗಿ, ಆಸಕ್ತಿಯ ಕೇಂದ್ರವಾಗಿ ಹಾರುವ ಓತಿಯ ಚಿತ್ರಣ ಬರುತ್ತದೆ. ಕರ್ವಾಲೋವಿನಲ್ಲಿನ ಸಂಗತಿಗಳು ಒಂದರೊಳಗೊಂದು ಬೆರೆಯುತ್ತಾ, ಇತಿಹಾಸ–ವರ್ತಮಾನ–ಭವಿಷ್ಯತ್ತುಗಳನ್ನು ಬೆಸೆಯುತ್ತಾ, ವಿಜ್ಞಾನ ಆಧ್ಯಾತ್ಮವಾಗುತ್ತಾ, ವಾಸ್ತವ ವಿಸ್ಮಯವಾಗುತ್ತಾ, ಓದುಗನನ್ನು ಆವರಿಸಿಬಿಡುವ ಈ ಕಾದಂಬರಿ ಪ್ರಬುದ್ಧ ಚಿಂತಕನೊಬ್ಬ ತೀವ್ರ ಕಾಳಜಿಯಿಂದ ನಡೆಸಿದ ತತ್ವ ಜಿಜ್ಞಾಸೆಯಾಗಿದೆ; ಜೀವಪರ ಧೋರಣೆಯ ಕಲಾಕಾರನೊಬ್ಬ ಹಿಡಿದಿಟ್ಟ ದಟ್ಟಜೀವನದ ವಿವರಣೆಯಾಗಿರುತ್ತದೆ.

ಡಾ.ಕೆ.ಪುಟ್ಟಸ್ವಾಮಿಯವರು 'ನಿಗೂಢತೆಯ ಬೆನ್ನಹತ್ತಿದ ಬೆರಗಿನ ಬೇಟೆಗಾರ' ಎಂಬ ಶೀರ್ಷಿಕೆ ಅಡಿಯಲ್ಲಿ ತೇಜಸ್ವಿಯವರ ಪರಿಸರ ಪ್ರಜ್ಞೆಯ ಬಗ್ಗೆ ಅಭಿವ್ಯಕ್ತಿಸುತ್ತಾ, ಕರ್ವಾಲೋದಲ್ಲಿ ಪ್ರಕೃತಿ–ವಿಜ್ಞಾನದ ಬೆಸುಗೆಯಾಗಿ ವ್ಯಕ್ತಗೊಳ್ಳುವ ಹಾರುವ ಓತಿಯ ಕಾಲ್ಪನಿಕ ಚಿಂತನೆಯು **'ಗುರುತ್ವ ಬಂಧದಿಂದ ಮುಕ್ತಗೊಂಡು ವಿಮೋಚನೆಯೆಡೆಗೆ ಹಾರುವಂಥದ್ದಾಗಿರುತ್ತದೆ'** ಎಂದಿದ್ದಾರೆ. ತೇಜಸ್ವಿಯವರ ನಿಸರ್ಗ, ಪರಿಸರ ಮತ್ತು ವೈಜ್ಞಾನಿಕ ವಿಚಾರಧಾರೆಯಲ್ಲಿ ಕುವೆಂಪುರವರಂತೆಯೇ ತೇಜಸ್ವಿಯವರಿಗೆ ವೈಜ್ಞಾನಿಕ ಬರವಣಿಗೆ ಮತ್ತು ಅದರ ಮಾಹಿತಿ ಸಂಗ್ರಹ ವಿಮೋಚನೆಯ ಹಾದಿಯೆಂದು ನಂಬಿರುವಂತೆ ಕಾಣುತ್ತದೆ ಎಂದು ಅಭಿಪ್ರಾಯಿಸುತ್ತಾರೆ. ಬಿಡುಗಡೆಯ ಪ್ರಯತ್ನವೆಂದರೆ ಗುರುತ್ವದ ಬಂಧನವನ್ನು ಮೀರಿ

ಆಕಾಶದೆಡೆಗೆ ಚಿಮ್ಮುವ ಸಾಹಸ. ಅರ್ಥಾತ್ ರೂಢ ಸಂಪ್ರದಾಯಗಳ ಪರಿಧಿಯಿಂದ ಜಿಗಿಯ ಬೇಕೆನ್ನುವ ಹಂಬಲ. ಒಂದು ಬಗೆಯ ವಿಮೋಚನೆಯ ಹುಡುಕಾಟ. ಹಾರಾಟ ವಿಮೋಚನೆಗೆ ಅಂತ್ಯಂತ ಸಮರ್ಥ ರೂಪಕ. ಇದು ತೇಜಸ್ವಿಯವರ ಕೃತಿಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಕರ್ವಾಲೋ ಕೃತಿಯಲ್ಲಿ ಓತಿ ಹಾರಿ ಅನಂತದಲ್ಲಿ ಲೀನವಾಗುವುದು ಅಂಥ ಸತ್ವಶಾಲಿ ರೂಪಕಗಳಲ್ಲೊಂದು ಎಂಬ ಅಭಿಪ್ರಾಯ ಅವರದು. ಕರ್ವಾಲೋದಲ್ಲಿನ ಜೀವಿ ಪ್ರಜ್ಞೆಯನ್ನು ಸ್ವಲ್ಪ ವೈಜ್ಞಾನಿಕರಿಸಿದರೆ ಸೂರ್ಯನ ಸುತ್ತಾ ಈ ಭೂಮಿಯೆಂಬ ಜೀವಗೋಲ ನಿರಂತರ ಸುತ್ತುವುದು ಗುರುತ್ವಾ ಶಕ್ತಿಯಿಂದಲೇ. ಚಲನೆಯೇ ವಿಶ್ವದ ಸತ್ಯ ಮತ್ತು ಅಧಿನಿಯಮವಾಗಿದ್ದು, ಬ್ರಹ್ಮಾಂಡವನ್ನೇ ಈ ಮೂಲಕ ನಿಯಂತ್ರಣದಲ್ಲಿಟ್ಟಿರುವ ಅತ್ಯದ್ಭುತ ಶಕ್ತಿಯಾಗಿದೆ. ಗ್ರಹಗಳ ಅಸ್ಥಿತ್ವವೆಲ್ಲವೂ ಇದರ ಮುಷ್ಠಿಯಲ್ಲಿವೆ. ವಿಮರ್ಶೆಯಲ್ಲಿ ಗುರುತ್ವಾ ಬಂಧವನ್ನೇ ಮೀರುತ್ತದೆ ಎಂಬ ಹಾರುವ ಓತಿಯ ಕಲಾಪ್ರತಿಮೆ ಅಚ್ಚರಿ ಮೂಡಿಸುವಂತದ್ದು. ಜೀವ ವಿಕಾಸದ ಹಾದಿಯನ್ನೊಮ್ಮೆ ಹಿಂತಿರುಗಿ ನೋಡಿದಾಗ ಈ ಜಗತಿನಲ್ಲಿ ದೈತ್ಯಾಕಾರವಾದ ಡೈನೋಸಾರ್‌ಗಳು ಇದ್ದವು ಮತ್ತು ಸಂಪೂರ್ಣ ಅಳಿದವು ಎಂಬ ವಿಸ್ಮಯದಂತೆ ಹಾರುವ ಓತಿಯೂ ಈ ಭೂಮಿಯಲ್ಲಿ ಇದ್ದಿರಬಹುದು. ಹಾಗೆ ಹಾರುತ್ತಾ ಅದು ಅನಂತದಲ್ಲಿ ಲೀನವಾಯಿತು ಎಂಬ ಪ್ರಜ್ಞೆಯನ್ನು ತೇಜಸ್ವಿ ಓದುಗರಿಗೆ ಹತ್ತಿರವಾಗಿಸುತ್ತಾರೆ.

ತೇಜಸ್ವಿಯ ಇಂತಹ ಕಲ್ಪನೆಗಳಿಗೆ ಬಹುಮುಖ್ಯ ಕಾರಣ ಪಶ್ಚಿಮದ ವಿಜ್ಞಾನದ ಕ್ರಾಂತಿಗಳು ಮತ್ತು ವೈಜ್ಞಾನಿಕ ಆವಿಷ್ಕಾರಗಳು ಇದ್ದಿರಬಹುದು. ತೇಜಸ್ವಿ ವೈಜ್ಞಾನಿಕ ಆವಿಷ್ಕಾರಗಳಿಂದ ಪ್ರೇರಿತರಾಗಿದ್ದರು. ಇವುಗಳಲ್ಲಿ ಅವರನ್ನು ಬಹುವಾಗಿ ಸೆಳೆದ ವಿಷಯವೆಂದರೆ ಡಾರ್ವಿನ್ನನ ವಿಕಾಸವಾದ ಮತ್ತೊಂದು ಕ್ವಾಟಂ ಸಿದ್ಧಾಂತ. ಅವರ ಪರಿಸರ ಸಂಬಂಧಿತ ಬರಹಗಳಲ್ಲಿ ಇವುಗಳ ಫಲಿತವನ್ನಾಧರಿಸಿದ ಜೀವಿ ಪ್ರಜ್ಞೆಯನ್ನು ಹೆಚ್ಚು ಕಾಣಬಹುದಾಗಿದೆ. ಕಳೆದೆರಡು ಶತಮಾನಗಳ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ಸಮಗ್ರ ಪರಿಸರದ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದ್ದಾನೆ. ಜೀವ ಸಂಕುಲಗಳ ಉಗಮ (ಆರಿಜಿನ್ ಆಫ್ ಸ್ಪೀಷಿಸ್) ಎಂಬ ಮಹಾಗ್ರಂಥದಲ್ಲಿ **'ಈ ಜಗತ್ತಿನಲ್ಲಿ ಜೀವ ಸಂಕುಲಗಳು ಭಗವಂತನಿಂದ ಹಠಾತ್ತಾಗಿ ರೂಪುಗೊಂಡಿದ್ದಲ್ಲ. ಮಿಲಿಯಾಂತರ ವರ್ಷಗಳಿಂದ ಬದಲಾಗುತ್ತಿರುವ ಪರಿಸರದೊಂದಿಗೆ ಬದಲಾಗುತ್ತಾ ಜೀವವಿಕಾಸದ ಒತ್ತಡಗಳಿಂದ ರೂಪುಗೊಂಡಿವೆ ಹಾಗೂ ರೂಪುಗೊಳ್ಳುತ್ತಾ ಮುಂದುವರಿಯುತ್ತಿವೆ'** ಎಂಬುದನ್ನು ದಾಖಲಿಸಿದ್ದಾನೆ. ಭೂಮಿ ತನ್ನ ಕೋಟಿ ವರ್ಷಗಳ ಇತಿಹಾಸದಲ್ಲಿ ಅದೆಷ್ಟೋ ಹೊಸ ಜೀವಿಗಳ ಸೃಷ್ಟಿಯನ್ನು ಕಂಡಿದೆ. ವಿಕಾಸಕ್ಕೆ ಅನುಕೂಲಕರ ವಾತಾವರಣವನ್ನು ನಿರ್ಮಿಸಿಕೊಂಡಿದೆ. ಜೀವಸಂಕುಲವೇ ನಲುಗಿ ಕೋಟ್ಯಾಂತರ ಜೀವಿ ನಾಶವಾದರೂ ಮತ್ತೆ ವಿಕಾಸ ಪ್ರಕ್ರಿಯೆ ಮುಂದುವರೆದು ಹೊಸ ಜೀವಿಯ ಉಗಮಕ್ಕೆ ದಾರಿ ಮಾಡಿಕೊಟ್ಟಿದೆ ಈ ಭೂಮಿ. ಭೌಗೋಳಿಕ ಪರಿಸರದ ವ್ಯತ್ಯಯದಲ್ಲೂ ಹಲವಾರು ಹೊಡೆತಗಳನ್ನು ಎದುರಿಸಿದ ಹಾರುವ ಓತಿಯ ಮಾದರಿಗಳು ನಶಿಸಿ ಅಲ್ಲೊಂದು ಇಲ್ಲೊಂದು ಬದುಕುಳಿಯಲು ಸಾಧ್ಯವಾಯಿತು ಎಂಬ ಅವರ ವಿವರಣೆಯಲ್ಲಿ ಉಳಿವಿಗಾಗಿ ಹೋರಾಟದ ಪ್ರಾಮುಖ್ಯತೆಯನ್ನು ಕಾಣಬಹುದಾಗಿದೆ.

'ತೇಜಸ್ವಿಯವರ ಕಥೆಗಳು' ಭಾಗದಲ್ಲಿ ಉಲ್ಲೇಖಿಸುತ್ತಾ, ಈ ಕಾದಂಬರಿಯ 'ಅಂಥೆಂಟಿಸಿಟಿ' ಕಾಣುವುದು ಪುಟ್ಟ ಸಂಗತಿಗಳಲ್ಲಿ; ಅವುಗಳ ಸೂಕ್ಷ್ಮ ವಿವರಗಳಲ್ಲಿ ಎನ್ನುತ್ತಾರೆ ಜಿ.ಪಿ. ಬಸವರಾಜು ಅವರು. ಜೇನು ಸಾಕಾಣಿಕೆ, ಗುರುಗಿ ಹೂ, ಅದು ಎಂಟು ವರ್ಷಗಳಿಗೊಮ್ಮೆ ಹೂ ಬಿಡುವ ಸಂಗತಿ, ಮಡಕೆ ಜೇನಿನ ವಿವರ ಇತ್ಯಾದಿಗಳ ಬಗ್ಗೆ ಪ್ರಸ್ತಾಪಿಸುತ್ತಾ, ಹಾಗೆಯೇ ಮುಂದುವರೆದು ಇದು ಪ್ರಾಚೀನತೆಯ ಪಳೆಯುಳಿಕೆ. ಕಾಲ ಪ್ರವಾಹದಲ್ಲಿ ಉಳಿದು ಬಂದ ಜೀವ ಜಂತುವಿನ ಸಂಕೇತವೂ ಹೌದು. ಹಲವು ರಹಸ್ಯಗಳ ಕೇಂದ್ರದಂತೆ, ವಿಜ್ಞಾನದ ಅನೇಕ ವರ್ಷಗಳ ಸಾಧನೆಯನ್ನು ಥಟಕ್ಕನೆ ಏರುಪೇರು ಮಾಡಬಲ್ಲ ಶಕ್ತಿಯನ್ನು, ರಹಸ್ಯಗಳನ್ನು ಸಂಗತಿಗಳನ್ನು ಪಡೆದುಕೊಂಡಿರುವ ಜೀವಚರ. ಇದು ನಮ್ಮ ಪ್ರಜ್ಞೆ; ನಮ್ಮ ಕುತೂಹಲ; ನಮ್ಮ ದಿಗ್ಭ್ರಮೆಯೂ, ದಿಕ್ಸೂಚಿಯೂ ಹೌದು[೮]ಎನ್ನುತ್ತಾರೆ. ನಮ್ಮನ್ನು ಒಂದೇ ಜಿಗಿತಕ್ಕೆ ಕೋಟ್ಯಾಂತರ ವರ್ಷಗಳಷ್ಟು ಹಿಂದಕ್ಕೆ ಒಯ್ಯುವ ಸಾಧನವೂ ಆಗಿದ್ದು, ಜೀವವಿಕಾಸದ ಹಾದಿಯಲ್ಲಿನ ಅನೇಕ ಸಂಗತಿಗಳನ್ನು ಬಿಚ್ಚುವ ಕಾಲಕೋಶವಾಗಿದೆ ಎಂದು ಕಲಾಕೃತಿಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

'ನಡೆಯುವ ಕಡ್ಡಿ, ಹಾರುವ ಎಲೆ'ಯಲ್ಲಿ **"ನಾವು ವೈಜ್ಞಾನಿಕವಾಗಿ ಈಗೀಗ ಸಾಧಿಸಿರುವ ಅನೇಕ ಕೌತುಕಗಳನ್ನು ಕೀಟಗಳು ತಮ್ಮದೇ ಆದ ರೀತಿಯಲ್ಲಿ ಎಂದಿನಿಂದಲೋ ಸಾಧಿಸಿರುವುದು ಒಂದು ವಿಚಿತ್ರವೇ ಸರಿ."** [೯] ಎಂದಿದ್ದಾರೆ ತೇಜಸ್ವಿ. ಕ್ಷುದ್ರ ಜೀವಿಗಳೆಂದು ಪರಿಗಣಿಸಲ್ಪಟ್ಟ ಕೀಟಜಗತ್ತನ್ನು ಪ್ರವೇಶಿಸಿ, ಅವುಗಳ ವೈವಿಧ್ಯಮಯವಾದ ಬದುಕಿನ ಬಗ್ಗೆ ತೇಜಸ್ವಿ ವಿವರಿಸುತ್ತಾರೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಪರಾಗಸ್ಪರ್ಶತೆ ಮತ್ತು ಬಹು ಉಪಯುಕ್ತತೆ ನೆಲೆಯಲ್ಲಿ ಕೀಟಗಳದ್ದು ಪ್ರಮುಖ ಪಾತ್ರವಿದೆ. ಈ ಕೀಟಗಳು ಮನುಷ್ಯನಿಗೆ ಸಹಬಂಧಿಯಾಗಿವೆ ಎಂಬುದನ್ನು ಅವರ 'ನಡೆಯುವ ಕಡ್ಡಿ ! ಹಾರುವ ಎಲೆ!' ಎಂಬ ಕೃತಿಯಲ್ಲಿ ಕಾಣಬಹುದು. ದೈನಂದಿನ ಚಟುವಟಿಕೆಗಳ ಪ್ರಮುಖ ಜೈವಿಕ ಚಟುವಟಿಕೆಗಳಾದ ಕೀಟನಾಶಕ ಸಿಂಪಡಿಕೆ ಮತ್ತು ಅವುಗಳ ಬಳಕೆ ಯಾವ ರೀತಿ ಈ ಕೀಟಗಳ ಬದುಕಿಗೆ ಮಾರಕ ಎಂಬುದನ್ನು ವಿವರಿಸುತ್ತಾರೆ. ಇದರಿಂದಾಗಿ ಸುಮಾರು ಮೂರು ಸಾವಿರ ಕೀಟಗಳು ನಶಿಸುತ್ತವೆ ಎಂಬ ಆತಂಕಕಾರಿ ಮಾಹಿತಿ ನೀಡಿ, ಜೀವಜಾಲದ ಸರಪಳಿಯಲ್ಲಿ ಕೀಟಗಳ ಪ್ರಾಧಾನ್ಯತೆ ಮತ್ತು ವಿಶೇಷತೆಯ ಬಗ್ಗೆ ಉಲ್ಲೇಖಿಸಿರುವ ಅಂಶಗಳನ್ನು ಕೃತಿಯಲ್ಲಿ ಕಾಣಬಹುದು. ಉದಾಹರಣೆಗೆ 'ಡ್ರೊಸೋಫಿಲಾ' ಹೆಸರಿನ ೫ ಮಿಲಿಮೀಟರ್ ಉದ್ದದ ನೊಣ ಒಂದೇ ವರ್ಷದಲ್ಲಿ ೨೫ ತಲೆಮಾರು ನೊಣಗಳನ್ನು ಉತ್ಪಾದಿಸುತ್ತದೆ. ಹಾಗೆ ಹುಟ್ಟಿದ ನೊಣಗಳೆಲ್ಲಾ ಬದುಕಿ ಉಳಿದರೆ ಒಂದು ವರ್ಷದ ಕೊನೆಯಲ್ಲಿ ಉತ್ಪತ್ತಿಯಾಗುವ ನೊಣಗಳು ಎಷ್ಟು ಗೊತ್ತೇ? ಅವನ್ನೆಲ್ಲಾ ಸೇರಿಸಿ ಉಂಡೆ ಕಟ್ಟಿದರೆ ೯೬ ಮಿಲಿಯನ್ ಮೈಲುವ್ಯಾಸದ ಅಗಾಧ ಗಾತ್ರದ ಚಂಡೇ ಸಿದ್ಧವಾಗುತ್ತದೆ. ಸೂರ್ಯನಿಂದ ಭೂಮಿಯವರೆಗಿನ ನೊಣದ ಉಂಡೆಯನ್ನು ಕಲ್ಪಿಸಿಕೊಳ್ಳಲು ನಿಮ್ಮಿಂದ ಸಾಧ್ಯವೇ?[೧೦] ಅಚ್ಚರಿಯನ್ನು ವ್ಯಕ್ತಪಡಿಸುವ ತೇಜಸ್ವಿಯವರ ಜೀವಜಂತುಗಳ ಬಗೆಗಿನ ನಿರೂಪಣೆಗಳು ಓದುಗನಿಗೆ ಬೆರಗಾಗಿಸುವಂತದ್ದಾಗಿದೆ.

'ಏರೋಪ್ಲೇನ್ ಚಿಟ್ಟೆ' ಕೃತಿಯ **"ಯಾರೂ ಇದುವರೆಗೂ ಕಂಡಿರದ ಪವಾಡವೇನಲ್ಲ ಇದು. ಮಾಹಿತಿ ಲೋಕದಲ್ಲಿ ಹುಡುಕಿದರೆ ಚಿತ್ರ ವಿವರಗಳೆಲ್ಲ ಸಿಗುತ್ತವೆ. ಆದರೆ ಪುಸ್ತಕದಲ್ಲಿ**

ನೋಡುವುದಕ್ಕೂ ಜೀವನದಲ್ಲಿ ಸಂಧಿಸುವುದಕ್ಕೂ ವ್ಯತ್ಯಾಸ ಇದೆ. ಎಷ್ಟೋ ಜನರು ತಾವೂ ನಿಮ್ಮೂರಿಗೆ ಬಂದು ಇವನ್ನೆಲ್ಲಾ ನೋಡಬೇಕೆಂದು ಕಾಗದ ಬರೆಯುತ್ತಾರೆ. ಹಾಗೆಂದು ಬಂದು ನೋಡುವವರಿಗೆ ಪೋಸ್ ಕೊಡಲೆಂದು ಇಲ್ಲಿ ಯಾವುದೂ ಕಾದು ಕೂತಿರುವುದಿಲ್ಲ." ಎಂಬ ಹೇಳಿಕೆ ಮತ್ತು **"ಇವನ್ನೆಲ್ಲಾ ನೋಡಲು ಎಲ್ಲಿಗಾಗಲೀ ಹೋಗುವ ಅಗತ್ಯವೂ ಇಲ್ಲ. ನಾವು ಎಲ್ಲಿದ್ದೇವೋ ಅಲ್ಲೇ ಅತ್ತಿತ್ತ ಕಣ್ಣು ಬಿಟ್ಟು ನೋಡಿದರೆ ಸಾಕು."**[೧೧] ಈ ಹೇಳಿಕೆಗಳಲ್ಲಿ ತೇಜಸ್ವಿ ಅವರ ಪರಿಸರದ ಹರಹು ಅತ್ಯಂತ ವಿಶಾಲವಾಗಿದ್ದು, ಅವರೊಳಗಿರುವ ಅನ್ವೇಷಕ ಅವರನ್ನು ತಮ್ಮ ಸುತ್ತಲ ಪಶ್ಚಿಮಘಟ್ಟದ ಪರಿಸರವನ್ನು ತಡಕಿ ನೋಡಲು ಪ್ರೇರೇಪಿಸಿದಂತಿದೆ. ಕ್ಷುದ್ರಜೀವಿಗಳೆಂದು ಪರಿಗಣಿಸಲ್ಪಟ್ಟ ಕೀಟಜಗತ್ತನ್ನು ಪ್ರವೇಶಿಸಿ, ಅವುಗಳ ವೈವಿಧ್ಯಮಯವಾದ ಬದುಕಿನ ಬಗ್ಗೆ ತೇಜಸ್ವಿ ವಿವರಿಸುತ್ತಾರೆ. ವಿಜ್ಞಾನಿಗಳು ಗುರುತಿಸಿರುವ ಜೀವಿಗಳ ಪಟ್ಟಿಯಲ್ಲಿ ಸಿಂಹಪಾಲು ಕೀಟಗಳದ್ದು. ಪರಾಗಸ್ಪರ್ಶದಿಂದ ಹಿಡಿದು ಜೇನಿನ ಸವಿಯನ್ನು ನಮ್ಮ ನಾಲಗೆಗೆ ತಾಗಿಸುವವರೆಗೆ ಈ ಕೀಟಗಳು ಮನುಷ್ಯನಿಗೆಷ್ಟು ಪೂರಕವೆಂಬುದು ಅವರ "ನಡೆಯುವ ಕಡ್ಡಿ! ಹಾರುವ ಎಲೆ! ಪುಟ್ಟ ಕೃತಿಯಲ್ಲಿ ಬಂದಿದೆ. ಗಿರಿಜಾಶಂಕರ ಅವರು ತೇಜಸ್ವಿ ಅವರ ಪರಿಸರ ಅನ್ವೇಷಕ ಪ್ರವೃತ್ತಿಯನ್ನು ತಾವು ಕಂಡುಕೊಂಡ ಹಾಗೂ ಅವರ ಕೃತಿಯ ಎಳೆಗಳಲ್ಲಿ ಮೂಡಿಬರುವ ಮನೋಧರ್ಮದ ಸ್ಥಿತಿಯನ್ನು ಅರಿತು ವ್ಯಾಖ್ಯಾನಿಸಿದ್ದಾರೆ. ಪ್ರಕೃತಿಯ ಭದ್ರ ನೆಲೆಗಟ್ಟಿನ ಮೇಲೆ ಮಾತ್ರ ಮನುಷ್ಯನ ಬದುಕು ಭದ್ರವಾಗಿರುತ್ತದೆ. ಅದು ಅಳ್ಳಕವಾದಷ್ಟೂ ಬದುಕು ದುರ್ಬಲವಾಗುತ್ತದೆಂಬ ಸಂದೇಶ ಅವರ ಪ್ರಮುಖ ಕಥೆ ಕಾದಂಬರಿಗಳಲ್ಲಿ ಅಣುರಣಿಸಿತು. ಮನುಷ್ಯ ಕೇಂದ್ರೀತ ಚಿಂತನೆಯನ್ನು ತಿರಸ್ಕರಿಸಿ, ಜೀವಿಕೇಂದ್ರಿತ ಚಿಂತನೆಯನ್ನು ಅವರು ಆಯ್ಕೆ ಮಾಡಿಕೊಂಡರು ಎಂಬ ನಿಲುವು ವಿಮರ್ಶಕರಿಗಿತ್ತು.

ತೇಜಸ್ವಿಯವರ ಮಾತಿನಲ್ಲೇ ಹೇಳುವುದಾದರೆ **"ಮನುಷ್ಯನ ಸ್ನೇಹ ವಿಶ್ವಾಸಗಳೂ ಕಾಡಿನ ಪ್ರಾಣಿಗಳಿಗೆ ಕ್ರೌರ್ಯ ದ್ರೋಹಗಳಷ್ಟೇ ಅಪಾಯಕಾರಿ"** ಎನ್ನುವುದು ಅವರ 'ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು' ಕೃತಿಯಲ್ಲಿನ ಅಧ್ಯಾಯವಾದ 'ನಾವು ಕೊಂದ ಹಕ್ಕಿ'ಯಲ್ಲಿ ಚೆನ್ನಾಗಿ ಮನದಟ್ಟಾಗುತ್ತದೆ. ಪರಿಸರದ ಕಥೆ, ಏರೋಪ್ಲೇನ್ ಚಿಟ್ಟೆ ಕೃತಿಗಳಲ್ಲೂ ಈ ಹಾರಾಟದ ಕಥೆಗಳು ನುಗ್ಗಿ ಬರುತ್ತವೆ. ಅವರು ವರ್ಣಿಸುವ ಅಂಬರದ ಹಕ್ಕಿಗಳ ಹಾರಾಟ, ಮಿಂಚುಳ್ಳಿಯ ಬೇಟೆ ಒಂದು ಬಗೆಯ ಆಧ್ಯಾತ್ಮಿಕ ಲೋಕವನ್ನೆ ನಿರ್ಮಿಸಿ ಬಿಡುತ್ತದೆ. ಮಿತಿಯನ್ನು ಮೀರುವ, ಅವರ ಬಯಕೆಗೆ ಗುರುತ್ವದ ಮಿತಿಯನ್ನು ಮೀರಿಯೇ, ಮಿತಿಯನ್ನು ಅರಿಯುವ ಹಕ್ಕಿ-ಕೀಟಗಳು ಅವರನ್ನು ಆಕರ್ಷಿಸಿರುವುದು ಸಹಜವಾಗಿಯೇ ತೋರುತ್ತದೆ. ತೇಜಸ್ವಿ ಅವರ ಈ ಆಶಯವನ್ನು ಕಾರ್ಯರೂಪಕ್ಕೆ ತರುವಲ್ಲಿ ಭಾರತ ಸರ್ಕಾರದ ಕೃಷಿ ಉಪಯೋಗಿ ಕೀಟಗಳ ರಾಷ್ಟ್ರೀಯ ಕಾರ್ಯಶಾಲೆ (ಎನ್‌ಬಿಎಐಐ)ಸಂಸ್ಥೆ ಶ್ಲಾಘನೀಯ ಕೆಲಸ ಮಾಡುತ್ತಿದೆ. ರೈತರಿಗೆ ಕಿರುಕುಳ ಕೊಡುವ ಜೀವಿಗಳನ್ನು ಕೀಟಗಳ ಮೂಲಕವೇ ನಿಯಂತ್ರಿಸುವ ನಾನಾ ಉಪಾಯಗಳನ್ನು ಶೋಧಿಸುತ್ತಿರುವ ಈ ಸಂಸ್ಥೆ, ಬೆಂಗಳೂರಿನ ಹೆಬ್ಬಾಳದಲ್ಲಿ ಒಂದು ಕೀಟ ಸಂಗ್ರಹಾಲಯವನ್ನು ಸ್ಥಾಪಿಸಿ, ಶಾಲಾ ಮಕ್ಕಳಿಗೆ ಹಾಗೂ ಆಸಕ್ತ ರೈತರಿಗೆ ಮಾರ್ಗದರ್ಶನ ಮಾಡುತ್ತಿದೆ. [೧೨]

'ನಾಗೇಶ್ ಹೆಗಡೆ' ಮತ್ತು 'ಈಶ್ವರ್ ಪ್ರಸಾದ್' ಸಂಪಾದಿತ ಕೃತಿಯಾದ **'ತೇಜಸ್ವಿ-ಕೀಟ ಮತ್ತು ಆರ್ಕಿಡ್ ಲೋಕ'**ದಲ್ಲಿ ಲೇಖಕರು ತೇಜಸ್ವಿ ಬಗ್ಗೆ ಹೀಗೆ ಉಲ್ಲೇಖಿಸಿದ್ದಾರೆ. "ತೇಜಸ್ವಿಯೆಂದರೆ

ಪಕ್ಷಿಲೋಕ; ತೇಜಸ್ವಿ ಅಂದರೆ ಮೀನು ಶಿಕಾರಿ; ತೇಜಸ್ವಿ ಅಂದರೆ ಪೋಟೋಗ್ರಫಿ; ತೇಜಸ್ವಿ ಅಂದರೆ ಮೂಡಿಗೆರೆ; ಕನ್ನಡಿಗರ ಪ್ರಜ್ಞೆಯಲ್ಲಿ ಆಳವಾಗಿ ಮೂಡಿದ ಗೆರೆಯಂತಿದ್ದಾರೆ. ಅಂಥ ತೇಜಸ್ವಿ ತಮ್ಮ ಸುತ್ತಲಿನ ಕೀಟಲೋಕದ ಬಗೆಗೂ ತುಂಬ ಅಧ್ಯಯನ ಮಾಡಿದ್ದರು; ಪ್ರಕೃತಿಯ ಮಡಿಲಲ್ಲಿ, ಕಣ್ಣಿಟ್ಟಲ್ಲಿ ಕಾಣುವ ಕೀಟಗಳನ್ನು ಗಮನಿಸಿದರು; ಅವುಗಳ ಚೆಹರೆಗಳನ್ನು ಕೂಲಂಕಷವಾಗಿ ದೃಷ್ಟಿಸಿ ನೋಡಿದರು; ವಿಜ್ಞಾನಿಗಳ ಜೊತೆ ಚರ್ಚೆ ಮಾಡಿದರು; ಅವುಗಳ ಬಗೆಗಿದ್ದ ಮುದ್ರಿತ ಮಾಹಿತಿಗಳನ್ನು ತರಿಸಿ ಓದಿದರು; ಪುಸ್ತಕಗಳನ್ನೂ ಬರೆದರು; ಬರೀ ಕೀಟಗಳಷ್ಟೇ ಅಲ್ಲ, ಅವುಗಳ ಜೊತೆಜೊತೆಗೇ ವಿಕಾಸಗೊಂಡ ಹೂಗಳನ್ನು, ಆರ್ಕಿಡ್‌ಗಳನ್ನು ಅಧ್ಯಯನ ಮಾಡಿದರು."[೧೩]

ಪ್ರಜಾವಾಣಿ ದೈನಿಕ-ವಿಜ್ಞಾನ ವಿಶೇಷ ಅಂಕಣದಲ್ಲಿ ನಾಗೇಶ ಹೆಗಡೆಯವರು,'ತೇಜಸ್ವಿ ಮತ್ತು ಕೀಟಲೋಕ' ಎಂಬ ಉತ್ಸವದಲ್ಲಿ ತೇಜಸ್ವಿಯವರು ಕೀಟಪ್ರಪಂಚದ ವಿಕಾಸದ ಬಗ್ಗೆ ವಿಸ್ಮಯ-೦೧ ರಲ್ಲಿ ದಾಖಲಿಸಿರುವ ಬಂಬಲ್ ದುಂಬಿ ಕುರಿತ ಅಂಶಗಳನ್ನು ಮತ್ತಷ್ಟು ವಿವರಿಸಿದ್ದಾರೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿದ ಪ್ರಮುಖ ಅಂಶಗಳು ಹೀಗಿವೆ. ದೇಶದ ವಿವಿಧ ನಗರಗಳ ೪೦೦ ಶಾಲೆಗಳ ೩೦ ಸಾವಿರ ಮಕ್ಕಳನ್ನು ಹೂದೋಟಗಳಿಗೆ ಅಟ್ಟಲಾಗಿತ್ತು, ದುಂಬಿಗಳನ್ನು (ಬಂಬಲ್‌ಬೀ) ಹುಡುಕಿ ಗಣತಿ ಮಾಡುವ ಕೆಲಸದಲ್ಲಿ ಮಕ್ಕಳು ತೊಡಗಿದ್ದರು. ಅವರು ಸಂಗ್ರಹಿಸಿದ ಮಾಹಿತಿಯ ಮುಖ್ಯಾಂಶಗಳನ್ನು ಬಿಬಿಸಿ ಬಿಡುಗಡೆ ಮಾಡಿರುತ್ತದೆ. ನಗರದಾಚೆನ ಪ್ರದೇಶಗಳಿಗಿಂತ ನಗರದ ಮಧ್ಯೆಯೇ ಹೆಚ್ಚಿನ ಸಂಖ್ಯೆಯ ದುಂಬಿಗಳಿವೆ (ಗುಂಗೀಹುಳು) ಎಂಬುದು ಈ ಸಮೀಕ್ಷೆಯಿಂದ ಗೊತ್ತಾಗಿರುತ್ತದೆ. ಬ್ರಿಟಿಷ್ ನಗರವಾಸಿಗಳು ತಮ್ಮ ಮನೆಯ ಸುತ್ತಲಿನ ಕೈದೋಟಗಳಲ್ಲಿ ನಸುನೀಲಿಯ, ಪರಿಮಳಯುಕ್ತ ಲ್ಯಾವೆಂಡರ್ ಹೂಗಳನ್ನೇ ಹೆಚ್ಚಾಗಿ ಬೆಳೆಯುವುದರಿಂದ ದುಂಬಿಗಳ ಸಂಖ್ಯೆ ಹಿಂದೆಂದಿಗಿಂತ ಹೆಚ್ಚಾಗಿದೆ ಎಂಬ ತೀರ್ಮಾನಕ್ಕೆ ವಿಜ್ಞಾನಿಗಳು ಬಂದಿದ್ದಾರೆ. ಈ ಗಣತಿಯಿಂದ ನಗರ ಪರಿಸರದ ತುಸು ಸ್ಪಷ್ಟ ಚಿತ್ರಣ ಸಿಕ್ಕಂತಾಗಿದ್ದು, ವಿಜ್ಞಾನಿಗಳ ಕೆಲಸ ತುಸು ಹಗುರಾಗಿದೆ. ಏಕಕಾಲಕ್ಕೆ ಅಷ್ಟೊಂದು ಸ್ಥಳಗಳನ್ನು ಭೇಟಿ ಮಾಡಲು ಅವರಿಂದ ಸಾಧ್ಯವಾಗುತ್ತಿರಲಿಲ್ಲ. ಗಣತಿಯ ಮುನ್ನ ಮಕ್ಕಳಿಗೆ ಸೂಕ್ತ ತರಬೇತಿ ನೀಡಿದ್ದಲ್ಲದೆ, ಸಮೀಕ್ಷೆಯ ಸಂದರ್ಭದಲ್ಲಿ ತಜ್ಞರ ಅನಿರೀಕ್ಷಿತ ಎಂಟ್ರಿಕೊಟ್ಟು ಅಲ್ಲಲ್ಲಿ ತಾಳೆ ನೋಡುತ್ತಿದ್ದರು. 'ಮಕ್ಕಳು ನಮಗಿಂತ ಅಚ್ಚುಕಟ್ಟಾಗಿ ಗಣತಿ ನಡೆಸಿದ್ದಾರೆ' ಎಂದು ಇಕಾಲಜಿ ಅಧ್ಯಯನ ಸಂಸ್ಥೆಯ ಸಂಶೋಧಕಿ ಡಾ.ಹೆಲೆನ್‌ರಾಯ್ ಹೇಳಿದ್ದನ್ನೂ ಬಿಬಿಸಿ ವರದಿ ಮಾಡಿದೆ. ಎಲ್ಲಕ್ಕಿಂತ ದೊಡ್ಡ ಲಾಭ ಏನೆಂದರೆ ಕೀಟಗಳ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಹುಟ್ಟುವಂತಾಗಿದೆ ಎಂಬ ಮಾಹಿತಿಯನ್ನು ಹೆಗಡೆ ಅವರು ದಾಖಲಿಸಿದ್ದಾರೆ.

ಚಾರ್ಲ್ಸ್ ಡಾರ್ವಿನ್ ಕೂಡ ಹಿಂದೆ ಈ ಬಂಬಲ್ ದುಂಬಿಗಳ ಸಮೀಕ್ಷೆ ನಡೆಸಿದ್ದ. ಬೆಕ್ಕುಗಳು ಹೆಚ್ಚಾಗಿ ಕಂಡುಬರುವ ಪಟ್ಟಣಗಳ ಸುತ್ತ ಕ್ಲೋವರ್ ಬೆಳೆ ಜಾಸ್ತಿ ಬರುತ್ತದೆ ಎಂಬ ಸ್ವಾರಸ್ಯಕರ ಸತ್ಯವನ್ನು ಹೊರಗೆಡವಿದ್ದ. ಆತನ ಸಂಶೋಧನೆ ಇಂದಿಗೂ ಇಕಾಲಜಿ ಪಠ್ಯಗಳಲ್ಲಿ ಅಳಿಸಲಾಗದ ಪಾಠವೆನಿಸಿಕೊಂಡಿವೆ. ಹೇಗೆಂದರೆ, ದುಂಬಿಗಳ ಸಂಖ್ಯೆ ಜಾಸ್ತಿ ಇದ್ದರೆ ರೆಡ್ ಕ್ಲೋವರ್ ಹೂಗಳ ಪರಾಗಸ್ಪರ್ಶ ಚೆನ್ನಾಗಿ ನಡೆಯುತ್ತದೆ. ಫಸಲು ಚೆನ್ನಾಗಿ ಬರುತ್ತದೆ. ದುಂಬಿಗಳು ನೆಲದ ಪೊಟರೆಗಳಲ್ಲಿ ಮುಷ್ಟಿ ಗಾತ್ರದ ಗೂಡು ಕಟ್ಟಿ ಮೊಟ್ಟೆ ಇಡುತ್ತವೆ. ಅದರ

ಲಾರ್ವಾ ಮರಿಗಳೆಂದರೆ ಇಲಿಗಳಿಗೆ ತುಂಬಾ ಇಷ್ಟ. ಅವು ದುಂಬಿಯ ಗೂಡುಗಳನ್ನು ಹುಡುಕಿ ಹುಡುಕಿ ದಾಳಿ ನಡೆಸುತ್ತವೆ. ಇಲಿಗಳ ಕಾಟ ಜಾಸ್ತಿ ಇರುವಲ್ಲೆಲ್ಲ ಕ್ಲೋವರ್ ಬೆಳೆ ಜಾಸ್ತಿ ಬರಲಾರದು. ಆದರೆ ಬೆಕ್ಕುಗಳನ್ನು ಸಾಕಿಕೊಳ್ಳುವವರ ಸಂಖ್ಯೆ ಜಾಸ್ತಿ ಇದ್ದರೆ ಅಂಥ ಊರುಗಳ ಸುತ್ತಮುತ್ತ ಇಲಿಗಳ ಹಾವಳಿ ಕಡಿಮೆ, ದುಂಬಿಗಳ ಸಂಖ್ಯೆ ಜಾಸ್ತಿ ಇರುತ್ತದೆ. ಹಾಗಾಗಿ ಅಲ್ಲಿ ಕ್ಲೋವರ್ ಬೆಳೆ ಚೆನ್ನಾಗಿ ಬರುತ್ತದೆ. ಇದು ಡಾರ್ವಿನ್ ಕಂಡುಕೊಂಡ ಸತ್ಯ. ಅಂಥ ಸಂಶೋಧಕ ಮನಃಸ್ಥಿತಿ ಇರುವ ಸಮಾಜದಲ್ಲೇ ವ್ಯಾಲೇಸ್, ಹಾಲ್ಡೇನ್, ಡೇವಿಡ್ ಅಟೆನ್ ಬರೋನಂಥವರು ರೂಪುಗೊಳ್ಳುತ್ತಾರೆ ಎಂದು ಇದೇ ಕೃತಿಯ ಸಂಪಾದಕರು ಅಭಿಪ್ರಾಯಿಸಿರುವುದನ್ನು ಗಮನಿಸಬಹುದು.

ನಿಸರ್ಗ ವಿಜ್ಞಾನದ ಬಹಳಷ್ಟು ಕ್ರಾಂತಿಕಾರಿ ಸಂಶೋಧನೆಗಳು ಬ್ರಿಟನ್ ಎಂಬ ಪುಟ್ಟ ದೇಶದಲ್ಲಿ ನಡೆದಿವೆ. ನಮ್ಮಲ್ಲಿ ಮಕ್ಕಳ ಪಾಠಗಳಲ್ಲಿ ನಿಸರ್ಗದ ಚೆಂದದ ಕಥೆಗಳು ಅಪರೂಪಕ್ಕೆ ಸಿಕ್ಕಾವು ನಿಜ. ಈ ನಾಡಿನಲ್ಲಿ ಮರಿದುಂಬಿಯಾಗಿಯಾದರೂ ಹುಟ್ಟಬೇಕೆಂದು ಬನವಾಸಿ ದೇಶ ಕುರಿತು ಪಂಪ ಹಾಡು ಕಟ್ಟಿದ್ದನ್ನು ಕನ್ನಡ ಓದಬಲ್ಲ ಮಕ್ಕಳು ಬಾಯಿಪಾಠ ಕೂಡ ಮಾಡಬಹುದು ನಿಜ. ಆದರೆ ದುಂಬಿಗಳನ್ನು ಹೂದೋಟಗಳಲ್ಲಿ ಗುರುತಿಸುವುದು, ಬಲೆ ಹಾಕಿ ನಾಜೂಕಾಗಿ ಹಿಡಿದು ಹೆಣ್ಣು ಗಂಡುಗಳನ್ನು ಗುರುತಿಸಿ ಮತ್ತೆ ಹಾರಿ ಬಿಡುವುದು, ನಕಾಶೆಯ ಮೇಲೆ ಗೆರೆ ಎಳೆದು ವ್ಯವಸ್ಥಿತ ಸಮೀಕ್ಷೆ ನಡೆಸಿ ವರದಿ ತಯಾರಿಸುವುದು ಇವೆಲ್ಲ ಎಲ್ಲಿದೆ? ಬ್ರಿಟನ್ನಿನಲ್ಲಿ ಹದಿನೈದು ವರ್ಷಗಳ ಹಿಂದೆ ಹೀಗೇ ಅಲ್ಲಿನ ಮಕ್ಕಳಿಂದ 'ಲೇಡಿ ಬರ್ಡ್', ಅಂದರೆ ಗುಲಗಂಜಿ ಹುಳುಗಳ ರಾಷ್ಟ್ರವ್ಯಾಪ್ತಿ ಸಮೀಕ್ಷೆ ನಡೆಸಿದ್ದರು ಎಂಬುದಾಗಿ ನಾಗೇಶ ಹೆಗಡೆ-ಕೀಟ ಲೋಕ ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ದಾಖಲಿಸುತ್ತಾರೆ.

ತೇಜಸ್ವಿ ಮತ್ತು ನಾಗೇಶ ಹೆಗಡೆ ಅವರ ಕೀಟ ಲೋಕ ಪ್ರಜ್ಞೆಯ ಮನೋಧರ್ಮ ಈ ಹಂತದಲ್ಲಿ ಸಾಮ್ಯತೆ ಹೊಂದುವುದನ್ನು ಗಮನಿಸಲೂಬಹುದು. ಲೇಖನದಲ್ಲಿ '**ಏನೂ ತರಬೇತಿ ಇಲ್ಲದ ಒಬ್ಬ ತೇಜಸ್ವಿ ತನ್ನ ಪರಿಸರದ ಸುತ್ತಲಿನ ಜೀವಲೋಕದ ಬಗ್ಗೆ ಅಷ್ಟೊಂದು ಮಾಹಿತಿ ಸಂಗ್ರಹಿಸಿ, ಅಷ್ಟೊಂದು ಸ್ವಾರಸ್ಯಕರ ಕಥೆ ಬರೆದು ನೂರಾರು ಜನರಿಗೆ ಪರಿಸರ ಅಧ್ಯಯನದ ಬಗ್ಗೆ, ಫೋಟೊಗ್ರಫಿಯ ಬಗ್ಗೆ ಪ್ರೇರಣೆ ನೀಡಿದ್ದಾರೆಂದರೆ, ನಮ್ಮ ಪ್ರತಿ ಶಾಲೆಯಲ್ಲೂ ಅಂಥ ಒಂದಿಬ್ಬರನ್ನು ರೂಪಿಸಬಹುದಲ್ಲ** ? ಎಂದು ಹೆಗಡೆ ಎತ್ತಿರುವ ಪ್ರಶ್ನೆ ತೇಜಸ್ವಿ ಅವರ ಜೀವಿ ಪ್ರಜ್ಞೆಯನ್ನು ಮತ್ತು ಕೀಟ ಪ್ರಪಂಚದ ವಸ್ತು ಸ್ಥಿತಿಯನ್ನು ನೆನಪಿಸುತ್ತದೆ. ನಾಗೇಶ ಹೆಗಡೆ ಅವರ ಇಂತಹ ಪ್ರಶ್ನೆಗೆ ಇಂದಿನ ಪರಿಸರ ಅಧ್ಯಯನ ಪಠ್ಯಗಳಲ್ಲಿ ಮತ್ತು ಅನುಸರಿಸುವ ಬೋಧನಾ ವಿಧಾನಗಳಲ್ಲಿ ನಿಜವಾಗಿಯೂ ಉತ್ತರ ಸಿಗಬೇಕೆನಿಸುತ್ತದೆ. ಚಾರ್ಟು, ಬಣ್ಣ, ಅಂಟು ಇವುಗಳಲ್ಲೇ ಮುಗಿದು ಹೋಗುವ ಮಕ್ಕಳ ಪ್ರಾಜೆಕ್ಟ್‌ಗಳು ಇಕಾಲಜಿಯ ಯಾವೆಲ್ಲಾ ಪ್ರಾಯೋಗಿಕ ವಿಷಯಕ್ಕೆ ತಾನೆ ಪ್ರೇರಣೆ ನೀಡಬಲ್ಲವು ಮತ್ತು ಅನುಭವ ಒದಗಿಸಬಲ್ಲವು?

ಒಟ್ಟಾರೆ ಹೇಳುವುದಾದರೆ ಎಳೆಯ ವಯಸ್ಸಿನಿಂದಲೇ ಇಕಾಲಜಿಯ ಕೌತುಕ ಅರಿಯಲು ಮಕ್ಕಳನ್ನು ಬಿಡಬೇಕು. ನಿಸರ್ಗದ ಜೀವವೈವಿಧ್ಯಗಳ ನಡುವಿನ ಸಂಬಂಧವನ್ನು ಮತ್ತು ಅವುಗಳಿಂದಾಗುವ ಪರಿಣಾಮವನ್ನು ವಿದ್ಯಾರ್ಥಿಗಳು ತಾವಾಗಿಯೇ ಕಂಡುಕೊಳ್ಳಲು ಹೊರಾಂಗಣ ಮತ್ತು ಸ್ವಕಲಿಕೆಗೆ ಪಠ್ಯಗಳಲ್ಲಿ ವಿಫುಲ ಅವಕಾಶವಿರಬೇಕು, ಏಕೆಂದರೆ ಪರಿಸರ

ಅಧ್ಯಯನ ವಿಷಯದ ಗ್ರಹಿಕೆ 'ತರಗತಿ' ಕಲ್ಪನೆಯ ನಾಲ್ಕು ಗೋಡೆಗಳ ಮಧ್ಯೆ ನಡೆಯುವಂತದ್ದಲ್ಲ. ನಿರಂತರ ವೀಕ್ಷಣೆ, ಸಮೀಕ್ಷೆ, ವರದಿ ತಯಾರಿಕೆ, ಮಂಡನೆ, ಚರ್ಚೆ, ಹಿಮ್ಮಾಹಿತಿಯಲ್ಲಿ ಅದು ಅಭಿವ್ಯಕ್ತಗೊಳ್ಳಬೇಕು. ತೇಜಸ್ವಿ ಮತ್ತು ಹೆಗಡೆ ಅವರ ಜೀವಿಕೇಂದ್ರಿತ ಪರಿಸರ ಪ್ರಜ್ಞೆಯು ಪರಿಸರ ವ್ಯವಸ್ಥೆಯಲ್ಲಿ ಕೌತುಕ ಅರಿಯಲು ಮತ್ತು ಅವುಗಳನ್ನು ಬಿಡಿಸಲು ಮುಕ್ತ ಅವಕಾಶಕ್ಕೆ ಪ್ರೇರಣೆ ನೀಡಬಲ್ಲವು ಎಂಬುದನ್ನು ಕೃತಿಗಳ ಮೂಲಕ ಕಂಡುಕೊಳ್ಳಬಹುದಾಗಿದೆ.

'ಅಲೆಮಾರಿಯ ಅಂಡಮಾನ್' ಕನ್ನಡ ಸಾಹಿತ್ಯದಲ್ಲಿ ಬಂದಂತಹ ಹೊಸ ರೀತಿಯ ಪ್ರವಾಸ ಕಥನ. ಕಾಲ ಮತ್ತು ದೇಶಗಳಲ್ಲಿ ಅಥವಾ ಚರಿತ್ರೆ ಮತ್ತು ವರ್ತಮಾನಗಳಲ್ಲಿ ಒಮ್ಮೆಲೇ ಚಲಿಸುವ ಬರಹಗಾರರ ಪರಿಸರ ಪ್ರಜ್ಞೆಯ ಅನುಭವಗಳು ಅನೇಕ ಆಯಾಮಗಳನ್ನು ಸೃಷ್ಟಿಸಿಕೊಡುತ್ತವೆ. ಅಂಡಮಾನಿನೆಡೆಗೆ ಆರಂಭಗೊಳ್ಳುವ ಪ್ರವಾಸದಿಂದಿಡಿದು, ಅಂಡಮಾನಿನಲ್ಲಿ ಇದ್ದಷ್ಟು ಕಾಲ ಅಲ್ಲಲ್ಲಿ ಸಂಚರಿಸುವಾಗ ವ್ಯಕ್ತಗೊಳ್ಳುವ ಅವರ ಪರಿಸರ ಪ್ರಜ್ಞೆಯ ಅಂಶಗಳು ಜೀವವೈವಿಧ್ಯದ ಅಧ್ಯಯನಕ್ಕೆ ಪುಷ್ಠಿ ನೀಡುವವು. ಒಂದು ರೀತಿಯಲ್ಲಿ ಇದು ಪರಿಸರ ಪ್ರಜ್ಞೆಯ ಬಗ್ಗೆ ತೇಜಸ್ವಿ ಅವರಿಗಿದ್ದ ವಿಶಿಷ್ಟ ಜ್ಞಾನ ಗ್ರಹಿಕೆ ಮತ್ತು ಆಸಕ್ತಿಯನ್ನು ಅರ್ಥಮಾಡಿಕೊಳ್ಳಲು ಸಹಕರಿಸುವುದು. ಚೆನ್ನೈ ಪ್ರಯಾಣ ಮುಗಿಸಿ ಅಂಡಮಾನ್‌ನಿನ ಕಡೆಗೆ ಹಡಗಿನಲ್ಲಿ ಪ್ರಯಾಣ ಮಾಡುವ ಸಂದರ್ಭದಲ್ಲಿ, ಹಡಗು ತೀರ ಪ್ರದೇಶವನ್ನು ಸರಿಸುತ್ತಾ, ಸರಿಸುತ್ತಾ ಮುಂದೆ ಚಲಿಸುತ್ತಿರುವಾಗ ತೇಜಸ್ವಿಯವರನ್ನು ಸ್ನೇಹಿತ ಚಂದ್ರು ಅವರು ಕೈಕುಲುಕುತ್ತಾರೆ. ತೇಜಸ್ವಿ ಏಕೆ ಎನ್ನುವಂತೆ ಅವರನ್ನು ನೋಡುತ್ತಾರೆ. ಆಗ ಚಂದ್ರುರವರು "ಈ ದೇಶವನ್ನು ಒಂದು ಸಾರಿಯಾದರೂ ನಮ್ಮ ಜೀವಿತದಲ್ಲಿ ಬಿಟ್ಟು ಹೋಗುತ್ತಿದ್ದೇವಲ್ಲ" ಎನ್ನುವರು. ತಕ್ಷಣಕ್ಕೆ ನನಗೆ ಭಾರತದ ಭಯಜನಕ ಸ್ವರೂಪ ಒಮ್ಮೆಲೆ ಕಣ್ಣಿಗೆ ಕಟ್ಟಿತು. "ದರಿದ್ರ ದೇಶ ! ನೋಡಿ ಹೇಗಿದೆ. ಆ ಬಡತನ ! ಆ ರಾಜಕಾರಣಿಗಳು ! ಆ ಭ್ರಷ್ಟಾಚಾರ ! ಆ ಜನಸಂಖ್ಯೆ ! ಆ ಪರಿಸರ ನಾಶ ! ಸಾಕಪ್ಪಾ ! ಈ ಶನಿಯನ್ನು ಬಿಟ್ಟು ದೂರ ಹೋಗುವುದಕ್ಕೆ ನನಗೇನೋ ಸಂತೋಷವೇ ಆಗುತ್ತಿದೆ" ಎನ್ನುತ್ತಾರೆ ತೇಜಸ್ವಿ. ಈ ಉದ್ಗಾರದಲ್ಲಿ 'ಪರಿಸರ ನಾಶ' ಎಂಬ ಪದ ಬಳಕೆಯನ್ನು ಗಮನಿಸಲೇಬೇಕು. ಎಲ್ಲೇ ಹೋಗಿರಲಿ ಸುತ್ತಾಡುತ್ತಿರಲಿ ಅವು ಜಟಿಲವೋ ಸುಲಭವೋ ತೇಜಸ್ವಿಯವರ ಮನದಲ್ಲಿ ಸುಪ್ತವಾಗಿರದೆ ಸದಾ ಪ್ರಜ್ಞಾವಸ್ಥೆಯಲ್ಲಿ ವಿಹರಿಸುತ್ತಿದ್ದ ಪ್ರಮುಖ ಸಂಗತಿಯೆಂದರೆ ಪರಿಸರ ಮತ್ತು ಅದರೊಂದಿಗೆ ಬೆಸೆದುಕೊಂಡಿರುವ ಹಲವು ಸಂಬಂಧಗಳು. ಸಮುದ್ರ, ಜಲಚರ, ವನಚರ ಇತ್ಯಾದಿಗಳ ಬಗ್ಗೆ ತಾವು ಓದಿ, ತಿಳಿದ ಮತ್ತು ಅನುಭವದಲ್ಲಿ ಗ್ರಹಿಸಿದ ಹಾಗೂ ಈ ಬಗ್ಗೆ ಐಚ್ಛಿಕವಾಗಿ ವಿಷಯವನ್ನು ಅಧ್ಯಯನ ಮಾಡಿದ ಸ್ನೇಹಿತರೊಂದಿಗಿನ ಚರ್ಚೆಯಲ್ಲಿ ಅಥವಾ ವಿಚಾರ ಹಂಚಿಕೆಯೊಂದಿಗೆ ಲಭ್ಯವೆನಿಸಿದ ಪೂರ್ವಾಪರ ಮಾಹಿತಿಗಳನ್ನು ಸಾಂದರ್ಭಿಕವಾಗಿ ಅರ್ಥಮಾಡಿಸಲು ಪ್ರಯತ್ನಿಸುವ ವಿಶಿಷ್ಟತೆಯೇ, ಅಲೆಮಾರಿಯ ಅಂಡಮಾನ್‌ನಲ್ಲಿನ ಪರಿಸರ ಪ್ರಜ್ಞೆಯಾಗಿ ನಿಲ್ಲುತ್ತದೆ.

ತೇಜಸ್ವಿ ನಮ್ಮ ಮುಂದಿಡುವ ಅಂಡಮಾನ್ ಅತ್ಯಂತ ವಿಶಿಷ್ಟವಾದುದು. ಅಲ್ಲಿನ ಅರಣ್ಯ, ಸಮುದ್ರ, ಅದರೊಂದಿಗೆ ಬೆಸೆದುಕೊಂಡಿರುವ ಮಾನವಸಂಬಂಧ ಹಾಗೆಯೇ ಕಡಲ ಜೀವಿಗಳ ಬಗ್ಗೆ ತೇಜಸ್ವಿ ಅನುಭವಿಸಿ ಬರೆಯುತ್ತಾರೆ. ಮತ್ಸ್ಯ ಬೇಟೆಗೆ ರೀಲು-ರಾಡು ಹಿಡಿದು

ಅಲೆದಾಡುವ ಅವರ ಹವ್ಯಾಸದಿಂದಾಗಿ ಪಾರದರ್ಶಕ ಸಮುದ್ರದೊಳಗಿನ ಸುಂದರ ಮೀನುಗಳು ಅವರನ್ನು ಆಕರ್ಷಿಸುತ್ತವೆ. ಅಲ್ಲಲ್ಲಿ ಇವುಗಳ ಲಕ್ಷಣಗಳ ಬಗ್ಗೆ ವಿವರಿಸುವುದನ್ನು ಅವರು ಎಂದೂ ಮರೆಯಲಾರರು. ಮೀನಿನ ಬೇಟೆಯ ಜೊತೆಗೆ ಸಮುದ್ರ ಮತ್ತು ಸಮುದ್ರ ಜೀವಿಗಳ ಅಪರೂಪವೆನಿಸುವ ವಿವರಗಳನ್ನು ಕೃತಿಯಲ್ಲಿ ನೀಡಲಾಗಿದೆ. ಜಿಂಕೆಗಳ ಹಾವಳಿ, ಅಲ್ಲಿನ ಹಾರಲಾಗದ ಹಕ್ಕಿ ಮೇಗ ಪ್ಯಾಡ್ ಕೇವಲ ಒಂದು ದ್ವೀಪಕ್ಕೆ ಸೀಮಿತವಾಗಿರುವುದು, ನೀಲಿ ಮೀನು, ಆಕ್ಟೋಪಸ್, ವಂಡೂರಿನ ಹವಳದ ದಂಡೆ, ಅಲ್ಲಿನ ಬೆಲೆಬಾಳುವ ಪೆಡಾಕ್ ಮರ, ಸ್ಕ್ವಿಡ್ ಒಂದನ್ನು ಹಿಡಿದಾಗ ಪಟ್ಟ ಆನಂದ, ಅದರ ದೇಹ ರಚನೆ, ವಿವರಣೆ, ಲಾಬ್‌ಸ್ಟರ್, ಮಡ್‌ಕ್ರಾಬ್‌ಗಳ ಬಗ್ಗೆ ಅವರ ಪ್ರವಾಸ ಕಥನ ಸಾಗುತ್ತದೆ. ಜೀವಜಂತುಗಳ ಪ್ರಾಕೃತಿಕ ಲಕ್ಷಣ ಕುರಿತಂತೆ ಸಾಗುವ ವಿವರಣೆಗಳು ಕೆಲವು ಕಡೆಯಲ್ಲಂತೂ ಶಾಸ್ತ್ರೀಯ ಅಧ್ಯಯನದ ವಿವರಣೆಗಳಂತೆ ಕಂಡುಬರುತ್ತವೆ. ಉದಾಹರಣೆಗೆ ಗಲ್ಫ್‌ಸ್ಟ್ರೀಂ ಸಾಗರ ಪ್ರವಾಹದ ಪ್ರಸ್ತಾಪ.

ಭಾರತದಲ್ಲಿ ನಿತ್ಯ ಹರಿದ್ವರ್ಣದ ಉಷ್ಣವಲಯದ ಕಾಡುಗಳಿರುವುದು ಅಂಡಮಾನಿನಲ್ಲಿ ಮಾತ್ರ ಎಂದಿದ್ದಾರೆ. ಅಂಡಮಾನಿನ ಅಭಿವೃದ್ಧಿ ಕುರಿತು ಹೇಳುವಾಗ ತೇಜಸ್ವಿ ಅಲ್ಲಿಯ ಇಕಾಲಜಿಯ ಸ್ವರೂಪವನ್ನು ಹೇಳಿದ್ದಾರೆ. ಸಮುದ್ರದ ಜೀವಿಗಳ ಜೊತೆಗೆ ಭೂಮಿಯ ಮೇಲಿನ ಮನುಷ್ಯ ಜೀವಿಯನ್ನು ಗಮನಿಸಿದ್ದಾರೆ. ಈ ಪ್ರವಾಸ ಕಥನ ಅಂಡಮಾನಿನ ಸಾಮಾಜಿಕ, ಸಾಂಸ್ಕೃತಿಕ, ಹಾಗೂ ನೈಸರ್ಗಿಕ ಪರಿಸರದ ಹಲವಾರು ಅಂಶಗಳನ್ನು ಬಿಂಬಿಸುತ್ತದೆ. 'ವಂಡೂರಿನ ಹವಳದ ದಂಡೆಗಳು' ಈ ಅಧ್ಯಾಯದಲ್ಲಿ ಅಂಡಮಾನಿನ ಸಮುದ್ರದ ದಂಡೆಗಳು ಕೋರಾಲ್ ಅಥವಾ ಹವಳದ ದಂಡೆಗಳಿಂದ ಕೂಡಿವೆ ಎಂಬುದನ್ನು ವಜ್ಞಾನಿಕ ಮಾಹಿತಿಗಳ ಮೂಲಕ ವಿವರಿಸುತ್ತಾರೆ. ಹವಳದ ದಂಡೆಗಳು ಒಂದು ಬಗೆಯ ಸೂಕ್ಷ್ಮ ಜೀವಿಗಳಿಂದ ರೂಪಿಸಲ್ಪಡುತ್ತವೆ. ಸಮುದ್ರದ ನೀರನ್ನು ವಿಭಜಿಸಿ ಅದರಿಂದ ದೊರೆಯುವ ಕ್ಯಾಲ್ಸಿಯಂ ಅಥವಾ ಸುಣ್ಣವನ್ನು ಉಪಯೋಗಿಸಿಕೊಂಡು ಈ ಜೀವಿಗಳು ಹವಳದ ಚಿಕ್ಕ ಚಿಕ್ಕ ಕೋಶಗಳನ್ನು ಒಂದರ ಪಕ್ಕ ಒಂದರಂತೆ ಕಟ್ಟುತ್ತಾ ಹೋಗುತ್ತವೆ. ಇವು ಹವಳದ ಕಲ್ಲುಗಳನ್ನು ರೂಪಿಸುವುದು ಎಷ್ಟೇ ನಿಧಾನವಾದ ಕ್ರಿಯೆಯಾದರೂ ಮಿಲಿಯಗಟ್ಟಲೆ ವರ್ಷಗಳಿಂದ ನಿಧಾನವಾಗಿ ಮತ್ತು ನಿರಂತರವಾಗಿ ಹವಳದ ಕಲ್ಲುಗಳನ್ನು ರಚಿಸುತ್ತಲೇ ಬರುವುದರಿಂದ ಕಾಲಾಂತರದಲ್ಲಿ ಈ ಹವಳದ ದಂಡೆಗಳು ಮೈಲುಗಟ್ಟಲೆ ಇರುವ ಭೂಖಂಡಗಳೇ ಆಗುತ್ತವೆ ಎಂಬ ವಿವರಣೆಗಳು ಅವರ ಶಾಸ್ತ್ರೀಯಬದ್ಧತೆಯಿಂದ ಕೂಡಿದ ವೈಜ್ಞಾನಿಕ ಮನೋಧರ್ಮಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

'ವಿಸ್ಮಯ' ಕೃತಿಯು ಮೂರು ಭಾಗಗಳಲ್ಲಿದ್ದು ಪ್ರಕೃತಿ ಪರಿಸರಗಳಲ್ಲಿ ಕಾಣುವ ಅನೇಕ ಕೌತುಕಗಳನ್ನು ಇದರಲ್ಲಿ ದಾಖಲಿಸುತ್ತದೆ. ಬ್ರಹ್ಮಾಂಡ, ಸೌರವ್ಯೂಹ, ಸಸ್ಯ, ಪ್ರಾಣಿ, ಮರುಭೂಮಿ, ಸರೋವರ, ಸಮುದ್ರ ಹೀಗೆ ಹಲವು ವಿಷಯಗಳ ಬಗ್ಗೆ ಮೂಲ ಮಾಹಿತಿಯನ್ನು ಒಳಗೊಂಡಿದ್ದು, ಇವು ೧೯೯೪-೯೫ನೇ ಸಾಲಿನ ಪುಸ್ತಕ ಬಹುಮಾನ ಪಡೆದ ವಿಜ್ಞಾನ ಸಾಹಿತ್ಯದ ವಿಶೇಷ ಕೃತಿಗಳೆನಿಸಿವೆ. ಬ್ರಹ್ಮಾಂಡ, ಸೌರವ್ಯೂಹ, ಸಸ್ಯ, ಪ್ರಾಣಿ, ಮರುಭೂಮಿ, ಸರೋವರ, ಸಮುದ್ರ, ಇತ್ಯಾದಿ ಇಕಾಲಜಿಯ ಪರಿಕಲ್ಪನೆಗಳಿಗೆ ಕೃತಿಯು ಮಾಹಿತಿ ನೀಡುತ್ತದೆ. ಪರಿಸರಶಾಸ್ತ್ರದ ಬಗ್ಗೆ ತಿಳುವಳಿಕೆ ಮೂಡಿಸುವ ಕೃತಿಯಾಗಿಯೂ ಇದನ್ನು ನೋಡಬಹುದಾಗಿದೆ. 'ಬ್ರಹ್ಮಾಂಡದ ಹಿನ್ನೆಲೆಯಲ್ಲಿ ಪರಿಸರ', 'ಜೀವಸ್ತರದ ಅನಂತ ವೈವಿಧ್ಯಗಳು', 'ಸೌರಶಕ್ತಿಯ

ವಿಶ್ವರೂಪ' ಎಂಬ ಮೂರು ವಿಧದ ಶೀರ್ಷಿಕೆಯಡಿಯಲ್ಲಿ ವಿವಿಧ ಲೇಖನಗಳು ಸಂಯೋಜನೆಗೊಂಡಿವೆ. 'ವಿಸ್ಮಯ-೧' ರಲ್ಲಿ ಸೇರ್ಪಡೆಗೊಂಡ 'ಬಿಸಿಲು', 'ಪರಿಸರ ಪ್ರತಿರೋಧ', 'ಪರಿಸರ ನಿರಂತರ ಹೊಂದಾಣಿಕೆಯೇ', 'ಪರಿಸರ ಅವ್ಯಕ್ತ ಬಲೆಯೇ' ಲೇಖನಗಳು ಪ್ರಧಾನವಾಗಿ ಜೀವಿ ಪ್ರಜ್ಞೆಯನ್ನು ಕೇದ್ರೀಕರಿಸಿವೆ. ಈ ಲೇಖನಗಳಲ್ಲಿ ತೇಜಸ್ವಿಯವರು ಓದುಗರಿಗೆ ಇಕಾಲಜಿಯ ವಿಶ್ವರೂಪದೊಂದಿಗೆ ಅದರ ತತ್ವದರ್ಶನವನ್ನೂ ಮಾಡಿಸುತ್ತಾರೆ. ನಿರೂಪಣೆಯಲ್ಲಿ ಪರಿಸರಶಾಸ್ತ್ರ ಉಪನ್ಯಾಸಕರಂತೆ ಅವುಗಳನ್ನು ಉದಾಹರಣೆಸಹಿತ ವಿವರಿಸುವ ಬಗೆ ಸೃಜನಾತ್ಮಕವಾದುದು. ಈ ಬಗ್ಗೆ ಇರುವ ಕೆಲವು ವಾಕ್ಯವೃಂದಗಳನ್ನು ಗಮನಿಸಬಹುದು. **"ಪರಿಸರ ಇಕಾಲಜಿಯ ಯಕ್ಷಿಣಿ ಕಣ್ಣುಗಳ ಮುಖಾಂತರ ನೋಡಿದಾಗ ಒಂದೊಂದು ಕೋನದಿಂದ ನೋಡಿದಾಗಲೂ ಒಂದೊಂದು ರೀತಿ ಕಾಣುತ್ತದೆ. ಚಲನಶೀಲ ಸೌರಶಕ್ತಿಯೆಂದು ನೋಡಿದಾಗ ಸರಪಳಿಯಂತೆ, ಶೇಖರವಾಗುವ ಶಕ್ತಿಯೆಂದು ನೋಡಿದಾಗ ಪಿರಮಿಡ್ಡಿನಂತೆ, ಜೀವ ಜಡಗಳ ಪರಸ್ಪರ ಸಂಬಂಧಗಳಂತೆ ನೋಡಿದಾಗ ಜಟಿಲವಾದ ಬಲೆಯಂತೆ ಕಾಣುತ್ತದೆ".**

"ಅದೇನೇ ಇರಲಿ ಈ ಸರಣಿಯ ಯಾವುದೋ ಕುಣಿಕೆಯಾದ ಯಾವುದೇ ಜೀವಿಯೂ ನಿರ್ವಂಶವಾದರೆ, ಹಾನಿಗೀಡಾದರೆ ಈ ಪಿರಮಿಡ್ಡಿನ ತುದಿಯಲ್ಲಿರುವ ಮಾನವನಿಂದ ಹಿಡಿದು ಎಲ್ಲಾ ಜೀವಜಾಲಕ್ಕೂ ಇದು ಪರಿಣಾಮ ಬೀರದೇ ಇರುವುದಿಲ್ಲ. ಆದ್ದರಿಂದಲೇ ಪ್ರಕೃತಿಯ ಮೇಲೆ ಪರಿಣಾಮ ಬೀರುವಂಥ ಯಾವುದೇ ಕ್ರಮಕ್ಕೂ ಮೊದಲು ನಾವು ಇಡೀ ಜೀವರಾಶಿಯ ಮೇಲಿನ ಅದರ ಪರಿಣಾಮದ ಆದ್ಯಂತಗಳನ್ನು ಚೆನ್ನಾಗಿ ಪರಿಶೀಲಿಸಬೇಕಾಗುತ್ತದೆ. ಆರ್ಥಿಕ ಲಾಭವೊಂದೇ ಅಂತಿಮ ಗುರಿಯಾಗಲಾರದು."[೧೪]

ತೇಜಸ್ವಿ ಅವರ ಈ ಎರಡು ವಾಕ್ಯವೃಂದಗಳು ಭೂಮಂಡಲದ ಜೀವಜಾಲದಲ್ಲಿನ ಸಮತೋಲನದ ಪ್ರಾಮುಖ್ಯತೆಯನ್ನು ಎತ್ತಿಹಿಡಿಯುತ್ತವೆ. ಯಾವುದೋ ಒಂದು ಜೀವಿಗೆ ಬಂದ ದುರ್ಗತಿ ಅದಕ್ಕಷ್ಟೇ ಸೀಮಿತವಾಗಿರದೆ ಇಡೀ ಜೀವಜಾಲವನ್ನೇ ಅಸ್ಥವ್ಯಸ್ಥಗೊಳಿಸುವುದು ಅಲ್ಲದೆ **'ಪ್ರಗತಿ ಎಂಬುದು ಕೇವಲ ಆರ್ಥಿಕ ಲಾಭವಲ್ಲ. ಜೀವರಾಶಿಯ ಮೇಲಾಗುವ ಒಟ್ಟು ಪರಿಣಾಮವನ್ನು ಮತ್ತು ಸಾಧಕ ಬಾಧಕಗಳನ್ನು ಅವಲಂಬಿಸಿ ರೂಪುಗೊಳ್ಳಬೇಕಿರುವ ವಿಶಾಲ ದೂರದರ್ಶಿತ್ವ'** ಎಂಬ ಪರಿಸರ ಪ್ರಜ್ಞೆ ತೇಜಸ್ವಿ ಅವರಲ್ಲಿ ಅಂತರ್ಗತವಾಗಿದ್ದನ್ನು ಇಲ್ಲಿ ಗುರುತಿಸಬಹುದು. 'ವಿಸ್ಮಯ-೨' ರಲ್ಲಿ ತೇಜಸ್ವಿಯವರು ಜೀವ ವಿಕಾಸವಾದ ಕುರಿತಾಗಿ **"ಈ ಜಗತ್ತಿನ ಜೀವ ಸಂಕುಲಗಳ ವಿಕಾಸದ ಹಾದಿಯನ್ನು ರೂಪಿಸುವಲ್ಲಿ ಪರಿಸರ ಅತ್ಯಂತ ಮುಖ್ಯವಾದ ಪಾತ್ರ ವಹಿಸಿದೆ. ಜೈವಿಕ ಹಾಗೂ ಪರಿಸರದ ಒತ್ತಡಗಳು ಒಂದಕ್ಕೊಂದು ಪೂರಕವಾಗಿ ಪ್ರತಿಕ್ರಿಯಿಸಿ, ಎಲ್ಲ ಜೀವಿಗಳ ವಿಕಾಸವೂ ಒಂದು ನಿರ್ದಿಷ್ಟವಾದ ದಿಕ್ಕು ಹಾಗೂ ಗತಿಯಲ್ಲಿ ಸಾಗುವಂತೆ ಮಾಡಿವೆ"** ಎಂಬುದನ್ನು ವಿಶ್ಲೇಷಿಸುತ್ತಾರೆ. ಈ ಕೃತಿಯು ಇಕಾಲಜಿ ವಸ್ತುವನ್ನು ಕುರಿತ ಸರಣಿಯಾದರೂ, ಈ ವಿಷಯಕ್ಕೆ ಅಷ್ಟು ಪೂರಕವಲ್ಲದ ಹಾಗೂ ಇಂದ್ರಜಾಲದ ಕಥೆಗಳಂತೆ ಇಲ್ಲಿನ ವಿಷಯಗಳನ್ನು ನಿರೂಪಿಸಿದ್ದಾರೆ ಎನ್ನಿಸುತ್ತದೆ. ಉದಾಹರಣೆಗೆ ಮೃತ್ಯು ಸರೋವರ ಲಾಬ್ರೆಯಾ, ಲಾಚ್‌ನೆಸ್ ಮಾನ್ಸಟರ್, ಲೇಕ್‌ಯೇಸ್‌ನ ಪೆಡಂಭೂತ ಮುಂತಾದವುಗಳು. ಇಲ್ಲಿನ ವೈಜ್ಞಾನಿಕ ಚಿಂತನೆಗಳನ್ನು ಅಚ್ಚರಿ, ವಿಸ್ಮಯ, ಕುತೂಹಲಗಳಿಂದ ಬೇರ್ಪಡಿಸಿದಂತೆ

ಕಂಡುಬರುತ್ತದೆ. ಬೆಡಗನ್ನು ಸೆರೆಹಿಡಿಯುವ ಗೀಳಿನಿಂದಾಗಿ ರಚಿತವಾದ ಇವುಗಳ ಸ್ವರೂಪಗಳು ಒಂದು ರೀತಿ ಇಕಾಲಜಿಯ ಪಠ್ಯಗಳಂತೆ ಕಾಣಲ್ಪಡುವುದು ಸಹಜ. "ಬರೀ ಚಂದಮಾಮದಂತಹ ಕಥೆಗಳನ್ನು ಹೆಣೆಯುವ ಪ್ರಯತ್ನದಂತೆ ಕಾಣುತ್ತದೆ. ಆದರೆ 'ಅಂಡಮಾನ್ ಮತ್ತು ಮಹಾನದಿ ನೈಲ್' ಕೃತಿಯು ವಿಜ್ಞಾನ, ಚರಿತ್ರೆ, ಸಾಹಸ ಮತ್ತು ಅನುಭವಗಳ ಕಲಾತ್ಮಕ ಕಸೂತಿ. ಹೀಗಾಗಿ ವಿಸ್ಮಯ ಮಾಲಿಕೆ ಬೆರಗನ್ನು ಬೆನ್ನಟ್ಟುವವರ ಸಾಮರ್ಥ್ಯ ಮತ್ತು ಮಿತಿಯನ್ನು ಪ್ರತಿಬಿಂಬಿಸುವ ಸಚಿತ್ರ ಕಥಾನಕಗಳಾಗಿವೆ"[(೧೫)] ಎಂಬ ಸಂಗತಿಯನ್ನು ಒಪ್ಪಬಹುದಾಗಿದೆ.

'ಮಿಂಚುಳ್ಳಿ' ಈ ಕೃತಿಯಲ್ಲಿ ೧೭ ಅಧ್ಯಾಯಗಳಿವೆ. ಹಕ್ಕಿಗಳನ್ನು ಕುರಿತ ವಿಶಿಷ್ಟ ಕೃತಿಯಾಗಿದ್ದು ಹಕ್ಕಿಗಳ ಜೀವನ ಕ್ರಮವನ್ನು ವಿಜ್ಞಾನದಂತೆ ಶುಷ್ಕವಾಗಿ ವಿವರಿಸದೇ ಸರಳವಾಗಿ ನಿರೂಪಿಸುವ ಕ್ರಮ ಭಿನ್ನವಾದುದು. ಹಕ್ಕಿಗಳ ಪ್ರಭೇಧಗಳು ಇವರ ಲೇಖನದಲ್ಲಿ ರಂಗಭೂಮಿಯ ಪಾತ್ರಗಳಂತೆ ಓದುಗರಿಗೆ ಪರಿಚಯಿಸಲ್ಪಡುತ್ತವೆ. ಬಾಳೆಗುಬ್ಬಿ, ಹೂ ಕುಟುಕನ ಹಕ್ಕಿ, ಅಂಬರದ ಹಕ್ಕಿ, ಬಿಳಿಗಣ್ಣಿನ ಚಿಟ್ಟಕ್ಕಿ, ಕೋಗಿಲೆ ಚಾಣ, ಜೇನು ಮಗರೆ, ನೆಲಕುಟುಕ ಹಕ್ಕಿ, ಇತ್ಯಾದಿ ಕನ್ನಡ ನಾಡಿನ ಹಕ್ಕಿಗಳನ್ನು ಪಕ್ಷಿಶಾಸ್ತ್ರದಲ್ಲಿರುವಂತೆ ವಿದೇಶಿ ಪಾರಿಭಾಷಿಕ ಪದದಿಂದ ಬೇರ್ಪಡಿಸಿ, ಪ್ರಾದೇಶಿಕ ಪರಿಸರದ ದೇಸಿ ಹೆಸರುಗಳಿಂದಲೇ ಪಟ್ಟಿಮಾಡಿ ಅವುಗಳ ಜೀವನ ಕ್ರಮವನ್ನು ಕುರಿತು ಸಂಗ್ರಹಿಸಿರುವ ಈ ಕೃತಿಯು **'ಕನ್ನಡ ನಾಡಿನ ಹಕ್ಕಿಗಳು'** ಎಂದೇ ಹೆಸರಾಗಿದೆ. ಈ ಕೃತಿಯನ್ನು ಅವಲೋಕಿಸಿದಾಗ ನಮಗೆ ಕಾಣಲ್ಪಡುವ ಅಂಶಗಳು ಹೀಗಿವೆ. ಮಿಂಚುಳ್ಳಿ ಅಷ್ಟೊಂದು ಸರ್ವೇಸಾಧಾರಣವಾಗಿ ಕಾಣಸಿಗುವ ಹಕ್ಕಿಯಲ್ಲ. ಏಕೆಂದರೆ ಅದು ಮುಖ್ಯವಾಗಿ ಜಲಚರಗಳನ್ನು, ಚಿಕ್ಕಪುಟ್ಟ ಮಡಿ ಮೀನುಗಳನ್ನು ಹಿಡಿದು ತಿನ್ನುವ ಹಕ್ಕಿ. ಇದನ್ನು ಹಳ್ಳ, ಹೊಳೆ, ಕೆರೆಗಳ ಬಳಿ ನೋಡಬಹುದು. ಮಿಂಚುಳ್ಳಿ ಒಂದರ ಬಗೆಗಷ್ಟೇ ಅಲ್ಲದೇ ಮಂಗಟ್ಟೆಹಕ್ಕಿ, ಜೇನು ಕುಟುಕಗಳು, ಜೇನುಮಗರೆ, ನೆಲಕುಟುಕ, ಟೌಕ್ಯಾನ್ ಮತ್ತು ಹನಿಗೈಡ್ ಹಕ್ಕಿಗಳು, ಮರಕುಟುಕ, ಪಾರಿವಾಳ, ಕಾಡುಪಾರಿವಾಳ, ಕುಟುಕನಹಕ್ಕಿ ಹೀಗೆ ಅನೇಕ ಹಕ್ಕಿಗಳ ವಿವರಣೆಯನ್ನು ಮಿಂಚುಳ್ಳಿಯಲ್ಲಿ ಕಾಣಬಹುದು. ತೇಜಸ್ವಿಯವರಿಗಿದ್ದ ಕೀಟ ಪ್ರಪಂಚದ ಆಸಕ್ತಿಯನ್ನು ಬಿಚ್ಚಿಡುವಲ್ಲಿ ಮಿಂಚುಳ್ಳಿ ವಿಶೇಷ ಮತ್ತು ವಿಶಿಷ್ಟ ಪ್ರಯೋಗವೆನಿಸಿಕೊಳ್ಳುತ್ತದೆ. ಜಗತ್ತಿಗೆ ಹಕ್ಕಿಗಳು ಸೇರ್ಪಡೆಯಾದ ಹಾದಿ, ಹಾಗೆಯೇ ಮೀನುಗಳನ್ನು ಮಿಂಚುಳ್ಳಿ ಹಿಡಿಯುವುದು ಮಾತ್ರವಲ್ಲ, ಕೆಲವೊಮ್ಮೆ ದೊಡ್ಡ ಮೀನೇ ಮಿಂಚುಳ್ಳಿಯನ್ನು ತಿನ್ನುವ ಪ್ರಯತ್ನ ಮಾಡಬಹುದು[(೧೬)] ಎಂದು ತೋರಿಸುವ ಇವರ ಆಸಕ್ತಿಯುತ ಪ್ರಯೋಗದೊಂದಿಗೆ ಕೃತಿಯು ಮುಕ್ತಾಯವಾಗುತ್ತದೆ.

"ನಾನು ಹಕ್ಕಿಗಳ ಬಗ್ಗೆ ಮಾತಾಡುವುದನ್ನೂ ಬರೆಯುವುದನ್ನೂ ನೋಡಿ ನನ್ನ ಮಿತ್ರರು ನಾನು ತುಂಬಾ 'ಬರ್ಡ್ ವಾಚಿಂಗ್' ಅಥವಾ ಪಕ್ಷಿ ವೀಕ್ಷಣೆ ಮಾಡುತ್ತೇನೆಂದು ತಿಳಿದಿದ್ದಾರೆ. ಆದರೆ ವಾಸ್ತವವಾಗಿ ನಮ್ಮ ತೋಟದಲ್ಲಿ ಅದು ತಲೆಕೆಳಗಾಗಿ ಹಕ್ಕಿಗಳೇ ಮನುಷ್ಯ ವೀಕ್ಷಣೆ ಮಾಡುತ್ತ ನಮ್ಮ ಚಲನವಲನಗಳ ಗೂಢಚರ್ಯೆ ನಡೆಸುತ್ತಿವೆ. ನಾನು ಎಲ್ಲೋ ಒಮ್ಮೊಮ್ಮೆ ಅತಿ ಅಪರೂಪದ ಹಕ್ಕಿಗಳನ್ನು ನೋಡಲು ಗೆಳೆಯ ಚಕ್ರವರ್ತಿ ಜೊತೆ ಬೈನಾಕ್ಯುಲರ್ ತಗೊಂಡು ಪಕ್ಷಿವೀಕ್ಷಣೆಗೆ ಹೋಗಿದ್ದೇನೆಯೇ ಹೊರತು, ಮಿಕ್ಕಿ ಹಕ್ಕಿಗಳೆಲ್ಲಾ ನಾನು ದೊಣ್ಣೆ ತಗೊಂಡು ಓಡಿಸಲು

ಹೋಗಿಯೇ ಪರಿಚಯವಾಗಿದ್ದು"[೧೭] ಎನ್ನುತ್ತಾರೆ ತೇಜಸ್ವಿ ಜೀವಜಾಲದಲ್ಲಿ ಹಕ್ಕಿ ಪ್ರಪಂಚವನ್ನು ಅವರು ಸೂಕ್ಷ್ಮವಾಗಿ ವೀಕ್ಷಿಸಿದ್ದರು. ಸ್ಥೂಲವಾಗಿ ನೋಡುವುದಾದರೆ 'ಮಿಂಚುಳ್ಳಿ' ಕನ್ನಡ ನಾಡಿನ ಹಕ್ಕಿಗಳ ವೈವಿಧ್ಯತೆ ಕುರಿತಂತೆ ಗಣತಿ ಕಾರ್ಯದ ಸಂಗ್ರಹವೇನೋ ಅನ್ನಿಸುವಂತಿದೆ. ಆದರೆ ದೇಸಿ ಅಮೂಲ್ಯತೆಯನ್ನು ಅರಿತ ತೇಜಸ್ವಿ ದೇಸಿಯತೆಯ ಹೆಸರು ಬಳಕೆ ಮಾಡುವ ಸಂದರ್ಭದಲ್ಲಿ ಆ ಕೆಲಸಕ್ಕಾಗಿ ಪ್ಯಾರಾನನ್ನು ಬಳಸಿಕೊಳ್ಳುವ ಮೂಲಕ ಸ್ಥಳೀಯ ಮಟ್ಟದ ಪ್ರಾದೇಶಿಕ ಪರಿಸರದ ಸಾಂಸ್ಕೃತಿಕ ಕೊಂಡಿಯಂತೆ ಆತನ ಪಾತ್ರವನ್ನು ಹಕ್ಕಿಗಳ ಜೊತೆಗೆ ತಂದಿರುವುದು ವಿಶೇಷವಾಗಿದೆ.

ತೇಜಸ್ವಿ ಹಕ್ಕಿಗಳ ಬಗ್ಗೆ, ಕೀಟ ಪ್ರಪಂಚಗಳ ಅದ್ಭುತ ವಿಸ್ಮಯಗಳ ಬಗ್ಗೆ, ಸಸ್ಯ ಪ್ರಾಣಿಗಳ ವೈಚಿತ್ರ್ಯಗಳ ಬಗ್ಗೆ ಯಾವುತ್ತೂ ಕುತೂಹಲ ತಾಳಿದ ಮತ್ತು ಆ ಬಗ್ಗೆ ಅನುಭವಗಳನ್ನು ಬರೆದ ಲೇಖಕರಾಗಿ ಗುರುತಿಸಲ್ಪಡುತ್ತಾರೆ. ತೇಜಸ್ವಿ ಅವರು ತಮ್ಮ ಜೀವಿತಾವಧಿಯಲ್ಲಿ ಪರಿಸರದಲ್ಲಿನ ಜೀವಜಗತ್ತಿನ ಛಾಯಾಚಿತ್ರಗಳನ್ನು ತೆಗೆದು, ಅವುಗಳ ಸ್ವರೂಪ, ಅಂಗರಚನೆ, ಆಕಾರ, ಆಹಾರ ಪದ್ಧತಿ ಇತ್ಯಾದಿ ಕುರಿತ ವಿವರಣೆಗಳನ್ನು ಬರೆದು ಪರಿಸರದ ಬಗ್ಗೆ ಪ್ರೀತಿ, ಮೋಹ, ಅಂತಃಕರಣ ಮೂಡಿಸುವಲ್ಲಿ ಮಾಯೆಯ ಮುಖಗಳಲ್ಲಿ ದೃಶ್ಯಕಾವ್ಯ ಸೃಷ್ಟಿಸಿದವರು. ಮುಂದಿನ ಪೀಳಿಗೆಯ ನಮ್ಮ ಯುವಜನಾಂಗ ಪರಿಸರವನ್ನು ಕೇವಲ ಪೋಟೋಗಳಲ್ಲಿ ನೋಡಬೇಕಾದ ಕಾಲ ಒದಗಿಬರಬಹುದು. ಆದ್ದರಿಂದ ನಾವು ಸ್ವಲ್ಪ ಸಮಯವನ್ನು ವ್ಯಯಿಸಿ ಪರಿಸರದ ಪ್ರಾಣಿ ಪಕ್ಷಿಗಳ ಚಲನ ವಲನ ಮತ್ತು ಅವುಗಳ ಆಹಾರ ಸರಪಳಿ, ವಾತಾವರಣದ ವಿಶಿಷ್ಟತೆ ಕ್ರಮಬದ್ಧ ತಿಳುವಳಿಕೆಯನ್ನು ನೀಡಲೇಬೇಕಾಗಿದೆ ಎಂದು ಸೂಚಿಸಿರುವುದು ಜೀವಿ ಪ್ರಜ್ಞೆಯನ್ನು ಸಮರ್ಥಿಸುತ್ತವೆ.

ತೇಜಸ್ವಿ ಅವರ ಕಲಾ ಪ್ರತಿಮೆಯಲ್ಲಿ ಒಂದು ಊರಿನ ಅವನತಿಯ ಚಿತ್ರಣವಾಗಿ ಮೂಡಿಬಂದ 'ಚಿದಂಬರ ರಹಸ್ಯ' ಅತ್ಯಂತ ಗಾಢವಾದ ಪರಿಸರ ಸಂಬಂಧವನ್ನು ಹೊಂದಿರುವ ಕೃತಿಯಾಗಿದೆ. ಕೆಸರೂರಿಗೆ ಬಡಿದಿರುವ ವ್ಯಾದಿಯನ್ನು ಅಕ್ಕಪಕ್ಕದಲ್ಲಿಟ್ಟು ನೋಡುತ್ತಾ, ಒಂದು ಸಸ್ಯಕ್ಕೆ ಬಂದ ರೋಗ ಆ ಪರಿಸರ ಕೊಳೆಯುತ್ತಿರುವುದಕ್ಕೆ ಒಂದು ಧ್ಯೋತಕವೆನ್ನುವಂತೆ ತೇಜಸ್ವಿ **"ಒಂದು ಸಸ್ಯ ಅವನತಿ ಹಾದಿ ಹಿಡಿತೆನ್ನಿ, ಅದರಿಂದ ಬದುಕುತ್ತಿರುವ ಕೀಟಸ್ತೋಮ, ಅವುಗಳನ್ನೇ ಆಹಾರ ಮಾಡಿಕೊಂಡಿರುವ ಪಕ್ಷಿಗಳು, ಅವುಗಳಿಂದಲೇ ಬೀಜ ಪ್ರಸರಣವಾಗುತ್ತಿದ್ದ ವೃಕ್ಷ ಸಂಕುಲ, ಅದರ ಆಹಾರದ ಮೇಲೆ ಹೆಪ್ಪುಗಟ್ಟಿ ಮಳೆ ಸುರಿಸುವ ಮೋಡ ಮತ್ತು ಇವುಗಳೆಲ್ಲದರ ಆಧಾರದ ಮೇಲೆ ಬದುಕೊ ಮನುಷ್ಯ, ಇಡೀ ವಿಶ್ವವೇ ಈ ರೀತಿ ಒಂದಕ್ಕೊಂದಕ್ಕೆ ಬಿಗಿದುಕೊಂಡಿರೊ ಸಮತೋಲನದಲ್ಲೆ ಹೆಣೆದಿರುವ ಬಲೆ"**ಎಂದು ಹೇಳುವ ಮೂಲಕ ಅವನತಿಯ ಇತರೆ ಕಾರಣಗಳು ಥಳುಕು ಹಾಕಿಕೊಂಡಿರುವುದನ್ನು ಮುಂದಿಟ್ಟು ಈ ಅವನತಿಯ ಹಾದಿಯಲ್ಲೇ ಮತ್ತೊಂದು ಚೈತನ್ಯ ಸ್ಥಿತಿಯ ಉಗಮವಾಗುತ್ತದೆ ಎಂಬ ಆಶಾಭಾವನೆಯ ತುಡಿತವನ್ನು ಹೊರಹಾಕುತ್ತಾರೆ. ಲಂಟಾನ ಹರಡಿಕೆ ಕುರಿತಂತೆ ಸಿದ್ದಪ್ಪನ ಮಾತಿಗೆ ಪ್ರತ್ಯುತ್ತರ ನೀಡುತ್ತಾ ಪಾಟೀಲರು "ಆದರೆ ನೋಡು ಪ್ರಕೃತಿ ನಡವಳಿಕೆಯಲ್ಲೂ ಒಂದು ಕ್ರಮ ಇದೆ. ಅದು ತನ್ನ ಗಾಯ ವಾಸಿಮಾಡಿಕೊಳ್ಳುವುದಕ್ಕೂ ವಿಧಾನ ಇದೆ. ಈ ಲಂಟಾನ ಇಲ್ಲದಿದ್ದರೆ ಇಲ್ಲಿ ಬೀಳೋ ಮಳೆಗೆ ಇವತ್ತು ಇಲ್ಲಿರೋ ಗುಡ್ಡಗಳ ಮಣ್ಣೆಲ್ಲಾ ತೊಳೆದುಹೋಗಿ ನಮ್ಮ ಬಯಲುಸೀಮೆಯ

ತರ ಕಲ್ಲುಗುಡ್ಡಗಳು ನಿಂತಿರ್ತಿದ್ದವು." ಎಂದು ಮಾತನ್ನು ಮುಂದುವರೆಸುತ್ತಾ, "ಇಡೀ ಜೀವರಾಶಿ ಎಲ್ಲವೂ ಸ್ಮಶಾನದಿಂದಲೇ ಉದ್ಭವಿಸಿದ್ದು, ಕುದಿಯೋ ಭೂಗೋಳದ ಬೆಂಕಿ ಉಂಡೆಯಿಂದ, ಈಗ ಲಂಟಾನ ಬಂದಿದೆಯಲ್ಲಾ ಅದು ಮಣ್ಣು ತೊಳೆದು ಹೋಗದ ಹಾಗೆ ಅದರ ಕಸಕಡ್ಡಿಗಳು, ಮಣ್ಣಿನ ಜೈವಿಕ ವಸ್ತುಗಳು, ಸೂರ್ಯನ ಬಿಸಿಲಿನಿಂದ ಸುಟ್ಟು ಹೋಗದ ಹಾಗೆ ನೋಡಿಕೊಳ್ಳುತ್ತವೆ. ಅದರಡಿಯಿಂದಲೇ ಹೊನ್ನೆ, ತೇಗ, ನೇರಳೆ, ಆಲ, ಧೂಪ, ಎಲ್ಲಾ ಮೊಳಕೆ ಒಡೆದು ಲಂಟಾನದ ಮುಳ್ಳಿನ ರಕ್ಷಣೆಯಲ್ಲಿ ಮೆಲ್ಲಗೆ ಅದರ ಮೇಲೆ ಪುಟಿಯುತ್ತವೆ.... ಇವು ಮೇಲೆ ಬಂದು ಕೊಂಬೆಗಳಾಗಿ ಛತ್ರಿ ತರಹ ಬಿಚ್ಚಿಕೊಳ್ಳುತ್ತಲೂ ಕಾಡಿನ ನೆರಳು ಕೊಡಲಾರಂಭಿಸಿ ಲಂಟಾನ ವಿದಾಯ ಹೇಳುತ್ತೆ. ಆಮೇಲೆ ಆ ನೆರಳಿನಲ್ಲಿ ಬರುವ ಗಿಡಗಳೇ ಬೇರೆ. ತರಗೆಲೆಗಳ ದಟ್ಟರಾಶಿಯಲ್ಲಿ ಕುಸಿದು ಬೀಳುವ ಲಂಟಾನವೂ ಸೇರಿ ಮಣ್ಣು ಫಲವತ್ತಾಗುತ್ತಾ ಹೋಗುತ್ತದೆ. ನೀನು ಪರಿಸರ ರಕ್ಷಣೆಗೆ ತವಕ ಪಡ್ತಿರೋ ಹಾಗೇನೆ ಅನೇಕ ಅದೃಶ್ಯ ಶಕ್ತಿಗಳೂ ತವಕದಿಂದ ಕೆಲಸ ಮಾಡ್ತಿವೆ ಅನ್ನೋದನ್ನ ಮರೀಬೇಡಾ". ಪಾಟೀಲರ ಮೂಲಕ ಈ ಮಾತನ್ನು ಹೇಳಿಸುವ ತೇಜಸ್ವಿ, ನಿಸರ್ಗ ಆ ಸಮಯದಲ್ಲಿ ಹಿನ್ನೇಟು ನೀಡಿದರೂ ಮತ್ತೆ ತನ್ನ ಸಮೃದ್ಧತೆಯನ್ನು ಸಂಪಾದಿಸಿಕೊಳ್ಳುವ ಸೂತ್ರಗಳನ್ನು ತನ್ನಲ್ಲೇ ಇಟ್ಟುಕೊಂಡಿದೆ ಎಂಬುದನ್ನು ಅವರು ಮನನ ಮಾಡಿಸುತ್ತಾರೆ. ಮುಂದುವರೆದು, ಪಾಟೀಲರ ಮೂಲಕ ನಿಸರ್ಗದ ಸತತ ಪ್ರಯೋಗಗಳ ಬಗ್ಗೆ ವಿವರಣೆ ನೀಡುತ್ತಾ, ಮನುಷ್ಯ ಜೀವಿಯ ಪಾಲಿಗೆ ನಿಸರ್ಗ ನಾಶವೆನಿಸಿದರೂ, ಮತ್ತೆ ಪುಟಿಯುವ ಚೈತನ್ಯವನ್ನು ಹುದುಗಿಸಿಕೊಂಡಿದೆ ಎನ್ನುತ್ತಾ ".....ನಮ್ಮ ಪಾಲಿಗೆ ಭೂಮಿ ಹಾಳಾಗುತ್ತದೆಯೇ ಹೊರತು ಅದರ ಪಾಲಿಗಲ್ಲ. ಈಗಾಗಲೇ ಪ್ರಕೃತಿ ಎಷ್ಟೊಂದು ಪ್ರಯೋಗ ಮಾಡಿದೆಯಯ್ಯ, ಎಷ್ಟೊಂದು ತರತರದ ಪ್ರಾಣಿಗಳೂ ಸಸ್ಯ ಸಮೂಹ, ಈ ಭೂಮಂಡಲದ ಮೇಲೆ ಆಗಿಹೋದವು. ನಿನಗೆ ತಿಳಿದಂತೆ ಒಂದು ಕಾಲಕ್ಕೆ ಜಲಚರಗಳೂ, ಆಮೇಲೆ ಸರೀಸೃಪಗಳೂ, ಮಹೋರಗಳು, ಸಸ್ತನಿಗಳು, ಒಂದೆರಡೇ ಪ್ರಯೋಗವೇನಯ್ಯಾ, ನಾವು ಇಲ್ಲಿ ಬದುಕೊಕ್ಕೆ ನಾಲಾಯಕ್ ಅಂತೆನ್ನಿಸಿದ್ದರೆ ನಾವೂ ಇಲ್ಲಿಂದ ನಿರ್ಗಮಿಸುತ್ತೇವೆ. ನಾಮಾವಶೇಷ ಆಗ್ತೀವಿ. ಆದರೆ, ನಿಧಾನವಾಗಿ ಪ್ರಕೃತಿ ಇನ್ನೊಂದು ತರದ ಪ್ರಯೋಗಕ್ಕೆ ಕೈ ಹಾಕ್ತದೆ. ಮತ್ತೆ ಭೂಮಂಡಲದ ಸ್ಮಶಾನದಿಂದ್ಲೆ ಇನ್ನೊಂದು ಚೈತನ್ಯ ಚಿಮ್ಮುತ್ತೆ ಅಷ್ಟೆ"ಎಂಬ ಮಾತುಗಳು ನಿಸರ್ಗದ ಮರು ಚೈತನ್ಯದ ರಹಸ್ಯವನ್ನು ಬಿಡಿಸಿ ತೋರಿಸುತ್ತವೆ.

ಈಗಾಗಲೇ ಇದೇ ಅಧ್ಯಾಯದಲ್ಲಿ ಚರ್ಚಿಸಿದಂತೆ ತೇಜಸ್ವಿ ಅವರು ಇಕಾಲಜಿಯ ಬಹುದೊಡ್ಡ ಸತ್ಯವನ್ನು ಅರಿತಿದ್ದರು. ಇದು ಕೇವಲ ಸಾಂದರ್ಭಿಕವಾಗಿ ಪ್ರಕಟಗೊಳ್ಳುವ ಸತ್ಯವಲ್ಲ. ವ್ಯಕ್ತಿಗತ ವ್ಯಾಖ್ಯಾನಕ್ಕೆ ಸೀಮಿತವಾದುದಲ್ಲ. ಅದು ಸರ್ವಕಾಲಿಕವಾದುದು. ಅದೇನೆಂದರೆ, ಒಂದು ಜೀವಜಾಲದ ಸಮತೋಲನದ ಅಗತ್ಯತೆ, ಮತ್ತೊಂದು ಡಾರ್ವಿನ್ನನ ವಿಕಾಸವಾದದ ತಾತ್ವಿಕತೆ. ಭೂಮಿಯ ಭದ್ರತೆ ನಿಂತಿರುವುದೇ ಜೀವಿಗಳ ಪೂರಕ ಸಹಸಂಬಂಧದ ಜಾಲದೊಂದಿಗೆ. ಯಾವುದೋ ಒಂದು ಜೀವವೈವಿಧ್ಯದ ಮೇಲೆ ಗೋಲದ ಪೂರ್ವದಲ್ಲೋ ಉತ್ತರದಲ್ಲೋ ಒಂದೇ ಒಂದು ಎಳೆಯಲ್ಲಿ ಅಧ್ವಾನವಾಯಿತೆಂದರೆ ಅದರ ಬಿಸಿ ಮತ್ತೊಂದು ಭಾಗದ ಪಶ್ಚಿಮಕ್ಕೊ ಹಾಗೂ ದಕ್ಷಿಣಕ್ಕೊ ಅಥವಾ ಧೃವಗಳಿಗೊ ತಟ್ಟೇ ತಟ್ಟುತ್ತದೆ. ನಾಲಾಯಕ್ ಎನಿಸಿದಾಗ ಅಂತಹ ಬಲಾಢ್ಯ ಡೈನೋಸಾರ್ಸ್‌ಗಳೇ ಈ ಭೂಮಿಯಲ್ಲಿ ಬದುಕುಳಿಯದೆ ಅಳಿದವು ಎಂದ ಮೇಲೆ ಮನುಷ್ಯ ಯಾವ ಲೆಕ್ಕ! ನಾವು ಕೂಡ ಈ ಸೃಷ್ಟಿಯ

ನಿಯಮಾವಳಿಯಲ್ಲಿ ಒಂದಲ್ಲ ಒಂದು ದಿನ ನಾಮಾವಶೇಷವಾಗುತ್ತೇವೆ. ನಮ್ಮ ಪಳೆಯುಳಿಕೆಯ ಮೇಲೆಯೇ ಮತ್ತೊಂದು ಜೀವಚೈತನ್ಯ ಪುಟಿಯುತ್ತದೆ ಎನ್ನುವುದರೊಂದಿಗೆ ಇಕಾಲಜಿಯಲ್ಲಿ ಅವಿತ ಸೃಷ್ಟಿಯ ನಿರಂತರ ಸತ್ಯದ ತತ್ವವನ್ನು ಸಾಹಿತ್ಯ ಪ್ರಕಾರವಾದ ಕಾದಂಬರಿಯ ಕಲಾಪ್ರತಿಮೆಯೊಂದಿಗೆ ನಿರೂಪಿಸುತ್ತಾ, ಸಾಹಿತ್ಯಾಸಕ್ತರಲ್ಲೂ ವೈಜ್ಞಾನಿಕ ಸಂಗತಿಗಳ ಬಗ್ಗೆ ಆಸಕ್ತಿ ಮೂಡಿಸುವ ಪ್ರಯತ್ನವೇ ತೇಜಸ್ವಿ ಅವರ ಜೀವಿ ಪರಿಸರ ಪ್ರಜ್ಞೆಯ ಸ್ವರೂಪವಾಗಿದೆ.

ನಿಗೂಢವನ್ನು ಭೇದಿಸುತ್ತಾ ಅದರ ಸುತ್ತಲ ಪರಿಸರ, ಜೀವಿಗಳ ಬದುಕು, ಮನುಷ್ಯ ಜೀವಿಯ ಅತಿಯಾಸೆ, ಮೂರ್ಖತನ, ಕುತೂಹಲ ಎಲ್ಲವನ್ನು ಒಟ್ಟುಗೂಡಿಸುತ್ತಾರೆ. ಮನುಷ್ಯ ಜೀವಿಯ ಬದುಕಿಗೆ ಪೂರಕವಾದ ಇತರೆ ಸಸ್ಯ ಮತ್ತು ಜೀವ ಸಂಕುಲಗಳು ಉಳಿದರೆ ಮಾತ್ರ ಈ ಭೂಮಿಯ ಉಳಿವು ಎಂಬುದನ್ನು ತೇಜಸ್ವಿ ತಮ್ಮ ಕೃತಿಗಳ ಮೂಲಕ ಹೇಳುತ್ತಾರೆ. ನಿಸರ್ಗದ ಸಮತೋಲನ ರಕ್ಷಣೆ ಕೇವಲ ಅಕೆಡೆಮಿಶಿಯನ್‌ಗಳಿಂದಾಗಲಿ, ವೈಜ್ಞಾನಿಕ ಮನೋಧರ್ಮ ಹೊಂದಿದ ವಿಜ್ಞಾನಿಗಳಿಂದಾಗಲಿ ಸಾಧ್ಯವಿಲ್ಲ, ಅದರ ರಕ್ಷಣೆಗೆ ಜನಸಾಮಾನ್ಯರ ಕಾಳಜಿಯ ಅವಶ್ಯಕತೆಯಿದೆ ಎಂಬುದನ್ನು ಅವರ ಕೃತಿಗಳಲ್ಲಿ ಬರುವ ಮಂದಣ್ಣ, ಹಾವು ಗೊಲ್ಲರ ಎಂಕ್ಟ, ಜೀಂಕ್ರ ಜೊತೆಗೆ ಅದ್ಭುತವಾಗಿ ಕಾಣುವ ಕಿವಿಯಂಥ ನಾಯಿಯ (ಪ್ರಾಣಿಯ) ಪಾತ್ರವೂ ಸ್ಪಷ್ಟವಾಗಿ ನಿರೂಪಿಸುತ್ತವೆ. ನಿಸರ್ಗದ ಪ್ರಾಮುಖ್ಯತೆಯನ್ನು ಅತ್ಯಂತ ನಿಖರವಾಗಿ ಬಲ್ಲ ವಿಜ್ಞಾನಿ ಕರ್ವಾಲೋ ನಿಸರ್ಗವನ್ನು ಸಹಜವಾಗಿ ನೋಡುತ್ತಾ, ಅದರ ಆಂತರ್ಯದ ವಿಶೇಷಗಳನ್ನು ಬಲ್ಲ ಆದರೆ ತಾವು ಬಲ್ಲವರೆಂಬುದನ್ನರಿಯದ ಪೂರಕ ಪಾತ್ರಗಳನ್ನು ತೇಜಸ್ವಿ ತಮ್ಮ ಕೃತಿಗಳಲ್ಲಿ ತಂದು ಪ್ರಾಣಿ, ಮನುಷ್ಯ, ಸಸ್ಯಸಂಕುಲ, ಜೀವಜಲ ಕೊನೆಗೆ ಒಂದು ಸಣ್ಣ ಕೀಟದ ಅನಿವಾರ್ಯತೆಯನ್ನು ಸಹ ಮನನ ಮಾಡಿಸುತ್ತಾರೆ. ತಮ್ಮ ತೋಟದ ಸುತ್ತಲ ಪರಿಸರದಲ್ಲಿದ್ದ ಪ್ರಾಣಿ, ಪಕ್ಷಿ, ಸಸ್ಯ ಸಂಕುಲ, ಮಲೆನಾಡಿನ ವೈಶಿಷ್ಟ್ಯತೆಗಳ ಬಗ್ಗೆ ಸಾಕಷ್ಟು ಮಾಹಿತಿ, ಅನುಭವ ಹೊಂದಿದ್ದ ತೇಜಸ್ವಿ ಪರಿಸರವೆಲ್ಲವನ್ನು ತಮ್ಮ ದೈನಂದಿನ ಬದುಕು ಮತ್ತು ಬರಹವನ್ನು ಸಮೃದ್ಧಗೊಳಿಸುವಲ್ಲಿ ಸಮರ್ಥವಾಗಿ ಬಳಸಿಕೊಳ್ಳುತ್ತಾರೆ. ಕಾಡಿನ ಹಕ್ಕಿ ಪಕ್ಷಿಗಳ ಉಲಿತ, ಅಪರೂಪದ ಸಸ್ಯ ಪ್ರಭೇದ, ಹೀಗೆ ಪ್ರಕೃತಿಯೊಂದಿಗೆ ತಮ್ಮ ಒಳನೋಟವನ್ನು ಸಮೀಕರಿಸಿಕೊಂಡು, ಚಿಂತನೆಗೆ ಹೊಸ ಹಾದಿಯನ್ನು ಕಂಡುಕೊಳ್ಳುತ್ತಾರೆ.

"ನಾನು ಪರಿಸರವಾದಿ ಅಥವಾ ಪರಿಸರ ಹೋರಾಟಗಾರ ಯಾವುದೂ ಅಲ್ಲ" ಎಂದು ಹೇಳುವ ತೇಜಸ್ವಿಯವರು ತನ್ನ ಅನುಭವವನ್ನು ಸಮರ್ಥವಾಗಿ ಹೇಳಲು ಕೆಲವು ಲೇಖಕರು ಇತರೆ ಶಾಸ್ತ್ರಗಳನ್ನು ಬಳಕೆ ಮಾಡಿಕೊಳ್ಳುವಂತೆ ಸಾಂದರ್ಭಿಕವಾಗಿ ಕೀಟಶಾಸ್ತ್ರ, ಪ್ರಾಣಿಶಾಸ್ತ್ರ, ಪರಿಸರ ಇತ್ಯಾದಿಗಳನ್ನು ಸಮನ್ವಯ ಮಾಡಿಕೊಳ್ಳುತ್ತಾ ಸ್ವಾನುಭವದ ಮಿತಿಯಲ್ಲಿ ಕಥೆ ಹೇಳುತ್ತೇನೆ ಎನ್ನುತ್ತಾರೆ. ಈ ಎಲ್ಲವೂ ಕಾದು, ಕುದ್ದು, ಹರಳುಗಟ್ಟಿ ಹೊರಬರುತ್ತವೆ. ಪ್ರಕೃತಿಯ ಅಗಾಧ ವಿಸ್ಮಯಗಳ ಹುಡುಕಾಟ ತೇಜಸ್ವಿಯವರ ಆಸಕ್ತಿಯ ಕೇಂದ್ರ. ಸಣ್ಣ ಕೀಟದಿಂದ ಹಿಡಿದು ಬೃಹತ್ ಚತುಷ್ಪಾದಿ ಆನೆಯವರೆಗೆ, ಸಣ್ಣ ಬಳ್ಳಿ, ಬೃಹತ್ ಮರ, ಎಲ್ಲವೂ ಒಂದು ಸಂಯೋಜಿತ ರೂಪವಾಗಿ ಅವರಿಗೆ ಕಾಣುತ್ತಿತ್ತು. ಈ ಹಿನ್ನೆಲೆಯಲ್ಲೇ ತೇಜಸ್ವಿ ಮನಸ್ಸಿನ ಎರಡು ರೀತಿಯ ಅರಿವುಗಳಾದ ವಿಶ್ಲೇಷಣೆ ಮತ್ತು ಸಂಶ್ಲೇಷಣೆಯಲ್ಲಿ ಸಂಶ್ಲೇಷಣೆಗೇ ಅವರು ಒತ್ತು ನೀಡುತ್ತಿದ್ದರು[೧೮] ಎಂಬ ಅಭಿಪ್ರಾಯವನ್ನು ನಾವು ಗುರುತಿಸಿಕೊಳ್ಳಬೇಕು. ಅಗಾಧವಾದ

ವಿಸ್ಮಯ, ಕುತೂಹಲ ಮತ್ತು ಬೆರಗಿನಿಂದಲೇ ತೇಜಸ್ವಿಯವರು ವಿಷಯವನ್ನು ಪ್ರವೇಶಿಸುತ್ತಾರೆ. ನಿಗೂಢತೆಯ ದಾರಿಯನ್ನು ಶೋಧಿಸಿ, ಎದುರಾಗುವ ಬೆರಗನ್ನು ಬೆನ್ನಟ್ಟುವುದು ಅವರ ಸಹಜ ಪ್ರವೃತ್ತಿಯಾಗಿ ಕಂಡುಬರುತ್ತದೆ. ನಿಗೂಢವನ್ನು ಭೇದಿಸುತ್ತಾ ಅದರ ಸುತ್ತಲ ಪರಿಸರ, ಜೀವಿಗಳ ಬದುಕು, ಮನುಷ್ಯ ಜೀವಿಯ ಅತಿಯಾಸೆ, ಮೂರ್ಖತನ, ಕುತೂಹಲ ಎಲ್ಲವನ್ನು ಒಟ್ಟುಗೂಡಿಸುತ್ತಾರೆ. ಮನುಷ್ಯ ಜೀವಿಯ ಬದುಕಿಗೆ ಪೂರಕವಾದ ಇತರೆ ಸಸ್ಯ ಮತ್ತು ಜೀವ ಸಂಕುಲಗಳು ಉಳಿದರೆ ಮಾತ್ರ ಈ ಭೂಮಿಯ ಉಳಿವು ಎಂಬುದನ್ನು ತೇಜಸ್ವಿ ಅವರ ಕೃತಿಗಳಲ್ಲಿ ಕಾಣಬಹುದು. ಗಣಿಗಾರಿಕೆ ಬೇಡವೆಂದು ನಡೆದ ಹೋರಾಟದಲ್ಲಿ ನೇರವಾಗಿ ಅವರು ಭಾಗವಹಿಸಿದರು. 'ಪಶ್ಚಿಮ ಘಟ್ಟ ಉಳಿಸಿ' ಕಳಸದಲ್ಲಿ ಆಂದೋಲನ ನಡೆದಾಗ, ಸಭೆಗೆ ಬಂದವರು **"ಉಷ್ಣವಲಯದ ಕಾಡನ್ನು ಒಮ್ಮೆ ಕಳೆದುಕೊಂಡ್ರೆ ಮತ್ತೆ ಅದೇ ರೀತಿ ಸಂಕೀರ್ಣ ವ್ಯವಸ್ಥೆ ಇರುವಂತೆ ಅದನ್ನೇ ಮತ್ತೇ ಸೃಷ್ಠಿಮಾಡಕ್ಕಾಗಲಿ, ಆ ಕಾಂಪ್ಲೆಕ್ಸಿಟಿ ನೆಡುತೋಪಿಂದ ಬರಲ್ಲ. ಒಂದ್ಸಲ ಹೋಯ್ತು ಅಂದ್ರೆ ಪೂರ್ಣ ಹೋದ ಹಾಗೆ. ಒಂದು ಸಣ್ಣ ಪ್ರದೇಶಲ್ಲಿ ಎಷ್ಟೊಂದು ರೀತಿ ಗಿಡ, ಮರ, ಕೀಟ, ಹಕ್ಕಿ, ಪ್ರಾಣಿ, ಇದೆಲ್ಲಾ ಲಕ್ಷಾಂತರ ವರ್ಷದ ವಿಕಾಸ, ಬದಲಾವಣೆಯಿಂದ ಆಗಿದೆ. ನಾವು ಏನನ್ನೂ ಸೃಷ್ಟಿ ಮಾಡಕ್ಕಾಗಲ್ವೋ ಅದನ್ನು ನಾಶ ಮಾಡಬಾರ್ದು"** (೧೯)ಎಂದು ಪಶ್ಚಿಮ ಘಟ್ಟದ ಪ್ರಾಮುಖ್ಯತೆಯನ್ನು ತೇಜಸ್ವಿ ಇತರರಿಗೆ ಸರಳವಾಗಿ ಅರ್ಥೈಸುತ್ತಿದ್ದರು.

ಪರಿಸರದ ಸಮೃದ್ಧಿಯೆಂದರೆ ಜೀವವೈವಿಧ್ಯದ ಅಖಂಡತೆ ಎಂಬುದನ್ನು ತೇಜಸ್ವಿ ಅರಿತಿದ್ದರು. ಮನುಷ್ಯ ಬದುಕುವಷ್ಟೇ ಹಕ್ಕಾಗಿ ಪ್ರತಿ ಜೀವಿಯೂ ಈ ಪರಿಸರದಲ್ಲಿ ಬದುಕುವ ಹಕ್ಕು ಪಡೆದಿದೆ. ಇದು ನಿಸರ್ಗದ ಧರ್ಮವೂ ಹೌದು. ಆಧುನಿಕತೆಯ ಭರಾಟೆಗಾಗಿ ರಸ್ತೆ ಬದಿಯ ಮರಗಳನ್ನು ಕಡಿಯುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದ ತೇಜಸ್ವಿ ಅವರು ಈ ಮರಗಳ ಜೊತೆಗೆ ಪಕ್ಷಿ ಸಂಕುಲವು ನಶಿಸುತ್ತದೆಯೆಂದು, ಪ್ರತಿಯಾಗಿ ಅದೇ ಜಾತಿಯ ಗಿಡಗಳನ್ನು ಬೆಳೆಸಬೇಕೆಂದು ನಂತರ ರಸ್ತೆ ಅಗಲೀಕರಣಕ್ಕೆ ಅಡ್ಡಿಯಾಗುವ ಮರಗಳನ್ನು ಕಡಿಯಬೇಕೆಂದು ಸಲಹೆ ನೀಡಿದ್ದರು. ನಮ್ಮಲ್ಲಿರುವ ವಿಶಿಷ್ಟ ಬಗೆಯ ಕಾಡಿನ ಬಗ್ಗೆ ತೇಜಸ್ವಿ ವಿವರಿಸುತ್ತಾ, "ನಮ್ಮಲ್ಲಿರುವ ಕಾಡು ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡು. ಇದರ ವಿಶಿಷ್ಟತೆ ಇರುವುದೇ ಇಲ್ಲಿ. ಇಲ್ಲಿ ಸಸ್ಯಗಳಿಗೆ ದೊರೆಯುವ ಮಳೆನೀರು ಮತ್ತು ಸೂರ್ಯನ ಶಾಖ ವಿಫುಲವಾಗಿ ದೊರೆಯುವುದರಿಂದ ಸಸ್ಯಗಳ ಬೆಳವಣಿಗೆಗಳ ವೇಗ ಹೆಚ್ಚು. ಈ ಎರಡು ಕಾರಣಗಳಿಂದಾಗಿ ಉಷ್ಣವಲಯದ ಕಾಡುಗಳು ಕೋನಿಫರಸ್ ಮರಗಳ ಕಾಡುಗಳಿಗಿಂತ ವೈವಿಧ್ಯಮಯವಾಗಿಯೂ ತೀರಾ ಸಂಕೀರ್ಣವಾಗಿಯೂ ರೂಪುಗೊಂಡಿವೆ. ಸಮಶೀತೋಷ್ಣವಲಯದ ಕಾಡುಗಳ ಸರಳತೆ ಎಂದರೆ ಕೆಲವೇ ಜಾತಿಗಳ ಮರಗಳ ಅಸ್ಥಿತ್ವ. ಇವು ಅಲ್ಲಿನ ಕ್ರಿಮಿಕೀಟ, ಪಶುಪಕ್ಷಿಗಳ ಸಂಬಂಧವನ್ನು ಸರಳವಾಗಿ ರೂಪಿಸಿವೆ. ಅಂದರೆ ಮರ, ಮರದ ಹಣ್ಣನ್ನು ಅವಲಂಬಿಸಿರುವ ಹಕ್ಕಿ, ಆ ಹಕ್ಕಿಯ ಬೀಜ ಪ್ರಸಾರಕ್ಕೆ ಅವಲಂಬಿಸಿರುವ ಮರ, ಆ ಮರವನ್ನು ಅವಲಂಬಿಸಿರುವ ಕ್ರಿಮಿಕೀಟಗಳು, ಆ ಕ್ರಿಮಿಕೀಟಗಳು ಎಲೆಯನ್ನು ಪರಿವರ್ತಿಸಿ ಮಾಡುವ ಗೊಬ್ಬರಗಳು ಹೀಗೆ ಕಾಡೊಳಗೆ ಒಂದು ಜೈವಿಕ ಕ್ರಿಯೆ ಮತ್ತು ಪುನಃಸೃಷ್ಟಿ ನಡೆಯುತ್ತಲೇ ಇರುತ್ತದೆ. ಇದನ್ನೇ ನಾವು ಜೀವವರ್ತುಲ" ಎಂದು ಕರೆಯುತ್ತೇವೆ. ಇದು ಉಷ್ಣವಲಯದ ಕಾಡುಗಳ ಏಕಮುಖತೆಯಿಂದ ಸರಳವಾಗಿಯೂ ಇರುತ್ತದೆ ಎನ್ನುವ ವಿವರಣೆಗಳು ಜೀವಿಗಳು ಮತ್ತು ಸಸ್ಯಗಳ ಸಹಸಂಬಂಧವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತವೆ.

ತೇಜಸ್ವಿಯವರಿಗೆ ಶಿಕಾರಿ ಮಲೆನಾಡು ಬದುಕಿನ ಭಾಗವಾಗಿತ್ತು. ಆದರೆ ಅದನ್ನು ಒಂದು ಗೀಳಾಗಿಸಿಕೊಳ್ಳದೆ ಶಿಕಾರಿ ನನಗೆ ಕಾಡಿನ ಬಗ್ಗೆ, ಕಾಡುಪ್ರಾಣಿಗಳ ಬಗ್ಗೆ, ನಿಧಾನವಾಗಿ ಆತ್ಮೀಯತೆಯನ್ನು ಬೆಳೆಸಲು ಸಹಾಯವಾಯ್ತೆಂದು ಹೇಳಬಹುದು ಎನ್ನುತ್ತಾರೆ. ಶಿಕಾರಿ ಅವರಿಗೆ ಜೀವಿಕೇಂದ್ರಿತ ಚಿಂತನೆಗೆ ಹಚ್ಚಿತೆನಿಸುತ್ತದೆ. ಕೈಲಿ ಕೋವಿ ಹಿಡಿದು ಮಾಡುವ ಶಿಕಾರಿಗಿಂತ ಪ್ರತಿ ಸಸ್ಯಪ್ರಾಣಿಯನ್ನು ವೀಕ್ಷಿಸುತ್ತಾ, ಅವುಗಳ ಬದುಕಿನ ರಹಸ್ಯಗಳನ್ನು ಮನಸ್ಸಿನಲ್ಲಿ ಶಿಕಾರಿ ಮಾಡಿ ಹೃದಯಸ್ಥಗೊಳಿಸಿಕೊಂಡರು. ಹಾಗಾಗಿಯೇ ಅವರಿಗೆ "ಕಾಡುಗಳನ್ನು ನಾಶ ಮಾಡಿದಾಗ ಅಲ್ಲಿರುವ ಪ್ರಾಣಿಗಳನ್ನು, ಅವುಗಳ ಪರಿಸರವನ್ನೂ ಧ್ವಂಸ ಮಾಡಿದಾಗ ರಹಸ್ಯ, ಗೌಪ್ಯ ಅದ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯ ಜನಾಂಗ ಕಳೆದು ಕೊಂಡಂತಾಗಿ ಮನಸ್ಸು ಖಿನ್ನವಾಗುತ್ತದೆ" ಎಂಬ ನಿರ್ಣಯಕ್ಕೆ ಬಂದರೂ ಇನ್ನೂ ಮುಂದುವರೆದು, "ನಮಗೆ ತಂದೆ–ತಾಯಿ, ಗೆಳೆಯರು, ಸ್ಕೂಲು ಇಷ್ಟರೊಳಗೆ ಸೀಮಿತವಾಗಿದ್ದ ಜೀವ ಸಮುಚ್ಚಯದ ಕಲ್ಪನೆಯನ್ನು ನಮ್ಮ ಪ್ರಜ್ಞೆಗೆ ಅನೂಹ್ಯವಾಗಿದ್ದ ಹಾವು, ಇಲಿ, ಮೊಲ ಇತ್ಯಾದಿಗಳ ವಿಶ್ವಸಮಾಜದ ಹತ್ತಿರಕ್ಕೆ ಒಯ್ಯಲು ಹೇಗೆ ಸಹಾಯ ಮಾಡಿತೆಂದು ಊಹಿಸಲೂ ಸಾಧ್ಯವಾದರೆ ಸಾಕು" [೨೦] ಎಂಬ ಸಾಲುಗಳನ್ನು ದಾಖಲಿಸುವ ಮೂಲಕ ತೇಜಸ್ವಿ ಅವರ ಜೀವಜಾಲದ ಮಿಡಿತವನ್ನೂ ಸಹ ಹೊರಹಾಕುತ್ತಾರೆ.

ಪರಿಸರದ ಬಗ್ಗೆ ತೇಜಸ್ವಿಯವರಿಗೆ ಇದ್ದ ಕಾಳಜಿಯನ್ನು ಅವರ ಬರಹಗಳ ಮೂಲಕ ತಿಳಿದ ಮೇಲೆ ಇಕಾಲಜಿಯನ್ನು ಪಠ್ಯವಾಗಿ ಓದಿದ್ದ ನನಗೆ ಒಂದು ಹೊಸ ಜ್ಞಾನೋದಯ ಆಯ್ತು. ಅದುವರೆಗೆ ನೀರು ತುಂಬಿದ ಗುಂಡಿಗಳಾಗಿದ್ದ ಕೆರೆಕುಂಟೆಗಳು ನನಗೆ ಸಜೀವ ಭಂಡಾರಗಳಾದವು. ಒಂದು ಕೆರೆ, ಅದರಲ್ಲಿ ನೀರುಹಕ್ಕಿಗಳು, ಕಪ್ಪೆ, ಕೀಟಾದಿಗಳು, ಜೊಂಡು, ತಾವರೆ ಏನೇನೋ ಕಂಡಾಗ ಇಲ್ಲೇನೋ ಆಗುತ್ತಿದೆ, ಇಲ್ಲಿ ಜೀವ ಸಂಚಲನವಿದೆ ಎಂಬ ಸತ್ಯ ಆಗಷ್ಟೇ ಹೊಳೆದಂತೆ ರೋಮಾಂಚನಗೊಂಡೆ ಎನ್ನುತ್ತಾರೆ ಪದ್ಮ ಶ್ರೀರಾಮ ಅವರು.[೨೧] ಒಬ್ಬ ಛಾಯಾಗ್ರಾಹಕನಿಗಿರಬೇಕಾದ ಸೂಕ್ಷ್ಮ ಕಣ್ಣು, ಕಿವಿಗಳು ಅವರದಾಗಿದ್ದವು. ನಮಗೆ ಕಾಣಿಸದಿದ್ದ ದೂರದಲ್ಲೆಲ್ಲೋ ಕಾಣಿಸುವ ಅಪರೂಪದ ಕೆಂದಳಿಲು ಅವರ ಸೂಕ್ಷ್ಮನೋಟಕ್ಕೆ ದಕ್ಕುತ್ತಿತ್ತು. ದಾಂಡೇಲಿಯ ಸುತ್ತಾಟದಲ್ಲಿ ಹಾರ್ನ್‌ಬಿಲ್ ಹಕ್ಕಿಯನ್ನು ಸ್ನೇಹಿತರಿಗೆ ತೋರಿಸಿ, ನೋಡಿಬಿಡಿ. ಕಾಡು ನಾಶವಾಗ್ತಿದೆ, ಮುಂದೆ ಇಂಥ ಹಕ್ಕಿಗಳು ನೋಡಲು ಸಿಗುತ್ತದೊ ಇಲ್ಲವೊ ಎಂದು ವಿಷಾದ ವ್ಯಕ್ತಪಡಿಸುವ ಮನೋಧರ್ಮ ಪರಿಸರ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಕಾಳಿನದಿಯ ನಡುಗಡ್ಡೆಯಲ್ಲಿ ಕಾಣುತ್ತಿರುವ ಕುಳ್ಳನೆಯ ಮಾವಿನ ಮರಗಳೇ 'ಅಪ್ಪೆ ಮಿಡಿ' ಮಾವಿನ ಮರಗಳೆಂಬುದಾಗಿ ಕಂಡಾಗಲೂ ಸಂತಸದಿಂದ ಅಬ್ಬಾ! ಇಲ್ಲಾದ್ರೂ ಅಪ್ಪೆ ಮಿಡಿ ಗಿಡಗಳು ಉಳಿದುಕೊಂಡಿವೆಯಲ್ಲಾ ಇವನ್ನು ಹೇಗಾದರೂ ಮಾಡಿ ಉಳಿಸಬೇಕು ಕಣ್ರೀ ಎಂಬ ಅವರ ಉದ್ಗಾರವು ಅವರಲ್ಲಿದ್ದ ಸಸ್ಯ ಸಂಕುಲ ಪರಿಸರ ಪ್ರಜ್ಞೆಗೆ ಯಾವತ್ತೂ ಸಾಕ್ಷಿಯಾಗುವವು. ದಟ್ಟ ಮಲೆನಾಡಿನ ಸೌಂದರ್ಯಕ್ಕೆ ಬೆರಗಾಗದೆ, ಆ ಸೌಂದರ್ಯದ ದಟ್ಟಣೆಗಳಲ್ಲಿ ಅವಿತಿದ್ದ ಸಣ್ಣ ಎಲೆಗಳನ್ನೂ ಸೂಕ್ಷ್ಮವಾಗಿ ನೋಡಿ, ಅರ್ಥಮಾಡಿಕೊಳ್ಳಬೇಕೆನ್ನುವ ಪರಿಶ್ರಮ ಅವರಲ್ಲಿತ್ತು. ಅಮೂಲಾಗ್ರವಾಗಿ ಪರಿಶೀಲಿಸಿ ಶೋಧಿಸುವ ಗುಣವಿತ್ತು. ಇದನ್ನೇ ತೇಜಸ್ವೀತನದ ಪರಿಸರ ಪ್ರಜ್ಞೆ ಎನ್ನಬಹುದು. ಬೆಟ್ಟ, ಮಳೆ, ನದಿ, ಕಾಡು, ಕಟ್ಟೆ, ಪೈರು, ಅನ್ನಕ್ಕೂ ಇರುವ ಸಂಬಂಧವನ್ನು ನಾವು ಮುಖ್ಯ ಎಂದು ಭಾವಿಸುವುದಾದರೆ, ಈ ಕಾಡೊಳಗಿನ ಮರ, ಎಲೆ, ಕ್ರಿಮಿ, ಕೀಟ ಮತ್ತು

ಪಶುಪಕ್ಷಿಗಳ ಸಂಬಂಧವನ್ನು ನಾವು ಗೌರವಿಸಲೇಬೇಕು. ಇವೆಲ್ಲಾ ಒಂದು ಜೀವನ್ಮಯ ಕುಣಿಕೆಯ ಅವಿಭಾಜ್ಯ ಅಂಗಗಳಲ್ಲವೇ? ಎಂದು ಜೀವಚಕ್ರದ ವೈಶಿಷ್ಯತೆ ಮತ್ತು ಅದರ ಗೌಪ್ಯತೆಯ ಬಗ್ಗೆ ತೇಜಸ್ವಿ ಅವರು ವಿವರಿಸುತ್ತಾರೆ. ತೇಜಸ್ವಿ ಅವರಲ್ಲಿನ ಇಂತಹ ವಿಶಿಷ್ಟ ಪರಿಸರ ಪ್ರಜ್ಞೆ ಬಗ್ಗೆ ರಾಜೇಶ್ವರಿ ತೇಜಸ್ವಿ ಅವರು 'ನನ್ನ ತೇಜಸ್ವಿ' ಕೃತಿಯ ದಾಖಲಿಸಿದ್ದಾರೆ. ಒಟ್ಟಾರೆ ತೇಜಸ್ವಿಯವರ ಜೀವಿ ಪ್ರಜ್ಞೆಯನ್ನು ಗ್ರಹಿಸುವುದಾದರೆ, ಸೃಜನಾತ್ಮಕತೆಯಿಂದಲೇ ಅವರು ಪರಿಸರವನ್ನು ಕಂಡವರು. ಬದುಕಿನ ಅನುವಭದಿಂದಲೇ ಅಲ್ಲಿನ ಪಾತ್ರ ಮತ್ತು ಸನ್ನಿವೇಶಗಳನ್ನು ಕ್ರಿಯಾಶೀಲಗೊಳಿಸಿದವರು. ಇಕಾಲಜಿಯಲ್ಲಿ ಅವಿರತ ಸೆಳೆತವಿತ್ತೇ ವಿನ: ಅದರ ತತ್ವ ಸಿದ್ಧಾಂತಗಳ ಫಲಿತವನ್ನು ಅಳವಡಿಸುವ ಕಡೆಗೆ ಆಸಕ್ತಿ ಇತ್ತೇ ಹೊರತೂ ಸಿದ್ಧಾಂತಗಳನ್ನು ನಿರೂಪಿಸುವ ಗೋಜಿಗೆ ಹೋಗುತ್ತಿರಲಿಲ್ಲ. ಇಕಾಲಜಿಯಲ್ಲಿ ಜೀವಿಕೇಂದ್ರಿತ ಸಮತೋಲನ ಕಾಪಾಡದಿದ್ದರೆ ಅಥವಾ ಪರಿಸರವನ್ನು ಸಂರಕ್ಷಿಸುತ್ತಾ, ಅದು ಬಯಸುವ ರೀತಿಯಲ್ಲಿ ಅದನ್ನು ಸಹಜ ಸ್ಥಿತಿಯಲ್ಲಿಡಲು ಮುಂದಾಗದಿದ್ದರೆ ಈ ವಿಶ್ವಕ್ಕೆ ಅಪಾಯ ತಪ್ಪಿದ್ದಲ್ಲ ಎಂಬುದನ್ನು ಕರ್ವಾಲೋ ಮತ್ತು ಚಿದಂಬರ ರಹಸ್ಯದಲ್ಲಿಯೂ ಹಾಗೂ ಬದುಕಿನುದ್ದಕ್ಕೂ ಖಡಕ್ಕಾಗಿಯೂ ಮಂಡಿಸಿದ್ದನ್ನು ಸ್ಮರಿಸಬಹುದಾಗಿದೆ.

೫.೪ ನಾಗೇಶ ಹೆಗಡೆ ಕೃತಿಗಳಲ್ಲಿ 'ಜೀವಿ' ಪ್ರಜ್ಞೆ

'ಭೂಮಿ' ಅಸ್ಥಿತ್ವದ ಪ್ರಜ್ಞೆಯನ್ನೇ ಪ್ರಧಾನವಾಗಿರಿಸುತ್ತಾ, ಪರಿಸರದ ಪ್ರತಿ ಸಂಗತಿಗಳೆಲ್ಲವನ್ನು ಅಂತಿಮವಾಗಿ ಭೂಮಿಯ ಪರಿಕಲ್ಪನೆಯೊಂದಿಗೆ ಸಂಬಂಧಗೊಳ್ಳುವಂತೆ ಗಂಭೀರ ಚರ್ಚೆಯನ್ನು ಅನಾವರಣಗೊಳಿಸುವಂತಹ ವಿಶಿಷ್ಟ ತೆರನಾದ ಪರಿಸರ ಪ್ರಜ್ಞೆ ನಾಗೇಶ ಹೆಗಡೆಯವರಲ್ಲಿದೆ. ಹೇಳಿ ಕೇಳಿ ಇವರೊಬ್ಬ ಭೂಗರ್ಭ ವಿಜ್ಞಾನಿ ಅಲ್ಲದೆ ಪರಿಸರ ತಜ್ಞರು ಹೌದು. ವೈಜ್ಞಾನಿಕ ಮನೋಧರ್ಮದ ಬರವಣಿಗೆಯು ಸಾಹಿತಿಯೋರ್ವ ವ್ಯಕ್ತಪಡಿಸುವ ವೈಜ್ಞಾನಿಕ ಬರಹದ ಶೈಲಿಗಿಂತ ಭಿನ್ನವೇ ಆಗಿರುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಸಾಹಿತಿಯೋರ್ವ ಕಂಡುಕೊಳ್ಳುವ ಒಳನೋಟದ ಪ್ರಜ್ಞೆಯಿಂದಾಗಿ ಮೂಡುವ ಕಲಾಕೃತಿಯೊಂದನ್ನು ಪರಿಸರತಜ್ಞರ ಕಲಾಕೃತಿಯೊಂದಿಗೆ ಸಮೀಕರಿಸಿ ಪರಿಸರ ಪ್ರಜ್ಞೆಯ ಸೃಜನಾತ್ಮಕತೆ ಕುರಿತಂತೆ ಚರ್ಚಿಸುವುದು ಮತ್ತು ನಿರ್ದಿಷ್ಟವಾಗಿ ಅಧ್ಯಯನ ಮಾಡುವುದು ಕಷ್ಟಸಾಧ್ಯವಾದರೂ, ಕಲಾಕೃತಿಯಲ್ಲಿ ವ್ಯಕ್ತವಾಗುವ ಇವರಿಬ್ಬರ ಪರಿಸರ ಪ್ರಜ್ಞೆಯ ಮೂಲ ಆಶಯವನ್ನು ಅರ್ಥಮಾಡಿಕೊಳ್ಳಬಹುದು. ಪರಿಸರದ ಸಂಗತಿಗಳಲ್ಲಿನ ಗಂಭೀರತೆ ಮತ್ತು ಪರಿಣಾಮಗಳ ಸಂಕೀರ್ಣತೆಗಳನ್ನು ಸಾಮಾಜಿಕವಾದ ಚರ್ಚೆಗೆ ಒಡ್ಡುವುದನ್ನು ಇವರ ಬರಹಗಳಲ್ಲಿ ಕಾಣಬಹುದಾಗಿದೆ. ಈ ಕಾರಣಗಳಿಂದಾಗಿಯೇ ಇವರ ಕೃತಿಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿ ಹೆಚ್ಚು ಅರ್ಥಮಾಡಿಕೊಳ್ಳುವುದು ಸಂಶೋಧನೆಯಲ್ಲಿ ಮುಖ್ಯವಾಗುತ್ತದೆ. ಹೆಗಡೆ ಅವರ ಜೀವಿ ಪ್ರಜ್ಞೆ ಸ್ವರೂಪ ತಿಳಿಯಲು ಅಗತ್ಯವೆನಿಸುವ ಲೇಖನಗಳನ್ನು, ಅಂಕಣಗಳನ್ನು, ಕೃತಿಗಳನ್ನು ಮಾತ್ರ ಆಯ್ಕೆ ಮಾಡಿ ಬಳಸಿಕೊಳ್ಳಲಾಗಿದೆ. ಜೀವಿ ಪ್ರಜ್ಞೆ ಹಿನ್ನೆಲೆಯಲ್ಲಿ ನಾಗೇಶ ಹೆಗಡೆರವರ ಕೆಲವು ಕೃತಿಗಳನ್ನು ಹೀಗೆ ಅವಲೋಕನಗೊಳಿಸಲಾಗಿದೆ.

'ಪ್ರತಿದಿನ ಪರಿಸರ ದಿನ' ಎಂಬ ಕೃತಿ ೨೦೦೦ನೇ ಸಾಲಿನಲ್ಲಿ ಮುದ್ರಣ ಕಂಡ ಕೃತಿಯಿದು. ಕೃತಿಯ ರಕ್ಷಾಕವಚವು **'ಪರಿಸರವೆಂಬುದು ಅಪ್ಪನಿಂದ ಬಂದ ಆಸ್ತಿಯಲ್ಲ ಮಕ್ಕಳಿಂದ ಪಡೆದ ಸಾಲ'** ಎಂಬ ಹೇಳಿಕೆಯನ್ನು ಒಳಗೊಂಡಿದ್ದು, ಈ ಕೃತಿಯಲ್ಲಿ ಒಟ್ಟು ೧೨ ಲೇಖನಗಳಿವೆ. ಬಹಳ ಸರಳ ಭಾಷಾಶೈಲಿಯ ಶೀರ್ಷಿಕೆಯನ್ನು ಹೊಂದಿರುವ ಲೇಖನಗಳಿವು. ಬೆನ್ನುಡಿಯಲ್ಲಿ **"ನಾಡಿನ ಪ್ರಕೃತಿ ಜೋಗದ ಸಿರಿಬೆಳಕು, ತುಂಗೆಯ ತೆನೆಬಳುಕು ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕು– ಈ ಯಾವುವು ತಮ್ಮ ವೈಭವವನ್ನು ಉಳಿಸಿಕೊಂಡಿಲ್ಲ"** ಎಂಬುದನ್ನು ಉಲ್ಲೇಖಿಸಲಾಗಿದೆ. ಮುಂದುವರೆದು **'ಕನ್ನಡ ನಾಡಿನ ಸಾಮೂಹಿಕ ಆಸ್ತಿಗಳನ್ನು ಇನ್ನಷ್ಟು ಸಮೃದ್ಧಗೊಳಿಸಲು ಆಗದಿದ್ದರೆ ಕಡೇಪಕ್ಷ ಶಿಥಿಲಗೊಳ್ಳದಂತೆ ಕಾಪಾಡಬಲ್ಲವರು ನಮಗಿಂದು ಬೇಕಾಗಿದ್ದಾರೆ'**(೨೨) ಎಂಬ ಸಾಲುಗಳಿದ್ದು ಹೆಗಡೆ ಅವರು ನಾಡಿನ ಪರಿಸರದ ಇಂದಿನ ಸ್ಥಿತಿಗತಿಯನ್ನು ಮನವರಿಕೆ ಮಾಡಿಕೊಡುತ್ತಾರೆ.

'ಮನುಷ್ಯ ಒಡೆತನದಲ್ಲಿ ಭೂಗ್ರಹದ ಸ್ಥಿತಿಗತಿ' ಎಂಬ ಲೇಖನವು ಇದೇ ಕೃತಿಯಲ್ಲಿದ್ದು ಭೂಮಿಯ ಅಸ್ಮಿತೆಯುನ್ನು ವಿವರಿಸುತ್ತದೆ. ಜೀವವೈವಿಧ್ಯತೆಯ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳುವ ಪೂರ್ವದಲ್ಲಿ ಜೀವಸೃಷ್ಟಿಯ ಬಗೆಗಿನ ಒಂದಿಷ್ಟು ಮೂಲಭೂತ ಅಂಶಗಳ ಜ್ಞಾನ ಅಗತ್ಯವಾಗಿದ್ದು ಈ ಲೇಖನವು ಸಂಶೋಧನಾರ್ಥಿಗೆ ಪೂರಕವಾದ ವಿಚಾರಗಳನ್ನು ಓದುಗನ ಗ್ರಹಿಕೆಗೆ ತರುತ್ತದೆ. **"ಭೂಮಿ ಅಸ್ತಿತ್ವಕ್ಕೆ ಬಂದ ದಿನದಿಂದ ಅದರ ಪರಿಸರದಲ್ಲಿ ಸತತವಾಗಿ ಸ್ಥಿತ್ಯಂತರಗಳು ಆಗುತ್ತಲೇ ಬಂದಿವೆ. ಈ ೪೬೦ ಕೋಟಿ ವರ್ಷಗಳಲ್ಲಿ ಮೊದಲ ನೂರಾರು ಕೋಟಿ ವರ್ಷಗಳವರೆಗೆ ಭೂಗ್ರಹಕ್ಕೆ ಉಲ್ಕಾಬಂಡೆಗಳು, ಕ್ಷುದ್ರಗ್ರಹಗಳು ಪದೇ ಪದೇ ಅಪ್ಪಳಿಸುತ್ತಿದ್ದ ಕಾರಣದಿಂದಾಗಿ ಜೀವ ಸೃಷ್ಟಿಯ ಅವಕಾಶವು ಇರಲಿಲ್ಲ ಎಂಬ ಚಿಂತನೆಯೊಂದಿಗೆ ಜೀವವೈವಿಧ್ಯಗಳ ಬಗ್ಗೆ ಹೆಗಡೆಯವರ ಚರ್ಚೆ ಆರಂಭಗೊಳ್ಳುತ್ತದೆ. ಮುಂದುವರೆದಂತೆ, ಆ ವಿಕ್ಷಿಪ್ತ ಅವಧಿಯಲ್ಲಿ ಬಾಹ್ಯ ಕಾಯಗಳೇ ಭೂಮಿಯ ಭವಿಷ್ಯವನ್ನು ನಿರ್ಧರಿಸುವಷ್ಟು ಬಲಾಢ್ಯವಾಗಿದ್ದವು ಮತ್ತು ಆಗಿನ ಪ್ರಳಯಾಂತಕ ಹೊಡೆತಗಳನ್ನು ಸಹಿಸಿಕೊಂಡ ಪೃಥ್ವಿ ಕ್ರಮೇಣ ತನ್ನನ್ನು ತಾನೇ ಸ್ಥಿಮಿತಗೊಳಿಸಿಕೊಂಡು ಜೀವಾಂಕುರಕ್ಕೆ ಅವಕಾಶ ಮಾಡಿಕೊಟ್ಟಿತು ಎನ್ನುತ್ತಾ, ಜೀವವೈವಿಧ್ಯದ ಆದಿಯನ್ನು ಸ್ಪಷ್ಟಪಡಿಸುತ್ತಾರೆ.**(೨೩)

ಆರೂವರೆ ಕೋಟಿ ವರ್ಷಗಳ ಹಿಂದೆ ಡೈನೊಸಾರ್‌ಗಳು ಇಡೀ ಭೂಮಂಡಲವನ್ನು ಆಳುತ್ತಿದ್ದಾಗ, ಭಾರೀ ಗಾತ್ರದ ಧೂಮಕೇತುವೊಂದು ಮೆಕ್ಸಿಕೊ ಪ್ರಸ್ಥಭೂಮಿಯ ಚಿಕ್ಸ್‌ಕ್ಯುಲುಬ್ ಪ್ರಾಂತ್ಯದಲ್ಲಿ ಬಡಿದ ಪರಿಣಾಮವಾಗಿ, ಅಲ್ಲಿ ಎದ್ದ ಧೂಳಿಯ ಮೋಡಗಳು ಸೂರ್ಯನನ್ನು ಮರೆಮಾಡಲಾಗಿ ಭೂಮಿಯ ಹಸಿರು ಕವಚ ನಿರ್ನಾಮವಾಯಿತು. ೧೫ ಕೋಟಿ ವರ್ಷಗಳಿಂದ ಭೂಮಿಯ ಮೇಲಿದ್ದ ಡೈನೊಸಾರ್‌ಗಳು ಹಠಾತ್ತಾಗಿ ಅಳಿದುಹೋದವು. ಚಿಕ್ಕಪುಟ್ಟ ಪ್ರಾಣಿಗಳು ಬದುಕುಳಿದು ವಿಕಾಸದ ಮೆಟ್ಟಿಲುಗಳನ್ನು ಏರತೊಡಗಿದವು. ಆ ನಂತರದ ಬೆಚ್ಚಗಿನ ಯುಗದಲ್ಲಿ ಹಿಂದೆಂದೂ ಕಂಡಿರದಂತಹ ಸುಂದರ ಪ್ರಾಣಿಗಳು, ಸಸ್ತನಿಗಳು ಅವತರಿಸಿದವು. ಆದರೆ ಭೂಮಂಡಲದ ಚರಿತ್ರೆಯನ್ನೇ ಬದಲಾಯಿಸುವಂತಹ ಮತ್ತೊಂದು ಹಿಮಯುಗ ಬಂದಿತು. ಅದೇ **'ಪ್ಲೈಯಿಸ್ಟೊಸೀನ್ ಮಹಾ ಮಾರಣಯುಗ'** ಎಂದು ಹೇಳುತ್ತಲೇ **ಇಂಟೆರ್ ಗ್ಲೇಸಿಯಲ್** ಅವಧಿಯಲ್ಲಿ ಜೀವ ಚಿಗುರುತಿತ್ತು ಎಂದು ಪ್ರಸ್ತಾಪಿಸುತ್ತಾರೆ. ಹಾಗೆಯೇ

ಅನೇಕ ಲಕ್ಷ ವರ್ಷಗಳ ಅವಧಿಯಲ್ಲಿ ಭೂಮಿಯ ಮೇಲಿದ್ದ ಬಹಳಷ್ಟು ಸುಂದರ ಮೃಗ ಪಕ್ಷಿಗಳೆಲ್ಲಾ ನಿರ್ನಾಮವಾಗಿ ಹೋದವು. ಭೂಮಧ್ಯ ರೇಖೆಯ ಬಳಿ ಮಾತ್ರ ಅಲ್ಲಲ್ಲಿ ಜೀವಜಂತುಗಳು ಬದುಕಿದ್ದವು. ಭೂಮಿ ಮತ್ತೆ ಚೇತರಿಸಿಕೊಂಡು 'ಕ್ವಾಟರ್ನರಿ' ಯುಗಕ್ಕೆ ಕಾಲಿಟ್ಟಿತು. ಕಳೆದ ೨೦ ಸಹಸ್ರ ವರ್ಷಗಳಲ್ಲಿ ಹಿಮದ ಪ್ರಮಾಣ ಶೇಕಡಾ ೩೦ರಷ್ಟಕ್ಕೆ ಇಳಿದಿತ್ತು. ಹಿಮ ಕರಗಿದ್ದರಿಂದ ಸಮುದ್ರ ಮಟ್ಟ ನೂರು ಮೀಟರುಗಳಿಗಿಂತ ಮೇಲೇರಿತು. ಸಮುದ್ರಗಳಲ್ಲಿ ಜಲಚರಗಳು ಭಾರೀ ಸಂಖ್ಯೆಯಲ್ಲಿ ವೃದ್ಧಿಯಾದವು. ಸಾಗರ ತೀರದಲ್ಲಿ ಬೆಳೆದಿದ್ದ ಲಕ್ಷಾಂತರ ಚದರ ಕಿಲೊಮೀಟರುಗಳಷ್ಟು ಸಸ್ಯಾವರಣ ನೀರಲ್ಲಿ ಮುಳುಗಿತು. ಆದರೆ ಅದೇ ವೇಳೆಗೆ ಎತ್ತರದ ಪ್ರದೇಶಗಳಲ್ಲಿ ಹಿಮವೆಲ್ಲ ಕರಗುತ್ತ ಬಂದು, ನೆಲ ಮತ್ತೆ ಕಾಣಿಸಿಕೊಂಡಿದ್ದರಿಂದಾಗಿ ಲಕ್ಷಾಂತರ ಚದರ ಕಿಲೊಮೀಟರು ಭೂಮಿ ಮತ್ತೆ ಹಸುರಾಯಿತು. ಸಾವಿರಾರು ಕೆರೆಗಳು ಸೃಷ್ಟಿಯಾದವು. ಹೊಸ ನದಿಗಳು ಜನ್ಮ ತಾಳಿದವು. ಜಲಚರಗಳು ಸಮೃದ್ಧವಾದವು. ಮಳೆಕಾಡುಗಳು ಎಲ್ಲೆಲ್ಲೂ ವ್ಯಾಪಿಸಿದವು. ಹಿಮದಲ್ಲಿ ಹೂತು ನಿರ್ನಾಮವಾಗಿದ್ದ ವಿವಿಧ ಬಗೆಯ ಸುಂದರ ಸಸ್ತನಿಗಳ ಬದಲು ಹೊಸಪೀಳಿಗೆಯ ಮತ್ತಷ್ಟು ವನ್ಯಪ್ರಾಣಿಗಳು (ಆಗ ಎಲ್ಲವೂ ವನ್ಯಪ್ರಾಣಿಗಳೇ ತಾನೆ? ಸಾಕಿದ ಪ್ರಾಣಿ ಎಲ್ಲಿದ್ದವು?) ಅವತರಿಸಿದವು. ಮನುಷ್ಯನೂ ಅವತರಿಸಿದ. [(೨೪)] ಎಂಬ ಜೀವಿ ಪ್ರಜ್ಞೆಯ ಅಂಶಗಳ ಬಗ್ಗೆ ಈ ಲೇಖನದ ಭಾಗದಲ್ಲಿ ವಿವರಿಸುತ್ತಾರೆ. ಮಾನವನ ಸೃಷ್ಟಿ ವಿಶೇಷವಾದುದಲ್ಲ. ಅವನು ಒಂದು ಜೀವಿ. ಹೊಸಪೀಳಿಗೆಯ ಅವತರಣಿಕೆಯಲ್ಲಿ ಈತನೂ ಇತರೆ ಜೀವಿಗಳೊಡನೆ ಅವತರಿಸಿದ ಎಂಬುದನ್ನು ಸ್ಪಷ್ಟಡಿಸುತ್ತಾರೆ. ವಿಕಾಸದ ಆದಿಯಲ್ಲಿ ಜೀವಿಯ ನಿರ್ನಾಮ ಮತ್ತು ಮರುಸೃಷ್ಟಿ ಆಗುತ್ತಲೇ ಇರುತ್ತದೆ. ಕಾಲಘಟ್ಟಕ್ಕೆ ಅನುಸಾರ ಭೂಮಿಯ ಸ್ಥಿತಿಗೆ ಪೂರಕವಾದ ಜೀವಿಗಳ ಉಗಮವಾಗುತ್ತದೆ ಎಂಬುದರ ಮನನವನ್ನು ವಿವರಣೆಗಳಲ್ಲಿ ಕಾಣಬಹುದು. ಬಲಾಢ್ಯ ಡೈನೋಸಾರ್‌ಗಳೇ ವಿಕಾಸದ ಹೊಡೆತಕ್ಕೆ ಅಳಿದು ಚಿಕ್ಕ ಪುಟ್ಟ ಪ್ರಾಣಿಗಳೇ ವಿಸ್ಮಯವೆಂಬಂತೆ ಬದುಕುಳಿದ ಸಂಗತಿಯನ್ನು ಬರಹಗಳಲ್ಲಿ ಗುರುತಿಸಬಹುದಾಗಿದೆ.

ಜೀವಿ ಪ್ರಜ್ಞೆ ಪಸ್ತಾಪಿತ ವಿವರಣೆಗಳಲ್ಲಿ ಹೆಗಡೆ ಅವರು 'ಜೀವವೈವಿಧ್ಯ ನಾಶ' ಎಂಬುದು ಭೂಮಿಯನ್ನು ಕಾಡುತ್ತಿರುವ ನಾಲ್ಕನೆಯ ಸಮಸ್ಯೆ ಎಂದು ಹೇಳುತ್ತಾ, ಇದು ಮಹತ್ವದ ದೃಷ್ಟಿಯಿಂದ ಕೊನೆಯದಲ್ಲ; ಕೆಲವರ ಪ್ರಕಾರ, ಜೀವವೈವಿಧ್ಯ ನಾಶವಾಗುವುದೇ ಇಂದಿನ ಭೂಮಿಯ ಅತಿ ಪ್ರಮುಖ ಸಮಸ್ಯೆಯಾಗಿದೆ ಎಂಬುದನ್ನು ಗುರುತಿಸುತ್ತಾರೆ ಗಮನಾರ್ಹ ಸಂಗತಿ ಎಂದರೆ ಜೀವಮಂಡಲವು ವೈವಿಧ್ಯಮಯ ಜೀವಿಗಳ ಖಜಾನೆ. ಇಂದು ಭೂಮಿಯ ಮೇಲೆ ಐದು ಲಕ್ಷಕ್ಕೂ ಹೆಚ್ಚು ವಿಧವಾದ ಸಸ್ಯಗಳಿವೆ. ಸುಮಾರು ಹತ್ತು ಲಕ್ಷ ಬಗೆಯ ಪ್ರಾಣಿಗಳಿವೆ. ಇವೆಲ್ಲವೂ ಒಂದೊಂದು ಬಗೆಯ 'ಜೀವಾಶ್ರಯ'ದಲ್ಲಿ ವಾಸಮಾಡುತ್ತಿವೆ. ಮಳೆಕಾಡು, ಉದುರೆಲೆ ಕಾಡು, ಮರಳುಗಾಡು, ಟಂಡ್ರಾ ಪ್ರದೇಶ, ಹಿಮಭೂಮಿ, ಸಾಗರ, ನದಿ, ಕೆರೆ, ಸರೋವರ ಇಲ್ಲೆಲ್ಲಾ ಜೀವಿಗಳು ನೆಲೆಸಿವೆ. ಭಯಂಕರವೆನಿಸುವ ಹುಲಿ-ಘೇಂಡಾಗಳಿಂದ ಹಿಡಿದು ವರ್ಣಮಯ ಪಶುಪಕ್ಷಿ, ಕ್ರಿಮಿಕೀಟ, ಜಲಚರಗಳವರೆಗಿನ ಜೀವಿಗಳು ಪರಸ್ಪರ ನೆರವಾಗುತ್ತಾ, ಪರಸ್ಪರರ ಬದುಕಿಗೆ ಆಧಾರವಾಗುತ್ತಾ, ತಮ್ಮ ಬದುಕಿನಿಂದಾಗಿಯೇ ತಮ್ಮ ಸುತ್ತಲ ಪರಿಸರಕ್ಕೆ ರೂಪಕೊಡುತ್ತಾ, 'ಜೀವಮಂಡಲ'ವನ್ನು ನಿರ್ಮಿಸಿವೆ ಎಂಬು ವಿವರಣೆಗಳು ಕೃತಿಯಲ್ಲಿವೆ. ಸಸ್ಯಗಳು ಪಕ್ಷಿಗಳಿಗೆ ಹಣ್ಣುಹಂಪಲು ನೀಡುತ್ತವೆ; ಪಕ್ಷಿಗಳು ಸಸ್ಯಗಳ ಬೀಜ ಪ್ರಸಾರಕ್ಕೆ

ನೆರವಾಗುತ್ತವೆ. ಈ ಜೀವಜಾಲದಲ್ಲಿ ಒಂದು ಜೀವಿ ನಿರ್ವಂಶವಾದರೂ ಒಂದು ಕೊಂಡಿ ತಪ್ಪಿದಂತಾಗಿ, ಅಲ್ಲಿನ ನೇಯ್ಗೆ ಏರುಪೇರಾಗುತ್ತದೆ. ಮತ್ತೆ ಅಲ್ಲಿ ಬೇರೊಂದು ತೇಪೆ ಬಂದು ಸೇರಿಕೊಳ್ಳಲು ಎಷ್ಟು ವರ್ಷಗಳಾಗುತ್ತವೊ? ಸೇರಿಕೊಳ್ಳುತ್ತದೋ ಇಲ್ಲವೊ? ಪ್ರಶ್ನೆಗಳನ್ನು ಹೆಗಡೆ ಓದುಗರ ಮುಂದಿಡುತ್ತಾರೆ. ಈ ಪ್ರಸ್ತಾಪಗಳು ಜೀವಗೋಲದಲ್ಲಿ ಜೀವಿಗಳ ಸಮತೋಲನದ ಮಹತ್ವವನ್ನು ಎತ್ತಿಹಿಡಿಯುವವು. ಭೂಮಿಯ ಅಖಂಡತೆಯು ಜೀವಿಯೊಂದರ ಬಂಧದೊಳಗೆ ಇನ್ನೊಂದು ಜೀವಿ ಅಡಗಿಕೊಂಡಿರುವ ಮತ್ತು ಪರಸ್ಪರ ಅವಲಂಬಿಸಿರುವ ವ್ಯೂಹವಾಗಿದೆ ಎಂಬ ತಾತ್ವಿಕತೆಯನ್ನು ಅರ್ಥೈಸುವವು. ನೈಸರ್ಗಿಕ ಕಾರಣಗಳಿಂದಾಗಿ ಭೂಮಿಯ ಮೇಲೆ ಹಿಂದೆ ಅನೇಕ ಬಾರಿ ಅನೇಕ ಜೀವಿ ವಂಶಗಳು ನಿರ್ವಂಶವಾಗಿದ್ದು ಒಂದು ಅಂದಾಜಿನ ಪ್ರಕಾರ, ಪ್ರತಿ ಏಳು ವರ್ಷಗಳಿಗೊಮ್ಮೆ ಸರಾಸರಿ ಒಂದೊಂದು ಜೀವ ಪ್ರಭೇದ ನಿರ್ನಾಮವಾಗುತ್ತಿದೆ. ಹೊಸ ಪ್ರಭೇದಗಳು ಅದೇ ಪ್ರಮಾಣದಲ್ಲಿ ಸೃಷ್ಟಿಯಾಗುತ್ತಿದೆ. ಮನುಷ್ಯನ ಕೃತ್ಯಗಳಿಂದಾಗಿ, ಅನಪೇಕ್ಷಿತ ಜೈವಿಕ ಚಟುವಟಿಕೆಗಳಿಂದಾಗಿ ಜೀವಿ ಪ್ರಭೇದಗಳ ನಿರ್ನಾಮ ಕ್ರಿಯೆ ತುಂಬಾ ತ್ವರಿತವಾಗಿದೆ. ವರ್ಷಕ್ಕೆ ಸರಾಸರಿ ಶಿರಷ್ಟು ಪ್ರಭೇದಗಳು ಭೂಮಿಯ ಮೇಲಿಂದ ನಿರ್ವಂಶವಾಗುತ್ತಿವೆ. ಹೊಸ ಸೃಷ್ಟಿಯ ಕ್ರಿಯೆ ಮಾತ್ರ ಅದೇ ಪ್ರಮಾಣದಲ್ಲಿ ಹೆಚ್ಚುತ್ತಿಲ್ಲ ಎನ್ನುವುದರ ಮೂಲಕ ಜೀವವೈವಿಧ್ಯದ ನಿರ್ನಾಮದಿಂದಾದ ಖಾಲಿಜಾಗವನ್ನು ಭರ್ತಿಮಾಡುವ ಸೃಷ್ಟಿಯ ಪ್ರಕ್ರಿಯೆ ಕ್ಷೀಣಿಸಲ್ಪಟ್ಟಿದೆ ಎಂಬುದನ್ನು ಕೃತಿಗಳಲ್ಲಿ ಕಾಣಬಹುದಾಗಿದೆ. ಅರಣ್ಯ ನಾಶ, ಕೃಷಿ, ಪಶು ಸಂಗೋಪನೆ, ನಗರ ವಿಸ್ತರಣೆ, ಸಾರಿಗೆ ಸಂಚಾರ, ಶಕ್ತಿ ಉತ್ಪಾದನೆ, ಔದ್ಯಮಿಕ ಚಟುವಟಿಕೆ ಇನ್ನಿತರೆ ಕಾರಣಗಳಿಂದ ಅಸಂಖ್ಯ ಜೀವಿಗಳು ಸಾಯುತ್ತಿವೆ. ಕೀಟನಾಶಕ, ಕಳೆನಾಶಕ ಹಾಗೂ ಪಿಡುಗುನಾಶಕ ದ್ರವ್ಯಗಳಿಂದಾಗಿ ಲೆಕ್ಕಕ್ಕೆ ಸಿಗದಷ್ಟು ಸಂಖ್ಯೆಯ ಕ್ರಿಮಿಕೀಟಗಳೂ ಸಸ್ಯಗಳೂ ನಿರ್ನಾಮವಾಗುತ್ತಿವೆ ಎಂಬ ವಿವರಣೆಗಳು ಜೀವಿಗಳ ನಿರ್ನಾಮಕ್ಕೆ ಕಾರಣವಾಗುತ್ತಿರುವ ಮನುಷ್ಯನ ಆಧೂನಿಕ ಜೀವನ ಶೈಲಿಯ ಜೈವಿಕ ಚಟುವಟಿಕೆಗಳನ್ನು ಕುರಿತು ವಿವರಿಸುತ್ತವೆ.[೨೫] ಪ್ರಕ್ರಿಯೆ ಕ್ಷೀಣಿಸಲು ಇರುವ ಕಾರಣಗಳನ್ನು ಕೃತಿಯಲ್ಲಿ ಹೀಗೆ ವಿವೇಚಿಸಲಾಗಿದೆ. ಜೀವವಿನಾಶ ಒಂದು ನೈಸರ್ಗಿಕ ಪ್ರಕ್ರಿಯೆ ನಿಜ. ಆದರೆ ಇಂದು ಜೀವವೈವಿಧ್ಯ ನಾಶವಾಗುತ್ತಿರುವುದು ನೈಸರ್ಗಿಕ ಆಗು ಹೋಗುಗಳಿಂದಲ್ಲ. ಜಾಗತಿಕ ಮಟ್ಟದಲ್ಲಿ ಜೀವಿಗಳ ಸಾಮೂಹಿಕ ವಿನಾಶಕ್ಕೆ ಕಾರಣವಾಗಬಹುದಾದಂತಹ ನೈಸರ್ಗಿಕ ವಿಕೋಪ ಇತ್ತೀಚಿನ ಶತಮಾನಗಳಲ್ಲಿ ನಡೆದಿಲ್ಲ; ಡೈನೋಸಾರ್‌ಗಳ ವಿನಾಶಕ್ಕೆ ಕಾರಣವಾಗಬಹುದಾದಂತಹ ಉಪಗ್ರಹದ ಅಪ್ಪಳಿಕೆಯೂ ನಡೆಯಲಿಲ್ಲ; ಹೊಸ ಭೂಖಂಡವೂ ಉದಯಿಸಲಿಲ್ಲ; ಖಂಡಗಳ ವ್ಯಾಪಕ ಬದಲಾವಣೆಗಳಾಗಲಿಲ್ಲ; ಹಿಮಾನೀಕರಣ (Glaciation) ನಡೆಯಲಿಲ್ಲ. ಇಂದಿನ ಜೀವವಿನಾಶಕ್ಕೆ ಮನುಷ್ಯ ಚಟುವಟಿಕೆಗಳೇ ಕಾರಣ. ನಮ್ಮ ಐಷಾರಾಮ ಬದುಕು, ಜನಸಂಖ್ಯಾ ಸ್ಫೋಟ, ಕಾಡು ನಾಶ, ಜೀವವಿನಾಶಕ್ಕೆ ಪ್ರಮುಖ ಕಾರಣಗಳು. ಕೆಲ ಆಯ್ದ ತಳಿಗಳ ವ್ಯಾಪಕ ಉಪಯೋಗದಿಂದಾಗಿ ವ್ಯವಸಾಯದ ಸಸ್ಯಗಳ ವೈವಿಧ್ಯವು ಕುಸಿದಿದೆ; ಏಕತಾನತೆ ಎದ್ದು ತೋರುತ್ತಿದೆ. ಒಂದು ಕಾಲದಲ್ಲಿ ಒಂದು ಲಕ್ಷಕ್ಕೂ ಮಿಕ್ಕ ಭತ್ತದ ತಳಿಗಳಿದ್ದುದು ಇಂದು ಕೆಲವು ನೂರು ತಳಿಗಳಿಗೆ ಇಳಿದಿವೆ. ಜೀವವೈವಿಧ್ಯ ಎಲ್ಲಾ ಹಂತಗಳಲ್ಲೂ ಕಣ್ಮರೆಯಾಗುತ್ತಿದೆ ಎಂಬುದಕ್ಕೆ ಇದೊಂದು ಒಂದು ಉದಾಹರಣೆ ಎಂದಿದ್ದಾರೆ ಹೆಗಡೆ.

ಲೇಖನದ ಭಾಗದಲ್ಲಿ "ಭೂಮಿ ತನ್ನ ಕೋಟಿ ವರ್ಷಗಳ ಇತಿಹಾಸದಲ್ಲಿ ಅದೆಷ್ಟೋ ಬಾರಿ ಭಾರೀ ಹೊಡೆತನಗಳನ್ನು ಎದುರಿಸಿಯೂ ಜೀವಿಗಳ ವಿಕಾಸಕ್ಕೆ ಅನುಕೂಲಕರ ವಾತಾವರಣವನ್ನು ನಿರ್ಮಿಸಿಕೊಂಡಿದೆ. ಈ ವಿಕಾಸ ಮಾರ್ಗದಲ್ಲಿ ಅದೆಷ್ಟೋ ಬಾರಿ ಜೀವಿಗಳು ಭೂಪರಿಸರವನ್ನು ಬದಲಾಯಿಸಿಕೊಂಡಿವೆ. ಇಲ್ಲವೆ ಬದಲಾದ ಪರಿಸರಕ್ಕೆ ಹೊಂದುವಂಥ ಹೊಸ ಜೀವಿಗಳ ಸೃಷ್ಟಿಯಾಗಿದೆ. ಹೊಸ ಪರಿಸರಕ್ಕೆ ಹೊಂದಿಕೊಳ್ಳಲಾಗದ ಬಲಾಢ್ಯ ಜೀವಿಗಳೂ ಹೇಳ ಹೆಸರಿಲ್ಲದಂತೆ ನಿರ್ನಾಮವಾಗಿವೆ. ಆಗಾಗ ಬಂದ ಭಾರೀ ಹಿಮಯುಗಗಳಲ್ಲಿ ಇಡೀ ಜೀವಸಂಕುಲವೇ ನಲುಗಿ, ಕೋಟ್ಯಾಂತರ ಜೀವಿಗಳು ನಾಶವಾದರೂ ಮತ್ತೆ ವಿಕಾಸ ಪ್ರಕ್ರಿಯೆ ಮುಂದುವರೆದು ಮನುಷ್ಯನ ಉಗಮ ಮತ್ತು ವಿಕಾಸದವರೆಗೂ ಬಂದಿದೆ. ಮನುಷ್ಯ ಇತರೆಲ್ಲ ಜೀವಿಗಳಿಗಿಂತ ಬಲಾಢ್ಯನಾಗಿ, ಭೂಮಿಯ ನಾಲ್ಕೂ ಮಂಡಲಗಳನ್ನು ತನಗೆ ಬೇಕಾದಂತೆ ಬದಲಾಯಿಸುವ ಶಕ್ತಿ ಪಡೆದಿದ್ದಾನೆ. ಇತರ ಜೀವಿಗಳನ್ನು ಹೊಸಕಿ ಹಾಕುವುದರಿಂದ ಅಂತಿಮವಾಗಿ ತನ್ನ ಉಳಿವಿಗೇ ಅಪಾಯ ಬರಲಿದೆಯೆಂಬ ವಿವೇಚನೆಯನ್ನು ಬೆಳೆಸಿಕೊಂಡಿದ್ದಾನೆ. ತಾನೇ ಮಾಡಿದ ಅನರ್ಥಗಳನ್ನು ಸರಿಪಡಿಸಲು ಹೆಣಗುತ್ತಿದ್ದಾನೆ. ಭೂಮಿಗೆ ನಿಜಕ್ಕೂ ಅಪಾಯ ಎದುರಾದಾಗ ಇಡೀ ಮಾನವ ಕುಲವನ್ನೇ ಒಗ್ಗೂಡಿಸಲು ಸಾಧ್ಯ ಎಂಬುದನ್ನು ಪ್ರದರ್ಶಿಸಿದ್ದಾನೆ. ಜೀವಜಾಲವನ್ನೇ ಹೊಸಕಿ ಹಾಕುತ್ತ ಕೊನೆಗೆ ಇಡೀ ಮಾನವ ಕುಲವೇ ನಶಿಸಿ ಹೋದರೂ ಭೂಮಿಗೆ ಅಂತ ಭಾರೀ ನಷ್ಟವೇನೂ ಆಗಲಾರದೆಂದೂ, ಅದು ಮತ್ತೆ ಜೀವ ವಿಕಾಸದ ಮಾರ್ಗವನ್ನೇ ಸರಿಪಡಿಸಿಕೊಂಡು ಹೊಸ ಜೀವಿಗಳ ಸೃಷ್ಟಿ ಕ್ರಿಯೆಯಲ್ಲಿ ತೊಡಗುತ್ತದೆಂದೂ ಆತ ಅರಿತಿದ್ದಾನೆ. ಇತರ ಜೀವಿಗಳ ಹಾಗೂ ಇಡೀ ಭೂಮಂಡಲದ ರಕ್ಷಣೆ ಮಾಡುವುದರಿಂದಲೇ ತನ್ನ ರಕ್ಷಣೆ ಸಾಧ್ಯವೆಂಬುದನ್ನು ಮನಗಾಣುತ್ತಿದ್ದಾನೆ. ಆ ಪ್ರಜ್ಞೆಯನ್ನು ಮಾನವ ಕುಲದ ಎಲ್ಲ ಸದಸ್ಯರಲ್ಲೂ ಬಿಂಬಿಸಲು ಯತ್ನಿಸುತ್ತಿದ್ದಾನೆ. ಯಂತ್ರಯುಗದ ಈಗಿನ ಬಿಕ್ಕಟ್ಟು ತಾತ್ಕಾಲಿಕದ್ದೆಂದೂ, ಇಂದಲ್ಲ ನಾಳೆ ತನ್ನೆಲ್ಲ ತಪ್ಪುಗಳನ್ನೂ ಸರಿಪಡಿಸಿಕೊಳ್ಳುತ್ತೇನೆಂದೂ ವಿಶ್ವಾಸ ಬೆಳೆಸಿಕೊಳ್ಳುತ್ತಿದ್ದಾನೆ" [೨೬] ಎನ್ನುವ ಹೆಗಡೆ ಅವರ ವಿಚಾರಗಳಲ್ಲಿ ಭೂಮಿಯಲ್ಲಿ ವಿಷಮ ಸ್ಥಿತಿ ಎದುರಾದ ಸಂದರ್ಭದಲ್ಲಿಯೂ ಅದನ್ನು ಎದುರಿಸಲು ತಾಕತ್ತಿಲ್ಲದ ಜೀವಿಗಳು ಮುಲಾಜಿಲ್ಲದೆ ಅಳಿಯುತ್ತವೆ ಎಂಬುದರ ದೃಷ್ಟಿಯನ್ನು ಕಾಣಬಹುದಾಗಿದೆ. ನಮ್ಮ ಭೂಮಿಯ ಮೇಲೆ ಇಂದು ವಾಸಿಸುವ ಸಕಲ ಜೀವ ಜಂತುಗಳೂ ಮನುಷ್ಯ ಜಾತಿಯಂತೆ ಕಾಲನ ಪರೀಕ್ಷೆಯಲ್ಲಿ ಗೆದ್ದು, ವಿಕಾಸದ ಫಲವಾಗಿ ಮೂಡಿ ಬಂದಿರುವಂತವು. ತಾತ್ವಿಕವಾಗಿ ಹೇಳುವುದಾದರೆ ಅವುಗಳಿಗೂ ಈ ಭೂಮಿಯಲ್ಲಿ ಸ್ವತಂತ್ರವಾಗಿ ಬದುಕುವ ಹಕ್ಕಿದೆ. ಧಾರ್ಮಿಕ, ತಾತ್ವಿಕ, ಸಾಂಸ್ಕೃತಿಕ, ವೈಜ್ಞಾನಿಕ, ಆರ್ಥಿಕ ಮಹತ್ವವುಳ್ಳ ಜೀವವೈವಿಧ್ಯವು ನಮ್ಮ ಅಜ್ಞಾನದಿಂದಾಗಿ ನಾಶವಾಗುತ್ತಿರುವುದು ನಮ್ಮ ಬೌದ್ಧಿಕ ದಿವಾಳಿತನದ ದ್ಯೋತಕ ಎಂದರೂ ತಪ್ಪೇನಿಲ್ಲ.

'ಜೀವಖಜಾನೆಯ ಚಿನ್ನಕ್ಕೆ ಕನ್ನ' ಈ ಕೃತಿಯ ೨ನೇ ಲೇಖನವಾಗಿದೆ. ಜೀವವೈವಿಧ್ಯ ಕಲ್ಪನೆಯ ಬಹುಮುಖ ಆಯಾಮವನ್ನು ಕುರಿತು ಹೆಗಡೆ ಅವರು ಚರ್ಚಿಸಿರುವುದನ್ನು ಈ ಲೇಖನದಲ್ಲಿ ನೋಡಬಹುದಾಗಿದೆ. ಬ್ರೆಜಿಲ್ ದೇಶದ ರಿಯೊ ಡಿ ಜನೈರೊ (ರಿಯೊ)ದಲ್ಲಿ ನಡೆದ 'ಪೃಥ್ವಿ ಶೃಂಗ ಸಭೆ'ಯಲ್ಲಿ 'ಬಯೋಡೈವರ್ಸಿಟಿ' ರಕ್ಷಣೆ ಕುರಿತಂತೆ ಭಾರೀ ಚರ್ಚೆ ನಡೆದಾಗ ಈ ವಿಷಯ ಚಾಲ್ತಿಗೆ ಬಂತು. ಜಗತ್ತಿನ ಜೀವ ಸಂಕುಲಗಳನ್ನು ಸಂರಕ್ಷಿಸಬೇಕೆಂಬ ಒಪ್ಪಂದಕ್ಕೆ ಅಮೆರಿಕಾದ ಅಧ್ಯಕ್ಷರು ರಿಯೊದಲ್ಲಿ ಸಹಿ ಹಾಕಲಿಲ್ಲವೆಂದು ಕ್ರೋಧ, ಪ್ರತಿಭಟನೆ

ವ್ಯಕ್ತವಾದವು ಎಂಬುದನ್ನು ಈ ಪರಿಕಲ್ಪನೆ ಅಡಿಯಲ್ಲಿ ಉಲ್ಲೇಖಿಸುತ್ತಾರೆ. 'ಬಯೋಡೈವರ್ಸಿಟಿ' ಬಗ್ಗೆ ಸರಳವಾಗಿ ಉದಾಹರಿಸುತ್ತಾ, ನಮ್ಮ ಹಳ್ಳಿ ಹೈದನಿಗೂ ಒಪ್ಪಂದಕ್ಕೆ ಸಹಿ ಮಾಡದ ಅಮೆರಿಕಾದ ಅಧ್ಯಕ್ಷರಿಗೂ ಥಳಕು ಹಾಕುತ್ತಾ ಅದನ್ನು ಹೀಗೆ ವಿವರಿಸುತ್ತಾರೆ. ಕರ್ನಾಟಕದ ಯಾವುದಾದರೂ ಕೆರೆಯ ಹಂಚಿನಲ್ಲಿ ನಿಂತು ಅಲ್ಲಿ ಕಾಣುವ ಎಲ್ಲಾ ಬಗೆಯ ಗಿಡ, ಸಸ್ಯ, ಹುಳ, ಹುಪ್ಪಟೆ, ಜಲಚರ, ಜೀವಜಂತುಗಳನ್ನು ಪಟ್ಟಿ ಮಾಡುತ್ತಾ ಹೋದರೆ, ನೆಲದಾಳದ ಎರೆಹುಳುಗಳಿಂದ ಹಿಡಿದು, ಮರದ ತುದಿಗಿನ ಬೆಳ್ಳಕ್ಕಿಯವರೆಗೆ ಸುಮಾರು ೨೫೦ರಿಂದ ೩೦೦ಕ್ಕೂ ಹೆಚ್ಚಿನ ಸಸ್ಯ ಜೀವಜಂತುಗಳ ಪತ್ತೆಯಾಗಬಹುದು. ಆದರೆ ಅರಬ್ ದೇಶದ ಯಾವುದೇ ಮರುಭೂಮಿಯ ಮಧ್ಯೆ ಕಾಣುವ ಓಯಸಿಸ್ ಬಳಿ ನಿಂತು ಇಂಥ ಪಟ್ಟಿ ಮಾಡಿದರೆ. ಕಷ್ಟಪಟ್ಟು ಹುಡುಕಿದರೆ, ೧೦ ರಿಂದ ೧೨ ಜೀವಜಂತುಗಳು ಸಿಗಬಹುದು. ಹಾಗೆಯೇ ಉತ್ತರ ಅಮೆರಿಕದ ಅಲಾಸ್ಕಾ ಹಿಮಪ್ರಾಂತ್ಯದ ಯಾವುದೇ ಕೆರೆಯ ಬಳಿ ನಿಂತು ಪಟ್ಟಿಮಾಡಿದರೆ ೨೫ ರಿಂದ ೩೦ ಬಗೆಯ ಜೀವಜಂತುಗಳು ಪತ್ತೆಯಾಗಬಹುದು. ಉದಾಹರಿಸಿದ ೩ ಸನ್ನಿವೇಶಗಳನ್ನು ಹೋಲಿಕೆ ಮಾಡಿದಾಗ ಕರ್ನಾಟಕದ ಕೆರೆಯ ಅಂಚಿನಲ್ಲಿ ಅತಿ ಹೆಚ್ಚಿನ ಜೀವವೈವಿಧ್ಯ ಕಂಡುಬರುತ್ತದೆ ಎನ್ನುವ ಮೂಲಕ ಶುಷ್ಕ ವೈಜ್ಞಾನಿಕ ನಿರೂಪಣೆಯಿಂದ ಅದನ್ನು ಭಿನ್ನವಾಗಿಸುತ್ತಾರೆ. ಇಲ್ಲಿನ ಅನಾಲಜಿ ಏನೆಂದರೆ, ಅರಬ್ ರಾಷ್ಟ್ರಗಳಲ್ಲಿ ತೈಲ ನಿಕ್ಷೇಪದಿಂದಾಗಿ ಶ್ರೀಮಂತಿಕೆ ಇರಬಹುದು. ಅಮೆರಿಕಾ, ಯುರೋಪ್, ಜಪಾನ್‌ಗಳಲ್ಲಿ ಉದ್ಯಮಶೀಲತೆಯಿಂದಾಗಿ ಶ್ರೀಮಂತಿಕೆ ಇರಬಹುದು. ಆದರೆ ದಕ್ಷಿಣ ಭೂಭಾಗದಲ್ಲಿರುವ ಬಹಳಷ್ಟು ಬಡರಾಷ್ಟ್ರಗಳಲ್ಲಿ ಜೀವವೈವಿಧ್ಯದ ಶ್ರೀಮಂತಿಕೆಯಿದೆ ಎಂಬುದು. ದುರಂತವೆಂದರೆ ಈ ನಿಜವಾದ ಶ್ರೀಮಂತಿಕೆ ಬಡರಾಷ್ಟ್ರದ ಅನೇಕರಿಗೆ ಗೊತ್ತಿಲ್ಲ ಎಂಬ ಲೇಖಕರ ವಿವರಣೆಯು ಜೀವವೈವಿಧ್ಯದ ಬಗೆಗಿನ ವಿಶಿಷ್ಟ ಪರಿಸರ ಪ್ರಜ್ಞೆಯ ಗ್ರಹಿಕೆಗೆ ಸಹಕಾರಿಯಾಗುವುದು. ಅಷ್ಟೇ ಅಲ್ಲದೆ ಕೆರೆ ಅಂಚಿನ ಜೀವಜಾಲದ ಸಂಕೀರ್ಣತೆಯ ಬಗ್ಗೆ ಮನುಷ್ಯನಿಗೆ ಅಷ್ಟೇನೂ ಗೊತ್ತಿಲ್ಲ. ಯಾವುದನ್ನು ನಾಶ ಮಾಡಿದರೆ ಸಮತೋಲನ ಕೆಡುತ್ತದೆ ಎಂಬುದು ಗೊತ್ತಿಲ್ಲ. ಏಕೆಂದರೆ ಈವರೆಗೆ ಯಾವ ತಜ್ಞರು ಇಲ್ಲಿಗೆ ಬಂದು ವ್ಯವಸ್ಥಿತವಾಗಿ ಎಲ್ಲವನ್ನು ಅಧ್ಯಯನ ಮಾಡಿಲ್ಲ. ನಾಳಿನ ಪೀಳಿಗೆಗೆ ಭಾರೀ ಉಪಕಾರ ಮಾಡಬಲ್ಲ ಯಾವುದಾದರೂ ಸಸ್ಯ ಅಥವಾ ಪ್ರಾಣಿ ಅಥವಾ ಕೆಸರುಮಣ್ಣಿನ ಸೂಕ್ಷ್ಮ ಏಕಾಣು ಜೀವಿ ಇಲ್ಲಿ ಇದ್ದಿರಬಹುದೇ ಎಂಬುದರ ಕಲ್ಪನೆಯೂ ನಮಗಿಲ್ಲ ಎಂಬ ವಿಷಾದವನ್ನು ಲೇಖಕರು ವ್ಯಕ್ತಪಡಿಸುತ್ತಾರೆ. ಹಾಗೆಯೇ ಸಸ್ಯ ಮತ್ತು ಜೀವಿಗಳ ಪೇಟೆಂಟ್ ಪಡೆಯುವ ಹಕ್ಕಿನ ಬಗ್ಗೆಯೂ ವಿವರಿಸುತ್ತಾ, ನಮ್ಮ ಬೇವು, ಅರಿಶಿನ, ಹಾಗಲಕಾಯಿ, ಬ್ರಾಹ್ಮೀ ಸಸ್ಯ ಎಲ್ಲಕ್ಕೂ ವಿದೇಶಿ ರಾಷ್ಟ್ರಗಳು ಸ್ವಾಮ್ಯ ಪಡೆಯುವ ಹುನ್ನಾರ ನಡೆಸಿದ್ದಾರೆ[೨೭] ಎಂಬ ಆತಂಕಕಾರಿ ಅಂಶವನ್ನು ನೆನಪಿಸುತ್ತಾರೆ.

ಜೀವಿ ಪ್ರಜ್ಞೆಯಲ್ಲಿ ಸಂರಕ್ಷಿತ ಜೀವಾಶ್ರಯ ಹಾಗೂ ಜೀವಿವೈವಿಧ್ಯ ದಾಖಲಾತಿ ವ್ಯವಸ್ಥೆ ಬಗ್ಗೆ ಮಾತನಾಡುತ್ತಾ ನಮ್ಮ ಊರಲ್ಲಿ ಇಂತಿಂಥ ಸಸ್ಯಗಳು, ಅಣಬೆಗಳು, ಕೀಟಗಳು, ಪಕ್ಷಿಗಳು, ಪ್ರಾಣಿಗಳು ಇವೆ. ಇವೆಲ್ಲವೂ ನಮ್ಮದು ಎಂದು ದಾಖಲೆ ಸಹಿತ ಹೇಳುವಂತಹ ಜೀವಿ ವೈವಿಧ್ಯ ದಾಖಲಾತಿ ವ್ಯವಸ್ಥೆ ನಮ್ಮಲ್ಲಿ ಬರಬೇಕು. ಅದನ್ನು ಯಾರೇ ಬಳಸುವುದಾದರೂ ಮೊದಲು ನಮ್ಮ ಅನುಮತಿ ಪಡೆಯಬೇಕು ಎಂಬುದನ್ನು ನಾವೆಲ್ಲರೂ ಘಂಟಾಘೋಷವಾಗಿ

ಹೇಳುವಂತಾಗಬೇಕು ಎನ್ನುವಂತಹ ದೇಸಿ ಪರಿಸರ ಪ್ರಜ್ಞೆ ಪ್ರಕಟಗೊಳ್ಳುತ್ತದೆ. ಹಾಗೆಯೇ ಈ ಚಿಂತನೆಗೂ ಅಪಸ್ವರ ಎದ್ದಿರುವ ವಿಚಾರ ಒಂದನ್ನು ಉಲ್ಲೇಖಿಸುತ್ತಾ ಇಂತಿಂಥ ಬಗೆಯ ಸಸ್ಯಗಳೂ, ಪ್ರಾಣಿಗಳೂ, ಕೀಟ ಪಂತಂಗಗಳೂ, ಹಾವಸೆಗಳೂ ಇವೆ ಎಂದು ಒಂದು ಕಡೆ ಬರೆದಿಟ್ಟು ನೋಂದಣಿ ಮಾಡಿದ್ದೇವೆ ಎಂದು ಕೊಂಡಲ್ಲಿ, ಹಾಗೆ ಮಾಡುವಾಗ ಆಯಾ ಸಸ್ಯದಿಂದ ಏನೇನು ಪ್ರಯೋಜನ ಪಡೆಯುತ್ತಿದ್ದೇವೆ ಎಂಬುದನ್ನು ಟಿಪ್ಪಣಿ ಮಾಡಿಕೊಂಡಾಗ ಇದು ನಮ್ಮ ರಹಸ್ಯಗಳನ್ನು ನಾವೇ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಬಿಟ್ಟುಕೊಟ್ಟಂತೆ ಆಗುವುದಿಲ್ಲವೇ? ಎಂಬ ಜಿಜ್ಞಾಸೆಗಳೊಂದಿಗೆ ಹೆಗಡೆ ತಮ್ಮ ವಾದವನ್ನು ಮುಂಡಿಸುತ್ತಾರೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಸಂಶೋಧಕರಾದ ಮಾಧವ ಗಾಡಗೀಳರ ನೇತೃತ್ವದಲ್ಲಿ ತೀರ್ಥಹಳ್ಳಿಯ ಅನುಪಾಸಿನ ಕೆಲವು ಹಳ್ಳಿಗಳಲ್ಲಿ ಸ್ಥಳೀಯರ ಸಹಕಾರದೊಂದಿಗೆ ಯಥೋಚಿತ ಸಿಬ್ಬಂದಿ ಮತ್ತು ತಜ್ಞರ ನೆರವಿನಿಂದ ಎಲ್ಲ ಬಗೆಯ ಜೀವಿಗಳ (ಅದರಂತೆ ಗಿಡಬಳ್ಳಿ ಮರ ಪಾಚಿ ಪ್ರಾಣಿ ಪಶು ಪಕ್ಷಿ ಜಲಚರ ಕೀಟ ಪತಂಗ ಎಲ್ಲವುಗಳ) ದಾಖಲಾತಿಯ ಕೆಲಸ ನಡೆದಿರುವುದನ್ನು ಇಲ್ಲಿ ಸ್ಮರಿಸಬಹುದು. ನಮ್ಮಲ್ಲಿ ಲಭ್ಯವಾಗುವ ಜೀವಿಗಳನ್ನು ರಕ್ಷಿಸುವ ಕುರಿತು ಹೀಗೆ ಹೇಳಿದ್ದಾರೆ– "ನಾವು ನಮ್ಮಲ್ಲಿರುವ ಜೀವ ಸಂಪತ್ತಿನ ಅಮೂಲಾಗ್ರ ದಾಖಲಾತಿ ಮಾಡಲೇಬೇಕಾಗಿದೆ. ಅಂಥ ಒಂದು ಯತ್ನವನ್ನು ನಾವು ಆಗಲೇ ಆರಂಭಿಸಿದ್ದೇವೆ. ದೇಶದ ೩೫ ಕಡೆಗಳಲ್ಲಿ 'ಜನಾಧಾರಿತ ಜೀವ ವೈವಿಧ್ಯ ದಾಖಲಾತಿ' ಕೆಲಸ ನಡೆಯುತ್ತಿದೆ. ಇದನ್ನು ಇಡೀ ದೇಶಕ್ಕೆ ವಿಸ್ತರಿಸಿ, ಆಗ ಲಭ್ಯವಾದ ಜೀವ ಸಂಪತ್ತಿನ ದಾಖಲೆಗಳನ್ನೆಲ್ಲ ಒಂದೆಡೆ ಕಲೆ ಹಾಕಿ ಜಿಲ್ಲಾ ಮಟ್ಟದ ದತ್ತಾಂಶ ನಿರ್ವಹಣೆ ವ್ಯವಸ್ಥೆ ಮಾಡಬೇಕು. ಇದಕ್ಕೆ ಸರಕಾರ ಸಹಯೋಗ ನೀಡಬೇಕು. ಆಗ ಮಾತ್ರ ವಿಜ್ಞಾನ ಮತ್ತು ಸ್ಥಳೀಯ ಜ್ಞಾನಗಳ ಸಮ್ಮಿಲನವಾಗುತ್ತದೆ. ಸಂರಕ್ಷಣೆ ಮತ್ತು ಸಂವರ್ಧನೆಯ ವಿಧಾನಗಳನ್ನು ಪರಸ್ಪರ ತಿಳಿಯಲು ಸಹಾಯಕವಾಗುತ್ತದೆ. ಈ ಕೆಲಸದಲ್ಲಿ ಸ್ಥಳೀಯರಷ್ಟೇ ವಿಜ್ಞಾನಿಗಳೂ ಸಹಭಾಗಿಗಳಾದರೆ ಮಾತ್ರ ನಮ್ಮ ದೇಶದ ಸಂಪತ್ತು ನಮ್ಮಲ್ಲೇ ಉಳಿಯುವಂತೆ ಮಾಡಲು ವಿಜ್ಞಾನಿಗಳಿಗೆ ಪ್ರೇರಣೆ ಸಿಗಬಹುದು. ಅದನ್ನು ಮಾರುಕಟ್ಟೆಯ ಸಾಮಗ್ರಿಯನ್ನಾಗಿ ಅಭಿವೃದ್ಧಿ ಪಡಿಸಲು ಬೇಕಾದ ತಂತ್ರಜ್ಞಾನ ನಮ್ಮಲ್ಲಿ ಸದ್ಯಕ್ಕೆ ಇಲ್ಲದಿರಬಹುದು. ಅಂಥ ಸಂದರ್ಭದಲ್ಲಿ ವಿದೇಶೀ ಕಂಪೆನಿಗಳ ಸಹಯೋಗದೊಂದಿಗೆ (ಲಾಭದ ಸಿಂಹಪಾಲು ನಮಗೇ ಸಿಗುವಂತೆ) ಸಂಶೋಧನೆ ನಡೆಸಬಹುದು. ಆಗ ನಮ್ಮ ಸಸ್ಯವನ್ನಾಗಲೀ ಸೂಕ್ಷ್ಮ ಜೀವಿಯನ್ನಾಗಲೀ ವಿದೇಶೀ ಕಂಪೆನಿಗಳು ಪುಕ್ಕಟೆಯಾಗಿ ಸಾಗಿಸಲಾರರು." [(೨೮)] ಎಂದಿದ್ದಾರೆ.

ಜೀವವೈವಿಧ್ಯದ ದಾಖಲಾತಿ ಕುರಿತಂತೆ ಚರ್ಚಿಸುವ ಮಾಧವ ಗಾಡ್ಗೀಳರು ಇದರಿಂದಾಗಿ ವಿಜ್ಞಾನ ಮತ್ತು ಸ್ಥಳೀಯ ಜ್ಞಾನಗಳ ಸಮ್ಮಿಲನವಾಗುತ್ತದೆ ಎಂದಿದ್ದಾರೆ. ಈ ಅಂಶವು ಜೀವವೈವಿಧ್ಯದ ಸಂರಕ್ಷಣೆ ಹಾಗೂ ನೆಲಮೂಲ ಸಂಪತ್ತಿನ ಉಳಿವಿನಲ್ಲಿ ಸ್ಥಳೀಯರ ಪಾತ್ರದ ಅಗತ್ಯತೆಯೊಂದಿಗೆ ಸಾಂಸ್ಕೃತಿಕ ಪರಿಸರವೂ ಜೈವಿಕ ಪರಿಸರದೊಂದಿಗೆ ಬೆಸೆದುಕೊಂಡಿರುತ್ತದೆ ಎಂಬುದನ್ನು ತೋರ್ಪಡಿಸುತ್ತದೆ. ಇಂಗ್ಲಿಷಿನಲ್ಲಿ 'ಯೂಸ್ ಇಟ್ ಆರ್ ಲೂಸ್ ಇಟ್' ಎಂಬ ಮಾತಿದೆ. ಬಳಸದೇ ಇದ್ದರೆ ಕಳೆದುಹೋಗುತ್ತದೆ ಎನ್ನುವ ಈ ಮಾತು ಕಾಡಿನ ಸಸ್ಯಗಳಿಗೆ, ಹಿತ್ತಲಿನ ಮೂಲಿಕೆಗಳಿಗೆ ಚೆನ್ನಾಗಿ ಅನ್ವಯಿಸುತ್ತದೆ. ಇವುಗಳ ಮಹತ್ವವನ್ನು ನಾವು ಮರೆತಿದ್ದೇವೆ.

ಜೀವಿ ವೈವಿಧ್ಯ ದಾಖಲಾತಿ ಮಾಡಿದರೆ ನಮ್ಮ ವಸ್ತುವನ್ನು ನಾವೇ ಕಳೆದುಕೊಳ್ಳುವ ಭೀತಿಯು ತಪ್ಪುತ್ತದೆ ಎಂಬುದರ ಅರಿವನ್ನು ಲೇಖಕರು ಮುಂದಿಡುತ್ತಾರೆ. ಜೀವವೈವಿಧ್ಯದ ಜಾಗೃತಿ ಗ್ರಾಮಮಟ್ಟದಲ್ಲಿ ಮೂಡಿದರೆ ಸಾಲದು. ರಾಷ್ಟ್ರಮಟ್ಟದಲ್ಲಿ ಕೂಡ ಅರಿವು ಮೂಡಬೇಕು. ನಾವು ಚುನಾಯಿಸಿ ಕಳುಹಿಸುವ ಸಂಸದರಲ್ಲೂ ಈ ಜಾಗೃತಿ ಮೂಡಿರಬೇಕು[೨೯] ಎನ್ನುತ್ತಾರೆ ಹೆಗಡೆ.

'ಇರುವುದೊಂದೇ ಭೂಮಿ' ಹೀಗೆಂದು ತಮ್ಮ ಕೃತಿಗೆ ಶೀರ್ಷಿಕೆ ಕೊಟ್ಟವರು ನಾಡಿನ ಹೆಸರಾಂತ ಸಾಹಿತಿ ಹಾಗೂ ಪರಿಸರ ತಜ್ಞರಾದ ನಾಗೇಶ ಹೆಗಡೆ ಅವರು. ಉದಾಹರಣೆ ಸಹಿತ ಭೂಮಿಯ ವಿವಿಧ ಮಜಲುಗಳನ್ನು ವಿವರಿಸಿದ್ದಾರೆ. **"ಈ ಭೂಮಿ ನಮ್ಮ ತಾತ ಮುತ್ತಾತರಿಂದ ಬಂದ ಬಳುವಳಿಯಲ್ಲ, ಮಕ್ಕಳು–ಮೊಮ್ಮಕ್ಕಳಿಂದ ಎರವಲಾಗಿ ಪಡೆದದ್ದು."** ಎಂಬ ವ್ಯಾಖ್ಯೆಯೊಂದಿಗೆ ಲೇಖನಗಳು ಆರಂಭಗೊಳ್ಳುತ್ತವೆ. ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೂಡ ಲಭಿಸಿದೆ. ಈ ಕೃತಿಯಲ್ಲಿ ಒಟ್ಟು ೧೮ ಲೇಖನಗಳಿದ್ದು ಪರಿಸರದ ಬಹುತೇಕ ವಿಚಾರಗಳನ್ನು ಚರ್ಚಿಸುತ್ತವೆ. ಪಶ್ಚಿಮಘಟ್ಟದ ಹಲವಾರು ಸಂಧಿಗ್ಧತೆಗಳನ್ನು ವೈಜ್ಞಾನಿಕ ಮತ್ತು ವೈಚಾರಿಕ ಬರವಣಿಗೆಗಳಿಂದಲೇ ಪ್ರಖ್ಯಾತರಾದ ಹೆಗಡೆ ಅವರು ಭೂಮಿ ಬಗ್ಗೆ ವಿವರಿಸುತ್ತಾ, ಈ ಹೇಳಿಕೆಯು ಯಾವುದೇ ಮಹಾ ವಿಜ್ಞಾನಿಯ ಹೇಳಿಕೆಯಾಗಿರದೆ, ಕಾಡಿನಲ್ಲಿ ವಾಸಿಸುತ್ತಿದ್ದ ಒಬ್ಬ ರೆಡ್ ಇಂಡಿಯನ್ ಜನಾಂಗದ ಮುಖ್ಯಸ್ಥ ಚೀಫ್‌ಸೀಟ್ಲ್ ಎಂಬಾತ ಹೇಳಿರುವ ಮಾತುಗಳಿವು ಎನ್ನುತ್ತಲೇ, ಇದರ ಸನ್ನಿವೇಶವನ್ನು ಗುರುತಿಸುತ್ತಾ ವಾಷಿಂಗ್‌ಟನ್ ಸರ್ಕಾರ ನಗರದ ಸರಹದ್ದಿನಲ್ಲಿದ್ದ ಆದಿವಾಸಿ ಜನರು ತಮ್ಮ ಭೂಮಿಯನ್ನು ನಗರ ವಿಸ್ತರಣೆಗಾಗಿ ಬಿಟ್ಟುಕೊಡಬೇಕೆಂದು ೧೮೫೪ರಲ್ಲಿ ಸರ್ಕಾರ ಕೇಳಿಕೊಂಡಾಗ ಈ ಮಹಾಶಯ ಬರೆದ ಸುದೀರ್ಘ ಪತ್ರದ ಒಕ್ಕಣೆಯಿದು ಎಂದು ಈ ವ್ಯಾಖ್ಯಾನವನ್ನು ದಾಖಲಿಸಿದ್ದಾರೆ. **"ಈ ಭೂಮಿ ಮಾನವನ ಪಿತ್ರಾರ್ಜಿತ ಆಸ್ತಿಯಲ್ಲ, ಇತರ ಅಸಂಖ್ಯ ಜೀವಿಗಳಂತೆ ಮಾನವ ಕೂಡ ಒಂದು ಜೀವಿ ಅಷ್ಟೇ. ಜೀವಿಗಳ ಈ ಸಂಕೀರ್ಣ ಜಾಲವನ್ನು ಮಾನವ ನೇಯ್ದದ್ದಲ್ಲ. ಆತ ಈ ಜಾಲದ ಒಂದು ಎಳೆ ಅಷ್ಟೇ. ಈ ಜಾಲಕ್ಕೆ ಮಾನವ ಏನೇ ವಿಪತ್ತು ತಂದರೂ ಆತ ತನಗೆ ತಾನೇ ವಿಪತ್ತು ತಂದುಕೊಂಡಂತೆ. ಈ ಭೂಮಿಗೆ ದುರ್ಗತಿ ಬಂತೆಂದರೆ ಮಾನವನಿಗೂ ಅದೇ ಗತಿ ಬಂತೆಂದೇ ಅರ್ಥ. ಇಲ್ಲಿ ಎಲ್ಲವೂ ಒಂದಕ್ಕೊಂದು ತಳುಕು ಹಾಕಿಕೊಂಡಿವೆ."** [೩೦]ಜೀವಗೋಲದಲ್ಲಿ ಜೀವವೈವಿಧ್ಯದ ಸಮತೋಲನದ ಮಹತ್ವವನ್ನು ಎತ್ತಿಹಿಡಿಯುವ ಸಾಲುಗಳಿವು.

ಇತ್ತೀಚೆಗೆ ಕರ್ನಾಟಕದ ಕೊಡಗು ಮತ್ತು ಕೇರಳ ರಾಜ್ಯದಲ್ಲಿ ಘಟಿಸಿದ ಪ್ರಕೃತಿ ವಿಕೋಪಗಳಿಗೂ, ಚೀಫ್‌ಸೀಟ್ಲ್ ಅವರ ವಿವರಣೆಗಳಿಗೂ ಸಹಸಂಬಂಧವನ್ನು ಗುರುತಿಸಬಹುದು. ಭೂಮಿಯ ದುರ್ಗತಿ ಮಾನವನ ದುರ್ಗತಿಗೆ ತಳುಕು ಹಾಕಿಕೊಂಡಿರುವುದನ್ನು ಪ್ರಾತ್ಯಕ್ಷಿಕೆಯಾಗಿ ಕಾಣುವಂತಾಗಿದ್ದು ಒಂದು ದುರಂತವೇ ಸರಿ. ಜಲಕಂಪನ ಹಾಗೂ ಭೂಕಂಪನಗಳು ಒಟ್ಟೊಟ್ಟಿಗೆ ಘಟಿಸಿ ಜನರ ಬದುಕು ಮೂರಾಬಟ್ಟೆಯಾಗಿ ಜೀವವೈವಿಧ್ಯದ ನೆಲೆಗಳೆಲ್ಲ ಕೊಚ್ಚಿ ಹೋದಮೇಲೆ ಈ ಭೂಮಿ ಕುರಿತು ಹಲವರಲ್ಲಿ ಪ್ರಶ್ನೆಗಳೆದ್ದಿವೆ. ಗುಡ್ಡ ಕುಸಿಯಲು ಕಾರಣವೇನು? ರಸ್ತೆಗಳೆಲ್ಲಾ ಏಕೆ ಬಿರುಕಿನಿಂದ ತಗ್ಗಿದವು? ಪ್ರವಾಹೋಪಾದಿಯಲ್ಲಿ ನೀರು ಏಕೆ ಹರಿಯಿತು? ಎಂಬಿತ್ಯಾದಿ ಪ್ರಶ್ನೆಗಳು ಸುಶಿಕ್ಷಿತರನ್ನು

ಮಾತ್ರವಲ್ಲದೆ ಜನಸಾಮಾನ್ಯರನ್ನು ಕಾಡುತ್ತಿವೆ. ಪ್ರಕೃತಿಯ ವಿಕೋಪಕ್ಕೆ ಕಾರಣ ಹುಡುಕುವ ಪ್ರಯತ್ನದಲ್ಲಿದ್ದಾರೆ ತಜ್ಞರು.

ಲೇಖನದ ಕೊನೆ ಭಾಗದಲ್ಲಿ ಹೆಗಡೆ ಅವರು ೧೯೮೭ ರಲ್ಲಿ ವಿಶ್ವ ಪರಿಸರ ದಿನಾಚರಣೆ ದಿನ ೧೪ನೇ ದಲಾಯಿ ಲಾಮಾ ಪೂಜ್ಯ ತೇನ್‌ಸಿನ್ ಗ್ಯಾತ್ಸೋ ನೀಡಿದ ಸಂದೇಶವನ್ನು ದಾಖಲಿಸಿದ್ದಾರೆ. ಅದೆಂದರೆ **"ಮಾನವನ ಅಜ್ಞಾನ, ಆಸೆಬುರುಕುತನ ಹಾಗೂ ಜೀವಿಗಳ ಬಗೆಗಿನ ಅಸಡ್ಡೆಯಿಂದಾಗಿಯೇ ನಿಸರ್ಗ ಧ್ವಂಸವಾಗುತ್ತಿದೆ. ಅಜ್ಞಾನವೊಂದರಿಂದಾಗಿಯೇ ಈ ಹಿಂದೆ ಮನುಷ್ಯ ಹಾಳುಗೆಡವಿದ್ದನ್ನೆಲ್ಲಾ ಕ್ಷಮಿಸಬಹುದು. ಆದರೆ ಇಂದು ನಮಗೆ ನಿಸರ್ಗ ಕುರಿತು ಹೇರಳ ಮಾಹಿತಿ ಸಿಗುತ್ತಿದೆ. ಪೂಜ್ಯರಿಂದ ಪಡೆದಿದ್ದೇನು, ನಮ್ಮಿಂದಾಗುತ್ತಿರುವ ತಪ್ಪುಗಳೇನು, ಮುಂದಿನವರಿಗೆ ಉಳಿಸಬೇಕಾದುದು ಏನು ಎಂಬ ಪ್ರಶ್ನೆಗಳಿಗೆ ಉತ್ತರ ಸಿಗಬೇಕಿದೆ. ಖಂಡಿತವಾಗಿಯೂ ನಮ್ಮದು ಪರ್ವಕಾಲದ ಪೀಳಿಗೆ. ವಿಜ್ಞಾನ ತಂತ್ರಜ್ಞಾನದಲ್ಲಿ ನಮ್ಮ ಸಾಧನೆ ಎಷ್ಟೇ ಇದ್ದರೂ ಅದಕ್ಕೆ ಸರಿಸಾಟಿಯಾಗಿ ನಮ್ಮ ವೈಫಲ್ಯಗಳು ಗುಡ್ಡದಷ್ಟಿವೆ. ಇತರ ಜೀವರಾಶಿಯನ್ನು ಹೊಸಕಿ ಹಾಕಿದ್ದೂ, ನಮ್ಮವರೇ ಹಸಿವಿನಿಂದ ಸಾವಪ್ಪುತ್ತಿರುವುದು ಈ ವೈಫಲ್ಯಗಳ ಧ್ಯೋತಕವಾಗಿವೆ. ನಮ್ಮ ಮೇಲಿಂದು ಅಪಾರ ಹೊಣೆ ಇದೆ. ಅದನ್ನು ನಿಭಾಯಿಸುವ ಸಾಮರ್ಥ್ಯವೂ ನಮಗಿದೆ. ಈಗಲಾದರೂ ಕಾರ್ಯಪ್ರವೃತ್ತರಾಗೋಣ, ಕಾಲ ಮಿಂಚಿಲ್ಲ."**[(೩೧)] ಎಂಬುದು.

ಮನುಷ್ಯನ ಅಜ್ಞಾನದಿಂದಾಗಿ ನಿಸರ್ಗ ಮತ್ತು ಜೀವಿಗಳು ನಶಿಸುತ್ತಿದ್ದು ಇದರಿಂದ ಮನುಷ್ಯನಿಗಾದ ನಷ್ಟವನ್ನು ಹಾಗೂ ಭವಿಷ್ಯದಲ್ಲಿನ ಜವಾಬ್ದಾರಿಗಳನ್ನು ಕುರಿತು ಎಚ್ಚರಿಸುವ ದಲಾಯಿ ಲಾಮಾ ಅವರ ಅರ್ಥಪೂರ್ಣ ವ್ಯಾಖ್ಯೆಗಳನ್ನು ಕೃತಿಯಲ್ಲಿ ತಂದಿದ್ದಾರೆ. ಪರಿಸರ ಕಾಳಜಿಯಿಂದ ವಿವೇಚಿಸುವ ದೃಷ್ಟಿಕೋನವೊಂದು ತೀವ್ರ ಒತ್ತಾಸೆಯಿಂದ ಕೃತಿಯಲ್ಲಿ ಪ್ರಕಟವಾಗಿರುವುದು ಅರಿವಾಗುತ್ತದೆ. **"ಮನುಷ್ಯ ಕೇಂದ್ರಿತ ಪ್ರಜ್ಞೆಯ ಅಹಂಕಾರವನ್ನು ಮೀರಿದಾಗಲೇ ಪ್ರಕೃತಿಯ ಭೌತಿಕ ಜಗತ್ತಿನಲ್ಲಿ ತಾನೊಬ್ಬನೇ ಕೇಂದ್ರವಲ್ಲವೆಂದೂ, ತನ್ನಿಂದಲೇ ಜಗತ್ತು ಎಂಬ ಮಿಥ್ಯ ಅಳಿದಾಗಲೇ ಈ ಲೋಕದಲ್ಲಿ ಜೀವಕಾರುಣ್ಯದ ಜೀವಸಂಚಾರ ಸಾಧ್ಯವಾಗುತ್ತದೆ."** ಎಂಬ ಸಾಲುಗಳು ಜೀವಿ ಪ್ರಜ್ಞೆಯ ಬಗ್ಗೆ ಉತ್ಕೃಷ್ಟ ಮಟ್ಟದ ಆಶಯವನ್ನು ಗ್ರಹಿಸಲು ನೆರವಾಗುತ್ತವೆ.

ಪ್ರಸ್ತುತ ಪ್ರಾಕೃತಿಕ ಪರಿಸರದ ಅನುಭೋಗಿಗಳಾಗಿರುವ ಸಂದರ್ಭಕ್ಕೆ ಕುರಿತು ಹೇಳುವುದಾದರೆ ಖಂಡಿತವಾಗಿಯೂ ನಮ್ಮದಂತು ಪರ್ವಕಾಲ. ಆದರೆ ಮುಂದಿನವರಿಗೆ ಉಳಿಸಬೇಕಾದುದು ಏನು? ಎಂಬ ಪ್ರಶ್ನೆಗೆ ಉತ್ತರ ಪಡೆಯುವ ಅಗತ್ಯತೆ ಹಿಂದೆಂದಿಗಿಂತೂ ಈಗ ಅನಿವಾರ್ಯವಾಗಿದೆ. ಎದುರಾಗುತ್ತಿರುವ ಪ್ರಕೃತಿ ವಿಕೋಪಗಳು ಮನುಷ್ಯನಲ್ಲಿ ಜೀವಭಯ ಮೂಡಿಸಿವೆ. ನಾನು ನನ್ನದೆಂಬ ಸ್ವಾರ್ಥವನ್ನು ಧಿಕ್ಕರಿಸಿ ಜೊತೆಗೆ ಗಳಿಸಿದ್ದೆಲ್ಲವನ್ನೂ ಬಿಟ್ಟು ಕೇವಲ ಜೀವ ರಕ್ಷಣೆಯ ಭಯದಿಂದಾಗಿ ಓಡುತ್ತಿದ್ದವರನ್ನು ಕೇರಳ ರಾಜ್ಯ ಮತ್ತು ಕರ್ನಾಟಕದ ಕೊಡಗಿನಲ್ಲಿ ನೋಡುವಂತಾಯಿತು. ಏನೇ ಆದರೂ ತಕ್ಷಣದ ದಿನಗಳ ಭೂಮಿಯ ಉಳಿವಿನ ಚಿಂತನೆಯಲ್ಲಿ ನಾವೆಲ್ಲರೂ ಈ ಪ್ರಶ್ನೆಗಳನ್ನು ಅಗತ್ಯವಾಗಿ ಬಿಡಿಸಿಕೊಳ್ಳಲೇಬೇಕು. ಅಭಿವೃದ್ಧಿಯ ನೆಪದಲ್ಲಿ ಯಂತ್ರನಾಗರೀಕತೆಯು ಹಸಿರು ಭೂಮಿಯಲ್ಲಿ ಉಂಟುಮಾಡಿದ ಪಲ್ಲಟಗಳ ಸ್ವರೂಪವೇನು? ಮಣ್ಣಿನ ಸವಕಳಿ ತಪ್ಪಿಸಲು ಆದಂತಹ ಪ್ರಯತ್ನಗಳಾವುವು? ಕಾಯ್ದಿಟ್ಟ ಸಂರಕ್ಷಿತ ಅರಣ್ಯ

ಪ್ರದೇಶವನ್ನು ಒತ್ತುವರಿ ಮಾಡದಂತೆ ಕೈಗೊಂಡ ಕ್ರಮಗಳು ಅನುಪಾಲನೆಯಲ್ಲಿವೆಯೇ? ಮೈದಾನ ಪ್ರದೇಶ ಮತ್ತು ಬಂಜರು ಭೂಮಿಯನ್ನು ಹಸಿರಾಗಿಸಲು ನಾವೇನು ಮಾಡಿದ್ದೇವೆ? ನಾಡಿನಾದ್ಯಂತ ಪ್ರಾದೇಶಿಕವಾರು ಅಸ್ಥಿತ್ವ ಹೊಂದಿರುವ ಜೀವವೈವಿಧ್ಯದ ಶ್ರೀಮಂತಿಕೆ ಕಾಪಾಡಿಕೊಳ್ಳಲು ಸ್ವಾಭಾವಿಕ ಭೌಗೋಳಿಕ ಪರಿಸರವನ್ನು ಹೇಗೆಲ್ಲಾ ಸಂಘಟಿಸಿದ್ದೇವೆ? ನಿಸರ್ಗಪರ ಇರುವ ನೀತಿನಿರೂಪಣೆಗಳೇನು? ಎಂಬಿತ್ಯಾದಿ ಚಿಂತನೆಗಳು ಭೂಮಿಯ ಉಳಿವಿನ ಮತ್ತು ನಾಡಿನ ಸಾಂಸ್ಕೃತಿಕ ಅಗತ್ಯತೆಯ ದೃಷ್ಟಿಯಿಂದ ಅನಿವಾರ್ಯ ಎನಿಸಿಕೊಳ್ಳುತ್ತದೆ. ಈ ಬಗ್ಗೆ ಕಾರ್ಯೋನ್ಮುಖರಾಗಲು ಜನಸಾಮಾನ್ಯರನ್ನು ತುರ್ತು ಅರಿವುಗೊಳಿಸಬೇಕಿದೆ. ಈ ಭೂಮಿಯು ಇನ್ನೆಂದಿಗೂ ಸಹಿಸಿಕೊಳ್ಳಲಾಗದಷ್ಟು ಆಕ್ರಮಣದ ಪರಿಮಿತಿಯನ್ನು ತಲುಪಿದೆ. ಮನುಷ್ಯನ ವಿವೇಕರಹಿತ ಅಭಿವೃದ್ಧಿ ಚಟುವಟಿಕೆಗಳಿಂದಾದ ಅವಮಾನಗಳಿಗೆ ಪ್ರತಿರೋಧವೆಂಬಂತೆ ಪ್ರಕೃತಿ ಸೇಡು ತೀರಿಸಿಕೊಂಡಿದ್ದನ್ನು ಕಣ್ಣಾರೆ ಕಂಡಿದ್ದೇವೆ.

ಒಂದು ಪ್ರಕೃತಿಯ ತಾಣ ನಾಶವಾಯಿತೆಂದರೆ ಒಂದು ನಾಗರೀಕತೆ, ಜೀವನ ವಿಧಾನ, ಕನಸು, ಕಲ್ಪನೆ ನಾಶವಾದಂತೆ. ಪ್ರಕೃತಿಯೊಂದಿಗೆ ಬೆಸೆದುಕೊಂಡಿದ್ದ ಅದೆಷ್ಟೋ ಜೀವವೈವಿಧ್ಯಗಳನ್ನು, ನಿಸರ್ಗ ನಂಟಿನಲ್ಲಿದ್ದ ಅದೆಷ್ಟೋ ಸಾವಯವ ಬಂಧಗಳನ್ನು ನಾವೀಗ ಕಳಚಿಕೊಂಡಿದ್ದೇವೆ. ಸರಿಪಡಿಸಲಾಗದ ಅವಸ್ಥೆ ತಲುಪಿದ್ದೇವೆ. ಜೀವಿಗಳಿಂದ ತುಂಬಿ ತುಳುಕುವ ಗ್ರಹವೆಂದರೆ ಈ ಭೂಮಿ ಮಾತ್ರ. ಜೀವಿಗಳಿಂದಲೇ ಈ ಭೂಮಿಗೊಂದು ಅರ್ಥ. ಪ್ರಾಣಾಪಾಯಕ್ಕೆ ಒಳಗಾದ ಮನುಷ್ಯರನ್ನು ಮಾತ್ರ ಉಳಿಸಿಕೊಳ್ಳುವ ಮಾನವೀಯ ಜವಾಬ್ದಾರಿಯ ನಡುವೆ ಅದೆಷ್ಟೋ ಜೀವಿಗಳು ಕಣ್ಣೆದುರೇ ನೀರಲ್ಲಿ ಕೊಚ್ಚಿಹೋಗುತ್ತಿದ್ದವು. ಮಣ್ಣಲ್ಲಿ ಸಿಲುಕಿ ಅವಶೇಷಗಳಾದವು. ಅವುಗಳ ಅರಣ್ಯರೋಧನ ಮನಮಿಡಿಯುವಂತದ್ದು. ನಾಯಿಗೂ ಗೋವಿಗೂ ಹಾವಿಗೂ ಆನೆಗೂ ಮಂಗಗಳಿಗೂ ಪಕ್ಷಿ ಸಂಕುಲಕ್ಕೂ ಬದುಕುವಾಸೆ. ಅವುಗಳಿಗೆ ನಾವಾರು ಆಸರೆಯಾಗಿ ನಿಲ್ಲಲಾಗಲಿಲ್ಲ. ಎಲ್ಲವೂ ಕೈ ಮೀರಿತ್ತು. ಪರಿಸರ ಮಾನವನಿಗಷ್ಟೇ ಅಲ್ಲ, ಜೀವಿಗಳ ಬದುಕಿನ ಬಹುಮುಖ್ಯ ಅಗತ್ಯತೆಗಳಲ್ಲೊಂದಾಗಿದೆ. ಇಂತದೊಂದು ನಿಸರ್ಗ ನಮ್ಮೆಲ್ಲರ ಬದುಕಿನ ಭಾಗವೂ ಆಗಿದ್ದು ಇದರ ರಕ್ಷಣೆ ಎಲ್ಲರ ಋಣಭಾರವೂ ಹೌದು. ಈ ಹಿನ್ನೆಲೆಯಲ್ಲಿ ನಾಗೇಶ ಹೆಗಡೆ ಅವರ 'ಇರುವುದೊಂದೇ ಭೂಮಿ' ಕೃತಿಯ ಕಲ್ಪನೆಯು ಪ್ರಸ್ತುತ ಸನ್ನಿವೇಶದಲ್ಲಿ ಮಹತ್ವಪೂರ್ಣ ಎನಿಸಿಕೊಳ್ಳುವುದು. ನಾಗೇಶ ಹೆಗಡೆ ಅವರು ವಿವರಿಸಿರುವ ಜಗದ ಜೀವಸಂಕುಲದ ಅಸಂಖ್ಯಾತ ಸಮಸ್ಯೆಗಳು ದಿನೇ ದಿನೇ ಬಿಗಡಾಯಿಸುತ್ತಾ ಹೋಗುತ್ತಿರುವುದನ್ನು ಕೃತಿಗಳಲ್ಲಿ ನಾವು ಗಮನಿಸಬಹುದಾಗಿದೆ. ಭೂಮಿಯ ರಕ್ಷಣೆಯ ಜವಾಬ್ದಾರಿಯು ಮನುಷ್ಯನ ಮೇಲೆ ಎಂಥ ಅಗಾಧವಾದ ತಿಳುವಳಿಕೆಗೆ ದಾರಿ ಮಾಡಿ ಕೊಡಬೇಕಾಗಿದೆ ಎನ್ನುವುದನ್ನು ಈ ಕೃತಿಯು ಸರಳ ಆದರೆ ಪರಿಣಾಮಕಾರಿ ಶೈಲಿಯಲ್ಲಿ ಹೇಳುತ್ತದೆ ಎಂದಿದ್ದಾರೆ[(೩೨)] ವಿಶ್ರಾಂತ ಕುಲಪತಿಗಳಾದ ಬೆಂಗಳೂರು ವಿಶ್ವವಿದ್ಯಾನಿಲಯದ ಡಾ. ಎಂ.ಎಸ್.ತಿಮ್ಮಪ್ಪ ಅವರು.

'ಮಲೆನಾಡಿನ ಹಣ್ಣಡಿಕೆ ಚೇಳು, ಬ್ರಿಟನ್‌ನ ನೀಲಿ ಪಾತರಗಿತ್ತಿ ಎಲ್ಲಿ ಹೋದವು?' ಇದೊಂದು ಲೇಖನದ ಶೀರ್ಷಿಕೆ. ಈ ಪಶ್ನೆಯೊಂದಿಗೆ ಚರ್ಚೆಯನ್ನು ಆರಂಭಿಸುವ ಲೇಖಕರು, ಬಾಲ್ಯದ ಮಲೆನಾಡಿನ ಮಳೆಗಾಲದ ರೋಮಾಂಚಕ ಅನುಭವವನ್ನು ನೆನಪಿಸಿಕೊಳ್ಳುತ್ತಾರೆ.

ಕಗ್ಗತ್ತಲಲ್ಲಿ ನೂರೊಂದು ಕ್ರಿಮಿಕೀಟಗಳು ನೂರೊಂದು ಬಗೆಯ ಸಂಗೀತ ಹೊಮ್ಮಿಸುತ್ತಿದ್ದುದ್ದನ್ನು ಕುರಿತು ಸ್ಮರಿಸುತ್ತಾರೆ. "ದೀಪದ ಬುಡ್ಡಿಯ ಮಂದ ಬೆಳಕಿನಲ್ಲಿ ನಾವು ರಾತ್ರಿ ಊಟಕ್ಕೆ ಕೂರುತ್ತಿದ್ದೆವು. ಪಂಕ್ತಿಯ ಕೊನೆಯಲ್ಲಿ ಕುಳಿತಿದ್ದ ನನ್ನ ತಮ್ಮ ಕೀಟಾರನೇ ಚೀರುತ್ತ ಕುಪ್ಪಳಿಸಿ ಓಡಿಬಂದು, ಅಮ್ಮನ ಸೆರಗಿನೊಳಗೆ ಅಡಗಿ ಗಡಗಡನೆ ನಡುಗುತ್ತಿದ್ದ. ಗೇಣುದ್ದದ ಒಂದು ಬಗೆಯ ಚೇಳು ಬಾಳೆ ಎಲೆ ಕಡೆ ತಲೆ ಅಲ್ಲಾಡಿಸುತ್ತಾ ಎಲೆಯಿಂದ ಎಲೆಯ ಕಡೆಗೆ ಬರುತ್ತಿತ್ತು. ನೋಡಲು ಆ ಚೇಳು ರುದ್ರ ಭಯಂಕರ. ಅಸಂಖ್ಯಾತ ಕಾಲುಗಳು. ಬೆನ್ನ ಮೇಲೆ ಹುಣಸೆ ಬೀಜದ ಗಾತ್ರದ ಕೆಂಪು–ಕಪ್ಪು ಚುಕ್ಕೆಗಳು. ಕೇಸರಿ ಬಣ್ಣದ ಎರಡು ಬಲಿಷ್ಠ ಕೊಂಬುಗಳ ಮೂತಿ. ನಮ್ಮೂರಲ್ಲಿ ಇದಕ್ಕೆ 'ಹಣ್ಣಡಿಕೆ ಚೇಳು' ಎಂದೇ ಹೆಸರಿತ್ತು. ಅದಕ್ಕೆ ಹೊಡೆಯಬಾರದು, ಅದು ಕಾಳಿ ಮಾತೆಯ ಕೊರಳ ಆಭರಣ ಎಂಬ ನಂಬಿಕೆಯೂ ಮನೆಯವರಲ್ಲಿತ್ತು" ಎಂದು ಹೇಳುತ್ತಾ, ಒಂದೊಂದು ದಿನ 'ಕಾಯ್ ಅಡಿಕೆ ಚೇಳು' ಬರುತ್ತಿತ್ತು. ಇದರ ಬೆನ್ನಮೇಲೆ ಕೆಂಪು – ಕಪ್ಪು ಅಡ್ಡಪಟ್ಟೆಯ ಬದಲಿಗೆ, ಹಸಿರು–ಕಪ್ಪು ಪಟ್ಟೆ ಇರುತ್ತಿತ್ತು. ಉಳಿದೆಲ್ಲಾ ಒಂದೇ ರೀತಿ ಎಂದು ವಿವರಿಸುವಾಗ ಮತ್ತು ಕ್ರಿಮಿಕೀಟಗಳನ್ನು ವೀಕ್ಷಿಸಿ, ಅವುಗಳ ಚಹರೆ ಮತ್ತು ಲಕ್ಷಣಗಳನ್ನು ಅವಲೋಕಿಸುವಾಗ ಹೆಗಡೆಯವರ ಆಸಕ್ತಿಗೆ ನಿಲುಕಿದ ಜೀವಿಕೇಂದ್ರಿತ ಅಂಶಗಳು ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗುತ್ತವೆ. ಎಲ್ಲಕ್ಕಿಂತ ಈ ಉದಾರಣೆಯೊಂದಿಗೆ ಜೀವಜಗತ್ತಿನಲ್ಲಿನ ಬೆಸುಗೆಯನ್ನು ಅರ್ಥಪೂರ್ಣವಾಗಿ ಮನದಟ್ಟು ಮಾಡುವುದನ್ನು ಈ ಲೇಖನದ ಭಾಗದಲ್ಲಿ ನಾವು ಕಾಣಬಹುದು.

ಜೀವಜಗತ್ತಿನಲ್ಲಿ ಅಸಂಖ್ಯಾತ ಕೊಂಡಿಗಳಿರುತ್ತವೆ. ಜೀವ–ಜೀವಗಳ ಮಧ್ಯೆ ಎಂಥೆಂಥವೋ ಸಂಬಂಧಗಳು, ಇಂದು ನಾವು ನಮಗರಿವಿಲ್ಲದೆಯೇ ಒಂದು ನಿಕೃಷ್ಟ ಪ್ರಾಣಿಯನ್ನು ಕೊಲ್ಲಬಹುದು. (ಅರಿವಿದ್ದೂ ಕೊಲ್ಲುತ್ತೇವೆ–ಆ ಮಾತು ಬೇರೆ) ಆದರೆ ಈ ಪ್ರಾಣಿಯನ್ನೇ ಅವಲಂಬಿಸಿ ಜೀವಿಸುತ್ತಿದ್ದ ಇತರ ಜೀವಿಗಳನ್ನೂ ನಾವು ನಿರಾಶ್ರಿತರನ್ನಾಗಿ ಮಾಡಿ, ಪರೋಕ್ಷ ಹತ್ಯೆ ಮಾಡುತ್ತೇವೆಂಬ ಅರಿವು ನಮಗಿರುವುದಿಲ್ಲ. "ಇದೇನೂ ಹೊಸತಲ್ಲ ಬಿಡಿ, ನಮಗಿದೆಲ್ಲಾ ಮೊದಲೇ ಗೊತ್ತು" ಎಂದು ಜೀವ ವಿಜ್ಞಾನಿಗಳು ಬೀಗುತ್ತಿದ್ದ ಕಾಲವೊಂದಿತ್ತು. ಆದರೆ ಈಗೀಗ ಪರಿಸರದ ಮೇಲೆ ಮಾನವನ ಒತ್ತಡ ಹೆಚ್ಚಿದಂತೆಲ್ಲಾ ಈ ಜೀವಜಾಲದ ಅನೇಕ ಅಗೋಚರ ಕೊಂಡಿಗಳು ತುಂಡಾಗುತ್ತಿರುವುದು ವಿಜ್ಞಾನಿಗಳಿಗೆ ವಿಸ್ಮಯವಾಗಿ ತೋರುತ್ತಿದೆ. ನಿಸರ್ಗದ ಜೀವ–ಜಾಲವನ್ನು ನಾವು ಹಿಗ್ಗಾಮುಗ್ಗಾ ಎಳೆದಾಡಿದಷ್ಟೂ ಹೊಸ ಹೊಸ ವಿಪತ್ತುಗಳು ತಲೆಯೆತ್ತುವುದು ಸ್ಪಷ್ಟವಾಗುತ್ತಿದೆ. ಪ್ರಾಣಿ–ಪಕ್ಷಿಗಳಷ್ಟೇ ಅಲ್ಲ ಪ್ರಾಣಿ ಸಸ್ಯಗಳ ಮಧ್ಯೆಯೂ ಇಂಥ ಗಾಢ ಗೆಳೆತನವಿರುವುದು ಪತ್ತೆಯಾಗಿದೆ. ಉತ್ತರ ಅಮೆರಿಕದಲ್ಲಿ ಒಂದು ಬಗೆಯ ಕತ್ತಾಳೆ (ಕಲ್ಲು ಪರಂಗಿ) ಗಿಡಗಳಲ್ಲಿ ಕೊಳವೆಯಾಕಾರದ ಉದ್ದುದ್ದ ಹೂ ಬಿಡುತ್ತದೆ. ಇದರ ಮಕರಂದ ಹೀರಲೆಂದು ಚಿಕ್ಕಪುಟ್ಟ ಕೀಟಗಳು ಹೋದರೆ ಸಿಕ್ಕಿ ಹಾಕಿಕೊಳ್ಳುತ್ತವೆ. ಆದರೆ ವಿಶಿಷ್ಟ ಜಾತಿಯ ಉದ್ದ ಮೂತಿಯ ಬಾವಲಿಗಳು ಮಾತ್ರ ಈ ಹೂವಿನೊಳಕ್ಕೆ ನಾಲಗೆ ತೂರಿಸಿ ರಸ ಹೀರುತ್ತದೆ. ಬಾವಲಿಗಳು ಕತ್ತಾಳೆ ಹೂವಿನ ರಸ ಬಿಟ್ಟರೆ ಮತ್ತೇನನ್ನೂ ಆಸ್ವಾದಿಸುವುದಿಲ್ಲ. ಕತ್ತಾಳೆಯೂ ಅಷ್ಟೇ. ಬಾವಲಿಯನ್ನು ಬಿಟ್ಟರೆ ಮತ್ತಾರನ್ನೂ ಸಮೀಪ ಬರಗೊಡುವುದಿಲ್ಲ ಎಂಬ ವಿವರಗಳು ಪರಿಸರದಲ್ಲಿ ಸಹಜವಾಗಿರುವ ಜೀವಿಗಳ ಸಾವಯವ ಬಂಧದ ನಂಟನ್ನು ಅನಾವರಣಗೊಳಿಸಿವೆ.

ಈ ಜೀವಜಾಲ ವಿಜ್ಞಾನ (ಇಕಾಲಜಿ) ಕುರಿತು ಪಾಠ ಪ್ರವಚನಗಳು ಆರಂಭವಾಗಿ ದಶಕಗಳೇ ಸಂದರೂ ನಾವಿನ್ನೂ ಬ್ರಿಟನ್-ಅಮೆರಿಕಗಳ ಉದಾಹರಣೆಗಳನ್ನೇ ಲೇಖನಗಳಿಗಾಗಿ ಅವಲಂಬಿಸಬೇಕಾದುದು ದುರ್ದೈವ. ನಾವಿನ್ನೂ ನಮ್ಮ ಪರಿಸರದ ಮೊದಲ ಪದರವನ್ನೇ ಶೋಧ ಮಾಡಿ ಮುಗಿಸಿಲ್ಲ. ಯಾರೋ ಹುಲಿಯನ್ನು ಕೊಂದರೆ ಅದು ಅಪರಾಧವೆಂದು ವನ್ಯಜೀವಿ ಪ್ರಿಯರು ದನಿಯೆತ್ತುತ್ತಾರೆ. ಆನೆಗಳನ್ನು ಸಾಯಿಸಿ, ದಂತ ಕಿತ್ತರೆ, ಅರಣ್ಯ ರಕ್ಷಕರು ಬೇಟೆಗಾರರ ಬೇಟೆಯಾಡಲು ಅಣಿಯಾಗುತ್ತಾರೆ ಅಷ್ಟೇ. ನಮ್ಮಲ್ಲಿರುವ ಜೀವಕೋಟಿಗಳ ಸೂಕ್ಷ್ಮ ಸಂಬಂಧವನ್ನು ಅಧ್ಯಯನ ಮಾಡುವಲ್ಲಿ ಮುಂದಾದವರು ತೀರ ವಿರಳ.[೩೩] ಕರ್ನಾಟಕದ ಪಶ್ಚಿಮಘಟ್ಟಗಳಲ್ಲಿ ಕಂಡುಬರುವ ಸಸ್ಯ, ಪ್ರಾಣಿ, ಪಕ್ಷಿಗಳೆಲ್ಲವೂ ತಮ್ಮ ವೈವಿಧ್ಯತೆ, ಲಭ್ಯತೆ, ಸ್ವರೂಪ ಹಾಗೂ ಗುಣಲಕ್ಷಣಗಳೊಂದಿಗೆ ಹೆಗಡೆ ಅವರ ಲೇಖನದಲ್ಲಿ ವಿವರಣೆ ಸಹಿತ ಕಾಣಿಸಿಕೊಳ್ಳುತ್ತವೆ. ಬಾವಲಿ ಮತ್ತು ಕತ್ತಾಳೆ ಹೂವಿನ ರಸದ ಗಾಢ ಸಂಬಂಧವನ್ನು ವಿವರಿಸುವಾಗ ಪರಿಸರದ ಮೇಲಿನ ಮಾನವನ ಒತ್ತಡವು ಅನೇಕ ಅಗೋಚರ ಕೊಂಡಿಗಳನ್ನು ನಿರ್ದಾಕ್ಷಿಣ್ಯವಾಗಿ ನಾಶಗೊಳಿಸುತ್ತಿದ್ದು ಜೀವಜಾಲದ ಸೂಕ್ಷ್ಮ ಸಂಬಂಧವನ್ನು ಜಾಳು ಜಾಳು ಮಾಡುತ್ತಿದೆ ಎನ್ನುವ ಮೂಲಕ ಮನುಷ್ಯನ ಅವಿವೇಕಿತನವನ್ನು ಚಿತ್ರಿಸುತ್ತಾರೆ.

'ಶರಾವತಿ ಟೇಲ್‌ರೇಸ್' ಲೇಖನವು ಅಣೆಕಟ್ಟು ನಿರ್ಮಾಣದ ಪೂರ್ವಾಪರಗಳನ್ನು ನಿರೂಪಿಸುವಂತದ್ದು. ವಸತಿಪ್ರದೇಶದ ಜನಸಮುದಾಯವು ನಿಸರ್ಗದ ಆಕ್ರಮಣಕಾರಿ ಚಟುವಟಿಕೆಗಳನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಮೊಕದಮ್ಮೆ ಹೂಡಿದ್ದ ಘಟನೆ ಚರಿತ್ರಾರ್ಹವಾದ ಘಟನೆಯಾಗಿದೆ. ಶರಾವತಿ ಭಾಗವು ಜೀವವೈವಿಧ್ಯದ ಸಮೃದ್ಧತೆಯನ್ನು ಪ್ರತಿನಿಧಿಸುವ ತಾಣವಾಗಿದ್ದು, ಹೆಗಡೆ ಅದನ್ನು ಹೀಗೆ ವಿವರಿಸಿದ್ದಾರೆ. "ಜಗತ್ತಿನಲ್ಲಿ ನಿರ್ಜನ ಗೊಂಡಾರಣ್ಯ ಉಳಿದಿರುವುದೇ ತುಂಬ ಅಪರೂಪ. ಇಡೀ ಭೂಮಿಯ ಶೇಕಡಾ ೬ರಷ್ಟು ಭಾಗದಲ್ಲಿ ಮಾತ್ರ ಉಷ್ಣವಲಯದ ಸದಾ ಹರಿಸಿನ ಮಳೆಕಾಡುಗಳು ಉಳಿದಿವೆ. ಜಗತ್ತಿನ ಜೀವಲೋಕದ ಶೇಕಡಾ ೫೦ರಷ್ಟು ಜೀವಿಗಳು ಈ ಮಳೆಕಾಡುಗಳಲ್ಲೇ ವಾಸಿಸುತ್ತಿವೆ. ನಮ್ಮ ಗ್ರಹಿಕೆಗೆ ಬಾರದ ಎಷ್ಟೋ ಲಕ್ಷಾಂತರ ಜೀವಿಗಳು .ಅಮೋಘ ಜೀವ ರಸಾಯನವನ್ನು ಇಲ್ಲಿ ಉತ್ಪಾದಿಸುತ್ತಿವೆ. ನಮ್ಮ ಔಷಧಿಗಳು, ಕೃಷಿಗೆ ಅಪರೂಪದ ಸಂಕರ ತಳಿಗಳು, ಔದ್ಯಮಿಕ ರಸಾಯನದ ಸೂತ್ರಗಳು ಇಲ್ಲಿ ಅಡಗಿವೆ. ಈ ಮಳೆ ಕಾಡುಗಳ ಒಂದು ವೈಶಿಷ್ಟ್ಯ ಏನೆಂದರೆ ಇಲ್ಲಿ ಕಾಣಬರುವ ಸೂಕ್ಷ್ಮ ಜೀವಿ ಸಂಕುಲಗಳು ಇಲ್ಲಿಂದ ೧೦ ಕಿಲೋ ಮೀಟರ್ ಆಚೆಗೆ (ಜಗತ್ತಿನ ಬೇರೆಲ್ಲೂ) ಕಾಣಲಿಕ್ಕಿಲ್ಲ, ಇಲ್ಲಿನ ವಿಶಿಷ್ಟ ಪರಿಸರಲ್ಲೇ ಅನೇಕ ಸಹಸ್ರ ವರ್ಷಗಳ ಅವಧಿಯಲ್ಲಿ ನಿಧಾನವಾಗಿ ವಿಕಾಸಗೊಂಡಿವೆ. ಅಣೆಕಟ್ಟು ಯೋಜನೆ ಕೈಗೊಂಡರೆ ಏಕ್‌ದಮ್ ಅವಸಾನಗೊಳ್ಳುತ್ತವೆ" ಎಂದಿದ್ದಾರೆ. ಹಾಗೆಯೇ ಶರಾವತಿ ಕಣಿವೆಯ ಜೀವಿಗಳು ಕೇರಳದ ಮೌನ ಕಣಿವೆಗಿಂತ ಸಮೃದ್ಧವಾಗಿವೆ ಎಂಬುದಕ್ಕೆ ಉದಾಹರಣೆಗೆ ಕುಮಟಾ ಕಾಲೇಜಿನ ಬಾಟ್ನಿ ಉಪನ್ಯಾಸಕ ಸುಭಾಷ್ ಎಂಬುವವರು ನಡೆಸಿದ ಚಿಕ್ಕ ಸಮೀಕ್ಷೆ ಪ್ರಕಾರ ಕೇರಳ-ಮಹಾರಾಷ್ಟ್ರಗಳ ಅರಣ್ಯ ಸಸ್ಯಗಳ ವಿಭಿನ್ನ ಸಂಕರ ತಳಿಗಳು ಶರಾವತಿ ಕಣಿವೆಯಲ್ಲಿ ವಿಕಾಸಗೊಂಡಿವೆ. ಇವುಗಳ ಬಗ್ಗೆ ಶೋಧಿಸುವ ಮೊದಲೇ ಕ್ಷೇತ್ರವನ್ನು ಮುಳುಗಿಸಬಹುದೇ? ಎಂಬ ನ್ಯಾಯಾಲಯದ ಮರುಪ್ರಶ್ನೆಯೂ ಜೀವಜಂತುಗಳ ಅಳಿವು ಉಳಿವಿನ ಜೊತೆಗೆ ಈ ಭೂಮಿಯ ಬೆಸುಗೆಯಲ್ಲಿ ಅವುಗಳ ಮಹತ್ವ ಏನೆಂಬುದನ್ನು ವ್ಯಕ್ತಪಡಿಸುತ್ತದೆ.

ಇದೇ ಲೇಖನದಲ್ಲಿ ಮಳೆಕಾಡುಗಳ ವರದಿಯೊಂದನ್ನು ಹೆಗಡೆ ನೀಡಿದ್ದಾರೆ. ಅಪರೂಪದ ಮಳೆ ಕಾಡುಗಳು ಜಗತ್ತಿನಾದ್ಯಂತ ಅತೀ ಶೀಘ್ರವಾಗಿ ಕಣ್ಮರೆ ಆಗುತ್ತಿವೆ. ವಿಶ್ವಸಂಸ್ಥೆಯ (ಎಫ್‌ಎಓ) ವರದಿಯ ಪ್ರಕಾರ ಪ್ರತಿವರ್ಷ ಜಗತ್ತಿನ ೭೫ ಲಕ್ಷ ಹೆಕ್ಟೇರೂ ಮಳೆಕಾಡು ನಾಶವಾಗುತ್ತಿದೆ. ಗಂಭೀರ ಅರ್ಥಗ್ರಹಿಕೆಗೆ ನಾಗೇಶ ಹೆಗಡೆಯವರು ನೀಡುವ ಒಂದು ಹೇಳಿಕೆಯೆಂದರೆ, ಈ ಮೇಲಿನ ವಾಕ್ಯ ಓದಿಮುಗಿಸುವ ವೇಳೆಯಲ್ಲಿ ೩೦ ಎಕರೆ ಬಟಾಬಯಲಾಗಿರುತ್ತದೆ ಎಂಬುದು. ಇನ್ನೂ ೧೫ ವರ್ಷಗಳಲ್ಲಿ ಭೂಮಿಯ ಮೇಲಿನ ಶೇಕಡ ೨೫ರಷ್ಟು ಜೀವಿಗಳು ನಿರ್ನಾಮ ಹೊಂದಿರುತ್ತವೆ. ಪ್ರತಿ ದಿನವು ಕನಿಷ್ಠಪಕ್ಷ ಒಂದು ವನ್ಯಜೀವಿ ಅಂದರೆ ಕೀಟ–ಸಸ್ಯ–ಸಸ್ತನಿಗಳು ಶಾಶ್ವತವಾಗಿ ಕಣ್ಮರೆಯಾಗುತ್ತಿವೆ. ಅದ್ಭುತ ಜೀವಿ ಭಂಡಾರಗಳ ಆಗರವಾಗಿರುವ ಈ ಮಳೆಕಾಡುಗಳ ರಕ್ಷಣೆಗೆ ದೇಶ–ಪ್ರಾಂತ್ಯಗಳ ಸಂಕುಚಿತ ಮನೋಭಾವಬಿಟ್ಟು ವಿಶ್ವಮಾನವತೆಯಿಂದ ಹೋರಾಡುವ ದೀಕ್ಷೆ ಅಗತ್ಯವಿದೆ ಎಂದಿದ್ದಾರೆ. 'ವಿಶ್ವ ವನ್ಯಜೀವಿ ನಿಧಿ' ಹಾಗೂ 'ಫ್ರೆಂಡ್ಸ್ ಆಫ್ ದಿ ಅರ್ಥ್' ನೆರವಿನಿಂದ ನಡೆಯುತ್ತಿರುವ ವಿಶ್ವ ಮಳೆಕಾಡುಗಳ ರಕ್ಷಣಾ ಜಾಲದ (Rainforest Nest Work) ಕೆಲಸವನ್ನು ಪ್ರಸ್ತಾಪಿಸುತ್ತಾ ಇಂತಹ ಕಾರ್ಯಗಳ ಅಗತ್ಯತೆಯನ್ನು ಶ್ಲಾಘನೆಯೊಂದಿಗೆ ಓದುಗರಿಗೆ ನೆನಪಿಸುತ್ತಾರೆ.

ಶರಾವತಿ ಟೇಲ್‌ರೇಸ್ ಎಂಬುದು ನಾಡಿನ ಪ್ರಸಿದ್ಧ ಪ್ರಕರಣವೂ ಹೌದು. ಜೀವವೈವಿಧ್ಯದ ಮಹತ್ವವನ್ನು ಕುರಿತು ನ್ಯಾಯಾಲಯವು ಕೆ.ಪಿ.ಸಿ.ಗೆ ಮರು ಪ್ರಶ್ನಿಸಿದ್ದರ ದೃಷ್ಟಿಯಿಂದಲೂ ಇದು ಮಹತ್ವ ಹೊಂದುವ ಪ್ರಕರಣವಾಗಿದೆ. ಈ ಪ್ರಕರಣದ ಆಯ್ದ ಪ್ರಮುಖ ಭಾಗಗಳನ್ನಷ್ಟೇ ಇಲ್ಲಿ ದಾಖಲಿಸಿದೆ. ಶರಾವತಿ ಟೇಲ್‌ರೇಸ್ ಅಣೆಕಟ್ಟು ಯೋಜನೆ ಕುರಿತಂತೆ ಜನರಿಂದ ಬಂದ ಅಹವಾಲನ್ನು ನ್ಯಾಯಾಲಯದ ಕಟ್ಟೆಗೆ ವಹಿಸಲಾಯಿತು. ಈ ಸಂದರ್ಭದಲ್ಲಿ ನ್ಯಾಯಾಲಯದ ಕಟ್ಟೆಗೆ ತಂದಿಟ್ಟ ಅಣೆಕಟ್ಟು ಯೋಜನೆಯ ರೂಪುರೇಷೆಯನ್ನು ನೋಡುವುದಕ್ಕಾಗಿ ಶರಾವತಿ ಕಣಿವೆಗೆ ಪರಿಶೀಲಕರು ಇಳಿದರೆ ಏನೆಲ್ಲಾ ಗೋಚರಿಸುತ್ತವೆ ಎಂಬುದರ ಬಗ್ಗೆ ರಮ್ಯ ಭಯಂಕರ ನಿಸರ್ಗವನ್ನು ಹೆಗಡೆ ಹೀಗೆ ವರ್ಣಿಸಿದ್ದಾರೆ. **"ಸದಾ ಕತ್ತಲು ಆವರಿಸಿರುವ ಅಲ್ಲಿನ ಕಗ್ಗಾಡಿನಲ್ಲಿ ಓಡಾಡಿದರೆ ಪ್ರಾಪಂಚಿಕ ಪ್ರಜ್ಞೆಯೆಲ್ಲ ಮೂಲೆಗುಂಪಾಗುತ್ತದೆ. ಅದೊಂದು ರಮ್ಯ ಭಯಂಕರ ನಿಸರ್ಗ. ಅಲ್ಲಿನ ಗಾಢ ಗಂಭೀರ ಮೌನವನ್ನು ಸೀಳುತ್ತಾ, ಕಿಚಿಪಿಚಿ ಕೀಚಲು ಕೀಟ ಪತಂಗಗಳು ಹಾಜರಿ ಹೇಳುತ್ತಿರುತ್ತವೆ. ಆಗೊಮ್ಮೆ ಈಗೊಮ್ಮೆ ಕೆಂಬೂತಾದ ದೋಸೆ ಹುಯ್ಯುವ ಸದ್ದು, ಮರ ಕುಟಿಕಗಳ ಬುಡಬುಡಿಕೆ, ಮಳೆ ಜಿರಲೆಯ ಗಿಟಾರ್ ಕಿವಿ ಗಡಚಿಕ್ಕಿಸುತ್ತವೆ. ಮತ್ತೆ ಮೌನ. ಬೆಳಕಿನ ಪೂರಕೆಯಂತೆ ಅಲ್ಲಲ್ಲಿ ಮೇಲ್ಛಾವಣಿಯಿಂದ ಸೂಸಿ ಬರುವ ಸೂರ್ಯರಶ್ಮಿಯನ್ನು ಕತ್ತರಿಸಿ ನಗೆಯುವ ಸಿಂಗಳೀಕ; ಹೆಡೆ ಬಿಚ್ಚಿ ಹಾವಿನಂತೆ ಅಣಕಿಸಿ ನಗುವ ಆರ್ಕಿಡ್ ಹೂವು; ಕೊಡೆ ಬಿಚ್ಚನಿಂತು ನೂರೊಂದು ಬಗೆಯ ಅಕಶೇರುಗಳಿಗೆ ಆಹಾರ, ಆಶ್ರಯ ನೀಡುವ ಅಣಬೆಗಳು; ರೆಕ್ಕೆಯಂತೆ ಬಿಚ್ಚಿ ತನ್ನ ತುಪ್ಪಳದ ಕೋಟನ್ನೇ ಗ್ಲೈಡರ್ ಮಾಡಿ ತೇಲಿ ಸಾಗುವ ಹಾರುಬೆಕ್ಕುಗಳು. ಅಂತೂ ಅಂಗುಲಂಗುಲಕ್ಕೂ ಜೀವ ಧುಮುಧುಮಿಸುವ ಲೋಕ; ಸೂಕ್ಷ್ಮದರ್ಶಕ, ದೂರದರ್ಶಕ, ಸಹಸ್ರಾಕ್ಷ, ಸಹಸ್ರ ಕರ್ಣಗಳ ಅಳವಿಗೂ ಸಿಗದಷ್ಟು ಜೀವಿಜಾಲದ ಮಜಲು, ಲಕ್ಷಾಂತರ ವರ್ಷಗಳಿಂದ ಲಕ್ಷಾಂತರ ಜೀವಿಗಳಿಗೆ ವಿಕಾಸದ ತೊಟ್ಟಿಲು."** ಎಂದು. ಹೆಗಡೆ ಅವರು ಪಶ್ಚಿಮಘಟ್ಟದ ಜೀವಜಾಲದ ಪ್ರಪಂಚವನ್ನು ಸೂಕ್ಷ್ಮವಾಗಿ ಅವಲೋಕಿಸಿರುವುದು ಅವರ ಜೀವಿ ಪ್ರಜ್ಞೆಯ ವಿಸ್ತಾರತೆಗೆ ಸಾಕ್ಷಿಯಾಗಿದೆ. ಪ್ರಕೃತಿ ಸಮೃದ್ಧತೆಯಲ್ಲಿ ಮುಳುಗಿರುವ ಶರಾವತಿ

ಕಣಿವೆಯ ಕಗ್ಗತ್ತಲಿನ ವರ್ಣನೆ ಆಫ್ರಿಕಾ ಖಂಡದ ಕಗ್ಗತ್ತಲನ್ನು ವರ್ಣನೆ ಮಾಡುತ್ತಿರುವಂತೆ ಭಾಸವಾಗುತ್ತವೆ. ನಾಡಿನ ಪ್ರಾಕೃತಿಕ ಪರಿಸರ ಅದೆಷ್ಟು ರಮ್ಯ ಹಾಗೂ ಅದೆಷ್ಟು ಘೋರ ಎಂಬುದರ ತಿಳುವಳಿಕೆಗೆ ದಕ್ಕುತ್ತದೆ. ಇಲ್ಲಿನ ರಮ್ಯ ಭಯಂಕರ ನಿಸರ್ಗದ ಕಲ್ಪನೆಯು ಪ್ರಾಪಂಚಿಕ ಪ್ರಜ್ಞೆಯನ್ನೇ ಮೂಲೆಗುಂಪಾಗಿಸುವುದು.

ಇನ್ನು ಮೊಕದಮ್ಮೆಯ ವಿಚಾರಕ್ಕೆ ಬರುವುದಾದರೆ ಮೇಲೆ ವಿವರಿಸಿದಂತಹ **'ನಿಸರ್ಗದಲ್ಲಿ ಜಲಾಶಯ ನಿರ್ಮಾಣ ಮುಗಿದಾಗ ಕೇವಲ ೭೦೩ ಹೆಕ್ಟೇರ್ ಕ್ಷೇತ್ರ ಮುಳುಗುತ್ತದೆ ಎನ್ನುತ್ತದೆ ಕೆ.ಪಿ.ಸಿ. ನದಿಪಾತ್ರ ೧೦೭ ಕಳೆದರೆ ಅರಣ್ಯ ಮುಳುಗಡೆ ಕೇವಲ ೫೯೬ ಎನ್ನುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಜನವಸತಿಯಿಲ್ಲದ ನಿರ್ಜನ ಅರಣ್ಯ ಪ್ರದೇಶ ಮಾತ್ರ ಮುಳುಗಡೆ ಆಗುತ್ತದೆ'** ಎಂಬ ಅಂಶ 'ಕರ್ನಾಟಕ ಪವರ್ ಕಾರ್ಪೋರೇಷನ್(KPC)'ದೃಷ್ಟಿಯಲ್ಲಿ ಅತ್ಯಂತ ಮಹತ್ವದ ಅಂಶವಾಗಿತ್ತು ಎನ್ನುವ ಮೂಲಕ ಲೇಖಕರು ಅಭಿವೃದ್ಧಿಯ ಪಥಕ್ಕಾಗಿ ವಿನ್ಯಾಸಗೊಳ್ಳುವ ಯೋಜನೆಗಳ ದೂರದರ್ಶಿತ್ವದಲ್ಲಿ ಜನವಸತಿಯಿಲ್ಲದ ನಿರ್ಜನ ಪ್ರದೇಶದಲ್ಲಿ ಜೀವಜಂತುಗಳ ಅಸ್ತಿತ್ವ ಅಥವಾ ಕಾಳಜಿ ಹೇಗೆ ನಿರ್ಲಕ್ಷಿಸಲ್ಪಡುತ್ತದೆ ಎಂಬುದನ್ನು ಅನಾವರಣಗೊಳಿಸುತ್ತಾರೆ. ಕರ್ನಾಟಕ ಹೈಕೋರ್ಟ್ ಎದುರು ಶರಾವತಿ ಟೇಲ್‌ರೇಸ್ ಯೋಜನೆಯ ವಿರುದ್ಧದ ಮೊಕದ್ದಮ್ಮೆಗೆ ೧೦ ಆಕ್ಷೇಪಣೆಗಳಿದ್ದವು. ಪ್ರತಿ ಆಕ್ಷೇಪಣೆಗೂ ಕೆಪಿಸಿ ಸಮಜಾಯಿಸಿ ನೀಡಿರುವುದನ್ನು ಹಾಗೂ ಕೋರ್ಟ್ ಪ್ರತಿ ಸಮಜಾಯಿಸಿಗೂ ಮರುಪ್ರಶ್ನೆ ಹಾಕಿರುವುದನ್ನು ನಾವು ಕಾಣಬಹುದು. 'ಜೀವಿಪ್ರಜ್ಞೆಗೆ' ಮಹತ್ವದ ತಿರುವು ಕೊಡುವಲ್ಲಿ ಮುಖ್ಯವೆಂದು ಪರಿಗಣಿತವಾದ ಕನ್ನಡ ನಾಡಿನ ನ್ಯಾಯಾಲಯ ಮತ್ತು ರಾಜಕೀಯ ಹಿತಾಸಕ್ತಿಯ ಅಥವಾ ಧೋರಣೆಯ ಮಧ್ಯೆ ನಡೆಯುವ ಪ್ರಕರಣದ ಜಟಾಪಟಿಯಲ್ಲಿನ ಪ್ರಮುಖಾಂಶಗಳನ್ನು ಹೀಗೆ ನೋಡಬಹುದು.

ಆಕ್ಷೇಪಣೆ–೧: ಅಣೆಕಟ್ಟಿನಿಂದಾಗಿ ಸಮೃದ್ಧ ಕಾಡು ಶಾಶ್ವತವಾಗಿ ಕಣ್ಮರೆಯಾಗುತ್ತದೆ.

ಬದಲಿ ಕಾಡು ಬೆಳೆಸುತ್ತೇವೆ. ಮಹದಾಯಿ, ಬರಪೊಳೆ, ಅರ್ಘನಾಶಿನಿ ಯೋಜನೆಗಳಿಗೆ ಮಂಜೂರಾಗುವ ಅನುದಾನದಲ್ಲಿ ಲಿಂಗನಮಕ್ಕಿಯ ಬೋಳು ಜಾಗವನ್ನು ಹಸಿರು ಮಾಡುತ್ತೇವೆ.

ಆಕ್ಷೇಪಣೆ–೨: ಶರಾವತಿ ಕಣಿವೆಯಲ್ಲಿ ತೀರಾ ಅಪರೂಪದ ವನ್ಯ ಮೃಗಗಳಿವೆ. ಜಲಾಶಯ ನಿರ್ಮಾಣವಾದರೆ ಈವರೆಗೆ ಒಂದಾಗಿದ್ದ ಜೀವಾಶ್ರಯ ಎರಡು ಹೋಳಾಗಿ ವನ್ಯವಲಯ ಭಗ್ನವಾಗುತ್ತವೆ.

ಕೆಪಿಸಿ ಸಮಜಾಯಿಷಿ : ಅಂಥ ಏನೂ ಭಾರೀ ದುಷ್ಪರಿಣಾಮ ಆಗುವುದಿಲ್ಲವೆಂದು ಅರಣ್ಯ ವನ್ಯಜೀವಿ ಮುಖ್ಯಸ್ಥರಿಂದ ಸರ್ಟಿಫಿಕೇಟ್ ಪಡೆದಿದ್ದೇವೆ.

ಮರು ಆಕ್ಷೇಪಣೆ : ಭಾರತೀಯ ವಿಜ್ಞಾನ ಸಂಸ್ಥೆಯ ಡಾ. ಮಾಧವ ಗಾಡಗೀಳ್ ಹಾಗೂ ಆರ್. ಸುಕುಮಾರ್ ನಡೆಸಿದ ಸುದೀರ್ಘ ಅಧ್ಯಯನದ ಪಿಎಚ್‌ಡಿ ಪ್ರಬಂಧ ನೋಡಿದ್ದೀರಾ? ಅವರ ಸಮೀಕ್ಷೆಯ ಪ್ರಕಾರ ಕರ್ನಾಟಕದಲ್ಲಿ ಭಾರೀ ಜಲಾಶಯ ನಿರ್ಮಿಸಿದ ಎಲ್ಲಾ ಕಡೆ : ತುಂಗಭದ್ರೆ, ಕಬಿನಿ, ಕಾಳಿ, ಲಿಂಗನಮಕ್ಕಿಗಳಲ್ಲಿ ವನ್ಯಜೀವಿಗಳ ವಾಸಕ್ಷೇತ್ರ ಭಗ್ನವಾಗಿ, ಕಾಡು ಚಿಕ್ಕದಾಗಿ, ಓಡಾಡಲು ಸ್ಥಳವಿಲ್ಲದೆ ನಶಿಸಿದ ಪ್ರಾಣಿಗಳ ಲೆಕ್ಕಾಚಾರ ಗಮನಿಸಿದ್ದೀರಾ? ಶರಾವತಿ

ಕಣಿವೆಯಲ್ಲಿ ಆನೆ, ಕಾಡೆಮ್ಮೆ, ಸಿಂಗಳೀಕ, ಚುಕ್ಕೆ ಜಿಂಕೆ, ಸಾಂಬಾರ, ಸೀಳುನಾಯಿ, ಚಿರತೆ, ಹುಲಿ ಮುಂತಾದ ಸಸ್ತನಿಗಳೂ, ಹಾರುವ ಓತಿಯಂಥ ಅಪರೂಪದ ಸರೀಸೃಪಗಳೂ ಅರಣ್ಯ ಇಲಾಖೆಯ ಅಧಿಕಾರಿಗಳ ಸರ್ಟಿಫಿಕೇಟ್ ಮೇಲೆ ಬದುಕುತ್ತವೆಯೇ? ಅಣೆಕಟ್ಟು ನಿರ್ಮಾಣ ಹಂತದಲ್ಲಿ ೬ ವರ್ಷಗಳ ಕಾಲ ೨೫೦೦ ಕೂಲಿಕಾರ್ಮಿಕರು, ನಂತರ ಒಂದು ಕಡೆ ಅಣೆಕಟ್ಟು, ಇನ್ನೊಂದು ಕಡೆ ಜಲಾಶಯ, ಇವೆಲ್ಲದರ ಅಭಿವೃದ್ಧಿಯ ಗದ್ದಲದಲ್ಲಿ ವನ್ಯಪ್ರಾಣಿಗಳ ಸ್ಥಿತಿಗತಿ ಏನಾದೀತೆಂದು ವರದಿ ಸಿದ್ಧಪಡಿಸಿದ್ದೀರಾ? ಎಂದು ಪ್ರಶ್ನಿಸಿರುವುದನ್ನು ಜೀವವೈವಿಧ್ಯದ ಮಹತ್ವದ ದೃಷ್ಟಿಯಿಂದ ಅಂದಿನ ಕಾಲಕ್ಕೆ ಕೋರ್ಟ್ ಹೀಗೊಂದು ಚಿಂತನೆ ಮಾಡಿದ್ದನ್ನು ಎಂದಿಗೂ ಮರೆಯುವಂತಿಲ್ಲ. ಹೆಗಡೆ ಅವರ ಕೃತಿಯಲ್ಲಿ ದಾಖಲಾದ ಜೀವವೈವಿಧ್ಯವನ್ನು ಮನುಷ್ಯನ ಸ್ಥಾನದಷ್ಟೇ ಪೃಥಕ್ಕೇರಿಸಿದ ಈ ಪ್ರಕರಣದ ತೀರ್ಪು ಮತ್ತು ಈ ಮರುಪ್ರಶ್ನೆಗಳು ಜೀವಿ ಪ್ರಜ್ಞೆ ಅಧ್ಯಯನದ ದೃಷ್ಟಿಯಿಂದಲೂ ಉಲ್ಲೇಖಾರ್ಹವಾದುದು.

ಆಕ್ಷೇಪಣೆ–೪ : ಜಲಾಶಯದಲ್ಲಿ ನೀರು ಸಂಚಯವಾದಾಗ ಸಹಜವಾಗಿ ಗೇರುಸೊಪ್ಪದಿಂದ ಕೆಳಗೆ ಅಳಿವೆಯಲ್ಲಿ ಸಿಹಿನೀರಿನ ಬದಲು ಸಮುದ್ರದ ಉಪ್ಪು ನೀರೇ ತುಂಬಿಕೊಂಡು ೪೦ ಕಿಲೋಮೀಟರ್‌ವರೆಗೆ ಜಲಚರಗಳ, ಬೆಸ್ತರ ಹಾಗೂ ರೈತರ ಜೀವನ ಅಧ್ವಾನವಾಗುತ್ತದೆ.

ಕೆ.ಪಿ.ಸಿ. ಸಮಜಾಯಿಷಿ: ಸದಾಕಾಲ ೭೧ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗಾಗಿ ನೀರು ಬಿಡುತ್ತೇವೆ.

ಮರುಪ್ರಶ್ನೆ : ಅಳಿವೆಯಲ್ಲಿ ಜಲಚರಗಳ ಜೀವನಚಕ್ರ ಹೇಗಿದೆಯೆಂದು ಪರೀಕ್ಷೆ ಮಾಡಿಲ್ಲವೇಕೆ? ನೈಸರ್ಗಿಕ ಭರತಿ ಓಹಟಿಯ ಚಕ್ರಕ್ಕೆ ವ್ಯತಿರಿಕ್ತ ವೇಳೆಯಲ್ಲಿ ಸಿಹಿನೀರಿನ ಕೃತಕ ಭರತಿ ಭರಗಾಲಗಳ ಚಕ್ರ ಸ್ಥಾಪಿಸಿದರೆ ಅಳಿವೆಯ ಜೀವಜಂತುಗಳ ಮೇಲೆ ಏನೇನೂ ಪರಿಣಾಮ ಆಗುತ್ತದೆಂದು ಪರಿಶೀಲಿಸಲಿಲ್ಲ ಏಕೆ? ನೀರಾವರಿ ಯೋಜನೆಯ ಆಶ್ವಾಸನೆಯನ್ನು ಕೆಪಿಸಿ ಹೇಗೆ ಈಡೇರಿಸಿತು? ಕೆಪಿಸಿಯ ಯೋಜನೆಯನ್ನು ನೀರಾವರಿ ಇಲಾಖೆ ಮಾನ್ಯ ಮಾಡೀತ್ತೆಂಬ ಭರವಸೆ ಏನು?

ಕೆ.ಪಿ.ಸಿ. ಸಮಜಾಯಿಷಿ: ಏನೂ ಇಲ್ಲ

"ಎಲ್ಲಾ ಪ್ರಶ್ನೆ ಮತ್ತು ಆಕ್ಷೇಪಣೆಗಳಿಗೆ ಕೆ.ಪಿ.ಸಿ. ಉತ್ತರಿಸುವ ತಾಳ್ಮೆಯನ್ನು ಕಳೆದುಕೊಳ್ಳತ್ತಿದೆ. ಕೆ.ಪಿ.ಸಿ ಅಧ್ಯಕ್ಷರಾದ ರಾಮಕೃಷ್ಣ ಹೆಗಡೆ ಅವರು ಬೇಡ್ತಿ ಅಣೆಕಟ್ಟಿನ ಚಳುವಳಿಯಲ್ಲಿ ಭಾಗವಹಿಸಿದ್ದನ್ನು ಮರೆತೂ ಟೇಲ್‌ರೇಸ್ ವಿರೋಧಿಗಳನ್ನು ಹಿಮ್ಮಟ್ಟಿಸಲು ಪೋಲಿಸರ ನೆರವು ಕೇಳುವಂತಾಯಿತು. ಆದರೆ ಈಗಿನ ಪರಿಸರ ಚಳುವಳಿಯಲ್ಲಿ ಭಾಗವಹಿಸುವವರು ಕೇವಲ ಭ್ರಮರ, ಕೋಗಿಲೆ, ತಂಗಾಳಿ, ತಿಳಿನೀರಿನ ಭಾವೋದ್ವೇಗಕ್ಕೆ ಒಳಗಾದವರಲ್ಲ ಅಥವಾ ರಾಜಕೀಯ ಲಾಭಕ್ಕಾಗಲೀ, ತಮ್ಮದೇ ಜಮೀನು–ಮನೆ ಉಳಿಸಲಿಕ್ಕಾಗಲೀ ಹೋರಾಟ ವೇಷ ತೊಡುವವರಲ್ಲ. ಅವರ ಬತ್ತಳಿಕೆಯಲ್ಲಿ ವೈಜಾನಿಕ ಅಂಕಿಅಂಶಗಳ ಶಸ್ತ್ರಾಸ್ತ್ರ ಇರುತ್ತದೆ. ಅರ್ಥ–ಅನರ್ಥಗಳ ವಿವೇಚನಾ ಶಕ್ತಿ ಇರುತ್ತದೆ. ಇವೆಲ್ಲಕ್ಕಿಂತ ಮಿಗಿಲಾಗಿ ನಾಳಿನ ಭವಿಷ್ಯದ ಬಗ್ಗೆ ಕಾಳಜಿ ಕಳಕಳಿ ಇರುತ್ತದೆ. ಚರಿತ್ರೆಯ ದೃಷ್ಟಿಯಿಂದ ಕೂಡಲ ಸಂಗಮವನ್ನು ಉಳಿಸುವುದು ಎಷ್ಟು ಮಹತ್ವವೋ, ಭವಿಷ್ಯದ

ದೃಷ್ಟಿಯಿಂದ ಅಗರ್ಭ ಜೀವಾಶ್ರಯವನ್ನು ಉಳಿಸುವುದೂ ಅಷ್ಟೇ ಮಹತ್ವದ್ದೆಂದೂ ಅರಿವು ಮೂಡಿದೆ"[೩೪]

ನ್ಯಾಯಾಲಯವು ನಿಸರ್ಗಪರವಾಗಿ ವಿವೇಚನಾಯುಕ್ತವಾದ ಹೇಳಿಕೆ ನೀಡಿದ್ದು ನಾಡಿನ ನಿಸರ್ಗತಾಣ ರಕ್ಷಣೆಯ ದೃಷ್ಟಿಯಿಂದ ಹಾಗೂ ಐತಿಹಾಸಿಕ ಮತ್ತು ಸಾಂಸ್ಕೃತಿಯ ಪರಂಪರೆಯ ರಕ್ಷಣೆಯ ದೃಷ್ಟಿಯಿಂದ ದಾಖಲಾರ್ಹವಾಗುವುದು. ನಾಗೇಶ ಹೆಗಡೆ ಈ ಮೂಲಕ ಓದುಗರಿಗೆ ನಾಡಿನ ಪರಿಸರದಲ್ಲಿರುವ ಜೀವವೈವಿಧ್ಯದ ಬಹುಮುಖ್ಯ ಒಳಹುಗಳನ್ನು ಅರ್ಥೈಸಲು ಮುಂದಾಗುತ್ತಾರೆ. ಹಾಗೆಯೇ ನ್ಯಾಯಾಲಯವು 'ಚರಿತ್ರೆಯಲ್ಲಿ ಐತಿಹಾಸಿಕ ಸ್ಮಾರಕಗಳ ರಕ್ಷಣೆ ಮುಖ್ಯವಾಗುವಂತೆಯೇ, ಭವಿಷ್ಯತ್ತಿಗಾಗಿ ಪರಿಸರದ ರಕ್ಷಣೆಯ ಅಗತ್ಯತೆಯನ್ನು ಎತ್ತಿಹಿಡಿದದ್ದು' ಜೀವಿ ಪ್ರಜ್ಞೆಯ ಉಲ್ಲೇಖಾರ್ಹವಾಗುವುದು. 'ಜೀವಿ' ಕುರಿತು ಚಾರಿತ್ರಿಕವಾದ ಅಂಶಗಳನ್ನು ಹೆಕ್ಕಿ, ಸಂದರ್ಭ ಸಹಿತ ವಿವರಿಸುತ್ತಾ, ಓದುಗರ ಮುಂದಿಡುವುದನ್ನು ಹೆಗಡೆ ಅವರ ಕೃತಿಗಳಲ್ಲಿ ಕಾಣಬಹುದಾಗಿದೆ. ಈಗಲೂ ಕೊಡಗಿನಲ್ಲಿ ಘಟಿಸಿದ ಪ್ರಕೃತಿ ವಿಕೋಪಕ್ಕೆ ಮತ್ತು ಅಭಿವೃದ್ಧಿ ಆಧರಿಸಿದಂತೆ ಅಲ್ಲಾಗುತ್ತಿತುವ ಅತಿಯಾದ ಒತ್ತಡಗಳಿಗೆ ಈ ಪ್ರಕರಣವನ್ನು ಸಮೀಕರಿಸಿಯೂ ನೋಡಬಹುದಾಗಿರುತ್ತದೆ. ಮೊನ್ನೆ ಮೊನ್ನೆಯಷ್ಟೇ ಕರ್ನಾಟಕ ಹೈಕೋರ್ಟ್ ಕಸ್ತೂರಿ ರಂಗನ್ ವರದಿ ಅನುಷ್ಠಾನವನ್ನು ತಿರಸ್ಕರಿಸಿ ಇದೇ ಮಾದರಿಯಲ್ಲಿ ಪ್ರಶ್ನಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪ್ರಸ್ತುತ ನಾಡಿನ ಪ್ರಕೃತಿ ವಿಪತ್ತಿನ ಸಂಧಿಗ್ಧತೆಯಲ್ಲಿ ಇಂತಹುದೇ ಅಂಶಗಳು ಮತ್ತೆ ಮತ್ತೆ ನ್ಯಾಯಾಲಯದ ಮೆಟ್ಟಿಲೇರುತ್ತಿದ್ದು ನಾಡಿನ ಪರಿಸರದ ಸಮೃದ್ಧತೆಯನ್ನು ಸಂರಕ್ಷಿಸುವ ಅಗತ್ಯತೆಯನ್ನು ನೆನಪುಮಾಡಿಸುತ್ತಿವೆ.

'ಪತ್ರಿಕೆಗಳಲ್ಲಿ ನರಳಿದ ಪೃಥ್ವಿ' ಲೇಖನದಲ್ಲಿ ನ್ಯಾಷನಲ್ ಜಿಯಾಗ್ರಫಿಕ್ ಪತ್ರಿಕೆ ಹೊರಹೊಮ್ಮಿಸಿದ ಭೂಮಿಯ ಪ್ರತಿಕೃತಿ ಕುರಿತಂತೆ ಚರ್ಚೆಗಳು ಆರಂಭಗೊಳ್ಳುತ್ತವೆ. "ಈ ನಾಜೂಕು ಭೂಮಿಯನ್ನು ನಾವು ರಕ್ಷಿಸಬಲ್ಲವೇ?" ಎಂಬ ಸವಾಲನ್ನು ಈ ಪತ್ರಿಕೆ ನೀಡಿದ್ದನ್ನು ವಿವರಿಸಲಾಗಿದೆ. ೧೯೮೯ರ ಆರಂಭದಲ್ಲಿ ಭೂಮಿಯ ಸ್ಥಿತಿಗತಿಯತ್ತ ಅನೇಕ ಅಂತಾರಾಷ್ಟ್ರೀಯ ಪತ್ರಿಕೆಗಳು ಗಮನಹರಿಸಿ ವಿಷಯವನ್ನು ಬಿತ್ತರಿಸಿದ್ದವು. ಟೈಮ್ ಪತ್ರಿಕೆ ವರ್ಷದ ಗ್ರಹ ಎಂದು ಭೂಮಿಯನ್ನು ಕರೆದರೆ, ಡಿಸ್ಕವರ್ ಪತ್ರಿಕೆ ಕರಗಿ ಬಸಿದು ಹೋಗುತ್ತಿರುವಂತೆ ಭೂಗ್ರಹವನ್ನು ಚಿತ್ರಿಸಿತು. ಸ್ವಾನ್ ಪತ್ರಿಕೆ ಭೂಗ್ರಹದ ಮರುಶೋಧ ಕುರಿತು ವಿಶೇಷ ಪುಟಗಳನ್ನು ಮುದ್ರಿಸಿತು. ಇದೇ ಪತ್ರಿಕೆಯು ಪೃಥ್ವೀ ಯಂತ್ರದ ವಿವಿಧ ಭಾಗಗಳನ್ನು, ಲಿವರ್ ಗಿಯರ್‌ಗಳನ್ನು ವಿಜ್ಞಾನಿಗಳು ಪತ್ತೆ ಹಚ್ಚಲು ಪ್ರಾರಂಭಿಸಿದ್ದಾರೆ ಎಂಬುದನ್ನು ವಿವರಿಸಿತು ಎಂಬ ವಾಕ್ಯಗಳೊಂದಿಗೆ **"ಪ್ರಪಂಚದ ಅತ್ಯಂತ ದೊಡ್ಡ ಪರಿಸರ ದುರಂತದಿಂದಾಗಿಯೇ ಮಾನವ ಅವತರಿಸಿ ಬರಲು ಸಾಧ್ಯವಾಯಿತು"** ಎಂಬ ವಿಲಕ್ಷಣ ವಾಕ್ಯದಿಂದಲೂ ಇಲ್ಲಿನ ಲೇಖನ ಆರಂಭವಾಗುತ್ತದೆ. ೨೦೦ ಕೋಟಿ ವರ್ಷಗಳ ಹಿಂದೆ ಇಂಗಾಲಾಮ್ಲವನ್ನೇ ಹೀರಿ ಸಾಗರದಲ್ಲಿ ಬದುಕುತ್ತಿದ್ದ ಅಸಂಖ್ಯಾತ ಸೂಕ್ಷ್ಮ ಏಕಾಣುಜೀವಿಗಳು ಆಮ್ಲಜನಕವೆಂಬ ವಿಷಗಾಳಿಯನ್ನು ವಾಯುಮಂಡಲಕ್ಕೆ ಕಕ್ಕಿ ಕಕ್ಕಿ ಕೊನೆಗೆ ತಾವೇ ಉಸಿರುಗಟ್ಟಿ ನಿರ್ನಾಮವಾದವು. ಮುಂದೆ ಈ ವಿಷದ ಅನಿಲವನ್ನೇ ಕುಡಿದು ಬದುಕುವ ಹೊಸ ಜೀವಿಗಳು ವಿಕಾಸವಾದವು. ಅವೇ ಮಾನವನಿಗೆ ಜನ್ಮ ಕೊಟ್ಟವು. ಹಾಗಿದ್ದರೆ ವಿಷ ಗಾಳಿಯನ್ನೇ ಕುಡಿದು ಬದುಕುವ ಬೇರೆ

ಜೀವಿಗಳು ಉದಯಿಸಬಹುದೇ? ಅಂದರೆ ನಾವು ನಮ್ಮ ಪೀಳಿಗೆಯನ್ನು ನಾಶಮಾಡುತ್ತೇವೆಯೇ ಹೊರತು ಭೂಮಿಯ ಜೀವಮಂಡಲವನ್ನು ನಾಶಮಾಡಲಾರೆವು ಅಲ್ಲವೇ? ಈ ಪ್ರಶ್ನೆಗಳಿಗೆ ವಿಜ್ಞಾನಿಗಳು ಉತ್ತರ ಹುಡುಕುತ್ತಿದ್ದಾರೆ. ಅವರಿಗೆ ಲಭ್ಯವಾದ ಉತ್ತರಗಳು ಇಷ್ಟು ಎಂದಿದ್ದಾರೆ ಹೆಗಡೆ.

'ಹಳ್ಳೀಮುಕ್ಕ ಎಲ್ಲೆಲ್ ಹೊಕ್ಕ' ಕೃತಿಯು ಒಟ್ಟು ೧೪ ಹಾಸ್ಯ ಪ್ರಸಂಗಗಳನ್ನು ಒಳಗೊಂಡಿದೆ. 'ಅಪರಂಜಿ' ಪತ್ರಿಕೆಗೆಂದು ಅಂಕಣರೂಪದಲ್ಲಿ ಬರೆದ ಲೇಖನಗಳ ಸಂಗ್ರಹವೇ ಹಳ್ಳೀಮುಕ್ಕ ಎಲ್ಲೆಲ್ ಹೊಕ್ಕ. ನಾಗೇಶ ಹೆಗಡೆ ಕ್ಲಿಷ್ಟ ವೈಜ್ಞಾನಿಕ ವಿಚಾರಗಳನ್ನು ಸ್ವಚ್ಚ ಕನ್ನಡದಲ್ಲಿ ಅಂದವಾಗಿ ಹೇಳಬಲ್ಲ ಪ್ರತಿಭಾವಂತ ಪತ್ರಕರ್ತರು. ಪರಿಸರ ವಿಜ್ಞಾನಿಯಾಗಿ ಪ್ರತಿಕೋದ್ಯಮಕ್ಕೆ ಬಂದ ಇವರು ತಮ್ಮ ಗುರುಗಳಂತಿದ್ದ ವೈಎನ್ಕೆ ಅವರಂತೆಯೇ ಹಾಸ್ಯದ ಹೊನಲು ಹರಿಸುತ್ತಲೇ ಧಾಂಬಿಕ ರಾಜಕಾರಣಿಗಳಿಗೆ, ಹಾದಿ ತಪ್ಪಿದ ಪ್ರಾಣಿ ಪ್ರೇಮಿಗಳಿಗೆ, ಅಂತೆಯೇ ಮೌಢ್ಯ ಮತ್ತು ದುರಾಸೆ ತುಂಬಿದ ಜನರಿಗೆ ನವಿಲುಗರಿಯ ಪೊರಕೆಯ ರುಚಿ ಕಾಣಿಸುತ್ತಾರೆ. 'ಹಳ್ಳೀಮುಕ್ಕ ಎಲ್ಲೆಲ್‌ಹೊಕ್ಕ'ದಲ್ಲಿ ಸಾಕು ತಾಯಿಯ ಪ್ರೀತಿಯಿಂದಾಗಿ ಆಜನ್ಮ ಬ್ರಹ್ಮಚಾರಿಯಾಗಿ ಅಥವಾ ಪ್ರಾಣಿದಯಾಪರರ ಕೃಪೆಯಿಂದಾಗಿ ಉಪವಾಸ ಉಳಿಯಬೇಕಾದ ಸಂದಿಗ್ಧಕ್ಕೆ ಸಿಲುಕಿದ ಮಾರುತಿ ಕೋತಿ ಮುಂತಾದ ಪ್ರಾಣಿಗಳಿಗೂ ಮನುಷ್ಯ ಪಾತ್ರಗಳಷ್ಟೇ ಪ್ರಾಮುಖ್ಯ ನೀಡುವ ನಾಗೇಶ ಹೆಗಡೆ ಅವರ ಹಾಸ್ಯ ನಮ್ಮನ್ನು ಸುಲಲಿತವಾಗಿ ಸೆಳೆಯುತ್ತದೆ[೩೫] ಎಂದಿದ್ದಾರೆ ಡಾ. ಉಲ್ಲಾಸ ಕಾರಂತರು.

ಕೆರೆಯಲಿ ಚಿನ್ನ, ಕೆರೆಯೇ ಚಿನ್ನ' ಕೃತಿಯು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನಿತ ಕೃತಿಯಾಗಿದೆ. ೨೦ನೇ ಶತಮಾನದ ಶ್ರೇಷ್ಠ ಮಕ್ಕಳ ಕತೆಗಳ ಸಾಲಿಗೆ ಸೇರ್ಪಡೆಗೊಂಡಿದೆ. ಇದರಲ್ಲಿ ಒಟ್ಟು ಹತ್ತು ಕತೆಗಳಿವೆ. ಒಂದು ರೀತಿ ಕಾರ್ಟೂನ್ ಮಾದರಿಯಲ್ಲಿ ಮೂಡಿಬರುವ ಕತೆಗಳಿದ್ದು, ಇಲ್ಲಿನ ಪ್ರಾಣಿಗಳೆಲ್ಲವೂ ಮನುಷ್ಯ ಲೋಕದಂತೆ ಮಾತಾನಾಡುವ ಫ್ಯಾಂಟಸಿ ಪ್ರಕಾರವನ್ನು ಒಳಗೊಂಡಿವೆ. ಮನುಷ್ಯನ ಆಸೆಬುರುಕತನ, ಸ್ವಾರ್ಥ ಹಾಗೂ ಅವಿವೇಕತನದ ವಿರುದ್ಧ ಇವು ತಂತ್ರೋಪಾಯಗಳನ್ನು ಹುಡುಕಿ ಜಯಿಸುತ್ತವೆ. ಕೆರೆಯನ್ನು ಹಾಳುಮಾಡುವ ಮತ್ತು ಕೆರೆಯ ನೀರಿಗೆ ಪಂಪ್‌ಸೆಟ್ ಅಳವಡಿಸಿ ಅದನ್ನು ಅವಲಂಬಿಸಿದ ಜೀವವಲಯವನ್ನು ನಾಶಪಡಿಸುವ ಮನುಷ್ಯನಿಗೆ ತಿರುಗೇಟು ನೀಡುವ ಪರಿ ಹಾಸ್ಯ ಪ್ರಜ್ಞೆಯಿಂದ ಕೂಡಿದೆ. ಮಕ್ಕಳು ಸಂತೋಷಪಡುತ್ತಲೇ ಪರಿಸರದ ನಿಜಸ್ಥಿತಿ ಅರಿಯುವಂತೆ ನಾಗೇಶ ಹೆಗಡೆ ಅವರು ಅತಿ ಸರಳತೆಯಿಂದ ಅದನ್ನು ನಿರೂಪಿಸಿದ್ದಾರೆ. ಮನುಷ್ಯರ ಕೆಟ್ಟಕೆಲಸಗಳಿಂದಾಗಿ ಈಚಿನ ವರ್ಷಗಳಲ್ಲಿ ನಾಡಿನ ಎಲ್ಲಾ ಕೆರೆಗಳೂ ತೀರ ದುಸ್ಥಿತಿಗೆ ಬಂದಿರುತ್ತವೆ. ನೀರು ಕೊಳೆಯಾಗಿ, ಕೆರೆಯಲ್ಲಿ ಕಳೆ, ಕೆಸರು ಹೂಳು ತುಂಬಿ ಕೆಲವೆಡೆ ಇಡೀ ಕೆರೆಯೇ ಬತ್ತಿ ಹೋಗುವ ಸ್ಥಿತಿಗೆ ಬಂದು ಜೀವಲೋಕಕ್ಕೆ ಗಂಡಾಂತರ ಬರುತ್ತದೆ. ಕೆರೆಯ ಆಸುಪಾಸಿನಲ್ಲಿ ವಾಸಿಸುವ ಕಪ್ಪೆ, ಆಮೆ, ಮೀನು, ಏಡಿ, ಬಕ, ನೀರೊಳ್ಳೆ ಹಾವು, ಮುಂಗುಸಿ ಮುಂತಾದ ಪ್ರಾಣಿ ಪಕ್ಷಿಗಳು ಅನಾಥವಾಗುತ್ತಿವೆ ಇಲ್ಲವೇ ಸತ್ತೇ ಹೋಗುತ್ತಿವೆ. ಇದರ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಹೆಣೆದಿರುವ ಕತೆಯಾಗಿದೆ. ಎಲ್ಲಾ ಜೀವಿಗಳ ಬದುಕಿಗೆ ಆಧಾರವಾಗಬೇಕಿದ್ದ ಕೆರೆಯನ್ನು ಮನುಷ್ಯರು ಹೇಗೆಲ್ಲಾ ಕಲುಷಿತಗೊಳಿಸುತ್ತಾರೆ ಎಂಬುದರ

ವೈಜ್ಞಾನಿಕ ವಿವರಣೆಯನ್ನೂ ಸಹ ಇದರಲ್ಲಿ ಕಾಣಬಹುದಾಗಿದೆ. ತೊಂಡುರಿನ ಸುಂದರವಾದ ಕೆರೆಯನ್ನು ಆಸೆಬುರುಕ ಮನುಷ್ಯರು ಹಾಳುಗೆಡವಿದ್ದರು. ಕೆರೆಯ ಪರಿಸರದಲ್ಲಿ ವಾಸಿಸುತ್ತಿರುವ ಪ್ರಾಣಿ ಪಕ್ಷಿಗಳೇ ಒಟ್ಟಾಗಿ ಇಡೀ ಕೆರೆಯನ್ನು ಸ್ವಚ್ಚಗೊಳಿಸಿ, ಗಿಡಮರ ಉಳಿಸಿ, ಬೆಳೆಸಿ, ಕೊನೆಗೆ ಆಕಾಶರಾಯನ ರಾಜ್ಯಕ್ಕೂ ಹೋಗಿ ಮಳೆತಂತ್ರವನ್ನು ಚಾಲೂಮಾಡಿ ಮಳೆ ತರಿಸಿದ ಬಗೆಯನ್ನು ಕತೆ ವಿವರಿಸುತ್ತದೆ. ಮಕ್ಕಳಿಗೆಂದೇ ಸರಳವಾಗಿ ಹಾಗೂ ಸ್ವಾರಸ್ಯವಾಗಿ ನಿಸರ್ಗದಲ್ಲಿನ ಜಲಚಕ್ರ ತತ್ವವನ್ನೂ ಪರಿಸರ ಸಂರಕ್ಷಣೆಯ ಸಂದೇಶವನ್ನೂ ಕಥಾರೂಪದಲ್ಲಿ ತಿಳಿಸುವ ತಮಾಷೆಯ ಸುಂದರ ಕತೆಗಳು ಇಲ್ಲಿವೆ.(೩೬)

ದಿನಾಂಕ: ೦೨/೧೨/೨೦೧೫ ರಂದು ಪ್ರಜಾವಾಣಿಯಲ್ಲಿ ಪ್ರಕಟವಾದ ವಿಜ್ಞಾನ ವಿಶೇಷ ಅಂಕಣದಲ್ಲಿನ ಈ ಲೇಖನವನ್ನು ಜೀವವೈವಿಧ್ಯದ ದೃಷ್ಟಿಯನ್ನು ಗಮನಿಸೋಣ. **'ತಳಬಾಚು ಮೀನುಗಾರಿಕೆ (ಬಾಟಮ್ ಟ್ರಾಲಿಂಗ್)'** ಹಾಗೂ **'ಗಿಲ್ ನೆಟ್ಟಿಂಗ್'** (೩೭) ಬಗ್ಗೆ ಹೆಗಡೆ ಅವರು ವಿವರಿಸುತ್ತಾ, ಆಳಸಾಗರದಲ್ಲಿರುವ ಜೀವಸಂಕುಲದ ಪಾತ್ರಗಳು ಮತ್ತವುಗಳ ಚಲನವಲನಗಳ ಸ್ಥಿತಿಯನ್ನು ಸಾರ್ವತ್ರಿಕರಿಗೆ ಮನವರಿಕೆ ಮಾಡಿಕೊಡುತ್ತಾರೆ. ಈ ಲೇಖನವು ವಿಕಾಸದ ನೆಪದಲ್ಲಿ ವ್ಯವಸ್ಥೆಯು ಕಡಲಜೀವಿಗಳ ಮೇಲೆ ನಡೆಸಲ್ಪಡುವ ದೌರ್ಜನ್ಯ ಮತ್ತು ಕ್ರೌರ್ಯವನ್ನು ಸವಿವರವಾಗಿ ಬಿಂಬಿಸುವ ಲೇಖನವಾಗಿ ಗುರುತಿಸಲ್ಪಡುತ್ತದೆ. ಜೀವಿಗಳ ಕುರಿತು ಇರುವ ರಾಜಕೀಯ ಧೋರಣೆ ಮತ್ತು ಬಿಕ್ಕಟ್ಟನ್ನು ವಿವರಿಸುವುದು. ಮೋದಿ ಸರ್ಕಾರ 'ಎಲ್ಲರೊಂದಿಗೆ ಎಲ್ಲರ ವಿಕಾಸ' ಮಾಡುತ್ತೇನೆಂದು ಹೇಳಿ ಇದೇನು ಕಡಲ ಸಂಪತ್ತಿನ ಭರ್ಜರಿ ಗಣಿಗಾರಿಕೆಗೆ ಹೊರಟಿದೆ ಇದರಿಂದ ಯಾರ ವಿಕಾಸ ಆಗಲಿದೆ ಎಂಬ ಪ್ರಶ್ನೆ ಎತ್ತುತ್ತಲೇ ತಳಬಾಚು ಮೀನುಗಾರಿಕೆಯ ಹುನ್ನಾರದ ಇತಿಹಾಸವನ್ನು ನಾಗೇಶ ಹೆಗಡೆ ಅವರು ನೆನಪಿಸುವರು. ಹೆಗಡೆ ಅವರ ಲೇಖನವನ್ನು ಪೂರ್ಣವಾಗಿ ಗ್ರಹಿಸಿದ ಮೇಲೆ ಹೊಳೆಯುವ ಆಲೋಚನೆಯಿದು. ಪಶ್ಚಿಮದ ಯಾವುದೇ ಅಭಿವೃದ್ಧಿ ಚಟುವಟಿಕೆಗಳೆಂದರೆ ಅವು ಪ್ರಶ್ನಾತೀತ ಎಂಬ ಮನೋಭಾವ ನಮ್ಮಲ್ಲಿದೆ. ಇದರ ಅನುಕರಣೆಯ ಶೈಲಿ ಅಪಾರ ಕಡಲ ಸಂಪತ್ತನ್ನು ನಾಶಗೊಳಿಸಬಲ್ಲದು ಎಂಬುದನ್ನು ಕಿಂಚಿತ್ತು ಯೋಚಿಸದ ಮಟ್ಟಕ್ಕೆ ನಮ್ಮವರ ಧೋರಣೆಗಳು ಪ್ರಕಟಗೊಳ್ಳುವ ಹಂತದಲ್ಲಿ ಶ್ರೇಷ್ಠ ವ್ಯಕ್ತಿಯೆಂದು ಗುರುತಿಸಿಕೊಳ್ಳುವ ಭಾರತದ ಪ್ರಧಾನಮಂತ್ರಿಯಾದ ಮೋದಿಯವರು ಸಹ ಒಬ್ಬರಾಗಿ ನಿಲ್ಲುವುದು ವಿಪರ್ಯಾಸ. ಪಶ್ಚಿಮದ ಇಂತಹ ವಿವೇಕರಹಿತ ಚಿಂತನೆಯನ್ನು ವಿರೋಧಿಸಿ ಅಲ್ಲಿಯೂ ಈ ಬಗ್ಗೆ ಪ್ರಶ್ನಿಸಿರುವ ಅದ್ಭುತ ಮಾನವರ ಬಗ್ಗೆ ನಮ್ಮ ಗಮನ ಹೋಗುವುದೇ ಇಲ್ಲ. 'ಶಕ್ತಿಶಾಲಿಯಾದ ಔದ್ಯಮಿಕ ಮೀನುಗಾರಿಕೆಯು, ಅದನ್ನೇ ನಂಬಿ ಬದುಕು ನಡೆಸುವ ವ್ಯವಸಾಯ ಪ್ರಧಾನ ಸಣ್ಣ ಮೀನುಗಾರಿಕೆಯನ್ನು ಹೇಗೆ ಏಕ್‌ದಮ್ ದಮನಗೊಳಿಸಬಲ್ಲದು ಹಾಗೂ ಈ ಬಗ್ಗೆ ಇರುವ ರಾಜಕೀಯ ಇಚ್ಛಾಶಕ್ತಿಯ ಪರಿ ಯಾವ ಬಗೆಯದ್ದು ಎಂದು ಅರ್ಥಮಾಡಿಸುವಲ್ಲಿ ಈ ಲೇಖನ ಬಹುಮುಖ್ಯವಾಗುತ್ತದೆ.

ಆಳ ಸಮುದ್ರದಲ್ಲಿ ದೊಡ್ಡ ಜಲಚರಗಳು ಸದಾ ಸಂಚಾರಿಯಾಗಿರುತ್ತವೆ. ಭಾರೀ ದಂಡು ಕಟ್ಟಿಕೊಂಡು ಅವು ಹಿಂದೂ ಮಹಾಸಾಗರದಿಂದ ಶಾಂತಸಾಗರಕ್ಕೆ, ಅಲ್ಲಿಂದ ಅಟ್ಲಾಂಟಿಕ್‌ಗೆ, ಅಲ್ಲಿಂದ ಮತ್ತೆ ಹಿಂದೂ ಮಹಾಸಾಗರದ ಮೂಲಕ ಶಾಂತಸಾಗರಕ್ಕೆ ಹೀಗೆ ಪರ್ಯಟನ ಮಾಡುತ್ತಲೇ ಇರುತ್ತವೆ. ಸಾಲ್ಮನ್, ಶಾರ್ಕ್, ಹ್ಯಾಡಕ್, ಕಾಡ್, ಹೆರ್ರಿಂಗ್ ಮುಂತಾದ

ಮೀನುಗಳ ಜೊತೆಗೆ ಡಾಲ್ಫಿನ್, ತಿಮಿಂಗಿಲಗಳೂ ಖಂಡಾಂತರ ತಿರುಗಾಟ ಮಾಡುತ್ತಿರುತ್ತವೆ. ಇತರ ದೇಶಗಳು ಹಿಡಿಯದೆ ಬಿಟ್ಟರೆ ಅವು ನಮ್ಮಲ್ಲಿಗೆ ಬರುತ್ತವೆ, ನಾವು ಹಿಡಿಯದೆ ಹಾಗೇ ಬಿಟ್ಟರೆ ಮಾರಿಷಸ್, ಮಲೇಷ್ಯ, ಥಾಯ್ಲೆಂಡ್, ಜಪಾನ್ ಮುಂತಾದ ದೇಶಗಳು ಬಲೆಬೀಸಿ ಹಣಗಳಿಸುತ್ತವೆ – ಆದ್ದರಿಂದಲೇ ನಾವು ಬಸಿಯಬೇಕು ಎಂಬುದು ನಮ್ಮ ಧೋರಣೆ. ಮೊನ್ನೆ ಮೊನ್ನೆ ಜನವರಿ ೨೦ರಂದು ಬ್ರಿಟನ್ನಿನ ಎಲ್ಲ ಪಕ್ಷಗಳ ಸಂಸದರು ಸೇರಿ ಇಂಥ ಆಳ ಸಮುದ್ರದ ತಳಬಾಚು ಮೀನುಗಾರಿಕೆಯನ್ನು ಇಡೀ ಯುರೋಪಿನಲ್ಲಿ ನಿಷೇಧಿಸುವಂತೆ ಮನವೊಲಿಸಬೇಕೆಂದು ತಮ್ಮ ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆ. ಅವರ ಒತ್ತಾಯಕ್ಕೆ ಕಾರಣ ಏನೆಂದರೆ, ಆಳ ಕಡಲಿನ ವಿಧ್ವಂಸಕ ಮೀನುಗಾರಿಕೆಯಿಂದ ಏನೆಲ್ಲಾ ಅಪಾಯಗಳಿವೆ ಎಂಬುದನ್ನು ಅಲ್ಲಿನ ಪ್ರಮುಖ ವಿಶ್ವವಿದ್ಯಾಲಯದ ೬೦ ಮಂದಿ ಸಾಗರ ವಿಜ್ಞಾನಿಗಳು ಒಂದಾಗಿ ತಮ್ಮ ಮೀನುಗಾರಿಕೆ ಸಚಿವರಿಗೆ ಸೂಕ್ತ ಸಾಕ್ಷ್ಯಾಧಾರಗಳ ಮೂಲಕ ಮನವರಿಕೆ ಮಾಡಿಕೊಟ್ಟಿದ್ದಾರೆ. ಆಳ ಸಮುದ್ರದ ಜೀವಲೋಕದ ಅದ್ಭುತಗಳನ್ನು ಉಳಿಸುವಂತೆ ವಿಶ್ವಸಂಸ್ಥೆಯಲ್ಲಿ ಜಾಗತಿಕ ಒಪ್ಪಂದ ರೂಪಿಸುವಲ್ಲಿ ಬ್ರಿಟನ್ನೇ ಬಹುಮುಖ್ಯ ಪಾತ್ರವಹಿಸಿತ್ತು. ತಳಬಾಚು ಮೀನುಗಾರಿಕೆ (ಬಾಟಮ್ ಟ್ರಾಲಿಂಗ್) ಎಂದರೆ ಹೊಲದಲ್ಲಿ ಕುಂಟೆ ಹೊಡೆದಂತೆ, ಸಮುದ್ರ ತಳವನ್ನು ಬಾಚುತ್ತ ಸಾಗುವುದು. ನೂರಿನ್ನೂರು ಮೀಟರ್ ಅಗಲದ ಬಲೆಯನ್ನು ಭಾರವಾದ ಉಕ್ಕಿನ ಸರಪಳಿಗಳ ಮೂಲಕ ಸಮುದ್ರದ ತಳಕ್ಕೆ ಇಳಿಸಿ ಎಳೆಯುತ್ತ ಹೋಗುತ್ತಾರೆ. ನೂರೈವತ್ತು ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲಿ ಈ ತಂತ್ರ ಜಾರಿಗೆ ಬಂದಿದ್ದೇ ತಡ, ಅಲ್ಲಿನ ಮೀನುಗಾರರೆಲ್ಲ ಪ್ರತಿಭಟನೆ ಮಾಡಿದ್ದರು. ಅವರ ಆಕ್ರೋಶ ಜೋರಾದಾಗ ೧೮೬೬ರಲ್ಲಿ ಯಾವ ಜೀವಿಯೂ ನನ್ನ ಬಲೆಯಿಂದ ಬಚಾವಾಗಲು ಸಾಧ್ಯವೇ ಇರಲಿಲ್ಲ ಎಂದು ಅಂದು ಜಿ. ಕೊರ್ಮಾರ್ಕ್ ಎಂಬ ಮೀನುಗಾರ ಕೊಚ್ಚಿಕೊಂಡಿದ್ದನ್ನು ಅಂದಿನ ನಡವಳಿಯಲ್ಲಿ ದಾಖಲಿಸಲಾಗಿದೆ. ಇಂಥವರ ಹಾವಳಿಯಿಂದ ತತ್ತರಿಸಿದ್ದ ಸಾಮಾನ್ಯ ಮೀನುಗಾರನಾದ ಬಿ. ಸಿಂಪ್ಸನ್ ನೀಡಿದ ಹೇಳಿಕೆಯೂ ದಾಖಲಾಗಿದ್ದು ಅದು ಹೀಗಿದೆ. 'ಇಪ್ಪತ್ತು ವರ್ಷಗಳ ಹಿಂದೆ ನಾವು ಪ್ರತಿಯೊಬ್ಬ ಮೀನುಗಾರರೂ ದಿನಕ್ಕೆ ೬೦೦–೭೦೦ ಮೀನುಗಳನ್ನು ಹಿಡಿದು ತರುತ್ತಿದ್ದೆವು. ಈಗ ತಲಾ ಇಪ್ಪತ್ತೂ ಸಿಗುವುದು ಕಷ್ಟ, ३೦–೪೦ ಸಿಕ್ಕರೆ ಅದೇ ದೊಡ್ಡ ವಿಷಯ' ಎಂದು ಆತ ಹೇಳಿದ್ದ. ಅಂದಿನ ದಿನಗಳಲ್ಲಿ ಮೀನುಗಾರಿಕೆ ಎಂದರೆ ಕುಟುಂಬದ ವ್ಯವಸಾಯವಾಗಿತ್ತು. ಹೆಚ್ಚೆಂದರೆ ೪೦ ಅಡಿ ಉದ್ದದ ದೋಣಿ ಹಿಡಿದು, ಅಷ್ಟೇ ಅಗಲದ ಬಲೆ ಬೀಸಿ ಸಾಗರದ ತಳವನ್ನು ಬಾಚುತ್ತಿದ್ದರು. ಗಾಳಿ ಮಳೆ ಜೋರಾಗಿದ್ದರೆ ಅಂಥ ಸಾಹಸಕ್ಕೆ ಇಳಿಯುತ್ತಿರಲಿಲ್ಲ. ಈಗಿನದು ಔದ್ಯಮಿಕ ಮೀನುಗಾರಿಕೆ. ಹವಾಮಾನ ಹೇಗೇ ಇದ್ದರೂ ಎಲ್ಲ ಋತುಗಳಲ್ಲೂ ಮೀನುಗಾರಿಕೆ ನಡೆಯುತ್ತದೆ. ದೂರ ಸಂವೇದಿ ತಂತ್ರಜ್ಞಾನವನ್ನು ಬಳಸಿ, ಮೀನು ಸಂಪತ್ತು ಎಲ್ಲೇ ಇದ್ದರೂ ಭಾರೀ ದೊಡ್ಡ ಯಾಂತ್ರಿಕ ಹಡಗುಗಳಲ್ಲಿ ३೦ ಟನ್ ಭಾರದ ಬಲೆಗೆ ಉಕ್ಕಿನ ಸರಪಳಿಗೆ ಸರಳುಗಳನ್ನು ನೇಯ್ದು, ಸಮುದ್ರದ ತಳಕ್ಕಿಳಿಸಿ ಪ್ರತಿ ಬಾರಿಗೆ ೧೫೦ ಮೀಟರ್ ಅಗಲದ ಪಟ್ಟಿಗುಂಟ ಎಳೆಯುತ್ತಾರೆ. **"ನೆಲದ ಮೇಲೆ ಅಂಥದ್ದೊಂದು ಸರಂಜಾಮನ್ನು ಎಳೆಯಲು ಸಾಧ್ಯವಾಗಿದ್ದೇ ಆದರೆ ಕೆಲವೇ ತಿಂಗಳಲ್ಲಿ ನಮ್ಮ ನ್ಯೂ ಫಾರೆಸ್ಟ್ ಸಪಾಟಾಗುತ್ತದೆ. ಇನ್ನುಳಿದ ಗ್ರಾಮೀಣ ಹೊಲ-ಗದ್ದೆ ಗೋಮಾಳಗಳೂ ಅದೇ ವೇಗದಲ್ಲಿ ನೆಲಸಮ ಆಗುತ್ತವೆ. ಬಾಚಿದ ಜಾಗದಲ್ಲೇ ಮತ್ತೆ ಮತ್ತೆ ಬಾಚುವುದರಿಂದ ಹೊಸ ಪೀಳಿಗೆಗಳ ಸಾಧ್ಯತೆಯನ್ನೇ**

ಹೊಸಕಿ ಹಾಕಲಾಗುತ್ತದೆ" ಎನ್ನುತ್ತಾರೆ ಬ್ರಿಟನ್ನಿನ ರಾಷ್ಟ್ರೀಯ ಸಾಗರ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಬ್ರಯಾನ್ ಬೆಟ್. ಸಾಗರತಳ ಎಂದರೆ ಅಲ್ಲಿ ಮೀನುಗಳಷ್ಟೇ ಅಲ್ಲ, ಇತರ ಲಕ್ಷೋಪಲಕ್ಷ ಬಗೆಯ ಜೀವಿಗಳಿರುತ್ತವೆ. ಹವಳ, ಸ್ಪಾಂಜು, ಕಡಲ ಕುದುರೆ, ನಕ್ಷತ್ರ–ಮೀನು, ಕಪ್ಪೆ ಚಿಪ್ಪುಗಳು, ಚಿಪ್ಪಿಲ್ಲದ ಮೃದ್ವಂಗಿಗಳು, ಇನ್ನೂ ಹೆಸರಿಡದ ಅಸಂಖ್ಯ ಜೀವಿಗಳ ವಾಸಸ್ಥಾನ ಅದು. ಜೊತೆಗೆ ಅವುಗಳಿಗೆ ಆಸರೆಯಾಗಿ ನಾನಾ ಬಗೆಯ ಜೊಂಡು ಸಸ್ಯಗಳು, ಬಳ್ಳಿಗಳು, ಪೊಟರೆಗಳಿರುತ್ತವೆ. ತಳಬಾಚು ತಂತ್ರದಿಂದ ಅವೆಲ್ಲವೂ ನಿರ್ನಾಮವಾಗುತ್ತವೆ; ಅವುಗಳ ಮೊಟ್ಟೆ, ಗೊದಮೊಟ್ಟೆ ಹಾಗೂ ಅಳಿದುಳಿದ ಕಿರುಜೀವಿಗಳ ಬದುಕಿಗೆ ಆಸರೆಯಾಗಿದ್ದ ಎಲ್ಲವೂ ಸಪಾಟಾಗುತ್ತವೆ. ಬಲೆಗೆ ಸಿಕ್ಕು ಮೇಲಕ್ಕೆ ಬರುವ ಜೀವಿಗಳಲ್ಲಿ ಅರ್ಧಕ್ಕೂ ಹೆಚ್ಚು ಪಾಲು ಸತ್ತೊ, ಅರೆಜೀವವಾಗಿಯೊ ದಡ ಸೇರಿ ಗೊಬ್ಬರವಾಗುತ್ತವೆ ಅಥವಾ ತಮ್ಮ ನೆಲೆ ತಪ್ಪಿ ಬೇರೆಲ್ಲೂ ಅವಸಾನ ಸ್ಥಿತಿಗೆ ತಲುಪುತ್ತವೆ.

ತಳಬಾಚು ವಿಧಾನದಷ್ಟೇ ಕ್ರೂರವಾದುದು 'ಗಿಲ್ ನೆಟ್ಟಿಂಗ್' ತಂತ್ರ. ಇದರಲ್ಲಿ ಎರಡು ಹಡಗುಗಳ ನಡುವೆ ಪರದೆಯಂತೆ ವಿಶಾಲ ಬಲೆಯನ್ನು ಸಮುದ್ರದ ತಳದವರೆಗೂ ಇಳಿಬಿಡುತ್ತಾರೆ. ಬಲೆಯನ್ನು ದಿನಗಟ್ಟಲೆ ಅಲ್ಲೇ ನಿಲ್ಲಿಸಿ ಬಿಟ್ಟು ಹಡಗುಗಳು ದೂರು ಬೇರೆಡೆ ಬಲೆ ಹಾಕಲು ಹೋಗುತ್ತವೆ. ಬಲೆಯಲ್ಲಿರುವ ಅತಿ ಸೂಕ್ಷ್ಮ ಪಾರದರ್ಶನ ನೈಲಾನ್ ಎಳೆಗಳಲ್ಲಿ ಮೀನುಗಳು ಸಿಕ್ಕಿಬಿದ್ದು ಕೊಸರಾಡುವಾಗ ಅವುಗಳ ಕಿವಿರು (ಗಿಲ್), ಕತ್ತು, ರೆಕ್ಕೆಗಳು ಸಿಕ್ಕಿಹಾಕಿಕೊಳ್ಳುತ್ತವೆ. ಭಕ್ಷ್ಯ ಯೋಗ್ಯ ಮೀನುಗಳ ಜೊತೆಗೆ ಕಡಲಾಮೆ, ಪ್ರಾಪಾಯಿಸ್‌ನಂಥ ಇತರ ಸಂಚಾರಿ ಜೀವಿಗಳು ಉಸಿರು ಗಟ್ಟಿ ಸಾಯುತ್ತವೆ ಇಲ್ಲವೆ ಗಾಯಗೊಂಡು ನರಳುತ್ತ ತೂಗಾಡುತ್ತಿರುತ್ತವೆ ಎನ್ನುವಂತಹ ಜಾಗತಿಕ ಮಟ್ಟದ ವಿಸ್ತಾರ ವಿಶ್ಲೇಷಣೆಗಳೇ ಹೆಗಡೆ ಅವರ ಕಡಲ ಜೀವಿ ಪ್ರಜ್ಞೆಗೆ ಸಾಕ್ಷಿಯಾಗುತ್ತದೆ.

'ಅಭಿವೃದ್ಧಿಯ ಅಂಧಯುಗ' ಕೃತಿಯಲ್ಲಿ ೨೮ ಲೇಖನಗಳಿವೆ. 'ಬೇಕಿದೆ ನಿಸರ್ಗ ಕಲ್ಯಾಣ ಇಲಾಖೆ' ಎಂಬ ಲೇಖನದಲ್ಲಿ ಜೀವವೈವಿಧ್ಯ ಕುರಿತು ಹೆಗಡೆ ಪ್ರಸ್ತಾಪಿಸುವ ಅಂಶಗಳನ್ನು ಕಾಣಬಹುದು. "ಇಂದು ನಮ್ಮ ದೇಶದಲ್ಲಿ ಅಷ್ಟೋ ಇಷ್ಟೋ ಜೀವಿ ವೈವಿಧ್ಯ ಉಳಿದಿದೆ ಎಂದರೆ ಅದು ಪಾರಂಪರಿಕ ಕೃಷಿ ಚಟುವಟಿಕೆ ಇದ್ದಲ್ಲಿ ಮಾತ್ರ. ಮಲೆನಾಡಿನ ಅಡಿಕೆ ತೋಟದಲ್ಲಿ ನೂರಾರು ಬಗೆಯ ಹಕ್ಕಿ ಪಕ್ಷಿಗಳು ಇಂಚರಿಸುತ್ತವೆ. ಏಡಿ, ಜೇಡ, ಕೀಟ, ಪತಂಗಗಳು ಚಲಿಸುತ್ತಿರುತ್ತವೆ. ಅಸಂಖ್ಯ ಜಾತಿಯ ಗಿಡ ಮೂಲಿಕೆಗಳು, ಔಷಧ ಸಸ್ಯಗಳು, ಗೆಡ್ಡೆ ಗೆಣಸುಗಳು, ಈಗಲೂ ಇವೆ. ಏಕೆಂದರೆ ಇವುಗಳ ಬದುಕಿಗೆ ಬೇಕಾದ ಜಲಮೂಲಗಳ ರಕ್ಷಣೆ ಇದೆ. ಸವಕಳಿಗೆ ತಡೆಹಾಸು ಇದೆ. ಎಲ್ಲಕ್ಕಿಂತ ಹೆಚ್ಚಾಗಿ ನಿಸರ್ಗದ ನಿಗೂಢ ಭಂಡಾರವಿದೆ. ಈ ಕುರಿತ ಜ್ಞಾನ ಇನ್ನೂ ಉಳಿದಿದೆ. ಅದಕ್ಕೆ ತಕ್ಕಂತೆ ವಿಕಾಸಗೊಂಡ ಭಾಷೆ, ಸಂಸ್ಕೃತಿ, ಸಂಪ್ರದಾಯಗಳೂ ಉಳಿದಿದೆ" ಹಾಗೂ "ರಾಷ್ಟ್ರದ ಜೀವವೈವಿಧ್ಯವನ್ನು ಉಳಿಸಿ ಬೆಳೆಸಬೇಕೆಂದರೆ, ಸ್ಥಳೀಯರಿಗೇ ಪ್ರೇರಣೆ ಮತ್ತು ಸೌಕರ್ಯ ನೀಡಬೇಕು. ಬೇಕಿದ್ದರೆ ಒಂದಿಡೀ ಭೂಪ್ರದೇಶವನ್ನು 'ಜೀವಖಜಾನೆಯ ರಕ್ಷಿತ ತಾಣ' ಎಂದು ಘೋಷಿಸಿ, ಸ್ಥಳೀಯರಿಂದಲೇ ಅಲ್ಲಿನ ಜೀವವೈವಿಧ್ಯ ದಾಖಲಾತಿ ಮಾಡಿಸಿ, ಅವರಿಗೆ ವನ್ಯ ರಕ್ಷಣೆಯ ತರಬೇತಿ ನೀಡಿ, ಅವರನ್ನೇ ಗೈಡ್‌ಗಳನ್ನಾಗಿ ಮಾಡಿ, ವನ್ಯರಾಯಭಾರಿಯನ್ನಾಗಿ ಮಾಡಲಿ. ಇವುಗಳ ಉಸ್ತುವಾರಿಗೆ 'ನಿಸರ್ಗ ಕಲ್ಯಾಣ

ಇಲಾಖೆ' ಸ್ಥಾಪಿಸಲಿ ಹಾಗೂ ಇದರ ಹೆಡ್ ಆಫೀಸು ಹಳ್ಳಿಯಲ್ಲಿರಲಿ, ಅಧಿಕಾರಿಗಳು ಅಲ್ಲೇ ವಿಕಾಸಗೊಂಡವರಾಗಿರಬೇಕು. ವರ್ಗಾವಣೆ ಇರಕೂಡದು" [೩೮] ಎಂದಿದ್ದಾರೆ.

ನೆಲಮೂಲ ಪಾರಂಪರಿಕ ಜ್ಞಾನ ಸಂಪತ್ತು ಸಂರಕ್ಷಣೆಯ ಅಗತ್ಯತೆಯಲ್ಲಿ ಜೀವೈವಿಧ್ಯವನ್ನು ರಕ್ಷಿಸುವಂತಹ ಜವಾಬ್ದಾರಿಯನ್ನು ಸ್ಥಳೀಯ ಸಮುದಾಯಗಳಿಗೆ ನೀಡಬೇಕೆನ್ನುವ ಮತ್ತು ಅವರನ್ನು ಆ ಬಗ್ಗೆಯೇ ತರಬೇತುಗೊಳಿಸಬೇಕೆನ್ನುವ ಒತ್ತಾಸೆಯ ಪರಿಸರ ಪ್ರಜ್ಞೆಯನ್ನು ಹೆಗಡೆ ಅವರಲ್ಲಿ ಗುರುತಿಸಬಹುದಾಗಿದೆ. **'ಪ್ರಕೃತಿ ತಾನಾಗಿ ಪೋಷಿಸಿಟ್ಟ ಅದ್ಭುತವೆಂದರೆ ಪಶ್ಚಿಮ ಘಟ್ಟಗಳ ಹಸಿರು ಪಟ್ಟಿ. ಅದನ್ನು ಜಗತ್ತಿನ ಅತ್ಯಪರೂಪದ ೧೩ 'ಜೀವಿವೈವಿಧ್ಯ ತಾಣ'ಗಳಲ್ಲಿ ಒಂದೆಂದು ಗುರುತಿಸಲಾಗಿದೆ. ಅದು ಭಗ್ನವಾಗುತ್ತಿದೆ, ಛಿದ್ರವಾಗುತ್ತಿದೆ, ಅದರಲ್ಲಿನ ಅಪರೂಪದ ಪ್ರಾಣಿ, ಪಕ್ಷಿ, ಸಸ್ಯ ತಳಿಗಳು ನಶಿಸುತ್ತಿವೆ ಎಂದು ಅದೆಷ್ಟೇ ಜೋರಾಗಿ ಕೂಗಿದರೂ ವಿನಾಶದ ಕೆಲಸ ಮುಂದುವರೆಯುತ್ತಲೇ ಇದೆ'** ಎಂಬ ಖಿನ್ನತೆಯ ಧ್ವನಿ ವ್ಯಕ್ತಗೊಳ್ಳುವುದನ್ನು ಲೇಖನದಲ್ಲಿ ಗಮನಿಸಬಹುದು.

'ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು' ಕೃತಿಯಲ್ಲಿ ಲೇಖಕರು ಮುನ್ನುಡಿಯಲ್ಲಿ ಹೇಳುವಂತೆ ನಮ್ಮೆಲ್ಲರ ಭವಿಷ್ಯದ ದೃಷ್ಟಿಯಿಂದ ಹಾಗೂ ಭೂಪರಿಸರದ ದೃಷ್ಟಿಯಿಂದ ಮಹತ್ವದ್ದೆನಿಸಿದ ಈ ದಿನಗಳು ಯಾವುವು, ಅವುಗಳ ಪ್ರಾಮುಖ್ಯವೇನು, ನಾವು ವೈಯಕ್ತಿಕವಾಗಿ ಮತ್ತು ಸಮುದಾಯ ಮಟ್ಟದಲ್ಲಿ ಅವನ್ನು ಹೇಗೆ ಆಚರಿಸಬೇಕು ಎಂಬುದರ ವಿವರಣೆಗಳಿವೆ. ಈ ಭೂಮಿಯ ಮೇಲಿನ ಪ್ರತಿಯೊಬ್ಬ ಪ್ರಜೆಯೂ ತನ್ನ ಹೊಣೆಗಾರಿಕೆಯನ್ನು ನಿಭಾಯಿಸಿದರೆ ಮಾತ್ರ ಮುಂದಿನ ಪೀಳಿಗೆ ಬದುಕುಳಿಯಲು ಸಾಧ್ಯ. ಹಸಿರು ಸಂವರ್ಧನೆ, ಅಕ್ಷಯ ಶಕ್ತಿಮೂಲಗಳ ಬಳಕೆ, ಮಳೆನೀರಿನ ಸಂಗ್ರಹಣೆ, ನಿಸರ್ಗ ಸಂಪನ್ಮೂಲಗಳ ಸದ್ಬಳಕೆ, ಮರುಬಳಕೆಯ ಪರಂಪರಾಗತ ಚಟುವಟಿಕೆಗಳನ್ನು ಆಚರಣೆಗೆ ತರುವ ಹಾಗೂ ಸುಸ್ಥಿರ ಬದುಕಿನ ಮರುಶೋಧದ ಪ್ರಯತ್ನವನ್ನು ಈ ಕೃತಿ ಎತ್ತಿಹಿಡಿಯುತ್ತದೆ. ಮಹತ್ವದ ದಿನಗಳಲ್ಲಿ ಜೀವವೈವಿಧ್ಯಕ್ಕೆ ಮಹತ್ವ ನೀಡುವ ಕೆಲವು ದಿನಗಳನ್ನು ಅವಲೋಕನಕ್ಕೊಳಪಡಿಸಲಾಗಿದೆ. ಇದೇ ಕೃತಿಯಲ್ಲಿ '೨ನೇ ಫೆಬ್ರವರಿಯನ್ನು 'ವಿಶ್ವ ಜೌಗುದಿನ' ಎಂದು ಆಚರಿಸಲಾಗುತ್ತದೆ. ನೀರು ಮತ್ತು ನೆಲ ಎರಡೂ ಮೇಳೈಸಿರುವ ಜೌಗು ಪ್ರದೇಶವನ್ನು ವೈವಿಧ್ಯಮಯ 'ಜೀವ ತಿಜೋರಿ' ಎಂದೇ ಬಣ್ಣಿಸಬಹುದು. ಇದು ಮನುಷ್ಯನ ಕೃತ್ಯಗಳಿಂದಾಗಿ ನಾಶವಾಗುತ್ತಿದೆ. ತರಿಭೂಮಿಯ ಸಂರಕ್ಷಣೆ ಮಾಡಿದರೆ ಏಕಕಾಲಕ್ಕೆ ಸಾವಿರಾರು ಜೀವ ಜಂತುಗಳನ್ನು ರಕ್ಷಣೆ ಮಾಡಿದಂತಾಗುತ್ತದೆ. ಸುತ್ತಲಿನ ನೆಲದಲ್ಲಿ ಅಂತರ್ಜಲ ಸಮೃದ್ಧವಾಗಿರುತ್ತದೆ. ಎಲ್ಲೆಲ್ಲೂ ಹಸಿರು ತುಳುಕಾಡುತ್ತಿರುತ್ತದೆ. ಪರಿಸರ ಹಿತವಾಗಿ ತಂಪಾಗಿರುತ್ತದೆ. ಜೌಗುಭೂಮಿ ಭೂಮಿಯ ತೊಟ್ಟಿಲು ಎಂದೇ ಕರೆಯುತ್ತಾರೆ. ಜಲಚರಗಳು ನಿಧಾನವಾಗಿ ಭೂಜೀವಿಗಳಾಗಿ ವಿಕಾಸ ಹೊಂದಿದ್ದೇ ಇಲ್ಲಿ. ಸದಾ ನೀರಿರುವ ಈ ಜೌಗುತಾಣಗಳಲ್ಲಿ ಜೀವಿಗಳ ಬದುಕಿಗೆ ಬೇಕಿರುವ ಪೋಷಕವಸ್ತುಗಳು ಇದರಿಂದ ದೊರೆಯುತ್ತವೆ. ಏಡಿ, ಮೀನು, ಎರೆಹುಳ, ಜಿಗಣೆಗಳಿಂದ ಹಿಡಿದು ಜಲಚರಗಳು, ಕೀಟಗಳು, ಸಸ್ಯಗಳು, ಪಕ್ಷಿಗಳು, ಸಸ್ತನಿಗಳು ಇಲ್ಲಿ ವಾಸಿಸುತ್ತವೆ. ಆರ್ಥಿಕ ಲಾಭ, ಅಂತರ್ಜಲದ ಬಳಕೆ, ಭೂರಚನೆಯ ಬದಲಾವಣೆ, ರಸಗೊಬ್ಬರಗಳ ಬಳಕೆ ಇವುಗಳ ನಾಶಕ್ಕೆ ಕಾರಣವಾಗಿವೆ' ಎಂದು ಲೇಖಕರು ತಿಳಿಸಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಜೌಗುಭೂಮಿಗಳನ್ನು

‘ರಾಮ್‌ಸರ್ ಸೈಟ್’ ಎಂದು ಕರೆಯಲಾಗಿದ್ದು, ಜಗತ್ತಿನಲ್ಲಿ ಇದುವರೆಗೆ ಒಟ್ಟು ೧೭೧೨ ರಾಮ್‌ಸರ್ ಸೈಟ್‌ಗಳನ್ನು ಗುರುತಿಸಲಾಗಿದೆ. ಭಾರತದಲ್ಲಿ ೧೪ ರಾಜ್ಯಗಳಿಗೆ ಸೇರಿದ ೨೫ ಜೌಗುಭೂಮಿಗಳಿಗೆ ಈ ಅದೃಷ್ಟ ಲಭಿಸಿದ್ದು, ಕರ್ನಾಟಕದಲ್ಲಿ ಇದುವರೆಗೆ ಒಂದೂ ಘೋಷಣೆ ಆಗಿಲ್ಲದಿರುವುದೇ ಗಂಭೀರ ಸಂಗತಿಯಾಗಿದೆ. ಜೀವವೈವಿಧ್ಯ ನೆಲೆಗಳನ್ನು ಜೋಪಾನಮಾಡುವ ದೃಷ್ಟಿಯಿಂದ ಇದರ ಅಗತ್ಯತೆಯಿದೆ ಎಂದೂ, ಗದಗದ ಬಳಿಯ ಮಾಗಡಿ ಕೆರೆ, ಹಾವೇರಿಯ ಹಂಗೇರಿ ಜಲಾಶಯ, ಸೂಳೆಕೆರೆ, ಗುಂಡಾಲು ಜಲಾಶಯ, ಅಘನಾಶಿನಿ ಅಳಿವೆ, ಜಕ್ಕೂರು ಕರೆ ಇವೆಲ್ಲಾ ರಾಮ್‌ಸರ್ ಸೈಟ್ ಆಗುವ ಅರ್ಹತೆ ಹೊಂದಿವೆ(೩೯) ಎಂಬುದನ್ನು ಕೃತಿ ದಾಖಲಿಸುತ್ತದೆ. ಇದನ್ನು ಪುಷ್ಟೀಕರಿಸುವಂತೆ ಡಾ.ಹೆಚ್.ಆರ್. ಕೃಷ್ಣಮೂರ್ತಿ ಅವರು ರಚಿಸಿದ ‘ಕಲ್ಪವೃಕ್ಷದ ಜಾಡುಹಿಡಿದು’ ಕೃತಿಯಲ್ಲಿ ಜೌಗು ಭೂಮಿಯ ಪ್ರಾಮುಖ್ಯತೆಯನ್ನು ವಿವರಿಸುತ್ತಾ ಪ್ರಕೃತಿ ವ್ಯವಸ್ಥೆಯಲ್ಲಿ ಈ ಭೂಮಿಗೆ ನಿರ್ಣಾಯಕವಾದ ಪಾತ್ರವಿದೆ. ಪ್ರವಾಹದ ಸಂದರ್ಭದಲ್ಲಿ ಹೆಚ್ಚಿನ ನೀರನ್ನು ಹಿಡಿದಿಟ್ಟುಕೊಳ್ಳುವ ತರಿಭೂಮಿ ಅಂತರ್ಜಲವನ್ನು ಶ್ರೀಮಂತಗೊಳಿಸುತ್ತದೆ. ಜೀವಸಂಕುಲದ ನೂರಾರು ಜೀವಿಗಳನ್ನು ಪೋಷಿಸಿ ವನ್ಯಜೀವಿಗಳಿಗೆ ನೆಲೆಯಾಗುತ್ತದೆ(೪೦) ಎಂದಿದ್ದಾರೆ. ಜೌಗುಭೂಮಿಗಳು ಜೀವಿಗಳ ಆವಾಸಕ್ಕೆ ಪ್ರಮುಖ ನೆಲೆಗಳಾಗಿರುವುದನ್ನು ಮತ್ತು ಜೌಗುಭೂಮಿಯ ರಕ್ಷಣೆ ಜೀವಿ ಪ್ರಜ್ಞೆಯ ದೃಷ್ಟಿಯಲ್ಲಿ ಮಹತ್ವವಾಗಿರುವುದನ್ನು ಕೃತಿಯಲ್ಲಿ ಗುರುತಿಸಲು ಸಾಧ್ಯವಾಗುತ್ತದೆ.

ವನ್ಯಜೀವಿಗಳ ಮೇಲೆ ಸತತ ನಡೆಯುತ್ತಿರುವ ಅಪರಾಧವನ್ನು ತಡೆಗಟ್ಟಲೆಂದು ವಿಶ್ವಸಂಸ್ಥೆ ಮಾರ್ಚ್ ೩ನ್ನು ಇತ್ತೀಚೆಗೆ ವನ್ಯಜೀವಿ ದಿನವೆಂದು ಘೋಷಿಸಿದೆ. ಜಗತ್ತಿನಾದ್ಯಂತ ೩೫ ಸಾವಿರ ಸಸ್ಯ ಮತ್ತು ಪ್ರಾಣಿಗಳ ವ್ಯಾಪಾರ ವಹಿವಾಟು ನಡೆಯುತ್ತಿದ್ದು ಇದರಿಂದಾಗಿ ಅವುಗಳಾವುವೂ ನಿರ್ವಂಶವಾಗದಂತೆ ಜಾಗೃತಿ ಮೂಡಿಸಬೇಕಾದ ದಿನವಿದು. ‘ವಿಶ್ವ ಅರಣ್ಯ ದಿನ’ ಎಂದರೆ ಕೇವಲ ಸಸಿಗಳನ್ನು ನೆಡಲು ಹೋಗುವ ದಿನವಲ್ಲ. ಅದು ವನ ಸೃಷ್ಟಿಗೆ ಪೂರ್ವ ಸಿದ್ಧತೆಗಳನ್ನು ಆರಂಭಿಸಬೇಕಾದ ದಿನ. ಅರಣ್ಯ ನಿರ್ಮಾಣ ಎಂಬುದು ಸಾಮೂಹಿಕ ಕೆಲಸವೇ ವಿನಾ ಒಬ್ಬೊಬ್ಬರಾಗಿ ತೊಡಗಿಕೊಳ್ಳುವ ಕೆಲಸವಲ್ಲ. ಇದಕ್ಕೆ ನೀವು ಅರಣ್ಯ ತಜ್ಞರಾಗಬೇಕಿಲ್ಲ; ಆದರೆ ಜೀವಜಗತ್ತಿನ ಬಗ್ಗೆ ಕಳಕಳಿ ಮತ್ತು ಕಾಳಜಿ ಇರಬೇಕು. ಛಲ ಇರಬೇಕು. ಮನೆ ಗುಬ್ಬಿಗಳು ಕ್ರಮೇಣ ಕಣ್ಮರೆಯಾಗುತ್ತಿವೆ. ಆಕಾಶದ ರಣಹದ್ದುಗಳು ಹೇಳ ಹೆಸರಿಲ್ಲದಂತಾಗುತ್ತಿದೆ. ಹುಲಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ನವಿಲುಗಳು, ಕರಡಿಗಳು, ಕಬ್ಬೆಕ್ಕುಗಳು, ಉಡಗಳು, ಮುಳ್ಳುಹಂದಿಗಳು, ಚಿಪ್ಪುಹಂದಿಗಳು ಸಾಲು ಸಾಲಾಗಿ ಸಾವಿನ ಮನೆ ಹೊಕ್ಕಿವೆ. ಎಚ್ಚರಿಕೆ ಗಂಟೆಯನ್ನು ಇನ್ನಷ್ಟು ಜೋರಾಗಿ ಮೊಳಗಿಸೋಣವೇ? ಎಂದು ಹೆಗಡೆ ಪ್ರಶ್ನಿಸಿದ್ದಾರೆ. ಈ ಪ್ರಶ್ನೆಯು ಜೀವಿಗಳ ನಾಶಕ್ಕೆ ಮಾನವನ ನಿಸರ್ಗಪ್ರೇರಿತ ಒತ್ತಡವೇ ಕಾರಣ ಎಂಬುದನ್ನು ಅರ್ಥೈಸುತ್ತದೆ. ಇಡೀ ಮನುಕುಲದ ಅಳಿವು ಗುಡ್ಡ ಬೆಟ್ಟಗಳ ಮೇಲೆ ಅವಲಂಬಿಸಿದೆ. ಗುಡ್ಡ ಬೆಟ್ಟಗಳ ಅಳಿವು ಉಳಿವು ನಮ್ಮ ಕೈಯಲ್ಲಿದೆ. ಆದರೆ, ಬೆಟ್ಟಗಳಲ್ಲಿನ ಸಸ್ಯ, ಪ್ರಾಣಿ ಮತ್ತು ಖನಿಜಗಳನ್ನು ದೋಚುತ್ತ ನಾವು ಕೊಳೆ ತುಂಬುತ್ತಿದ್ದೇವೆ. ಲೇಖಕರ ಈ ಹೇಳಿಕೆಗಳನ್ನು ಧನಾತ್ಮಕವಾಗಿ ಸಮರ್ಥಿಸಲು ಸಕಾರಣವೆಂದರೆ ಕೊಡಗು ಮತ್ತು ಕೇರಳದಲ್ಲಾದ ಪ್ರಕೃತಿ ವಿಕೋಪಗಳು. ಜಲಕಂಪನಕ್ಕೆ ಗುಡ್ಡಗಳೇ ಕೊಚ್ಚಿಹೋಗುತ್ತಿದ್ದ ದೃಶ್ಯಗಳು ಭೂಮಿ ಮೇಲೆ ಮತ್ತೊಮ್ಮೆ ಅಂತಹುದೇ ಮಾದರಿಯನ್ನು ಮರುಸೃಷ್ಟಿ ಮಾಡಲು ಮಾನವನಿಂದ ಸಾಧ್ಯವೇ

ಎನ್ನುವಂತಿತ್ತು. ಗುಡ್ಡಗಳನ್ನು ಬಗೆದು ಬಗೆದು ಸಿಗುವ ಎಲ್ಲವನ್ನು ಮನುಷ್ಯ ಈಗಾಗಲೇ ದೋಚಿ ಆಗಿದೆ. ಗುಡ್ಡಗಳಲ್ಲಿ ಭದ್ರವಾಗಿ ನಿಲ್ಲುವ ಶಕ್ತಿ ಕ್ಷೀಣಿಸಲು ಮಾನವನ ಅವ್ಯಾಹತ ನಿಸರ್ಗಮುಖಿ ವಿವೇಕರಹಿತ ಚಟುವಟಿಕೆಗಳೇ ಮೂಲಕಾರಣವಾಗಿವೆ. ಗುಡ್ಡದೊಂದಿಗೆ ಸಬಂಧ ಹೊಂದಿದ ಅದೆಷ್ಟೋ ಜೀವವೈವಿಧ್ಯದ ನೆಲೆಗಳು ಪ್ರಕೃತಿ ವಿಕೋಪದಲ್ಲಿ ಕೊಚ್ಚಿಹೋಗುತ್ತಾ ಕಣ್ಮರೆಯಾದವು. 'ವಿಶ್ವ ಸಾಗರ ದಿನ' ಲೇಖನದಲ್ಲಿ ಸಮುದ್ರ ಸ್ವಾಸ್ಥ್ಯದ ಬಗ್ಗೆ ತಿಳಿಸಲಾಗಿದೆ. ಅಮೆಜಾನ್ ಕಾಡುಗಳನ್ನು ಮೀರಿಸಬಲ್ಲ ಕೆಲ್ಪ್ ಕಾಡುಗಳು ಸಮುದ್ರದ ತಳದಲ್ಲಿವೆ. ನಮ್ಮ ಕಲ್ಪನೆಗೂ ಮೀರಿದ ಲಕ್ಷೋಪಲಕ್ಷ ಜೀವ ಪ್ರಬೇಧಗಳು ಅಲ್ಲಿದ್ದು ದೊಡ್ಡ ಜೀವಿಗಳಷ್ಟೇ ಅಲ್ಲ, ಪ್ರತಿ ಚರದ ಅಂಗುಲದಲ್ಲೂ ಕೋಟ್ಯಾಂತರ ಪಾಚಿ ಜೀವಿಗಳು ಸಮುದ್ರದ ಮಡಿಲಲ್ಲಿವೆ ಎಂಬ ಶುದ್ಧ ವೈಜ್ಞಾನಿಕ ವಿವರಣೆಗಳನ್ನು ಲೇಖಕರು ದಾಖಲಿಸಿದ್ದಾರೆ. ಸಮುದ್ರ ಅಸ್ವಸ್ಥವಾದರೆ ಭೂಮಿಯ ಜೀವ ಮಂಡಲವೇ ಹದಗೆಡುತ್ತದೆ ಎಂದಿದ್ದಾರೆ. ಇಕಾಲಜಿಯ ವಿಶ್ವ ದರ್ಶನದೊಂದಿಗೆ ಪ್ರತಿಯೊಂದು ರಾಷ್ಟ್ರದ ಪ್ರತಿಯೊಬ್ಬರ ಆಚರಣೆಯ ಭಾಗವಾಗಿ ಇಲ್ಲಿನ ಲೇಖನಗಳು ಮೂಡಿಬಂದಿವೆ. ಈ ಕೃತಿಯಲ್ಲಿ ಅಲ್ಲಲ್ಲಿ ಮರೆಬಾರದ ಮಾತುಗಳಿದ್ದು ಒಂದನ್ನು ಅಗತ್ಯಾನುಸಾರ ಇಲ್ಲಿ ತರಲಾಗಿದೆ. ನಾವೀಗ ಬಾಹ್ಯಾಕಾಶ ಯುಗದಲ್ಲಿದ್ದೇವೆ. ಹಾಗೆಂದು ಭೂಮಿಯ ಯುಗವನ್ನು ಮರೆತೇ ಬಿಟ್ಟರೆ ಹೇಗೆ ? ಭೂದಿನ ಎಂದರೆ ಭೂಮಿಯ ಬರ್ಥ್-ಡೇ! ಅಂದರೆ ಅಂದು ಭೂಮಿಯ ಹುಟ್ಟುಹಬ್ಬ. ಅಮ್ಮನ ಹುಟ್ಟುಹಬ್ಬ. ಅಂದು ಅವಳು ತುಂಬ ಸುಂದರವಾಗಿ, ನಗುನಗುತ್ತ ಓಡಾಡುವ ಹಾಗೆ ಭೂಮಾತೆಯ ಮಡಿಲಲ್ಲೂ ಗಿಡಮರ ಹೂಬಳ್ಳಿ ಪಶು-ಪಕ್ಷಿಗಳಿಗೂ ಸಡಗರ-ಸಂಭ್ರಮ. ಹಕ್ಕಿಗಳೆಂದರೆ ಹಾರಾಡುವ ಹೂಗಳು, ಬಾನಂಗಳದ ರಂಗೋಲಿಗಳು ಎಂದೇ ಕವಿಗಳು ವರ್ಣಿಸುತ್ತಾರೆ. ಮಾನವನಿರ್ಮಿತ ಭೌಗೋಳಿಕ ಗಡಿಗಳನ್ನು ಕಡೆಗಣಿಸಿ ಸಲೀಸಾಗಿ ದಾಟುತ್ತಾ ಅವು ಖಂಡಗಳನ್ನು ಬೆಸೆಯುತ್ತವೆ. ತಾವು ಸಾಗಿಬಂದ ಊರಿನ ಪರಿಸರದ ಕತೆಗಳನ್ನು ಹೇಳುತ್ತವೆ. ನಾವು ಈ ಬಾನಾಡಿಗಳಿಗೆ ನಾನಾ ಬಗೆಯ ಕಂಟಕಗಳನ್ನು ಒಡ್ಡಿ ಅವು ತಮ್ಮ ಊರಿನ ಕತೆ ಹೇಳುವ ಮೊದಲೇ ಅವು ಸಾಯುವಂತೆ ಮಾಡುತ್ತಿದೇವೆ. ಜೇನ್ನೊಣಗಳು ನಿರ್ನಾಮವಾದರೆ ನಾವು ಆಹಾರಕ್ಕಾಗಿ ಪರದಾಡಬೇಕಾಗುತ್ತದೆ. ರಣಹದ್ದುಗಳು ಕಣ್ಮರೆಯಾದರೆ ಮಾರಣಾಂತಿಕ ಅಂಥ್ರಾಕ್ಸ್ ಕಾಯಿಲೆ ಹಬ್ಬುತ್ತದೆ. ಇರುವೆ ಸಂತತಿ ನಾಶವಾದರೆ ಬರಗಾಲ ಬೆನ್ನಟ್ಟಿ ಬರುತ್ತದೆ ಎಂಬ ವ್ಯಾಖ್ಯೆಯೊಂದಿಗೆ ಸಂಪಾದಕರು ಲೇಖನ ಆರಂಭಿಸಿದ್ದಾರೆ. ಲೇಖನದ ಅಂತ್ಯದಲ್ಲಿ ಬರುವ ಈ ಸಾಲುಗಳು ಹೆಗಡೆ ಅವರ ಪರಿಸರ ಪ್ರಜ್ಞೆ ಮೇಲೆ ವಿಶಿಷ್ಟ ಬೆಳಕು ಚೆಲ್ಲುತ್ತವೆ. ಅದೆಂದರೆ, **"ಕನ್ನಡ ನಾಡು ಎಂದರೆ ಕೇವಲ ಕನ್ನಡ ಭಾಷೆ, ಹಾಡು-ಹಸೆ, ಜಾನಪದ ಕಲೆ-ಸಂಸ್ಕೃತಿ ಇವಿಷ್ಟೇ ಅಲ್ಲ. ನಮ್ಮ ಸುತ್ತಲಿನ ಸಸ್ಯರಾಶಿ, ಪ್ರಾಣಿಪಕ್ಷಿಗಳು, ಕನ್ನಡನಾಡಿನ ಹೆಮ್ಮೆಯ ಗರಿಗಳೇ ಆಗಿವೆ. ಅವು ಎಂದಿನಂತೆ ತಮ್ಮಷ್ಟಕ್ಕೆ ಮರೆಯಾಗಿರಲಿ; ಆದರೆ ಕಣ್ಮರೆಯಾಗದಿರಲಿ!"**[೪೧] ಎಂಬುದು. ಲೇಖಕರ ಉದ್ಗಾರಗಳಲ್ಲಿ ಕನ್ನಡನಾಡಿನ ಅಖಂಡತೆ, ಸಮಷ್ಟಿ ಹಾಗೂ ಸಮೃದ್ಧತೆ ಎಂದರೆ ಇಲ್ಲಿನ ಸಾಂಸ್ಕೃತಿಕ ಪರಿಸರದಷ್ಟೇ ಗಟ್ಟಿಯಾದ ಪ್ರಾಕೃತಿಕ ಪರಿಸರ. ಜೀವಿಗಳ ಸಮೃದ್ಧತೆಯು ನಾಡಿನ ಶ್ರೀಮಂತಿಕೆಯ ಪ್ರತೀಕ ಎಂಬುದನ್ನು ಇಲ್ಲಿನ ಲೇಖನಗಳಲ್ಲಿ ಅನಾವರಣಗೊಳಿಸುತ್ತಾ, ಸಂರಕ್ಷಣ ತಜ್ಞರಾದ ಜಾನ್ ಮುಯಿರ್ ಅವರ **"ದೇವರು ಈ ಜೀವಿಗಳನ್ನು ಬೆಂಕಿಯಿಂದ ಬಚಾವು ಮಾಡಿದ, ಹಿಮಪಾತದಿಂದ ಬಚಾವು ಮಾಡಿದ. ರೋಗರುಜಿನೆಗಳಿಂದ, ಬರಗಾಲದಿಂದ,**

ಮಹಾಪೂರದಿಂದ ಬಚಾವು ಮಾಡಿದ. ಆದರೆ ಮೂರ್ಖರಿಂದ ಬಚಾವು ಮಾಡಲಾಗದೆ ಸೋಲುತ್ತಿದ್ದಾನಲ್ಲ!" ವ್ಯಾಖ್ಯೆಯೊಂದನ್ನು ನೀಡಿದ್ದಾರೆ. ಕೃತಿಗಳಲ್ಲಿ ಮಹತ್ವದ ದಿನಗಳಿಗೆ ಪೂರಕವಾದ ಹಾಗೂ ವಿಶ್ವ ಪ್ರಧಾನವಾದ ವ್ಯಾಖ್ಯೆಗಳನ್ನು ಕೃತಿಯ ಸಂಪಾದಕರು ಸಂಗ್ರಹಿಸಿ ಸಂದರ್ಭಾನುಸಾರ ನೀಡಿರುವುದನ್ನು ಕಾಣಬಹುದು.

ಪರಿಸರ ಪ್ರಜ್ಞೆಯ ದೃಷ್ಟಿಕೋನದಿಂದ ಲೇಖಕರ ಕೃತಿಗಳನ್ನು ಮತ್ತು ವಿಚಾರಗಳನ್ನು ಅವಲೋಕಿಸದಾಗ ಪ್ರಚಲಿತ ವಿದ್ಯಮಾನಗಳಿಗೆ ವಿಜ್ಞಾನ ಮತ್ತು ವೈಚಾರಿಕ ಲೇಪನವನ್ನು ನೀಡಿ ಆ ಬಗ್ಗೆ ಜನಸಾಮಾನ್ಯರಿಗೆ ಸರಳವಾಗಿ ವಿಷಯ ಅರ್ಥವಾಗುವಂತೆ ಮಂಡಿಸುವುದನ್ನು ಕಾಣಬಹುದು. ಪರಿಸರ ಸಂಬಂಧಿತ ಯಾವ ವಿಚಾರವೂ ನಮ್ಮ ದೃಷ್ಟಿಗೆ ನಿಲುಕದೆ ಕಣ್ಮರೆಯಾಗುತ್ತದೆಯೋ, ಅದನ್ನು ಕಣ್ಣೋಟಕ್ಕೆ ಕಾಣುವಂತೆ ಅದರ ಗಂಭೀರ ಸ್ವರೂಪವನ್ನು ಅರ್ಥೈಸುತ್ತಾರೆ. ಉದಾ: ದಿನಾಂಕ: ೧೪.೦೧.೨೦೧೬ ರಂದು ವಿಜ್ಞಾನ ವಿಶೇಷ ಅಂಕಣದಲ್ಲಿ ಲೇಖಕರು ಮಂಡಿಸಿರುವ **'ತಿಮಿಂಗಿಲಗಳಿಗೆ ಮರಳಶಯ್ಯೆಯೇ ಮರಣಶಯ್ಯೇ'** ಎಂಬ ವಿಚಾರವು ಜೀವಜಂತುವಿಗೆ ಸಂಬಂಧಿಸಿದ್ದು.[೪೨] ತಮಿಳುನಾಡಿನ ಕಡಲಂಚಿನ ತೂತ್ತುಕುಡಿಯಿಂದ ಹಿಡಿದು ತಿರುಚ್ಚೆಂದೂರಿನವರೆಗೆ ೩೦ಕಿ.ಮೀ ಉದ್ದದ ಕಡಲ ತೀರದಲ್ಲಿ ಸುಮಾರು ೫೦-೬೦ ತಿಮಿಂಗಿಲಗಳ ಕೊನೆಯುಸಿರಿನ ಬಗ್ಗೆ ನೀಡಿದ ವಿವರಣೆ ಜೀವಜಾಲದಲ್ಲಾಗುತ್ತಿರುವ ಏರುಪೇರಿನ ಆತಂಕವನ್ನು ಪ್ರತಿಬಿಂಬಿಸುತ್ತದೆ. ಲೇಖಕರು ತಮ್ಮ ಮಂಡನೆಯಲ್ಲಿ ತಿಮಿಂಗಿಲಗಳ ವಿಕಾಸ ಕಥನವನ್ನೇ ಉದಾಹರಣೆ ಸಹಿತ ವಿವರಿಸುತ್ತಾರೆ. ಜೀವಜಂತು ಮತ್ತು ಅವುಗಳ ವೈವಿಧ್ಯತೆಯ ಬಗ್ಗೆ ವಿಚಾರಗಳನ್ನು ಮಂಡಿಸುವಾಗ ಜಾಗತಿಕ ಪರಿಸರ ವ್ಯವಸ್ಥೆಯ ಮಟ್ಟವನ್ನು ಅವಲೋಕಿಸುವುದರಿಂದ ಅವರ ವಿಚಾರಧಾರೆಗಳಿಗೆ ಕಾಲ ಮತ್ತು ದೇಶಗಳ ಬೇಧವಿಲ್ಲದೆ ವಿಶಾಲವ್ಯಾಪ್ತಿ ನೀಡುವುದನ್ನು ಗುರುತಿಸಬಹುದಾಗಿದೆ. 'ಇರುವುದೊಂದೇ ಭೂಮಿ' ಮತ್ತು 'ಪ್ರತಿದಿನ ಪರಿಸರದಿನ' ಹಾಗೂ 'ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು' ಇತ್ಯಾದಿ ಕೃತಿಗಳನ್ನು ಜೀವಿ ಪ್ರಜ್ಞೆಯ ದೃಷ್ಟಿಕೋನದೊಂದಿಗೆ ಅಧ್ಯಯನಕ್ಕೊಳಪಡಿಸಿದಾಗ, ಅಲ್ಲಿ ಉಲ್ಲೇಖಗೊಳ್ಳುವ ಉಷ್ಣವಲಯದ ಕಾಡುಗಳು, ಧ್ರುವ ಪರಿಸರ, ಕಡಲ ತೀರದ ಜೀವಜಂತು ಮತ್ತು ಸಸ್ಯಗಳು, ಕಡಲಾಳಲ್ಲಿನ ಜೀವ ಪ್ರಭೇದಗಳು, ಪಶ್ಚಿಮ ಘಟ್ಟದಲ್ಲಿನ ಜೀವವೈವಿಧ್ಯ ಕುರಿತ ವಿಚಾರಗಳು, ಶರಾವತಿ ಕಣಿವೆಯಲ್ಲಿನ ಜೀವಜಂತುಗಳ ಅಸ್ಥಿತ್ವವನ್ನು ವ್ಯಕ್ತಪಡಿಸುವ ಅಂಶಗಳು, ಜೌಗುಭೂಮಿ ಮತ್ತು ಜೀವಪರಿಸರ, ಮಲೆನಾಡಿನ ಕೀಟ ಪ್ರಭೇದಗಳು, ಪ್ರಚಲಿತ ವಿದ್ಯಾಮಾನಗಳಲ್ಲಿ ಮಾನವನ ಜೈವಿಕ ಚಟುವಟಿಕೆಗಳಿಂದಾಗಿ ನಲುಗುವ ಜೀವ ಜಂತುಗಳ ವಿಚಾರಗಳು ಅವರ ಪರಿಕಲ್ಪನೆ ಆಧಾರಿತ ಜೀವಿ ಪರಿಸರ ಪ್ರಜ್ಞೆಗೆ ಸಾಕ್ಷಿಯಾಗುತ್ತವೆ. ಒಬ್ಬ ವ್ಯಕ್ತಿ ತಾನು ಮತ್ತು ತನ್ನ ವಾಸಸ್ಥಾನದಿಂದ ಹಿಡಿದು, ಅನಂತ ದೂರದವರೆಗೆ ಕಾಣಲ್ಪಡುವ ಪ್ರಾಕೃತಿಕ ಪರಿಸರದಲ್ಲಿನ ಜೀವಿ ಪ್ರಜ್ಞೆಯನ್ನು ವೈಜ್ಞಾನಿಕ ಮನೋಧರ್ಮದ ದೃಷ್ಟಿಯಲ್ಲಿ ಗ್ರಹಿಸಿ ಅವುಗಳನ್ನು ವಿಶ್ಲೇಷಿಸಲು ಸಾಧ್ಯವಿದೆ ಎಂಬುದಕ್ಕೆ ಹೆಗಡೆಯವರ ಪರಿಸರ ಪ್ರಜ್ಞೆ ವಿಶಿಷ್ಟತೆ ಪಡೆದುಕೊಳ್ಳುತ್ತದೆ.

೧೯೭೧ ರಲ್ಲಿ ವಿಶ್ವಶಾಂತಿ ಹಾಗೂ ವಿಶ್ವ ಬಂಧುತ್ವದ ಸಂದೇಶದೊಂದಿಗೆ ಸ್ಥಾಪಿತಗೊಂಡ 'ಗ್ರೀನ್ ಪೀಸ್' ಸಂಸ್ಥೆಯು ಜೀವಜಾಲದ ರಕ್ಷಣೆಗೆ ನಿಂತಿರುವುದನ್ನು ಅನೇಕ ಉದಾಹರಣೆಗಳ

ಸಹಿತ ಮಂಡಿಸುತ್ತಾರೆ. ಸೂರ್ಯಮಂಡಲದ ಏಕೈಕ ಜೀವಂತ ಗ್ರಹದ ಪ್ರಾಣಿ–ಪಕ್ಷಿ–ಜಲಚರಗಳ ನೀಲಿ ಹಸಿರು ಪರಿಸರವನ್ನು ನರಕ ಮಾಡ ಹೊರಟ ಮಹಾನ್ ಶಕ್ತಿಗಳ ವಿರುದ್ಧ ಶಾಂತಿಯುತ ಹೋರಾಟ ಮಾಡುವ ಇವರಿಗೆ ಜನ ಬೆಂಬಲವಿದೆ ಎಂಬುದನ್ನು ದಾಖಲಿಸುತ್ತಾರೆ. 'ರೇನ್‌ಬೋ ವಾರಿಯರ್' ನೌಕೆಯನ್ನು ಒಯ್ದು ಸೀಲ್ ಪ್ರಾಣಿಗಳನ್ನು ಹೊಡೆಯುವ ಯತ್ನದ ಬಗ್ಗೆ 'ಇದು ಗ್ರೀನ್ ಪೀಸ್' ಎಂಬ ಲೇಖನದಲ್ಲಿ ವಿವರಗಳನ್ನು ನೀಡಿದ್ದಾರೆ. 'ಪೈರಿಥ್ರಾಯಿಡ್' ಎಂಬ ಹೆಸರಿನ ಕೀಟನಾಶಕದ ಪ್ರಕರಣವನ್ನು ದಾಖಲಿಸುತ್ತಾ, ಮನುಷ್ಯನಿಗೆ ಅಪಾಯಕಾರಿಯೆಂದೂ ತಿಳಿದು ಜಪಾನಿನವರೂ ನಿಷೇಧಿಸಿದ್ದರು. ಆದರೆ ಮನುಷ್ಯನಿಗೆ ನೇರ ಅಪಾಯವಿಲ್ಲದ ನೂರಾರು ಕೀಟನಾಶಕ, ಕ್ರಿಮಿನಾಶಕಗಳು ಕೇವಲ ಕೀಟಗಳನ್ನಷ್ಟೇ ಕೊಲ್ಲದೆ ಏಡಿ, ಮೀನು, ಎರೆಹುಳುಗಳನ್ನು ಕೊಲ್ಲುತ್ತಿವೆ. ಜೇಡ, ಜೇನ್ನೊಣ, ಪಾತರಗಿತ್ತಿಗಳನ್ನು ಕೊಲ್ಲುತ್ತಿವೆ ಎಂಬ ವಿವರವನ್ನು ಅವರ ಲೇಖನಗಳಲ್ಲಿ ಕಾಣಬಹುದು.

ಜೀವಜಂತುಗಳ ಸ್ಥಿತಿಗತಿಯನ್ನು ಅಧ್ಯಯನಕ್ಕೊಳಪಡಿಸುವುದು ಮಾತ್ರವಲ್ಲದೆ, ಅವುಗಳ ಅಳಿವಿಗೆ ಕಾರಣಗಳನ್ನು ಮತ್ತು ಉಳಿವಿಗೆ ಸಧ್ಯದ ಪರಿಸ್ಥಿತಿಯಲ್ಲಿ ಅನುಸರಿಸಬೇಕಾದ ಸಲಹೆಗಳನ್ನು ಪಟ್ಟಿಮಾಡಿ ಅವಸಾನದಂತಹ ಸಂಧಿಗ್ಧ ಪರಿಸ್ಥಿತಿಯ ಬಗ್ಗೆ ಮಾರ್ಗದರ್ಶಿಸುವಂತಹ ಪರಿಹಾರೋಪಾಯಗಳ ಮನೋಧರ್ಮವನ್ನು ಹೆಗಡೆ ಅವರಲ್ಲಿ ಕಾಣಲು ಸಾಧ್ಯವಿದೆ. ನಾವು ಹಕ್ಕಿ ಪಕ್ಷಿಗಳ ಪರಿಸರವನ್ನು ನಾಶಮಾಡಿ, ಅವುಗಳ ಬದುಕುವ ಹಕ್ಕನ್ನು ಕಸಿದುಕೊಂಡರೆ, ಅವಕ್ಕೆ ನಮ್ಮಂತೆ ಮಾತಾಡಲು ಬರುವುದಿಲ್ಲ. ಅವು ತಮಗಾಗುತ್ತಿರುವ ಅನ್ಯಾಯದ ವಿರುದ್ಧ ಕೋರ್ಟಿಗೆ ಹೋಗಲಾರವು. ಅವಕ್ಕೆ ಓಟಿನ ಹಕ್ಕೂ ಇಲ್ಲ. ಅವು ನಮ್ಮತ್ತ ನಿಸ್ಸಹಾಯಕ ನೋಟ ಬೀರಿ ನಿರ್ಗಮಿಸುತ್ತವೆ. ಕೆಲವೊಮ್ಮೆ ಶಾಶ್ವತವಾಗಿ. ಅವುಗಳ ನಿರ್ಗಮನ ನಮ್ಮ ನಿರ್ಗಮನದ ಮುನ್ನಡಿಯಷ್ಟೆ. ಏಕೆಂದರೆ ಅವು ಬದುಕಲಾರದ ಪರಿಸರದಲ್ಲಿ ನಾವೂ ಬದುಕಲಾಗುವುದಿಲ್ಲ. **'ಮನುಷ್ಯನ ಕೃತ್ಯಗಳಿಂದಾಗಿ ಈ ಜೀವಜಾಲಕ್ಕೆ ಧಕ್ಕೆ ಬಂತೆಂದರೆ, ಮನುಕುಲದ ಸುಸ್ಥಿರತೆಗೇ ಧಕ್ಕೆ ಬಂತೆಂದು ಅರ್ಥ'ಎನ್ನುತ್ತಾರೆ' ವಿಶ್ವಸಂಸ್ಥೆಯ ಪರಿಸರ ಕಾರ್ಯಯೋಜನೆಯ ಕಾರ್ಯಕಾರಿ ನಿರ್ದೇಶಕ ಕ್ಲಾವುಸ್ ಟಾಫರ್**. ಹಾಗೆ ಧಕ್ಕೆ ಬರಬಾರದೆಂಬ ಉದ್ದೇಶದಿಂದಲೇ ಈ ವರ್ಷವನ್ನು ಅಂತರರಾಷ್ಟ್ರೀಯ ಜೀವಿವೈವಿಧ್ಯ ವರ್ಷ, ಎಂದು ಆಚರಿಸಬೇಕೆಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿದೆ. 'ನಾವು ನಿತ್ಯವೂ ನಮ್ಮ ಬದುಕಿನ ಆಧಾರವಾಗಿ ನಿಸರ್ಗವನ್ನೇ ನೆಚ್ಚಿಕೊಂಡಿದ್ದೇವೆ. ಆದರೆ ಅಲ್ಲಿನ ಜೀವಿವೈವಿಧ್ಯವನ್ನು ತೀರ ನಿಷ್ಕಾಳಜಿಯಿಂದ ನೋಡುತ್ತಿದ್ದೇವೆ. ಅಲ್ಲಿ ನಮಗೆ ಕಾಣದಂತೆ ಏನೇ ಹಾನಿಯುಂಟಾದರೂ ಅದು ತುಂಬಲಾರದ ಹಾನಿಯೇ ಆಗಿರುತ್ತದೆ, ಅದರ ಪರಿಣಾಮವಾಗಿ ನಮ್ಮೆಲ್ಲರ ಬದುಕಿನ ಆಧಾರವೂ ಕುಸಿಯುತ್ತ ಹೋಗುತ್ತದೆ' ಎಂದು ಅವರು ಹೇಳುತ್ತಾರೆ. ಜಾಗತಿಕ ಮಟ್ಟದ ಜೀವಿ ಪ್ರಜ್ಞೆಯ ಇಂತಹ ತುರ್ತು ಅಗತ್ಯತೆಯ ಅಂಶಗಳನ್ನು ತಮ್ಮ ಲೇಖನಗಳಲ್ಲಿ ದಾಖಲಿಸುವ ಮೂಲಕ ಜಾಗತಿಕ ಪರಿಸರ ಕಾಳಜಿಯ ಪ್ರಸ್ತುತತೆ ಬಗ್ಗೆ ವಿವಿಧ ಆಯಾಮಗಳಲ್ಲಿ ಹೆಗಡೆ ಅವರು ಅರ್ಥೈಸುತ್ತಾರೆ. 'ಸಮಸ್ತ ಜೀವವೈವಿಧ್ಯದ ಸಮೃದ್ಧತೆಯೇ ಈ ಭೂಮಿಯ ಅಖಂಡ ಸಮೃದ್ಧತೆ ಎನ್ನುವ ಮೂಲಕ ಸಮತೋಲಿತ ಸಂರಕ್ಷಣೆ ಎಲ್ಲರ ಹಕ್ಕು' ಎಂಬುದನ್ನು ಅವರ ಲೇಖನಗಳು/ಬರಹಗಳು ಒತ್ತಿ ಒತ್ತಿ ಹೇಳುತ್ತಿರುತ್ತವೆ.

೫.೫ ಕೃತಿಕಾರರ 'ಜೀವಿ' ಪ್ರಜ್ಞೆಯ ಸಾಮ್ಯತೆ ಹಾಗೂ ಭಿನ್ನತೆಗಳು

ಪ್ರಕೃತಿಯ ಸಮತೋಲದ ವಿಚಾರಗಳು, ಜೀವಸಂಕುಲದ ಕಾಳಜಿಗಳ ನಿರೂಪಣೆಯಲ್ಲಿ ಪ್ರಜ್ಞೆಯ ವಿಚಾರಗಳು ಬಹುತೇಕ ಸಾಮ್ಯತೆ ಹೊಂದುತ್ತವೆ. ಜೀವಿ ಪ್ರಜ್ಞೆಯ ಬರವಣಿಗೆಯಲ್ಲಿ ಇಬ್ಬರೂ ಲೇಖಕರು ಸುತ್ತಲ ಪರಿಸರ, ಜೀವಿಗಳ ಬದುಕು, ಮನುಷ್ಯ ಜೀವಿಯ ಅತಿಯಾಸೆ, ಮೂರ್ಖತನ, ಕುತೂಹಲ ಎಲ್ಲವನ್ನು ಒಟ್ಟುಗೂಡಿಸುತ್ತಾರೆ.

ತೇಜಸ್ವಿ ಅವರ 'ಕರ್ವಾಲೋ', 'ಚಿದಂಬರ ರಹಸ್ಯ' ಕೃತಿಯಲ್ಲಿನ ಪರಿಸರ ಸಮತೋಲನದಂತಹ ಚಿಂತನೆಯಾಗಲಿ ಹಾಗೂ ನಾಗೇಶ ಹೆಗಡೆ ಅವರ 'ಪ್ರತಿದಿನ ಪರಿಸರದಿನ' ಹಾಗೂ 'ಇರುವುದೊಂದೇ ಭೂಮಿ' ಕೃತಿಯ ಕೆಲವು ಅಧ್ಯಾಯಗಳಲ್ಲಿನ ಜೀವಜಾಲದ ಚಿಂತನೆಗಳಾಗಲಿ ಪರಸ್ಪರ ಸಂಬಂಧ ಹೊಂದುವುದನ್ನು ಕಾಣಬಹುದು. ಚಿದಂಬರ ರಹಸ್ಯದಲ್ಲಿ ತೇಜಸ್ವಿಯವರು ಕೆಸರೂರಿನ ಸಸ್ಯದ ಅವನತಿ ಕುರಿತಂತೆ **"ಇಡೀ ವಿಶ್ವವೇ ಈ ರೀತಿ ಒಂದಕ್ಕೊಂದಕ್ಕೆ ಬಿಗಿದುಕೊಂಡಿರೊ ಸಮತೋಲನದಲ್ಲೆ ಹೆಣೆದಿರುವ ಬಲೆ"** ಎಂದು ವಿವರಿಸುವ ಅಂಶಗಳೂ ಹಾಗೂ ಜೀವವೈವಿಧ್ಯ ನಾಶದ ಬಗ್ಗೆ ಇದೇ ಅಧ್ಯಾಯದಲ್ಲಿ ದಾಖಲಿಸಿರುವ ನಾಗೇಶ್ ಹೆಗಡೆರವರ **"ಈ ಜೀವಜಾಲದಲ್ಲಿ ಒಂದು ಜೀವಿ ನಿರ್ವಂಶವಾದರೂ ಒಂದು ಕೊಂಡಿ ತಪ್ಪಿದಂತಾಗಿ, ಅಲ್ಲಿನ ನೇಯ್ಗೆ ಏರುಪೇರಾಗುತ್ತದೆ. ಮತ್ತೆ ಅಲ್ಲಿ ಬೇರೊಂದು ತೇಪೆ ಬಂದು ಸೇರಿಕೊಳ್ಳಲು ಎಷ್ಟು ವರ್ಷಗಳಾಗುತ್ತವೊ? ಸೇರಿಕೊಳ್ಳುತ್ತದೋ ಇಲ್ಲವೊ?"** ಎಂಬ ಪರಿಸರ ಸಮತೋಲಿತ ವಿಚಾರಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದಾಗ ಪರಸ್ಪರ ಪೂರಕವಾಗಿ ವ್ಯಕ್ತಗೊಂಡಿರುವುದನ್ನು ಗುರುತಿಸಬಹುದಾಗಿದೆ. ಈ ಇಬ್ಬರ ಕೃತಿಯಲ್ಲಿನ ಜೀವಿ ಪ್ರಜ್ಞೆಯ ಆಶಯವು ಜೀವಜಾಲಕ್ಕೆ ಪೂರಕವಾಗಿ ಒಂದೇ ದಿಕ್ಕಿನಲ್ಲಿ ಚಲಿಸುತ್ತಿದೆ ಎಂಬ ಅಭಿಪ್ರಾಯ ಮೂಡಿಬರುವುದು.

ತೇಜಸ್ವಿಯಂತಹ ಸಾಹಿತಿಯಾಗಲಿ ಮತ್ತು ನಾಗೇಶ ಹೆಗಡೆ ಅವರಂತಹ ಪರಿಸರ ತಜ್ಞರಾಗಲಿ ಕೃತಿಗಳಲ್ಲಿ ಪ್ರಕಟಪಡಿಸುವ ಜೀವಜಾಲದ ಸಮತೋಲನದಂತಹ ವಿಚಾರಗಳು ಜೀವಿಪ್ರಜ್ಞೆಯಲ್ಲಿ ವೈಜ್ಞಾನಿಕ ದೃಷ್ಟಿಕೋನದ ಸಾಮ್ಯತೆಯನ್ನು ಬಿಂಬಿಸುತ್ತವೆ. ಸೃಜನಾತ್ಮಕ ಕೃತಿಗಳಲ್ಲಿ ಇವು ಕಾದಂಬರಿಯ ಪಾತ್ರಗಳ ನಡುವಿನ ಸನ್ನಿವೇಶಗಳಾಗಿಯೂ, ಸೃಜನೇತರ ಕೃತಿಗಳಲ್ಲಿ ಇವು ಪರಿಕಲ್ಪನೆಯನ್ನು ವಿವರಿಸುವ ಸನ್ನಿವೇಶಗಳ ಭಾಗವಾಗಿಯೂ ಪ್ರಕಟಗೊಳ್ಳುತ್ತವೆ. ಇವುಗಳ ನಿರೂಪಣೆಯಲ್ಲಿ ತೇಜಸ್ವಿ ಅವರದು ಸರಳ ಸಹಜವೆನಿಸುವ ಸಾಹಿತ್ಯಿಕ ಭಾಷೆಯಾದರೆ, ಹೆಗಡೆ ಅವರದ್ದು ವೈಜ್ಞಾನಿಕ ಶುದ್ಧತೆಯನ್ನು ಒಳಗೊಳ್ಳುವ ಭಾಷೆಯಾಗಿ ಗುರುತಿಸಲ್ಪಡುತ್ತದೆ.

ತೇಜಸ್ವಿ ಅವರ ಕರ್ವಾಲೋ ಕೃತಿಯನ್ನು ಜೀವವೈವಿಧ್ಯ ಮತ್ತು ಜೀವಪ್ರಭೇಧದ ದೃಷ್ಟಿಯಿಂದಾಗಿ ಪರಿಶೀಲಿಸಿದಾಗ, ಜೀವಜಂತುಗಳ ಲೋಕದಲ್ಲಿ ಏಕಾಣುಕೋಶ ಜೀವಿಯಿಂದ ಬಹುಕೋಶ ಜೀವಿಗಳೆಡೆಗೆ ವಿಕಾಸವು ಸಾಗುತ್ತಿದ್ದಂತೆ ಜಗಿದು ಹಾರುವಂತಹ ಬಲಾಢ್ಯ ಡೈನೋಸಾರ್‌ಗಳೆಂಬ ಜೀವಪ್ರಬೇಧವು ಈ ಭೂಮಿಯಲ್ಲಿ ಅಸ್ಥಿತ್ವವನ್ನು ಪಡೆದಿತ್ತು ಎಂಬುದನ್ನು ಹೇಗೆ ಕಡೆಗಣಿಸಲಾಗುವುದಿಲ್ಲವೊ, ಅದೇ ರೀತಿಯಲ್ಲಿ ಕರ್ವಾಲೋ ಕಾದಂಬರಿಯಲ್ಲಿ

ಕಾಣಸಿಗುವ **"ಈ ಭೂಮಿ ಮೇಲೆ ಬದುಕೋಕೆ ನಾಲಾಯಕ್ ಎನಿಸಿದಾಗ ಎಲ್ಲವೂ ನಿರ್ಗಮಿಸಲೇಬೇಕು ಹಾಗೂ ನಾಮಾವಾಶೇಷಗೊಳ್ಳಲೇಬೇಕು. ಅದರ ಅವಶೇಷ ಮತ್ತು ಸ್ಮಶಾನದಿಂದಲೇ ಮತ್ತೊಂದು ಜೀವಚೈತನ್ಯ ಪುಟಿಯುತ್ತದೆ"** ಎನ್ನುತ್ತಾರೆ ತೇಜಸ್ವಿ, ಹಾಗೆಯೇ, ಪ್ರತಿದಿನ ಪರಿಸರದಿನ ಕೃತಿಯಲ್ಲಿನ "೧೫ಕೋಟಿ ವರ್ಷಗಳಿಂದ ಭೂಮಿಯ ಮೇಲಿದ್ದ ಡೈನೋಸಾರ್‌ಗಳು ಹಠಾತ್ತಾಗಿ ಅಳಿದುಹೋದವು.... 'ಪ್ಲೈಯಿಸ್ಟೋಸೀನ್ ಮಹಾ ಮಾರಣಯುಗ' ಎಂದು ಹೇಳುತ್ತಲೇ, ಇಂಟೆರ್ ಗ್ಲೇಸಿಯಲ್ ಅವಧಿಯಲ್ಲಿ ಜೀವ ಚಿಗುರುತಿತ್ತು" ಎಂಬುದನ್ನು ಒಂದು ಕಡೆ ನಾಗೇಶ ಹೆಗಡೆಯವರು ಸಹ ಪ್ರಸ್ತಾಪಿಸುತ್ತಾರೆ. ಈ ಇಬ್ಬರೂ ಪ್ರಸ್ತಾಪಿಸುವ ಸಾಲುಗಳು ಸೃಷ್ಟಿಯಲ್ಲಿ ಜೀವವಿಕಾಸದ ಮುಂದಿನ ತುದಿ ಎಲ್ಲಿ ಮತ್ತು ಹೇಗೆ ಅಸ್ಥಿತ್ವ ಪಡೆದುಕೊಳ್ಳುವುದು ಎಂಬುದರ ಚಿಂತನೆಯೊಂದಿಗೆ ಪ್ರಕೃತಿಯಲ್ಲಿ ಜೀವಜಂತುವಿನ ಸಹಸಂಬಂಧದ ಪ್ರಾಮುಖ್ಯತೆಯನ್ನು ಮನಗಾಣುವಂತೆ ಮಾಡುತ್ತವೆ.

ಕೃತಿಕಾರರ ಕೃತಿಗಳಲ್ಲಿ ಉಲ್ಲೇಖಗೊಂಡ ತೇಜಸ್ವಿ ಅವರ **'ಸ್ಮಶಾನದಿಂದಲೇ'** ಹಾಗೂ ನಾಗೇಶ ಹೆಗಡೆ ಅವರ **'ಮಹಾ ಮಾರಣಯುಗದ ನಂತರದ ಅವಧಿಯಲ್ಲಿ'** ಎಂಬ ಪದ ಬಳಕೆಯನ್ನು ಸೂಕ್ಷ್ಮವಾಗಿ ಅವಲೋಕಿಸಬೇಕಾಗುತ್ತದೆ. ಸೃಜನಾತ್ಮಕ ಕೃತಿಯಲ್ಲಿ ಅಂದರೆ ಕಾದಂಬರಿ ಪ್ರಕಾರದ ಸಾಹಿತ್ಯ ಪ್ರಯೋಗದಲ್ಲಿ **'ಸ್ಮಶಾನ'** ಎಂಬುದು ಸರಳ ಮತ್ತು ಸಹಜವೆನಿಸುವ ಭಾಷಾ ಬಳಕೆಯನ್ನು ಪಡೆದುಕೊಳ್ಳುತ್ತಾ ವೈಜ್ಞಾನಿಕ ಸತ್ಯವನ್ನು ಅರ್ಥೈಸಲು ಯತ್ನಿಸುತ್ತದೆ. ಅದೇ ಸೃಜನೇತರ ಕೃತಿಯ ಸಾಹಿತ್ಯ ಪ್ರಕಾರದಲ್ಲಿ **'ಮಾರಣಯುಗ'** ಎಂಬ ಪದ ಬಳಕೆಯು ವೈಜ್ಞಾನಿಕ ಭಾಷೆಯಲ್ಲಿ ಪರಿಕಲ್ಪನೆಯನ್ನು ಅರ್ಥೈಸಲು ಮುಂದಾಗುತ್ತದೆ. ಇಬ್ಬರ ಗ್ರಹಿಕೆಯ ಸಾಧಾರಣ ಧರ್ಮವೆಂದರೆ ಸೃಷ್ಟಿಯಲ್ಲಿ ಯಾವುದೇ ಜೀವ ವಿಕಾಸದ ಮರು ಚೈತನ್ಯವು ಅವನತಿ ಅಥವಾ ಅವಸಾನದಿಂದಲೇ ಅಥವಾ ಮರಣ/ಸಾವಿನ ನಂತರದಲ್ಲೇ ಮತ್ತೊಂದರ ಹೊಸ ಸೃಷ್ಟಿಗೆ ಕಾರಣವಾಗುತ್ತದೆ ಎಂಬುದು.

ಇಬ್ಬರೂ ಕೃತಿಕಾರರು ವಿಕಾಸವಾದದ ಸೈದ್ಧಾಂತಿಕ ಆಶಯದ ಅರ್ಥೈಸುವಿಕೆಗೆ ತುಡಿಯುತ್ತಿರುವುದನ್ನು ಹಾಗೂ ಅದನ್ನು ಓದುಗನಿಗೆ ಮುಟ್ಟಿಸಲು ತಮ್ಮದೇ ರೀತಿಯ ಸಾಹಿತ್ಯ ಪ್ರಕಾರಗಳಿಗೆ ಹತ್ತಿರವಾಗಿರುವುದನ್ನು ಬಹುಮುಖ್ಯವಾಗಿ ಗಮನಿಸಬಹುದಾಗಿದೆ. ಈ ಇಬ್ಬರಲ್ಲೂ ಜೀವಜಂತುಗಳಿಗೆ ಹತ್ತಿರವಾಗುವ ಜೀವವಿಕಾಸವಾದದ ತಾತ್ವಿಕತೆಯ ಒಳನೋಟಗಳು ಸುಪ್ತವಾಗಿ ಕೆಲಸ ಮಾಡುವುದನ್ನು ಅವರ ಅಭಿವ್ಯಕ್ತಿಗಳಲ್ಲಿ ಗಮನಿಸಬಹುದು. ಚಾರ್ಲ್ಸ್ ಡಾರ್ವಿನ್ನನ ಸಿದ್ಧಾಂತ ಕುರಿತಂತೆ ಆರಿಜನ್ ಆಫ್ ಸ್ಪೀಷೀಸ್‌ನಲ್ಲಿ ಪ್ರಸ್ತಾಪವಾದ ವಿಕಾಸವಾದದ ಸಿದ್ಧಾಂತ ನಿಯಮವಾದ 'ಉಳಿವಿಗಾಗಿ ಹೋರಾಟ' ಪ್ರಜ್ಞೆ ಕೃತಿಗಳಲ್ಲಿ ಬರುವ ಜೀವಿ ಪ್ರಜ್ಞೆ ಪ್ರಸ್ತಾಪಗಳಿಗೆ ಬಲವಾಗಿದ್ದು, ಇಬ್ಬರೂ ಅದನ್ನು ತಮ್ಮ ತಮ್ಮ ಕಲಾಪ್ರತಿಮೆಗಳಲ್ಲಿ ಸನ್ನಿವೇಶಾನುಸಾರ ಸಮನ್ವಯಿಸುತ್ತಾರೆ. ಪಶ್ಚಿಮದ ವೈಜ್ಞಾನಿಕ ಆವಿಷ್ಕಾರಗಳ ಪ್ರೇರಣೆಯಲ್ಲಿ ತನ್ನ ವಿಕಾಸವಾದದ ಸಂಶೋಧನೆಯ ಮೂಲಕ ೧೯ನೇ ಶತಮಾನದಲ್ಲಿ ವಿಜ್ಞಾನ ಜಗತ್ತನ್ನೇ ಅಚ್ಚರಿಗೊಳಿಸಿದ ಚಾರ್ಲ್ಸ್ ಡಾರ್ವಿನ್ನನು ಇಬ್ಬರಿಗೂ ಹೆಚ್ಚು ಹತ್ತಿರವಾಗುತ್ತಾನೆ ಎಂಬ ಫಲಿತ ದೊರಕುತ್ತದೆ.

ಇಬ್ಬರೂ ಜೀವಜಾಲದ ಬೆಸುಗೆಯನ್ನು ನೋಡಿರುವ ಬಗೆಯೂ ನಿರೂಪಣೆಗಳು ಬಹುತೇಕ ಸಾಮ್ಯವಾಗಿದ್ದು, ಈ ಉದಾಹರಣೆಗಳು ಅವುಗಳನ್ನು ಹೆಚ್ಚು ಪುಷ್ಟೀಕರಿಸುವವು. ವಿಸ್ಮಯ-೧ರಲ್ಲಿ ತೇಜಸ್ವಿಯವರು ಉಲ್ಲೇಖಿಸಿರುವ **"ಸಜೀವ ವಿಶ್ವದ ಜೀವಸಮಸ್ತವೂ ಪರಸ್ಪರ ಸಂಬಂಧದ ತಂತುಜಾಲದ ಬಲೆಯಲ್ಲಿ ವಿಕಾಸಗೊಳ್ಳುತ್ತಿದೆ. ಇಕಾಲಜಿ ಎಂದರೆ ಮಾನವನ ಎಲ್ಲಾ ಕ್ಷೇತ್ರದ ತಿಳುವಳಿಕೆಗಳ ಕ್ರೋಡೀಕರಣ. ಜೀವಜಾಲದ ಅನ್ಯೋನ್ಯ ಸಂಬಂಧಗಳ ಅದೃಶ್ಯ ತಂತುಗಳನ್ನು ಅರಿಯುವುದು"** ಎಂಬ ವಿವರಣೆಗಳು ಪರಿಸರದ ಸಮತೋಲಿತ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತವೆ. 'ಇರುವುದೊಂದೇ ಭೂಮಿ'ಯಲ್ಲಿ **"ಜೀವಜಾಲದ ಸೂಕ್ಷ್ಮ ತಂತುಗಳನ್ನು ಪರೀಕ್ಷಿಸಿ ಯಾವುದು ಭದ್ರ, ಯಾವುದು ಅಸ್ಥಿರವೆಂಬುದನ್ನು ಹೇಳಬಲ್ಲ ಪರಿಣಿತರೇ ಕೈಕಟ್ಟಿ ಕೂತರೆ ನಾವು ಜೀವಿಸುವ ವಾತಾವರಣ ಇನ್ನಷ್ಟು ಬಿಗಡಾಯಿಸಬಹುದು. ನಮಗೆ ಗೊತ್ತಿಲ್ಲದೇ ಯಾವುದೋ ಸಸ್ಯವನ್ನೋ ಪ್ರಾಣಿಯನ್ನೋ ಹೊಸಕಿ ಹಾಕಿದರೆ ಅನಿರೀಕ್ಷಿತ ಅಪಾಯ ನಾವು ಎದುರಿಸಬೇಕಾಗುವುದು"** ಎಂದು ಹೆಗಡೆ ಅವರು ಜೀವಜಾಲದ ಮಹತ್ವವನ್ನು ವಿವರಿಸುತ್ತಾರೆ. ಮುಂದುವರೆದು ಇಕಾಲಜಿ ಕಲ್ಪನೆ ಇತ್ತೀಚಿನದೇನಲ್ಲ. ಜೀವಜಾಲದ ಬಗ್ಗೆ ನಮಗಿರುವ ಅಸಡ್ಡೆಯು ಮಾತ್ರ ಇತ್ತೀಚಿನದು ಎಂಬ ಅವರ ಹೇಳಿಕೆಗಳನ್ನು ಕೃತಿಯಲ್ಲಿ ಕಾಣಬಹುದು. ಪರಿಸರದ ಮುಖ್ಯ ಕಾಳಜಿ ಎಂದರೆ ಭೂಮಿಯ ಮೇಲಿನ ಸಮಸ್ತ ಜೀವಿಯೂ ಬದುಕುವುದು ಮತ್ತು ಪರಸ್ಪರ ಹೊಂದಾಣಿಕೆಯೊಂದಿಗೆ ಸಹಜವಾದ ಜೈವಿಕ ಪ್ರಕ್ರಿಯೆಯನ್ನು ಗಟ್ಟಿಗೊಳಿಸುವುದೇ ಆಗಿದೆ ಎಂಬುದನ್ನು ಇಬ್ಬರೂ ಲೇಖಕರು ತಮ್ಮ ತಮ್ಮ ಕಲಾಪ್ರಕಾರಗಳಲ್ಲಿ ಅನುಗಮನದಿಂದ ನಿಗಮದ ಕಡೆಗೆ ಮತ್ತು ನಿಗಮನದಿಂದ ಅನುಗಮನದ ಕಡೆಗೆ ಎಂಬಂತೆ ಉದಾಹರಣೆಗಳ ಸಹಿತ ನಿರೂಪಿಸುತ್ತಾ ಬಲವಾಗಿ ಅದನ್ನು ಮಂಡಿಸಿದ್ದಾರೆ ಎಂಬುದನ್ನು ಕಂಡುಕೊಳ್ಳಬಹುದು.

ಇಕಾಲಜಿಯ ಮಹತ್ವವನ್ನು ಅರಿತವರು ಜೀವಿಗಳ ಬೆಳವಣಿಗೆಗೆ ಮುಖ್ಯವಾದ ಭೂ ಸ್ವರೂಪಗಳ ಪ್ರಾಮುಖ್ಯತೆಯನ್ನು ಸುಲಭವಾಗಿ ಗುರುತಿಸಬಲ್ಲರು. ಹಾಗೆ ನೋಡಿದಲ್ಲಿಯೂ ಈ ಇಬ್ಬರೂ ಮತ್ತಷ್ಟು ಹತ್ತಿವಾಗುವುದು ಅಚ್ಚರಿ ಮೂಡಿಸುತ್ತದೆ. ಉದಾಹರಣೆಗೆ ನಾಗೇಶ ಹೆಗಡೆ ಅವರು 'ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು' ಕೃತಿಯ 'ಜೌಗುಭೂಮಿ' ಶೀರ್ಷಿಕೆ ಲೇಖನದಲ್ಲಿ ಅದರ ಮಹತ್ವ, ರಕ್ಷಣೆ ಹಾಗೂ ಆ ದಿನದ ಆಚರಣೆಯ ಅಗತ್ಯತೆ ಬಗ್ಗೆ ವಿವರಿಸುತ್ತಾ, **"ನೀರು ಮತ್ತು ನೆಲ ಎರಡೂ ಮೇಳೈಸಿರುವ ಜೌಗು ಪ್ರದೇಶವನ್ನು ವೈವಿಧ್ಯಮಯ 'ಜೀವ ತಿಜೋರಿ' ಎಂದೇ ಬಣ್ಣಿಸಬಹುದು. ಜೌಗುಭೂಮಿಯನ್ನು ಭೂಮಿಯ ತೊಟ್ಟಿಲು ಎಂದೇ ಕರೆಯುತ್ತಾರೆ. ಜಲಚರಗಳು ನಿಧಾನವಾಗಿ ಭೂಜೀವಿಗಳಾಗಿ ವಿಕಾಸ ಹೊಂದಿದ್ದೇ ಇಲ್ಲಿ"** ಎನ್ನುತ್ತಾರೆ. ತೇಜಸ್ವಿ ಅವರು ಅದೇ ಜೌಗುಭೂಮಿಯ ಮಹತ್ವವನ್ನು ಮಾಯಾಲೋಕ ಕೃತಿಯಲ್ಲಿ ತಂದಿದ್ದಾರೆ. ಹಕ್ಕಿಪಿಕ್ಕಿಯವರ ಹುಂಡುಕೋಳಿ ಬೇಟೆಯ ಬಗ್ಗೆ ಪ್ರಸ್ತಾಪಿಸುವಾಗ **"ಜೌಗಿನಲ್ಲಿ ಅವನ್ನು ನೋಡಬಹುದು ಎಂದು ನಾನು ಎಣಿಸಿದ್ದೆ. ನನ್ನ ಊಹೆ ಸುಳ್ಳಾಯಿತು. ಜೌಗಿನ ಆಕರ್ಷಣೆಗೆ ಅವುಗಳು ಬೇರೆಲ್ಲಿಂದಲೋ ಬರಬಹುದು ಎಂದುಕೊಂಡಿದ್ದೆ. ಅನೇಕ ದಿನಗಳು ಕಳೆದರೂ ಅವು ಬರಲಿಲ್ಲ. ಆ ಪರಿಸರದಲ್ಲಿ ಅವು ನಿಜಕ್ಕೂ ನಿರ್ನಾಮವಾಗಿದ್ದವು"** ಎನ್ನುತ್ತಾ, ಮುಂದುವರೆದಂತೆ **"ಜಗತ್ತಿನಲ್ಲಿ ಯಾವುದೂ ಜಡವಲ್ಲ, ಜೌಗಿನ ಪರಿಸರದಲ್ಲಿ ಕೆಲವು ಮಹತ್ತರ ಬದಲಾವಣೆಗಳಾದವು"**[೧೩] ಎನ್ನುತ್ತಾರೆ. ನಾಗೇಶ ಹೆಗಡೆ ಮತ್ತು ತೇಜಸ್ವಿ ಅವರ ಜೌಗುಭೂಮಿ

ಕುರಿತ ಬರಹಗಳಲ್ಲಿ ಸಾಮ್ಯತೆ ಇದ್ದರೂ ತೇಜಸ್ವಿ ಬರಹಗಳಲ್ಲಿ ಹೆಗಡೆ ಅವರಂತೆ ಪರಿಕಲ್ಪನೆಗಳಲ್ಲಿ ಪ್ರಕರತೆಯನ್ನು ಕಾಣಲಾಗುವುದಿಲ್ಲ ಅಷ್ಟೇ. ಆದರೆ ಆಶಯದ ಪ್ರಜ್ಞೆಯು ಸಾಮ್ಯವಾಗಿರುವುದನ್ನು ಗುರುತಿಸಬಹುದು.

ಹಕ್ಕಿಗಳು, ಕೀಟಗಳು, ಸಸ್ಯಪ್ರಪಂಚ, ಪ್ರಾಣಿಪ್ರಂಪಚ ಹಾಗೂ ಸ್ಥಳೀಯ ಸಾಂಸ್ಕೃತಿಕ ಪರಿಸರದ ಪಾತ್ರಗಳ ಸೃಷ್ಟಿ ಮತ್ತು ಪರಿಸರದ ಜೀವನಾಡಿಯಾಗಿ ಬರುವ ಆಗುಹೋಗುಗಳ ನಿರೂಪಣೆಯಲ್ಲಿ 'ಪರಿಸರದ ಕತೆ' ಮತ್ತು 'ಹಳ್ಳಿಮುಕ್ಕ ಎಲ್ಲೆಲ್ ಹೊಕ್ಕ' ಕೃತಿಗಳು ತುಸು ಹತ್ತಿರವಾಗಬಲ್ಲವು. ಅಲ್ಲಿ ತೇಜಸ್ವಿ ಅವರ ನಾಯಿ ಹೆಸರು ಕಿವಿ. ಇಲ್ಲಿ ಹೆಗಡೆ ಅವರ ನಾಯಿಯ ಹೆಸರು ಕಾಫಿ. ಹೆಗಡೆ ಅವರ ಈ ಕೃತಿಯ ಭಾಷೆ ಪರಿಸರದ ಕತೆ ಕೃತಿಕಾರರಾದ ತೇಜಸ್ವಿ ಅವರಿಗಿಂತಲೂ ಸರಳವಾಗಿರುವುದನ್ನು ಗಮನಿಸಬಹುದು. ಹಾಸ್ಯ ಪ್ರಜ್ಞೆಯನ್ನು ಇಬ್ಬರೂ ಕಾಪಾಡಿಕೊಂಡಿದ್ದಾರೆ. ಇಬ್ಬರೂ ಲೇಖಕರು ಕೆಲವು ಸಂದರ್ಭಗಳಲ್ಲಿ ಇಕ್ಕಟ್ಟಿಗೆ ಅಥವಾ ಪೇಚಿಗೆ ಸಿಲುಕಿಕೊಳ್ಳುವುದನ್ನು ಈ ಕೃತಿಗಳಲ್ಲಿ ಗುರುತಿಸಬಹುದಾಗಿದೆ.

ನಮ್ಮ ಪೂರ್ವಜರು ಅನುಸರಿಸಿಕೊಂಡು ಬಂದಂಥ ಪರಿಸರದ ಪರಿಕಲ್ಪನೆ ಬದಲಿಸದೆ, ಪ್ರಕೃತಿಯನ್ನು ರಕ್ಷಿಸುವಲ್ಲಿ ನಾವು ಕಳೆದುಕೊಂಡಿರುವ ಅಖಂಡ ದೃಷ್ಟಿಯನ್ನು ಪುನಃ ಪಡೆಯುವುದು ಅತ್ಯವಶ್ಯ. ಪ್ರಕೃತಿಯಲ್ಲಿನ ಅಸಂಖ್ಯ ಜೀವರಾಶಿಗಳ ಪರಸ್ಪರಾವಲಂಬನೆ ಮತ್ತು ಪರಸ್ಪರಾಧಾರ ತತ್ವಗಳ ಸೂಕ್ಷ್ಮತೆಯ ಅರಿವು ಈಗೀಗ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕಂಡುಬರುತ್ತಿದೆ. ಯಾವುದೇ ಮೂಲೆಯಲ್ಲಿ ಯಾವುದೊಂದು ಜೀವಸಂಕುಲಕ್ಕೆ ಕುತ್ತು ಬಂದರೂ ಪ್ರಕೃತಿಯ ಎಲ್ಲ ಭಾಗಗಳೂ ಪ್ರತಿಸ್ಪಂದಿಸುವುವು. ಪ್ರಕೃತಿಯ, ಸೃಷ್ಟಿಯ ಸಮತೋಲನ ರಹಸ್ಯ ದಿಙ್ಮೂಡಗೊಳಿಸುವಂತಹುದು. ವಿಶ್ವಾತ್ಮಕ ಪ್ರಕೃತಿಯು ಅದರ ಸಂಖ್ಯಾತೀತ ರೂಪಭೇದಗಳನ್ನು ಹಾಗೂ ಅವುಗಳ ಗೋಚರ ಸ್ಥಿತಿಗಳನ್ನು ಏಕಸೂತ್ರದಲ್ಲಿ ನಿಯಂತ್ರಿಸುತ್ತಿದೆ. ಈ ಸ್ಪಷ್ಟ ನಿಯಮವನ್ನು ಭ್ರಷ್ಟಗೊಳಿಸಿದರೆ ಪರಿಸರವು ಕ್ಷಯಿಸುವುದು, ಒಂದು ಅಂದಾಜಿನ ಪ್ರಕರ, ಪರಿಸರದ ಜೈವಿಕ ರಾಶಿಯಲ್ಲಿ ವರ್ಷ ಪ್ರತಿ ೧೫ ರಿಂದ ೨೫ ಸಾವಿರ ಉಪಜಾತಿಗಳು ನಾಶವಾಗುತ್ತಿವೆಯೆಂದು ಹೇಳಲಾಗಿದೆ; ಇದಕ್ಕೆ ಮುಖ್ಯ ಕಾರಣ ಅರಣ್ಯ ನಾಶ. ಪ್ರತಿಯೊಂದು ಪರಿಸರ ವ್ಯವಸ್ಥೆಗೂ ತನ್ನದೇ ಆದ ಪರಂಪರೆಯಿದೆ. ಈ ಪರಂಪರೆಯ ಕಟ್ಟಕಡೆಯ ಹಂತವೇ ಪರಾಕಾಷ್ಠೆ (Climax). ಬೆತ್ತಲೆಯ ಬಂಡೆಯಿಂದ ಪರಾಕಾಷ್ಠೆಯನ್ನು ಮುಟ್ಟಿದ ಕಾಡಿನ ಪರಂಪರೆಯನ್ನು ನಾವು ನೋಡಿದ್ದೇವೆ. ಪರಾಕಾಷ್ಠೆಯನ್ನು ಮುಟ್ಟಿದ ಪರಿಸರ ವ್ಯವಸ್ಥೆ ಅತ್ಯಂತ ಸ್ಥಿರ ಸ್ಥಿತಿಯಲ್ಲಿರುತ್ತದೆ. ಇದು ಸಂಪೂರ್ಣಗೊಂಡ ಜೇಡನ ಬಲೆಯಂತೆ. ಪರಿಸರದಲ್ಲಿನ ಏರುಪೇರುಗಳನ್ನು ಎದುರಿಸಿ, ಸಣ್ಣಮಟ್ಟ ತೊಂದರೆಗಳನ್ನು ಸಹಿಸಿ, ಅಸ್ವಸ್ಥಗೊಂಡ ವ್ಯವಸ್ಥೆಯನ್ನು ತಕ್ಕಮಟ್ಟಿಗೆ ದುರಸ್ತಿ ಮಾಡಿಕೊಳ್ಳುವ ಸಾಮರ್ಥ್ಯವು ಪರಾಕಾಷ್ಠೆಯನ್ನು ಮುಟ್ಟಿದ ಪರಿಸರ ವ್ಯವಸ್ಥೆಗಿರುತ್ತದೆ. ಇಂತಹ ಸಾಮರ್ಥ್ಯ ಮತ್ತು ಸ್ಥಿರತೆಗಳಿಗೆ ಕಾರಣ ಈ ರೀತಿಯ ಪರಿಸರ ವ್ಯವಸ್ಥೆಯಲ್ಲಿನ ಜೀವ ಪ್ರಭೇದಗಳ ಅಗಾಧ ವೈವಿಧ್ಯ, ಜೀವಿ ಸಮುದಾಯ ಮತ್ತು ಭೌತ ಪರಿಸರಗಳ ನಡುವೆಯಿರುವ ಅನ್ಯೋನ್ಯ ಸಂಬಂಧ. ನಿಸರ್ಗದ ನಿಯಮಗಳನ್ನು ಚಾಚೂತಪ್ಪದಂತೆ ಪಾಲಿಸಿ ನಡೆಯುವ ಜೀವಿ ಸಮುದಾಯಗಳಲ್ಲಿ ಅಗಾಧವಾದ ವೈವಿಧ್ಯವಿರುವಾಗ ಎಲ್ಲ ಪ್ರಭೇದಗಳಿಗೂ ಏಕಕಾಲದಲ್ಲಿಯೇ ಅಪಾಯ

ಒದಗುವುದಿಲ್ಲ. ಅಪಾಯವಾದ ಪರಿಸ್ಥಿತಿಯಲ್ಲಿ ಜೀವ ಆವಾಸದ ಒಂದು ಭಾಗ ಮತ್ತೊಂದನ್ನು ಸಂರಕ್ಷಿಸುವುದೂ ಉಂಟು. ಹೀಗಾಗಿ ಜೀವ ವೈವಿಧ್ಯ ಹೆಚ್ಚಿದಷ್ಟೂ ಅಪಾಯ ಕಡಿಮೆ ಎಂಬುದನ್ನು ಎಲ್ಲರೂ ಅರಿಯಬೇಕಿದೆ.

ಸಾವಿರಾರು ವರ್ಷಗಳ ಅವಧಿಯಲ್ಲಿ ಹಂತಹಂತವಾಗಿ ಬೆಳೆದು ಪರಾಕಾಷ್ಠೆಯನ್ನು ಮುಟ್ಟಿ ಸ್ಥಿರ ಸ್ಥಿತಿಯಲ್ಲಿರುವ ಪರಿಸರ ವ್ಯವಸ್ಥೆಯೂ ಸಂಪೂರ್ಣವಾಗಿ ಅಪಾಯ ಮುಕ್ತವಲ್ಲ. ಬಿರುಗಾಳಿ, ಬೆಂಕಿ, ಭೂಕಂಪ, ಸುನಾಮಿ ಮುಂತಾದ ನೈಸರ್ಗಿಕ ಕಾರಣಗಳಿಂದಾಗಿ ಇಡೀ ವ್ಯವಸ್ಥೆಯೇ ನಾಶವಾಗಿ ಕುಸಿದು ಬೀಳಬಹುದು. ೨೦೦೪ರ ಡಿಸೆಂಬರ್ ೨೬ ರಂದು ಸಂಭವಿಸಿದ ಪ್ರಕೃತಿ ವಿಕೋಪ ಸುನಾಮಿಯಿಂದ ಅಂಡಮಾನ್-ನಿಕೋಬಾರ್ ದ್ವೀಪ ಸಮೂಹಗಳ ಹವಳದ ದಿಬ್ಬಗಳ ಪರಿಸರ ವ್ಯವಸ್ಥೆ ಏಕಾಏಕಿ ನಾಶವಾದದ್ದು ಇದಕ್ಕೊಂದು ನಿದರ್ಶನ. ಆದರೆ ಈ ನೈಸರ್ಗಿಕ ಕಾರಣಗಳಿಗಿಂತ ಇಂದು ಹೆಚ್ಚಿನ ಅಪಾಯವಿರುವುದು ಮಾನವನಿಂದ ಮತ್ತು ಏರುತ್ತಿರುವ ಜನಸಂಖ್ಯೆಯ ಕೊನೆಯಿಲ್ಲದ ಅತಿ ತೀವ್ರವಾದ ಉಸಿರುಗಟ್ಟಿಸುವ ಒತ್ತಡದಿಂದ.[೪೪]

ಜೀವ ವಿನಾಶ ಒಂದು ನೈಸರ್ಗಿಕ ಪ್ರಕ್ರಿಯೆ, ನಿಜ. ಆದರೆ ಇಂದು ಜೀವ ವೈವಿಧ್ಯ ನಾಶವಾಗುತ್ತಿರುವುದು ನೈಸರ್ಗಿಕ ಹಾಗುಹೋಗುಗಳಿಂದಲ್ಲ. ಜಾಗತಿಕ ಮಟ್ಟದಲ್ಲಿ ಜೀವಿಗಳ ಸಾಮೂಹಿಕ ವಿನಾಶಕ್ಕೆ ಕಾರಣವಾಗಬಹುದಾದಂತಹ ನೈಸರ್ಗಿಕ ವಿಕೋಪ ಇತ್ತೀಚಿನ ಶತಮಾನಗಳಲ್ಲಿ ನಡೆದಿಲ್ಲ; ಡೈನೋಸಾರ್‌ಗಳ ವಿನಾಶಕ್ಕೆ ಕಾರಣವಾಗಬಹುದಾದಂತಹ ಉಪಗ್ರಹದ ಅಪ್ಪಳಿಕೆ ನಡೆಯಲಿಲ್ಲ; ಹೊಸ ಭೂ ಖಂಡವೂ ಉದಯಿಸಲಿಲ್ಲ; ಖಂಡಗಳ ವ್ಯಾಪಕ ಬದಲಾವಣೆಗಳಾಲಿಲ್ಲ; ಹಿಮಾನೀಕರಣ (Glaciation) ನಡೆಯಲಿಲ್ಲ. ಇಂದಿನ ಜೀವ ವಿನಾಶಕ್ಕೆ ಮನುಷ್ಯ ಚಟುವಟಿಕೆಗಳೇ ಕಾರಣ. ನಮ್ಮ ಐಷಾರಾಮ ಬದುಕು, ಜನಸಂಖ್ಯಾ ಸ್ಫೋಟ, ಕಾಡು ನಾಶ, ಜೀವವಿನಾಶಕ್ಕೆ ಪ್ರಮುಖ ಕಾರಣಗಳು. ಕೆಲ ಆಯ್ದ ತಳಿಗಳ ವ್ಯಾಪಕ ಉಪಯೋಗದಿಂದಾಗಿ ವ್ಯವಸಾಯದ ಸಸ್ಯಗಳ ವೈವಿಧ್ಯವು ಕುಸಿದಿದೆ; ಏಕತಾನತೆ ಎದ್ದು ತೋರುತ್ತಿದೆ. ಒಂದು ಕಾಲದಲ್ಲಿ ಒಂದು ಲಕ್ಷಕ್ಕೂ ಮಿಕ್ಕ ಭತ್ತದ ತಳಿಗಳಿದ್ದುದು ಇಂದು ಕೆಲವು ನೂರು ತಳಿಗಳಿಗೆ ಇಳಿದಿವೆ. ಜೀವ ವೈವಿಧ್ಯ ಎಲ್ಲಾ ಹಂತಗಳಲ್ಲೂ ಕಣ್ಮರೆಯಾಗುತ್ತಿದೆ ಎಂಬುದಕ್ಕೆ ಇದು ಒಂದು ಉದಾಹರಣೆ.

ರಾಷ್ಟ್ರೀಯ ಜೀವವೈವಿಧ್ಯ ದಾಖಲಾತಿ ಇಂದಿನ ತುರ್ತು ಅಗತ್ಯ. ನಿಜ, ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಲಭ್ಯವಿರುವ ನಿಯಮಿತ ಸಂಪನ್ಮೂಲಗಳನ್ನು ಬಳಸಿಕೊಂಡು, ಅಪಾರ ಜೀವಜಂತುಗಳ ದಾಖಲೆ ಕಾರ್ಯ ಯೋಜನೆಯು ಭಗೀರಥ ಪ್ರಯತ್ನವೇ ಸರಿ. ಆದರೆ ಇಂದಲ್ಲ ನಾಳೆ ಆಗಲೇಬೇಕಾದ ಪ್ರಯತ್ನವಿದು. ಎಷ್ಟು ಬೇಗ ನಾವೀ ಕಾರ್ಯ ಮುಗಿಸುತ್ತೇವೆಯೋ ಅಷ್ಟು ಜೀವ ಸಂಪತ್ತಿನ ಉಪಯೋಗ ಹೆಚ್ಚೀತು, ಜೀವವೈವಿಧ್ಯ ಉಳಿಯಲು ನೆರವಾದೀತು. ದೇಶೀಯ ಜೀವವೈವಿಧ್ಯ ದಾಖಲಾತಿ ಕಾರ್ಯಕ್ರಮವನ್ನು ಅಭಿವೃದ್ಧಿಗೊಳಿಸಿ ಬಲಪಡಿಸುವುದೇ 'ಜೀವಿಪ್ರಜ್ಞೆ' ಸಾಕಾರಗೊಳ್ಳಲು ನಮ್ಮ ಮುಂದಿರುವ ಆದ್ಯತೆಯಾಗಬಲ್ಲದು.

ಕೊನೆ ಟಿಪ್ಪಣಿಗಳು:

೧. ಜೀವವೈವಿಧ್ಯ ಪೂರಕ ಅಂತರ್‌ಜಾಲ ಪತ್ರದ ಕಿರು ಮಾಹಿತಿ

೨. ನಾಗೇಶ ಹೆಗಡೆ, ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು, ಪುಟ:೧೬೦

೩. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, ಪುಟ:೪೬

೪. ಅದೇ ಪು, ಪುಟ:೪೫

೫. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕರ್ವಾಲೋ, ಪುಟ ೧೭೪

೬. ಸಂಪಾದನೆ–ಆರ್.ಡಿ.ಜಿ, ತೇಜಸ್ವಿಯನ್ನು ಹುಡುಕುತ್ತಾ, ಪುಟ:೨೩೩

೭. ಧನಂಜಯ ಜೀವಾಳ ಬಿ.ಕೆ., ಕಾಡಿನ ಸಂತ –ತೇಜಸ್ವಿ, ಪುಟ:೯೨

೮. ನಾಗೇಶ ಹೆಗಡೆ, ಈಶ್ವರ ಪ್ರಸಾದ್ ಸಂಪಾದನೆ, ತೇಜಸ್ವಿ–ಕೀಟ ಮತ್ತು ಆರ್ಕಿಡ್ ಲೋಕ, ಪುಟ:೧೫

೯. ಅದೇ ಪು ಪುಟ:೦೮

೧೦. ಆರ್.ಡಿ.ಜಿ. ಸಂಪಾದನೆ– ತೇಜಸ್ವಿಯನ್ನು ಹುಡುಕುತ್ತಾ, ಪುಟ:೧೭೮

೧೧. ನಾಗೇಶ ಹೆಗಡೆ, ಈಶ್ವರ ಪ್ರಸಾದ್ ಸಂಪಾದನೆ, ತೇಜಸ್ವಿ–ಕೀಟ ಮತ್ತು ಆರ್ಕಿಡ್ ಲೋಕ, ಪುಟ:೩೦

೧೨. ಅದೇ ಪು ಪುಟ:೦೨

೧೩. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ವಿಸ್ಮಯ–೧, ಪುಟ:೮೫

೧೪. ಆರ್.ಡಿ.ಜಿ ಸಂಪಾದನೆ– ತೇಜಸ್ವಿಯನ್ನು ಹುಡುಕುತ್ತಾ, ಪುಟ:೨೭೬

೧೫. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಮಿಂಚುಳ್ಳಿ, ಕನ್ನಡ ನಾಡಿನ ಹಕ್ಕಿಗಳು–೧, ಪುಟ:೨೨

೧೬. ಅದೇ ಪು ಪುಟ:೧೪

೧೭. ಆರ್.ಡಿ.ಜಿ. ಸಂಪಾದನೆ– ತೇಜಸ್ವಿಯನ್ನು ಹುಡುಕುತ್ತಾ, ಪುಟ:೧೭೬

೧೮. ಅದೇ ಪು ಪುಟ:೧೬೬

೧೯. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, ಪುಟ:೦೩

೨೦. ಆರ್.ಡಿ.ಜಿ. ಸಂಪಾದನೆ–ತೇಜಸ್ವಿಯನ್ನು ಹುಡುಕುತ್ತಾ, ಪುಟ:೧೬೩

೨೧. ನಾಗೇಶ ಹೆಗಡೆ, ಪ್ರತಿದಿನ ಪರಿಸರದಿನ, ಬೆನ್ನುಡಿ

೨೨. ಅದೇ ಪು ಪುಟ:೭

೨೩. ಅದೇ ಪು ಪುಟ::೦೨

೨೪. ಅದೇ ಪು, ಪುಟ: ೨೦–೨೩

೨೫. ಡಾ.ಪಿ.ಕೃಷ್ಣಪ್ಪ ಶೆಟ್ಟಿ, ಡಿ.ಆರ್.ನಟರಾಜ್. ಸಂಪಾದಕರು ಪರಿಸರ: ಮುಂದೇನು? ಪುಟ:೧೭

೨೬. ನಾಗೇಶ ಹೆಗಡೆ, ಪ್ರತಿದಿನ ಪರಿಸರದಿನ, ಪುಟ:೨೪–೨೫

೨೭. ಡಾ.ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳು, ಕುವೆಂಪು ಕಾದಂಬರಿಗಳಲ್ಲಿ ಜೈವಿಕ ಜಾಲ–ಪುಟ:೩೪೧

೨೮. ನಾಗೇಶ ಹೆಗಡೆ, ಪ್ರತಿದಿನ ಪರಿಸರದಿನ, ಪುಟ:೩೨

೨೯. ನಾಗೇಶ ಹೆಗಡೆ, ಇರುವುದೊಂದೇ ಭೂಮಿ, ಪುಟ:೧೫೯

೩೦. ಅದೇ ಪು ಪುಟ:೧೬೩

೩೧. ನಾಗೇಶ ಹೆಗಡೆ, ಇರುವುದೊಂದೇ ಭೂಮಿ, ಬೆನ್ನುಡಿ

೩೨. ಅದೇ ಪು ಪುಟ:೩೯–೪೩

೩೩. ಅದೇ ಪು ಪುಟ:೯೫–೯೬

೩೪. ಅದೇ ಪು ಪುಟ:೯೮,೧೦೨ ಮತ್ತು ೧೦೩

೩೫. ನಾಗೇಶ ಹೆಗಡೆ, ಹಳ್ಳೀಮುಕ್ಕ ಎಲ್ಲೆಲ್ ಹೊಕ್ಕ ಕೃತಿಯ ಮುನ್ನುಡಿ

೩೬. ನಾಗೇಶ ಹೆಗಡೆ, ಕೆರೆಯಲಿ ಚಿನ್ನ ಕೆರೆಯೇ ಚಿನ್ನ, ಬೆನ್ನುಡಿ

೩೭. ದಿನಾಂಕ: ೦೨/೧೨/೨೦೧೫ ರಂದು ಪ್ರಜಾವಾಣಿಯಲ್ಲಿ ಪ್ರಕಟವಾದ ವಿಜ್ಞಾನ ವಿಶೇಷ ಅಂಕಣದ ಲೇಖನ

೩೮. ನಾಗೇಶ ಹೆಗಡೆ, ಅಭಿವೃದ್ಧಿಯ ಅಂಧಯುಗ, ಪುಟ:೬೪–೬೫

೩೯. ನಾಗೇಶ ಹೆಗಡೆ, ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು, ಪುಟ:೮–೧೧

೪೦. ಡಾ.ಹೆಚ್.ಆರ್.ಕೃಷ್ಣಮೂರ್ತಿ, ಕಲ್ಪವೃಕ್ಷದ ಜಾಡು ಹಿಡಿದು, ಪುಟ ಸಂಖ್ಯೆ:೧೫೭

೪೧. ನಾಗೇಶ ಹೆಗಡೆ, ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು, ಪುಟ:೬೨

೪೨. ದಿನಾಂಕ: ೧೪.೦೧.೨೦೧೬ ರಂದು ವಿಜ್ಞಾನ ವಿಶೇಷ ಅಂಕಣದಲ್ಲಿ ಪ್ರಕಟಗೊಂಡ ಲೇಖನ

೪೩. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಮಾಯಾಲೋಕ, ಪುಟ:೬–೭.

೪೪. ಡಾ.ಹೆಚ್.ಆರ್. ಕೃಷ್ಣಮೂರ್ತಿ, ಪರಿಸರ ಅಧ್ಯಯನ, ಪುಟ:೨೧

ಅಧ್ಯಾಯ-ಆರು

ಪರಿಸರ ಪ್ರಜ್ಞೆಯಲ್ಲಿ 'ಮಾನವ' ಕಲ್ಪನೆ

೬.೧ ಪೀಠಿಕೆ

೬.೨ ಜೈವಿಕ ಮಾನವ ಅರ್ಥ ಮತ್ತು ಸ್ವರೂಪ

೬.೩ ಕೃತಿಕಾರರ ಕೃತಿಗಳಲ್ಲಿ 'ಮಾನವ' ಕಲ್ಪನೆ

೬.೪ 'ಮಾನವ' ಕಲ್ಪನೆಯಲ್ಲಿ ಸಾಮಾನ್ಯೀಕರಣದ ಸಂಗತಿಗಳು

ಅಧ್ಯಾಯ-ಆರು

ಪರಿಸರ ಪ್ರಜ್ಞೆಯಲ್ಲಿ 'ಮಾನವ' ಕಲ್ಪನೆ

೬.೧ ಪೀಠಿಕೆ:

ಪ್ರಕೃತಿ ಮತ್ತು ಮನುಷ್ಯ ಸಂಬಂಧದ ವಿಚಾರಗಳು ಬಹಳ ತಾತ್ವಿಕ ಮತ್ತು ಪುರಾತನವಾದದ್ದು ಹಾಗೂ ಇಂದಿನ ಆಧುನಿಕ ಜಾಗತಿಕ ಮನಸ್ಸುಗಳಿಗೆ ಈ ಬಗೆಗಿನ ಚರ್ಚೆಗಳು ಆದಾಯ ರಹಿತವಾದ ವಿಚಾರವೇ ಸರಿ. ಇಂದಿನ ನಾಗಾಲೋಟದ ಅಭಿವೃದ್ಧಿ, ಆದಾಯ ಗಳಿಕೆ, ಮ್ಯಾನೇಜ್‌ಮೆಂಟ್, ಬಹುಮಹಡಿಗಳ ಕಾಂಕ್ರಿಟ್ ಬದುಕಿಗೆ ತೆರೆದುಕೊಂಡ ಮನುಷ್ಯ ಪ್ರಪಂಚದ ಆಲೋಚನೆಗೂ ಬರದಂತಹ ವಿಷಯ ಇದಾಗಿದೆ. ಅಲ್ಪಸಂಖ್ಯಾತ ಪರಿಸರವಾದಿಗಳ ಹೋರಾಟ, ಪರಿಸರ ಚಿಂತಕರ ಆತಂಕ, ನಿರ್ಲಿಪ್ತವಾಗಿರುವ ಸರ್ಕಾರಗಳು, ಮೌನವಹಿಸುವ ಮಾಧ್ಯಮಗಳು, ಶಾಲೆಯಲ್ಲಿ ಪಠ್ಯವಾಗಿ ಕೇವಲ ಅಂಕಗಳಿಗೆ ಮೀಸಲಾದ ಪರಿಸರ ಅಧ್ಯಯನ ವಿಷಯಗಳು ಹೀಗೆ ಬೇಕು ಬೇಡಗಳ ನಡುವೆ ಮನುಷ್ಯ ಜೀವಕ್ಕೆ ಮತ್ತು ಜೀವನಕ್ಕೆ ಇರುವ ಅನಿವಾರ್ಯ ಸಂಬಂಧಗಳನ್ನು ಕುರಿತು ಯೋಚಿಸಬೇಕಾಗಿರುವ ಅಗತ್ಯತೆ ಇಂದು ಎದುರಾಗಿದೆ. ಇಂತಹ ವಿಚಾರಗಳ ನಡುವೆ ಪ್ರಕೃತಿ ಮತ್ತು ಮನುಷ್ಯ ಸಂಬಂಧವನ್ನು ಕುರಿತು ಡಿ.ವಿ.ಜಿ.ಯು ಹೀಗೆ ವರ್ಣಿಸಿದ್ದನ್ನು ನೆನಪುಮಾಡಿಕೊಳ್ಳಲೇಬೇಕು,

ಆಗಸದ ಬಾಗು, ಚಂದ್ರಮನ ಗುಂಡಿನ ನುಣ್ಪು

ಸಾಗರದ ತೆರೆವಂಕು, ಗಿಡಬಳ್ಳಿ ಬಳುಕು

ಮೇಘ ವರ್ಣಚ್ಛಾಯೆಯೀ ಸೃಷ್ಟಿಯಿಂ ನಮ್ಮೊ

ಳಾಗಿಹುದು ರೂಪರುಚಿ ಮಂಕುತಿಮ್ಮ

ನಿತ್ಯ ಕಾಣುವ ಆಗಸದ ಬಾನು, ದುಂಡು ಚಂದಿರನ ನುಣುಪಾದ ರೂಪ, ಕ್ಷಣ ಕ್ಷಣಕ್ಕೂ ಏರಿಳಿತವನ್ನು ಕಾಣುವ ತೆರೆಗಳ ಮಾಲೆ, ಗಾಳಿಯ ವೈಯ್ಯಾರಕ್ಕೆ ಬಾಗಿ ಬಳುಕುವ ಬಗೆಬಗೆಯ ಗಿಡಬಳ್ಳಿಗಳು, ಪ್ರಕೃತಿ ಎಲ್ಲೂ ತನ್ನ ಶ್ರೀಮಂತ ಕಲಾವಂತಿಕೆಯನ್ನು ಸಂಕುಚಿತವಾಗಿಸದೆ ನವನವೀನವಾದ ದೃಶ್ಯ ಬೆಡಗುಗಳನ್ನು ಹೊರಹೊಮ್ಮಿಸುತ್ತಾ, ಕಾಲದ ಪರಿಚಲನೆಯ ಕಕ್ಷೆಯಲ್ಲಿ ನಿಯಂತ್ರಿತವಾಗಿದೆ. ತನ್ನ ರೂಪಿನಲ್ಲೂ ಸೌಂದರ್ಯದಲ್ಲೂ ನೂರಾರು ಬೆಡಗುಗಳನ್ನು ಹೊಂದಿಸಿಕೊಂಡು ಶತ ಶತಮಾನಗಳ ಕಾಲ ಸರಿದು ಇಂದು ಈ ದಿನ ಈ ಘಳಿಗೆಯನ್ನು

ಶರವೇಗದಲ್ಲಿ ಕಳೆದು ತನ್ನ ಪಾಡಿಗೆ ತಾನು ಎಲ್ಲೂ ನಿಲ್ಲದೆ ಮುಂದುವರಿಯುತ್ತಿದೆ. ಭೂಮಿ ಸೃಷ್ಟಿಯಾದ ದಿನದಿಂದ ಇಲ್ಲಿಯ ತನಕ ನಿರಂತರ ವಿಕಾಸವನ್ನು ಹೊಂದುತ್ತಾ, ಚಕಿತ ಹಾಗೂ ಬೆರಗುಗಳನ್ನು ಮೂಡಿಸುತ್ತಾ, ಕೌತುಕ ಮತ್ತು ಸ್ವಾರಸ್ಯಕರವಾದ ವಿಷಯವನ್ನು ಇಂದಿಗೂ ತನ್ನೊಳಗೆ ಅಡಗಿಸಿಕೊಂಡಿದೆ.

ಇಂತದೊಂದು ವಿಚಾರವನ್ನು ಗ್ರಹಿಸಿದ ಮೇಲೆ ಮಾನವನು ನಿಸರ್ಗದಿಂದ ಭಿನ್ನವಾಗಲು ಸಾಧ್ಯವೇ ಇಲ್ಲ ಎಂಬುದು ಅರ್ಥವಾಗುವುದು. ಯಾರು ತನ್ನಲ್ಲಿ ಎಲ್ಲಾ ಜೀವಿಗಳನ್ನೂ ಕಾಣುವನೋ ಮತ್ತು ಎಲ್ಲಾ ಜೀವಿಗಳಲ್ಲಿ ತನ್ನನ್ನು ಕಾಣುವನೋ ಅವನು ಅವುಗಳಿಂದ ಬೇರೆಯಾಗಿರುವುದಿಲ್ಲ. ಇದನ್ನೇ ವೈವಿಧ್ಯದಲ್ಲಿನ ಭಿನ್ನತೆಯಲ್ಲಿ ಏಕತೆ ಎನ್ನಬಹುದು. ಈ ಸಮಗ್ರ ದೃಷ್ಟಿಯಿರುವುದರಿಂದಲೇ ಭಾರತೀಯ ಋಷಿಗಳೂ, ದಾರ್ಶನಿಕರೂ ತಮ್ಮ ಅಸ್ತಿತ್ವದ ರಹಸ್ಯವನ್ನು ಕುರಿತು ಚಿಂತಿಸಿದರಲ್ಲದೆ ಸುತ್ತಲಿನ ಪ್ರಕೃತಿ ಮತ್ತು ಇತರ ಜೀವಿಗಳನ್ನು ಕುರಿತು ಚಿಂತನೆ ಮಾಡಿ, ಸೂಕ್ತ ನಿಬಂಧನೆಗಳನ್ನು ರೂಪಿಸಿ ರಕ್ಷಿಸಿದರು. ಪ್ರಾಚೀನ ಕಾಲದಲ್ಲಿ ಪ್ರಕೃತಿಯ ಬಗ್ಗೆ ಮಾನವನಿಗೆ ಇರುವ ದೃಷ್ಟಿಗೆ ಮಹತ್ವವುಂಟು. ಯಾವ ಹಾನಿಗೂ ಅವುಗಳನ್ನು ಗುರಿ ಮಾಡದೆ ಅವುಗಳಿಂದ ಸ್ವಾಭಾವಿಕವಾಗಿ ದೊರೆಯಬಹುದಾದ ಪ್ರಯೋಜನದಲ್ಲಿ ಅವನು ಆಸಕ್ತನಾಗಿದ್ದ. ಅವು ತನಗೆ ಎಷ್ಟು ಉಪಯುಕ್ತವಾಗಿವೆಯೆಂದು ಮನಗಂಡಿದ್ದನೋ ಅಷ್ಟೇ ಅವುಗಳ ರಕ್ಷಣೆಗೂ ಕಾತುರನಾಗಿದ್ದನು. ಈ ಮನೋಭಾವವನ್ನು ಮತ್ತೆ ಎಲ್ಲರಲ್ಲೂ ಬೆಳೆಸಬೇಕಾಗಿದೆ. ಆಧುನಿಕ ಮಾನವನು ಇಂತಹ ಪ್ರವೃತ್ತಿಯನ್ನು ಮೈಗೂಡಿಸಿಕೊಳ್ಳಬೇಕಿದೆ.

"ಜಗತ್ತಿನಾದ್ಯಂತ ವಿಭಿನ್ನ ಧರ್ಮಗಳೂ, ಸಂಸ್ಕೃತಿಗಳೂ ಹಾಗೂ ಸಾಹಿತ್ಯಗಳೂ ಪರಿಸರದ ಬಗ್ಗೆ ಅತ್ಯಂತ ಸೂಕ್ಷ್ಮವೂ ವಿವೇಕಯುತವೂ ಆದ ಮನೋಧರ್ಮವನ್ನು ಪ್ರಕಟಿಸಿವೆ; ಪ್ರಕೃತಿಯ ಅಸಂಖ್ಯ ಅಂಶಗಳ ಬಗ್ಗೆ, ಅವುಗಳ ಅಗಣಿತ ವೈವಿಧ್ಯತೆಯ ಬಗ್ಗೆ, ಅವೆಲ್ಲವುಗಳನ್ನು ಹೆಣೆಯುವ ಏಕತಾಸೂತ್ರದ ಬಗ್ಗೆ ಆಳವಾದ ಅರಿವನ್ನೂ ಆದರವನ್ನೂ ತೋರಿವೆ. ಆದರೆ ನನ್ನ ದೃಷ್ಟಿಯಲ್ಲಿ, ಇವುಗಳ್ಯಾವುದನ್ನೂ ಪರಿಸರವಾದದ ಪ್ರಕಟಣೆಗಳೆಂದು ಪರಿಗಣಿಸಲಾಗದು; ಪರಿಸರ ಚಳವಳಿಯ ಚಾಲಕ ಘಟ್ಟಗಳೆಂದು ಪ್ರತಿಪಾದಿಸಲಾಗದು. ಕಾರಣವಿಷ್ಟೇ: ನನ್ನ ಮಟ್ಟಿಗೆ ಪರಿಸರವಾದಿ ಆಂದೋಲನವೆನ್ನುವುದು ಕವಿಗಳ ತತ್ವಜ್ಞಾನಿಗಳ ಪ್ರಕೃತಿ ಸಂಬಂಧಿತವಾದ ಕಲಾತ್ಮಕವೊ, ಧ್ಯಾನಾತ್ಮವೊ ಆದ ಹೇಳಿಕೆಗಳೋ ಅಥವಾ ಕಾಣ್ಕೆಗಳೋ ಮಾತ್ರವಲ್ಲ. ಬದಲಿಗೆ, ಅದು ಪ್ರಕೃತಿ ಹಾಗೂ ಮಾನವಕುಲದ ನಡುವಣ ಸಂಬಂಧದಲ್ಲಿ ಬಿಕ್ಕಟ್ಟೊಂದು ಉದ್ಭವವಾಗಿರುವುದನ್ನು ಗುರುತಿಸುವಂಥದ್ದು; ತದನಂತರ, ಆ ಬಿಕ್ಕಟ್ಟನ್ನು ಬಗೆಹರಿಸದಲೆಂದು ಸಾಮುದಾಯಿಕವೂ ಪ್ರಜ್ಞಾಪೂರ್ವಕವೂ ಆದಂಥ ಪ್ರಯತ್ನಗಳನ್ನು ಸಂಘಟಿಸುವಂತದ್ದು" [೧] ಎಂದಿದ್ದಾರೆ ರಾಮಚಂದ್ರ ಗುಹಾ ಅವರು.

ಪರಿಸರ ಕುರಿತಂತೆ ವೈವಿಧ್ಯಮಯ ವ್ಯಾಖ್ಯೆಗಳಿರುವುದು ಸಹಜ. ಮಾನವನ ಮೇಲೆ ಪ್ರಭಾವ ಬೀರಬಲ್ಲ, ಮಾನವನ ಪ್ರಭಾವಕ್ಕೆ ಒಳಗಾಗಬಲ್ಲ ಸಜೀವ, ನಿರ್ಜೀವ ರಾಶಿಯೆಲ್ಲವೂ ಪರಿಸರವೇ ಎನ್ನುವುದಾದರೆ ಪರಿಸರದ ವ್ಯಾಪ್ತಿ ದಿನೇ ದಿನೇ ಹೆಚ್ಚುತ್ತಿದೆ ಎನ್ನಬಹುದು. ಏಕೆಂದರೆ ಮಾನವನ ಗ್ರಹಿಕೆ, ಮಾನವನ ಕಾರ್ಯಕ್ಷೇತ್ರದ ವಿಸ್ತಾರ ಕೂಡ ದಿನೇ ದಿನೇ ಹೆಚ್ಚಳಗೊಳ್ಳುತ್ತಿದೆ. ಪರಿಸರಕ್ಕೂ ಮಾನವ ಕುಲಕ್ಕೂ ಇರುವ ಸಂಬಂಧವನ್ನು ನಿರ್ಧರಿಸುವಾಗ ವಿಜ್ಞಾನ

ಪರಿಣತರನ್ನಷ್ಟೇ ಲೆಕ್ಕಕ್ಕೆ ತೆಗೆದುಕೊಂಡು ಹೇಳಲು ಬರುವುದಿಲ್ಲ. ಇಡೀ ಸಮಾಜ, ಅಲ್ಲಿನ ಚಟುವಟಿಕೆಗಳು, ಜನರ ಒಲವು ನಿಲುವುಗಳು, ಜೀವನ ಶೈಲಿಗಳು, ನಂಬಿಕೆಗಳು, ಆಶೋತ್ತರಗಳು–ಇವುಗಳನ್ನು ಗಮನಿಸಬೇಕಾಗುವುದು. ಆದರೆ ಅವುಗಳನ್ನು ಪರೋಕ್ಷವಾಗಿ ನಿರ್ಣಯಿಸುವ ಮಂದಿಯ ಪೈಕಿ ಪರಿಣತರೂ ಸೇರಿದ್ದಾರೆ. ಉದಾ: ದೇಹವನ್ನು ಯಂತ್ರಕ್ಕೆ ಹೋಲಿಸಿ ಚಾಲಕನಿಲ್ಲದ ಯಂತ್ರ ಅದು ಎಂದು ಪ್ರತಿಪಾದಿಸಿದ್ದು ಕೈಗಾರಿಕಾ ಕ್ರಾಂತಿಯ ಅನಂತರವೇ ಎಂಬುದು ಕೇವಲ ಕಾಕತಾಳೀಯವಲ್ಲ. ಹೀಗೆ ಅತ್ಯಂತ ಜಟಿಲವಾದ ಸಂಗತಿಯನ್ನು 'ಮಾನವ–ಪರಿಸರ' ಸಂಬಂಧ ಎಂದು ಚರ್ಚಿಸುವುದು ಅತ್ಯಂತ ಸರಳೀಕರಣವಾದೀತು. ಮಾನವ–ಪರಿಸರ ಸಂಬಂಧ ಪ್ರತಿಯೊಬ್ಬರಿಗೂ ತನ್ನದೇ ಆದ ರೀತಿಯದು ಎಂಬುದನ್ನು ಒಪ್ಪಬೇಕಾಗುತ್ತದೆ.

ಮಾನವ ಕುಲವು ವಿವಿಧ ಕಾಲದಲ್ಲಿ ತನ್ನ ಪರಿಸರದ ಬಗ್ಗೆ ತಳೆದ ನಿಲುವುಗಳೆಲ್ಲದರ ಅವಶೇಷಗಳನ್ನು ಇಂದಿಗೂ ಕಾಣಬಹುದು. ಆದರೆ ಪರಿಸರ ಕುರಿತ ವಿವಿಧ ಭಾವ ಛಾಯೆಗಳ ತೀವ್ರತೆಯಲ್ಲಿ ವ್ಯತ್ಯಾಸವಾಗಿರುವುದು. ಇಂತಹ ನಿಲುವುಗಳನ್ನು ಪರಿಣಾಮಾತ್ಮಕವಾಗಿ ಇದಮಿತ್ಥಂ ಎಂದು ಹೆಳಲು ಬರುವುದಿಲ್ಲ. ಮಾನವನ ಚಟುವಟಿಕೆಗಳಿಗೆ ಹೋಲಿಸಿದರೆ ನಿಸರ್ಗದ ಚಟುವಟಿಕೆ ಅಗಾಧವಾದದ್ದು. ಮಾನವ ಮತ್ತು ಪ್ರಕೃತಿ ಎಂದು ಹೇಳುವಾಗ ಮಾನವನಿಗೆ ಪ್ರಕೃತಿಯ ಸ್ಥಾನಮಾನ ನೀಡುವುದು ಸರ್ವಥಾ ಸರಿಯಲ್ಲ. ಮಿಗಿಲಾಗಿ ಮಾನವನೂ ಈ ಪ್ರಕೃತಿಯ ಒಂದು ಕಿರು ಅಂಗವೇ ಆಗಿದ್ದಾನೆ[೦೨]

೬.೨ 'ಜೈವಿಕ ಮಾನವ' ಅರ್ಥ ಮತ್ತು ಸ್ವರೂಪ:

'ಪ್ರಕೃತಿ ಮತ್ತು ಪರಿಸರದ ಬಗ್ಗೆ ನನಗೆ ಚಿಕ್ಕಂದಿನಿಂದಲೂ ಇರುವ ಕುತೂಹಲಕ್ಕೆ ಮುಖ್ಯ ಕಾರಣ ನಮ್ಮ ತಂದೆಯವರೇ' ಎನ್ನುವ ತೇಜಸ್ವಿಯವರ ಅಭಿಪ್ರಾಯದಿಂದಾಗಿ ಒಂದಿಷ್ಟು ಜೈವಿಕ ಮಾನವ ಸ್ವರೂಪವನ್ನು ಅರ್ಥೈಸಿಕೊಳ್ಳುವುದು ಹಾಗೂ ಜೈವಿಕ ಪರಿಸರದಲ್ಲಿ ಜೈವಿಕ ಮಾನವ ಕಲ್ಪನೆಯು ಪ್ರಾಮುಖ್ಯತೆಯನ್ನು ಹೊಂದುವುದರಿಂದ ಇದನ್ನು ಅರ್ಥಮಾಡಿಕೊಳ್ಳವುದು ಕೂಡ ಅಧ್ಯಯನದಲ್ಲಿ ಮುಖ್ಯವಾಗುತ್ತದೆ. ಪರಿಸರದ ವರ್ಗಗಳಲ್ಲಿ ಜೈವಿಕ ಪರಿಸರವೂ ಒಂದು. ಇದು ಸಜೀವ ನಿರ್ಜೀವಗಳನ್ನು ಆವರಿಸಿದ ಭೌತಿಕ ಪರಿಸರ ಹಾಗೂ ವರ್ಗ–ಜಾತಿ–ಪ್ರತಿಷ್ಠೆಯ ಮಾನವ ಸಂಬಂಧಗಳೊಂದಿಗೆ ಅಥವಾ ವ್ಯಕ್ತಿ–ವ್ಯಕ್ತಿಗಳ ನಡುವಿನ ಸಂಬಂಧದೊಂದಿಗೆ ವ್ಯವಹರಿಸುವ ಸಾಮಾಜಿಕ ಪರಿಸರಕ್ಕಿಂತಲೂ ಹೆಚ್ಚು ಮಹತ್ವವುಳ್ಳದ್ದು. ಇದು ಮಾನವ, ಪ್ರಾಣಿ, ಪಕ್ಷಿ, ಸಸ್ಯ ಸಂಕುಲಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ಕೋಟ್ಯಾನುಕೋಟಿ ಪ್ರಭೇದಗಳ ಜೀವಜಗತ್ತು ಸೇರಿರುತ್ತದೆ. ಜೈವಿಕ ಪರಿಸರದಲ್ಲಿ ಸಹಜ ಮತ್ತು ನಿರಂತರ ಕೊಂಡಿಯಾಗಿ ಜೀವಿಸುವ ಜೀವಿಕೇಂದ್ರಿತ ಮತ್ತು ಮನುಷ್ಯಕೇಂದ್ರಿತ ಪ್ರಜ್ಞೆಯನ್ನು ಇದು ಸಮ್ಮಿಳಿತಗೊಳಿಸುತ್ತದೆ.

ಒಮ್ಮೆಲೆ ಜೈವಿಕ ಮಾನವ ಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟಸಾಧ್ಯ. ಈ ಕಲ್ಪನೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವ ವ್ಯಕ್ತಿಯು ಜೈವಿಕ ಪರಿಸರದ ನಿಕಟವರ್ತಿಯಾಗಿರಬೇಕು ಇಲ್ಲವೇ ನಿರಂತರ ಒಡನಾಟವನ್ನು ಹೊಂದಿರಲೇಬೇಕು. ಅದನ್ನು ದೃಶ್ಯಮಾಧ್ಯಮದಿಂದ ಕಲಿಸಿಕೊಳ್ಳುವಂತದ್ದಲ್ಲ ಹಾಗೂ ವ್ಯಕ್ತಗೊಳ್ಳುವ ಪಾತ್ರಗಳ ಅಧ್ಯಯನದಿಂದ

ಸುಲಭವಾಗಿ ಅರ್ಥವಾಗುವಂತದ್ದಲ್ಲ. ಅದರಲ್ಲಿ ತಾದ್ಯಾತ್ಮತೆ ಅಗತ್ಯ. ಇದರಿಂದ ಆಚೆಗೆ ನಿಂತು ಕಲಾಪ್ರತಿಮೆಯಲ್ಲಿ ಅಂತದೊಂದು ಅನುಭವವನ್ನು ವಿಸ್ತರಿಸಿದರೆ ಅಥವಾ ಓದುಗರಿಗೆ ಕಟ್ಟಿಕೊಟ್ಟರೆ ಅದು ಕೇವಲ ದಲಿತೇತರ ಸಾಹಿತ್ಯದಂತೆ ಸಂವೇದನೆಗೊಳ್ಳುವುದೇ ವಿನಹ ಅದರಲ್ಲಿ ಮಿಂದೆದ್ದ ಅನುಭವ ಆಗಲಾರದು. ಮಲೆನಾಡು, ಪಶ್ಚಿಮಘಟ್ಟದೊಂದಿಗಿನ ಪರಿಸರದಲ್ಲಿ ಜೀವಿಸಿದ ವ್ಯಕ್ತಿಯೊಡನೆ, ಜೀವಿಗಳೊಡನೆ, ವಸ್ತು-ವಿಷಯಗಳ ಜೊತೆಗಿನ ಅವಿನಾಭಾವ ಸಂಬಂಧಗಳು ಕುವೆಂಪು, ಶಿವರಾಮ ಕಾರಂತ, ತೇಜಸ್ವಿ ಅವರಿಗೆ ಹತ್ತಿರವಾಗಿದ್ದವು. ಅವರು ಅವುಗಳೊಡನೆ ನಿಕಟವರ್ತಿಯಾಗಿದ್ದರ ಮತ್ತು ಅವುಗಳನ್ನು ವೀಕ್ಷಿಸಲು ವಿಫುಲವಾದ ಅವಕಾಶ ದಕ್ಕಿದ್ದರ ಫಲವಾಗಿ ಸೃಜನೆಗೊಂಡ ಕಲಾಪ್ರತಿಮೆಗಳು ಜೈವಿಕ ಮಾನವ ಕಲ್ಪನೆಯ ಭಾಗವಾಗಿ ರೂಪುಗೊಂಡವು. ಇಲ್ಲವೇ ಅಂತಹ ಪಾತ್ರಗಳ ಸೃಷ್ಟಿ ಜೀವಂತಿಕೆ ಪಡೆದುಕೊಳ್ಳಲು ಸಾಧ್ಯವಾಯಿತು ಎನ್ನಬಹುದು. ಸ್ವಲ್ಪ ಭಿನ್ನವಾಗಿ ಯೋಚಿಸುವುದಾದರೆ ಬಯಲುಸೀಮೆ ಪರಿಸರದ ಚಟುವಟಿಕೆಗಳೊಂದಿಗೆ ನಿಕಟವರ್ತಿಯಾದ ವ್ಯಕ್ತಿಯೋರ್ವ ಮಲೆನಾಡಿನ ಅಥವಾ ಪಶ್ಚಿಮಘಟ್ಟದ ಜೈವಿಕ ಮಾನವನನ್ನು ಕುರಿತು ಕಲಾಪ್ರತಿಮೆ ರೂಪಿಸುವುದು ಕಷ್ಟಸಾಧ್ಯವಾದ ಪ್ರಯತ್ನವಾಗಬಲ್ಲದು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಾವು ಕಾಣುವ ಪ್ರಪ್ರಥಮ 'ಜೈವಿಕ ಮಾನವ'ನನ್ನು ಸೃಷ್ಟಿಸಿದ್ದು ಕುವೆಂಪು ಅವರು. ಕುವೆಂಪು ಕಾದಂಬರಿಗಳಲ್ಲಿ ಕಂಡುಬರುವ ಮಾನವನ ಪರಿಕಲ್ಪನೆ ಆತ್ಮ-ವ್ಯಕ್ತಿ-ಕುಟುಂಬ-ಸಮಾಜ-ಸಮುದಾಯದಿಂದ ಕೂಡಿರುತ್ತದೆ. ಇವೆಲ್ಲಾ ಮನುಷ್ಯ ಕೇಂದ್ರಿತ ದೃಷ್ಟಿಕೋನಗಳು. ಈ ಪ್ರಜ್ಞೆಯ ಸ್ವರೂಪ ಅಲ್ಲಿಗೆ ವಿರಮಿಸದೇ ಸ್ಥಳೀಯ ಭೂಗೋಳ, ಜೈವಿಕ ಪರಿಸರ, ಅರಣ್ಯ ಜಗತ್ತು, ಜೀವಿ ಸಂಕುಲಗಳೊಡನೆ ಏಕೀಭವಿಸುತ್ತದೆ. ಇವೆಲ್ಲಾ ಜೀವಕೇಂದ್ರಿತ ದೃಷ್ಟಿಕೋನಗಳು. ಈ ದರ್ಶಿತ್ವದಲ್ಲಿಯೇ ಜೈವಿಕ ಮಾನವನ ಪರಿಕಲ್ಪನೆಯನ್ನು ಮನಗಾಣಬಹುದು. ಕುವೆಂಪು ಅವರಿಗೆ 'ಮಾನವ ಪ್ರತ್ಯೇಕಿತ ಪರಿಸರ' ಯಾವತ್ತೂ ಮುಖ್ಯವಲ್ಲ. ಸಕಲ ಜೈವಿಕ ಪರಿಸರಗಳೊಂದಿಗೆ ಬೆಸೆದುಕೊಂಡ ಮಾನವನ ಸಾಮಾಜಿಕ ಜೀವನದ ಸಂಕೀರ್ಣತೆ, ಆಕ್ರಮಣಶೀಲ ನಾಗರೀಕತೆಯಿಂದಾಗಿ, ಕಗ್ಗಾಡಿನ ಹಳ್ಳಿಗಳಲ್ಲಾಗುವ ಸಂಕ್ಷೋಭೆ, ನಿಸರ್ಗದ ಮಡಿಲಲ್ಲಿ ಪ್ರಾಪ್ತವಾಗುವ ತನುಮನು ಪಟುತ್ವ, ಸಂಸ್ಕೃತಿಯ ಚಲನ ಶೀಲತೆಯಿಂದ ದಕ್ಕುವ ಪ್ರಗತಿ ಮತ್ತು ಪರಿವರ್ತನೆಯ ನಿಯಮದಿಂದ ತಪ್ಪಿಸಿಕೊಳ್ಳಲಾಗದ ಜಟಿಲ ಜೀವನ ಜಾಲ ಇವೆಲ್ಲವುಗಳ ಅಖಂಡ ಗ್ರಹಿಕೆ ಕುವೆಂಪು ಕಾದಂಬರಿಗಳಲ್ಲಿದೆ.

'ಕುವೆಂಪು ಕಾದಂಬರಿಗಳಲ್ಲಿ ಜೈವಿಕಜಾಲ' ಎಂಬ ಲೇಖನದಲ್ಲಿ ವಿ.ಚಂದ್ರಶೇಖರ ನಂಗಲಿಯವರು ಜೈವಿಕ ಮಾನವ ಪರಿಕಲ್ಪನೆಯನ್ನು ಕುರಿತು ಹೀಗೆ ಅರ್ಥೈಸಿದ್ದಾರೆ. **'ಮನುಷ್ಯಕೇಂದ್ರಿತ'** (Anthropocentric) ಎಂಬ ಪರಿಕಲ್ಪನೆಯನ್ನು ನಾವು ವಿಶೇಷವಾಗಿಯೇ ಗಮನಿಸಬೇಕು. ಈ ಬಗೆಯ ಚಿಂತನೆಯು ಈ ಭೂಮಿಯಲ್ಲಿ ಮನುಷ್ಯನನ್ನೇ ಕೇಂದ್ರಪ್ರಾಯವಾಗಿ ಪರಿಗಣಿಸುತ್ತದೆ. ಮನುಷ್ಯನ ಒಳಿತಿಗಾಗಿ, ಮನುಕುಲದ ಕಲ್ಯಾಣಕ್ಕಾಗಿ, ಐಹಿಕ ಅಭಿವೃದ್ಧಿಗಾಗಿ ನಿಸರ್ಗವೊಂದು ಸಾಧನ ಸಂಪತ್ತು ಎಂಬುದು ತಿಳಿಯುತ್ತದೆ. ಆದರೆ, ಈ ಭೂಮಿ ಇರುವುದು ಮನುಷ್ಯನಿಗೆ ಮಾತ್ರವಲ್ಲ! ಅಣುವಿನಿಂದ ಹಿಡಿದು ಮಹತ್‌ವರೆಗೆ.

ಸಕಲ ಜೀವರಾಶಿ ಮತ್ತು ಜೀವಸಂಕುಲಗಳ ನಡುವೆ ಅಭೇದದ ಕಟ್ಟಡವೇ ಅಡಗಿದೆ. 'ಇದು ನಿರರ್ಥಕ' ಎಂಬ ಜೀವಿಯೇ ಈ ಭೂಮಿಯಲ್ಲಿಲ್ಲ. ಒಂದು ಮತ್ತೊಂದರೊಡನೆ ಬೆಸೆದುಕೊಂಡಿದೆ. ಜೀವಿ ಮತ್ತು ಜೀವಿಯೊಳಗಿನ ಈ ಸಹಯೋಗವನ್ನು **'ಪರ್ಯಾವರಣ(ಇಕಾಲಜಿ)'** ಎಂದು ಕರೆಯುತ್ತಾರೆ. ಭೂಮಿಯ ಪರ್ಯಾವರಣದಲ್ಲಿ ಸಸ್ಯ–ಕ್ರಿಮಿ–ಕೀಟ–ಪಕ್ಷಿ–ಪ್ರಾಣಿ ಪರಿಸರಗಳಿರುವಂತೆಯೇ ಮನುಷ್ಯ ಪರಿಸರವೂ ಇದೆ ಎಂಬ ಚಿಂತನೆಯೇ **'ಜೀವಿಕೇಂದ್ರಿತ'** (ಬಯೋಸೆಂಟ್ರಿಕ್) ಎನಿಸಿಕೊಳ್ಳುತ್ತದೆ.

"ಕುವೆಂಪು ಮೂಲತಃ 'ಕಾಡಿನ ಕವಿ' ಅನ್ನುವುದೇ ಅವರನ್ನು ಕನ್ನಡ ಸಾಹಿತ್ಯ ಸಂದರ್ಭದ ಇತರ ಬರಹಗಾರರಿಂದ ಬೇರ್ಪಡಿಸುವ ಮುಖ್ಯ ಲಕ್ಷಣವಾಗಿದೆ. ಅವರ ಮಹಾಕಾವ್ಯ, ಕಾದಂಬರಿ, ನಾಟಕ, ಕವಿತೆ ಎಲ್ಲ ಪ್ರಕಾರಗಳಲ್ಲೂ ಈ ಅರಣ್ಯಾನುಭವಗಳೇ ಮೂಲ ದ್ರವ್ಯದಂತೆ ಸರ್ವವ್ಯಾಪ್ತಿಯಾಗಿವೆ. ಅವರ ಬಹುತೇಕ ಎಲ್ಲ ಪಾತ್ರಗಳೂ ಈ ಅರಣ್ಯ ಸಂಸ್ಕೃತಿಯ ಪ್ರತೀಕಗಳೇ. ಇಷ್ಟರ ಮಟ್ಟಿಗೆ ಸಹ್ಯಾದ್ರಿಯ ಅರಣ್ಯಾನುಭವ ಎಂದೂ ಕನ್ನಡದಲ್ಲಿ ಈ ಪ್ರಮಾಣ ಹಾಗೂ ಸಾಚಾತನಗಳಲ್ಲಿ ಪ್ರಕಟವಾಗಿಲ್ಲ ಅನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ. ನಿಸರ್ಗದಿಂದ ವ್ಯಕ್ತಿತ್ವಕ್ಕೆ ಒದಗುವ ತುಷ್ಟಿ–ಪುಷ್ಟಿಗಳು ವ್ಯಕ್ತಿತ್ವದ ಬೆಳವಣಿಗೆಗೆ ಎಷ್ಟು ಅಗತ್ಯ ಅನ್ನುವುದನ್ನು ಪರಿಸರ ನಾಶದ ತಲ್ಲಣದ ಇಂದಿನ ದಿನಗಳಲ್ಲಿ ನಾವು ಕ್ರಮೇಣ ಕಂಡುಕೊಳ್ಳುತ್ತಿದ್ದೇವೆ." [೦೩]

ಜೈವಿಕ ಮಾನವ ಕಲ್ಪನೆಯ ತಳಹದಿಯೊಂದಿಗೆ 'ಮಾನವ ಕಲ್ಪನೆ' ಹಿನ್ನೆಲೆಯಲ್ಲಿ ಪರಿಸರ ಪ್ರಜ್ಞೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ತೇಜಸ್ವಿ ಮತ್ತು ನಾಗೇಶ ಹೆಗಡೆ ಅವರ ಆಯ್ದ ಕೆಲವು ಕೃತಿಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

೬.೩ ಕೃತಿಕಾರರ ಕೃತಿಗಳಲ್ಲಿ 'ಮಾನವ' ಕಲ್ಪನೆ

೬.೩.೧ ತೇಜಸ್ವಿ ಅವರ ಕೃತಿಗಳು:

'ಪರಿಸರದ ಕತೆ' ೧೪ ಸಣ್ಣ ಕತೆಗಳನ್ನು ಒಳಗೊಂಡಿರುವ ಕಥಾಸಂಕಲನವಾಗಿದೆ. ಪ್ರಕೃತಿಯ ಜೀವ ವಿಕಾಸದ ರೀತಿಯನ್ನು ವೈಜ್ಞಾನಿಕ ಮತ್ತು ಕಲಾತ್ಮಕ ಮೆರಗಿನಲ್ಲಿ ವಿದ್ಯಾವಂತ ಮತ್ತು ಅವಿದ್ಯಾವಂತ ಮೌಲ್ಯವ್ಯವಸ್ಥೆಯ ಜೀವನ ದರ್ಶನದ ವ್ಯತ್ಯಾಸಗಳನ್ನು ತೇಜಸ್ವಿಯು ಈ ಕಥಾಸಂಕಲನದಲ್ಲಿ ವಿವರಿಸಿದ್ದಾರೆ. ಜೀವಸಂಕುಲಗಳ ವೈಚಿತ್ರ್ಯಗಳ ಅನುಭವ ಹಾಗೂ ಲೋಕದೃಷ್ಟಿಯಿಂದ ರಚಿತವಾದ ಪರಿಸರದ ನಡುವೆ ನಿರ್ಮಾಣವಾಗಿರುವ ವ್ಯತ್ಯಾಸವನ್ನು ಹಕ್ಕಿ ಮರಿಗಳ ಪ್ರಸಂಗದಲ್ಲಿ ವಿವರಿಸಿದ್ದಾರೆ. ಪರಿಸರದ ಕತೆ ಹೇಳುವ ಜೀವಂತ ಸತ್ಯಗಳನ್ನು ಕುರಿತಾಗಿ ತೇಜಸ್ವಿ ಹೀಗೆನ್ನುತ್ತಾರೆ: **"ಕಾಡುಗಳನ್ನು ಕಾಡುಪ್ರಾಣಿಗಳನ್ನು ಸಂರಕ್ಷಿಸಬೇಕೆಂದು ನಾನು ಹೇಳಿದರೆ ಅದು ನನ್ನ ತಿಳುವಳಿಕೆಯ ಕಾರಣಗಳಿಗಿಂತಲೂ ಹೆಚ್ಚಾಗಿ ಅವುಗಳೊಂದಿಗೆ ನಾವು ಹೊಂದಿರುವ ವ್ಯಕ್ತಿನಿಷ್ಠ ಸಂಬಂಧವೇ ಆಗಿದೆ. ಕಾಡುಗಳನ್ನು ನಾಶಮಾಡಿದಾಗ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯ ಜನಾಂಗ ಕಳೆದುಕೊಂಡಂತಾಗಿ ಮನಸ್ಸು ಖಿನ್ನವಾಗುತ್ತದೆ. ಈ ದುರಂತದ ದುಃಖವನ್ನು ಅಂಕಿಸಂಖ್ಯೆಗಳ ಆಧಾರದ ಮೇಲೆ, ಸಿದ್ಧಾಂತಗಳ ಮುಖಾಂತರ ವಿಶ್ಲೇಷಿಸಿ, ಪರಿಸರದ ಸಂರಕ್ಷಣೆಯ ಬಗ್ಗೆ ಜನಗಳಿಗೆ ಹೇಳಲು ಮನಸ್ಸೇ ಬರುವುದಿಲ್ಲ.**

ಏಕೆಂದರೆ ನಾನು ಕಂಡಂತೆ ಕಾಡನ್ನು ಕಂಡಿಲ್ಲದ ಅನುಭವಿಸಿಲ್ಲದ ಮನಸ್ಸುಗಳಿಗೆ ನನ್ನ ಮನಸ್ಸಿನ ದುಗುಡವನ್ನು ನಿರ್ಜೀವ ಅಂಕಿ-ಸಂಖ್ಯೆಗಳ ವಿಶ್ಲೇಷಣೆಯ ಮುಖಾಂತರ ಪ್ರತಿಸ್ಪಂದನ ಉಂಟುಮಾಡುವುದು ಕಷ್ಟಸಾಧ್ಯ"(೧೪) ಎನ್ನುತ್ತಾ, ಪರಿಸರದ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸುವ ಈ ಕೃತಿಯು ತೇಜಸ್ವಿಯವರ ಪರಿಸರದ ತುಡಿತವನ್ನು ಬರವಣಿಗೆಯ ಮೂಲಕ ಸಹೃದಯರಿಗೆ ನೀಡಿದೆ. ತೇಜಸ್ವಿ ಭವಿಷ್ಯ ಕುರಿತು ಖಿನ್ನರಾಗಿದ್ದಾರೆ. ಅಮೂರ್ತ ವಿಷಯಗಳ ಅರ್ಥಗ್ರಹಿಕೆಗೆ ತಳಹದಿಯೇ ಈ ಪ್ರಕೃತಿ. ವೀಕ್ಷಣೆಯ ಮೂಲಕ ಇಂದ್ರಿಯಗಳಿಗೆ ದಕ್ಕುವ ಅನುಭವವು ತನ್ನೊಳಗಿನ ಜ್ಞಾನವನ್ನು ವಿಸ್ತರಿಸಿಕೊಳ್ಳಲು ವ್ಯಕ್ತಿಗೆ ನೆರವಾಗುತ್ತದೆ. ಹುಟ್ಟುತ್ತಲೇ ಬೋಳಾದ ಪರಿಸರವನ್ನು ಕಾಣುವಂತಹ ಮಕ್ಕಳಿಗೆ ಹಾಗೂ ನಾಳಿನ ಬೆಳೆಯುವ ಮನಸ್ಸುಗಳಿಗೆ ಹೀಗಿತ್ತು ಹಾಗಿತ್ತು ಎನ್ನುವ ಜೀವರಹಿತವಾದ ಬೋಧನೆಗಳು ಪರಿಸರಕ್ಕೆ ಮುಖಾಮುಖಿಯಾಗುವಂತೆ ಅವರನ್ನು ಪ್ರೇರೇಪಿಸಬಲ್ಲವೇ ಎಂಬುದರ ಖಿನ್ನತೆಯು ಇಂದಿನ ಪರಿಸರಕ್ಕೆ ಎದುರಾಗಿರುವ ದುರಂತವನ್ನು ಓದುಗರಿಗೆ ಮನಗಾಣಿಸುತ್ತದೆ. ಪರಿಸರ ಕಾಳಜಿ ತುಂಬಿದ ಈ ಮಾತುಗಳಲ್ಲಿ ತಿಳಿಯುವುದೇನೆಂದರೆ ತೇಜಸ್ವಿ ನಿಸರ್ಗದ ವಾಸ್ತವ ಸತ್ಯವನ್ನು ಅರಿತು ಖಿನ್ನರಾಗಿದ್ದಾರೆ ಎನ್ನುವುದಕ್ಕಿಂತಲೂ ಆ ಸ್ಥಿತಿಯನ್ನು ನೆನೆದು ಭಾವುಕರಾಗಿರುವುದು ಕಂಡುಬರುತ್ತದೆ. ಈಗಿರುವುದು ನಮಗಷ್ಟೇ ಅಲ್ಲ, ನಾಳೆ ಉದಯಿಸಿ ಬೆಳೆಯುವ ಮಕ್ಕಳಿಗೆ ಏನು ತಾನೆ ಈ ನಿಸರ್ಗದಲ್ಲಿ ಉಳಿದಿರುತ್ತದೆ ಎಂಬುದೇ ಅವರ ಆತಂಕವಾಗಿದ್ದು, ನಿಸರ್ಗದಲ್ಲಿ ಅಪಾರವಾದುದನ್ನು ಈಗಾಗಲೇ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಒಬ್ಬ ಪರಿಸರ ತಜ್ಞರಂತೆ ಮಾತುಗಳನ್ನಾಡದೆ ಅನುಭವಿಯಾಗಿ ಅನುಭವದ ವಲಯವನ್ನು ಹಿಗ್ಗಿಸುತ್ತಾರೆ. ಹಕ್ಕಿ ಕೀಟ ಪ್ರಾಣಿ ಸಸ್ಯ ಇವೆಲ್ಲವುಗಳ ನಡುವೆ ಮನುಷ್ಯ ಸಂಬಂಧವನ್ನು ಜೊತೆಗೂಡಿಸುತ್ತಾರೆ. ಸಾಂಸ್ಕೃತಿಕ ಹಾಗೂ ಪ್ರಾಕೃತಿಕ ಪರಿಸರದಲ್ಲಿ ಬೆಸೆದ ಜೀವಕೊಂಡಿಗಳೊಂದಿಗೆ ಲೌಕಿಕ ಜಗತ್ತಿನ ಮುಂದಿನ ಪೀಳಿಗೆಯನ್ನು ಕುರಿತು ಭವಿಷ್ಯದ ಬಗ್ಗೆ ಚಿಂತಿಸುವ ಪರಿಯೇ ಪರಿಸರ ಮತ್ತು ಮಾನವ ಸಂಬಂಧದ ವಾಸ್ತವಿಕ ನೆಲೆಗಟ್ಟಿನ ಪ್ರಜ್ಞೆಯೆನಿಸಿಕೊಳ್ಳುತ್ತದೆ.

'ಪರಿಸರದ ಕತೆ'ಯಲ್ಲಿ ಪರಿಸರ ಇದೆ, ಮನುಷ್ಯರಿದ್ದಾರೆ. ನಿರೂಪಕನು ಇದ್ದೇ ಇದ್ದಾನೆ. ಉಳಿದ ಪುಸ್ತಕಗಳಲ್ಲಿ ನಿರೂಪಕ ಹಿಂದೆ ಸರಿದು ಅವನು ವರ್ಣಿಸುವ ವಿವರ, ವಿದ್ಯಮಾನಗಳೇ ಮುನ್ನೆಲೆಯಲ್ಲಿವೆ. ಪರಿಸರದ ಕತೆಯಲ್ಲಿ ಮನುಷ್ಯ ಮತ್ತು ಪರಿಸರ ಜೊತೆಜೊತೆಯಾಗಿದ್ದಾರೆ. ಪರಿಸರವನ್ನು ಕುರಿತ ಇತರ ಬರಹಗಳಲ್ಲಿ ಮನುಷ್ಯ ಕಾಣಿಸಿಕೊಳ್ಳುವುದಿಲ್ಲ; ಕಾಣಿಸಿಕೊಂಡರೂ ಪಾತ್ರವಾಗಿ ಕಾಣಿಸಿಕೊಳ್ಳುವುದಿಲ್ಲ. ಈ ಎರಡು ರೀತಿಯ ಬರವಣಿಗೆಗಳ ನಡುವೆ ಕಾಣಿಸಿಕೊಳ್ಳುವ 'ಏರೋಪ್ಲೇನ್‌ಚಿಟ್ಟೆ ಮತ್ತು ಇತರ ಕಥೆಗಳು' ಪುಸ್ತಕವನ್ನು ವರ್ಗೀಕರಿಸಿ, ಅದಕ್ಕೊಂದು ಹಣೆಪಟ್ಟಿ ಕಟ್ಟುವುದು ತುಂಬಾ ಕಷ್ಟ. 'ಪರಿಸರದ ಕತೆ' ಕೃತಿ ರಚನೆಯ ನಂತರದ ಬರವಣಿಗೆಯಲ್ಲಿ ತೇಜಸ್ವಿ 'ಪ್ರಕಾರ ನಿಷ್ಠೆ'ಯ ಬಗ್ಗೆ ಅಷ್ಟೇನೂ ತಲೆ ಕೆಡಿಸಿಕೊಳ್ಳುವುದಿಲ್ಲ. ಅದರಲ್ಲಿ ನಂಬುವುದು ಅನುಭವ ಮುಖ್ಯ ಮತ್ತು ಬರವಣಿಗೆಯೂ ಮುಖ್ಯ ಎಂಬುದನ್ನು ಮಾತ್ರ. ಬರವಣಿಗೆಯ ವರ್ಗೀಕರಣ ಮುಖ್ಯವಲ್ಲ ಅದೇನಿದ್ದರೂ ಓದುವವರಿಗೆ ಮತ್ತು ವಿಮರ್ಶಕರಿಗೆ ಬಿಟ್ಟದ್ದು ಎಂದು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಹಲವು ಕಡೆಗಳಲ್ಲಿ ಸೂಚಿಸಿರುವುದನ್ನು ನೋಡಬಹುದಾಗಿದೆ.

ಪರಿಸರದ ಕುರಿತಾಗಿ ಯೋಚಿಸುವವರು ಬಹಳ ಮಂದಿ ಇದ್ದರೂ ಆ ಕುರಿತು ಬರೆದಿರುವವರು ಬಹಳ ಕಡಿಮೆ. ಇಂಥವರ ಸಾಲಿನಲ್ಲಿ ಬರುವ ತೇಜಸ್ವಿ ಪರಿಸರದ ಕೂಸಾಗಿ ಕಣ್ಣಿಗೆ ಕಂಡ ಸತ್ಯಗಳನ್ನು ಚೈತನ್ಯ ಪೂರ್ಣವಾಗಿ ಹಿಡಿದಿಟ್ಟ ಸಾಹಸದ ಫಲವೇ ಪರಿಸರದ ಕತೆಯಾಗಿದೆ. ಓದುಗ ವಲಯಕ್ಕೆ ಅರ್ಥೈಸುವ ಅವರಲ್ಲಿನ ಕತೆಗಾರ ಅನುಭವದಿಂದ ಅನುಭವಕ್ಕೆ ಜಾಗೃತಗೊಂಡು, ಮತ್ತಷ್ಟು ಸದೃಢನಾಗಿದ್ದಾನೆ. ಸೂಕ್ಷ್ಮವಾಗಿ ಹೇಳುವುದಾದರೆ ತೇಜಸ್ವಿ ಕತೆಗಾರರಾಗಿ, ಕಾದಂಬರಿಕಾರರಾಗಿ ಬೆಳೆದು ಬಂದಿರುವ ಹಾದಿ ಈ ಕೃತಿಯಿಂದ ಸ್ಪಷ್ಟವಾಗುತ್ತದೆ. ಕರ್ವಾಲೊ ಕಾದಂಬರಿಗೂ, ಪರಿಸರದ ಕತೆಗೂ ಇರುವ ಸಾದೃಶ್ಯ ಬೆರಗು ಹುಟ್ಟಿಸುವಂತಿದೆ. ಪರಿಸರದ ಕತೆಯು ಕಥಾ ಸಂಕಲನವಾಗಿರುವುದಲ್ಲದೆ ಅಷ್ಟೇ ಸಡಿಲ ಬಂಧದ ಕಾದಂಬರಿಯಾಗಿಯೂ ರೂಪುಗೊಂಡಿದೆ ಎನ್ನಬಹುದು.

ಪರಿಸರದ ಕತೆಯಲ್ಲಿನ ಪರಿಸರ ಪ್ರಜ್ಞೆ ಕೇವಲ ಅಂಕಿ-ಅಂಶಗಳಿಗಷ್ಟೇ ಸೀಮಿತವಾಗಿಲ್ಲ; ಅದಕ್ಕೂ ಮಿಗಿಲಾದ ಪ್ರಕೃತಿಯೊಂದಿಗಿನ ಒಡನಾಟ, ಸೆಣಸಾಟ, ವಾದ-ಸಂವಾದ ಹೃದ್ವೇದ್ಯವಾಗಿದೆ. ನಿತ್ಯ ಜೀವನದಲ್ಲಿ ಕಂಡ ಸಾಮಾನ್ಯ ವಿಷಯಗಳನ್ನೇ ಅಸಾಮಾನ್ಯವಾಗಿ ಚಿತ್ರಿಸಿ, ಓದುಗರನ್ನು ಅಚ್ಚರಿಗೀಡುಮಾಡುವ ಕಲೆ ತೇಜಸ್ವಿಯವರಿಗೆ ಕರಗತವಾಗಿದೆ ಎಂಬುದು ಈ ಕೃತಿಯ ಮೂಲಕ ಸ್ಪಷ್ಟವಾಗುತ್ತದೆ. ಇದು ಕೇವಲ ನಿಸರ್ಗದ ಸೋಜಿಗವನ್ನು ಹೇಳುವುದಿಲ್ಲ. ಅಕ್ಕಮ್ಮ, ಬೇಂಕ್ರು, ಮಾರನೂ ಇದರೊಳಗೆ ಬರುತ್ತಾರೆ. ಆದರೂ ಇವು ಕೇವಲ ಮನುಷ್ಯ ಕತೆಗಳಲ್ಲ. ಹಕ್ಕಿ, ಕೀಟ, ಹಲ್ಲಿಯು ಜಿವಂತ ಪಾತ್ರಗಳಾಗಿ ಇಲ್ಲಿ ಕಂಡುಬರುತ್ತವೆ. 'ಒಂದು ಝುರಿಯ ಜಾಡಿನಲ್ಲಿ, ನಾವು ಕೊಂದ ಹಕ್ಕಿ, ಜೀಕ್ರು ಮೇಸ್ತ್ರಿ' ಮುಂತಾದ ಕತೆಗಳು ಬದುಕಿನ ಬಗೆಗಿನ ನಮ್ಮ ಸಂವೇದನೆಯನ್ನು ಸೂಕ್ಷ್ಮಗೊಳಿಸುವವು. ಕೃತಿಯ ಕೆಲವು ಶೀರ್ಷಿಕೆಗಳು ತಂದೆಯಾಗಿ ಮಕ್ಕಳಿಗೆ ತಿಳಿಸಿಕೊಡಬಹುದಾದ ಎಳೆಯರ ಪರಿಸರದ ಪಾಠದಂತಿವೆ. ಮನೆ, ಸ್ನೇಹಿತರು, ಆಳುಕಾಳುಗಳು, ವೃತ್ತಿ, ಹವ್ಯಾಸ, ಸಾಹಸ ಇತ್ಯಾದಿಗಳ ಬಗ್ಗೆ ಮಾಹಿತಿಗಳು ಪರಿಸರದ ಜೊತೆಯಾಗಿಯೇ ಬರುತ್ತವೆ. ಕಾರಣ ತೇಜಸ್ವಿ ಅವರಿಗೆ ಗಿಡ-ಮರ-ಪ್ರಾಣಿ ಆವರಿಸಿದ ಜೀವಪ್ರಪಂಚದಲ್ಲಿ ಮಾನವೀಯ ಪರಿಸರದ ಅಸ್ಥಿತ್ವವನ್ನು ತಿಳಿಸಿಕೊಡುವುದು ಅವರ ಬರಹಶೈಲಿಯಾಗಿರುವುದು. ಪರಿಸರದ ಕತೆ ವನ್ಯ ಪರಿಸರದ ಹಿನ್ನೆಲೆಯಲ್ಲಿ ಸಾಮಾಜಿಕ ಜೀವನವನ್ನು ಕಟ್ಟಿಕೊಡುವ ಒಂದು ಪ್ರಯೋಗ. ಕಳೆದ ಶತಮಾನದ ಮೂವತ್ತರ ದಶಕದಲ್ಲಿ ಕುವೆಂಪು ಅವರು ಬರೆದ 'ಮಲೆನಾಡಿನ ಚಿತ್ರಗಳು' ಕೃತಿಗೆ ಎಂಬತ್ತರ ದಶಕದ ಉತ್ತರವೆಂಬತೆ 'ಪರಿಸರದ ಕತೆ' ಮೂಡಿಬಂದಿದೆ. [೦೩]

ಚೇಂಕ್ರ ಮೇಸ್ತ್ರಿಯನ್ನು ಅರಿಸ್ಟಾಟಲ್ ಹೆಸರಿನೊಂದಿಗೆ ಸಮೀಕರಿಸುವ ಶೀರ್ಷಿಕೆಯಿಂದ ಹಿಡಿದು ಅವನ ವ್ಯಕ್ತಿ ಚಿತ್ರವನ್ನು ಕಡೆಯುವ ಹಲವು ಉಪಕ್ರಮಗಳಲ್ಲಿ ತೇಜಸ್ವಿಯವರ ಆದ್ಯತೆ, ಒತ್ತು ಮತ್ತು ಜೀವನ ದೃಷ್ಟಿಗಳ ಒಂದು ಸೂಕ್ಷ್ಮ ಪರಿಚಯ ನಮಗಾಗುತ್ತದೆ. ಒಬ್ಬ 'ಹಳ್ಳಿಗಮಾರ' 'ಅನಕ್ಷರಸ್ಥ' ಮುದುಕನನ್ನು ಪಕೃತಿ ಶಾಸ್ತ್ರಜ್ಞನ್ನಾಗಿ ಕಾಣುವ, ಅವನ ವರ್ತನೆಗಳಿಂದ ಅವನನ್ನು ಒಬ್ಬ ಧ್ಯಾನಸ್ಥ ಯೋಗಿಯ ಹಾಗೆ, ಋಷಿಯ ಹಾಗೆ ಪರಿಭಾವಿಸುವ, ಅವನನ್ನು ಕಾಲಾತೀತ, ದೇಶಾತೀತ ನೆಲೆಗಳಲ್ಲೂ ಇಟ್ಟು ನೋಡುವ ಕ್ರಮ ತೇಜಸ್ವಿಯವರ ಪ್ರಧಾನ ಧಾರೆಯ ಬರವಣಿಗೆಗೆ ಹತ್ತಿರವಾಗಿಯೇ ಇದೆ. 'ಇಲ್ಲಿ ನೀವು

ಬಂಡೆಗಳ ನಡುವೆ ನದಿ ಹರಿಯುವುದನ್ನು ನೋಡುತ್ತಾ ತುಂಬ ಹೊತ್ತು ಕುಳಿತಿದ್ದರೆ ಅಲ್ಲೊಬ್ಬ ಮುದುಕ ಕಲ್ಲಿನೊಡನೆ ಕಲ್ಲಾಗಿ ಅಲ್ಲಾಡದೆ ಗಾಳದ ಕೋಲು ಹಿಡಿದು ಕುಳಿತಿರುವುದು ಕಾಣುತ್ತದೆ'[೦೬] ಎಂಬ ವಾಕ್ಯವನ್ನು ಗಮನಿಸಿದರೆ ತೇಜಸ್ವಿಯವರು ಪರಿಸರ ಕುರಿತ ತಮ್ಮ ಬರವಣಿಗೆಗಳಲ್ಲಿ ಮತ್ತೆ ಮತ್ತೆ ಕುವೆಂಪುರವರ ರೆಫರೆನ್ಸ್‌ನ್ನು ತೆಗೆದುಕೊಳ್ಳುತ್ತಾರೆ ಎಂದೆನಿಸುವುದು. 'ಚೇಂಕ್ರ ಮೇಸ್ತ್ರಿ ಮತ್ತು ಅರಿಸ್ಟಾಟಲ್'ನ ಕೊನೆಯ ಪ್ಯಾರಾ ಈ ದೃಷ್ಟಿಯಿಂದ ಗಮನಾರ್ಹ. ಅಲ್ಲದೆ ಪ್ರಸ್ತುತ ಅಧ್ಯಯನದಲ್ಲಿ ತೇಜಸ್ವಿಯವರು ಒದಗಿಸುವ ಮಾಹಿತಿಗಳಿಗಿಂತ ಅವರ ಮಾನವ ಕಲ್ಪನೆಯ ಸ್ವರೂಪದ ಮೇಲೆ ಇರುವುದರಿಂದ ತೇಜಸ್ವಿ ವ್ಯಕ್ತಿತ್ವ ನಿರ್ಮಿತಿಯ ಹಿಂದಿನ ಪ್ರೇರಣೆಗಳನ್ನೂ ಅರಿಯುವ ದೃಷ್ಟಿಯಿಂದ ಕೂಡ ಇದೊಂದು ಅರ್ಥಪೂರ್ಣ ಸೂಚನೆಯಾಗಿ ಕಂಡುಬರುವುದು.

'ಪರಿಸರ ಕತೆ' ಯಲ್ಲಿ ಮರಗಿಡ, ಪಕ್ಷಿಗಳ ಜಗತ್ತಿನಂತೆ ಒಂದು ಮನುಷ್ಯ ಪರಿಸರವೂ ತೇಜಸ್ವಿಯವರ ಮಾನಸಿಕ ಲೋಕದ ಒಳಪರಿಸರವೂ ಏಕಕಾಲದಲ್ಲಿ ಬಿಚ್ಚಿಕೊಳ್ಳುತ್ತ ಹೋಗುತ್ತವೆ. ಇದರಿಂದಾಗಿ ಬರವಣಿಗೆಗೆ ವಿಶೇಷವಾದ ಲವಲವಿಕೆ, ಜೀವಂತಿಕೆ ಬಂದಂತಿದೆ. ತೇಜಸ್ವಿಯವರ ಕಾಮಿಕ್ ಧಾಟಿ ಪುಸ್ತಕವನ್ನು ಹೊಚ್ಚಹೊಸದಾಗಿ ಇಟ್ಟಿದೆ. ಒಂದು ಪುಟವೂ ಬೇಸರ ಹುಟ್ಟಿಸುವುದಿಲ್ಲ. ವಿನೋದ ತೇಜಸ್ವಿಯವರ ಬರೆವಣಿಗೆಯಲ್ಲಿ ಕೇವಲ ಒಂದು ತಾಂತ್ರಿಕ ಉಪಕರಣವಲ್ಲ. ಅದು ಅವರು ಅನುಭವವನ್ನು ಗ್ರಹಿಸುವ ಮತ್ತು ಅಭಿವ್ಯಕ್ತಿಸುವ ತಾತ್ವಿಕತೆಗೆ ಸಂಬಂಧಿಸಿದ್ದು. ವೈನೋದಿಕ ದರ್ಶನ ಎಂಬ ಪರಿಕಲ್ಪನೆಯನ್ನು ಸಮಕಾಲೀನ ಕನ್ನಡ ಲೇಖಕರ ಸಂದರ್ಭದಲ್ಲಿ ಉಪಯೋಗಿಸಬಹುದಾದಲ್ಲಿ ತೇಜಸ್ವಿಯವರಿಗಿಂತ ಒಳ್ಳೆಯ ಉದಾಹರಣೆ ಸಿಗುವುದು ಸ್ವಲ್ಪ ಕಷ್ಟವೇ. ಪಶ್ಚಿಮದ ವೈಜ್ಞಾನಿಕ ನಾಗರೀಕತೆ ಪ್ರಭಾವಿಸಿದ ಚಿಂತನೆ ಮತ್ತು ಪೂರ್ವದ ಪರಂಪರಾಗತ ಸ್ಥಳೀಯ ಸಾಮಾನ್ಯ ಜ್ಞಾನವನ್ನು ಆಧರಿಸಿದ ನಂಬಿಕೆಗಳ ನಡುವೆ ತಮ್ಮ ಧೋರಣೆಯನ್ನು ಖಚಿತಪಡಿಸಿಕೊಳ್ಳಲು, ಇವೆರಡರ ಬಗ್ಗೆಯೂ ಏಕಮುಖ ಒಪ್ಪಿಗೆ-ತಿರಸ್ಕಾರಗಳಿಲ್ಲದ ಅನುಮಾನಗಳನ್ನು ಕಾಯ್ದುಕೊಳ್ಳಲು ಈ ವೈನೋದಿಕ ಧಾಟಿ ತೇಜಸ್ವಿಯವರಿಗೆ ಒದಗಿಬಂದಿದೆ [೦೭]ಎಂಬ ವಿಮರ್ಶೆಯನ್ನು ತಳ್ಳಿಹಾಕುವಂತಿಲ್ಲ.

ವಾಸ್ತವತಾವಾದಿ ತಾತ್ವಿಕ ನೆಲೆಗಟ್ಟನ್ನು ಹೊಂದಿರುವ 'ಕರ್ವಾಲೋ' ಕಾದಂಬರಿ ದೈನಂದಿನ ಬದುಕಿನ ಸೂಕ್ಷ್ಮಗಳಿಗೆ ಮನಸ್ಸನ್ನು ತೆರೆದುಕೊಂಡು ವಿಚಿತ್ರವಾದ ರಹಸ್ಯಗಳನ್ನು ಹೊರಹಾಕುತ್ತದೆ. ಕಾದಂಬರಿಯಲ್ಲಿ ಬರುವ ವ್ಯಕ್ತಿಗಳು ಮಾನವ ಪ್ರಜ್ಞೆಯ ಸಂಕೇತವಾದರೆ ಹಾರುವ ಓತಿ ಕಾಲಾ ದೇಶಗಳ ಯಾವುದೋ ವಿಸ್ಮಯದ ಸಂಕೇತವಾಗಿ ಕಾಣುತ್ತದೆ. "ಕರ್ವಾಲೋ ಕೃತಿಯ ಮಹತ್ವವಿರುವುದು ಅದು ಬದುಕನ್ನು ಗ್ರಹಿಸುವ ಕ್ರಮದಲ್ಲಿ; ಅದು ಕಟ್ಟಿಕೊಡುವ ಸಣ್ಣ ಸಣ್ಣ ವಿವರಗಳಲ್ಲಿ: ಅದು ಸೃಷ್ಟಿಸುವ ಅಥೆಂಟಿಕ್ ಪ್ರಪಂಚದಲ್ಲಿ."[೦೮] ಎಂಬುದು ಓದುಗರ ಅರಿವಿಗೆ ಬಂದೇ ಬರುತ್ತದೆ.

ಬದುಕನ್ನು ಸಂಪೂರ್ಣವಾಗಿ ಅರಿಯಬೇಕೆಂಬ ನಮ್ಮೆಲ್ಲ ಪ್ರಯತ್ನಗಳನ್ನೂ ಮೀರಿ ಬದುಕು ಉಳಿದುಕೊಂಡು ಬಿಡುವುದಾದರೂ ಈ ಪ್ರಯತ್ನಗಳೇ ನಮ್ಮ ಇತ್ಯಾತ್ಮಕ ಧೋರಣೆಗಳಿಗೆ ಮೂಲ ಪ್ರೇರಣೆಗಳಾಗಿರುತ್ತವೆ. ಈ ಪ್ರಯತ್ನಗಳಲ್ಲಿ ತೊಡಗಿಕೊಂಡಾಗಲೇ ನಮ್ಮ ಅನುಭವದ ಪರಿಧಿಯೂ ವಿಸ್ತೃತಗೊಳ್ಳುವುದು. ಈ ದೃಷ್ಟಿಯಿಂದ ನೋಡಿದಾಗ ಬದುಕಿನ ನಿಗೂಢತೆಗೆ

ಹಾರುವ ಓತಿ ಈ ಕಾದಂಬರಿಯಲ್ಲಿ ಸಂಕೇತವಾಗಿ ಬಂದಿರಬಹುದು ಎನಿಸುತ್ತದೆ. ಇಂದಿನ ವಿಜ್ಞಾನ ಯುಗದಲ್ಲೂ ಮಾನವನ ಹಿಡಿತಕ್ಕೆ ಸಿಗದ, ವ್ಯಾಖ್ಯಾನಕ್ಕೆ ನಿಲುಕದ ಪ್ರಕೃತಿಯ ನಿಗೂಢತೆಗಳು ಸಾಕಷ್ಟಿವೆ ಎಂಬುದು ಸತ್ಯ ಸಂಗತಿ.

ಆದ್ದರಿಂದಲೇ ಜೀವನ ಮತ್ತು ಪ್ರಕೃತಿಯ ರಹಸ್ಯಾತ್ಮಕ ಹಾದಿಯಲ್ಲಿನ ವಿಸ್ಮಯಗಳು ಸೂಚ್ಯವಾಗುತ್ತವೆ. ವಾಚ್ಯತೆಯ ಬೆನ್ನಲ್ಲೆ ಸೂಚ್ಯತೆ ಹುದುಗಿರುತ್ತದೆ. ಹಳತುಗಳ ಜೊತೆ ಹೊಸದೊಂದು ಅಡಗಿರುತ್ತದೆ. ಮತ್ತೆ ಹೊಸತು ಹಳೆಯದಾಗಲೇಬೇಕು ಇದೊಂದು ನಿರಂತರ ಕ್ರಿಯಶೀಲವಾಗಿರುವ ಜೀವನಚಕ್ರ. ಆದರೆ ಬೀಸುವ ಗಾಳಿ ನಿಗೂಢ, ಬಿಡಿಸಲಾಗದ ಒಗಟು. ಒಟ್ಟಾರೆ ಬಾಳ್ವೆ ಪರಿಸರದೊಂದಿಗಿನ ನಿರಂತರ ಹೋರಾಟ ಮತ್ತು ಹುಡುಕಾಟದಂತಿದೆ.

'ಕರ್ವಾಲೋ' ಕಾದಂಬರಿಯಲ್ಲಿ ಮನುಷ್ಯ ಲೋಕದ ವಿದ್ಯಮಾನಗಳನ್ನೆಲ್ಲ ಸಮಗ್ರ ಪರಿಸರದ ವೈಶಾಲ್ಯದಲ್ಲಿ, ಮನುಷ್ಯ ನಿಯಂತ್ರಿಸಲಾರದ ಪರಿಸರದ ನಿತ್ಯ ಚಟುವಟಿಕೆಗಳ ವಿವಿಧ ತೆರನಾದ ಸಂದರ್ಭಗಳಲ್ಲಿ ಸಮನ್ವಯಿಸಿ ನೋಡುವ ದೃಷ್ಟಿಯನ್ನು ಕಾಣಬಹುದು. ಮೇಲುನೋಟಕ್ಕೆ ಕರ್ವಾಲೋ ಈ ಕಾದಂಬರಿಯ ನಾಯಕ ಪಾತ್ರದಂತೆಯೂ ಹಾಗೂ ಕೇಂದ್ರವ್ಯಕ್ತಿಯಾಗಿಯೂ ಕಂಡುಬರುತ್ತಾರೆ. ಆದರೆ ಕಾದಂಬರಿ ಬೆಳೆದಂತೆ ಮಂದಣ್ಣನ ಪಾತ್ರ ಪ್ರಭುತ್ವಗೊಳ್ಳುತ್ತದೆ. ಆತನ ವ್ಯಕ್ತಿತ್ವದ ವಿವಿಧ ಮುಖಗಳು ಬೆಳೆಯಲಾರಂಭಿಸುತ್ತವೆ. ಮಂದಣ್ಣನೇ ಕರ್ವಾಲೋರವರ ಗುರುವಂತೆ ಮಾನ್ಯವಾಗುತ್ತಾನೆ. ವೈಜ್ಞಾನಿಕ ಭಾಷೆಯಲ್ಲಿ ಅನುಭವಗಳನ್ನು ವಿವರಿಸುವ ಸಾಮರ್ಥ್ಯ ಇಲ್ಲದಿದ್ದರೂ ಮಂದಣ್ಣ ಪ್ರಕೃತಿಯ ಅನೇಕ ವಿಜ್ಞಾನ ವಿಸ್ಮಯಗಳನ್ನು ಬಲ್ಲವನಾಗುತ್ತಾನೆ. ಕಾಡಿನಲ್ಲಿಯೇ ಹುಟ್ಟಿ ಬೆಳೆದ ಮಂದಣ್ಣನಿಗೆ ಗ್ಲೋವರ್ಮ್ ಆಗಲಿ, ಹಾರುವ ಓತಿಯಾಗಲಿ ಹೊಸ ಶೋಧನೆಗಳಲ್ಲ. ಇವೆಲ್ಲ ಆತನ ಬದುಕಿನೊಂದಿಗೆ ಅಂಟಿಕೊಂಡಿರುವ ಸತ್ಯಗಳು.

ನಾಗರೀಕ ಪರಿಸರದಲ್ಲಿ ಗೇಲಿಗೆ ಒಳಗಾಗುವ ಮಂದಣ್ಣ ಪ್ರಕೃತಿಯ ಸನ್ನಿಧಿಯಲ್ಲಿ ಒಬ್ಬ ಅದ್ಭುತ ಪ್ರಕೃತಿ ತಜ್ಞನಂತೆ ಕಾಣುತ್ತಾನೆ. ಈ ಮಾತನ್ನು ಕರ್ವಾಲೋ ಅವರೇ ಹೇಳುತ್ತಾರೆ. ಇದಲ್ಲದೇ ಬಿರಿಯಾನಿ ಕರಿಯಪ್ಪ ಮತ್ತು ಹಾವುಗೊಲ್ಲರ ಎಂಗ್ಟನ ಪಾತ್ರಗಳು ಆಸಕ್ತಿಯನ್ನು ಕೆರಳಿಸುತ್ತವೆ. ಹೀಗೆ ವ್ಯಕ್ತಿಯಿಂದ ವ್ಯಕ್ತಿಗೆ ಸ್ಥಾನಪಲ್ಲಟ್ಟಗೊಳ್ಳುವ 'ಮಾನವ' ಕಲ್ಪನೆಯು ಅಂತಿಮವಾಗಿ ಹಾರುವ ಓತಿಯ ಮೇಲೆ ಕೇಂದ್ರೀಕೃತಗೊಳ್ಳುತ್ತದೆ. ಜೀವ ವಿಕಾಸದ ಹಾದಿಯಲ್ಲಿ ಅನೇಕ ಸಂಗತಿಗಳನ್ನು ಅನಾವರಣಗೊಳಿಸುವ ಕಾದಂಬರಿಯು ವಿಜ್ಞಾನ ಆಧ್ಯಾತ್ಮ ಇತ್ಯಾದಿ ನಿಗೂಢತೆಗಳಿಗೆ ಕುತೂಹಲವಾಗಿ ಕಾಣಿಸಿಕೊಳ್ಳುತ್ತದೆ. ಹಾರುವ ಓತಿಯನ್ನು ಕೇಂದ್ರ ವಸ್ತುವಾಗಿಟ್ಟುಕೊಂಡ ತೇಜಸ್ವಿ ಜೀವ ವಿಜ್ಞಾನ ಸಮಾಜ ವಿಜ್ಞಾನ, ಪ್ರಕೃತಿ ವಿಜ್ಞಾನ, ಮಾನವಶಾಸ್ತ್ರ ಮೊದಲಾವುಗಳನ್ನು ತಮ್ಮ ನಿರೂಪಣೆಯಲ್ಲಿ ಸೇರಿಸಿಕೊಂಡಿರುವುದರಿಂದ ಇದೊಂದು ವಿಶಿಷ್ಟ ಬಗೆಯ ಕಾದಂಬರಿಯಾಗಿ ಮೂಡಿಬಂದಿದೆ. ಸಮಕಾಲೀನ ವಿಚಾರಗಳನ್ನು ಸಂವೇದನಾತ್ಮಕ ಸೂಕ್ಷ್ಮ ಅನುಭವಗಳನ್ನು ತಮ್ಮ ಕೃತಿಯಲ್ಲಿ ಪರಿಣಾಮಕಾರಿಯಾಗಿ ತೇಜಸ್ವಿಯವರು ತರಬಲ್ಲರು ಎಂಬುದಕ್ಕೆ ಕರ್ವಾಲೋ ಒಂದು ಉತ್ತಮವಾದ ಉದಾಹರಣೆಯಾಗಿದೆ.

ಅರವತ್ತು ಕೋಟಿ ವರ್ಷಗಳ ಹಿಂದೆ ಜೀವಿಸಿದಂತಹ ಹಾರಾಡುವ ಓತಿಯೊಂದರ ಶೋಧನೆಗೆ ಹೊರಟ ಕೀಟಶಾಸ್ತ್ರಜ್ಞ ಮತ್ತು ಸಸ್ಯವಿಜ್ಞಾನಿ ಪ್ರೊ. ಕರ್ವಾಲೋ ಅವರನ್ನು ಹಿಂಬಾಲಿಸಿದ ಭಿನ್ನ ಜೀವನಾಸಕ್ತಿಯುಳ್ಳ ವ್ಯಕ್ತಿಗಳ ತಂಡ ಪಡೆದುಕೊಳ್ಳುವ ವಿಶಿಷ್ಟ ಅನುಭವಗಳೇ ಕರ್ವಾಲೋ ಕಾದಂಬರಿಯ ಕಥಾಹಂದರದಲ್ಲಿ ಕಂಡುಬರುವ ಅಪೂರ್ವ ವಸ್ತುವೈವಿಧ್ಯವಾಗಿದೆ. **ಕರ್ವಾಲೋ ಹುಡುಕಲು ಹೊರಟಿರುವ ಓತಿಯೊಂದರ ಹುಡುಕಾಟದ ಅಂಗವಾಗಿ ಮನುಷ್ಯ ಜೀವಿಗಳ ವಿಕಾಸ ಈ ಕಾದಂಬರಿಯಲ್ಲಿ ಚರ್ಚಿಸಲ್ಪಟ್ಟಿದೆ. ವಿಜ್ಞಾನದ ಚಕ್ಷುವಿನಿಂದ ವ್ಯಕ್ತಿಯನ್ನು ನೋಡುವ, ಪರಿಸರದ ಮಧ್ಯೆ ಬದುಕಿರುವ ವ್ಯಕ್ತಿಯ ಮನುಷ್ಯತ್ವವನ್ನು ಗುರುತಿಸುವ ವಿಶಿಷ್ಟ ದೃಷ್ಟಿ ಈ ಕಾದಂಬರಿಯಲ್ಲಿ ಒಡಮೂಡಿದೆ.** ವೈಜ್ಞಾನಿಕತೆಯ ಕಥಾನಿರೂಪಣೆ ಶ್ರೀಸಾಮಾನ್ಯನಿಗೂ ಅರ್ಥವಾಗುವಷ್ಟು ಸಹಜವಾಗಿ ಕರ್ವಾಲೋದಲ್ಲಿ ಸಂವಹನಗೊಂಡಿರುವುದು ಸಹ ಅದರ ಹೆಚ್ಚುಗಾರಿಕೆಯಾಗಿದೆ. ವೈಚಾರಿಕತೆಯನ್ನು ತನ್ನ ಸಮಕಾಲೀನ ಸಂದರ್ಭದ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನ ಮಾಡಿರುವುದು ಈ ಕಾದಂಬರಿಯ ವಿಶಿಷ್ಟತೆಯೆನ್ನಬಹುದು.

ಕರ್ವಾಲೊ ಕೃತಿಯಲ್ಲಿ ಬೈರ, ಮಾಸ್ತಿ, ಹಾವುಗೊಲ್ಲರ ಎಂಕ್ಟನಲ್ಲಿರುವ ಪ್ರಾಣಿ ಹಾಗೂ ಸಸ್ಯಗಳ ಜ್ಞಾನ ಅವರಿಗೆ ಅದ್ಭುತವೆನಿಸುತ್ತದೆ. ದೇಶಿ ಔಷಧ ಜ್ಞಾನದ ವಿವರಣೆ, ಆ ಪರಂಪರೆಯ ವಿಶೇಷತೆಗಳನ್ನು ಆ ಪಾತ್ರಗಳು ಕಾಡಿನಲ್ಲಿ ಸಸ್ಯವೊಂದನ್ನು ಕಂಡಾಗ ತಕ್ಷಣ ನಡೆದುಕೊಳ್ಳುವ ರೀತಿಯಿಂದಲೇ ತೇಜಸ್ವಿ ಮನಗಾಣಿಸುತ್ತಾರೆ. ಮಾರನ ಅನೇಕ ಮಾತು, ವಾದ, ನಂಬಿಕೆಯನ್ನು ಮೊದಲು ಒಪ್ಪದೆ ಬುರುಡೆ ಬಿಡುತ್ತಿದ್ದಾನೆಂದುಕೊಂಡರೂ, ಒಂದು ರೀತಿಯಲ್ಲಿ ಅವುಗಳ ಸತ್ಯಾಸತ್ಯತೆ ಪರಿಶೀಲಿಸಿ ಒಪ್ಪಿಕೊಳ್ಳುತ್ತಾರೆ. ಮಂದಣ್ಣ ಆ ಊರಿನವರಿಗೆ ಕೇವಲ ಕೆಲಸಕ್ಕೆ ಬಾರದ, ಹಕ್ಕಿಪಕ್ಕಿ, ಹುಳುಹುಪ್ಪಟೆ, ಚಾಟರಬಿಲ್ಲು, ಶಿಕಾರಿ ಈ ರೀತಿ ಕೇವಲ ಉಪಯೋಗವಿಲ್ಲದೆ ತಿರುಗುವ ವ್ಯಕ್ತಿ. ಆದರೆ ಡಾ.ಕರ್ವಾಲೋ ಅಂತಹ ವಿಜ್ಞಾನಿಗೆ ಆತ ಒಂದು ಅದ್ಭುತ, ನಿಸರ್ಗ ತಜ್ಞನಾಗುತ್ತಾನೆ. ಈ ರೀತಿಯ ಎರಡು ವಿಭಿನ್ನ ಪಾತ್ರಗಳನ್ನು ತೇಜಸ್ವಿ ಸೃಷ್ಟಿ ಮಾಡಿದ್ದಾರೆ. ಅಪ್ರಯೋಜಕ, ಹಡೆ ಎಂದು ಜನ ಭಾವಿಸಿರುವ ಮಂದಣ್ಣ ಒಂದು ಕಡೆಯಾದರೆ, ನಿಸರ್ಗದ ಒಂದು ಅದ್ಭುತ ರಹಸ್ಯ ಶೋಧಿಸುವ ಡಾ.ಕರ್ವಾಲೋ ಇನ್ನೊಂದು ತುದಿ ಎನಿಸಿದರೂ, ಅವರಿಬ್ಬರಲ್ಲೂ ಒಂದು ಸಮಾನ ಅಂಶವಿದೆ. ನಿಸರ್ಗದ ಒಳ ಹಂದರ, ಹೆಣಿಗೆಗಳನ್ನು ತನ್ನ ಪಡ್ಡೆತನದಿಂದಲೇ ಅರಿತ ಮಂದಣ್ಣನಿಗೆ ತಾನರಿತಿರುವುದು ಒಂದು ಅದ್ಭುತ ಲೋಕವೆಂಬ ಪರಿಜ್ಞಾನವಿಲ್ಲ, ಆದರೆ ವಿಜ್ಞಾನಿ ಕರ್ವಾಲೊಗೆ ಅವೆಲ್ಲವನ್ನೂ ಅರಿತಿರುವ ಮಂದಣ್ಣ ಓರ್ವ ವಿಶಿಷ್ಟ ವ್ಯಕ್ತಿಯಾಗಿದ್ದು, ನಿಸರ್ಗದಲ್ಲಿ ಅವಿತಿರುವ ಆ ರಹಸ್ಯಕ್ಕೊಂದು ಬೆಳಕಿಂಡಿಯಂತೆ ಕಾಣುತ್ತಾನೆ. ಮುಗ್ಧತೆ ಮತ್ತು ಅವಜ್ಞೆಗಳ ನಡುವಣ ವ್ಯತ್ಯಾಸವನ್ನು ಗುರುತಿಸುವಾಗ ಮನುಷ್ಯನನ್ನು ಅವನ ಪರಿಸರದಿಂದ ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ 'ವೈಯಕ್ತಿಕ' ಎನ್ನಬಹುದಾದ ಗುಣಾವಗುಣಗಳಿರಬಹುದಾದರೂ ತನ್ನ ವರ್ಗದ ಗುಣಾವಾಗುಣಗಳ, ಮಿತಿ ಸಾಮರ್ಥ್ಯಗಳ, ಒಟ್ಟಾರೆ ಸಮುದಾಯದ ಅನುಭವಗಳ ಹಿನ್ನೆಲೆಯಲ್ಲಿಯೇ ಆತನ ಬದುಕು ರೂಪುಗೊಳ್ಳುವುದರಿಂದ ವರ್ಗವರ್ಗಗಳ ನಡುವಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಬೌದ್ಧಿಕ ಅಂತರಗಳು ಅವುಗಳ ಪರಸ್ಪರ ನಿಗೂಢತೆಗೆ ಕಾರಣವಾಗಿರುತ್ತವೆ. ಹೀಗಾಗಿ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಒಬ್ಬನಿಗೆ ಸಾಮಾನ್ಯವಾಗಿ

ಕಾಣುವಂತದ್ದು ಮತ್ತೊಬ್ಬನಿಗೆ ಅಸಮಾನ್ಯ ಎನಿಸಬಹುದು. ಈ ವೈದೃಶ್ಯಗಳೇ ಒಟ್ಟು ಬದುಕಿನ ಸಂದರ್ಭದಲ್ಲಿ ವಿಸ್ಮಯವನ್ನುಂಟುಮಾಡುತ್ತವೆ. ಅನುಭವ ವೈವಿಧ್ಯ, ಮೌಲ್ಯಗಳ ಸಾಪೇಕ್ಷ ಸ್ವರೂಪ, ಸಂದರ್ಭಗಳ ಸಂಕೀರ್ಣತೆ ಇವೆಲ್ಲವುಗಳನ್ನೂ ಒಳಗೊಳ್ಳುವ ಬದುಕು ಎಲ್ಲಾ ಮನುಷ್ಯರಿಗೂ ಸಾಮಾನ್ಯವಾದುದನ್ನು ಕೊಡುವಂಥದು ಏನು ಎಂಬ ಪ್ರಶ್ನೆ ಈ ಕಾರಣದಿಂದಲೇ ತುಂಬ ಜಟಿಲವಾದುದು ಮಹತ್ವಪೂರ್ಣವಾದುದು ಆಗುತ್ತದೆ. ಮನುಷ್ಯ-ಪ್ರಕೃತಿ, ಮನುಷ್ಯ-ಸಮಾಜದ ಸಂಬಂಧಗಳಲ್ಲಿಯೂ ಇದು ನಿಜವಾಗುವುದರಿಂದ ಇಂಥ ಸಂಬಂಧಗಳನ್ನು ಶೋಧಿಸ ಹೊರಡುವ ಲೇಖಕ ಹಲವು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ತೇಜಸ್ವಿಯವರ ಕರ್ವಾಲೋ ಕಾದಂಬರಿಯ ಮಹತ್ವ ಅರಿವಾಗುವುದು ಇಲ್ಲಿಯೇ.[೦೯]

"ಸೃಷ್ಟಿಶೀಲ ಬರಹಗಾರ ಅನೇಕ ವೇಳೆ ತನ್ನ ಸಿದ್ಧಾಂತ, ತತ್ವ, ತರ್ಕ ಇತ್ಯಾದಿಗಳ ಇತಿಮಿತಿಗಳನ್ನು ತಿಳಿಯಲು ಅದನ್ನು ಅತಿರೇಕದ ಅಂಚಿನವರೆಗೆ ಒಯ್ಯಬೇಕಾಗುತ್ತದೆ. ಈ ರೀತಿ ಮಿತಿಮೀರಿಯೇ ಅರಿಯಬೇಕಾದ ಅನಿವಾರ್ಯತೆ ಎಲ್ಲ ಸೃಷ್ಟಿಶೀಲ ಕಲಾವಿದರಿಗೂ ಅನೇಕ ವೇಳೆ ಅನಿವಾರ್ಯವಾಗುತ್ತದೆ" ಎಂದಿದ್ದಾರೆ ತೇಜಸ್ವಿ. ದಟ್ಟ ಮಲೆನಾಡಿನ ಆವರಣದಲ್ಲಿ ಬದುಕಿರುವ ಮಂದಣ್ಣನಂತಹ ಸಾಮಾನ್ಯ ವ್ಯಕ್ತಿಯಲ್ಲಿ ಕಂಡುಬರುವ ಪ್ರಕೃತಿ ವಿಜ್ಞಾನದ ಪ್ರತಿಭೆಯನ್ನು ಕರ್ವಾಲೋರಂತಹ ವಿಜ್ಞಾನಿ ಗುರುತಿಸುವುದು ಹಾಗೂ ಅವನ ಸಹಾಯದಿಂದಲೇ ಜೀವ ವಿಜ್ಞಾನ ರಹಸ್ಯದ ಶೋಧನೆಗೆ ತೊಡಗುವುದು ಕಾದಂಬರಿಯ ಪ್ರಮುಖ ಅಂಶವಾಗಿದೆ. **ಈ ಕೃತಿಯಲ್ಲಿ ಬರುವ ಮಾನವರೆಲ್ಲ ಪ್ರಜ್ಞೆಯ ಸಂಕೇತಗಳಂತೆ ಗೋಚರಿಸಿದರೆ, ಓತಿ ಕಾಲ-ದೇಶಗಳ ಆಚಿನ ಯಾವುದೋ ವಿಸ್ಮೃತಿಯ ಸಂಕೇತವಾಗಿ ಕಂಡುಬರುತ್ತದೆ.** ನಿವೇದಕನಿಗಂತೂ ಓತಿಯನ್ನು ನೋಡುವುದು ಕರ್ವಾಲೋರಂತೆ ಒಂದು ದಿವ್ಯ ಅನುಭವವಾಗಿದೆ. ಆಗ ಅವನು ಹೀಗೆನ್ನುತ್ತಾನೆ. 'ಯಾವುದೋ ಒಂದು ದಿವ್ಯ ಕ್ಷಣದಲ್ಲಿ ಸರಿದ ಕಾಲದ ತೆರೆಯನ್ನು ಮತ್ತೆ ಸರಿಯಕೊಡಗೂಡದೆಂದು ಅಚಲ ನಿರ್ಧಾರದಿಂದ ಬಿಡುಗಣ್ಣಿಂದ ಆ ಓತಿಯನ್ನು ಹಿಡಿದುಕೊಂಡಿದ್ದೆ' ಎಂದು. ಕರ್ವಾಲೋ ಮತ್ತು ನಿವೇದಕನಿಗೆ ಆದ ಅನುಭವಗಳು ಮಂದಣ್ಣ ಮತ್ತು ಕರಿಯಪ್ಪನಿಗೆ ಆಗಲಿಲ್ಲ. ಏಕೆಂದರೆ ಅವರಿಗೆ ಇದೆಲ್ಲ ಸಹಜವಾಗಿ ನಡೆಯುವ ದಿನನಿತ್ಯದ ಚಟುವಟಿಕೆಯಾಗಿ ಕಾಣುತ್ತದೆ. ಕತೆಯ ವಿವರಗಳು ಸಹಜವಾಗಿ ತೆರೆದುಕೊಳ್ಳುತ್ತಾ ಹೋಗುತ್ತವೆ. ಹಾರುವ ಓತಿಯನ್ನು ಪ್ರತೀಕವಾಗಿಸಿ, ಚಿರವಾಸ್ತವವಾದ ಈ ಪ್ರಾಣಿಯೊಂದಿಗೆ ಚಲನಶೀಲವಾದ ಬದುಕಿನ ಸಾಮಾಜಿಕ ಸಂದರ್ಭವನ್ನು ಲೇಖಕರು ಅನನ್ಯವಾಗಿ ತಳಕು ಹಾಕಿದ್ದಾರೆ.[೧೦] ಪ್ರಕೃತಿಯಲ್ಲಿ ಮಾನವ ಸಂಬಂಧದ ನಂಟನ್ನು ಚೆನ್ನಾಗಿ ಅರಿತಿದ್ದ ತೇಜಸ್ವಿಯವರಿಗೆ ಮಾತ್ರ ಕರ್ವಾಲೋರಂತಹ ಪಾತ್ರವನ್ನು ಸೃಷ್ಟಿಸಲು ಸಾಧ್ಯವಾಗಿದ್ದು. ಅವರ ಕೃತಿಗಳಲ್ಲಿ ಬರುವ ಮಂದಣ್ಣ, ಹಾವು ಗೊಲ್ಲರ ಎಂಕ್ಟ, ಬಿರಿಯಾನಿ ಕರಿಯಪ್ಪ, ಮಾರ ಎಲ್ಲರೂ ಸಹ ಅನೇಕ ಸಂದರ್ಭಗಳಲ್ಲಿ ಮುಖ್ಯರಾಗುತ್ತಾರೆ. ಇವರೆಲ್ಲರೂ ಹಲವು ವಿಶಿಷ್ಟತೆಯನ್ನು ಮೈಗೂಡಿಸಿಕೊಂಡವರಾಗಿ ಕಾಣಲ್ಪಡುತ್ತಾರೆ ಮತ್ತು ಪರಿಸರದ ಸೂಕ್ಷ್ಮ ಪರಿಚಯ ಹೊಂದಿದವರಾಗಿ ಗುರುತಿಸಲ್ಪಡುತ್ತಾರೆ.[೧೧] ಈ ಕೃತಿ ಕೇವಲ ನಿಸರ್ಗ ವಿವರಣೆಯನ್ನು ಜಾಳು ಜಾಳಾಗಿಸದೆ ನಿಸರ್ಗ ಹಾಗೂ ಮನುಷ್ಯನ ಬದುಕಿನ ಪರಸ್ಪರ ಅವಲಂಬನೆಯನ್ನು ಸ್ಪಷ್ಟಪಡಿಸುತ್ತಾ ಮತ್ತಷ್ಟು ಗಟ್ಟಿಗೊಳಿಸುತ್ತಾ ಹೋಗುತ್ತದೆ. ಪರಿಸರನಾಶಕ್ಕೆ ಪ್ರಮುಖವಾಗುವ

ರಾಜಕೀಯ, ಅಧಿಕಾರಶಾಹಿ, ಸರ್ಕಾರಿ ಇಲಾಖೆಗಳ ಬೇಜವಾಬ್ದಾರಿಗಳ ಬಗ್ಗೆಯೂ ಬೆಳಕು ಚೆಲ್ಲುತ್ತದೆ. ಪರಿಸರ ನಾಶಕ್ಕೆ ಮನುಷ್ಯ ತೋರಿಸುತ್ತಿರುವ ಅವಜ್ಞತೆಯ ವಿವರಣೆ ಸಹ ಅವರ ಬರಹಗಳಲ್ಲಿ ಸ್ಪಷ್ಟ ರೂಪ ಪಡೆದು ನಿಲ್ಲುವುದು.

'ಚಿದಂಬರ ರಹಸ್ಯ' ಈ ಕಾದಂಬರಿಯು ಒಂದು ಸುಂದರ ಗ್ರಾಮದ ನಿಶ್ಚಿತ ಅವನತಿಯ ಘೋರ ಅನುಭವವನ್ನು ಶಾಮಸುಂದನ ಪತ್ತೇದಾರಿಕೆಯ ಕತೆಯ ರೂಪದಲ್ಲಿ ಜ್ವಲಂತ ಸಮಸ್ಯೆಗಳನ್ನು ಅನಾವರಣಗೊಳಿಸುವ ಮೂಲಕ ಸಮಾಜದ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಬದುಕಿನ ಗಂಭೀರ ಸಮಸ್ಯೆಗಳತ್ತ ಮುಖ ಚಾಚುವ ಕಾದಂಬರಿಯು ಜನತೆಯ ಮೌಢ್ಯತೆ, ಜಾತೀಯತೆಯ ಸಣ್ಣತನ, ಮನುಷ್ಯನ ಸ್ವಾರ್ಥತನದಿಂದಾಗಿ ಇಡೀ ಕೆಸರೂರಿನ ಸಂಸ್ಕೃತಿಯೇ ಉರಿದು ಬೀಳುವ ಚಿತ್ರಣ ಓದುಗನ ಮನದಲ್ಲಿ ತೀವ್ರ ಪರಿಣಾಮವನ್ನುಂಟುಮಾಡುವುದು. **"ಪರಿಸರವೆಂದರೆ ನಿಮ್ಮ ಸುತ್ತಮುತ್ತಲಿರುವ ಗಿಡ, ಮರ, ಬಳ್ಳಿ, ಕಾಡು ಮಾತ್ರವಲ್ಲ, ನೀವು ಮನುಷ್ಯರು ಸಹ ಈ ಪರಿಸರದೊಳಗಿರುವ ಜೀವಿಗಳು ಎನ್ನುವುದನ್ನು ಮರೆಯದಿರಿ"** ಎಂದಿದ್ದಾರೆ ತೇಜಸ್ವಿ. ಮರುಚೈತನ್ಯ ಹೊಂದುವ ನಿಸರ್ಗದ ಗುಣವನ್ನೇ ತೇಜಸ್ವಿ ಮನುಷ್ಯನ ಬದುಕಿನಲ್ಲೂ ಕಾಣಲು ಮುಂದಾಗುತ್ತಾರೆ. ರಫಿ ಮತ್ತು ಜಯಂತಿಯ ಪ್ರೇಮ ಪ್ರಕರಣದಲ್ಲಿ ಪ್ರಕೃತಿಯ ಚೈತನ್ಯ ಚಿಮ್ಮುವಿಕೆಯ ಹಾಗೆಯೇ ಅವರಿಬ್ಬರ ಪ್ರೀತಿ ಸಾಯುವುದಿಲ್ಲ. ಇಡೀ ಕೆಸರೂರು ಹೊತ್ತಿ ಉರಿದರೂ, ರಫಿ ಮತ್ತು ಜಯಂತಿ ನಿಸರ್ಗ ನಿರ್ಮಿಸಿದ ಗುಡ್ಡದ ತುದಿ ತಲುಪಿ ಉಳಿದು ಕೊನೆಗೆ ಒಂದಾಗುತ್ತಾರೆ. ಇಲ್ಲಿ ತೇಜಸ್ವಿ ಪ್ರಕೃತಿ ಮತ್ತು ಮಾನವ ಸಂಬಂಧದ ಒಂದು ದರ್ಶನವನ್ನೇ ಕಟ್ಟಿಕೊಡುತ್ತಾರೆ. ನಿಸರ್ಗ ತಾನು ಉರಿದು ಬೂದಿಯಾದರೂ, ಆ ಬೂದಿಯ ಮಧ್ಯದಲ್ಲೇ ಒಂದು ಬೀಜ ಮೊಳೆತು ಮತ್ತೆ ಮೇಲೇಳುತ್ತದೆ. ಇದೇ ಪರಿಸರದ ಒಂದು ತಂತುವಾದ. ಬುದ್ಧಿ ಹಾಗೂ ಕನಸನ್ನು ಹೊಂದಿರುವ ಮನುಷ್ಯ ಸಹ ಪ್ರೀತಿಯನ್ನು ಕೊಲ್ಲಲಾರ. ಎಲ್ಲಾ ವೈರುಧ್ಯಗಳ ನಡುವೆ ಪ್ರೀತಿ ಚಿರಂತನವನ್ನು ಪಡೆಯುತ್ತದೆ. ಪ್ರಕೃತಿಯ ಸಮೃದ್ಧಿಯ ಬೀಜ ಎಲ್ಲಿದೆಯೋ, ನಾಶಗೊಳ್ಳುವ ಕಾರಣಗಳು ಅದರ ಒಡಲಲ್ಲೇ ಇರುತ್ತವೆ. ನಾಶಕ್ಕೆ ಪ್ರತಿರೋಧವೊಡ್ಡುವ ಸನ್ನಾಹಗಳೂ ನಿರಂತರವಾಗಿ ಪ್ರಕೃತಿಯ ಒಡಲಲ್ಲಿ ಗುಪ್ತವಾಗಿ ಅಡಗಿರುತ್ತವೆ. ಈ ಭೂಮಿ ತತ್ವ ಸದಾ ಪರಿಭ್ರಮಣಾಶೀಲವಾದುದು. ಇದನ್ನು ಮಾನವನ ಅಹಂಕಾರ, ಲೋಭ, ಸ್ವಾರ್ಥಗಳ ರಾಕ್ಷಸೀಯ ಚಿತ್ರಗಳ ಜೊತೆಜೊತೆಗೆ ಚಿದಂಬರ ರಹಸ್ಯದಲ್ಲಿ ತೇಜಸ್ವಿ ಕಟ್ಟಿಕೊಡುತ್ತಾರೆ. ತಾನು ಬದುಕಬೇಕಾದ ಪರಿಸರವನ್ನು ನಾಶಗೊಳಿಸಿದ್ದಲ್ಲಿ ಅದು ತನ್ನ ಅಸ್ತಿತ್ವಕ್ಕೆ ಹಾಕಿಕೊಳ್ಳುವ ಕೊಡಲಿಪೆಟ್ಟು ಎಂಬ ಗ್ರಹಿಕೆ ಇದ್ದಾಗಲೂ ಮಾನವ ಪ್ರಕೃತಿಯ ಮೇಲೆ ಅದೆಷ್ಟೋ ಕ್ರೌರ್ಯವೆಸಗುತ್ತಾನೆ. ಮಾನವ ಮತ್ತು ಪರಿಸರದ ದಟ್ಟ ವಿಷಾದದ ಭಾವವನ್ನು ಈ ಕಾದಂಬರಿ ಓದುಗರಿಗೆ ಅರ್ಥೈಸುತ್ತದೆ.

ಈಗಿನ ಪರಿಸರದಲ್ಲಿ "ಮಾನವ ಜನಾಂಗದ ಸ್ಥಾನ ಎಲ್ಲಿ? ಎಂಬ ಬಗ್ಗೆ ತೇಜಸ್ವಿಯವರ ನಿಲುವು ಸ್ಪಷ್ಟವಾಗಿತ್ತು. ಮನುಷ್ಯ ಸಮಾಜವನ್ನು ಮನುಷ್ಯ ಸಮಾಜ ಅಂತಾ ನೋಡುವುದಕ್ಕೆ ಆಗುವುದಿಲ್ಲ. ಮನುಷ್ಯ ಸಮಾಜ ತನಗಿಂತ ದೊಡ್ಡದಾಗಿರುವ ಪರಿಸರ ಅನ್ನೋ ಒಂದು ಸಮಾಜದ ಜೊತೆಗೆ ಮಿಳಿತವಾಗಿದೆ. ಮನುಷ್ಯನನ್ನು ತನ್ನ ಪರಿಸರದಿಂದ ಪ್ರತ್ಯೇಕಗೊಳಿಸಿ ವಿಶ್ಲೇಷಿಸಲು ಸಾಧ್ಯವಾಗುವುದಿಲ್ಲ. ತನ್ನನ್ನು ತಾನು ಹಾಳುಮಾಡಿಕೊಳ್ಳಬೇಕಾದ ಪರಿಸ್ಥಿತಿ

ಬಂದಾಗ ತನ್ನ ಸುತ್ತಮುತ್ತಲೂ ಹಾಳು ಮಾಡ್ಕೊಂಡಿರುತ್ತಾನೆ. ಮನುಷ್ಯ ಎಷ್ಟರ ಮಟ್ಟಿಗೆ ಪರಿಸರಕ್ಕೆ ಬದ್ಧನಾಗಿದ್ದಾನೆ ಎಂಬ ಸಮಸ್ಯೆಯನ್ನೇ ಆ ಕಾದಂಬರಿಯಾದ್ಯಂತ ನಾನು ವಿಶ್ಲೇಷಣೆ ಮಾಡೋದಕ್ಕೆ ಪ್ರಯತ್ನ ಮಾಡಿದ್ದೀನಿ ಎಂದು ಅಭಿಪ್ರಾಯಿಸಿದ್ದಾರೆ ತೇಜಸ್ವಿ. ಅದು ಕೇವಲ ಪರಿಸರ ಸಂರಕ್ಷಣೆ ಒಂದನ್ನೇ ಪ್ರೊಪಗೇಟ್ ಮಾಡುವಂಥ ಕಾದಂಬರಿಯಲ್ಲ. ಪರಿಸರ ಅಂದ್ರೆ ಏನು? ಮನುಷ್ಯ ಅಂದ್ರೆ ಏನು? ಪರಿಸರವನ್ನು ನಾಶಮಾಡತಕ್ಕಂಥ ಮನುಷ್ಯನ? ಎಂದು ಮರುಪ್ರಶ್ನೆ ಮಾಡುವ ಮೂಲಕ ಅವರು ಪರಿಸರದೊಂದಿಗೆ ಮನುಷ್ಯ ತನ್ನ ಸುಖ ದುಃಖ ಹಂಚಿಕೊಳ್ಳುತ್ತಲೇ ಬದುಕಬೇಕು. ಅದನ್ನು ಮಣಿಸಿ, ನಾಶಮಾಡಿ ತಾನು ಬದುಕೋಕೆ ಸಾಧ್ಯ ಎಂಬುದು ಮನುಷ್ಯನ ಒಂದು ಅವಿವೇಕತನ ಎಂದೇ ಭಾವಿಸಿದ್ದರು. ಅಂತಿಮವಾಗಿ ಮನುಷ್ಯನ ವರ್ತನೆ, ಆಲೋಚನೆ, ಅವನ ಬದುಕಿನ ದಾರಿ ಈ ಪರಿಸರದೊಡನೆ ಬೆಸೆದುಕೊಂಡೇ ಬಂದಿದೆ. ಅಭಿವೃದ್ಧಿ ಅಥವಾ ಬೆಳವಣಿಗೆ ಎಂಬುದಕ್ಕೆ ಒಂದು ಹೊಸ ವ್ಯಾಖ್ಯಾನ ಹುಡುಕುವ ತುರ್ತಿದೆ. ಪರಿಸರವನ್ನು ಉಳಿಸಿ, ತಾನು ಉಳಿದು ಬೆಳೆಯುವ ಹೊಸ ಹಾದಿಯ ಅನ್ವೇಷಣೆಯಾಗಬೇಕಾಗಿದೆ”(೧೨) ಎಂಬ ಖಚಿತ ನಿಲುವು ಅವರದಾಗಿತ್ತು. ತೇಜಸ್ವಿಯವರಿಗೆ ಒಂದು ಪ್ರದೇಶದ ನೈಸರ್ಗಿಕ ಪರಿಸರ ಹಾಗೂ ಅದರ ಭಾಗವಾಗಿರುವ ಮನುಷ್ಯ ಬದುಕು ಮುಖ್ಯವಾಗುತ್ತದೆಯೇ ಹೊರತು, ಕೇವಲ ಮನುಷ್ಯ ಬದುಕು ಮಾತ್ರ ಮುಖ್ಯವಾಗುವುದಿಲ್ಲ ಎಂಬುದನ್ನು ‘ಮಾನವ’ ಕಲ್ಪನೆಯ ಪ್ರಜ್ಞೆಯಲ್ಲಿ ಗ್ರಹಿಸಬಹುದಾಗಿದೆ.

ತೇಜಸ್ವಿ ಅವರಿಗೆ ನಿಸರ್ಗ ಒಂದು ಅಧ್ಯಯನದಲ್ಲಿ ತೊಡಗಿಕೊಂಡು ಅರ್ಥಮಾಡಿಕೊಂಡಿದ್ದಲ್ಲ, ಬದಲಾಗಿ ಅವರಿಗೆ ಅದೊಂದು ಸಂವೇದನೆ. ಆ ರೀತಿ ಸಂವೇದನೆ ಇಲ್ಲದ ಜ್ಞಾನವನ್ನು ಅವರು ಅಪಾಯಕಾರಿ ಎಂದೇ ತಿಳಿದಿದ್ದರು. ನಿಸರ್ಗದ ಒಳಹೊಕ್ಕು ಅಲ್ಲಿರುವ ಗುಡ್ಡ-ಬೆಟ್ಟ-ಸಸ್ಯ-ಸಮೃದ್ಧಿ, ಪಕ್ಷಿಗಳ ಕಲರವ, ಹರಿವ ತೊರೆಯ ಬೆಡಗುಗಳೊಂದಿಗೆ ಅದರ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಂಡು, ಈ ಜೀವಜಾಲದ ತಂತುಗಳಲ್ಲೊಂದಾದ ಮನುಷ್ಯನ ಬದುಕು ಹೇಗೆ, ಯಾವರೀತಿ, ಎಷ್ಟರ ಮಟ್ಟಿಗೆ ಈ ನಿಸರ್ಗಾವಲಂಬಿಯಾಗಿವೆ ಎಂಬ ಯೋಚನೆ, ಅದರ ಆಂತರ್ಯಗಳಲ್ಲಿ ಆಗುತ್ತಿರುವ ಬದಲಾವಣೆ, ಅದರಿಂದಾಗುವ ಪರಿಣಾಮಗಳೇ ಅವರ ಬರಹದ ಮುಖ್ಯ ವಸ್ತುಗಳಾಗಿವೆ. ಆ ಹಿನ್ನೆಲೆಯಲ್ಲೇ ಅವರು **“ಕಾಡುಗಳು ಇವತ್ತು ಬಾಗಿಲು ತೆರೆದಿಟ್ಟ ಖಜಾನೆಗಳಾಗಿವೆ. ಈ ಕಾಡುಗಳ ಒಂದೊಂದೇ ಮರ ಎರಡು-ಮೂರು ಲಕ್ಷ ಬೆಲೆ ಬಾಳುತ್ತವೆ. ಕಲ್ಲು ಕಳ್ಳರಿಗೆ, ಮರಗಳ್ಳರಿಗೆ, ಗಂಧ ಚಕ್ಕೆ ಕಳ್ಳಸಾಕಾಣೆ ಮಾಡುವ ಖದೀಮರಿಗೆ, ಕಣ್ಣು ಹರಿಸಿದಲ್ಲೆಲ್ಲಾ ಹಣ ರಾಶಿ ಬಿದ್ದಿರುವಂತೆ ಕಾಣುತ್ತದೆ.... ಕಾಡು, ಕಾಳದಂಧೆಗಳ ತವರು ಮನೆಯಾಗುತ್ತಿದೆ”**(೧೩) ಎಂಬುದನ್ನು ಉದ್ಗರಿಸುವುದು. ‘ಕಾದಂಬರಿಯು ಸಾಮಾಜಿಕ ಘಟನೆಗಳು, ಕೋಮು ಸಂಘರ್ಷಗಳು, ಪ್ರಕೃತಿನಾಶ ಇವುಗಳ ಚಿತ್ರಣ ನೀಡುತ್ತಲೇ ಅವುಗಳಿಂದಲೇ ಹೊಸ ಚೈತನ್ಯದ ಚಿಮ್ಮುವಿಕೆ ಸಾಧ್ಯವಾಗುತ್ತ ನಮ್ಮ ಗಮನ ಸೆಳೆಯುತ್ತದೆ. ಪ್ರಕೃತಿಯ ಅದಮ್ಯ ಶಕ್ತಿ ಮತ್ತು ಮಾನವ ಸಾಧ್ಯತೆಗಳ ಮಿತಿ ಎರಡನ್ನು ಕಾದಂಬರಿ ಒಟ್ಟಿಗೆ ವ್ಯಂಜಿಸುತ್ತದೆ. ಸರ್ವನಾಶದ ಒಡಲಲ್ಲೇ ಜೀವ ಸಂಚಲನದ ಮಿಡಿತವನ್ನು ಗುರುತಿಸುತ್ತ ಕಾದಂಬರಿ ಬದುಕಿನಲ್ಲಿಯ ಆಶಾವಾದವನ್ನು ಧ್ವನಿಸುತ್ತದೆ. ತಮ್ಮ ಕಥಾ ಪ್ರಪಂಚದಲ್ಲಿ ತೇಜಸ್ವಿ ಕಟ್ಟಿಕೊಡುವ ಮನುಷ್ಯ ಸ್ವಭಾವದ ವೈಚಿತ್ರಗಳು ಕಾಡುಗಳ ಅಗಾದ ಹರವು, ಅದರ ಗಾಂಭೀರ್ಯ, ಭಯಂಕರತೆ, ಜೀವ ವೈವಿಧ್ಯ, ಅದರ ಚೆಲುವು ಹಾಗೂ ಅನಂತತೆಯ

ಚಿತ್ರಗಳು ಅನನ್ಯವಾದದ್ದು. ತೇಜಸ್ವಿಯವರನ್ನು ಓದಿದರೆ ಒಂದು ಸಮೃದ್ಧ ಜೀವ ಜಗತ್ತಿನ ವಿಸ್ಮಯ ಸ್ಪರ್ಶವಾದಂತೆ' [೧೨] ಎಂಬ ಅಭಿಪ್ರಾಯವು ತೇಜಸ್ವಿ ಚಿತ್ರಿತ ಮಾನವನನ್ನು ಅರ್ಥೈಸಿಕೊಳ್ಳಲು ನೆರವಾಗುವುದು. ನಿಸರ್ಗದೊಡನೆ ಮನುಷ್ಯನ ಸಂಬಂಧವನ್ನು ವಿವರಿಸುವಾಗಲೆಲ್ಲ ಹಾಸ್ಯ ಪ್ರಜ್ಞೆಯನ್ನು ತರುವ ತೇಜಸ್ವಿಯವರು ಬಹಳ ಎಚ್ಚರಿಕೆಯಿಂದಲೇ ಮನುಷ್ಯನ ಅಸ್ತಿತ್ವದ ಹಾಗೂ ಪ್ರಕೃತಿಯ ಅವಸಾನದ ಪ್ರಶ್ನೆಯನ್ನು ನಮ್ಮ ಮುಂದೆ ತೆರೆದಿಡುತ್ತಾರೆ. ಇವರು ಬಳಸುವ ಭಾಷೆಗೆ ವಿಶಿಷ್ಟತೆ ಇದೆ. ಅನುಕರಣಶೀಲವಲ್ಲದ ಭಾಷೆಯನ್ನು ಬಳಸುವ ತೇಜಸ್ವಿ, ಅದಕ್ಕೆ ತಮ್ಮದೇ ಆದ ಛಾಪನ್ನು ಒತ್ತುವುದರಿಂದ ಎಂದೂ ಅಭಿವ್ಯಕ್ತಿಯ ತೊಡಕಿಗೆ ಸಿಲುಕಿಕೊಳ್ಳುವುದಿಲ್ಲ. ಎಲ್ಲಕ್ಕಿಂತ 'ಚಿದಂಬರ ರಹಸ್ಯ' ವರ್ತಮಾನವನ್ನು ಕೇಂದ್ರೀಕೃತವಾಗಿರಿಸಿಕೊಂಡು ರಚಿತವಾದ ಕೃತಿ. ಅದರ ಮೂಲ ರಚನೆ ರಹಸ್ಯವಾದುದು. ಗ್ರಾಮಜೀವನದ ವಿಘಟನೆಯನ್ನು ವಸ್ತುವಾಗಿರಿಸಿಕೊಂಡ ಈ ಕೃತಿ ಗ್ರಾಮಾಯಣದ ಸ್ವರೂಪವನ್ನು ಒಳಗೊಂಡಿದೆ. ಮತೀಯಗಲಭೆ, ಕಳ್ಳಸಾಗಾಣೆ, ರಾಜಕೀಯ, ಆಧುನೀಕತೆ, ಸಾಂಸ್ಕೃತಿಕ ಅವನತಿ ಮುಂತಾದವುಗಳ ಭರಾಟೆಯಲ್ಲಿ ಸಿಲುಕಿ ಕೆಸರೂರು ಅವನತಿ ಹೊಂದುವ ಚಿತ್ರಣವನ್ನು ಕಾಣಬಹುದು. ಗ್ರಾಮಗಳನ್ನು ಇಂದಿಗೂ ಕಾಡುವ ಜ್ವಲಂತ ಸಮಸ್ಯೆಗಳನ್ನು, ಮನುಷ್ಯನ ಸಣ್ಣತನಗಳನ್ನು, ವ್ಯವಸ್ಥೆಯ ದುರಂತವನ್ನು ಕಾದಂಬರಿ ಪರಿಣಾಮಕಾರಿಯಾಗಿ ಮಂಡಿಸುವುದಾದರೂ ಸಿದ್ಧಾಂತ, ವಿಚಾರವಾದ, ಮೌಢ್ಯತೆಯ ಪ್ರಸ್ತಾಪಗಳು ಬಂದಾಗಲೆಲ್ಲಾ ಸಂಕೀರ್ಣವಾಗುತ್ತಾ ಸತ್ಯದ ಹುಡುಕಾಟವನ್ನು ಓದುಗನಿಗೆ ಬಿಡುತ್ತದೆ. ಅಂತಿಮವಾಗಿ ಕೆಸರೂರು ಸುಟ್ಟು ಹೋಗುವುದನ್ನು ತೇಜಸ್ವಿ ಚಿತ್ರಿಸಿದ್ದು, ಮನುಷ್ಯನ ದುಷ್ಟ ಆಲೋಚನೆಗಳು ಬೆಂಕಿಯಲ್ಲಿ ಸುಟ್ಟು ಭಸ್ಮವಾಗಿ ಹೊಸಕ್ರಾಂತಿಯೊಂದಿಗೆ ಗ್ರಾಮಮುಖಿಯಾದ ನಿಷ್ಕಲ್ಮಶ ಚಿಂತನೆಗಳು ಉದಿಸಬೇಕೆಂಬುದೇ ಇದರ ಮೂಲ ಆಶಯವೆಂಬುದನ್ನು ಕಂಡುಕೊಳ್ಳಬಹುದಾಗಿದೆ. ೧೯೭೦-೮೦ ರ ದಶಕದಲ್ಲಿನ ಜೆ.ಪಿ.ಚಳುವಳಿಗಳು, ಲೋಹಿಯಾ ಚಿಂತನೆಗಳು, ಪರಿಸರ ವಾದಗಳು ಮತ್ತು ಗ್ರಾಮಮುಖಿ ಆಲೋಚನೆಗಳೆಲ್ಲವೂ ಸೇರಿ ಇಂತಹ ಪರಿಸರದ ತಳಹದಿಯೊಂದಿಗೆ ಸಮಾಜಿಕ ಜೀವನದ ಕಲಾಕೃತಿಯೊಂದು ಸೃಜನೆಗೊಳ್ಳಲು ಭೂಮಿಕೆ ನಿರ್ಮಾಣವಾಗಿರುವುದನ್ನು ಗುರುತಿಸಿಕೊಳ್ಳಬಹುದು.

ಕರ್ನಾಟಕದ ಹಕ್ಕಿಗಳು ಮಾಲಿಕೆ ಮತ್ತು ಡಾ.ವಿ.ವಿ.ಬೆಳವಾಡಿ ಅವರೊಡನೆ ರಚಿಸಿದ ಕೀಟ ಪ್ರಪಂಚ ಕುರಿತ 'ನಡೆಯುವ ಕಡ್ಡಿ! ಹಾರುವ ಎಲೆ!' ಇದನ್ನು ಗಮನಿಸಿದಾಗ ಇಲ್ಲಿ ಹಕ್ಕಿಗಳು, ಕೀಟಗಳು ಕೇವಲ ಜೀವಿಗಳಾಗದೆ ಸಾಮಾಜಿಕ ವಾಸ್ತವಗಳಾಗಿ ಒಂದು ವ್ಯಕ್ತಿತ್ವವನ್ನು ಪಡೆದ ಜೀವಿಗಳಾಗಿ ಕಾಣಿಸುತ್ತವೆ. ಕನ್ನಡ ನಾಡಿನ ಹಕ್ಕಿಗಳು ಮತ್ತು ನಡೆಯುವ ಕಡ್ಡಿ ಶುಷ್ಕ ವೈಜ್ಞಾನಿಕ ಬರವಣಿಗೆಯಾಗದೇ ಸಾಮಾಜಿಕ ಆಯಾಮ ಪಡೆದುಕೊಳ್ಳುತ್ತದೆ. ಇಲ್ಲಿ ಹಕ್ಕಿ, ಕೀಟಗಳ ಬದುಕಿನ ಜೊತೆಗೆ ಅಲಕ್ಷಿತ ಜ್ಞಾನ, ದಾರುಣ ಕಥೆಗಳು, ಮಂದಣ್ಣಗಳು ಇಣುಕಿ ನೋಡುತ್ತವೆ. ಹಾಗಾಗಿ ನಿಸರ್ಗದ ಪ್ರಭಾವ ಹೆಡ್ಡ ಪ್ಯಾರನನ್ನು ಮಿಂಚುಳ್ಳಿಯ ಗೂಡಿನ ಪತ್ತೆಗೆ ಅಣಿಗೊಳಿಸುತ್ತದೆ. ಬಾಳೆಗುಬ್ಬಿ ಜೋಡಿಯ ಮರಣ ವಿಧುರ ಮಾರನ ದುರಂತ ಜೀವನದೊಡನೆ ಥಳುಕು ಹಾಕಿಕೊಳ್ಳುತ್ತದೆ. ಹಾವು-ಮೀನು ಪ್ರಕರಣ ಬಬ್ಬುವಿನ ಮಗನ ಸಾವನ್ನು ವ್ಯಥೆಯಾಗಿ ಕಟ್ಟಿಕೊಡುತ್ತದೆ. ಮನುಷ್ಯರೊಡನೆ ಹುಟ್ಟುವ ಪ್ರೀತಿಯ ಸಂಬಂಧ ಗೆದ್ದ ಗೊರವನ ದುರಂತಕ್ಕೆ ಸಾಕ್ಷಿಯಾದರೆ, ಕೊಡಲಿಗೆ ಉರುಳುವ ಮರಗಳು ಹಕ್ಕಿಗಳ ಕೊರಳಿಗೆ

ಉರುಳು ಬಿಗಿಯುವ ಆಕಾರ ಪಡೆಯುತ್ತದೆ. ಹಕ್ಕಿ ಕೀಟಗಳ ಬಗ್ಗೆ ಹೇಳುತ್ತಲೇ, ಅನೇಕ ಅಚ್ಚರಿಯ ವಿಷಾದದ ಕಥೆಗಳು ತೆರೆ ತೆರೆಯಾಗಿ ಚಿಮ್ಮಿ ಬರುತ್ತವೆ.

'ಮಿಸ್ಸಿಂಗ್ ಲಿಂಕ್' ಕನ್ನಡದ ವೈಜ್ಞಾನಿಕ ಕೃತಿಗಳಲ್ಲೇ ಇದೊಂದು ವಿಶಿಷ್ಟತೆ ಹೊಂದಿದ ಕೃತಿ. ವಾನರ ಹಂತದಿಂದ ಮಾನವರ ಹಂತಕ್ಕೆ ತಲುಪಿದ ಶೋಧನೆಯ ಇತಿಹಾಸವನ್ನು ಪತ್ತೇದಾರಿ ರೀತಿಯಲ್ಲಿ ಚೇತೋಹಾರಿಯಾಗಿ ನಿರೂಪಿಸಿದ್ದಾರೆ. ಗಹನವಾದ ವೈಜ್ಞಾನಿಕ ಮಾನವನ ಉಗಮದ ವಿಚಾರವನ್ನು ಸಾಹಿತ್ಯಾತ್ಮಕವಾಗಿಸಿದ್ದಾರೆ. ಮಾನವನ ಉಗಮದಂತಹ ಶುದ್ಧ ಶಾಸ್ತ್ರೀಯ ಹಾಗೂ ಸಂಕೀರ್ಣತೆಯನ್ನು ನಿರೂಪಣೆ ಮಾಡಿರುವ ರೀತಿ ಅಚ್ಚರಿ ತರುವಂತದ್ದು. ವಾನರ ಸಂಕುಲದಿಂದ ಕವಲೊಡೆದ ಆದಿ ಮಾನವನಿಂದ ವಿಕಾಸವಾದ ಆಧುನಿಕ ಮಾನವನೆಡೆಗೆ ಸಾಗಿದ ಮತ್ತು ಈ ಇಬ್ಬರ ನಡುವೆ ಕಾಲಗರ್ಭವನ್ನು ಸೇರಿಕೊಂಡಿರುವ ಕೊಂಡಿಗಳ ಅನ್ವೇಷಣೆಯ ಸಾಹಸಗಾಥೆಯನ್ನು ಅಪೂರ್ವವಾದ ಬೆರಗಿನಿಂದ ಕಟ್ಟಿದ್ದಾರೆ. ಅದಕ್ಕಾಗಿ ಹುಚ್ಚರಂತೆ ದುಡಿಯುವ ವಿಜ್ಞಾನಿಗಳ ಸಾಹಸಗಳು, ಆಕಸ್ಮಿಕವಾಗಿಯೇ ತೆರೆದುಕೊಳ್ಳುವ ಸಾಕ್ಷ್ಯಗಳು ತೇಜಸ್ವಿಯವರ ನಿರೂಪಣೆಯಲ್ಲಿ ಮಾನವನ ಉಗಮದ ವಿವರಣೆಗಳು ರೋಚಕವಾಗಿ ಗರಿಗಟ್ಟಿಕೊಂಡಿದೆ.[(೧೪)] 'ಮಿಸ್ಸಿಂಗ್ ಲಿಂಕ್' ಕೃತಿಯು ತೇಜಸ್ವಿ ಅವರ ಕೃತಿಗಳಲ್ಲಿ ಸೃಜನೇತರ ಕೃತಿಯೆನಿಸಿಕೊಳ್ಳುವುದರಿಂದ ಈಗಾಗಲೇ ಚರ್ಚಿಸಿರುವ ಹಾಗೆ ಕತೆ ಕಾದಂಬರಿಯಲ್ಲಿ ಚಿತ್ರಿತವಾಗುವಂತೆ ಸಾಂಸ್ಕೃತಿಕ ಪರಿಸರದ ಪ್ರತಿಮೆಗಳಂತೆಯೋ ಅಥವಾ ಸನ್ನಿವೇಶಾಧಾರಿತ ಪಾತ್ರಾಧಾರಿತವಾಗಿಯೋ ಇಲ್ಲಿನ ಮಾನವ ಪ್ರಜ್ಞೆಯನ್ನು ಓದುಗ ಕಾಣಲು ಸಾಧ್ಯವಾಗುವುದಿಲ್ಲ. ಇಲ್ಲಿನ ಮಾನವ ಕಲ್ಪನೆ ಶುದ್ಧ ವೈಜ್ಞಾನಿಕವಾದದ್ದು. ಉಗಮ ಸಿದ್ಧಾಂತಗಳ ಪ್ರತಿಪಾದನೆಯ ನಿರೂಪಣೆಗಳನ್ನು ಒಳಗೊಂಡಿದ್ದು ಶುದ್ಧ ಮಾನವಶಾಸ್ತ್ರದ ಇತಿಹಾಸವನ್ನು ಒಳಗೊಂಡಿರುವಂತದ್ದು. ಪರಿಸರದೊಂದಿಗೆ ಬೆಸೆದುಕೊಂಡ ಸಾವಯವ ನಂಟಿನ ಸಂಕೇತದಂತೆ ಕಂಡುಬರುವ ಜೈವಿಕ ಮಾನವ ಕಲ್ಪನೆಯಿಂದಲೂ ಮತ್ತು ಸಾಮಾಜಿಕ ಜೀವನ ಸಂಬಂಧಗಳ ಆಯಾಮದಿಂದಲೂ ಇಲ್ಲಿನ ಮಾನವ ಕಲ್ಪನೆ ಪ್ರತ್ಯೇಕಿಸಲ್ಪಟ್ಟಿದೆ. ಮಾನವನ ಇತಿಹಾಸದ ಬೆಳವಣಿಗೆಯನ್ನು ಅಥವಾ ಹೋಮೋಸೆಫಿಯನ್ಸ್ ರೂಪಾಂತರ ಪ್ರಜ್ಞೆಯನ್ನು ಕಾಲಘಟ್ಟಗಳಲ್ಲಿ ವಿವರಿಸುವ ವಿಶಿಷ್ಟ ತೆರನಾದ ಕಲ್ಪನೆಯನ್ನು ಇಲ್ಲಿ ಕಾಣಬಹುದಾಗಿದೆ.

'ಅಲೆಮಾರಿಯ ಅಂಡಮಾನ್' ಈ ಪ್ರವಾಸ ಕಥನದಲ್ಲಿ ತೇಜಸ್ವಿ ಅವರ ವೈಯಕ್ತಿಕ ಸಾಹಸಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಇದ್ದರೂ ಅಂಡಮಾನಿನ ಇತಿಹಾಸ, ಸಮಕಾಲೀನ ಜೀವನ ಸ್ವರೂಪ ಮತ್ತು ಆಶೋತ್ತರಗಳು ತೇಜಸ್ವಿ ಅವರನ್ನು ಆಕರ್ಷಿಸುವುದಿಲ್ಲ. ಅಲ್ಲಿನ ಅಭಿವೃದ್ಧಿಯ ಯೋಜನೆಗಳನ್ನು ಮತ್ತು ಇಕಾಲಜಿಯ ಸ್ವರೂಪವನ್ನು ಪ್ರಾಸಂಗಿಕವಾಗಿ ಚರ್ಚಿಸಿದ್ದಾರೆ. ಸಮುದ್ರ ಜೀವಿಗಳನ್ನು ಮಾತ್ರವಲ್ಲ ಭೂಮಿಯ ಮೇಲಿನ ಜೀವಿಗಳನ್ನು ಗಮನಿಸಿದ್ದಾರೆ.[(೧೫)]

'ಮಾಯಾಲೋಕ' ಈ ಕೃತಿಯ ಮೊದಲ ಭಾಗದಲ್ಲಿ ಮಲೆನಾಡಿನ ಪರಿಸರದೊಂದಿಗೆ ಅಲ್ಲಿನ ಬದುಕಿನ ಚಿತ್ರಣವನ್ನು ಕಾಣುತ್ತೇವೆ. ಮಲೆನಾಡು ತನ್ನ ಮೂಲ ರೂಪರಾಶಿಯನ್ನು ಕಳೆದುಕೊಳ್ಳುತ್ತಾ, ಜನದಟ್ಟಣೆ ಕೇಂದ್ರೀಕೃತವಾಗುವತ್ತ ಪರಿಸ್ಥಿತಿಯಲ್ಲಿ ಜನಜೀವನ ಹಾಗೂ ಪರಿಸರದಲ್ಲಿ ಆಗುತ್ತಿರುವ ಬದಲಾವಣೆಯನ್ನು ಕೃತಿಯು ತೆರೆದಿಡುತ್ತದೆ. ಮಾಯಾಲೋಕ ಕಾದಂಬರಿಯು ಮಲೆನಾಡಿನ ಕೃಷಿಯ ಸಣ್ಣ ಸಣ್ಣ ವಿವರ, ವ್ಯಕ್ತಿ ವಿಶಿಷ್ಟ ಚಹರೆ, ಜೀವಸಂಕುಲ,

ಮನುಷ್ಯನ ಜೀವನ ಕ್ರಮ, ಹೋರಾಟ ಮುಂತಾದ ಸೂಕ್ಷ್ಮಾತೀಸೂಕ್ಷ್ಮ ಬದುಕಿನ ವಿಶಿಷ್ಟತೆಗಳ ಕಲಾಕೃತಿಯಾಗಿದೆ. ರಾಜಕೀಯ, ಸಣ್ಣ ಪತ್ರಿಕೆ, ನೀರಿನ ಸಮಸ್ಯೆ, ವಿದ್ಯುತ್ ಸಮಸ್ಯೆ ಮುಂತಾದ ಜಾಗತಿಕ ಸಮಸ್ಯೆಗಳನ್ನು ತಮ್ಮ ಕೃತಿಯಲ್ಲಿ ಅನಾವರಣಗೊಳಿಸಿದ್ದು ಮುಖಾಮುಖಿಯಾಗುವುದನ್ನು ಕಾಣಬಹುದಾಗಿದೆ. ಕಲಾಕೃತಿಯ ರಚನೆ ಪರಿಸರದ ಸತ್ವದಿಂದಲೇ ಆವರಿಸಿಕೊಂಡಿದ್ದರೂ ಇಲ್ಲಿನ ಮಾನವ ಪ್ರಜ್ಞೆ ಅದರೊಳಗೆ ಅವಿತ ಸಾಮಾಜಿಕ ಜೀವನದ ಸಂಘರ್ಷಗಳನ್ನು ಹೆಚ್ಚು ಪ್ರತಿನಿಧಿಸುತ್ತದೆ.

"ಮಾನವ ಬದುಕಿಗೆ ಇಷ್ಟು ಸಂಘರ್ಷಮುಖಿಯಾಗಿ ಪ್ರಾಕೃತಿಕ ಅಸ್ತಿತ್ವವು ಸವಾಲೊಡ್ಡುವುದು ಕನ್ನಡದಲ್ಲಿ ಬಹುಶಃ 'ನಿಗೂಢ ಮನುಷ್ಯರು' ಒಂದೇ ಅನಿಸುತ್ತದೆ. ನಿಗೂಢವಾಗುತ್ತಿದ್ದ ಪ್ರಕೃತಿಗೆ ಪ್ರತ್ಯೇಕವಾದ ಒಂದು ವ್ಯಕ್ತಿತ್ವ ದೊರೆತಿರುವುದು ಇಲ್ಲಿಯೇ ಎನ್ನುವುದಕ್ಕಿಂತಲೂ ಕುವೆಂಪು ಪ್ರಕೃತಿಯನ್ನು ಪರಿಭಾವಿಸಿದ ರೀತಿಗಿಂತ, ತೇಜಸ್ವಿಯವರು ಮತ್ತೊಂದು ಪ್ರಜ್ಞೆಯಿಂದ ನಿಸರ್ಗವನ್ನು ದರ್ಶಿಸುತ್ತಾರೆ ಎಂದರೆ ತಪ್ಪಾಗಲಾರದು. ಒಂದರೊಳಗೊಂದು ಮಿಳಿತವಾಗಿರುವ ತಾತ್ವಿಕತೆ ಜೀವನದ ಮರ್ಮಗಳನ್ನು ಅರ್ಥೈಸಿಕೊಳ್ಳಲು ಒತ್ತಾಯಿಸುತ್ತದೆ. ನಮ್ಮ ಕಣ್ಣಳತೆ ಮತ್ತು ಬುದ್ಧಿಗ್ರಾಹ್ಯಕ್ಕೂ ನಿಲುಕದ ಸ್ವರೂಪವನ್ನು ಚರ್ಚಿಸುತ್ತದೆ."(೧೬) ಹಾಗೆಯೇ "ಇದು ಮನುಷ್ಯ ಜೀವನದ ಸಾಧ್ಯತೆಗಳನ್ನಾಗಲಿ, ಮನುಷ್ಯನ ಸಂಕಲ್ಪ ಬಲವನ್ನಾಗಲಿ ಕುಬ್ಜವಾಗಿಸುವ ದೃಷ್ಟಿಕೋನವಲ್ಲ. ಬದಲಾಗಿ ಮನುಷ್ಯನ ಅಹಂಕಾರವನ್ನೂ ಮನುಷ್ಯ ಪ್ರಯತ್ನಗಳ ಮಿತಿಯನ್ನು ಅರ್ಥಮಾಡಿಕೊಳ್ಳುವ ವಿನಯವಂತಿಕೆ. ಇದು ತೇಜಸ್ವಿ ಅವರ ಚಿಂತನೆ ಮತ್ತು ಬರವಣಿಗೆಗಳ ತಾತ್ವಿಕತೆಯನ್ನು ಕಟ್ಟುತ್ತದೆ. ಸೃಷ್ಟಿಯ ನಿಗೂಢತೆ ಮತ್ತು ಒಂದು ಅರ್ಥ ಮತ್ತು ವ್ಯವಸ್ಥೆಗೆ ಸುಲಭವಾಗಿ ಹೊಂದಿಸಲಾಗದ ವಿಶ್ವಾತ್ಮಕವ್ಯೂಹದ ಒಳಗೆ ಮನುಷ್ಯ ಚಟುವಟಿಕೆಗಳ ಸ್ವರೂಪ ಮತ್ತು ಅವುಗಳ ಇತಿಮಿತಿಯನ್ನು ಅರಿಯುವ ಪ್ರಯತ್ನವೇ ತೇಜಸ್ವಿ ಬರವಣಿಗೆಯ ಹಿಂದಿನ ಮೂಲ ಶೃತಿಯಾಗಿದೆ".(೧೭)ಬದುಕಿನ ಪಾಡನ್ನು ಕುತೂಹಲ ಮತ್ತು ವಿಸ್ಮಯದಿಂದ ನೋಡುತ್ತಾ, ವಾಸ್ತವ-ಅವಾಸ್ತವಿಕ ಪ್ರಜ್ಞೆಯೊಡನೆ ಸಂವಾದಿಸಿ, ಅಸ್ವಸ್ಥ ಪ್ರಜ್ಞೆಯ ಊನತೆಗಳನ್ನು ಕಂಡುಕೊಳ್ಳುವುದು ಕೃತಿಯ ಗುಣಾತ್ಮಕ ಧೋರಣೆಯಾಗಿದೆ. ಕಾದಂಬರಿಯ ಒಟ್ಟು ನೋಟದಲ್ಲಿ ಕಂಡುಬರುವ ನಿಗೂಢತೆಯ ಸಂಬಂಧಗಳು ಪ್ರಕೃತಿಯ ಅಂಶಗಳಾದ ಉಗ್ರಗಿರಿ, ಎಣ್ಣೆಹೊಳೆ, ಭೂಕಂಪ, ಮಳೆಮೋಡಗಳಲ್ಲಿ ವ್ಯಕ್ತಿ ವ್ಯಕ್ತಿಗಳ ಮುಖಾಮುಖಿಯಲ್ಲಿ ಉಂಟಾಗುವ ಸಂಬಂಧಗಳ ಅನಾವರಣದಲ್ಲಿ, ಅವುಗಳ ಭ್ರಾಂತಿಗಳಲ್ಲಿ ಹಾಗೂ ವ್ಯಕ್ತಿಗಳು ತಮಗೆ ತಾವೇ ನಿಗೂಢರಾಗಿಬಿಡುವ ಸಂದಿಗ್ಧತೆಯಲ್ಲಿ ವ್ಯಕ್ತವಾಗುತ್ತವೆ. ತೇಜಸ್ವಿಯವರ ನಿಗೂಢ ಮನುಷ್ಯರು ಜೀವನದ ತಾತ್ಕಾಲಿಕತೆ ಹಾಗೂ ಶಾಶ್ವತೆಗಳ ಅರ್ಥವನ್ನು ಅನಾವರಣಗೂಳಿಸುವ ಪ್ರಯತ್ನದಂತೆಯೂ ತೋರುತ್ತದೆ. ಒಟ್ಟಿನಲ್ಲಿ ಮಾನವನ ಒಳಲೋಕದಲ್ಲಿ ಅವಿತಿರುವ ನಿಗೂಢತೆಯನ್ನು ಹಾಗೂ ಪ್ರಕೃತಿಯ ಭಯಾನಕತೆಯನ್ನು ಪರಿಚಯಿಸುತ್ತದೆ.(೧೮)ಕೃತಿಯಲ್ಲಿ ಮನುಷ್ಯ ಮತ್ತು ಪ್ರಕೃತಿ ಸಂಬಂಧದೊಳಗೆ ಒಟ್ಟಾರೆ ವ್ಯಕ್ತಿತ್ವವೇ ನಿಗೂಢವಾಗುವುದನ್ನು ಕಾಣಬಹುದಾಗಿದೆ. ಈ ರಹಸ್ಯವನ್ನು ಅರ್ಥೈಸಿಕೊಂಡವನು ಮಾತ್ರ ಎಲ್ಲವನ್ನೂ ಮೀರಲು ಸಾಧ್ಯ. ಗೋಪಾಲಯ್ಯನಲ್ಲಿ ಪ್ರಕೃತಿಯೊಂದಿಗೆ ಸೆಣಸಾಡುವ ಧ್ಯೇಯ ಅಚಲವಾಗಿರುವಂತೆ ತೋರುತ್ತದೆ. ಬದುಕಿನ ಯಾನದಲ್ಲಿ ಅನಿವಾರ್ಯತೆಗಳು ವ್ಯಕ್ತಿಯನ್ನು ಹೇಗೆ ಅನೈತಿಕ ನೆಲೆಗೆ ಕೊಂಡೊಯ್ಯುತ್ತವೆ ಮತ್ತು ಹಲವು ಸಾಮಾಜಿಕ ಕ್ಷೇತ್ರಗಳ ಅನುಭವ ಸಂಪತ್ತನ್ನು ಸೂರೆಹೊಡೆದವನು ಅದಕ್ಕೂ

ಮೀರಿದ ಮತ್ತೊಂದು ನೆಲೆಯನ್ನು ಕಾಣಲು ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ಕೃತಿಯಲ್ಲಿ ಗ್ರಹಿಸಬಹುದಾಗಿದೆ.

ಭೂಗತ ಸ್ವರೂಪದ ಸಂಸ್ಕೃತಿಯನ್ನು ಬೆನ್ನಹತ್ತಿದ ಸಮಾಜದ ವಿಕೃತಿಯನ್ನು ಹಾಗೆಯೇ, ಆರೋಗ್ಯ ಸಮಾಜದ ಸಾಧ್ಯತೆಗಳನ್ನು ತೇಜಸ್ವಿ ಅವರು 'ಜುಗಾರಿಕ್ರಾಸ್' ಕೃತಿಯ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಜಾಗತೀಕರಣದ ಪ್ರಭಾವದಿಂದಾಗಿ ಸ್ಥಳೀಯ ಸಂಸ್ಕೃತಿ, ಗುಡಿ ಕೈಗಾರಿಕೆ, ಪರಿಸರದ ಮೇಲಾಗುತ್ತಿರುವ ಆಕ್ರಮಣಗಳನ್ನು ಕಾದಂಬರಿಯಲ್ಲಿ ಗುರುತಿಸಿದ್ದಾರೆ. "ನಮ್ಮ ಸಾಮಾಜಿಕ ಪರಿಸರದಲ್ಲಿ ಸಾಮಾನ್ಯ ಜನರಲ್ಲಿಯೂ ಹುದುಗಿರಬಹುದಾದ ಅಗಾದ ಜ್ಞಾನ ಸಂಪತ್ತು ಮತ್ತು ಚೈತನ್ಯಶೀಲತೆಯ ಸಾಧ್ಯತೆಗಳನ್ನು ತಮ್ಮ ಹಿಂದಿನ ಕೃತಿಗಳಲ್ಲಿ ಚಿತ್ರಿಸಿದ ತೇಜಸ್ವಿ ಅವರು ಜುಗಾರಿ ಕ್ರಾಸ್‌ನಲ್ಲಿ ಅಂಥವರ ಬದುಕಿನ ಮೇಲೆ ನಡೆಯುವ ರಾಕ್ಷಸೀ ಪ್ರವೃತ್ತಿಯ ಹಲ್ಲೆಯನ್ನೂ, ಅನೇಕ ವೇಳೆ ತಮ್ಮ ಪಾಡಿಗೆ ತಾವಿರಬೇಕಾದ ಮುಗ್ಧಜನರು ಇದರಿಂದಾಗಿ ಪ್ರಾಣಾಪಾಯದ ಅಂಚಿನಲ್ಲಿ ಬದುಕಬೇಕಾಗುತ್ತೆಂಬುದನ್ನೂ ಅತ್ಯಂತ ಸೃಜನಾತ್ಮಕವಾಗಿ ಚಿತ್ರಿಸಿದ್ದಾರೆ."[೧೯] ಕಾದಂಬರಿಯಲ್ಲಿ ಬರುವ **'ಮೇದರಹಳ್ಳಿಯ ಅವಸಾನ' ಒಂದು ವೃತ್ತಿ, ಸಮುದಾಯದ ಉನ್ನತಿ ಮತ್ತು ಅವನತಿಗಳನ್ನು ಸುಂದರವಾಗಿ ಕಟ್ಟಿಕೊಟ್ಟಿರುವ ಅಧ್ಯಾಯವಾಗಿದ್ದು, ಪ್ರಾದೇಶಿಕವಾಗಿ ಬದುಕು ಕಟ್ಟಿಕೊಂಡ ಸಮುದಾಯವೊಂದು ಜೀವನ ನಿರ್ವಹಣೆಗಾಗಿ ಪರಂಪರಾಗತವಾಗಿ ಒಪ್ಪಿಕೊಂಡು ಬಂದಂತಹ ವೃತ್ತಿಯ ಮೇಲಿನ ಶೋಷಣೆಯನ್ನು ಅಥವಾ ದೇಸೀ ಸಂಸ್ಕೃತಿ ಹೇಗೆ ಅಳಿವಿನಂಚಿಗೆ ಸರಿದು ಯಾವುದೋ ಬೇಕಿಲ್ಲದುದರ ಆಕರ್ಷಣೆಗೆ ಮಾನವ ಒಳಗಾಗುತ್ತಿದ್ದಾನೆ ಎನ್ನುವುದರ ಚಿತ್ರಣವನ್ನು ಇಲ್ಲಿ** ಕಾಣಬಹುದಾಗಿದೆ.

ಮಿಂಚುಳ್ಳಿಯಲ್ಲಿ "ಬಾಳೆಗುಬ್ಬಿಯ ಜೋಡಿ ಮರಣ ವಿಧುರ ಮಾರನ ದುರಂತ ಜೀವನದೊಂದಿಗೆ ತಳುಕು ಹಾಕಿಕೊಳ್ಳುತ್ತದೆ. ಹಾವು ಮೀನಿನ ಪ್ರಕರಣ ಬಬ್ಬುವಿನ ಮಗನ ಸಾವನ್ನು ವ್ಯಥೆಯಾಗಿ ಕಟ್ಟಿಕೊಡುತ್ತದೆ. ಮನುಷ್ಯರೊಡನೆ ಹುಟ್ಟುವ ಪ್ರೀತಿಯ ಸಂಬಂಧ ಗೆದ್ದಗೊರವನ ದುರಂತಕ್ಕೆ ಸಾಕ್ಷಿಯಾದರೆ, ಕೊಡಲಿಗೆ ಉರುಳುವ ಮರಗಳು ಹಕ್ಕಿಗಳ ಕೊರಳಿಗೆ ಉರುಳು ಬಿಗಿಯುವ ಆಕಾರ ಪಡೆಯುತ್ತದೆ. ಹಕ್ಕಿ ಕೀಟಗಳ ಬಗ್ಗೆ ಹೇಳುತ್ತಲೇ ಅನೇಕ ಅಚ್ಚರಿಯ ವಿಷಾದದ ಕತೆಗಳು ತೆರೆಯಾಗಿ ಚಿಮ್ಮಿ ಬರುತ್ತವೆ."[೨೦] **ಇಲ್ಲಿ ಗುರುತಿಸಲ್ಪಡುವ ಹಕ್ಕಿ ಕೀಟಗಳು ಕೇವಲ ಜೀವಿಗಳಾಗದೆ ಮತ್ತು ಸಂದರ್ಭಾನುಸಾರ ಪ್ರಕಟಗೊಳ್ಳುವ ಜೀವಿಗಳ ಪ್ರಕರಣಗಳು ಸಾಂಸ್ಕೃತಿಕ ಪರಿಸರದಲ್ಲಿ ಕಂಡುಬರುವ ಮನುಷ್ಯ ಸಂಬಂಧಗಳೊಂದಿಗೆ ಸಾಮಾಜಿಕ ಆಯಾಮ ಪಡೆದುಕೊಳ್ಳುತ್ತವೆ.** "ನನ್ನ ಬರಹಗಳು ಯಾಕೋ ಎಡಪಂಥೀಯ ಧೋರಣೆಯಲ್ಲಿವೆಯಲ್ಲ ಎಂದಿರುವ ನನ್ನ ಗೆಳೆಯರ ಮಾತುಗಳು ಸತ್ಯವಿರಬಹುದೇನೋ. ಯಾಕೆಂದರೆ ನಾನು ಸಾಮಾನ್ಯ ಬಡ ರೈತ ಕುಟುಂಬದ ವ್ಯಕ್ತಿ. ಸಾಮಾಜಿಕ ಅಸಮತೋಲನದ ಕಡೆಗೆ ತೀರಾ ಸಹಜವಾದ ಸಿಟ್ಟು ಎಲ್ಲರಿಗಿರುವಂತೆಯೇ ನನ್ನಲ್ಲೂ ಇದೆ"[೨೧] ಎಂಬ ತೇಜಸ್ವಿ ಅವರ ಅಭಿವ್ಯಕ್ತಿಯು ಸಾಮಾಜಿಕತೆಯ ಬಗ್ಗೆ ಅವರಿಗಿದ್ದ ಕಾಳಜಿಯನ್ನು ತೋರಿಸುತ್ತದೆ. ಸಾಸ್ಕೃತಿಕ, ಸಾಂಪ್ರದಾಯಿಕ, ಬೌದ್ಧಿಕ ಘರ್ಷಣೆ ಹಾಗೂ ನಿಸರ್ಗ ಮತ್ತು ಮನುಷ್ಯನ ಮುಖಾಮುಖಿಯಲ್ಲಿ ಸಾಂದ್ರಗೊಂಡ ಬಾಳ್ವೆಯ ಸಂವೇದನೆಗಳನ್ನು ಸ್ವತಂತ್ರ ಅಸ್ತಿತ್ವದೊಡನೆ

ಪುನರ್‌ನಿರ್ಮಿಸಿಕೊಂಡರೂ, ಹಲವು ಧೋರಣೆಗಳು ನಿಗೂಢವಾಗಿಯೇ ಉಳಿದು ಬಿಡುತ್ತವೆ. ತತ್ವಜ್ಞಾನದ ಆಕೃತಿಗಳಿಂದ ಮನುಷ್ಯ ಸಂಬಂಧಗಳ ವಿಶಿಷ್ಟ ಅಪ್ರಕಟಿತ ಗೂಢತೆಗಳ ಅನನ್ಯತೆಗಳನ್ನು ಶೋಧಿಸಿದರೂ, ಮಾನವ ಪ್ರೇಮದ ಮಹತ್ವವನ್ನು ಗುರುತಿಸಲು ತೇಜಸ್ವಿಯವರು ಮರೆಯುವುದಿಲ್ಲ. ಕಾದಂಬರಿಗಳಲ್ಲಿ ಸಾಮಾಜಿಕತೆಯ ಜೀವನವನ್ನು ಚಿತ್ರಿಸುವ ಸಂದರ್ಭಗಳಲ್ಲಿ ಸಮಾಜದ ಅಸಮತೋಲನದ ಪ್ರಸ್ತಾಪಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಅವರ ಕೃತಿಗಳಲ್ಲಿ ಸಮನ್ವಯಗೊಂಡಿರುತ್ತವೆ. ಸಾಮಾಜಿಕ, ಜೈವಿಕ ಮತ್ತು ಆರ್ಥಿಕ ಹಾಗೂ ಸಾಂಸ್ಕೃತಿಕ ಪರಿಸರವನ್ನು ವೈಜ್ಞಾನಿಕ ಚಿಂತನೆಯ ಮೂಲಕ ಪ್ರವೇಶಿಸುವುದರೊಂದಿಗೆ ಹೊಸದೊಂದು ಸಾಮಾಜಿಕ ಜೀವವಿಜ್ಞಾನ ಅವರ ಕೃತಿಗಳಿಂದ ಸೃಷ್ಟಿಗೊಳ್ಳುತ್ತದೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪ್ರಜ್ಞೆಯ ವಿಚಾರಗಳನ್ನು ಸೂಕ್ಷ್ಮ ಅವಲೋಕನಕ್ಕೆ ಒಳಪಡಿಸುವ ಮೂಲಕ, ವೈಜ್ಞಾನಿಕ ಒಳನೋಟಗಳನ್ನು ಪಡೆದುಕೊಳ್ಳುವಂತಹ ತೇಜಸ್ವಿಯವರ ಕೃತಿಗಳು ಸಮಕಾಲೀನ ಸನ್ನಿವೇಶಕ್ಕೆ ಎಂದಿಗೂ ಪ್ರಸ್ತುತವೆನಿಸುತ್ತವೆ. ಪರಿಸರವೆಂದರೆ ನಿಮ್ಮ ಸುತ್ತಮುತ್ತಲಿರುವ ಗಿಡ, ಮರ, ಬಳ್ಳಿ, ಕಾಡು ಮಾತ್ರವಲ್ಲ. ನೀವು ಮನುಷ್ಯರು ಸಹ ಈ ಪರಿಸರದೊಳಗಿರುವ ಜೀವಿಗಳು ಎನ್ನುವುದನ್ನು ಮರೆಯದಿರಿ ಎನ್ನುತ್ತಿದ್ದರು(೨೨) ತೇಜಸ್ವಿ. ತೇಜಸ್ವಿಯವರಿಗೆ ನಿಸರ್ಗದ ಬಗ್ಗೆ ಇರುವ ಗಾಢ ಪ್ರೇಮ, ಅದರ ನಿಗೂಢತೆಯ ಬಗೆಗಿನ ವಿಸ್ಮಯ ಅವರ ಕಥಾ ಹಂದರದಲ್ಲಿ ಸೇರ್ಪಡೆಯಾಗುತ್ತದೆ. ಅನೇಕ ಸಂದರ್ಭಗಳಲ್ಲಿ ತೇಜಸ್ವಿಯವರು ಕಥೆಯ ನಿರೂಪಕನಾಗಿಯೇ ಪಾಲ್ಗೊಳ್ಳುತ್ತಾರೆ. ಕಥೆಗೆ ಲವಲವಿಕೆ ಹಾಗೂ ಜೀವಸ್ಪಂದನವನ್ನು ತುಂಬುತ್ತಾರೆ. ಚಾರಿತ್ರಿಕ ವಾಸ್ತವದ ಅಂಗವಾಗಿ ಸಮಕಾಲೀನ ವಾಸ್ತವವನ್ನು ಪರಿಭಾವಿಸುವ, ವಾಸ್ತವವನ್ನು ಪ್ರಕೃತಿ ಪರಿಸರದ ಮಾದರಿಯನ್ನಾಗಿ ಗುರುತಿಸುವ ಅವರ ಅನೇಕ ಕಥೆಗಳು ವಸ್ತು ಮತ್ತು ಭಾಷೆಗಳ ದೃಷ್ಟಿಯಿಂದ ಸರಳವೆನಿಸಿದರೂ, ಸಮಗ್ರ ಅನುಭವದ ಕಲಾತ್ಮಕ ಚಿತ್ರಣವಾಗುವುದರೊಂದಿಗೆ ಸಮಾಜವಾದಿ ಕಲೆಯ ಬದ್ಧತೆಯಿಂದಲೂ ಕೂಡಿದ್ದು ವಿಶಿಷ್ಟವೆನಿಸುತ್ತವೆ. ಪರಿಸರದ ಜೊತೆಯಲ್ಲಿಯೇ ವ್ಯಕ್ತಿ ಹಾಗೂ ಸಮಾಜದ ಸಂಬಂಧಗಳು ತೇಜಸ್ವಿಯವರ ಬರಹಗಳಲ್ಲಿ ಅನಾವರಣಗೊಳ್ಳುತ್ತವೆ. ವಿಜ್ಞಾನಿಯ ವೈಚಾರಿಕತೆ ಹಾಗೂ ಖಚಿತತೆ, ನವಿರಾದ ಹಾಸ್ಯ ಪ್ರಜ್ಞೆ, ಲವಲವಿಕೆಯಿಂದ ಕಥೆ ಹೇಳುವ ಶೈಲಿ ಅವರನ್ನು ಒಬ್ಬ ಉತ್ತಮ ಬರಹಗಾರರನ್ನಾಗಿಸಿದೆ ಎನ್ನಬಹುದು.

೬.೩.೨ ನಾಗೇಶ ಹೆಗಡೆ ಕೃತಿಗಳಲ್ಲಿ 'ಮಾನವ' ಕಲ್ಪನೆ

'ದುಂದುಮಾರ' ಕೃತಿಯು ೨೦೧೨ರಲ್ಲಿ ಮುದ್ರಣ ಕಂಡ ಕೃತಿಯಾಗಿದ್ದು ಇದರಲ್ಲಿ ಒಟ್ಟು ೧೬ ಲೇಖನಗಳಿವೆ. ಪತ್ರಿಕೆ, ಸಂಘಸಂಸ್ಥೆಗಳಿಗೆ, ಆಕಾಶವಾಣಿಗೆ ಸಿದ್ಧಪಡಿಸಿದ ಲೇಖನಗಳ ಸಂಗ್ರಹವನ್ನು ಇದರಲ್ಲಿ ಕಾಣಬಹುದು. ಈ ಕೃತಿಯು ಪರಿಸರಕ್ಕೆ ವಿರುದ್ಧವಾಗಿ ನಡೆಯುವ ಮನುಷ್ಯನ ವಿಧ್ವಂಸಕೃತ್ಯ ಅಪರಾಧಗಳನ್ನು ಚಿತ್ರಿಸುತ್ತದೆ. ಪ್ರಕೃತಿ ಮತ್ತು ಮನುಷ್ಯನ ನಡುವೆ ಇರಬೇಕಾದದ್ದು ಸಾಮರಸ್ಯ. ಅದಕ್ಕೆ ಎದುರಾಗಿ ಮನುಷ್ಯ ಈಜುತ್ತಾ ಈಗಾಗಲೇ ಸೃಷ್ಟಿಸಿರುವ ನಿಸರ್ಗದ ಅನಾಹುತಗಳಿಗೆ ಸಣ್ಣ ಸಣ್ಣ ಲೇಖನಗಳಲ್ಲಿ ನಾಗೇಶ ಹೆಗಡೆ ಅವರು ವಿವರ ನೀಡಿದ್ದಾರೆ. ಇಲ್ಲಿನ ಲೇಖನಗಳು ಪ್ರಾದೇಶಿಕ, ರಾಷ್ಟ್ರ, ಹಾಗೂ ಜಾಗತಿಕ ಮಟ್ಟದ ವಿಷಯಗಳೊಂದಿಗೆ ಆಯಾಯ ಕಾಲಕ್ಕೆ ಮನುಷ್ಯ ಉಂಟುಮಾಡಿದ ಆತಂಕಗಳನ್ನು ಪೂರಕ ಮಾಹಿತಿಗಳೊಂದಿಗೆ

ಒಟ್ಟುಗೂಡಿಸುತ್ತವೆ. ಸೃಷ್ಟಿಯ ಸಹಜವಾದ ಮರುಸೃಷ್ಟಿ ಕ್ರಿಯೆಗಳನ್ನು ಮೀರಿಸಿ ರೂಪುಗೊಳ್ಳುವ ಮನುಷ್ಯನ ವಿರಾಟರೂಪ ಕ್ರಿಯೆಗಳನ್ನು ಹೋಲಿಸುತ್ತಾ, ಕ್ಷಣಕ್ಷಣಕ್ಕೂ ನಿಸರ್ಗದೊಂದಿಗೆ ಮನುಷ್ಯ ಸಂಬಂಧ ಯಾವ ಬಗೆಯದ್ದು ಎಂಬುದನ್ನು ಅರ್ಥೈಸುತ್ತದೆ. ಪ್ರಕೃತಿಯ ಸಾಹಸಗಳಲ್ಲಿ ಒಂದು ಬೆಟ್ಟ ಮಾಯವಾದರೆ ಮತ್ತೆಲ್ಲೋ ಮತ್ತೊಂದು ಸೃಷ್ಟಿಯಾಗುವುದು. ಅಲ್ಲೊಂದು ನದಿ ಒಣಗುವುದು ಮತ್ತೊಂದರಲ್ಲಿ ಜೀವಜಲ ಮರುಪೂರಣಗೊಳ್ಳುವುದು. ಸೃಷ್ಟಿಯಲ್ಲಿ ಇದು ನಿರಂತರ ಇದ್ದದ್ದೇ ಎಂಬ ಹೆಗಡೆ ಅವರ ವಿವರಣೆಗಳನ್ನು ಕೃತಿಯಲ್ಲಿ ಅವಲೋಕಿಸುವಾಗ ವಿಕಾಸದ ಚೈತನ್ಯವನ್ನು ವರ್ಣಿಸುವ ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗದ ಈ ಸಾಲುಗಳು ಸಹ ನೆನಪಿಗೆ ಬರುವವು.

ಹುಳುಹುಟ್ಟಿ ಸಾಯುತ್ತಿರಲು

ನೆಲಸವೆದು ಕರಗುತ್ತಿರಲು

ಕಡಲೊಳೆತ್ತಲೋ ಹೊಸ ದ್ವೀಪವೇಳುವುದು

ಕಳೆಯುತ್ತೊಂದಿರಲಿಲ್ಲಿ ಬೆಳೆವುದಿನ್ನೊಂದೆಲ್ಲೋ

ಅಳಿವಿಲ್ಲ ವಿಶ್ವಕ್ಕೆ ಮಂಕುತಿಮ್ಮ.

ಆದರೆ ಇವೆಲ್ಲಾ ಪ್ರಕ್ರಿಯೆಗಳು ಸೃಷ್ಟಿಯಲ್ಲಿ ನಿಧಾನವಾಗಿ ಕೋಟಿಗಟ್ಟಲೇ ವರ್ಷಗಳಲ್ಲಿ ನಡೆಯುವ ಕ್ರಿಯೆಗಳಾಗಿವೆ. ನಿಸರ್ಗದ ಮಂದ ಶಕ್ತಿಗಳೆನಿಸಿದ ಇಬ್ಬನಿ, ಮೆಲುಗಾಳಿ, ಚಳಿ, ಬಿಸಿಲು, ಮಳೆ, ಜೀವಿಗಳು, ಹಿಮಪಕಳೆಗಳು ಮೆಲ್ಲಗೆ ಈ ಕ್ರಿಯೆಯಲ್ಲಿ ತೊಡಗಿರುತ್ತವೆ. ಕೆಲವು ಸುನಾಮಿ, ಸುಂಟರಗಾಳಿ, ಭೂಕಂಪನದಂತೆ ಬಂದು ಕುಣಿದು ಈ ಕೆಲಸವನ್ನು ಮಾಡುತ್ತಿರುತ್ತವೆ. **ಭೂಮಿಯ ಚಹರೆಯನ್ನು ಬದಲಿಸುವ ಈ ಶಕ್ತಿಗಳು ಭೂ ವೈಜ್ಞಾನಿಕ ಶಕ್ತಿಗಳಾಗಿ ಕೆಲಸ ಮಾಡುವವು. ಇಂತಹ ಸೃಷ್ಟಿಯ ಸಹಜ ನಿಯಮಕ್ಕೆ ಕಂಟಕವಾದವನೇ ಮನುಷ್ಯ ಎನ್ನುತ್ತಾ, ತ್ವರಿತಗತಿಯಲ್ಲಿ ಆಗುತ್ತಿರುವ ನಿಸರ್ಗದ ಮೇಲಿನ ಮನುಷ್ಯನ ಒತ್ತಡವನ್ನು ಹೆಗಡೆ ಅವರು ಉದಾಹರಿಸಿರುವ ರೀತಿಯೇ ಬೆಚ್ಚಿಬೀಳಿಸುವಂತಿದೆ. ಒಂದು ಬಟನ್ ಒತ್ತುವ ಮೂಲಕ ಶಾಂತಸಾಗರದ ದ್ವೀಪ ಸರಣಿಯನ್ನು ಚಿಂದಿ ಮಾಡುವಷ್ಟು ಬೆಳೆದಿದ್ದಾನೆ. "ಅರ್ಧ ಸೆಕೆಂಡ್ ಹಿಂದಷ್ಟೇ ಮನುಷ್ಯ ಅವತರಿಸಿದ. ೦.೨ ಸೆಕೆಂಡ್ ಹಿಂದೆ ಪೆಟ್ರೋಲ್ ಕಲ್ಲಿದ್ದಲು ಪತ್ತೇಯಾಗಿದ್ದೇ ತಡ ಯುಗಪಲ್ಲಟ ಘಟನೆಗಳು ಜರುಗಿದವು. ಜನಸಂಖ್ಯೆ ಸ್ಫೋಟವಾಯಿತು. ಸಮತೋಲನ ಸ್ಥಿತಿಯಲ್ಲಿದ್ದ ಜಲಚಕ್ರ ಜೀವಚಕ್ರ ಇಂಗಾಲಚಕ್ರ, ಸಾರಜನಕಚಕ್ರ ಎಲ್ಲವೂ ತಾಳ ತಪ್ಪಿ ಚಲಿಸತೊಡಗಿದವು"** [೨೩] ಎಂದು ಕೃತಿಯ ಮುನ್ನುಡಿಯಲ್ಲಿ ದಾಖಲಿಸಲಾಗಿದೆ. ಮನುಷ್ಯನ ಉಗಮ ಮತ್ತು ಇಂಧನ ಮೂಲಗಳ ಆವಿಷ್ಕಾರದ ನಂತರದಲ್ಲಿ ನಿಸರ್ಗ ಸ್ವರೂಪದ ಮೇಲಾದ ಪಲ್ಲಟಗಳನ್ನು ಹೆಗಡೆ ಬಹು ವಿಸ್ತಾರವಾಗಿ ಅನಾವರಣಗೊಳಿಸಿದ್ದಾರೆ. "ಮನುಷ್ಯನನ್ನು ಅತ್ಯಂತ ಬುದ್ಧಿಜೀವಿ ಎನ್ನುತ್ತೇವೆ. ಇಷ್ಟೆಲ್ಲಾ ಬುದ್ಧಿ ಇದ್ದರೂ, ತನ್ನ ಸುತ್ತ ಅಪಾಯಗಳನ್ನೇ ಸೃಷ್ಟಿಮಾಡಿಕೊಳ್ಳುತ್ತಾ, ಅವುಗಳ ಮಧ್ಯೆಯೇ ಬದುಕನ್ನು ಕಟ್ಟಿಕೊಳ್ಳುತ್ತಾ ಕೂತಿರುವ ಮನುಷ್ಯನೇ ಅತಿ ಮೂರ್ಖಜೀವಿಯಲ್ಲವೇ?"[೨೪] ಗುದ್ದಲಿ ಸನಿಕೆಗಳ ಅಬ್ಬರ ನೋಡಿ, ಯಂತ್ರ ದಾಂಗುಡಿಗಳ ಗದ್ದಲ ನೋಡಿ ಭೂಮಿಯೊಳಗಿನ ದೈತ್ಯ ಹೊರಕ್ಕೆ ಬರುವಂತೆ ಮಾಡಿರುವ

ಮನುಷ್ಯನ ನಡವಳಿಕೆಗಳು ನಿಜಕ್ಕೂ ಲೇಖಕರ ಈ ಪ್ರಶ್ನೆಗೆ ಕಾರಣವಾಗಿವೆ ಎನ್ನಬಹುದು. ಇಂದಿನ ಕಾರ್ಪೋರೇಟ್ ವ್ಯವಸ್ಥೆಯ ಮನುಷ್ಯ ಮತ್ತು ಪರಿಸರದ ನಡುವೆ ಉಂಟಾಗಿರುವ ಆಧುನಿಕತೆಯ ಸಂಬಂಧಗಳನ್ನು ಹೆಗಡೆ ಅನಾವರಣಗೊಳಿಸುತ್ತಾರೆ. ಸ್ವಾರ್ಥದ ಹಿತಾಸಕ್ತಿಗಳನ್ನು ತೀರಿಸಿಕೊಳ್ಳಲೆಂದು ಭೂಮಿಯೊಳಗಿನ ಏನನ್ನೆಲ್ಲಾ ಹೊರಕ್ಕೆಳೆದು ಹೊಸಕಿ ಹಾಕುತ್ತಾ, ಜೀವಲೋಕಕ್ಕೆ ಪ್ರಳಯಾಂತಕನಾಗುತ್ತಿರುವ ಭೂ ಮನುಷ್ಯ ಅಥವಾ ಜಿಯಾಲಾಜಿಕಲ್ ಮನುಷ್ಯನ ಸತ್ಯ ಕತೆಗಳು ಈ ಕೃತಿಯಲ್ಲಿವೆ.

'ವಿಕಾಸವಾದದ ಹಾದಿಯಲ್ಲಿ ಹುಲ್ಲು, ಹಸು, ಹುಲಿ' ಲೇಖನದ ಶೀರ್ಷಿಕೆಯು ಜೀವಿಗಳ ಮೇಲೆ ಮನುಷ್ಯನ ಶೋಷಣೆಯ ವ್ಯತಿರಿಕ್ತ ಪರಿಣಾಮವನ್ನು ಚಿತ್ರಿಸುತ್ತದೆ. ಹೆಗಡೆ ಅವರು ಹುಲ್ಲನ್ನು ಚಿವುಟಿದಾಗ ಸುತ್ತೆಲ್ಲ ಪಸರಿಸುವ ಪರಿಮಳ ಅದು ಹುಲ್ಲಿನ ಮೌನ ಆಕ್ರಂದನ ಎನ್ನುತ್ತಾರೆ. ಹಸುವಿನ ಕೊರಳ ಕತ್ತರಿಸುವ ಆಕ್ರಂದನ ಹೇಗಿರುತ್ತೋ ತಿಳಿದಿಲ್ಲ ಎನ್ನುತ್ತಾ, ಮರಣದ ಕ್ಷಣದ ವಾಸನೆ ಕಟುಕರಿಗೆ ಇಷ್ಟವಾದೀತೆ ಎಂದು ಪ್ರಶ್ನಿಸುತ್ತಾರೆ. ಸ್ವಿಸ್ ಸಂಪ್ರದಾಯದಂತೆ ಅಲ್ಲಿನ ಪ್ರವಾಸದಲ್ಲಿ ತಿಂದ ಗಿಣ್ಣು ಆನಂತರದಲ್ಲಿ ಅದು ಅದು ಎಳೆಗರುವಿನ ಮೊಣಕಾಲಿನ ಗಂಟಿನ ಗೋಲಾಕಾರದ ಭಾಗದಲ್ಲಿ ಇಟ್ಟು ಬೇಯಿಸಿದ್ದು ಎಂದು ತಿಳಿದ ಕೂಡಲೇ ಅದರ ವಾಸನೆಯು ನೆನಪಿಲ್ಲ, ಆ ನೆನಪನ್ನು ನನ್ನ ನರಕೋಶಗಳು ಪ್ರಜ್ಞಾಪೂರಕವಾಗಿ ಕಿತ್ತುಹಾಕಿರಬೇಕು ಎಂದಿರುವುದನ್ನು ಗಮನಿಸಬಹುದು. ಹಾಗೆಯೇ ಹಾರ್ಮೋನುಗಳ ಸ್ರವಿಕೆಯಿಂದಾಗಿ ಹಸು ಹುಲಿಯ ದಾಳಿಯಲ್ಲಿ 'ಓಡು ಇಲ್ಲವೇ ಹೋರಾಡು' ಪ್ರತಿಕ್ರಿಯೆಯನ್ನು ವಿವರಿಸುತ್ತಾ ಈ ಎರಡು ಜೀವಿಗಳಲ್ಲಿ ಹಂತಹಂತವಾಗಿ ಬಲಾಢ್ಯವಾದುದರ ಹಿಡಿತಕ್ಕೆ ಸಿಕ್ಕು ಒಂದರ ಕೊಸರಾಟ ನಿಲ್ಲುತ್ತದೆ ಎಂದೂ ವಿಕಾಸ ವಿಜ್ಞಾನದ ಪ್ರಕಾರ ಶರಣಾಗತಿಯ ನಂತರ ನೋವನ್ನು ಮುಂದುವರೆಸುವುದರಲ್ಲಿ ಪ್ರಾಣಿಗೆ ಯಾವುದೇ ಲಾಭವಿಲ್ಲವೆಂದೂ ನಿಸರ್ಗಕ್ಕೂ ಅದರಿಂದ ಏನೂ ಪುರುಷಾರ್ಥ ಸಾಧನೆಯಾಗುವುದಿಲ್ಲವೆಂದೂ ಹಾಗಾಗಿ ಗೋವಿನ ನೋವಿನ ಸಂವೇದನೆಗಳು ಶೂನ್ಯಸ್ಥಿತಿಗೆ ಬರುತ್ತವೆ ಎಂಬುದನ್ನು ಗಮನಿಸಬಹುದು. "ಇಡೀ ನಿಸರ್ಗವೇ ಸಾವು-ಬದುಕಿನ ಒಂದು ಚಕ್ರವಾಗಿರುವಾಗ ಆಹಾರಕ್ಕಾಗಿ ಒಂದು ಜೀವಿ ಇನ್ನೊಂದು ಜೀವಿ ಬೇಟೆಯಾಡಿದರೆ ಅಲ್ಲಿ 'ಹಿಂಸೆ' ಮತ್ತು 'ಕ್ರೌರ್ಯ' ಎಂಬ ಪದಗಳು ತಮ್ಮ ಅರ್ಥವನ್ನು ಕಳೆದುಕೊಳ್ಳುತ್ತವೆ." [೨೫] ಮನುಷ್ಯ ಜೀವನಕ್ಕೆ ನಾಗೇಶ ಹೆಗಡೆ ಅವರ ವಿವರಣೆಯನ್ನು ಅವಲೋಕಿಸಿದರೆ ಅಧ್ಯಯನದಲ್ಲಿ ಸ್ವಲ್ಪ ಭಿನ್ನಮತದ ಚಿಂತನೆಯೊಂದು ಹಾದುಹೋಗುವುದು. ಹಲವು ಸಮುದಾಯಗಳ ಆಹಾರ ಸಂಸ್ಕೃತಿಗೆ ಒಪ್ಪಿತವಾದ ಸಾಮಾಜಿಕ ಜೀವನ ಕ್ರಮವನ್ನು ಇಂತಹ ಉದಾಹರಣೆಗಳ ಮೂಲಕ ವ್ಯಂಗ್ಯಗೊಳಿಸಿದಂತಾಗುತ್ತದೆ ಎನ್ನಬಹುದು. ಪ್ರಸ್ತಾಪಗಳಲ್ಲಿ ಆಹಾರ ಪದ್ಧತಿಯ ಚರ್ಚೆ ಎದುರಾದಾಗ ದೇವನೂರು ಮಹದೇವ ಅವರ 'ಒಳಗೊಳ್ಳುವಿಕೆಯೇ ಸಂಸ್ಕೃತಿಯೇ' ಎಂಬ ಲೇಖನ ಹೊರತರುವ ಆಹಾರ ಪದ್ಧತಿಯ ವಿಚಾರಗಳ ಚರ್ಚೆಯು ನೆನಪಾಗುವುದು. ಜೀವಿಗಳ ಮೇಲಾಗುವ ಮನುಷ್ಯನ ಶೋಷಣೆಯ ವ್ಯತಿರಿಕ್ತ ಪರಿಣಾಮವನ್ನು ಚಿತ್ರಿಸುವಾಗ ಒಂದು ಸಮುದಾಯದ ರೀತಿನೀತಿಗಳಿಗೆ ಅದರಿಂದ ಅಪಾಯವಾಗದಂತೆ ನೋಡಿಕೊಳ್ಳುವುದು ಸಹ ಬರಹಗಳ ಮಿತಿಯೆಂಬುದನ್ನು ಗ್ರಹಿಸಬೇಕಾಗುತ್ತದೆ. ಹಾಗೆಯೇ ಹಿಂಸೆ ಮತ್ತು ಕ್ರೌರ್ಯದಲ್ಲಿ ಗೋವು ಸೋತು ಶರಣಾಗುವುದು, ಅದರ ನೋವಿನ ಸಂವೇದನೆಗಳು ಶೂನ್ಯಸ್ಥಿತಿಗೆ ಬರುವುದು

ಈ ಸಾಮಾಜಿಕ ವ್ಯವಸ್ಥೆಯಲ್ಲಿ ಬಲಾಢ್ಯನೇ ಅಥವಾ ಶಕ್ತಿಶಾಲಿಯಾದವನೇ ಅಥವಾ ಪ್ರಬಲ ಸಮುದಾಯದವನೇ ಮೇಲುಗೈ ಸಾಧಿಸುತ್ತಲೇ ಹೋಗುತ್ತಾನೆ ಎಂಬುದನ್ನು ಮತ್ತಷ್ಟು ಅರಿವಿಗೆ ತರುತ್ತದೆ. ಅಂತೆಯೇ ಪಟ್ಟಭದ್ರ ಹಿತಾಸಕ್ತಿಯ, ರಾಜಕೀಯ ಧೋರಣೆಗಳ, ಅಪಮೌಲ್ಯದ ಆಲೋಚನಾ ಶಕ್ತಿಗಳ ಹಿಡಿತಕ್ಕೆ ಸಿಕ್ಕಿರುವ ನಿಸರ್ಗವು ದುಷ್ಟ ಶಕ್ತಿಗಳ ಗೆಲುವಿನೊಂದಿಗೆ ಅವಸಾನದಂಚಿಗೆ ತಳ್ಳಲ್ಪಡುವುದು ಎಂಬುದನ್ನು ಕೃತಿಯು ಮನವರಿಕೆ ಮಾಡಿಕೊಡುವುದಲ್ಲದೆ ಮನುಷ್ಯನ ಆಕ್ರಮಣದಲ್ಲಿ ನಿಸರ್ಗದ ಮೌನ ಆಕ್ರಂದನ ಯಾರಿಗೂ ಕೇಳಿಸದಂತಾಗಿರುವುದು ವಾಸ್ತವ ಸ್ಥಿತಿಯನ್ನು ಅರ್ಥೈಸುವುದು. ಆರ್ಭಟಿಸಿ, ಅಪ್ಪಳಿಸಿ, ಭೋರ್ಗರೆದೂ ಕೇರಳ, ಕೊಡಗು, ಉತ್ತರ ಪ್ರದೇಶಗಳನ್ನು ನಮ್ಮ ಕಣ್ಣೆದುರೇ ಜರ್ಜರಿತಗೊಳಿಸಿ ಸ್ಮಶಾನ ಮಾಡಿದರೂ ಆಧುನಿಕ ಭರಾಟೆಯಲ್ಲಿ ಮುಳುಗಿದ ಮನುಷ್ಯನಿಗೆ ನಿಸರ್ಗದ ದಾರುಣ ಸ್ಥಿತಿ ಮೌನ ಆಕ್ರಂದನವೇ ಆದಂತಿದೆ.

'ಭೂಮಿಯೆಂಬ ಗಗನನೌಕೆ' ಕೃತಿಯು ೨೦೧೬ ರಲ್ಲಿ ಪ್ರಕಟಗೊಂಡಿದೆ. ಇದರಲ್ಲಿ ಒಟ್ಟು ೨೧ ಲೇಖನಗಳಿವೆ. 'ವಿಜ್ಞಾನ ವಿಶೇಷ' ಅಂಕಣದಲ್ಲಿ ಪ್ರಕಟಗೊಂಡ ಲೇಖನಗಳು ಸಹ ಇದರಲ್ಲಿ ಕೆಲವು ಸೇರಿವೆ. 'ಇಲ್ಲಿ ನಾವು ಯಾರೂ ಪ್ರಯಾಣಿಕರಲ್ಲ, ಎಲ್ಲರೂ ಪೈಲೆಟ್‌ಗಳೇ' ಎಂಬ ಹೇಳಿಕೆಯೊಂದು ಮುಖಪುಟದಲ್ಲಿ ಕಾಣಿಸುತ್ತದೆ. 'ಧುಮ್ಮಿಕ್ಕುವ ಭವಿಷ್ಯದಲ್ಲಿ ನಾಳೆಗಳೇ ನೀರುಪಾಲು' ಲೇಖನದಲ್ಲಿ ಹೆಗಡೆ ಅವರು "ಟೆಕ್ನಾಲಜಿ ಎಂಬುದು ಇಡೀ ಪೃಥ್ವಿಯನ್ನೇ ಒಂದು ಹಳ್ಳಿಯನ್ನಾಗಿಸಿದೆ ಎಂದು ಹಿಂದೆ ಹೇಳುತ್ತಿದ್ದೆವು. ನಮ್ಮ ನೆಲದ ವಾಸ್ತವ ಏನೆಂದರೆ ಎಲ್ಲರೂ ಹಳ್ಳಿಗಳನ್ನು ಬಿಟ್ಟು ನಗರಗಳ ಕಡೆಗೆ ಹೋಗುವಂತೆ ಮಾಡುತ್ತಿದೆ. ನೆಲದ ಸ್ಥಿತಿಗತಿ ಹೇಗೋ ಇರಲಿ, ನಮ್ಮ ಸಾಮಾಜಿಕ ಬದುಕಿನಲ್ಲಿ ಏನಾದರೂ ಸ್ಥಿತ್ಯಂತರಗಳು ಆಗಿವೆಯೇ ಎಂದು ಆಲೋಚಿಸಿದಲ್ಲಿ ಅಂತದ್ದೇನು ವ್ಯತ್ಯಾಸವಾಗಿಲ್ಲ ಎನ್ನುತ್ತಾ, ಹಿಂದೆಯೂ ಶನಿದೇವಸ್ಥಾನಕ್ಕೆ ಭಕ್ತರು ಬರುತ್ತಿದ್ದರು. ಈಗ ಇನ್ನಷ್ಟು ಅದ್ದೂರಿ ಕಾರಿನಲ್ಲಿ ಬರುತ್ತಾರೆ. ಹುಂಡಿಗೆ ಚಿಲ್ಲರೆ ಬದಲಿಗೆ ನೋಟುಗಳು ಬೀಳುತ್ತಿವೆ. ಸಾಮಾಜಿಕ ವ್ಯವಸ್ಥೆ ಅದೇ ಜಾತಿ ವೈಷಮ್ಯ, ವರ್ಗಭೇದ, ಕಾಮ, ಕ್ರೋಧ, ಮದ, ಮತ್ಸರದಲ್ಲಿದ್ದು ಯಾವುದೂ ಕಡಿಮೆಯಾಗಿಲ್ಲ. ಮಾಧ್ಯಮಗಳ ಪ್ರಭಾವದಿಂದ ಅವೆಲ್ಲಾ ಇನ್ನಷ್ಟು ಬೃಹದಾಕಾರವಾಗಿ ಕಾಣತೊಡಗಿವೆ" ಎನ್ನುತ್ತಾರೆ.

"ಭಾರತೀಯರ ವೈಶಿಷ್ಟ್ಯ ಏನೆಂದರೆ ನಮ್ಮ ಪ್ರತಿ ನಾಳೆಯೊಂದಿಗೂ ನಿನ್ನೆಗಳು ಅಂಟಿಕೊಂಡೇ ಇರುತ್ತವೆ. ನಿನ್ನೆಗಳನ್ನು ಬೆನ್ನಿಗೆ ಕಟ್ಟಿಕೊಂಡು ಬದುಕುವುದು ನಮ್ಮ ರಕ್ತದಲ್ಲೇ ಬಂದಿದೆ. ನಮ್ಗೆ ಹೊಸದೇನೆಂದರೆ ಇಡೀ ಜಗತ್ತಿನ ಆಗುಹೋಗುಗಳು ನಮ್ಮ ಜೀವನದೊಂದಿಗೆ ತಳುಕು ಹಾಕಿಕೊಳ್ಳುತ್ತಿದೆ"[(೨೬)] ಎನ್ನುತ್ತಾ, ಆಧುನಿಕ ನಾಗರೀಕತೆಯಲ್ಲಿ ಧುಮ್ಮಿಕ್ಕಿ ಬರುತ್ತಿರುವ ಭವಿಷ್ಯದ ಆತಂಕದ ಬಗ್ಗೆ ವಿವರಿಸಿದ್ದಾರೆ. ಜಾಗತಿಕ ಆತಂಕಗಳೊಂದಿಗೆ ಹೋಲಿಸಿದರೆ ಕುಟುಂಬ ಮಟ್ಟದ ಸದ್ಯದ ಆತಂಕಗಳಲ್ಲಿ ಮಗ ಬರುತ್ತಾನೆಂದು ಕಾಯುತ್ತಾ, ವೃದ್ಧಾಶ್ರಮದಲ್ಲಿ ಕಾಲ ಕಳೆಯುವುದು ಏನೇನೂ ಅಲ್ಲ ಎನ್ನುವ ಮೂಲಕ ಮನುಷ್ಯನ ಬದುಕಿನ ಸಂಗತಿಗಳೊಂದಿಗೆ ಜಾಗತಿಕ ಆತಂಕವನ್ನು ಸಮೀಕರಿಸಿರುವುದು ಕೃತಿಯಲ್ಲಿ ವಿಶೇಷವೆನಿಸುತ್ತದೆ. ಜೀವನ, ಮತ್ತದರ ಶೈಲಿ, ನಾವು ಅನುಕರಿಸುತ್ತಿರುವ ಪಶ್ಚಿಮ ಜಗತ್ತಿನ ರೀತಿರಿವಾಜುಗಳು

ಹಾಗೆಯೇ ಜಗತ್ತಿನ ತಲ್ಲಣಗಳನ್ನು ಬೆನ್ನಿಗೆ ಕಟ್ಟಿಕೊಂಡು ಬದುಕುವ ನಮ್ಮವರ ಅಂಧಪ್ರಜ್ಞೆ ಮತ್ತು ಹುಂಬತನಗಳ ಬಗ್ಗೆ ಲೇಖನ ಬೆಳಕು ಚೆಲ್ಲುತ್ತದೆ.

'ಒಳಮನೆಯ ಕನ್ನಡಕ್ಕೆ ಪ್ರಾಣವಾಯು ಬೇಕು' ಈ ಲೇಖನದಲ್ಲಿ ಬತ್ತಿ ಹೋಗುತ್ತಿರುವ ದೇಸೀ ಜ್ಞಾನಧಾರೆ ಬಗ್ಗೆ ನಾಗೇಶ ಹೆಗಡೆ ಅವರು ಚರ್ಚಿಸಿದ್ದಾರೆ. ನಮ್ಮವರ ಪುರಾತನ ಜ್ಞಾನ ಪರಂಪರೆಗಳು ವಿದೇಶದಲ್ಲಿ ಮೆರುಗು ಪಡೆದು ಹಣಗಳಿಸುತ್ತಿರುವ ಬಗ್ಗೆ ಲೇಖಕರಿಗೆ ವಿಷಾದವಿದೆ. ನಿಸರ್ಗದೊಂದಿಗೆ ಸಾವಯವ ಬಂಧದಂತೆ ಬದುಕುತ್ತಿದ್ದ ವನವಾಸಿಗಳು, ಗುಡ್ಡಗಾಡು ಜನಾಂಗದವರು, ಬುಡಕಟ್ಟು ಜನರು, ಮೀನುಗಾರರು, ನಾಟಿವೈದ್ಯರು ಇವರೆಲ್ಲಾ ಆಧುನೀಕರಣ, ನಗರೀಕರಣ ಪ್ರಕ್ರಿಯೆಗಳಲ್ಲಿ ಹಾಗೂ ಇಂದಿನ ಜಾಗತೀಕರಣದ ಸುನಾಮಿಯಲ್ಲಿ ಸಿಕ್ಕು ತಮ್ಮತನ ಮತ್ತು ತಮ್ಮದೆಲ್ಲವನ್ನೂ ಕಳೆದುಕೊಳ್ಳುತಿರುವುದರ ಜೊತೆಯಲ್ಲೇ ದಿನದಿನಕ್ಕೂ ದೇಸೀ ಪರಂಪರೆಗಳೂ ನಶಿಸುತ್ತಿವೆ. ಅರಣ್ಯ ಮತ್ತು ಪರಿಸರ ನಾಶ, ಆಧುನಿಕ ಕೃಷಿ ವಿಧಾನ, ಶಿಕ್ಷಣ ಮಾಲಿನ್ಯ ಮತ್ತು ಸಾಂಸ್ಕೃತಿಕ ಮಾಲಿನ್ಯ ಕಾರಣಗಳೆಲ್ಲವೂ ಸೇರಿ ಆ ಸಮುದಾಯಗಳನ್ನು ಪರಿಸರ ನಿರಾಶ್ರಿತರಾನ್ನಾಗಿಸಿ ಪಟ್ಟಣಗಳಿಗೆ ವಲಸೆ ಬರುವಂತೆ ಮಾಡಿವೆ ಎಂಬುದಾಗಿ ವ್ಯಾಖ್ಯಾನಿಸುತ್ತಾರೆ. ಹೀಗೆ ಆ ಸಮುದಾಯಗಳು ವಲಸೆ ಬರಬೇಕಾದರೆ ಅವರು ನೆಲಮೂಲ ಜ್ಞಾನವನ್ನೆಲ್ಲಾ ತ್ಯಜಿಸಿಯೇ ಬರಬೇಕಾಗುತ್ತದೆ. ಒಮ್ಮೆ ಅವರು ಬಂದರೆಂದರೆ ಒಂದು ಪೀಳಿಗೆಯ ನಂತರ ಅವೆಲ್ಲಾ ಜ್ಞಾನವೂ ಅವರೊಂದಿಗೆ ಕಣ್ಮರೆಯಾಗುತ್ತದೆ[೨೭] ಎಂದಿರುವುದನ್ನು ಗುರುತಿಸಬಹುದು.

ನಾಡಿನ ಸಾಂಸ್ಕೃತಿಕ ಪರಂಪರೆಯ ಉಳಿವಿನಲ್ಲಿ ನೆಲಮೂಲ ಜ್ಞಾನವನ್ನು ಜೋಪಾನ ಮಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಪೇಟೆಂಟ್ ಪಡೆದು ನಮ್ಮದನ್ನೇ ಹೊಸತನದೊಂದಿಗೆ ನಮಗೆ ಮಾರಾಟಮಾಡುತ್ತಿರುವ ಚಿತ್ರಣಗಳು ದೇಸೀ ಸಂಪತ್ತುಗಳು ಹಿಂಬಾಗಿಲಿನ ತಂತ್ರಗಳ ಮೂಲಕ ವಿದೇಶವನ್ನು ಗಣನೀಯವಾಗಿ ತಲುಪುತ್ತಿರುವ ಪ್ರಸ್ತುತದ ಆತಂಕವನ್ನು ಕುರಿತು ಹೆಗಡೆ ಎಚ್ಚರಿಸಿದ್ದಾರೆ. ಭಾರತದ ಭಾಸ್ಮತಿ ಅಕ್ಕಿ ಕುರಿತು ಉದಾಹರಿಸುತ್ತಾ ೧೯೯೫ರಲ್ಲಿ ವಿದೇಶಿ ಪೇಟೆಂಟ್ ಸಿಕ್ಕಿದ್ದು ಗೊತ್ತಾಗಿ ಡಾ.ವಂದನಾಶಿವ ಮತ್ತು ಡಾ. ಸುಮನ್ ಇವರು ಈ ಬಗ್ಗೆ ಭಾರತ ಸರ್ಕಾರದ ಗಮನ ಸೆಳೆದಿದ್ದನ್ನು ಕೃತಿಯಲ್ಲಿ ಉಲ್ಲೇಖಿಸುವ ಮುಖೇನ ದೇಸಿ ಸ್ವತ್ತುಗಳು ಪರಭಾರೆಯಾಗುತ್ತಿವ ಸಂಗತಿಯನ್ನು ಲೇಖನದಲ್ಲಿ ಚಿತ್ರಿಸಲಾಗಿದೆ.

ನಾಗೇಶ ಹೆಗಡೆ ಅವರು ಈ ಲೇಖನದ ಬರಹಗಳ ಮೂಲಕ ಅರಣ್ಯ ತಪ್ಪಲು ಮತ್ತು ನಿಸರ್ಗ ಆಶ್ರಿತ ಬಡಕಟ್ಟು ಸಮುದಾಯದವರ ಒಕ್ಕಲೆಬ್ಬಿಸುವಿಕೆಯ ಪ್ರಕ್ರಿಯೆಯನ್ನು ವಿರೋಧಿಸುವವರಂತೆ ಕಂಡುಬರುತ್ತಾರೆ. **"ನಿಸರ್ಗದೊಂದಿಗೆ ಸದಾ ಬೆರೆತಿದ್ದ ಬುಡಕಟ್ಟು ಜನರು ತಮ್ಮದೇ ಭಾಷೆಯಲ್ಲಿ ಅದೆಷ್ಟೋ ಗಿಡಮೂಲಿಕೆಗಳನ್ನು, ಗೆಡ್ಡೆಗೆಣಸುಗಳನ್ನು, ಪ್ರಾಣಿಪಕ್ಷಿಗಳನ್ನು, ಜಲಚರಗಳನ್ನು ಗುರುತಿಸುತ್ತಿದ್ದರು. ಅಂಥವರ ಮಕ್ಕಳು ಶಾಲೆಯಲ್ಲಿ ಬೇರೆಯದೇ ಶಿಕ್ಷಣ ಪಡೆಯುವುದರಿಂದ ನೆಲಮೂಲ ಜ್ಞಾನ ಅವರಲ್ಲಿ ನಶಿಸಿ ಹೋಗುತ್ತದೆ. ಭಾಷಾ ವೈವಿಧ್ಯ ನಾಶವಾಗುತ್ತಾ ಹೋದರೆ ಜೀವವೈವಿಧ್ಯವೂ ಕ್ರಮೇಣ ನಾಶವಾಗುತ್ತದೆ. ಕಾಲಬುಡದಲ್ಲೇ ಇದ್ದರೂ ಕಣ್ಣಿಗೆ ಕಾಣದಂತಾಗುತ್ತವೆ. ಹಾಗೆ ಆಗದಂತೆ ಬಿಳಿಗಿರಿರಂಗನಬೆಟ್ಟದ ಸೋಲಿಗರ ಮಕ್ಕಳಿಗೆಂದು ಅವರದೇ ಸಂಸ್ಕೃತಿ ಪರಂಪರೆಯನ್ನು ಆಧರಿಸಿದ ಪಠ್ಯಗಳನ್ನು ರೂಪಿಸಲಾಗಿದ್ದು, ಅದನ್ನೇ**

ಬೋಧಿಸಲು ಶಿಕ್ಷಣ ಇಲಾಖೆ ಅನುಮತಿ ನೀಡಿದೆ. ಆದರೆ ಇತರ ಬುಡಕಟ್ಟು ಮಕ್ಕಳಿಗೆ ಆ ಅದೃಷ್ಟ ಇಲ್ಲವಾಗಿದೆ"[೨೮]ಎಂದಿದ್ದಾರೆ.

ಒಂದು ಕಡೆ ತೇಜಸ್ವಿ ಅವರು "ಕಾಡಿನ ಆದಿವಾಸಿಗಳನ್ನು ಸ್ಥಳಾಂತರಿಸುವುದಕ್ಕೆ ವ್ಯಕ್ತವಾದ ವಿರೋಧವನ್ನು ಖಂಡಿಸಿದವರು. ಆದಿವಾಸಿಗಳನ್ನು ಒಕ್ಕಲೆಬ್ಬಿಸದಂತೆ ಒತ್ತಾಯಿಸುತ್ತಿರುವವರು ಪ್ರಾಮಾಣಿಕವಾಗಿ ಯೋಚನೆ ಮಾಡಬೇಕು. ನಮ್ಮ ಮಕ್ಕಳನ್ನು ಎಂಜಿನಿಯರಿಂಗ್, ಎಂಬಿಬಿಎಸ್ ಓದಿಸುತ್ತೇವೆ. ಗಿರಿಜನರು ಮಾತ್ರ ಕಾಡಲ್ಲೇ ಇರಲಿ ಎನ್ನುವುದು ಯಾವ ನ್ಯಾಯ? ನಾವು ಯಾವ ರೀತಿ ಬದುಕುವುದಿಲ್ಲವೋ ಆ ರೀತಿ ಬೇರೆಯವರು ಬದುಕಲಿ ಎಂದು ಹೇಳುವ ಅಧಿಕಾರ ನಮಗ್ಯಾರಿಗೂ ಇಲ್ಲ ಎಂದರು."[೨೯] ಈ ಎರಡು ಚಿತ್ರಣಗಳಲ್ಲಿ ನಾಗೇಶ ಹೆಗಡೆ ಅವರ ಹೇಳಿಕೆಗಳು ಇಂದಿನ ಕಾಲಮಾನಕ್ಕೆ ತದ್ವಿರುದ್ಧ ಎಂಬಂತಾಗುವವು. ಆಧುನಿಕತೆಯಲ್ಲಿ ಜಿಯಾಲಜಿಕಲ್ ಮತ್ತು ಇಕಲಾಜಿಕಲ್ ಮನುಷ್ಯನ ಶಕ್ತಿಯನ್ನು ಹೆಗಡೆ ಹತ್ತಿರದಿಂದ ಗುರುತಿಸಬಲ್ಲವರಾಗಿದ್ದಾರೆ. ಅದು ಪ್ರಾದೇಶಿಕವಾಗಿ ಅಲ್ಲದೆ ಜಾಗತಿಕವಾಗಿಯೂ ಕೂಡ. ಪ್ರಸ್ತುತ ರಾಜಕೀಯ ಹಿತಾಸಕ್ತಿಗಳೆಲ್ಲಾ ಒಟ್ಟುಗೂಡಿ ಉಳ್ಳವರಿಗೆ ಮತ್ತು ಕಾರ್ಪೋರೇಟ್ ಸಂಸ್ಕೃತಿಗಳಿಗೆ ಬೇಕಾಗುವಂತೆ ನಿಸರ್ಗದ ಮೂಲ ಸ್ವರೂಪವನ್ನು ಧ್ವಂಸಮಾಡಿ ರೆಸಾರ್ಟ್, ಹೋಂಸ್ಟೇ ನಿರ್ಮಿಸಿಕೊಡುತ್ತಿದ್ದು, ಮಾಲ್‌ಗಳಿಗಾಗಿ ಹಸಿರು ಭೂಮಿಯನ್ನು ಪಲ್ಲಟಗೊಳಿಸುತ್ತಿವೆ. ವೀಕ್ ಎಂಡ್ ಅಥವಾ ಲಿಂಕ್ ಹಾಲಿಡೇಸ್ ನೆಪದಲ್ಲಿ ನಿಸರ್ಗವನ್ನು ಮೋಜು ಮಸ್ತಿಗಾಗಿ ಬಳಕೆ ಮಾಡಿಕೊಳ್ಳುತ್ತಿರುವ ಈಗಿನ ಸಂದರ್ಭಗಳಲ್ಲಿ ಆದಿವಾಸಿ ಮಕ್ಕಳು ಅಲ್ಲಿ ನೆಲೆಸಿ ಮೋಜಿಗೆ ಬಂದವರಿಗೆ ಪಾಪ್‌ಕಾರ್ನ್, ಲೇಸ್, ಕುರ್‌ಕುರೆ ಇತ್ಯಾದಿಗಳನ್ನು ಮಾರಬೇಕೇ? ರೆಸ್ಟೋರೆಂಟ್‌ಗೆ ಬಂದು ತಿಂದವರ ಎಂಜಲು ಗುಡಿಸಬೇಕೇ? ಟಿಪ್ಸ್ ಹಣಕ್ಕಾಗಿ ಕೈಚಾಚಬೇಕೇ? ಇತ್ಯಾದಿ ಪ್ರಶ್ನೆಗಳು ಎದುರಾಗುವುದು ಸ್ವಾಭಾವಿಕ. ಒಮ್ಮೆ ಹೀಗೆ ಪರಿಶೀಲಿಸೋಣ. ಇಂದಿಗೂ ರಾಷ್ಟ್ರದಲ್ಲಿ ಏಕರೂಪ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಲಾಗಲಿಲ್ಲ. ರಾಜ್ಯಗಳ ಬೋರ್ಡ್ ಆಧರಿಸಿದ ಪ್ರಾದೇಶಿಕ ಪಠ್ಯ ಬಳಕೆಗೆ ಕಡ್ಡಾಯ ಅನುಸರಣೆಯ ನಿಯಮ ರೂಪಿಸಲಾಗಲಿಲ್ಲ. ಖಾಸಗಿ ಶಾಲೆಗಳ ಹಾವಳಿಯನ್ನು ತಪ್ಪಿಸಲಾಗಲಿಲ್ಲ. ಹಳದಿ ಬಸ್ಸುಗಳಿಗೆ ಗ್ರಾಮಗಳು ನಿರ್ಬಂಧ ವಿಧಿಸಲಾಗಲಿಲ್ಲ. ಗ್ರಾಮ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯದ ನಡುವಿನ ಶಿಕ್ಷಣ ವ್ಯವಸ್ಥೆಯಲ್ಲಿಯೇ ಸಾಕಷ್ಟು ಅಂತರಗಳು ನಿರ್ಮಾಣಗೊಂಡಿರುವಾಗ (ಬೋರ್ಡಿಂಗ್ ಶಾಲೆ, ಆದರ್ಶ ಶಾಲೆ, ಸಿಬಿಎಸ್‌ಸಿ, ಐಸಿಎಸ್‌ಸಿ, ಚೆನ್ನಮ್ಮ, ಸೈನಿಕ, ಇಂಟರ್ ನ್ಯಾಷನಲ್) ಬುಡಕಟ್ಟು ಜನರು ಪಲ್ಲಟಗೊಳ್ಳುತ್ತಿರುವ ಆ ನೆಲದಲ್ಲಿಯೇ ಬದುಕಬೇಕೆ? ಒಂದು ವೇಳೆ ಬದುಕಲಿ ಎಂದಾದರೂ ಅವರು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ಬರಬಾರದೇ? ಜೀವವೈವಿಧ್ಯದ ದಾಖಲಾತಿಗಾಗಿಯಾದರೂ ನೆಲಸಂಪತ್ತು ಸಂರಕ್ಷಣೆಗಾಗಿಯಾದರೂ ಆಧುನಿಕ ಅರಿವಿನ ಸಾಕ್ಷರತೆಗೆ ಅವರನ್ನು ಶಿಕ್ಷಣದ ಮೂಲಕ ಪ್ರೇರೇಪಿಸಬಾರದೇ? ಶಿಕ್ಷಣ ಇಂದು ಪ್ರತಿ ಮಗುವಿನ ಕಡ್ಡಾಯ ಮೂಲಭೂತ ಹಕ್ಕಾಗಿದ್ದು ಅವರು ಅದರಿಂದ ವಂಚಿತರಾಗುವುದಿಲ್ಲವೇ? ಅರಣ್ಯದಂಚಿನಿಂದ ಸುಮಾರು ೧೦೦ಕಿ.ಮೀ ದೂರದಲ್ಲಿ ಬದಲುಗೊಳ್ಳುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಾಗುತ್ತಿರುವ ಬದಲಾವಣೆಯ ಆವರಣಕ್ಕೆ ಅವರು ತೆರೆದುಕೊಳ್ಳಬಾರದೇ? ಸಾಂಸ್ಕೃತಿಕವಾಗಿಯೂ ವಿವೇಚಿಸಿದ್ದಲ್ಲಿ ಅದು ಆದಿವಾಸಿಯಿರಲಿ, ನಗರವಾಸಿಯಿರಲಿ. ಪ್ರತಿಭೆ ಎಂಬುದು ಯಾರ ಅಥವಾ ಯಾವುದೇ ವರ್ಗದ ಸೊತ್ತಲ್ಲ. ಇಂದು ಎಲ್ಲಾ ಹಂತದಲ್ಲೂ

ಪ್ರತಿಭೆಯ ಪೋಷಣೆ ಬಹುಮುಖ್ಯವಾಗಿದ್ದು ನಾಡಿನ ಸಮಗ್ರತೆಯಲ್ಲಿ ಪ್ರತಿಯೊಬ್ಬರನ್ನೂ ಮುಖ್ಯವಾಹಿನಿಗೆ ಕರೆತರುವುದು ಪ್ರಜಾಸತ್ತಾತ್ಮಕವಾದ ಜವಾಬ್ದಾರಿಯಾಗಿದೆ. ಈ ನೆಲಮೂಲದ ಜ್ಞಾನವನ್ನು ಜೋಪಾನವಾಗಿ ಕಾಪಾಡಲು ಒಂದು ಹಂತದ ಶಿಕ್ಷಣದ ಪಠ್ಯಕ್ರಮದಲ್ಲಿ ಪೂರಕವಾಗಿರುವ ಐಚ್ಛಿಕ ವಿಷಯಗಳನ್ನು ಜೋಡಿಸಿ, ಕಲಿಕೆ ಬಲಗೊಳ್ಳುವಂತೆ ಮಾಡುವುದರೊಂದಿಗೆ ಅದು ನಶಿಸದಂತೆ ನೋಡಿಕೊಳ್ಳುವುದು ಸಹ ನಾಡಿನ ಜವಾಬ್ದಾರಿಯಾಗಿದೆ. ಎಚ್ಚೆತ್ತುಕೊಳ್ಳಬೇಕಿರುವುದು ಮೂಲ ನಿಸರ್ಗ ಸ್ವರೂಪವನ್ನು ಬದಲಿಸಲು ಹೊರಟ ಪ್ರಭಾವಿ ಮನುಷ್ಯರ ನಡವಳಿಕೆಗಳಿಗೆ. ಪ್ರವಾಸೋದ್ಯಮದ ಹೆಸರಲ್ಲಿ ನಡೆಯುತ್ತಿರುವ ಅಕ್ರಮ ಪರಿಸರ ಚಟುವಟಿಕೆಗಳಿಗೆ. ಒಕ್ಕಲೆಬ್ಬಿಸಬೇಕಿರುವುದು ರೆಸಾರ್ಟ್ ಮತ್ತು ಹೋಂಸ್ಟೇ ಮಾಲೀಕ ಯಜಮಾನರನ್ನು. ಅನುಪಾಲನೆಗೊಳಿಸಬೇಕಿರುವುದು ಅರಣ್ಯ ನೀತಿ ನಿರೂಪಣೆಗಳನ್ನು. ಬಲಿಹಾಕಬೇಕಿರುವುದು ಅರಣ್ಯ ಒತ್ತುವರಿ ಮಾಡಿಕೊಳ್ಳುತ್ತಿರುವ ಬಲಾಢ್ಯರನ್ನು. ಇದಕ್ಕಾಗಿ ಸೆಟೆದು ನಿಂತರೆ ನಿಸರ್ಗಪರವಾದ ಆಶಯವನ್ನು ಸಾಮೂಹಿಕವಾಗಿ ಸಾಧಿಸಿದಂತಾಗುವುದು. ವಿಸ್ತಾರ ಪರಿಸರ ಪ್ರಜ್ಞೆಯುಳ್ಳ ಹಾಗೂ ಪರಿಸರದ ಬಹುಮುಖ ಆಯಾಮಗಳನ್ನು ಚರ್ಚೆಗೆ ಒಳಪಡಿಸುವ ಈ ಇಬ್ಬರೂ ಲೇಖಕರು ಆದಿವಾಸಿಗಳು, ಅರಣ್ಯವಾಸಿಗಳು, ಬುಡಕಟ್ಟು ಸಮುದಾಯದವರ ಒಕ್ಕಲೆಬ್ಬಿಸುವಿಕೆ ಕುರಿತ ವಿಚಾರಗಳಲ್ಲಿ ಪರಸ್ಪರ ಭಿನ್ನವಾಗಿ ಚಿಂತಿಸುವುದನ್ನು ಅಧ್ಯಯನದಲ್ಲಿ ಮುಖ್ಯವಾಗಿ ಗುರುತಿಸಬಹುದಾಗಿದೆ.

'ಹಳ್ಳೀಮುಕ್ಕ ಎಲ್ಲೆಲ್ ಹೊಕ್ಕ' ಈ ಕೃತಿಯು ಬೆಂಗಳೂರಿನ ಹೊರಹೊಲಯದಲ್ಲಿ ನಾಗೇಶ ಹೆಗಡೆ ಅವರು ಜೀವಿಸುತ್ತಿರುವ ಸಂದರ್ಭದಲ್ಲಿ ಎದುರಾಗುವ ನರೆಹೊರೆಯ ಪರಿಸರದಲ್ಲಿನ ಘಟನೆಗಳನ್ನು ಸರಳವಾಗಿ ವಿವರಿಸುತ್ತದೆ. ಹಳ್ಳಿಯ ಬದುಕಿನ ತಮಾಷೆಯ ಸಂಗತಿಗಳನ್ನು ಈ ಕೃತಿಯು ಒಳಗೊಂಡಿದೆ. 'ಅಪರಂಜಿ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಪುಸ್ತಕದ ರೂಪದಲ್ಲಿ ಪ್ರಕಟಗೊಂಡಿವೆ. ಬ್ಲಾಗ್‌ಗಳಲ್ಲಿ ಓದುಗರನ್ನು ಪಡೆದಿರುವ ಹೆಗಡೆ ಅವರಿಗೆ ಪದ್ಮಶ್ರೀ ಪ್ರಶಸ್ತಿ ಪಡೆದ ಡಾ.ಉಲ್ಲಾಸ್‌ಕಾರಂತರು ಪ್ರಮುಖ ಓದುಗರಾಗಿದ್ದು, ಹಳ್ಳಿಮುಕ್ಕನನ್ನು ಪ್ರತಿಕ್ರಿಯಿಸಿ ಡಾ.ಎಂ. ಶಿವರಾಮ್ ಅವರ 'ಕೊರವಂಜಿ' ಓದುತ್ತಲೇ ಬೆಳೆದ ನಾನು ಅಪರಂಜಿಯನ್ನು ಅಷ್ಟೇ ಆಸಕ್ತಿಯಿಂದ ಓದುತ್ತೇನೆ[೩೦] ಎಂದಿದ್ದಾರೆ. ಬೆಂಗಳೂರಿನ ಹೊರವಲಯದ ಕೆಂಗೇರಿಯಾಚೆಗಿನ ಮೈತ್ರಿಗ್ರಾಮಕ್ಕೆ ಹೊಂದಿಕೊಡಂತೆ ಇರುವ ನಾಲ್ಕಾರು ಹಳ್ಳಿಗಳ ಬದುಕಿನ ಪ್ರಸಂಗಗಳನ್ನು ಹಾಗೂ ಅಲ್ಲಿನವರೊಂದಿಗೆ ಕೆಲವು ಸಂಗತಿಗಳಲ್ಲಿ ಪೇಚಿಗೆ ಸಿಲುಕಿಕೊಳ್ಳುವ ಹೆಗಡೆ ಅವರ ಸ್ಥಿತಿಯನ್ನು ನವಿರಾಗಿ ಚಿತ್ರಿಸಲಾಗಿದೆ. 'ನಾಗನ ಹೆಗಲೇರಿ ನಾಗ' ಪ್ರಸಂಗದಲ್ಲಿ ಪೈಪ್‌ನೊಳಗೆ ನಾಗರ ಹಾವನ್ನು ಬಂಧಿಸಿ ಹೆಗಲ ಮೇಲೆ ಹೊತ್ತು ಗಿಡಗೆಂಟೆಗಳ ನಡುವೆ ಬಿಡಲು ಹೋಗುವುದು, ಆಂಜನಪ್ಪ ಎದುರಾಗಿ ವಿಷಯ ತಿಳಿದು ಅಚ್ಚರಿಪಟ್ಟು ಕ್ವಾರಿಗೆ ಪೈಪ್ ಬಿಸಾಕಿ ಹೊಂಟೋಗಿ ಎಂದದ್ದು, ಅದರಂತೆ ಹೆಗಡೆ ಮಾಡಿದ್ದು, ಮುಂಜಾನೆ ಪೈಪು ಇಲ್ಲದಿದ್ದದ್ದು ತಮಾಷೆ ಎನಿಸುವುದು. ಸಿಂಥೆಟಿಕ್ ಸೆಗಣಿಗೆ ಹುಡುಕಾಟ ನಡೆಸಿದ್ದು, ಹಲಸಿನ ಮರದ ಕೆಳಗೆ ಬಿದ್ದಿದ್ದ ಸೆಗಣಿ ಎತ್ತಲು ಹೋದಾಗ, ಹೆಗಡೆ ಅವರನ್ನು ಹಲಸಿನ ಕಾಯಿ ಕದಿಯಲು ಬಂದ ಖದೀಮ ಎಂದು ಭಾವಿಸಿ ದೂರದಿಂದಲೇ ಕಲ್ಲು ಬೀಸಿ, ಕೂಗಾಡುತ್ತಾ ಹಳ್ಳಿ ಹೈದನೊಬ್ಬ ಓಡಿಬಂದದ್ದು ನಗೆ ತರಿಸುತ್ತವೆ. ಗೆದ್ದಲು ಸಾಕಾಣೆ, ಕೋಳಿಸಾಕಾಣೆ ಮೀನು ಸಾಕಾಣೆಗಾಗಿ ಯೂರಿಯಾಕ್ಕಾಗಿ ಗುಡ್ಡದ ಬೂದಿಯ ಸೋಮಪ್ಪನನ್ನು ಕೇಳಲು ಅವನ ಮನೆ

ಬಳಿಗೆ ಹೋದದ್ದು ತಮಾಷೆಯಾಗಿವೆ. ಹೆಗಡೆ ಅವರ ನಾಯಿ 'ಕಾಫಿ' ವಾಕಿಂಗ್‌ಗೆ ಹೋದಾಗ ಏನೋ ಸಾಹಸ ಮಾಡಿದಂತೆ ಹೆಗಡೆ ಅವರಿಗೆ ಭಾಸವಾಗಿದ್ದು, ಅದ್ಯಾವುದೋ ಪ್ರಾಣಿಯನ್ನೋ ಮುಂಗುಸಿಯ ದೇಹವನ್ನೋ ಪೊದೆಯಿಂದ ಹಿಡಿದು ಎಳೆದು ಕಾಫಿಯು ರಕ್ತದಕಲೆ ಮಾಡಿದ್ದನ್ನು ಗ್ರಹಿಸಿ ಪ್ರಾಣಿಯ ಬಾಲವೋ ಇರಬೇಕೆಂದು ಹೆಗಡೆ ಅವರು ತರಾತುರಿಯಲ್ಲಿ ಅದನ್ನು ಕೈಯಲ್ಲಿ ಹಿಡಿದೆಳೆದು ಬಿಸಾಡುವಾಗಲೇ ಅದು ಸ್ಯಾನಿಟರಿ ನ್ಯಾಪ್ಕಿನ್ ಎಂದು ಅವರಿಗೆ ಗೊತ್ತಾಗುವುದು ಕೃತಿಯಲ್ಲಿ ತಂದಂತಹ ತಮಾಷೆ ಸಂಗತಿಗಳು ಎನಿಸುತ್ತವೆ. ಕೃತಿಯಲ್ಲಿ ಹೀಗೆ ಹಲವಾರು ಹಾಸ್ಯ ಪ್ರಸಂಗಗಳಿವೆ. ಪರಿಸರ ವಿಜ್ಞಾನ, ಭೂಮಿ, ವೈಜ್ಞಾನಿಕ ವಿಷಯಗಳನ್ನು ನಿರೂಪಿಸುವ ಹೆಗಡೆಯವರ ವ್ಯಕ್ತಿತ್ವವನ್ನು ಒಂದಿಷ್ಟು ಬದಲಿಸಿ ನೋಡಲು ಈ ಕೃತಿ ಸಾಕ್ಷಿಯಾಗುತ್ತದೆ. ಹಳ್ಳಿಗರ ಸಾಮಾಜಿಕ ಜೀವನದಲ್ಲಿ ಬೆರೆತ ಹಾಸ್ಯ ಸಂಗತಿಗಳನ್ನು, ಇಂದಿನ ಆಧುನಿಕತೆಯ ಜೀವನ ಶೈಲಿ ಉಂಟುಮಾಡಿರುವ ಗೋಜಲುಗಳೊಂದಿಗೆ ಬೆರೆಸಿರುವಂತಹ ಹಾಸ್ಯಪ್ರಜ್ಞೆಯ ಭಾಷಾ ಶೈಲಿ ಅತ್ಯಂತ ಸರಳವೆನಿಸುತ್ತದೆ. 'ಬಾಡಿಗೆ ಕೋಳಿ, ಎರವಲು ಹುಂಜ', 'ಇಲ್ಲೀಗಲ್ ಮಣ್ಣಂಗಟ್ಟಿ' ಪ್ರಸಂಗಗಳು ಲೇಖಕರ ಹಾಸ್ಯ ಪ್ರಜ್ಞೆ ಅರಿಯಲು ಓದುಗನನ್ನು ಪ್ರೇರೇಪಿಸುತ್ತವೆ. ಈ ಕೃತಿಯಲ್ಲಿ ಹೆಗಡೆ ಅವರು ನಿರೂಪಿಸುವ ಮಾನವ ಸಂಬಂಧಗಳು ಸಾಮಾಜಿಕ ಜೀವನದ ಗ್ರಹಿಕೆಗೆ ಅವಕಾಶ ಕಲ್ಪಿಸುವವು.

೬.೪ 'ಮಾನವ' ಕಲ್ಪನೆಯಲ್ಲಿ ಸಾಮಾನ್ಯೀಕರಣದ ಸಂಗತಿಗಳು

'ಜೈವಿಕ ಮಾನವ' ಕಲ್ಪನೆಯ ನಿರೂಪಣೆಗಳಲ್ಲಿ ತೇಜಸ್ವಿ ಅವರು ಕುವೆಂಪು ಅವರಿಂದ ಪ್ರಭಾವಿತಗೊಂಡಿರುವುದನ್ನು ಗುರುತಿಸಲು ಸಾಧ್ಯವಿದೆ. ಪ್ರಕೃತಿಯಲ್ಲಿ ಮಾನವ ಸಂಬಂಧದ ನಂಟನ್ನು ಅವರಷ್ಟು ತಾತ್ವಿಕವಾಗಿ ಮತ್ತು ಪರಿಣಾಮಕಾರಿಯಾಗಿ ನಿರೂಪಿಸದಿದ್ದರೂ ಕಥೆ ಕಾದಂಬರಿಗಳ ಮೂಲಕ ಜೈವಿಕ ಮಾನವ ನಂಟನ್ನು ಹೆಚ್ಚು ವಾಸ್ತವಿಕವಾಗಿ ಮಂಡಿಸಿದ್ದಾರೆ. ತಂದೆಯವರೇ ಪ್ರಕೃತಿ ಮತ್ತು ಪರಿಸರದ ಬಗ್ಗೆ ಇರುವ ಕುತೂಹಲಕ್ಕೆ ಚಿಕ್ಕಂದಿನಿಂದಲೂ ಕಾರಣ ಎನ್ನುವ ತೇಜಸ್ವಿಗೆ ಜೈವಿಕ ಮಾನವ ಕಲ್ಪನೆಯ ಸೃಷ್ಟಿಯು ಸಂಕೀರ್ಣವಾಗಿರಲಿಲ್ಲ. ಆದ್ದರಿಂದಲೇ ಮಂದಣ್ಣ, ಮಾರ, ಪ್ಯಾರಾ, ಚೀಂಕ್ರ ಎಂಬ ಪಾತ್ರಗಳು ನೆಲಮೂಲ ಜ್ಞಾನದ ಹಾಗೂ ತಳಸ್ಪರ್ಶಿ ನಿಸರ್ಗ ಬಂಧದ ಪ್ರತಿಮೆಗಳಾಗಿ ರೂಪುಗೊಳ್ಳುವರು. ತೇಜಸ್ವಿಯವರ ಕರ್ವಾಲೋ, ಪರಿಸರದ ಕತೆ, ಚಿದಂಬರ ರಹಸ್ಯ, ಏರೋಪ್ಲೇನ್ ಚಿಟ್ಟೆ ಕೃತಿಗಳಲ್ಲಿ ಜೈವಿಕ ಮಾನವ ಪ್ರಜ್ಞೆ ಅಂತರ್ಗತವಾಗಿದೆ. ಇಲ್ಲಿನ ಪಾತ್ರಗಳು ಪ್ರಾಕೃತಿಕ ಪರಿಸರ ಕಟ್ಟಿಕೊಡುವ ಸಾಂಸ್ಕೃತಿಕತೆಯ ಭಾಗವಾಗಿಯೂ ರೂಪುಗೊಳ್ಳುತ್ತವೆ. ಇವರೆಲ್ಲರೂ ಹಕ್ಕಿ, ಕೀಟ, ಸಸ್ಯ, ಪ್ರಾಣಿ ಇತ್ಯಾದಿ ಜೀವಸಂಕುಲಗಳ ನಡುವೆ ಸಂಚರಿಸುವ ಪಾತ್ರಗಳಾಗಿವೆ. ಆದ್ದರಿಂದಲೇ ಇವು ಜೈವಿಕ ಮಾನವ ಪ್ರಜ್ಞೆಯಲ್ಲಿ ಗುರುತಿಸಲ್ಪಡುತ್ತವೆ. ಕೆಲವೊಮ್ಮೆ ಅತಿ ಮುಗ್ಧತೆಯೊಂದಿಗೆ ದೇಸಿ ಪ್ರತಿಮೆಗಳಾಗಿಯೂ ಮತ್ತೊಮ್ಮೆ ಪರಿಸರ ಪ್ರಜ್ಞೆಯ ಸಂಕೇತಗಳಾಗಿಯೂ ಪಾತ್ರಗಳು ರೂಪುಗೊಳ್ಳುತ್ತವೆ. ಜೈವಿಕ ಪರಿಸರದೊಂದಿಗೆ ಬೆಸೆದುಕೊಂಡ ಮಾನವನ ಸಾಮಾಜಿಕ ಜೀವನದ ಸಂಕೀರ್ಣತೆ, ಹಳ್ಳಿಗಳ ಸಂಕ್ಷೋಭೆ, ಸಂಸ್ಕೃತಿಯ ಚಲನಶೀಲತೆಯಿಂದಾಗಿ ದಕ್ಕುವ ಪ್ರಗತಿ ಕುರಿತು ತೇಜಸ್ವಿ ಅವರಿಗೂ ಪೂರ್ಣದೃಷ್ಟಿ ಲಭಿಸಿತ್ತು. ಚಿದಂಬರ ರಹಸ್ಯ, ಜುಗಾರಿ ಕ್ರಾಸ್ ಇದಕ್ಕೊಂದು ಅತ್ಯುತ್ತಮ ನಿದರ್ಶನವೆನಿಸಿದೆ. ಆದರೆ ನಿಸರ್ಗದಿಂದ ಪ್ರಾಪ್ತವಾಗುವ

ತನುಮನು ಪಟುತ್ವ ಮಾತ್ರ ತಂದೆಯವರಿಗಿಂತಲೂ ಬೇರೇಯದ್ದೇ ರೀತಿಯದ್ದಾಗಿದೆ. ನಿಸರ್ಗದ ಸೆಳೆತಗಳಿಗೆ ಆಧ್ಯಾತ್ಮ ದರ್ಶನದ ಪರಿಧಿಯನ್ನು ತೇಜಸ್ವಿ ಎಂದೂ ಹಾಕಿಕೊಳ್ಳಲಿಲ್ಲ. ಪರಿಸರವನ್ನು ಧ್ಯಾನಾತ್ಮಕವಾಗಿ ಕಾಣದಿದ್ದರೂ ಪ್ರಾಯೋಗಿಕ ಅನುಭವಗಳ ಅನುಸರಣೆಯ ಎಚ್ಚರದಿಂದಲೇ ಅದನ್ನು ಜೊತೆಗೂಡಿಸುತ್ತಾರೆ. ಸೃಜನಾತ್ಮಕತೆ ಮತ್ತು ಕ್ರಿಯಾಶೀಲತೆ ಕಾಣಬಹುದಾಗಿದ್ದು ಪ್ರಾಯೋಗಿಕತೆ, ಪ್ರಾತ್ಯಕ್ಷಿಕತೆ, ಪ್ರಯತ್ನ ಮತ್ತು ಮರುಪ್ರಯತ್ನದ ಮೂಲಕವೇ ಪ್ರಕೃತಿಯ ವಿಸ್ಮಯಗಳನ್ನು ಬೆನ್ನುಹತ್ತಿದವರು. ಕರ್ವಾಲೋ ಕೃತಿಯು ಕಾಲ್ಪನಿಕ ಜಗತ್ತನ್ನು ಓದುಗರಿಗೆ ಒದಗಿಸಿದರೂ ಅದು ಹೆಣೆದುಕೊಳ್ಳುವ ಹಾದಿ ಮತ್ತು ಗ್ರಹಿಕೆಗೆ ದಕ್ಕುವ ಸಾಮಾಜಿಕ ಜೀವನದ ಸಂಗತಿಗಳು ಜೈವಿಕ ಪರಿಸರದ ಬೆಸುಗೆಯಲ್ಲಿಯೇ ಸಂಚರಿಸುತ್ತಿದ್ದವು ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಪರಿಸರ ವಿನಾಶವನ್ನು ಸಹಿಸದ ತೇಜಸ್ವಿ ಇದರ ಹಿಂದೆ ಇರುವ ಕ್ರೂರ, ಭೂಗತ ಮುಖಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಎದುರಿನ ಆಗು ಹೋಗುಗಳಿಗೆ ಸ್ಪಂದಿಸುತ್ತಲೇ ಸಮಾಜವಾದಿ, ವಾಸ್ತವವಾದಿ, ಬರಹಗಾರರಾಗಿ ರೂಪುಗೊಂಡಿರುವ ತೇಜಸ್ವಿ ಕರ್ನಾಟಕದ ಪರಿಸರದೊಂದಿಗೆ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡಿದ್ದಾರೆ. ತೇಜಸ್ವಿ ಅವರ ಚಿಂತನೆಗಳು ಪಟ್ಟಭದ್ರ ಹಿತಾಸಕ್ತಿಗಳ, ರಾಜಕೀಯ ಕುಯುಕ್ತಿಗಳ, ಸಮಾಜದ ಕಂದಾಚಾರಗಳ, ಪರಂಪರಾಗತ ಮೌಢ್ಯ, ವರ್ಗ, ವರ್ಣಗಳ ವಿರುದ್ಧ ಅಘೋಷಿತ ಧಿಕ್ಕಾರವನ್ನು ಪ್ರತಿ ಹಂತದಲ್ಲೂ ಪ್ರತಿಪಾದಿಸಿವೆ. ದೇಶ ಬದಲಾವಣೆಯಾಗುವುದು, ವ್ಯಕ್ತಿಯ ವ್ಯಕ್ತಿತ್ವ ಹೊಸ ರೂಪ ಪಡೆದು ಸಕಾರಾತ್ಮಕವಾಗುವುದು ತೇಜಸ್ವಿ ಅವರ ಮಾನವ ಕಲ್ಪನೆಯ ಪ್ರಮುಖ ಆಶಯವಾಗಿದೆ.

ಜೀವಿಗಳ ಬದುಕಿನೊಂದಿಗೆ ಮನುಷ್ಯನ ಬದುಕಿನ ಸಂಬಂಧಗಳು ನೆನಪುಗೊಳ್ಳುತ್ತಾ ಅಲ್ಲಲ್ಲಿ ವ್ಯಥೆಯಾಗಿ, ದಾರುಣ ಚಿತ್ರಗಳಾಗಿ ಸಾಮಾಜಿಕ ಆಯಾಮ ಪಡೆದುಕೊಳ್ಳುವವು. ಕೃತಿಗಳಲ್ಲಿ ಪರಿಸರವನ್ನು ಚಿತ್ರಿಸುವಂತಹ ಸಂದರ್ಭಗಳಲ್ಲಿ ತೇಜಸ್ವಿ ಅವರು ಜೀವಿ ಪ್ರಜ್ಞೆಯೊಂದಿಗೆ ಸಾಂಸ್ಕೃತಿಕತೆಯ ಭಾಗವಾಗಿ ಮಾನವ ಪ್ರಜ್ಞೆಯನ್ನು ಅರ್ಥೈಸಲು ಮನುಷ್ಯ ಪಾತ್ರಗಳನ್ನು ಶಕ್ತಿಶಾಲಿಯಾಗಿ ಜೊತೆ ಜೊತೆಯಾಗಿ ಸೃಷ್ಟಿಸುತ್ತಾ ಮಾಧ್ಯಮವಾಗಿ ಅವುಗಳನ್ನು ಬಳಕೆಗೆ ತಂದಿರುವುದು ಕ್ರಿಯಾತ್ಮಕ ಪ್ರಯತ್ನವೆನಿಸಿದೆ. ಸಾಮಾನ್ಯವಾಗಿ ನವ್ಯ ಕಾದಂಬರಿಗಳಲ್ಲಿ ವ್ಯಕ್ತಿ ಕೇಂದ್ರಿತ ವಸ್ತು ವಿಷಯಗಳು ಕಥಾ ಕೇಂದ್ರವಾಗಿ ನಿಲ್ಲುವಂತೆ ತೇಜಸ್ವಿ ಅವರ ಕಲಾಪ್ರತಿಮೆಗಳಲ್ಲಿ ಆ ರೀತಿ ಆಗುವುದಿಲ್ಲ. ಜೈವಿಕ ನೆಲೆಯ ಸಹಜ ಸಮೃದ್ಧ ಶಕ್ತಿಯ ಮೇಲೆ ಮಾನವನ ಸ್ವಾರ್ಥ ದುರಾಕ್ರಮಣ ಮಾಡುವುದನ್ನು ಕೀಟ ಪ್ರಪಂಚವೂ, ಪ್ರಾಣಿ ಪ್ರಪಂಚವೂ, ಸಸ್ಯಸಂಕುಲವೂ ವಿರೋಧಿಸುತ್ತವೆ.

'ಕರ್ವಾಲೋ' ಕೃತಿಯ ಮಾನವ ಕಲ್ಪನೆಯ ಹಿನ್ನೆಲೆಯಲ್ಲಿ ಭಿನ್ನಾಭಿಪ್ರಾಯದ ವಿಚಾರವೆಂದರೆ, ಸೃಷ್ಟಿಯ ಕೌತುಕದಲ್ಲಿ ಹೊಸ ಅರಿವೊಂದು ಮಂದಣ್ಣನ ಮೂಲಕವಾಗಿ ಕರ್ವಾಲೋ ಅವರ ದೃಷ್ಟಿಗೆ ನಿಲುಕುವಂತೆ ತೇಜಸ್ವಿ ಆ ಪಾತ್ರವನ್ನು ಗಟ್ಟಿಯಾಗಿ ರೂಪಿಸುತ್ತಾರೆ. ಪ್ರಾಕೃತಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಈ ಪಾತ್ರ ಗಟ್ಟಿಯಾಗಿದ್ದರೂ ನಿರೂಪಕನಿಗೆ 'ಕರ್ವಾಲೋ' ಎಂಬ ಹೆಸರು ಆಕರ್ಷಿಸುವಂತೆ 'ಮಂದಣ್ಣ' ಎಂಬ ಹೆಸರು ಅಷ್ಟಾಗಿ

ಆಕರ್ಷಿಸಿರುವುದಿಲ್ಲ ಎಂಬುದನ್ನು ಗಮನಿಸಬಹುದು. ಆಕರ್ಷಿಸಿದ್ದಲ್ಲಿ ಕಲಾಪ್ರತಿಮೆಯ ಶಿರೋನಾಮೆ 'ಮಂದಣ್ಣ' ಎಂದೇ ಇರುತ್ತಿತ್ತು. ೧೯-೨೦ನೇ ಶತಮಾನದಲ್ಲಾದ ಪಶ್ಚಿಮದ ವಿಜ್ಞಾನಯುಗದ ಆವಿಷ್ಕಾರಗಳು ವೈಜ್ಞಾನಿಕ ಚಿಂತನೆಗಳು ಮತ್ತು ಸಂಶೋಧನಾತ್ಮಕ ಬರವಣಿಗೆಗಳ ಸ್ವರೂಪಗಳು ತೇಜಸ್ವಿ ಅವರನ್ನು ಈ ನಿಟ್ಟಿನಲ್ಲಿ ಪ್ರಭಾವಿಸಿರುವುದನ್ನು ನಾವು ಗಮನಿಸಬಹುದು. ಪಶ್ಚಿಮದ ಚಾರ್ಲ್ಸ್ ಡಾರ್ವಿನ್, ಅರಿಸ್ಟಾಟಲ್, ಕ್ವಾಂಟಂ ಹೆಸರುಗಳಂತೆಯೇ ತುಂಬಾ ಡಿಫ಼್ರೆಂಟಾದ ಕರ್ವಾಲೋ ಹೆಸರೇ ತೇಜಸ್ವಿ ಅವರನ್ನು ಆಕರ್ಷಿಸಿರುವುದು ಅವರಲ್ಲಿನ ವೈಜ್ಞಾನಿಕ ಪ್ರಜ್ಞೆಯ ಆಸಕ್ತಿಗೆ ಸಾಕ್ಷಿಯಾದಂತಿದೆ. ಕಾಲಾ-ದೇಶಗಳ ವಿಸ್ಮೃತಿಯ ಸಂಕೇತದಂತೆ ಗೋಚರಿಸುವ ಹಾಗೂ ಹಾರುವ ಓತಿಯ ಇರುವಿಕೆ ಬಗ್ಗೆ ಕುತೂಹಲ ಮೂಡಿಸಿದ ವ್ಯಕ್ತಿಗಿಂತ ಜೀವಿಯ ಶೋಧಕ್ಕಾಗಿ ಮುನ್ನಡೆಯುವ ವಿಜ್ಞಾನಿಯೇ ನಿರೂಪಕನಿಗೆ ಮುಖ್ಯವಾಗುತ್ತಾನೆ ಎಂಬುದನ್ನು ಕಂಡುಕೊಳ್ಳಬಹುದು.

ತೇಜಸ್ವಿ ಜೈವಿಕ ಪರಿಸರದ ಮಾನವನನ್ನು ಚಿತ್ರಿಸಿದರೆ, ನಾಗೇಶ ಹೆಗಡೆ ಅವರು ಅಖಂಡ ಭೂಪರಿಸರದ 'ಭೂಮಾನವ'ನನ್ನು ಚಿತ್ರಿಸುತ್ತಾರೆ. ಭೂಮಾದರಿಯನ್ನೇ ಸೃಷ್ಟಿ ನಿಯಮಗಳಿಗಿಂತಲೂ ವೇಗವಾಗಿ ಬದಲಿಸುವ ಅತ್ಯಂತ ಬಲಿಷ್ಠನಾಗಿರುವ ಮಾನವ ಕಲ್ಪನೆಯನ್ನು ವಿಶಿಷ್ಟವಾದ ರೀತಿಯಲ್ಲಿ ಹೆಗಡೆ ಅವರು ಕೃತಿಗಳಲ್ಲಿ ಅದನ್ನು ಅನಾವರಣಗೊಳಿಸಿದ್ದಾರೆ. **"ಆತನಿಂದ ಉಗ್ರಶಕ್ತಿ ಹೊರಹೊಮ್ಮುತ್ತಿದ್ದು, ಪ್ರಕೃತಿಯ ಸಹಜ ವೇಳಾಪಟ್ಟಿಯ ಪ್ರಕಾರ ೫೦ಲಕ್ಷ ವರ್ಷಗಳಲ್ಲಿ ನೆಲಸಮವಾಗಬೇಕಿದ್ದ ಸಂಡೂರು ಬೆಟ್ಟವನ್ನು ಐದೇ ವರ್ಷಗಳಲ್ಲಿ ಸಪಾಟುಗೊಳಿಸಿದ್ದಾನೆ"** ಎಂಬಿತ್ಯಾದಿ ಮಾದರಿಯ ಬಹಳಷ್ಟು ನಿರೂಪಣೆಗಳು ಪ್ರಸ್ತುತ ಭೂಪರಿಸರದಲ್ಲಿ ಮಾನವನ ವರ್ತನೆ, ನಡವಳಿಕೆ ಹಾಗೂ ಭೂಪರಿಸರದ ಬಾಹ್ಯ ಮತ್ತು ಆಂತರ್ಯದ ವಿವೇಕರಹಿತ ಮತ್ತು ವಿಧ್ವಂಸಕಾರಿ ಕೃತ್ಯಗಳನ್ನು ಅನಾವರಣಗೊಳಿಸುತ್ತವೆ. ಪ್ರತಿಯೊಬ್ಬರು ಭೂಗೋಲದ ನಾಗರೀಕ ಅಥವಾ ಪ್ಲಾನೆಟ್ ಅರ್ಥ್‌ನ ಪ್ಲಾನೆಟರಿ ಸಿಟಿಜನ್ ಆಗಬೇಕು ಎಂಬ ಆಶಯವಿರುವ ವಿಶಿಷ್ಟ ತೆರನಾದ ಮಾನವ ಕಲ್ಪನೆಯು ಹೆಗಡೆ ಅವರ ಕೃತಿಗಳಲ್ಲಿ ವ್ಯಕ್ತವಾಗುವುದನ್ನು ಗುರುತಿಸಬಹುದಾಗಿದೆ.

ನಾಳಿನ ಕಿರಿಯ ಜನಾಂಗಕ್ಕೆ ಈ ನಿಸರ್ಗದಲ್ಲಿ ಮನುಷ್ಯ ಏನು ತಾನೆ ಉಳಿಸಿದ್ದಾನೆ? ಎಂಬ ಪ್ರಶ್ನೆಗಳು ಇಬ್ಬರನ್ನು ಬಹುವಾಗಿ ಕಾಡಿವೆ. **"ಕಾಡುಗಳ ನಾಶ ಕೇವಲ ಮರದ ಕಡಿತವಲ್ಲ. ಅದು ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯನ್ನು ಕಳೆದುಕೊಳ್ಳುವ ಬಗೆ. ಕೇವಲ ಅಂಕಿ-ಸಂಖ್ಯೆಗಳ ವಿಶ್ಲೇಷಣೆ ಮಾಡುತ್ತಾ ಕಿರಿಯರಿಗೆ ಹೇಗೆ ಪ್ರತಿಸ್ಪಂದನೆ ಮೂಡಿಸಲಿ"** ಎಂಬುದು ತೇಜಸ್ವಿ ಅವರನ್ನು ಕಾಡಿದರೆ, **'ಸುತ್ತೆಲ್ಲ ಕಾಣುತ್ತಿರುವ ಉತ್ಪಾತಗಳು ನಮ್ಮ ಗಮನಕ್ಕೆ ಬಾರದ ಹಾಗೆ ಇಂದಿನ ಮಾಧ್ಯಮಗಳು ನಮ್ಮೆದುರು ಬೆಡಗಿನ ಮಾಯಾಬಜಾರನ್ನೇ ಬಿಚ್ಚಿಡುತ್ತಿವೆ. ಜಾಗತಿಕ ತಾಪಮಾನದ ಪ್ರಶ್ನೆ ಹೇಗೋ ಇರಲಿ, ಹಳ್ಳಿಗಳು ಖಾಲಿಯಾಗುತ್ತಿರುವುದು ನಿಜತಾನೆ? ನಗರಗಳಲ್ಲಿ ಬೈಕು, ಕಾರು, ಮರಳು ಲಾರಿ, ಶಾಪಿಂಗ್ ಮಾಲ್, ಕಲ್ಯಾಣ ಮಂಟಪ, ಮೊಬೈಲ್ ಟವರ್ ಎಲ್ಲವೂ ಎಲ್ಲಾ ಕಡೆ ಹೆಚ್ಚುತ್ತಿವೆ ತಾನೆ? ಮಕ್ಕಳ ಭವಿಷ್ಯ ಉಜ್ವಲವಾಗಲೆಂದು ಏನೆಲ್ಲಾ ಮಾಡುವ ನಾವು ಅವರ ನಾಳೆಗಳನ್ನು ಹೇಗೆ ರೂಪಿಸುತ್ತಿದ್ದೇವೆ?** ಎಂಬ ಖಿನ್ನತೆ ಹೆಗಡೆ ಅವರದ್ದು. ಇಬ್ಬರೂ ಸುತ್ತಲಿನ ಪರಿಸರದ ಮೇಲೆ ಅತಿಕ್ರಮಣ ಮಾಡುತ್ತಿರುವ ಮನುಷ್ಯನ ವಿವೇಕರಹಿತ ವರ್ತನೆಗೆ ಮತ್ತು

ಸಂದರ್ಭಗಳಿಗೆ ಪ್ರತಿಕ್ರಿಯಿಸಿದ್ದಾರೆ. ಇಬ್ಬರ ಬರಹಗಳು ಮನುಷ್ಯ ಕೇಂದ್ರಿತ ಪ್ರಜ್ಞೆಯಿಂದ ಹೊರಬಂದು ಜೀವಿ ಕೇಂದ್ರಿತ ದೂರದರ್ಶಿತ್ವದಿಂದಲೇ ಬೆಳವಣಿಗೆ ಹೊಂದಿದರೂ, ಓದುಗನಿಗೆ ಮಂಡಿಸುವ ಮಾರ್ಗಗಳು ಹಾಗೂ ಆಯ್ಕೆ ಮಾಡಿಕೊಳ್ಳುವ ಸನ್ನಿವೇಶಗಳು ಮಾತ್ರ ಭಿನ್ನವಾಗಿರುತ್ತವೆ. **ಲೇಖಕರು ವ್ಯಕ್ತಪಡಿಸುವ ಪರ್ಯಾವರಣದ ಸಹಸಂಬಂಧಗಳು ಸಹಜವಾದ ನೈಸರ್ಗಿಕ ಪರಿಸರದಿಂದ ಪ್ರತ್ಯೇಕಿಸಲ್ಪಟ್ಟ ಮನುಷ್ಯ ಪರಿಸರದೊಂದಿಗೆ ಮತ್ತು ಆಯ್ಕೆಯ ಸಂಗತಿಗಳೊಂದಿಗೆ ಕೂಡಿರಲು ಹೇಗೆ ಸಾಧ್ಯವಿಲ್ಲವೊ ಹಾಗೆಯೇ ಈ ಇಬ್ಬರ ಕಲಾಕೃತಿಯ ಬಹುತೇಕ ಅಂಶಗಳು ಪರ್ಯಾವರಣದ ಸಹ-ಸಂಬಂಧದೊಂದಿಗೆ ಸುತ್ತುವರೆದಿರುತ್ತವೆ** ಎಂಬುದನ್ನು ತೆಗೆದುಹಾಕಲು ಸಾಧ್ಯವಿಲ್ಲ. ಪ್ರಕೃತಿಯ ಅದಮ್ಯ ಚೈತನ್ಯ, ಅಪಾರ ಜೀವಜಾಲಗಳಿಗೆ ಎರವಾಗುವ ಮಾನವನ ಪ್ರಯತ್ನಗಳಲ್ಲಿ ತುಂಬಿರುವ ಕ್ರೌರ್ಯದೊಂದಿಗೆ ಪ್ರಕೃತಿಯ ರಕ್ಷಣಾತ್ಮಕ ಪ್ರತಿರೋಧಗಳನ್ನು ಒಂದಿಲ್ಲೊಂದು ರೀತಿಯಲ್ಲಿ ತೇಜಸ್ವಿ ಮತ್ತು ಹೆಗಡೆ ತಮ್ಮ ಕೃತಿಗಳಲ್ಲಿ ಅಷ್ಟೇ ಸಹಜವಾಗಿಯೂ ಕ್ರಿಯಾತ್ಮಕವಾಗಿಯೂ ಚಿತ್ರಿಸಿದ್ದಾರೆ ಎನ್ನಬಹುದು.

ಒಟ್ಟಾರೆ ಹೇಳುವುದಾದರೆ ನಮ್ಮ ಪೂರ್ವಜರು ಅನುಸರಿಸಿಕೊಂಡು ಬಂದಂತಹ ಪರಿಸರದ ಕಲ್ಪನೆ ಬದಲಿಸದೆ ಪ್ರಕೃತಿಯನ್ನು ರಕ್ಷಿಸುವಲ್ಲಿ ನಾವು ಕಳೆದುಕೊಂಡಿರುವ ಅಖಂಡ ದೃಷ್ಟಿಯನ್ನು ಪುನಃಪಡೆಯುವುದು ಅತ್ಯವಶ್ಯಕವಾಗಿದೆ. ಪ್ರಕೃತಿಯಲ್ಲಿನ ಜೀವರಾಶಿಗಳ ಪರಸ್ಪರಾವಲಂಬನೆ ಮತ್ತು ಪರಸ್ಪಾರಾಧಾರ ತತ್ವಗಳ ಸೂಕ್ಷ್ಮತೆಯ ಅರಿವು ಈಗೀಗ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿಯೂ ಕಂಡುಬರುತ್ತಿದೆ. ಯಾವುದೇ ಮೂಲೆಯಲ್ಲಿ ಯಾವುದೊಂದು ಜೀವಸಂಕುಲಕ್ಕೆ ಕುತ್ತು ಬಂದರೂ ಪ್ರಕೃತಿಯ ಎಲ್ಲಾ ಭಾಗಗಳು ಪ್ರತಿಸ್ಪಂದಿಸುವವು. ಪ್ರಕೃತಿಯಲ್ಲಿ ಸೃಷ್ಟಿಯ ಸಮತೋಲನದ ರಹಸ್ಯ ಬಹಳ ಅಚ್ಚರಿಯಾದುದು. ವಿಶ್ವಾತ್ಮಕ ಪ್ರಕೃತಿಯು ಅದರ ಸಂಖ್ಯಾತೀತ ರೂಪಭೇದಗಳನ್ನು ಹಾಗೂ ಅವುಗಳ ಗೋಚರ ಸ್ಥಿತಿಗಳನ್ನು ಏಕಸೂತ್ರದಲ್ಲಿ ನಿಯಂತ್ರಿಸುತ್ತಿದೆ ಎಂಬುದೇ ಅಚ್ಚರಿಗೆ ಕಾರಣ. ಈ ಸ್ಪಷ್ಟ ನಿಯಮವನ್ನು ಭ್ರಷ್ಟಗೊಳಿಸಿದರೆ ಅಖಂಡ ಪರಿಸರವು ಕ್ಷಯಿಸುವುದು. ಆದ್ದರಿಂದಲೇ ಪರಿಸರ ಮತ್ತು ಮಾನವನ ನಡುವೆ ವಿವೇಕಯುತ ಅನುಸಂಧಾನ ಇರಬೇಕಾದುದು ಹಿಂದೆಂದಿಗಿಂತಲೂ ಮಹತ್ವದ್ದಾಗಿದೆ.

ಕೊನೆ ಟಿಪ್ಪಣಿಗಳು:

೧. ಶೂದ್ರ ಶ್ರೀನಿವಾಸ ಸಂಪಾದನೆ, ನೆಲದ ಮಾತು, ಪುಟ:೦೩
೨. ಡಾ. ಪಿ ಕೃಷ್ಣಪ್ಪ ಶೆಟ್ಟಿ, ಡಿ.ಆರ್.ನಟರಾಜ್ ಸಂಪಾದನೆ, ಪರಿಸರ: ಮುಂದೇನು? ಪುಟ:೧೧೯
೩. ಕುವೆಂಪು ಕಾದಂಬರಿಗಳು, ಡಾ. ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳಲ್ಲಿ ಜೈವಿಕ ಜಾಲ-ಪುಟ ಸಂಖ್ಯೆ:೩೨೫-೩೨೬
೪. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, ಪುಟ:೦೨
೫. ಆರ್.ಡಿ.ಜಿ. ಸಂಪಾದನೆ- ತೇಜಸ್ವಿಯನ್ನು ಹುಡುಕುತ್ತಾ, ಪುಟ:೨೭೪
೬. ಜಿ.ಎಸ್.ಭಟ್ಟ ಸಂಪಾದನೆ, ತೇಜಸ್ವಿಯವರ ಕೃತಿಗಳು, ಪುಟ:೧೩೩
೭. ಜಿ.ಎಸ್.ಭಟ್ಟ ಸಂಪಾದನೆ ತೇಜಸ್ವಿಯವರ ಕೃತಿಗಳು, ಪುಟ:೧೨೪

೮. ಆರ್.ಡಿ.ಜಿ. ಸಂಪಾದನೆ, ತೇಜಸ್ವಿಯನ್ನು ಹುಡುಕುತ್ತಾ, ಪುಟ:೨೩೩

೯. ಅದೇ ಪು ಪುಟ:೮೦

೧೦.ಡಾ.ಎಚ್.ಎಂ.ಮಹೇಶ್ವರಯ್ಯ, ಪೂರ್ಣಚಂದ್ರ ತೇಜಸ್ವಿ, ಪುಟ:೪೫-೪೬

೧೧.ಆರ್.ಡಿ.ಜಿ. ಸಂಪಾದನೆ, ತೇಜಸ್ವಿಯನ್ನು ಹುಡುಕುತ್ತಾ, ಪುಟ:೧೬೯

೧೨.ಅದೇ ಪು ಪುಟ:೧೭೯

೧೩.ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಚಿದಂಬರ ರಹಸ್ಯ, ಪುಟ: (೧೧)ಕ್ಕೆ

೧೪.ಆರ್.ಡಿ.ಜಿ. ಸಂಪಾದನೆ, ತೇಜಸ್ವಿಯನ್ನು ಹುಡುಕುತ್ತಾ, ಪುಟ:೨೭೫

೧೫.ಟಿ.ಪಿ.ಅಶೋಕ, ತೇಜಸ್ವಿ ಕಥನ, ಪುಟ :೧೧೯-೧೨೦

೧೬.ಡಾ.ಎನ್.ಕೆ.ಕೋದಂಡರಾಮ, ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಪುಟ: ೨೪೩

೧೭.ಟಿ.ಪಿ.ಅಶೋಕ, ತೇಜಸ್ವಿ ಕಥನ, ಪುಟ:೧೫

೧೮.ಡಾ. ಹೆಚ್.ಎಂ.ಮಹೇಶ್ವರಯ್ಯ, ಪೂರ್ಣಚಂದ್ರ ತೇಜಸ್ವಿ, ಪುಟ:೫೨

೧೯.ನರಹಳ್ಳಿ ಬಾಲಸುಬ್ರಹ್ಮಣ್ಯ, ಸಾಹಿತ್ಯ ಸಂಸ್ಕೃತಿ, ಪುಟ:೩

೨೦.ಆರ್.ಡಿ.ಜಿ. ಸಂಪಾದನೆ, ತೇಜಸ್ವಿಯನ್ನು ಹುಡುಕುತ್ತಾ, ಪುಟ:೨೭೮

೨೧.ಬಿ.ಕೆ. ಧನಂಜಯ ಜೀವಾಳ, ಕಾಡಿನ ಸಂತ ತೇಜಸ್ವಿ, ಪುಟ:೧೫

೨೨.ಅದೇ ಪು ಪುಟ:೧೬೩

೨೩.ನಾಗೇಶ ಹೆಗಡೆ, ದುಂದುಮಾರ, ಮುನ್ನುಡಿ

೨೪.ಅದೇ ಪು ಪುಟ:೧೫೦-೧೫೧

೨೫.ಅದೇ ಪು ಪುಟ:೮೭-೯೦

೨೬. ನಾಗೇಶ ಹೆಗಡೆ, ಭೂಮಿಯೆಂಬ ಗಗನನೌಕೆ, ಪುಟ:೧೨-೧೩

೨೭. ಅದೇ ಪು ಪುಟ:೧೫೪-೧೫೬

೨೮.ನಾಗೇಶ ಹೆಗಡೆ, ಭೂಮಿಯೆಂಬ ಗಗನನೌಕೆ, ಪುಟ:೧೫೬

೨೯. ಆರ್.ಡಿ.ಜಿ. ಸಂಪಾದನೆ, ತೇಜಸ್ವಿಯನ್ನು ಹುಡುಕುತ್ತಾ, ಪುಟ:೧೭೮

೩೦. ನಾಗೇಶ ಹೆಗಡೆ, ಹಳ್ಳಿಮುಕ್ಕ ಎಲ್ಲೆಲ್ ಹೊಕ್ಕ, ಪುಟ:೦೫

ಅಧ್ಯಾಯ_ಏಳು

'ಅಭಿವೃದ್ಧಿ' ನೆಲೆಯಲ್ಲಿ ಕೃತಿಕಾರರ ಪರಿಸರ ಪ್ರಜ್ಞೆ

೭.೧ 'ಅಭಿವೃದ್ಧಿ' ಪರಿಕಲ್ಪನೆಯ ಅರ್ಥ, ವ್ಯಾಖ್ಯೆ ಮತ್ತು ಪರಿಭಾಷೆ

೭.೨ ಅಭಿವೃದ್ಧಿಮುಖಿ ಪರಿಸರ ಪ್ರಜ್ಞೆಯ ತಾತ್ವಿಕ ಚಿಂತನೆಗಳು_ ಮಹಾತ್ಮ ಗಾಂಧೀಜಿ, ಮಸಾನೊಬು ಫುಕುವೊಕ ಮತ್ತು ಸುಂದರ್‌ಲಾಲ್ ಬಹುಗುಣ

೭.೩ ಪರಿಸರ ಮತ್ತು ಜಾಗತೀಕರಣ

೭.೪ 'ಅಭಿವೃದ್ಧಿ' ನೆಲೆಯ ಪರಿಸರ ಪ್ರಜ್ಞೆಯಲ್ಲಿ ಕೃತಿಕಾರರ ಕೃತಿಗಳು

೭.೫ ಕೃತಿಕಾರರ 'ಅಭಿವೃದ್ಧಿ' ಪರಿಭಾಷೆಯ ಗ್ರಹಿಕೆಗಳು

ಅಧ್ಯಾಯ–ಏಳು

'ಅಭಿವೃದ್ಧಿ' ನೆಲೆಯಲ್ಲಿ ಕೃತಿಕಾರರ ಪರಿಸರ ಪ್ರಜ್ಞೆ

ಜಾಗತೀಕರಣದ ವಿರೋಧದ ಚಿಂತನೆಯೇ ಪರಿಸರ ಪ್ರಜ್ಞೆಯೇ ?

"ಈ ಭೂಮಿ ನಮ್ಮ ತಾತ ಮುತ್ತಾತರಿಂದ ಬಂದ ಬಳುವಳಿಯಲ್ಲ.
ಮಕ್ಕಳು–ಮೊಮ್ಮಕ್ಕಳಿಂದ ಎರವಲಾಗಿ ಪಡೆದದ್ದು." – ನಾಗೇಶ ಹೆಗಡೆ

"ನಮ್ಮ ಪಾಲಿಗೆ ಭೂಮಿ ಹಾಳಾಗುತ್ತದೆಯೇ ಹೊರತು
ಅದರ ಪಾಲಿಗಲ್ಲ." – ಪೂರ್ಣಚಂದ್ರ ತೇಜಸ್ವಿ

೭.೧ 'ಅಭಿವೃದ್ಧಿ' ಪರಿಕಲ್ಪನೆಯ ಅರ್ಥ, ವ್ಯಾಖ್ಯೆ ಮತ್ತು ಹೊಸ ಪರಿಭಾಷೆ

ಒಂದು ಅರ್ಥದಲ್ಲಿ ಅಭಿವೃದ್ಧಿಯೆಂದರೆ ಸೃಷ್ಟಿಯ ಕ್ರಿಯೆಯಲ್ಲಿ ಭಾಗವಹಿಸಿದಂತೆ; ಅಂದರೆ ನಮ್ಮ ಸುತ್ತಲಿನ ಪರಿಸರವನ್ನು ಗೌರವಿಸುವುದು. ಅದು ದೈವಿಕ ಭಾವನೆಯನ್ನು ಮೂಡಿಸುತ್ತದೆ. ಜೊತೆಗೆ ಭಕ್ತಿ–ಭಯಗಳು ಉಂಟಾದ ಪರಿಸ್ಥಿತಿಯಲ್ಲಿ ಎಲ್ಲರಿಗೂ ಪರಸ್ಪರ ಸೌಹಾರ್ದಮಯ ವಾತಾವರಣದಲ್ಲಿ ಉಳಿಯುವ, ಬೆಳೆಯುವ ಅವಕಾಶ ಕಲ್ಪಿತವಾಗುತ್ತದೆ. ಕಾರಣ ಅಭಿವೃದ್ಧಿಯೆಂಬುದು ಪ್ರತಿಯೊಂದು ಜೀವಿಯೂ ಇನ್ನೊಂದು ಜೀವಿಯನ್ನು ಗೌರವಿಸುವುದರ ಮೂಲಕ ಎಲ್ಲರಿಗೂ ಬದುಕಲು, ಬೆಳೆಯಲು, ಜೀವನದ ಅರ್ಥವನ್ನು ಪಡೆಯಲು ಇರುವ ಅವಕಾಶವಾಗಿದೆ. ಹೀಗೆ ಅರ್ಥೈಸಿದಾಗ ಅಭಿವೃದ್ಧಿಯು ಸದಾ ಉಳಿದುಕೊಂಡು ಹೋಗುವ ಪ್ರಕ್ರಿಯೆ ಎಂದಾಗುತ್ತದೆ.

ಅಭಿವೃದ್ಧಿಯ ಒಂದು ಅತಿ ಮುಖ್ಯ ಅಂಶವೆಂದರೆ, ಅದು ಸಮುದಾಯಾತ್ಮಕ ವಾಗಿದೆ. ಅದು ಕೇವಲ ಕೆಲವು ವ್ಯಕ್ತಿಗಳನ್ನಷ್ಟೇ ನೋಡುವುದಿಲ್ಲ. ಜೊತೆಗೆ ಸಸ್ಯ, ಪ್ರಾಣಿ ಇತರ ಜೀವಿಗಳನ್ನೊಳಗೊಂಡ ಇಡೀ ವಿಶ್ವವನ್ನು ಪ್ರಕೃತಿಯನ್ನು ಒಳಗೊಳ್ಳುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಒಂದು ಗುಂಪಿನಿಂದ ಇನ್ನೊಂದು ಗುಂಪಿನ ಶೋಷಣೆ ಎಂದಿಗೂ ಸಾಧ್ಯವಿಲ್ಲ.

ನಿರಂತರ ಅಭಿವೃದ್ಧಿಯು ಒಂದು ಪ್ರಕ್ರಿಯೆಯಾಗಿದೆ. ಅದೆಂದಿಗೂ ಮುಗಿಯುವುದಿಲ್ಲ. ಯಾವುದೇ ಒಂದು ಸ್ಥಳದಲ್ಲಿ, ನಿರ್ಧರಿತ ವೇಳೆಯಲ್ಲಿ ಇದನ್ನು ಸಾಧಿಸಲಿಕ್ಕೂ ಸಾಧ್ಯವಿಲ್ಲ. ಮನೆ ಕಟ್ಟಿದಂತೆ ಅಥವಾ ಬಾವಿ ತೋಡಿದಂತೆ ಅದೊಂದು ಮಾಡಿ ಮುಗಿಸುವ ಕೆಲಸವಲ್ಲ. ಮನುಷ್ಯರು, ಪ್ರಕೃತಿ ಹಾಗೂ ಇನ್ನುಳಿದ ಜೀವಸಂಕುಲಗಳೆಲ್ಲ ಪರಸ್ಪರ ಕ್ರಿಯೆ-ಪ್ರತಿಕ್ರಿಯೆಯಲ್ಲಿ ಭಾಗವಹಿಸುವುದರಿಂದ ಅವೆಲ್ಲವೂ ಇರುವವರೆಗೆ ನಿರಂತರ ಅಭಿವೃದ್ಧಿಯೂ ಇದ್ದೇ ಇರುತ್ತದೆ.

ಅಭಿವೃದ್ಧಿಯು ಒಂದು ಪ್ರಕ್ರಿಯೆ ಎಂದಾಕ್ಷಣ ಅದನ್ನು ಅರ್ಥೈಸಿ ಹೇಳಲಿಕ್ಕೆ ಬರುವುದಿಲ್ಲ ಎನ್ನುವಂತಿಲ್ಲ. ಪ್ರಕ್ರಿಯೆ ಯಾವ ದಿಕ್ಕಿನಲ್ಲಿ ಸಾಗಿದೆ, ಅದರ ಆಳ ಎಷ್ಟು ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಿದೆ. ಇವುಗಳನ್ನು ಅಳೆಯುವ ಮುಖ್ಯ ಸಾಧನಗಳೆಂದರೆ; ೧. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ 'ಪ್ರತಿಯೊಬ್ಬರ ಪಾಲ್ಗೊಳ್ಳುವಿಕೆ ಸಾಧ್ಯವಾಗಿದೆಯೇ? ೨. ಜೀವಸಂಕುಲ ಮತ್ತು ನಿಸರ್ಗ ಸಂಪತ್ತಿನ ಸಮಾನತೆಯನ್ನು ಕಾಯ್ದು ಕೊಂಡಿದ್ದೇವೆಯೆ? ೩. ಪ್ರಕೃತಿಯ ವಿನಾಶದಿಂದ ನಾವು ದೂರವಿದ್ದೇವೆಯೆ?[೧] ಇತ್ಯಾದಿ.

ವ್ಯಾಖ್ಯೆಗಳು:

ವಿಶ್ವಪರಿಸರ ಮತ್ತು ಅಭಿವೃದ್ಧಿ ಆಯೋಗದ ಪ್ರಕಾರ, **"ಅಭಿವೃದ್ಧಿಯೆಂದರೆ, ಭವಿಷ್ಯದ ಸಂತತಿಗೆ ತನ್ನ ಅವಶ್ಯತೆಗಳನ್ನು ಪೂರೈಸಿಕೊಳ್ಳಲು ಯಾವುದೇ ರೀತಿಯ ಕೊರತೆ ಬಾರದ ರೀತಿಯಲ್ಲಿ ನಾವು ನಮ್ಮ ದೈನಂದಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು."**

ಪರಿಸರ ಮತ್ತು ಅಭಿವೃದ್ಧಿಯ ವಿಶ್ವ ಆಯೋಗ (World Commission on Environment and Development) ೧೯೮೭ರಲ್ಲಿ ಹೊರತಂದ 'ಅವರ್ ಕಾಮನ್ ಫ್ಯೂಚರ್' ಎಂಬ ವರದಿ 'ಸುಸ್ಥಿರ ಅಭಿವೃದ್ಧಿ (sustainable development)ಯನ್ನು ಹೀಗೆ ವರ್ಣಿಸುತ್ತದೆ– **"ಭವಿಷ್ಯದ ಜನಾಂಗದ ಅಗತ್ಯಗಳ ಪೂರೈಕೆಗೆ ಧಕ್ಕೆಯಾಗದಂತೆ ನಮ್ಮ ಇಂದಿನ ಅಗತ್ಯಗಳನ್ನು ಪೂರೈಸಿಕೊಳ್ಳುವುದೇ ಸುಸ್ಥಿರ ಅಭಿವೃದ್ಧಿ."** ಸಂಪನ್ಮೂಲಗಳನ್ನು ನಾಶಮಾಡಿ, ಬರಿದುಗೊಳಸದಂತೆ ವಿವೇಕಯುತವಾಗಿ ಬಳಸಿ ವಿನಾಶವಿಲ್ಲದ ಅಭಿವೃದ್ಧಿಯನ್ನು ಸಾಧಿಸುವುದೇ ಸುಸ್ಥಿರ ಅಭಿವೃದ್ಧಿಯ ಉದ್ದೇಶ.[೨]

"ಮನುಷ್ಯ ನಿರ್ಮಿತ ಏನನ್ನೇ ಯಾರಾದರೂ ಹಾಳುಗೆಡವಿದರೆ ಆತನದು 'ವಿಧ್ವಂಸಕ ಕೃತ್ಯ' ಎನ್ನುತ್ತೇವೆ. ನಿಸರ್ಗ ನಿರ್ಮಿತ ಏನನ್ನಾದರೂ ಹಾಳುಗೆಡವಿದರೆ ಅದನ್ನು 'ಅಭಿವೃದ್ಧಿ' ಎನ್ನುತ್ತೇವೆ."– ಜೋಸೆಫ್ ವುಡ್ ಕ್ರಜ್

"ಪ್ರಗತಿಯ ನಿಜವಾದ ಸಂಕೇತವೆಂದರೆ ಬಡಜನರು ಕಾರುಗಳಲ್ಲಿ ಓಡಾಡುವುದಲ್ಲ; ಬದಲಿಗೆ ಶ್ರೀಮಂತರು ಬಸ್, ರೈಲುಗಳಂಥ ಸಾರ್ವಜನಿಕ ಸಂಚಾರ ಸಾಧನಗಳನ್ನು ಬಳಸುವುದು."–ಎನ್ರಿಕೆ ಪೆನಲೋಸ, ಕೊಲಂಬಿಯಾ ರಾಜಧಾನಿ ಬೋಗೋಟಾ ನಗರದ ಮೇಯರ್.

ಪರಿಸರ ತಜ್ಞರನ್ನು, ಜೀವಜಾಲ ವಿಜ್ಞಾನಿಗಳನ್ನು ಜನರು ಏಕೆ ದ್ವೇಷಿಸುತ್ತಾರೆ, ದೂರ ಸರಿಸುತ್ತಾರೆ ಗೊತ್ತೆ? ಅವರು ಏನನ್ನೋ ಹೊಸದನ್ನು ಹೇಳುತ್ತಾರೆ; ಹೊಸದು ಎಂದರೆ ಎಲ್ಲರಿಗೂ ತುಸು ದಿಗಿಲು ತಾನೆ? – ಗ್ಯಾರೆಟ್ ಹಾರ್ಡಿನ್[೦೩]

ಕೃತಿಕಾರರ ಅಭಿವೃದ್ಧಿ ನೆಲೆಯ ಪರಿಸರ ಪ್ರಜ್ಞೆಯನ್ನು ಅರ್ಥೈಸಿಕೊಳ್ಳಲು ಅಧ್ಯಯನದಲ್ಲಿ ಕೆಲವು ಪೂರಕ ವಿಚಾರಗಳನ್ನು ಸಹಸಂಬಂಧವಾಗಿ ನೋಡಬೇಕಾಗುವುದು. ಕೃತಿಕಾರರನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರಭಾವಿಸಿರುವ ಕೆಲವು ವ್ಯಕ್ತಿಗಳ ಪ್ರತಿಪಾದನೆಗಳು ಅಥವಾ ತಾತ್ವಿಕ ಚಿಂತನೆಗಳು ಸಂಶೋಧನೆಯಲ್ಲಿ ಮುಖ್ಯವಾಗುವುದು. ಏಕೆಂದರೆ ಗಾಂಧಿಯನ್ ಪರಿಸರೀಯತೆಯ ಅಭಿವೃದ್ಧಿ ಮಾದರಿಗಳು ಮತ್ತು ದೇಸೀ ಚಿಂತನೆಗಳು ಈ ಇಬ್ಬರೂ ಲೇಖಕರನ್ನು ಪ್ರಭಾವಿಸಿರುವುದಾಗಿ ಗುರುತಿಸಬಹುದಾಗಿದೆ. ಉದಾಹರಣೆಗೆ ಸಹಜ ಕೃಷಿಯ ಪ್ರಸ್ತಾಪದಲ್ಲಿ, ಪೂರಕ ಅಭಿವೃದ್ಧಿ ಮಾದರಿಗಳ ನಿರೂಪಣೆಗಳಲ್ಲಿ ಕೃತಿಕಾರರ ಅಭಿವ್ಯಕ್ತಿಗಳು ದಾರ್ಶನಿಕರ ತಾತ್ವಿಕ ಚಿಂತನೆಗಳ ಆಶಯಕ್ಕೆ ಪೂರಕವಾಗಿದ್ದು, ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗುವವು.

ಅಭಿವೃದ್ಧಿಯ ಹೊಸ ಪರಿಭಾಷೆ:

'ಪಶ್ಚಿಮ ಘಟ್ಟ ಜೀವಿ ಪರಿಣತಿ ತಂಡ ಬಹಳ ಮುಖ್ಯವಾಗಿ ಅಭಿವೃದ್ಧಿಯ ಪರಿಭಾಷೆ ಮತ್ತು ಸಂರಕ್ಷಣೆಯ ಹೊಸ ಪರಿಕಲ್ಪನೆಗಳ ಬಗ್ಗೆ ಮಾತನಾಡುತ್ತದೆ. ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಮತ್ತು ದೇಶದ ಇತರ ಭಾಗಗಳಲ್ಲಿ ನಾವಿಂದು ಅನುಸರಿಸುತ್ತಿರುವ ನೀತಿ 'ಹೊರಹಾಕುವ/ಹೊರಗಿಡುವ ಅಭಿವೃದ್ಧಿ' (ಡೆವಲೆಂಪ್‌ಮೆಂಟ್ ಬೈ ಎಕ್ಸ್‌ಕ್ಲೂಶನ್) ಮತ್ತು ಅದರ ಜೊತೆ ಜೊತೆಗೆ 'ಹೊರಗಿಡುವ ಸಂರಕ್ಷಣೆ (ಕನ್‌ಸರ್‌ವೇಶನ್ ಬೈ ಎಕ್ಸ್‌ಕ್ಲೂಶನ್). ರಾಜ್ಯಾಂಗದ ೭೩ ಮತ್ತು ೭೪ ನೇ ತಿದ್ದುಪಡಿಗಳು ಅಭಿವೃದ್ಧಿಯ ಬಗ್ಗೆ ತೀರ್ಮಾನಿಸುವ ಹಕ್ಕನ್ನು ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ಮತ್ತು ನಗರ ಪಾಲಿಕೆಗಳಿಗೆ ವರ್ಗಾಯಿಸಿ ಬಹಳ ಕಾಲವೇ ಆಗಿದೆ. ಆದರೂ ಇಂದಿಗೂ ಎಲ್ಲಾ ಅಭಿವೃದ್ಧಿಯ ತೀರ್ಮಾನಗಳನ್ನು ಜನರ ಮೇಲೆ ಹೇರಲಾಗುತ್ತಿದೆ. ಭಾರತೀಯ ಸಮಾಜ ಅತ್ಯಂತ ಶ್ರೀಮಂತವಾದ ನಿಸರ್ಗ ಸಂರಕ್ಷಣಾ ಸಂಪ್ರದಾಯಗಳನ್ನು ಹೊಂದಿದೆ. ಪಶ್ಚಿಮ ಘಟ್ಟಗಳ ಅಳಿದುಳಿದ ಮೂಲ ಸಸ್ಯ ರಾಶಿಗಳನ್ನು ಪವಿತ್ರ ವನಗಳಲ್ಲಿ ಕಾಪಿಟ್ಟು ಸಂರಕ್ಷಿಸಲಾಗಿದೆ, ಆದರೆ ಅಧಿಕೃತ ಸಂರಕ್ಷಣಾ ಪ್ರಯತ್ನಗಳಾದಂತಹ 'ಸಂರಕ್ಷಿತ ಪ್ರದೇಶಗಳ' ಪರಿಕಲ್ಪನೆ ಇದಕ್ಕೆ ತದ್ವಿರುದ್ಧವಾಗಿದ್ದು, ಅಧಿಕಾರಿಗಳು ಜೀವ ವೈವಿಧ್ಯತೆಯ ವಿನಾಶಕ್ಕೆ ಸ್ಥಳೀಯ ಜನರೇ ಪ್ರಾಥಮಿಕವಾಗಿ ಕಾರಣಕರ್ತರು ಎಂದು ನಂಬಿದ್ದಾರೆ. ಆದ್ದರಿಂದ ಅವರನ್ನು ಆ ಪ್ರದೇಶಗಳಿಂದ ಹೊರ ಹಾಕುವುದಕ್ಕೆ ಅತ್ಯುನ್ನತ ಆದ್ಯತೆ ನೀಡಬೇಕೆಂದು ಮಾಧವ ಗಾಡ್ಗೀಳ್ ಅವರು ಪ್ರತಿಪಾದಿಸುವುದನ್ನು ಉಲ್ಲೇಖಿಸಬಹುದು. ನಾವಿಂದು ಸಂರಕ್ಷಣೆಯನ್ನು ಅಭಿವೃದ್ಧಿಯಿಂದ ಬಲಾತ್ಕಾರವಾಗಿ ದೂರತಳ್ಳಿರುವ ಪರಿಸ್ಥಿತಿಯಲ್ಲಿ ಸಿಕ್ಕಿ ಹಾಕಿಕೊಂಡು ಒದ್ದಾಡುತ್ತಿದ್ದೇವೆ. ಇದರಿಂದಾಗಿ ನಮ್ಮ ನೀತಿಗಳು ಕೆಲವು ಪ್ರದೇಶಗಳಲ್ಲಿ ಜಾಗರೂಕತೆಯೇ ಇಲ್ಲದ ಅಭಿವೃದ್ಧಿಯನ್ನು ಹಾಗೂ ಮತ್ತೆ ಕೆಲವು ಪ್ರದೇಶಗಳಲ್ಲಿ ವಿವೇಚನಾರಹಿತ ಸಂರಕ್ಷಣೆಯನ್ನು ಪ್ರೋತ್ಸಾಹಿಸಿದಂತಾಗಿದೆ. ಇದರಿಂದಾಗಿ ನಾವಿಂದು ಜೀವಿ ಪರಿಸರಾತ್ಮಕ ವಿನಾಶದ ಮಹಾಸಾಗರಗಳಲ್ಲಿ ಸಂರಕ್ಷಿತ ಪ್ರದೇಶವೆಂಬ ದ್ವೀಪಗಳನ್ನು ನಿರ್ಮಿಸುತ್ತಿದ್ದೇವೆ. ಸಂರಕ್ಷಿತ ಪ್ರದೇಶಗಳಲ್ಲಿ ಒಂದು ಹುಲ್ಲುಕಡ್ಡಿಯನ್ನು ತೆಗೆಯಲು ಬಿಡದಿರುವುದು ಎಷ್ಟು ಅಸಮರ್ಪಕವಾದದ್ದೋ ಅವುಗಳ ಹೊರಭಾಗದಲ್ಲಿ ಮಾಲಿನ್ಯ ನಿಯಂತ್ರಣ ಕಾನೂನುಗಳನ್ನು

ಸಂಪೂರ್ಣವಾಗಿ ನಿರ್ಲಕ್ಷಿಸುವುದು ಅಷ್ಟೇ ಅಸಮರ್ಪಕವಾದ ನಡವಳಿಕೆಯಾಗಿದೆ. ಹಾಲಿ ಅನುಸರಿಸಲಾಗುತ್ತಿರುವ 'ಜಾಗರೂಕತೆಯಿಲ್ಲದ ಅಭಿವೃದ್ಧಿಪಡಿಸಿ-ವಿವೇಚನಾರಹಿತವಾಗಿ ಸಂರಕ್ಷಿಸಿ' ಎಂಬ ನೀತಿಯನ್ನು ಕೈಬಿಟ್ಟು ಅದರ ಸ್ಥಾನದಲ್ಲಿ 'ಸುಸ್ಥಿರವಾಗಿ ಅಭಿವೃದ್ಧಿಪಡಿಸಿ-ವಿವೇಕಾಪೂರ್ಣವಾಗಿ ಸಂರಕ್ಷಿಸಿ' ಎಂಬ ನೀತಿಯನ್ನು ಪ್ರತಿಷ್ಠಾಪಿಸಬೇಕಾಗಿದೆ. ಪರಸ್ಪರ ಪೂರಕವಾದ ಅಭಿವೃದ್ಧಿ ಮತ್ತು ಸಂರಕ್ಷಣಾ ಮಾದರಿಯನ್ನು ಅಭಿವೃದ್ಧಿಪಡಿಸಬೇಕಾಗಿದೆ. ಸ್ಥಳಿಯ ಸನ್ನಿವೇಶಕ್ಕೆ ಅಭಿವೃದ್ಧಿ ಮತ್ತು ಸಂರಕ್ಷಣಾ ಅಭ್ಯಾಸಗಳನ್ನು ಅತ್ಯಂತ ಸೂಕ್ಷ್ಮವಾಗಿ ಜೋಡಿಸುವ ಪ್ರಕ್ರಿಯೆಯಲ್ಲಿ ಸ್ಥಳೀಯ ಸಮುದಾಯಗಳ ಸಂಪೂರ್ಣ ಭಾಗವಹಿಸುವಿಕೆ ತೀರಾ ಅಗತ್ಯವಾದುದು. ಒಟ್ಟಾರೆಯಾಗಿ ಪರಿಣಿತರ ತಂಡ ಸೂಕ್ಷ್ಮ ಪೊರೆಗಳುಳ್ಳ ಪಾಲ್ಗೊಳ್ಳುವಿಕೆಯ ವಿಧಾನದ ಅಳವಡಿಕೆಯನ್ನು ಪ್ರತಿಪಾದಿಸುತ್ತದೆ. ತುಂಡರಿಸಲ್ಪಟ್ಟ ಗಡಿರೇಖೆಗಳಿಗೆ ಅನಗತ್ಯವಾದ ಪ್ರಾಮುಖ್ಯತೆ ಪ್ರಾಪ್ತವಾಗದೆ ಪಶ್ಚಿಮಘಟ್ಟಗಳ ಹೊರಭಾಗದಲ್ಲಿ ಬರುವ ಪ್ರದೇಶಗಳಲ್ಲಿಯೂ ಮಾರ್ಪಾಟು ಮುಖ್ಯವಾಗಿದ್ದು, ನಿರ್ವಹಣಾ ಮಾದರಿಯನ್ನು ಅನುಸರಿಸಲು ಗಾಡ್ಗೀಳರು ಶಿಫಾರಸ್ಸು ಮಾಡಿರುತ್ತಾರೆ.

೭.೨ ಅಭಿವೃದ್ಧಿಮುಖಿ ಪರಿಸರ ಪ್ರಜ್ಞೆಯ ತಾತ್ವಿಕ ಚಿಂತನೆಗಳು:

೭.೨.೧ ಮಹಾತ್ಮ ಗಾಂಧೀಜಿ ಅವರ ಅಭಿವೃದ್ಧಿಮುಖಿ ಪರಿಸರ ಪ್ರಜ್ಞೆ

ಮಹಾತ್ಮ ಗಾಂಧೀಜಿ ಈ ಜಗತ್ತು ಕಂಡ ಮಹಾನ್ ದಾರ್ಶನಿಕ ಹಾಗೂ ತತ್ವಜ್ಞಾನಿಯಾಗಿದ್ದರು. ಅವರ ಬದುಕೇ ದುರಾಸೆಯಿಂದ ಎಲ್ಲರೂ ದೂರ ಉಳಿದು ಬದುಕುವಂತೆ ಸಂದೇಶ ನೀಡುತ್ತದೆ. ಇಂದಿನ ಸಂದರ್ಭಗಳಲ್ಲಿ ಗಾಧೀಜಿ ಅವರ ಪರಿಸರ ಪ್ರಜ್ಞೆ ಬಗ್ಗೆ ಚಿಂತಿಸುವುದು ಹೆಚ್ಚು ಪ್ರಸ್ತುತವಾಗುವ ಸಂಗತಿಯಾಗಿದೆ. ಗಾಂಧೀಜಿ ವಸಾಹತುಶಾಹಿಯ ಮುಷ್ಟಿಯಿಂದ ಈ ಭಾರತವನ್ನು ಬಿಡುಗಡೆಗೊಳಿಸಲು ಮಾತ್ರ ಚಿಂತಿಸಲಿಲ್ಲ. ಈ ಭಾರತದ ಗ್ರಾಮಜಗತ್ತನ್ನು ಸ್ವಾವಲಂಬಿಯಾಗಿ ಬೆಳೆಸುವ ಬಗ್ಗೆ ಸದಾ ಆಲೋಚಿಸುತ್ತಿದ್ದರು. ಮುಂದೆ ಭಾರತ ಹೇಗಿರಬೇಕೆಂದು ಉತ್ಕೃಷ್ಟ ಕನಸು ಕಂಡವರು. ಪರಿಸರ ವಿಜ್ಞಾನವನ್ನು ಅಭ್ಯಾಸ ಮಾಡದಿದ್ದರೂ ಪ್ರಕೃತಿ ಪ್ರಜ್ಞೆಯನ್ನು ಗಾಢವಾಗಿ ಬೆಳೆಸಿಕೊಂಡಿದ್ದರು. ಗಾಂಧೀಜಿ ಅವರ ಜೀವನಕ್ಕೆ ಒಂದು ಚಾರಿತ್ರಿಕ ತಿರುವನ್ನು ಒದಗಿಸಿದ ಐತಿಹಾಸಿಕ ಪುಸ್ತಕವೆಂದರೆ ಜಾನ್ ರಸ್ಕಿನ್ ಅವರ 'ಅನ್‌ಟು ದಿಸ್ ಲಾಸ್ಟ್'. ಈ ಪುಸ್ತಕ ಪರಿಸರವಾದಿ ಗಾಂಧೀಜಿಯನ್ನು ರೂಪಿಸಿ ಬೆಳೆಸುವಲ್ಲಿ ಮಹತ್ತರ ಪಾತ್ರ ವಹಿಸಿತು. ಪರಿಸರವಾದಿ ಗಾಂಧೀಜಿಯ ಪೂರ್ಣ ಪರಿಚಯವಾಗುವುದು ಅವರು ೧೯೦೯ರಲ್ಲಿ ರಚಿಸಿದ 'ಹಿಂದ್ ಸ್ವರಾಜ್' ಮತ್ತು 'ಸರ್ವೋದಯ'ದ ಪುಸ್ತಕಗಳಲ್ಲಿ. ಭಾರತದ ಹಳ್ಳಿಗಳು ಹೇಗೆ ಸಂಶೋಧನೆಯ ಪ್ರಕೃತಿ ಆರಾಧನೆಯ ಸಂಕೀರ್ಣ ಅರ್ಥಪೂರ್ಣ ಘಟಕಗಳಾಗಬೇಕೆಂದು ಅದರಲ್ಲಿ ಬರೆದಿದ್ದಾರೆ. ಈ ದೇಶದ ಭವಿಷ್ಯವನ್ನು ಅರಿತಿದ್ದ ಗಾಂಧೀಜಿ ಪಶ್ಚಿಮದ ಯಂತ್ರನಾಗರೀಕತೆಯನ್ನು ಬಲವಾಗಿ ವಿರೋಧಿಸಿದರು. 'ಯಾರು ಏನೇ ಹೇಳಿದರೂ ನಾನು ವಿಘಾತಕ ಯಂತ್ರಗಳನ್ನು ವಿರೋಧಿಸುವೆ. ಯಂತ್ರಗಳೇ ಭಾರತವನ್ನು ಬಡವಾಗಿಸಿವೆ' ಎಂದು ಪ್ರತಿಪಾದಿಸಿದ್ದು ಮಾತ್ರವಲ್ಲದೆ ಪರಿಸರ ಪೂರಕ ಸಿದ್ಧಾಂತವಾಗಿ ಮರುಬಳಕೆ ಮತ್ತು ಪುನರ್‌ಬಳಕೆ

ಸಿದ್ಧಾಂತವನ್ನು ಪ್ರತಿಪಾದಿಸಿದರು. ತಮ್ಮ ಪತ್ರ ವ್ಯವಹಾರ ಮತ್ತು ಲೇಖನಗಳಿಗೆ ಉಪಯೋಗಿಸಿದ ಕಾಗದದ ಖಾಲಿ ಭಾಗವನ್ನು ಬಳಕೆ ಮಾಡುತ್ತಿದ್ದರು.(೦೪)

‘ಇಂದಿನ ಯಂತ್ರಗಳು ಲಕ್ಷಾಂತರ ಜನರ ತುತ್ತನ್ನು ಕಸಿಯುತ್ತ ಕೆಲವೇ ಕೆಲವು ಧನಿಕರ ಕೈಗೆ ಇನ್ನಷ್ಟು ಸಂಪತ್ತು ಸೇರುವಂತೆ ಮಾಡುತ್ತಿವೆ. ಭಾರತದ ಏಳು ಲಕ್ಷ ಹಳ್ಳಿಗಳಲ್ಲಿ ವಾಸಿಸುತ್ತಿರುವ ಜೀವಂತ ಯಂತ್ರಗಳಿಗೆ ಮುಖಾಮುಖಿಯಾಗಿ ಈ ನಿರ್ಜೀವ ಯಂತ್ರಗಳನ್ನು ನಿಲ್ಲಿಸಬಾರದು. ಯಂತ್ರಗಳು ದುಡಿತದ ಶ್ರಮವನ್ನು ಕಡಿಮೆ ಮಾಡಬೇಕು ವಿನಾ ಶ್ರಮಿಕರ ತುತ್ತನ್ನು ಕಸಿಯಬಾರದು.’(೦೫) – ಮಹಾತ್ಮಾ ಗಾಂಧಿ, ೧೯೩೫

ಚಿಪ್ಕೋ ಚಳುವಳಿಯ ೪೫ ವರ್ಷಗಳ ಮೊದಲು ೧೯೨೮ರಲ್ಲಿ ಮಹಾತ್ಮ ಗಾಂಧಿಯವರು ಹೀಗೆ ಹೇಳಿದ್ದರು **“ಪಶ್ಚಿಮದ ರೀತಿಯಲ್ಲಿ ಕೈಗಾರಿಕೀಕರಣಕ್ಕೆ ಭಾರತವನ್ನು ತೆರೆದುಕೊಳ್ಳಬೇಕೆಂಬುದನ್ನು ದೇವರು ನಿಷೇಧಿಸಿದ್ದಾನೆ. ಒಂದು ಸಣ್ಣ ದ್ವೀಪ ಸಾಮ್ರಾಜ್ಯವಾದ ಇಂಗ್ಲೆಂಡ್‌ನ ಆರ್ಥಿಕ ಸಾಮ್ರಾಜ್ಯವು ಇಂದು ಜಗತ್ತನ್ನು ಸಂಕೋಲೆಯಲ್ಲಿರಿಸಿದೆ. ಭಾರತದ ೩೦೦ದಶಲಕ್ಷ ಜನರು ಇದೇ ರೀತಿಯ ಆರ್ಥಿಕ ಶೋಷಣೆಗೆ ತೆರೆದುಕೊಂಡರೆ ಅದು ಪ್ರಪಂಚವನ್ನು ಮಿಡತೆಗಳಂತೆ ತಿಂದು ಬರಿದು ಮಾಡಿಬಿಡಬಲ್ಲದು”** (೦೬) ಎಂದು ಹೇಳಿದ್ದರು. ಈ ಉದ್ಧರಣದಲ್ಲಿನ ಪ್ರಮುಖ ಪದಗುಚ್ಛವು **‘ಪಶ್ಚಿಮದ ರೀತಿಯಾಗಿದೆ’** ಎಂಬುದು.

ಭಾರತೀಯ ಜನಸಮೂಹವನ್ನು ಬಡತನದಿಂದ ತೆಗೆದುಹಾಕಬೇಕೆಂದು ಗಾಂಧಿಯವರಿಗೆ ತಿಳಿದಿತ್ತು. ಅವರು ಯೋಗ್ಯ ಶಿಕ್ಷಣ, ಘನತೆಯ ಉದ್ಯೋಗ, ಸುರಕ್ಷಿತ ವಸತಿ, ರೋಗದಿಂದ ಮುಕ್ತರಾಗುವುದನ್ನು ಅವರು ಬಯಸಿದ್ದರು. ಇಂತಹ ಪರಿಸರೀಯತೆಗೆ ಅವರು ತುಡಿಯುತ್ತಿದ್ದರು. ಹಿಂದ್ ಸ್ವರಾಜ್‌ನಲ್ಲಿ ನಿರ್ದಾಕ್ಷಿಣ್ಯವಾಗಿ ಕೈಗಾರಿಕೀರಣವನ್ನು ವಿರೋಧಿಸುವ ಗಾಂಧಿ, ಕೈಗಾರಿಕೀರಣಗೊಂಡ ಸಮಾಜವು ಸ್ವಾರ್ಥ, ಸ್ಪರ್ಧೆಯಿಂದ ಕೂಡಿದ ಹಾಗೂ ಪರಿಸರಕ್ಕೆ ಹಾನಿ ಮಾಡುವಂತಹ ಸಮಾಜ ಎನ್ನುತ್ತಾರೆ ಹಾಗೆಯೇ ಪ್ರಸ್ತುತ ಸನ್ನಿವೇಶದಲ್ಲಿ ಆಧುನಿಕ ಆರ್ಥಿಕತೆಯು ದುರಾಸೆ ಹಾಗೂ ಉನ್ಮಾದದಿಂದ ಪ್ರೇರೇಪಿಸಲ್ಪಟ್ಟಿದೆ ಮತ್ತು ಅಸೂಯೆ ಯತ್ನದಲ್ಲಿ ಪಾಲ್ಗೊಳ್ಳುತ್ತದೆ. ನಿಜವಾದ ಅರ್ಥಶಾಸ್ತ್ರವು ಯಾವತ್ತೂ ಸಾಮಾಜಿಕ ನ್ಯಾಯಕ್ಕಾಗಿ ನಿಲ್ಲುತ್ತದೆ ಮತ್ತು ಯೋಗ್ಯವಾದ ಜೀವನಕ್ಕೆ ಅನಿವಾರ್ಯವಾಗಿದೆ ಎಂದು ಗಾಂಧೀಜಿಯವರು ಪ್ರತಿಪಾದಿಸಿದರು. ಕೇಂದ್ರೀಕೃತ ಆರ್ಥಿಕ ವ್ಯವಸ್ಥೆಯನ್ನು ಪ್ರತಿಪಾದಿಸುವ ಸಾಮ್ರಾಜ್ಯಶಾಹಿ ಆರ್ಥಿಕ ವ್ಯವಸ್ಥೆಗೆ ಪರ್ಯಾಯವಾಗಿ ಗಾಂಧೀಜಿ ವಿಕೇಂದ್ರೀಕೃತ ಅರ್ಥವ್ಯವಸ್ಥೆಯನ್ನು ಪ್ರತಿಪಾದಿಸಿದರು. ಬೃಹತ್ತಿಗೆ ಪರ್ಯಾಯವಾಗಿ ‘ಚಿಕ್ಕದು ಸುಂದರವಾದುದು’ ಎಂಬ ನೀತಿಯ ಪ್ರತಿಪಾದಕರಾದರು. ಗಾಂಧೀಜಿ ಆಧುನಿಕ ವಿಜ್ಞಾನ ತಂತ್ರಜ್ಞಾನಗಳಿಗೆ ಪ್ರತಿಯಾಗಿ ಸ್ಥಳೀಯ ಸಾಂಪ್ರದಾಯಿಕ ಜ್ಞಾನ ಪದ್ಧತಿಗಳಿಗೆ ಮತ್ತು ಉತ್ಪಾದನಾ ವಿಧಾನಗಳಿಗೆ ಆದ್ಯತೆ ನೀಡಿ ಅವುಗಳನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸಿದರು.

ಯಂತ್ರನಾಗರೀಕತೆಯ ಪಾಶ್ಚಾತ್ಯ ಸಂಸ್ಕೃತಿಯನ್ನು ವಿರೋಧಿಸಲು ಗಾಂಧೀಜಿಯವರಿಗಿದ್ದ ಸಮರ್ಥನೆಗಳನ್ನು ಅವಲೋಕಿಸುವ ಅಗತ್ಯವಿದೆ. ವಸಾಹತುಶಾಹಿ ಆಳ್ವಿಕೆಯಲ್ಲಿ ಕಚ್ಚಾವಸ್ತುಗಳು ಮತ್ತು ಸಿದ್ಧವಸ್ತುಗಳು ರಾಷ್ಟ್ರದಿಂದ ರಾಷ್ಟ್ರಕ್ಕೆ ಪ್ರಯಾಣಿಸಿ ಉಂಟುಮಾಡುತ್ತಿದ್ದ ಆರ್ಥಿಕ

ಧೃವೀಕರಣ ಮತ್ತು ನಿರ್ಗತೀಕರಣ ಪ್ರಕ್ರಿಯೆಗಳನ್ನು ಸೂಕ್ಷ್ಮವಾಗಿ ಗಾಂಧಿ ಗಮನಿಸಿದ್ದರು. ಅದನ್ನು ಸರಿಪಡಿಸುವ ಪ್ರಯತ್ನದ ಭಾಗವಾಗಿ ಯಂತ್ರನಾಗರೀಕತೆಯ ಕಡುವಿರೋಧಿಯಾಗಿ ರೂಪಿತವಾದರು. ವಸಾಹತುಶಾಹಿ ವ್ಯಾಪಾರ ಸಂಬಂಧಗಳು ಕೈಗಾರಿಕೀಕರಣಗೊಂಡ ರಾಷ್ಟ್ರಗಳ ಬಂಡವಾಳಗಾರರ ದುಡ್ಡಿನ ಮೂಟೆಗಳನ್ನು ತುಂಬಿ ತುಳುಕಿಸಿ ಶ್ರೀಮಂತಿಕೆಯ ಉತ್ತುಂಗಕ್ಕೇರಿಸುತಿತ್ತು.

ಅವರ ಧನದಾಹ ಹೆಚ್ಚುತ್ತಾ ಹೋದಂತೆ ವಸಾಹತುಗಳ ಕೃಷಿ ಗುಡಿ ಕೈಗಾರಿಕೆಗಳು ವಿಕೃತಗೊಂಡು ಧೂಳಿಪಟವಾಗಿ ರೈತರು ಕುಶಲಕರ್ಮಿಗಳ ಕೈತುತ್ತನ್ನು ಕಸಿದುಕೊಂಡು ಅವರನ್ನು ನಿರ್ಗತಿಕರನ್ನಾಗಿಸಿತು. ಹಳ್ಳಿಗಳನ್ನು ಅವರ ಪಾರಂಪರಿಕ ನೆಲೆಯಿಂದಲೇ ಗುಳೆಯೆಬ್ಬಿಸಿ ನಗರಗಳಿಗೆ ಅಗಾಧ ಸಂಖ್ಯೆಯಲ್ಲಿ ವಲಸೆಬರುವಂತೆ ಬಲಾತ್ಕರಿಸಿ ಕೊಚ್ಚೆ ಗುಂಡಿಗಳಲ್ಲಿ ಹಂದಿ ನಾಯಿಗಳಿಗೂ ಕಡೆಯಾಗಿ ಬದುಕುವ ನರಕವನ್ನು ಸೃಷ್ಟಿಸುತ್ತಿದ್ದುದು ಗಾಂಧೀಜಿಯವರ ಹೃದಯವನ್ನು ಹಿಂಡಿತು. ಇಂತಹ ಪರಿಸ್ಥಿತಿಯನ್ನು ವಿರೋಧಿಸಲು ಗಾಂಧೀಜಿ ಯಂತ್ರ ನಾಗರೀಕತೆಯನ್ನೇ ನಿರಾಕರಿಸುವ ನಿಲುವಿಗೆ ಬರಲು ಕಾರಣವಾಯಿತು. (೦೭)

ಗಾಂಧೀಜಿಯವರ ಕನಸಿನ, ಶ್ಯುಮಾಕರ್ ತತ್ವದ ತಂತ್ರಜ್ಞಾನ (ಮಧ್ಯಂತರ ತಂತ್ರಜ್ಞಾನ) ಹೀಗಿರುತ್ತದೆ: ಹೊಲಕ್ಕೆ ನೀರೆತ್ತಲು ರೈತ ತಾನೇ ನಿರ್ಮಿಸಿಕೊಂಡ ಗಾಳಿ ಯಂತ್ರ ಬಳಸುತ್ತಾನೆ. ಕಾರ್ಖಾನೆಗಳಿಂದ ಬರುವ ರಸಗೊಬ್ಬರದ ಬದಲು ಹಸಿರೆಲೆ ಗೊಬ್ಬರ, ಸೆಗಣಿಯ ಸೇಂದ್ರಿಯ ಪೋಷಕಾಂಶಗಳನ್ನು ಹೊಲಕ್ಕೆ ನೀಡುತ್ತಾನೆ. ತನ್ನ ಮೈಯ ಕೊಳೆ ತೊಳೆಯಲು ನಗರದಿಂದ ಸಾಬೂನು–ಪೇಸ್ಟ್ ಖರೀದಿಸಿ ತರುವ ಬದಲು ಸೀಗೆಪುಡಿ, ಬೇವಿನೆಲೆ ಉಪಯೋಗಿಸುತ್ತಾನೆ. ಹಳ್ಳಿಯ ಕಮ್ಮಾರನಿಂದ ಬೇಸಾಯಕ್ಕೆ ಅಗತ್ಯವಾದ ಸಲಕರಣೆಗಳನ್ನು ಮಾಡಿಸಿಕೊಳ್ಳುತ್ತಾನೆ. ಹಸು ಕಟ್ಟಲು ಪ್ಲಾಸ್ಟಿಕ್ ನಾರಿನ ಬದಲು ತಾನೇ ಬೆಳೆದುಕೊಂಡ ಕತ್ತಾಳೆ ಗಿಡದ ನಾರನ್ನು ಹೊಸೆದುಕೊಳ್ಳುತ್ತಾನೆ. ನಿಸರ್ಗವನ್ನು ಆಶ್ರಯಿಸಿ, ನಿಸರ್ಗಕ್ಕೆ ಅಪಚಾರ ಮಾಡದೆ ಅದರೊಂದಿಗೆ ತಾದ್ಯಾತ್ಮತೆಯಿಂದ ಜೀವಿಸುತ್ತಾನೆ.

ನಾವು ಅರ್ಥಮಾಡಿಕೊಂಡಂತೆ ಗಾಂಧೀಯುಗದಲ್ಲಿ ಪರಿಸರ ಕಾಳಜಿ ಅಷ್ಟಾಗಿ ಇರಲಿಲ್ಲ. ಆದರೆ ಅಭಿವೃದ್ಧಿ, ತಂತ್ರಜ್ಞಾನ, ಸ್ವಯಂಪೂರ್ಣತೆ, ಗ್ರಾಮ ಸ್ವರಾಜ್ ಇತ್ಯಾದಿಗಳ ಕುರಿತಾದ ಅವರ ಆಲೋಚನೆಗಳು ಪರಿಸರ ಕಾಳಜಿಯನ್ನು ಬಹಿರಂಗಪಡಿಸುತ್ತವೆ. ರಾಮಚಂದ್ರ ಗುಹಾರಂತಹ ಪ್ರಸಿದ್ಧ ಪರಿಸರ ಬರಹಗಾರರು ಗಾಂಧಿ ಅವರನ್ನು ಪೂರ್ವ ಪರಿಸರವಾದಿ ಎಂದು ಪರಿಗಣಿಸುತ್ತಾರೆ. ಪ್ರಕೃತಿ ಕುರಿತಾದ ಅವರ ಅಭಿಪ್ರಾಯಗಳು ಗಾಂಧೀ ಅವರ ಬರಹಗಳಲ್ಲಿ ವ್ಯಕ್ತವಾಗಿವೆ. ಸತ್ಯ ಮತ್ತು ಅಹಿಂಸೆ, ಸರಳ ಜೀವನ ಶೈಲಿ ಮತ್ತು ಅಭಿವೃದ್ಧಿಯ ಆಧಾರದ ಮೇಲೆ ಸತ್ಯಾಗ್ರಹಕ್ಕೆ ಸಂಬಂಧಿಸಿದ ಅವರ ಆಲೋಚನೆಗಳು ಪ್ರಕೃತಿ ಮತ್ತು ನಮ್ಮ ಸಹವರ್ತಿ ಜೀವಿಗಳಿಗೆ ಯಾವುದೇ ಹಾನಿ ಮಾಡದೆಯೇ ಸಮರ್ಥನೀಯ ಬೆಳವಣಿಗೆ ಹೇಗೆ ಸಾಧ್ಯ ಎಂಬುದನ್ನು ತೋರಿಸುತ್ತವೆ.[೦೮]

ಪ್ರತಿಯೊಬ್ಬರೂ ದುರಾಸೆಯಿಂದಲೇ ಈ ಪ್ರಕೃತಿಯ ಅಗತ್ಯಕ್ಕಾಗಿ ಮೇಲಿಂದ ಮೇಲೆ ಮುಗಿ ಬಿದ್ದಿದ್ದೇವೆ. ಇಂದು ಎಲ್ಲೆಲ್ಲೂ ನೀರು. ಮಾಧ್ಯಮಗಳಲ್ಲಿ ಊರು ಊರೇ ಮುಳುಗುತ್ತಿರುವ ಚಿತ್ರಗಳ ದೃಶ್ಯ. ಜಲಪ್ರಳಯದಿಂದಾಗಿ ಜೀವನವನ್ನು ಮತ್ತೆ ಶೂನ್ಯದಿಂದಲೇ ಆರಂಭಿಸಬೇಕಾದ ಸ್ಥಿತಿ ಎದುರಿಸುತ್ತಿರುವ ಸಮೂಹ ದೃಶ್ಯ ಕೇರಳ ಮತ್ತು ಕೊಡಗಿನಲ್ಲಿ. ಮಾನವ ನಿರ್ಮಿತ ಅಣೆಕಟ್ಟುಗಳೇ ಸ್ವಾಭಾವಿಕ ಪ್ರಕೃತಿಯ ಮುನಿಸಿಗೆ ಗಡಗಡ ನಡುಗುತ್ತಿವೆ. ಈ ರೀತಿಯ ಪ್ರಕೃತಿ ವಿಕೋಪ, ಅತಿವೃಷ್ಟಿ, ಅನಾವೃಷ್ಟಿಗೆ ನೇರ ಹೊಣೆಗಾರರು ನಾವೆಲ್ಲರೂ ಆಗಿದ್ದೇವೆ. ವಿವೇಕರಹಿತ ಅಭಿವೃದ್ಧಿ ಕ್ರಮಗಳೇ ನಮ್ಮನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸಿವೆ. ಬೋಳಾದ ಘಟ್ಟಗಳು, ಹೆದ್ದಾರಿಗಾಗಿ ನೆಲಕ್ಕುರುಳಿದ ಶತಮಾನದ ಮರಗಳು, ನಗರಗಳಿಗಾಗಿ ಹಸಿರು ಭೂಮಿಗಳ ಪಲ್ಲಟಗಳು, ಕೊಡಲಿ ಸನಿಕೆಗಳ ಜಾಗಕ್ಕೆ ಕ್ರೇನ್, ಬುಲ್‌ಡೋಜರ್, ಜೆಸಿಬಿಗಳು ಒಂದೆಡೆಯಾದರೆ, ಗ್ರಾಮದ ಕೆರೆ, ಗೋಮಾಳಗಳೆಲ್ಲವೂ ದುರಾಸೆಯ ಲಾಭಿಗಳಾಗಿವೆ. ಜೌಗುಭೂಮಿಗಳು ಒತ್ತುವರಿಯಾಗಿವೆ. ಸುರಂಗ ಕೊರೆದು ಭೂ ಸತ್ವದ ಗಟ್ಟಿಯನ್ನೇ ಅಲುಗಾಡಿಸುತ್ತಿರುವ ಯಂತ್ರ ನಾಗರೀಕತೆಗಳು ಮನುಷ್ಯನ ಬದುಕಿನ ಪರಮಾವಧಿಯ ಹಂತವನ್ನು ತಲುಪಿವೆ.

ನಮ್ಮ ಸುತ್ತಮುತ್ತ ನಾವು ನೋಡುತ್ತಿರುವ ವಾಯುಮಾಲಿನ್ಯ, ಜಲಮಾಲಿನ್ಯ, ಮಣ್ಣಿನ ಸವಕಳಿ, ಕ್ಷೀಣಿಸುತ್ತಿರುವ ನಿಸರ್ಗ ಸಂಪನ್ಮೂಲಗಳು, ಕಣ್ಮರೆಯಾಗುತ್ತಿರುವ ಅರಣ್ಯ, ವನ್ಯಜೀವಿಗಳು, ಆರೋಗ್ಯದ ತೊಂದರೆಗಳು ಈ ಎಲ್ಲಾ ಸಮಸ್ಯೆಗಳೂ ಈ ದುರಾಸೆಯ ಫಲವೇ. ಆಧುನಿಕ ತಂತ್ರಜ್ಞಾನ ನೀಡುವ ಎಲ್ಲಾ ಸೌಲಭ್ಯಗಳೂ ನಮಗೆ ಬೇಕು. ಜಲವಿದ್ಯುತ್ ಯೋಜನೆಗಳು, ನೀರಾವರಿ ಜಲಾಶಯಗಳು, ಬೃಹತ್ ಕೈಗಾರಿಕೆಗಳು, ಅತ್ಯುತ್ತಮ ಸಂಚಾರ – ಸಂಪರ್ಕ ವ್ಯವಸ್ಥೆಗಳು ನಮಗೆ ಬೇಕು. ಭೋಗ ವಸ್ತುಗಳ ಪಟ್ಟಿಗಂತೂ ಕೊನೆಯೇ ಇಲ್ಲ. ಈ ಕೊನೆಯಿಲ್ಲದ ಬೇಡಿಕೆಗಳ ಪೂರೈಕೆಯ ಭರದಲ್ಲಿ ನೀರು, ನೆಲ, ಅರಣ್ಯ, ಹುಲ್ಲುಗಾವಲು ಮುಂತಾದ ಎಲ್ಲಾ ಪರಿಸರ ವ್ಯವಸ್ಥೆಗಳೂ ವಿನಾಶದ ದಾರಿ ಹಿಡಿದಿವೆ. ಅದನ್ನು ಉಳಿಸಿ ಬೆಳೆಸುವ ಪ್ರಜ್ಞೆ ಸುಶಿಕ್ಷಿತರಲ್ಲೂ ಮೂಡದಿರುವುದು ಪರಿಸರ ಪ್ರಜ್ಞೆಯ ವಸ್ತುಸ್ಥಿತಿಯನ್ನು ನೆನಪಿಸಿದೆ.

ಪ್ರಕೃತಿಯೊಂದಿಗೆ ಬೆಸೆದುಕೊಂಡಿದ್ದ ಅದೆಷ್ಟೋ ಜೀವವೈವಿಧ್ಯಗಳನ್ನು, ನಿಸರ್ಗ ನಂಟಿನಲ್ಲಿದ್ದ ಅದೆಷ್ಟೋ ಸಾವಯವ ಬಂಧಗಳನ್ನು ಕಳಚಿಕೊಳ್ಳುತ್ತಿದ್ದೇವೆ ಮತ್ತು ಸರಿಪಡಿಸಲಾಗದ ಅವಸ್ಥೆ ತಲುಪಿದ್ದೇವೆ. ಪರಿಸರವನ್ನು ಸಮತೋಲನದಲ್ಲಿಡಬೇಕಾದ ನೆಲೆಗಳನ್ನೆಲ್ಲಾ ಒಸಕಿ ಹಾಕುತ್ತಿರುವ ಮಾನವ ಈಗ ನಿಂತಿರುವುದಾದರೂ ಎಲ್ಲಿ ಎಂಬುದು ಕಾಡುತ್ತಿದೆ. ನೀರು ಅದೆಲ್ಲಿಂದಲೋ ಓತ ಪ್ರೋತವಾಗಿ ಹರಿದು ಬಂದು ನಮ್ಮ ಬದುಕೇ ಮೂರಾಬಟ್ಟೆಯಾಗುವ ಕಾಲಕ್ಕೆ ನಿಂತಿರುವುದೆಲ್ಲಿ ಎಂದು ತಿಳಿಯುತ್ತದೆಯಲ್ಲವೇ? ಆಗ ನೆನಪಾಗುತ್ತದೆ 'ಗಾಂಧಿ' ಹೆಸರು ಮಾತ್ರವಲ್ಲ; ಅದು ಸರ್ವಕಾಲಿಕ ಸತ್ಯ ಎಂಬುದು. ಇವೆಲ್ಲವನ್ನೂ ಹೊರತುಪಡಿಸಿ ಗಾಂಧೀಜಿಯು ಜಗತ್ತಿನಲ್ಲಿ ಏಕೈಕ ಗಾಂಧಿ ಮಾತ್ರವಾಗಿದ್ದರು ಎಂಬುದೇ ಭಾರತದ ಅನೇಕ ಸಾಮರ್ಥ್ಯಗಳಲ್ಲಿ ಒಂದಾಗಿತ್ತು. ಇವರನ್ನು ಕೊಲ್ಲುವ ಆಲೋಚನೆಯ ಮೂಲಕವೇ ಹುಟ್ಟಬಹುದಾದ ಮತ್ತೊಂದು ಸಾಧ್ಯತೆ ಹೇಗೆ ಭಾರತೀಯತೆಯನ್ನು ಸಿದ್ಧಚೌಕಟ್ಟುಗಳ ನಡುವೆ ಹೊಂದಿಸಲು ಹೋಗಿ, ಈ ದೇಶದ

ಪರಿಸರವಾದವನ್ನು ದಿಕ್ಕು ತಪ್ಪಿಸಿತು ಎಂಬುದು ೨೧ನೇ ಶತಮಾನದ ಮುಖ್ಯ ಪ್ರಶ್ನೆ ಹಾಗೂ ಸಮಸ್ಯೆಯೂ ಆಗಿದೆ. ಇಲ್ಲಿಂದಲೇ ಭಾರತೀಯ ಪರಿಸರ ಚಿಂತನೆಗಳು ದಂಗೆಯ ರೂಪತಾಳಿದ ಕುರುಹುಗಳು ಸಿಗುತ್ತವೆ. ಇವುಗಳ ಅನ್ವೇಷಣೆಯೇ ಭಾರತೀಯ ಪರಿಸರವಾದದ ವಾಸ್ತವ ಹಾಗೂ ಕೃತಿಮ ವ್ಯಾಖ್ಯಾನಗಳ ಗಂಭೀರ ಅಧ್ಯಯನವಾಗುತ್ತದೆ.[೦೯]

೭.೨.೨ ಮಸಾನೊಬು ಫುಕುವೂಕನ ಹಸಿರು ಚಿಂತನೆ:

ಈತ ವಿಜ್ಞಾನವನ್ನೇ ಗುಮಾನಿಯಿಂದ ನೋಡುವ ಒಬ್ಬ ವಿಜ್ಞಾನಿಯಾಗಿದ್ದನು. ಈತನ ಕ್ರಿಯೆ, ಮಾತು ಹಾಗೂ ಇಡೀ ಬದುಕೇ ಝೆನ್ ಧರ್ಮ ಹಾಗೂ ತಾವೋ ತತ್ವಗಳಿಂದ ಪ್ರಭಾವಿತವಾಗಿದೆ. ಈತನ ಪ್ರಕಾರ ಸಹಜ ಕೃಷಿಗೆ ವ್ಯಕ್ತಿಯ ಆಧ್ಯಾತ್ಮಿಕ ಆರೋಗ್ಯವೂ ಬಹಳ ಮುಖ್ಯವಾಗುತ್ತದೆ. ಆತ್ಮದ ಶುದ್ಧೀಕರಣ ಮತ್ತು ಭೂಮಿಯ ಫಲವತ್ತತ್ತೆ ಹೆಚ್ಚುವುದು ಸೃಷ್ಟಿಯಲ್ಲಿ ಒಂದೇ. ಕೃಷಿಯ ಅಂತಿಮ ಗುರಿ ಯಾವುದೇ ಬೆಳೆಗಳನ್ನು ಬೆಳೆಯುವುದಲ್ಲ. ಮಾನವರನ್ನು ಆತ್ಮ ಶುದ್ಧೀಕರಣದತ್ತ ಒಯ್ಯುವುದು ಹಾಗೂ ಅವರಲ್ಲಿ ಒಳ್ಳೆಯ ನಡತೆಯನ್ನು ಬೆಳೆಸುವುದಾಗಿದೆ ಎಂದು ನಂಬಿದ ತತ್ವಜ್ಞಾನಿ ಇವನು.

ಫುಕುವೂಕು ಅವರ ಸಹಜಕೃಷಿಯು ವಿಜ್ಞಾನ ಮತ್ತು ತತ್ವಜ್ಞಾನದ ಸಮ್ಮಿಳನ. ಈತನ ಸಹಜ ಕೃಷಿಯನ್ನು 'ಋಷಿ ಬೇಸಾಯ' ಎಂತಲೂ ಕರೆಯುತ್ತಾರೆ. ಕೆಲವರು ಇದನ್ನು 'ಕೆಲಸವೇ ಇಲ್ಲದ ಕೃಷಿ' (ಡೂ ನಥಿಂಗ್ ಫಾರ್ಮಿಂಗ್) ಎನ್ನುತ್ತಾರೆ. ಫುಕುವೊಕ ಅದನ್ನು 'ಗಾಂಧಿ ವಿಧಾನ' ಎಂದೂ ಕರೆದಿದ್ದಾನೆ. ಮನುಷ್ಯ ಹಠಮಾರಿ. ಪ್ರಕೃತಿಯನ್ನು ತನ್ನ ಪ್ರಚಂಡ ಬುದ್ಧಿಶಕ್ತಿಯಿಂದ ಗೆಲ್ಲಬಹುದು ಹಾಗೂ ತನಗೆ ಬೇಕಾದ ಹಾಗೆ ಪ್ರಕೃತಿಯನ್ನೇ ಬದಲಿಸಬಹುದೆಂಬ ಸೊಕ್ಕಿನ ಭ್ರಮೆಯಲ್ಲಿದ್ದಾನೆ. ಅದೇ ಭ್ರಮೆಯಲ್ಲಿ ಪ್ರಕೃತಿ ಪರಿಸರವನ್ನು ವಿನಾಶದ ಹಂಚಿಗೆ ದೂಡುತ್ತಿದ್ದಾನೆ. **"ಪ್ರಕೃತಿಯನ್ನು ಮನುಷ್ಯ ಅರಿಯಲಾರ. ಭೂಮಿಯ ಮೇಲಿನ ಜೀವಿಗಳಲೆಲ್ಲಾ ಆಲೋಚಿಸಬಲ್ಲ ಶಕ್ತಿಯಿರುವುದು ತನಗೆ ಎಂಬ ಹಿರಿಮೆ ಮನುಷ್ಯನಿಗಿದೆ. ಆತ ತನ್ನನ್ನೂ ಅರಿತಿದ್ದೇನೆ ಮತ್ತು ಈ ಪ್ರಾಕೃತಿಕ ಜಗತ್ತನ್ನು ಅರಿತಿದ್ದೇನೆ ಎಂಬ ಭ್ರಮೆಯಲ್ಲಿದ್ದಾನೆ. ಅಲ್ಲದೆ ಪ್ರಕೃತಿಯನ್ನು ತನಗೆ ಇಷ್ಟ ಬಂದ ಹಾಗೆ ಬಳಸಿಕೊಳ್ಳಬಹುದೆಂದೂ ನಂಬಿದ್ದಾನೆ. ತನ್ನ ಬುದ್ಧಿವಂತಿಕೆಯೇ ತನ್ನ ಶಕ್ತಿ ಹಾಗೂ ಅದರಿಂದಾಗಿ ತನಗೆ ಅಲಭ್ಯವಾದುದು ಯಾವುದು ಇಲ್ಲ ಎಂಬ ಅಚಲ ನಂಬಿಕೆ ಆತನದು."**[೧೦] ಕೃಷಿಯಲ್ಲಿ ಮನುಷ್ಯನು ಪ್ರಕೃತಿಯೊಂದಿಗೆ ಸಹಕರಿಸಬೇಕೇ ಹೊರತು ಅದನ್ನು 'ಜಯಿಸಿ' ಇನ್ನೂ 'ಅಭಿವೃದ್ಧಿ' ಪಡಿಸುವುದರ ಮೂಲಕವಲ್ಲ. ಗಿಡಮರ ಬೆಳೆಯುವುದನ್ನು ಯಾರು ಪ್ರಕೃತಿಗೆ ಹೇಳಿಕೊಡುವುದಿಲ್ಲ. ಪ್ರಕೃತಿಯಲ್ಲಿನ ಜೀವರಾಶಿ ಒಂದಕ್ಕೊಂದು ಸಹಕರಿಸಿಕೊಂಡು ಬದುಕಬಲ್ಲವು. ಪ್ರಕೃತಿಯೇ ಮಾಡುವ ಗಿಡಮರಗಳ ಬಿತ್ತನೆ ಅಷ್ಟು ಸುಲಭವಾಗಿ ರೋಗರುಜಿನಗಳಿಗೆ ತುತ್ತಾಗುವಷ್ಟು ದುರ್ಬಲವಾಗಿರುವುದಿಲ್ಲ. ಬಹಳಷ್ಟು ಗಿಡಮರಗಳು ರೋಗನಿಯಂತ್ರಣ ರಾಸಾಯನಿಕಗಳನ್ನು ತಾವೇ ಉತ್ಪಾದಿಸುತ್ತವೆ ಎಂಬುದೇ ಫುಕೂವೂಕನ ಕೃಷಿಮುಖಿ ಚಿಂತನೆಗಳಾಗಿವೆ. ಫುಕುವೂಕನಿಗೆ ೧೯೮೮ರ 'ರಾಮೊನ್ ಮ್ಯಾಗಸ್ಸೆ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಹಾಗೂ ಶಾಂತಿನಿಕೇತನ ವಿಶ್ವಭಾರತಿ ವತಿಯಿಂದ 'ದೇಶಿಕೋತ್ತಮ' ಪ್ರಶಸ್ತಿಯನ್ನು ಇವರಿಗೆ ನೀಡಲಾಗಿದೆ.

೭.೨.೩ ಸುಂದರ್‌ಲಾಲ್ ಬಹುಗುಣ ಅವರ ಪರಿಸರ ಪ್ರಜ್ಞೆ:

ಹಸಿರಿನ ಹರಿಕಾರನೆಂದೇ ಖ್ಯಾತರಾದವರು ಸುಂದರ್‌ಲಾಲ್ ಬಹುಗುಣ. ವಿಶ್ವದ ಈ ಏಕೈಕ ಜೀವಗೋಲವಿಂದು ಪರಿಸರ ದುರಂತದೆಡೆ ಉರುಳುತ್ತಿರುವಾಗ ಅರಣ್ಯ ರಕ್ಷಣೆಯೇ ಉಳಿವಿನ ಮಂತ್ರವೆಂದು ಜಗತ್ತಿನ ಉದ್ದಗಲಕ್ಕೆ ಸಾರುತ್ತಾ ಹೊರಟ ಹಸಿರು ಪಂಥದ ಸಂತ ಈ ಸುಂದರ್‌ಲಾಲ್ ಬಹುಗುಣ. ಮೂಲೆಗುಂಪಾಗುತ್ತಿರುವ ಗಾಂಧೀವಾದಕ್ಕೆ ಪಾಶ್ಚಾತ್ಯ ಪ್ರಪಂಚದಲ್ಲಾದರೂ ಮತ್ತೆ ಮಾನ್ಯತೆ ದೊರಕಿಸ ಹೊರಟ ಈ ಚಿಪ್ಕೋ ಚಳುವಳಿಯ ಹರಿಕಾರನನ್ನು ನಮ್ಮವರು ಈಗಲೂ ತಾತ್ಸಾರ ಮಾಡುತ್ತಾರೆ. ಆದರೆ ಇವರು ನವೀನ ಯುಗಧರ್ಮವೊಂದರ ಬೋಧನೆ ಮಾಡುತ್ತಿದ್ದಾರೆ. **"ನಿಸರ್ಗದ ತೊಟ್ಟಿಲಲ್ಲಿ ದೇವರು ಮಾನವನನ್ನು ಸೃಷ್ಟಿಸಿದ. ಆದರೆ ಈ ಮಾನವ ತೊಟ್ಟಿಲನ್ನೇ ಚಿಂದಿ ಚಿಂದಿ ಮಾಡಿದ. ಉಣಬಡಿಸ ಬಂದ ಪ್ರಕೃತಿ ಮಾತೆಯ ಶೀಲಭಂಗ ಮಾಡಿ, ರಾಡಿ ಮಾಲಿನ್ಯದ ರಕ್ಕಸನನ್ನು ಸೃಷ್ಟಿಸಿದ. ಈವರೆಗೆ ಆಹಾರ, ಬಟ್ಟೆ ಹಾಗೂ ವಸತಿ ಇವು ಮೂರು ಮಾತ್ರ ಮೂಲಭೂತ ಅವಶ್ಯಕತೆಗಳಾಗಿದ್ದವು. ಈಗ ಇವಕ್ಕೆಲ್ಲ ಮೂಲಾಧಾರವಾದ ನೀರು ಮತ್ತು ಗಾಳಿಗೇ ಅಭಾವ ಉಂಟಾಗಿದೆ. ಜೀವಗೋಲ ಸಮತೋಲನವಾಗಿದ್ದಷ್ಟು ದಿನ ನಮಗೆ ಪ್ರಾಣವಾಯು ಅಷ್ಟೊಂದು ಮುಖ್ಯ ಅನಿಸಿರಲಿಲ್ಲ. ಆದರೆ ಈಗ ನಾವು ತಾಂತ್ರಿಕ ಗೋಲದಲ್ಲಿದ್ದೇವೆ. ಇಡೀ ಜೀವರಾಶಿಗೆ ಬೇಕಾದ ಪ್ರಾಣವಾಯುವಿನ ಹದಿನೈದು ಪಟ್ಟು ಹೆಚ್ಚು ವಾಯುವನ್ನು ಕಾರ್ಖಾನೆಗಳೇ ಕಬಳಿಸುತ್ತಿವೆ. ಕಾರ್ಖಾನೆಗಳ ಸಂಖ್ಯೆ ಹೆಚ್ಚುತ್ತಿವೆ. ಶುದ್ಧ ಗಾಳಿಯನ್ನು ಉತ್ಪಾದಿಸುವ ನೈಸರ್ಗಿಕ ಯಂತ್ರ(ವೃಕ್ಷ)ಗಳ ಸಂಖ್ಯೆ ಕ್ಷೀಣಿಸುತ್ತದೆ..."**[೧೧] ಹೀಗೆ ನಿಧಾನವಾಗಿ, ಒಂದೊಂದು ಪದವೂ ಸಭಿಕರ ಹೃದಯದಾಳಕ್ಕೆ ಇಳಿಯುವಂತೆ ಸ್ಫುಟವಾಗಿ, ಆವೇಶ ರಹಿತವಾಗಿ ಬಹುಗುಣಾಜಿ ಹೇಳುತ್ತ ಪರಿಸರಪ್ರಜ್ಞೆಯ ನಿಜವಾದ ಅರ್ಥಕ್ಕೇ ಕಿಚ್ಚು ಹಚ್ಚುತ್ತಾರೆ.

೭.೩ ಪರಿಸರ ಮತ್ತು ಜಾಗತೀಕರಣ

ಜಾಗತೀಕರಣವು 'ಜಾಗತಿಕ ದೇಶಗಳನ್ನು ಅಂದರೆ ದೇಶಗಳ ನಡುವೆ ಗಡಿರೇಖೆಯ ಸಂಬಂಧಗಳನ್ನು ವಿವರಿಸಲು ಗುಣವಾಚಕವಾಗಿ ಬಳಸಲ್ಪಡುತ್ತದೆ'. ಅಂತಾರಾಷ್ಟ್ರೀಯ ವಿನಿಮಯ ಮತ್ತು ಪರಸ್ಪರ ಅವಲಂಬನೆಯ ಬೆಳವಣಿಗೆಯನ್ನು ಇದು ವಿವರಿಸುತ್ತದೆ. ಭೂಮಿಯ ಎಲ್ಲಾ ಮೂಲೆಗಳಲ್ಲಿನ ಜನರಿಗೆ ಕಲ್ಪನೆಗಳು ಮತ್ತು ಅನುಭವಗಳನ್ನು ಏಕಪ್ರಕಾರವಾಗಿ ಹರಡುವ ಪ್ರಕಿಯೆಯಾಗಿದೆ. ಪರಿಸರ ಪ್ರಜ್ಞೆಯ ಭಾಗವಾಗಿ ಜಾಗತೀಕರಣದ ಪರಿಕಲ್ಪನೆಯನ್ನು ನೋಡುವುದಾದರೆ ಈ ಪ್ರಕ್ರಿಯೆಯಲ್ಲಿ ಪ್ರಾದೇಶಿಕ ಸಂಸ್ಕೃತಿಗಳು, ಸ್ಥಳೀಯ ಸ್ವಯಂ ನಿರ್ಣಯಗಳು ಪ್ರಾಧಾನ್ಯತೆ ಹೊಂದದೆ ನಶಿಸುತ್ತವೆ. ಜಾಗತಿಕವಾಗಿ ಒಪ್ಪಿತವಾದ ಒಂದೆಂದು ಭಾವಿಸಿಕೊಳ್ಳುವ ನೀತಿ ನಿಯಮಗಳೇ ಬಹುತೇಕವಾಗಿ ಅಧಿಪತ್ಯವಾಗುತ್ತವೆ.

ಜಾಗತೀಕರಣವು ಇಂದು ನಮ್ಮ ಜೀವನಶೈಲಿಯ ಮೇಲೆ ದೂರದ ಪರಿಣಾಮಗಳನ್ನು ಬೀರಿದೆ. ಇದು ತಂತ್ರಜ್ಞಾನ ಸುಧಾರಿತ ಸಂವಹನ ಮತ್ತು ನಾವೀನ್ಯತೆಗೆ ವೇಗವಾಗಿ ಪ್ರವೇಶಿಸಲು ಕಾರಣವಾಗಿದೆ. ವಿಭಿನ್ನ ಸಂಸ್ಕೃತಿಗಳ ಜನರನ್ನು ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದರ ಹೊರತಾಗಿ ಆರ್ಥಿಕ ಸಮೃದ್ಧಿಯಲ್ಲಿ ಹೊಸ ಯುಗವನ್ನೇ ಸೃಷ್ಟಿಮಾಡಿದೆ ಮತ್ತು

ಅಭಿವೃದ್ಧಿಯ ದೊಡ್ಡ ಮಾರ್ಗಗಳನ್ನು ತೆರೆದಿದೆ. ಆದಾಗ್ಯೂ ಜಾಗತೀಕರಣವು ಕೆಲವು ಪ್ರದೇಶಗಳ ಬಗ್ಗೆ ಅತಿಯಾದ ಕಳವಳವನ್ನು ಸೃಷ್ಟಿಸಿದ್ದು, ಇದರಲ್ಲಿ ಪ್ರಮುಖವಾದ ಅಂಶವೆಂದರೆ ಪರಿಸರದ ಮೇಲೆ ಬೀರಿರುವ ಅದರ ತೀವ್ರತೆ ಮತ್ತು ಪ್ರಭಾವ. ಇದರಿಂದಾಗಿ ಜಾಗತೀಕರಣವು ಪರಿಸರವಾದದ ಚರ್ಚೆಗಳಲ್ಲಿ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿದ್ದು, ಹಸಿರು ಕಾರ್ಯಕರ್ತರು ಅರ್ಥಾತ್ ಪರಿಸರವಾದಿಗಳು ಅದರ ದೂರದ ಪರಿಣಾಮಗಳನ್ನು ಎತ್ತಿ ತೋರಿಸಿದ್ದಾರೆ. ಜಾಗತೀಕರಣವು ಅತಿಯಾದ ಉತ್ಪನ್ನಗಳ ಬಳಕೆ ಹೆಚ್ಚಳಕ್ಕೆ ಕಾರಣವಾಗಿದೆ ಎಂಬುದು ಪರಿಸರವಾದಿಗಳ ನಿಲುವು. ಇದು ಪರಿಸರದ ಮೇಲೆ ಪರಿಣಾಮ ಬೀರಿದ್ದು, ಹೆಚ್ಚಿನ ಬಳಕೆಯು ಸರಕು ಉತ್ಪಾದನೆಯಲ್ಲಿನ ಹೆಚ್ಚಳಕ್ಕೆ ಕಾರಣವಾಗುತ್ತದೆ. ಇದರಿಂದಾಗಿ ಪರಿಸರದ ಮೇಲೆ ಅದರ ಒತ್ತಡ ತಾನೇತಾನಾಗಿ ಹೆಚ್ಚಾಗುವುದು.

ಜಾಗತೀಕರಣವು ಕಚ್ಚಾವಸ್ತುಗಳ ಪೂರೈಕೆ ಮತ್ತು ಸಾಗಣಿಕೆಗೆ ಭೂಪ್ರದೇಶವನ್ನು ಅವಲಂಬಿಸುತ್ತದೆ. ಮೊದಲು ಸ್ಥಳೀಯವಾಗಿ ಬೆಳೆದ ಬೆಳೆಯನ್ನು ಆಹಾರವಾಗಿ ಬಳಸುತ್ತಿದ್ದರು. ಇಂದು ಜಾಗತೀಕರಣದ ಪ್ರಭಾವದಿಂದಾಗಿ ವಿದೇಶದಲ್ಲಿ ಅಭಿವೃದ್ಧಿಪಡಿಸಿದ ಉತ್ಪನ್ನಗಳನ್ನು ಗ್ರಾಹಕರು ಬಳಸುತ್ತಾರೆ. ಶಬ್ದಮಾಲಿನ್ಯ, ಭೂಪ್ರದೇಶದ ಅತಿಕ್ರಮಣ ಪ್ರವೇಶ ಇವು ಪರಿಸರ ಕಾಳಜಿಗೆ ಕಾರಣವಾಗಿದೆ. ನವೀಕರಿಸಲಾಗದ ಶಕ್ತಿ ಸಂಪನ್ಮೂಲಗಳ ಮೇಲೆ ಸಾರಿಗೆ ಕೂಡ ತೀವ್ರವಾದ ಒತ್ತಡವನ್ನು ನಿರ್ಮಾಣಮಾಡುತ್ತಿದೆ.

ಕೆಲವು ಅನಿಲಗಳು ಹೀರುಮನೆ ಪರಿಣಾಮವನ್ನು ಸೃಷ್ಟಿಸಿದೆ. ಉತ್ಪಾದನೆಯ ಪರಿಣಾಮವಾಗಿ ಕೈಗಾರಿಕಾ ತ್ಯಾಜ್ಯವನ್ನು ಹಡಗಿನಲ್ಲಿ ಹೊತ್ತಿಸಿ ಕಡಲಿನಲ್ಲಿ ಸುರಿಸಲಾಗುತ್ತಿದೆ. ಇದರ ಪರಿಣಾಮ ಅಂಡರ್‌ವಾಟರ್ ಅಪಾರ ಜೀವಿಗಳನ್ನು ನಿರ್ನಾಮ ಮಾಡಿರುವುದಲ್ಲದೆ ಸಾಗರವು ಅನೇಕ ಹಾನಿಕಾರಕ ಲವಣಾಂಶಗಳಿಂದ ಕೂಡಿದ್ದಾಗಿದೆ. ಇವೆಲ್ಲವೂ ಪರಿಸರ ವ್ಯವಸ್ಥೆಗೆ ಜಾಗತೀಕರಣವು ಉಂಟುಮಾಡುತ್ತಿರುವ ಪರಿಣಾಮಗಳ ಉದಾಹರಣೆಗಳಾಗಿವೆ. **'ಜಾಗತೀಕರಣದ ವಿರೋಧದ ಚಿಂತನೆಯೇ ಪರಿಸರ ಪ್ರಜ್ಞೆಯೇ?'** ಎಂಬ ಆರಂಭಿಕ ಪ್ರಾಕ್‌ಕಲ್ಪನೆಗೆ ಅಥವಾ ಸಮಸ್ಯಾ ಹೇಳಿಕೆಗೆ ಕೃತಿಕಾರರ ಅಭಿಪ್ರಾಯ ಹೊರತು ಪಡಿಸಿ ಹೇಳುವುದಾದರೆ ಈ ಎಲ್ಲಾ ವಿವರಗಳು ಒಂದಿಷ್ಟು ಪುಷ್ಟಿನೀಡುವವು. ಆದಾಗ್ಯೂ ಕೃತಿಕಾರರ ಕೃತಿಗಳಲ್ಲಿ ಈ ಬಗ್ಗೆ ಇರಬಹುದಾದ ಆಲೋಚನೆಗಳನ್ನು ಮತ್ತು ಚಿಂತನಾಕ್ರಮಗಳನ್ನು ಅವಲೋಕಿಸಿ ಅರ್ಥೈಸಿಕೊಳ್ಳುವುದು ಪ್ರಸ್ತುತವಾಗುವುದು.

೨.೪ ಅಭಿವೃದ್ಧಿ ನೆಲೆಯ ಪರಿಸರ ಪ್ರಜ್ಞೆಯಲ್ಲಿ ಕೃತಿಕಾರರ ಕೃತಿಗಳು

೨.೪.೧ ತೇಜಸ್ವಿ ಅವರ ಕೃತಿಗಳು:

ಅಂಡಮಾನ್ ದ್ವೀಪವನ್ನು ನೋಡಿದಾಗ "ಅಂಡಮಾನ್ ಪರಿಸರ ತೀರಾ ಸೂಕ್ಷ್ಮವಾಗಿರುವಂತೆ ತೋರುತ್ತದೆ. ಪೂರ್ವಾಪರ ಪ್ರಜ್ಞೆಯಲ್ಲಿದೆ. ಇಲ್ಲಿ ಏನು ಮಾಡಿದರೂ ಅಪಾಯಕರ ಎಂಬುದು ತಜ್ಞರ ಅಭಿಪ್ರಾಯ" ಎನ್ನುವುದರೊಂದಿಗೆ ಅಂಡಮಾನ್ ಅಭಿವೃದ್ಧಿ ಬಗ್ಗೆ ಕೃಷಿ ವಿಜ್ಞಾನಿ ಶರ್ಮಾ ಹೇಳುವ **"ಅಂಡಮಾನಿನ ಈ ಅಮೂಲ್ಯ ಸಾಗರ ಮತ್ತು ವನ್ಯಸಂಪತ್ತನ್ನು ಉಳಿಸಿಕೊಳ್ಳಬೇಕೆಂದು ಸರ್ಕಾರಕ್ಕೆ ಏನಾದರೂ ಇಷ್ಟ ಇದ್ದರೆ, ನಮ್ಮ**

ಸಾಂಪ್ರದಾಯಕ ಅಭಿವೃದ್ಧಿ ಕಲ್ಪನೆಗಳನ್ನು ಅಂಡಮಾನಿನ ಮೇಲೆ ಹೇರಬಾರದು. ಗ್ಯಾಲಪಾಗೋಸ್ ದ್ವೀಪವನ್ನು ಹೇಗೆ ಸಂರಕ್ಷಿಸಲಾಗುತ್ತಿದೆಯೋ ಹಾಗೆ ಇದನ್ನೂ ಸಂರಕ್ಷಿಸಿ ಅರಣ್ಯ ಮತ್ತು ಸಾಗರ ಉತ್ಪನ್ನಗಳ ಆದಾಯ ಇಷ್ಟಕ್ಕೆ ಅಂಡಮಾನಿನ ವಹಿವಾಟುಗಳನ್ನು ಸೀಮಿತಗೊಳಿಸಬೇಕು. ಈ ಸಂಪನ್ಮೂಲಗಳು ಹಾಳಾಗದಂತೆ ಸಂರಕ್ಷಿಸುತ್ತಲೇ ಇವುಗಳಿಂದ ಆದಾಯ ಪಡೆಯುವ ವಿಧಾನಗಳನ್ನು ನಾವು ಕಂಡುಕೊಳ್ಳಬೇಕು” ಎಂಬ ಮಾತುಗಳೆಲ್ಲವೂ ತೇಜಸ್ವಿಗೆ ಶರ್ಮಾ ಸರಿಯಾಗಿಯೇ ಯೋಚಿಸುತ್ತಿದ್ದಾರೆ ಅನಿಸುತ್ತದೆ. ಆ ಸಂದರ್ಭದಲ್ಲಿ ತೇಜಸ್ವಿ ಹೀಗೆ ಹೇಳುತ್ತಾರೆ **“ಆದರೆ ಭಾರತದಲ್ಲಿಯೇ ಅಭಿವೃದ್ಧಿಯ ಹೆಸರಿನಲ್ಲಿ ನಾವು ಮಾಡುತ್ತಿರುವ ಅನಾಹುತಗಳನ್ನು ಗಮನಿಸಿದರೆ, ರಾಜೀವ್ ಗಾಂಧಿ ನಮ್ಮ ಜನತೆಗೆ ಹತ್ತಿಸಿರುವ ಇಪ್ಪತ್ತೊಂದನೆಯ ಶತಮಾನದ ಪಿತ್ತ ನೋಡಿದರೆ ಇನ್ನು ಹತ್ತು ವರ್ಷಗಳೊಳಗಾಗಿ ಅಂಡಮಾನ್ ನಾಶವಾಗಬಹುದೆಂದು ನನಗನ್ನಿಸುತ್ತದೆ.”**(೧೨)ಎಂದು. ತೇಜಸ್ವಿ ಅವರ ವಿಷಾದವು ಭಾರತ ದೇಶದಲ್ಲಿ ಅಭಿವೃದ್ಧಿ ಸಾಗುತ್ತಿರುವ ರೀತಿ, ಜನತೆಗೆ ಅದು ಹಚ್ಚಿರುವ ಕಿಚ್ಚು ಮತ್ತು ಒಂದು ಪ್ರದೇಶದ ಗಾಢ ನೈಸರ್ಗಿಕ ಪರಿಸರದ ಉಳಿವಿಗೆ ರಾಜಕೀಯ ಚಿಂತನೆಯೊಂದು ಮುಳುವಾಗುತ್ತಿರುವ ಬಗೆಯನ್ನು ಒಳಗೊಂಡಿದೆ. ತೇಜಸ್ವಿ ಅವರಿಗೆ ಮುಂದಿನ ಹತ್ತು ವರ್ಷಗಳ ಬಗ್ಗೆ ಭವಿಷ್ಯ ಊಹಿಸುವ ಕಲ್ಪನಾಶಕ್ತಿ ಇದ್ದಿತು. ಅಭಿವೃದ್ಧಿಗಾಗಿ ಆಧುನೀಕರಣವಾಗಲಿ ಜಾಗತೀಕರಣವಾಗಲಿ ಬಯಸುತ್ತಿರುವ ಆದ್ಯತೆಯ ವಲಯಗಳನ್ನು ಅರಿತಿದ್ದರು. ಪ್ರವಾಸ ಕಥನದಲ್ಲಿ ಅಗತ್ಯಾನುಸಾರ ಪ್ರಶ್ನೆಗಳನ್ನು ಎತ್ತುವ ಮೂಲಕ ವಾಸ್ತವ ಸ್ಥಿತಿಯ ಅಭಿವೃದ್ಧಿ ಚಿಂತನೆಗಳಿಗೆ ಪರೋಕ್ಷವಾಗಿ ಕಿಚ್ಚು ಹಚ್ಚುತ್ತಿದ್ದರು.

‘ಜುಗಾರಿ ಕ್ರಾಸ್’ ಕಲಾ ಪ್ರತಿಮೆಯಲ್ಲಿ ಮೇದರಹಳ್ಳಿಯ ಅವಸಾನವನ್ನು ಕಾಣತ್ತೇವೆ. ಸಮೃದ್ಧವಾದ ನಿತ್ಯಹರಿದ್ವರ್ಣ ಕಾಡುಗಳ ಮಧ್ಯದಲ್ಲಿದ್ದ ಇದ್ದಲೂರಲ್ಲಿನ ಸಾವಿರಾರು ಚದರಮೈಲಿಯಲ್ಲಿ ಬೆಳೆದಿದ್ದ ಬಿದಿರನ್ನು ಬಳಸಿ ಬುಟ್ಟಿ ಕುಕ್ಕೆ ತಯಾರಿಸುವ ಉದ್ಯಮವು ಆರಂಭವಾಗಿತ್ತು. ಯುರೋಪಿಯನ್ನರು ಕಾಫಿ ತೋಟ ಮಾಡುತ್ತಿದ್ದ ಕಾಲದಲ್ಲಿ ಕಾಫಿ ಸಸಿ ಬೆಳೆಸಲು ಇಲ್ಲಿ ತಯಾರಾಗುತ್ತಿದ್ದ ಚಿಕ್ಕ ಚಿಕ್ಕ ಕುಕ್ಕೆಗಳನ್ನು ಬಳಸುತ್ತಿದ್ದರು. ಮೇದರಹಳ್ಳಿಯ ಸಾವಿರಾರು ಕುಕ್ಕೆಗಳು ಎಲ್ಲಾ ಕಡೆ ಬಿಕರಿಯಾಗುತ್ತಿದ್ದವು. ಹೀಗೆ ಸದೃಢವಾಗಿದ್ದ ಉದ್ಯಮಕ್ಕೆ ಬಿದ್ದ ದೊಡ್ಡ ಪೆಟ್ಟೆಂದರೆ ‘ಪ್ಲಾಸ್ಟಿಕ್ ಚೀಲ’ಗಳದ್ದು. ಕೆಲವೇ ವರ್ಷಗಳಲ್ಲಿ ಬಿದಿರಿನ ಕುಕ್ಕೆಯ ಸ್ಥಾನವನ್ನು ಪ್ಲಾಸ್ಟಿಕ್ ಚೀಲಗಳು ಆಕ್ರಮಿಸಿಬಿಟ್ಟವು. ಕುಕ್ಕೆಗಳ ವ್ಯಾಪಾರವು ಕಡಿಮೆಯಾಯಿತು. ಅದೇ ಸಮಯದಲ್ಲಿ ಬಿದಿರಿಗೆ ನೆರೆಯೂ ಬಂದು, ಸಾವಿರಾರು ಮೈಲಿಗಳ ವಿಸ್ತೀರ್ಣದಲ್ಲಿದ್ದ ಬಿದಿರು ಮುದಿಯಾಗಿ ತೆನೆಬಿಟ್ಟು, ಹೂವಾಗಿ, ಬಿದಿರಕ್ಕಿ ಸುರಿಯತೊಡಗಿತು. ಎರಡೂ ರೀತಿಯಲ್ಲಿ ಆಘಾತಕ್ಕೊಳಗಾದ ಜನ ಆ ಊರನ್ನು ಬಿಟ್ಟು ಬೇರೆ ಕಡೆ ವಲಸೆ ಹೋದರು. ಪ್ಲಾಸ್ಟಿಕ್ ಪರಿಸರಕ್ಕೆ ಮಾರಕವಾದರೂ ಅದೇ ಸರ್ವವ್ಯಾಪಿಯಾದದ್ದು ಹಾಗೂ ಅನೇಕ ಹಳ್ಳಿ, ಮನೆತನಗಳ, ಬುಡಕಟ್ಟುಗಳ ನಾಶಕ್ಕೂ ಅದೇ ಕಾರಣವಾಯಿತೆನ್ನುವುದನ್ನು ಇಲ್ಲಿ ಗಮನಿಸಬೇಕಿದೆ. ಜೊತೆಗೆ –“ಏಕೆ ಕೋಟೆ ಕೊತ್ತಲುಗಳು ಏಳುತ್ತವೆ. ನಾಶವಾಗುತ್ತವೆ? ಸೂರ್ಯ ಮುಳುಗದ ಸಾಮ್ರಾಜ್ಯಗಳೂ ಚಕ್ರಾಧಿಪತ್ಯಗಳೂ ನಿಧಾನವಾಗಿ ಚರಿತ್ರೆಯ ಪುಟಗಳಲ್ಲಿ ಅಸ್ತಂಗತವಾಗುತ್ತವೆ. ತಲೆ ಎತ್ತಿದ್ದು ಮತ್ತೆ ಧರೆಗುರುಳಲೇ ಬೇಕೆಂಬ ಜಡನಿಯಮವೋ? ಅಥವಾ ಕಾರ್ಯಕಾರಣ ಸಂಬಂಧಗಳ ಕ್ರಿಯಾವಳಿಯೋ?”(೧೩) ಎಂಬ ತೇಜಸ್ವಿ ಅವರು

ಎತ್ತುವ ಪ್ರಶ್ನೆಗಳು ಅನೇಕ ಬಗೆಯ ಚಿಂತನೆಗೆ ಈಡು ಮಾಡುವುದಲ್ಲದೆ ಕಾರಣಗಳು ರಹಸ್ಯಗಳಾಗಿಯೇ ಉಳಿಯುತ್ತವೆ.

ಆಧುನೀಕರಣವು ಪರಂಪರಾಗತವಾಗಿ ಬೆಳೆದುಬಂದಿದ್ದ ಒಂದು ಸಮುದಾಯದ ವೃತ್ತಿ ಎನ್ನುವುದಕ್ಕಿಂತ ಅದನ್ನೇ ಆಶ್ರಯಿಸಿ ಬದುಕು ಕಟ್ಟಿಕೊಂಡಿದ್ದ ಕುಕ್ಕೆ ಬುಟ್ಟಿಯ ವೃತ್ತಿ ಬದುಕೊಂದನ್ನು ಆವಿಷ್ಕೃತವಾಗಿ ಆವರಿಸಿದ 'ಪ್ಲಾಸ್ಟಿಕ್' ಕಲ್ಪನೆಯೊಂದು ಗ್ರಾಮದಲ್ಲಿ ಗಟ್ಟಿಯಾಗಿ ತಳವೂರಿ ಏಕ್‌ದಮ್ ಗುಡಿ ಕೈಗಾರಿಕೆಯನ್ನು ಕಿತ್ತುಕೊಂಡಿದ್ದು ಮಾತ್ರವಲ್ಲದೆ ಕಾಲಕ್ರಮೇಣ ಆ ಸಮುದಾಯವನ್ನೇ ನಿರಾಶ್ರಿತರನ್ನಾಗಿ ಮಾಡಿ ವಲಸೆಗೆ ಅಟ್ಟಿದ್ದನ್ನು ತೇಜಸ್ವಿ 'ಜಗಾರಿ ಕ್ರಾಸ್' ಕಾದಂಬರಿಯಲ್ಲಿ ಚಿತ್ರಿಸುವ ಮೂಲಕ ಮಾನವನ ಅಭಿವೃದ್ಧಿಯ ಚಿಂತನಾಕ್ರಮವನ್ನು ಒರೆಗೆ ಹಚ್ಚಿದ್ದಾರೆ. ಪ್ರಾಕೃತಿಕ ಮತ್ತು ನೆಲಮೂಲ ಸಾಂಸ್ಕೃತಿಕ ಪರಿಸರದ ಗುಡಿ ಕೈಗಾರಿಕೆಯಾಗಿದ್ದ ಕುಕ್ಕೆ-ಬುಟ್ಟಿಯ ಕೌಶಲಗಳು ಆಧುನೀಕತೆಯ ಪ್ರಭಾವ ವಲಯದಲ್ಲಿ ಸಿಕ್ಕು ಅವಸಾನಕ್ಕೆ ತಳ್ಳಲ್ಪಟ್ಟಿದ್ದನ್ನು ತೇಜಸ್ವಿ ಚಿತ್ರಿಸಿದ್ದಾರೆ. ಗ್ರಾಮಜೀವನದ ವಿಘಟನೆಯ ಆಶಯವನ್ನು ಹೊಂದಿರುವ 'ಚಿದಂಬರ ರಹಸ್ಯ' ಕಾದಂಬರಿಯ ಕ್ರಿಯೆಗಳು ಎರಡು ಸ್ತರಗಳಲ್ಲಿ ನಡೆಯುತ್ತವೆ. ಮೊದಲನೆಯದು ಘಟನಾವಳಿಗಳ ಭಾಗವಾಗಿ ಬರುವ ಪಾತ್ರಗಳ ಚಿತ್ರಣ; ಎರಡನೆಯದು ಭಾಷೆಯ ಮೂಲಕ ಕಾದಂಬರಿಯ ಅನ್ವೇಷಣೆಗೆ ತೊಡಗುವ ಕ್ರಮ. ಕೆಸರೂರಿನ ಎರಡು ಗುಂಪುಗಳ ನಡುವಿನ ದ್ವೇಷ-ಅಪನಂಬಿಕೆಗಳು ಹಳ್ಳಿಯ ಜೀವನವನ್ನು ಕಲುಷಿತಗೊಳಿಸಿ, ಜಾತಿಯ ದಂಗೆಗಳನ್ನು ಪ್ರಚೋದಿಸಿ, ವಿನಾಶಕ್ಕೆ ಕಾರಣವಾಗುತ್ತವೆ. ರಾಮಚಂದ್ರ ಬಯಸಿದ ಬದಲಾವಣೆಯು ಅವನು ಆರಿಸಿಕೊಂಡ ದುರ್ಬಲ ಯುವಕರಿಂದ ಸಾಧ್ಯವಾಗುವುದಿಲ್ಲ. ಹೇರಳವಾದ ಅರಣ್ಯ ಸಂಪತ್ತಿನಿಂದ ಆವೃತ್ತವಾದ ಕೆಸರೂರಿನಲ್ಲಿ ಸರ್ಕಾರದವರೇ ಬಂದು ಇಲ್ಲಿ ಉತ್ಪನ್ನವಾಗುವ ಏಲಕ್ಕಿಯನ್ನು ಹರಾಜು ಹಾಕುತ್ತಿರುತ್ತಾರೆ. ಸ್ಥಳೀಯ ರಾಜಕಾರಣಿಗಳ ಕುತಂತ್ರದಿಂದ ಊರ ಸುತ್ತಮುತ್ತಲೂ ಏಲಕ್ಕಿ ಬೆಳೆಯನ್ನು ಅಭಿವೃದ್ಧಿಪಡಿಸುವ ನೆಪದಲ್ಲಿ ನಿಯಂತ್ರಿತ ಅರಣ್ಯ ಸಂಪೂರ್ಣವಾಗಿ ಕಣ್ಮರೆಯಾಗುತ್ತದೆ. ಅರಣ್ಯ ನಾಶವಾದಂತೆ ಏಲಕ್ಕಿ ಉತ್ಪಾದನೆಯು ಸಹ ಕ್ಷೀಣಿಸುತ್ತಾ ಹೋಗುತ್ತದೆ. ನಿಸರ್ಗ ಶೋಷಣೆಯಲ್ಲಿ ಹಂತ ಹಂತವಾದ ಮನುಷ್ಯನ ವಿಧ್ವಂಸ ಕೃತ್ಯಗಳು ಕೇವಲ ನಿಸರ್ಗವನ್ನು ಶೋಷಿಸದೆ ಮನುಷ್ಯನ ಜೀವನ ವಿಧಾನ, ಸಾಮಾಜಿಕತೆ, ಪರಂಪರೆಯ ಕೌಶಲವನ್ನೇ ಕಣ್ಮರೆಯಾಗಿಸಿ ಅಪಾಯದ ಅಂಚಿಗೆ ಅವನನ್ನೇ ತಂದು ನಿಲ್ಲಿಸಿರುವುದನ್ನು ಹಾಗೂ ಊರಲ್ಲಿ ಹತ್ತಿ ಉರಿಯುವ ಕೇಡಿನ ಕಿಚ್ಚಿನ ಮೂಲಕ ಗ್ರಾಮಮುಖಿ ಆಲೋಚನೆಗಳೇ ದೂರವಾಗುತ್ತಿರುವ ವಾಸ್ತವವನ್ನು ತೇಜಸ್ವಿ ಹತ್ತಿರವಾಗಿಸುತ್ತಾರೆ.

ಭಾರತದಲ್ಲಿ ವಿಕೇಂದ್ರೀಕರಣ ಗ್ರಾಮಮಟ್ಟದಲ್ಲಿ ಹೋರಾಟದಿಂದಲೇ ಸ್ವಯಂಸ್ಫೂರ್ತಿಯಿಂದ ಸಂಭವಿಸಬೇಕಿದೆ. ಜಾಗತೀಕರಣ, ಖಾಸಗೀಕರಣದ ಪ್ರಭಾವದಿಂದಾಗಿ ಸ್ಪರ್ಧಾತ್ಮಕ ಕ್ರಿಯಾಶೀಲ ಪ್ರಪಂಚ ಸೃಷ್ಟಿಯಾಗುತ್ತಿದ್ದು ಗ್ರಾಹಕ ಸ್ನೇಹಿ ವ್ಯವಸ್ಥೆ ಸೃಷ್ಟಿಯಾಗಬೇಕೆಂದು ಆಶಿಸಿತ್ತಾರೆ. "ಭಾರತದ ರೈತರಾಗಲಿ ಕಾರ್ಮಿಕರಾಗಿರಲಿ ಅವರು ಬಡವರಾಗಿರಬಹುದು, ಅನಕ್ಷರಸ್ಥರಾಗಿರಬಹುದು ಆದರೆ ಜಗತ್ತಿನ ಯಾವುದೇ ದೇಶದ ಜನರಿಗಿಂತ ಕೀಳಾದವರೆಂದು ನನಗೆ ಎಂದೂ ಅನ್ನಿಸಿಲ್ಲ.

ಜಾಗತೀಕರಣದ ಅಂತಾರಾಷ್ಟ್ರೀಯ ಸಮಸ್ಯೆಗಳು ನಮಗೆ ಇಷ್ಟೊಂದು ಕಠೋರವಾಗಿ ಕಾಣುತ್ತಿರುವುದಕ್ಕೆ ಮುಖ್ಯ ಕಾರಣಗಳಲ್ಲಿ ಒಂದು ಅಧಿಕಾರಶಾಹಿಯ ಅದಕ್ಷತೆ ಮತ್ತು ಇತಿಮಿತಿಯಿಲ್ಲದ ಭ್ರಷ್ಟತೆ. ಇನ್ನೊಂದು ಇವರ ಜೊತೆ ಎಲ್ಲಾ ಹಂತದಲ್ಲೂ ಶಾಮೀಲಾಗಿ ಜನರಿಗೆ ನಿರಂತರವಾಗಿ ಮೋಸ ಮಾಡುತ್ತಿರುವ ದನ ಕಾಯುವ ಯೋಗ್ಯತೆಯು ಇಲ್ಲದ ಭ್ರಷ್ಟ ರಾಜಕಾರಣಿಗಳು.”[೧೪] ಈ ಇಬ್ಬರೂ ಜಾಗತೀಕರಣದ ಸಂದರ್ಭ ಬಳಸಿಕೊಂಡು ದೇಶ ಹಾಳುಮಾಡುತ್ತಿದ್ದಾರೆ ಎನ್ನುತ್ತಾರೆ ತೇಜಸ್ವಿ

“ವಿಶ್ವದ ವಿವಿಧ ಪ್ರದೇಶ, ಜನಾಂಗಗಳನ್ನು ಇಂದು ಒಟ್ಟು ಗೂಡಿಸುವ ಯಾವುದೇ ಸಿದ್ಧಾಂತ ಕಾಣುತ್ತಿಲ್ಲ. ಯಾವ ದೇಶದಲ್ಲೂ ಒಂದು ಸೈದ್ಧಾಂತಿಕ ತಳಹದಿಯ ಸರ್ಕಾರ ಅಥವಾ ಆಡಳಿತ ಕಂಡುಬರುತ್ತಿಲ್ಲ. ಒಟ್ಟು ಗೂಡಿಸುವ ಶಕ್ತಿ ಇರುವುದೇ ಈ ಇಕಾಲಜಿಗೆ ಮಾತ್ರ ನೋಡಿ. ಅಮೇಜಾನ್ ಕಾಡು ನಾಶವಾದರೆ ಅದು ದಕ್ಷಿಣ ಅಮೆರಿಕಾಕ್ಕೆ ಮಾತ್ರ ಅಪಾಯ ಅಲ್ಲ, ಪ್ರಪಂಚಕ್ಕೆ ಅಪಾಯ. ಹಿಮಾಲಯ ಹಾಳಾದರೆ, ಪಶ್ಚಿಮ ಘಟ್ಟ ತೆಳ್ಳಗಾದರೆ”...ಎಂಬ ವಿಶ್ಲೇಷಣೆ ತೇಜಸ್ವಿಯವರದ್ದಾಗಿತ್ತು. ತೇಜಸ್ವಿ ಅವರಿಗೆ ಅರಣ್ಯ ಆಶ್ರಿತ ಸಮುದಾಯಗಳ ಬಗ್ಗೆ ಸಹಾನುಭೂತಿಯಿತ್ತು. ಗಣಿಗಾರಿಕೆಯ ಅಭಿವೃದ್ಧಿಯು ಪರ್ವತ ಪ್ರದೇಶವನ್ನೇ ಕೊರೆಯುವ, ಮತ್ತಷ್ಟು ಮತ್ತಷ್ಟು ಬಗೆಯುವ, ಖಾಲಿಯಾದಷ್ಟು ಮತ್ತೊಂದು ಪರ್ವತ ದಿಣ್ಣೆಗಳನ್ನೇ ಕರಗಿಸುತ್ತಾ ಹೋಗುವ ಒಂದು ಪ್ರಕ್ರಿಯೆಯಾಗಿತ್ತು. ಪ್ರಕೃತಿಯ ಸಮಗ್ರತೆ ಮತ್ತು ಅದರ ಅಸ್ಥಿತ್ವ ಕುರಿತಾಗಿ ಆಲೋಚಿಸುವ ಸಿದ್ಧಾಂತವನ್ನು ಹೊಂದಿದ ಸರ್ಕಾರದ ನಿರೀಕ್ಷೆಯ ಕನಸು ತೇಜಸ್ವಿ ಅವರಲ್ಲಿತ್ತು. ಸರ್ಕಾರಿ ಅಧಿಕಾರಿಗಳ, ರಾಜಕಾರಣಿಗಳ ಸ್ವಾರ್ಥ ದುರಾಡಳಿತದಿಂದ ಪರಿಸರ ನಿರಂತರವಾಗಿ ನಶಿಸುತ್ತಿದ್ದು ಇದರ ವಿರುದ್ಧವಾಗಿ ಉಗ್ರ ಕಾನೂನು ಅವಶ್ಯಕವೆಂದು ಅಭಿಪ್ರಾಯಿಸಿದವರು. ಸರ್ಕಾರಿ ಅಧಿಕಾರಿಗಳು ಮತ್ತು ಕಂಟ್ರ್ಯಾಕ್ಟರ್‌ಗಳ ಕಯ್ಯಿಂದ ಚೀತ್ಕರಿಸಿಕೊಂಡು ಮುಗಿಲೆತ್ತರದ ಮರಗಳು ಧರೆಗುರುಳುತ್ತಿವೆ. ಕನಿಷ್ಟ ಪ್ರಮಾಣದ ನೈತಿಕತೆಯು ಇವರಿಗಿಲ್ಲವೆಂದು ಮೂದಲಿಸುವುದನ್ನು ಗುರುತಿಸಬಹುದಾಗಿದೆ. ನಿರುದ್ಯೋಗಕ್ಕೆ ಪರಿಹಾರವೆಂಬಂತೆ ಸಾಗುವನಿ ಗಿಡಗಳ ಸಿದ್ಧಾಂತವನ್ನು ತೇಜಸ್ವಿ ಮತ್ತು ಲಂಕೇಶ್ ಸೇರಿ ಮಂಡಿಸಿರುವುದನ್ನು ನೆನಪಿಸಿಕೊಳ್ಳಬಹುದಾಗಿದೆ. ಪರಿಸರ ಹೋರಾಟ, ಜಾತಿ ವಿನಾಶ ಹೋರಾಟ, ಸಾಮಾಜಿಕ ಹೋರಾಟ ಹಾಗೂ ರೈತ ಚಳುವಳಿಯ ಯಶಸ್ಸಿನಿಂದ ಪ್ರೇರಿತರಾದ ಸಮಾನ ಮನಸ್ಕರರೆಲ್ಲರೂ ಸೇರಿ ‘ಪ್ರಗತಿ ರಂಗ’ ಎಂಬ ಸಮಾಜಮುಖಿ ಆಶಯವುಳ್ಳ ಹೊಸಪಕ್ಷ ಸ್ಥಾಪನೆಗೆ ಮುಂದಾದುದನ್ನು ಸ್ಮರಿಸಬಹುದಾಗಿದೆ. ಅಭಿವೃದ್ಧಿ ಕೇವಲ ಉಳ್ಳವರ ಪಾಲಲ್ಲ. ಅದು ಎಲ್ಲರಿಗೂ ದಕ್ಕಬೇಕು. ಪರಿಸರವನ್ನು ಬಗ್ಗು ಬಡಿಯುವಂತಹ ಅಭಿವೃದ್ಧಿಯ ಕಲ್ಪನೆಗೆ ತೇಜಸ್ವಿ ಅವರಲ್ಲಿ ಯಾವತ್ತೂ ತೀವ್ರ ವಿರೋಧವಿತ್ತು.

ಒಂದು ನದಿ, ಹಳ್ಳ ಕೆಂಪಗೆ ಹರಿದರೂ ತೇಜಸ್ವಿ ಅವರಿಗೆ ಒಂದು ರೀತಿಯ ಆತಂಕವಾಗುತ್ತಿತ್ತು. ಕುದುರೆಮುಖ ಪರ್ವತ ಪ್ರದೇಶದಲ್ಲಿ ಗಣಿಗಾರಿಕೆ ಆರಂಭವಾಗಿ ಅದರ ವಿರುದ್ಧ ಹೋರಾಟಗಳು ಚುರುಕಾದಾಗ ತೇಜಸ್ವಿ ಅದನ್ನು ಬೆಂಬಲಿಸಿದರು. ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮ್ಮೆ ಹೂಡಿದಾಗ ಅದಕ್ಕೆ ಅವರು ಸಹಿ ಹಾಕಿದರು. ಈ ಸಂದರ್ಭದಲ್ಲಿ “ನೀವೂ ಸಹಿ ಹಾಕಿ ಸಾರ್ ಎಂದಾಗ ಅವರ ಮೊದಲ ಪ್ರಶ್ನೆ

ಆ ಬೆಟ್ಟದಲ್ಲಿರೋರು ಸಹಿ ಹಾಕಿದಾರೇನ್ರಿ? ಅದು ನಾಶವಾದರೆ ಮೊದ್ಲು ಬಿಸಿ ತಾಕೋದೇ ಅವರ್ಗೆ, ಅವರು ಹಾಕಿದ್ರೆ ನಾನೂ ಹಾಕ್ತೀನಿ"[೧೫] ಎಂದು ನೇರವಾಗಿ ಹೇಳಿದವರು. ಸಂವಾದದಲ್ಲಿ ನಡೆದ ಪ್ರಶ್ನೋತ್ತರದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನ ಸಮಸ್ಯೆಗೆ ಪರಿಹಾರವೇನು? ಎಂದು ಕೇಳಿದಾಗ **"ರಾಷ್ಟ್ರೀಯ ಉದ್ಯಾನಕ್ಕೆ ನಮ್ಮೆಲ್ಲರ ಬೆಂಬಲ ಇದೆ. ಅದಕ್ಕೆ ರಾಷ್ಟ್ರೀಯ ಉದ್ಯಾನದ ಸ್ಥಾನಮಾನ ನೀಡದಿದ್ದರೆ ಕುದುರೆಮುಖ ಕಬ್ಬಿಣ ಅದಿರು ಸಂಸ್ಥೆ(ಕೆಐಓಸಿಎಲ್)ಯನ್ನು ಅಲ್ಲಿಂದ ತೆಗೆಯಲು ಸಾಧ್ಯವಾಗುತ್ತಿರಲಿಲ್ಲ. ಇಡೀ ದೇಶದಲ್ಲಿ ೬೦೦ ಚದರ ಕಿ.ಮೀ. ಒಂದೇ ಕಡೆ ಇರುವ ಕಾಡು ಅದೊಂದೇ ಎನಿಸುತ್ತದೆ. ಕಾಡು ಉಳಿಬೇಕು ಎನ್ನುತ್ತೇವೆ. ಆದರೆ ಅದನ್ನು ಕಾರ್ಯಗತಗೊಳಿಸಲು ಮುಂದಾಗುತ್ತಿದ್ದಂತೆಯೇ ನೂರಾರು ದೂರು ಹೇಳೋದು ನಡೆಯುತ್ತಿದೆ. ಮಳೆಗಾಗಿ ಕಾಡು ಬೇಕೇ ಬೇಕು ಅನ್ನೋ ಜನ ನಮ್ಮ ಒತ್ತುವರಿ ಮಾತ್ರ ಹಾಗೇ ಇರಲಿ ಎಂದು ಹೇಳಿದರೆ ಹೇಗೆ? ಕಾಡಿನೊಳಗಿರುವವರೇ ಕಾಡನ್ನು ರಕ್ಷಿಸುತ್ತಾ ಬಂದಿದ್ದಾರೆ ಎನ್ನುವುದಾದರೆ, ಈಗ ರಕ್ಷಣೆಯಾಗುತ್ತಿರುವುದನ್ನು ನೋಡುತ್ತಿದ್ದೇವಲ್ಲ! ಹಳ್ಳಿ ಹಳ್ಳಿಗಳಲ್ಲಿ ಶ್ರೀಗಂಧದ ಕಳ್ಳರು ತಲೆ ಎತ್ತಿದ್ದಾರೆ. ಒಂದು ಹುಲಿ ಚರ್ಮಕ್ಕೆ ಲಕ್ಷ ರೂಪಾಯಿ ಸಿಗುತ್ತೆ ಅನ್ನೋದಾದ್ರೆ ಆ ಹುಲಿ ಕತೆ ಏನಾಗುತ್ತೆ ಎಂದು ಯೋಚಿಸಿ"**[೧೬] ಎಂಬ ತೇಜಸ್ವಿ ಅವರ ಅಭಿಪ್ರಾಯವು ಅರಣ್ಯ ಸಂರಕ್ಷಣೆಯ ವಿಚಾರದಲ್ಲಿ ದಿಕ್ಕುತಪ್ಪಿರುವ ಅರಣ್ಯ ಒತ್ತುವರಿ ಪ್ರದೇಶದ ಭಿನ್ನ ಜನಾಭಿಪ್ರಾಯಗಳನ್ನು ಅರ್ಥೈಸುವವು.

ತೇಜಸ್ವಿ ನಿಸರ್ಗ ಉಳಿಸುವ ಹೋರಾಟಗಳಲ್ಲೂ ಭಾಗಿಯಾಗಿ, ಕೇವಲ ಕಥೆ ಹೆಣೆದು ಮೌನವಾಗದೆ, ಅದರ ಉಳಿವಿಗೆ, ಅದಕ್ಕೆ ತಗುಲಿರುವ ಅಪಾಯಗಳ ನಿವಾರಣೆಗೆ ಮುಂದಾಗುತ್ತಾರೆ. ಕುದುರೆಮುಖ ಬೆಟ್ಟ ಪ್ರದೇಶದ ಗಣಿಗಾರಿಕೆಯ ವಿರುದ್ಧದ ಹೋರಾಟದಲ್ಲಿ ನ್ಯಾಯಾಲಯಕ್ಕೆ ಹೋಗಲೂ ಸಿದ್ಧರಾಗುವುದು, ಶುದ್ಧ ಸ್ಪಟಿಕದಂತ ಭದ್ರಾನದಿ ಕೆಂಪಾಗಿ ಹರಿಯುತ್ತಿರುವುದನ್ನು ಕಂಡು ಮರುಗುವುದು, ನೈರಾಶ್ಯ ಕಾಡಿದಾಗ **"ಈ ಪರಿಸರ ಹೋರಾಟವೊಂದು ಲೂಸಿಂಗ್ ಬ್ಯಾಟ್ಲ್ ಕಣ್ರೀ"**[೧೭] ಎಂದು ಉದ್ಗರಿಸಿ ಖಿನ್ನರಾದಂತೆ ಕಂಡರೂ, ಆ ಹೋರಾಟದ ಒಂದು ಶಕ್ತಿಯಾಗಿ ಮತ್ತೆ ಮೈಕೊಡವಿ ಏಳುವುದರಲ್ಲಿ ಅವರ ನಿಸರ್ಗ ಪ್ರೀತಿ ಎದ್ದು ಕಾಣುತ್ತದೆ. ಕುದುರೆಮುಖ ಕಂಪನಿ ೩೦ ವರ್ಷದ ಗುತ್ತಿಗೆ ಅವಧಿ ಪೂರೈಸಿದ ಮೇಲೂ ಮತ್ತೆ ನವೀಕರಿಸಿಕೊಳ್ಳಲು ಮಾಡಿದ ಪ್ರಯತ್ನ ಮುಂದುವರೆಸಿದಾಗ ತೇಜಸ್ವಿ ಆತಂಕಕ್ಕೆ ಒಳಗಾಗಿದ್ದರು ಎಂಬ ಮಾತಿದೆ. **"ಗಣಿಗಾರಿಕೆ ಮುಂದುವರೆಸಿದ್ರೆ ಭದ್ರಾನದಿ ನಾಶವಾಗುತ್ತೆ. ಅವಿವೇಕಿಗಳು, ನದಿ ಹೋದ್ರು ನಮ್ಗೆ ಅದಿರು ದೊರೆತರೆ ಸಾಕು ಅಂತಾರೆ"** ಎಂಬ ಉದ್ಗಾರಗಳು ತೇಜಸ್ವಿ ಅವರಿಂದ ಹೊರಬರುತ್ತಿದ್ದವು. ಸರ್ವೋಚ್ಚ ನ್ಯಾಯಾಲಯ ಅದಿರು ಉತ್ಖನನಕ್ಕೆ ತಡೆಹಾಕಿ ಕಂಪೆನಿಗೆ ಜಾಗ ಖಾಲಿಮಾಡಲು ಸೂಚಿಸಿದಾಗ, ಅತ್ಯಂತ ಸಂತಸ ಅನುಭವಿಸಿದವರು ತೇಜಸ್ವಿ.

ತೇಜಸ್ವಿ ಅವರಿಗೆ ಒಂದು ಹೋರಾಟವೆಂದರೆ ಯಾರೋ ಮಾಡೋದಲ್ಲ. ಪ್ರತ್ಯಕ್ಷವಾಗಿ ಮೊದಲು ಅಪಾಯ ಎದುರಿಸುವವರು ಕೈಜೋಡಿಸಬೇಕು. ಪಶ್ಚಿಮ ಘಟ್ಟ ಉಳಿಸಿ ಆಂದೋಲನ ನಡೆದಾಗ, ಕಳಸದಲ್ಲಿ ನಡೆದ ಸಾರ್ವಜನಿಕ ಸಭೆಗೆ ನೇರವಾಗಿ ಭಾಗವಹಿಸಿದವರು **"ಉಷ್ಣವಲಯದ ಕಾಡನ್ನು ಒಮ್ಮೆ ಕಳೆದುಕೊಂಡರೆ ಮತ್ತೆ ಅದೇ ರೀತಿ ಸಂಕೀರ್ಣ ವ್ಯವಸ್ಥೆ**

ಇರುವಂತೆ ಅದನ್ನೇ ಮತ್ತೆ ಸೃಷ್ಟಿ ಮಾಡಕ್ಕಾಗಲಿ, ಆ ಕಾಂಪ್ಲೆಕ್ಸಿಟಿ ನೆಡುತೋಪಿಂದ ಬರಲ್ಲ, ಒಂದ್ಸಲ ಹೋಯ್ತು ಅಂದ್ರೆ, ಪೂರ್ಣ ಹೋದ ಹಾಗೆ. ಒಂದು ಸಣ್ಣ ಪ್ರದೇಶದಲ್ಲಿ ಎಷ್ಟೊಂದು ರೀತಿ ಗಿಡ, ಮರ, ಕೀಟ, ಹಕ್ಕಿ, ಪ್ರಾಣಿ ಇವೆಲ್ಲ ಲಕ್ಷಾಂತರ ವರ್ಷದ ವಿಕಾಸ, ಬದಲಾವಣೆಗಳಿಂದ ಆಗಿದೆ. ನಾವು ಏನನ್ನು ಸೃಷ್ಟಿ ಮಾಡಕ್ಕಾಗಲ್ವೋ ಅದನ್ನು ನಾಶ ಮಾಡಬಾರ್ದು” ಎಂದು ಹೇಳುವ ಮೂಲಕ ಸಂಕೀರ್ಣತೆಯಿಂದ ಕೂಡಿದ ಕಾಡುಗಳ ಮರುಸೃಷ್ಟಿ ಮನುಷ್ಯನಿಂದ ಅಸಾಧ್ಯವಾದುದು. ನಶಿಸಿದ ಕಾಡುಗಳಲ್ಲಿ ಜೀವಿಸಿದ್ದ ವೈವಿಧ್ಯಮಯ ಜೀವಿಗಳನ್ನು ಮತ್ತೆ ಕಾಣಲಾಗುವುದೇ ಎಂಬ ಪರಿಸರ ಪ್ರಜ್ಞೆಯ ಆಲೋಚನೆಗಳು ಪಶ್ಚಿಮಘಟ್ಟದ ಪ್ರಾಮುಖ್ಯತೆ ಮತ್ತು ಸ್ವರೂಪದ ಗಂಭೀರತೆಯನ್ನು ಗ್ರಹಿಕೆಗೆ ತರುತ್ತವೆ. ಅರಣ್ಯ ಇಲಾಖೆ ತನ್ನ ಕೆಲಸ ಸರಿಯಾಗಿ ನಿರ್ವಹಿಸುತ್ತಿಲ್ಲ ಎಂಬ ಸಿಟ್ಟು ತೇಜಸ್ವಿಯವರಿಗೆ ಇತ್ತು. ಒಮ್ಮೆ ಅರಣಾಧಿಕಾರಿಯೊಬ್ಬರು ವನ್ಯಜೀವಿ ಸಪ್ತಾಹಕ್ಕೆ ಅವರನ್ನ ಆಹ್ವಾನಿಸಲು ಹೋದಾಗ ಅವರು ಹೇಳಿದ್ದು “..... ಅಲ್ರಿ, ಅಷ್ಟೊಂದು ಸಂಬಳ ತಗೋತೀರಾ, ಆದ್ರು ಆ ಭದ್ರಾ ಅಭಯಾರಣ್ಯ ಯಾಕ್ರಿ ಹಾಗಿದೆ, ಇನ್ನು ನಿಮ್ಜೊತೆ ಸೇರಿ ಬಂದು ಭಾಷಣ ಮಾಡಿದ್ರೆ ನನ್ನನ್ನು ಕಳ್ಳ ಅಂತಾರೆ ಜನ, ನೋಡ್ರಿ ಆ ಅಭಯಾರಣ್ಯ ಚನ್ನಾಗಿ ರಕ್ಷಣೆ ಮಾಡಿ, ನೀವು ಕರೆಯೋದೆ ಬೇಡ, ನಾನೇ ಬಂದು ಅಭಿನಂದಿಸ್ತೀನಿ” ಅವರ ಮಾತೇ ಹಾಗೆ. ಎಂದೂ ದಾಕ್ಷಿಣ್ಯಕ್ಕಾಗಿ, ಔಪಚಾರಿಕವಾಗಿ ಅವರು ಮಾತ್ತಾಡ್ತಿರಲಿಲ್ಲ.

“ಮಾನವ ತನ್ನ ಕೈಗಾರಿಕೆಗಳಲ್ಲಿ ತನ್ನ ಕಾಂಕ್ರೀಟಿನ ಗೊಂಡಾರಣ್ಯಗಳಲ್ಲಿ ತನ್ನದೇ ಆದ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಗೋಜಲಿನಲ್ಲಿ ಸಿಕ್ಕಿಕೊಂಡು ಏಕಾಂಗಿಯಾಗಿದ್ದಾನೆ. ಭಯಂಕರ ಏಕಾಂಗಿತನ ಅವನನ್ನು ಕಾಡತೊಡಗಿದೆ. ಈ ಜಗತ್ತಿನ ಜೀವಸ್ತರದ ಒಂದು ತಂತು ತಾನೆಂಬುದನ್ನು ಮರೆತೇಬಿಟ್ಟಿದ್ದಾನೆ. ಈ ಏಕಾಂಗಿತನದಿಂದ ಅವನನ್ನು ಬಿಡಿಸಿ ಮತ್ತೆ ಪ್ರಕೃತಿಯ ನಡುವೆ ಅವನನ್ನು ಗುರುತಿಸುವುದೇ ಇಕಾಲಜಿಯ ಉದ್ದೇಶ”[೧೮] ಎನ್ನುತ್ತಾರೆ ತೇಜಸ್ವಿ. ರೈತ ಸಂಘದಂಥ ಅಪ್ಪಟ ಮಣ್ಣಿನ ಹೋರಾಟವು ಪ್ರಾರಂಭವಾಗಿದ್ದೇ ತೇಜಸ್ವಿಯವರ ಮನೆಯಂಗಳದಲ್ಲಿ ಎಂಬುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ಯಾವುದೇ ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿತ್ಯಂತರಗಳಿಗೆ ಮೂಲವಾಗುವಂತಹ ರೈತ ಸಮೂಹವನ್ನು ಕರ್ನಾಟಕದ ಮಟ್ಟಿಗೆ ಯೋಜಿತವಾಗಿ ಸಂಘಟಿಸಿ, ಮಣ್ಣಿನ ಮಕ್ಕಳ ಶಕ್ತಿ ಏನೆಂಬುದನ್ನು ಸಾಬೀತು ಪಡಿಸಲು ನಂಜುಂಡಸ್ವಾಮಿ, ಲಿಂಗಪ್ಪ, ಸುಂದರೇಶ್, ಶಾಮಣ್ಣ ಮುಂತಾದವರೊಂದಿಗೆ ಮೂಲ ರೂಪುರೇಷೆಯನ್ನು ರೂಪಿಸಿದ ಕೀರ್ತಿ ಸಹಜ ಕೃಷಿಯ ಹರಿಕಾರನಂತಿದ್ದ ತೇಜಸ್ವಿಯವರದು. ಆ ದಿನಗಳಲ್ಲೇ ಕಾಫಿ ಮಂಡಳಿಯ ಧೋರಣೆಯನ್ನು ಪ್ರತಿಭಟಿಸಿ, ಮೂಡಿಗೆರೆಯ ಸಂತೆಯಲ್ಲಿ ಕಾಫಿ ಮಾರುವ ವಿಶಿಷ್ಟ ನಿರ್ಧಾರವನ್ನು ಅವರು ಮಾಡಿದ್ದು ಸಾಕಷ್ಟು ಜನರಿಗೆ ತಿಳಿದಿಲ್ಲ.

“ಮನುಷ್ಯರ ಜನಸಂಖ್ಯೆಯನ್ನು ನಿರಂತರವಾಗಿ ಏರಿಸುತ್ತಾ ಕೈಗಾರಿಕೆ ಮತ್ತು ತಂತ್ರಜ್ಞಾನಗಳಿಂದ ಅವರ ಜೀವನಮಟ್ಟವನ್ನೂ ನಿರಂತರವಾಗಿ ಏರಿಸುತ್ತಾ ಪರಿಸರ ಸಮತೋಲವನ್ನೂ ಕಾಯ್ದುಕೊಳ್ಳಲು ಸಾಧ್ಯವೇ ಇರದಂತಹ ಪರಿಸ್ಥಿತಿಗೆ ಬಂದು ತಲುಪಿದ್ದೇವೆ. ಈ ಜೀವ ಸಮುಚ್ಚಯದಲ್ಲಿ ಕ್ರಿಮಿಕೀಟಗಳು ಪಶುಪಕ್ಷಿ ಪ್ರಾಣಿಗಳು ತೋರಿಸುತ್ತಿರುವಷ್ಟು ಹೊಂದಾಣಿಕೆ ಮತ್ತು ಸಾಮರಸ್ಯಗಳನ್ನು ವಿವೇಕಿ ಮತ್ತು ಬುದ್ಧಿಶಾಲಿಯಾದ ಮಾನವ ತೋರಿಸಲು ಸಾಧ್ಯವಿಲ್ಲವೇ?

ಎನ್ನುವುದೇ ಈಗ ನಮ್ಮ ಮುಂದೆ ಇಕಾಲಜಿ ಇಟ್ಟಿರುವ ಪ್ರಶ್ನೆ" (೧೯) ಎಂಬುದಾಗಿ ತೇಜಸ್ವಿ ಅಭಿಪ್ರಾಯಿಸುತ್ತಾರೆ. ಆಧುನಿಕ ವಿಜ್ಞಾನ ಪ್ರಪಂಚದ ಇವತ್ತಿನ ಎರಡು ಅತಿ ಪ್ರಮುಖ ಅಂಶಗಳು ಎಂದರೆ ಒಂದು ಕಂಪ್ಯೂಟರ್ ವಿಜ್ಞಾನ. ಇನ್ನೊಂದು ಇಕಾಲಜಿ. ಕೈಗಾರಿಕೀಕರಣದಲ್ಲಿ ಮುಂದುವರಿಯಲು ಪ್ರಯತ್ನಿಸುತ್ತಿರುವ ಭಾರತ ಈ ಎರಡು ಕ್ಷೇತ್ರಗಳಿಗೂ ಏಕಕಾಲದಲ್ಲಿ ಪ್ರಾಮುಖ್ಯತೆ ಕೊಡದಿದ್ದರೆ ಮುಂದುವರಿದ ರಾಷ್ಟ್ರಗಳು ಕೈಗಾರಿಕೀಕರಣದ ಹಾದಿಯಲ್ಲಿ ಮಾಡಿದ ಎಲ್ಲಾ ಅಪಾಯಕರ ತಪ್ಪುಗಳನ್ನೂ ಮಾಡಿ ಪಾಠ ಕಲಿಯಬೇಕಾಗುತ್ತದೆ ಎಂದಿದ್ದಾರೆ.

೭.೪.೨ ನಾಗೇಶ ಹೆಗಡೆ ಅವರ ಕೃತಿಗಳು:

ನಾಗೇಶ ಹೆಗಡೆ ಅವರ ಅಭಿವೃದ್ಧಿ ಕುರಿತ ಪರಿಸರ ಪ್ರಜ್ಞೆಯ ಅವಲೋಕನದ ದೃಷ್ಟಿಯಿಂದ ಈ ಅಧ್ಯಾಯದಲ್ಲಿ ಆಯ್ದ ಕೃತಿಗಳನ್ನು ಮಾತ್ರ ಅಧ್ಯಯನಕ್ಕೊಳಪಡಿಸಲಾಗಿದೆ. ಕೃತಿಗಳಲ್ಲಿ ಹಲವಾರು ಬಿಡಿ ಲೇಖನಗಳ ಸಂಯೋಜನೆ ಇದ್ದು ಅಭಿವೃದ್ಧಿ ನೆಲೆಯಲ್ಲಿ ಚರ್ಚೆಗೆ ಒಳಪಡಿಸಬಹುದಾದ ಲೇಖನಗಳನ್ನಷ್ಟೇ ಹೆಕ್ಕಿಕೊಳ್ಳಲಾಗಿದೆ. ಅಧ್ಯಯನಕ್ಕೆ ಯೋಗ್ಯವಾಗುವಂತೆ ಅಭಿವೃದ್ಧಿ ಕುರಿತ ಧೋರಣೆ ಮತ್ತು ಅಭಿವ್ಯಕ್ತಿಗಳ ಪ್ರಮುಖಾಂಶಗಳನ್ನು ಗುರುತಿಸಿದ್ದು, ಇದೇ ಅಧ್ಯಾಯದ ಫಲಿತಗಳಡಿಯಲ್ಲಿ ಹೆಗಡೆ ಅವರ ಅಭಿವೃದ್ಧಿ ನೆಲೆಯ ಪರಿಸರ ಪ್ರಜ್ಞೆಯನ್ನು ಗುರುತಿಸಿ ದಾಖಲಿಸಿದೆ.

'ಇರುವುದೊಂದೇ ಭೂಮಿ' ಕೃತಿಯಲ್ಲಿ ಹೆಗಡೆ ಅವರು ಭೂಮಿ ಬಗ್ಗೆ ಕಾಡಿನಲ್ಲಿ ವಾಸಿಸುತ್ತಿದ್ದ ಒಬ್ಬ ರೆಡ್ ಇಂಡಿಯನ್ ಜನಾಂಗದ ಮುಖ್ಯಸ್ಥ ಚೀಫ್ ಸೀಟ್ಲ್ ಎಂಬಾತ ಹೇಳಿದ ಮಾತುಗಳನ್ನು ದಾಖಲಿಸುತ್ತಾರೆ. ೧೮೫೪ರಲ್ಲಿ ಸರ್ಕಾರ ಕೇಳಿಕೊಂಡಾಗ ಸೀಟ್ಲ್ ಬರೆದ ಸುದೀರ್ಘ ಪತ್ರದ ಒಕ್ಕಣೆಯಿಂದಾಗಿ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಸಂಘರ್ಷ ಹಾಗೂ ಅವಲಂಬಿತ ಪರಿಸರದ ಅಸ್ಥಿತ್ವದ ದೃಷ್ಟಿಯಿಂದಾಗಿ ಸರ್ಕಾರದ ಧೋರಣೆಗಳಿಗೆ ಮುಖಾಮುಖಿಯಾದ ಸೀಟ್ಲ್ ಜಗತ್ತಿಗೆ ಎಂದೆಂದಿಗೂ ಪ್ರಸ್ತುತವಾಗುವುದನ್ನು ಗಮನಿಸಬಹುದಾಗಿದೆ. ನಗರ ಜೀವನಕ್ಕಾಗಿ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ಅರಳಿದ ಆದಿವಾಸಿ ಸಮುದಾಯಗಳ ಬದುಕನ್ನೇ ಕಿತ್ತುಕೊಳ್ಳಲು ಮುಂದಾದ ಪಟ್ಟಭದ್ರ ಹಿತಾಸಕ್ತಿಯ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಜೀವಗೋಲದಲ್ಲಿ ಜೀವವೈವಿಧ್ಯತೆಯ ಸಮತೋಲನದ ಮಹತ್ವವನ್ನು ಎತ್ತಿಹಿಡಿಯುವ ಸೀಟ್ಲ್‌ನ ಅಪೂರ್ವವಾದ ಸಾಲುಗಳು ಪರಿಸರ ಪ್ರಜ್ಞೆಯ ದೃಷ್ಟಿಯಿಂದಲೂ ಉಲ್ಲೇಖಾರ್ಹವಾದುದು. ಕೊಡಗು ಮತ್ತು ಕೇರಳದಲ್ಲಿ ಘಟಿಸಿದ ಪ್ರಕೃತಿ ವಿಕೋಪಗಳಿಗೂ ಸುಮಾರು ೧೬೦ ವರ್ಷಗಳಷ್ಟು ಹಿಂದೆ ಹೇಳಿದ್ದ ಸೀಟ್ಲ್‌ನ ಒಕ್ಕಣೆಗೂ ಒಂದು ರೀತಿಯ ಸಹಸಂಬಂಧವನ್ನು ಗುರುತಿಸಬಹುದು. ಭೂಮಿಯ ದುರ್ಗತಿ ಮಾನವನ ದುರ್ಗತಿಯೊಂದಿಗೆ ತಳುಕು ಹಾಕಿಕೊಂಡಿರುವುದನ್ನು ಪ್ರಾತ್ಯಕ್ಷಿಕೆಯಾಗಿ ನಾವು ಕಾಣುವಂತಾಗಿದ್ದು ನಾವೆಲ್ಲಾ ಜೀವಿಸುತ್ತಿರುವ ಪರಿಸರದ ಒಂದು ದುರಂತವೇ ಸರಿ. ಜಲಕಂಪನ ಹಾಗೂ ಭೂಕಂಪನಗಳು ಒಟ್ಟೊಟ್ಟಿಗೆ ಘಟಿಸಿ ಜನರ ಬದುಕು ಮೂರಾಬಟ್ಟೆಯಾಗಿ ಜೀವವೈವಿಧ್ಯದ ನೆಲೆಗಳೆಲ್ಲ ಕೊಚ್ಚಿ ಹೋದಮೇಲೆ ಈ ಭೂಮಿ ಕುರಿತು ನಮ್ಮಲ್ಲಿ ಪ್ರಶ್ನೆಗಳೆದ್ದಿವೆ. ಗುಡ್ಡ ಕುಸಿಯಲು ಕಾರಣವೇನು? ರಸ್ತೆಗಳೆಲ್ಲಾ ಏಕೆ ಬಿರುಕಿನಿಂದ ತಗ್ಗಿದವು? ಪ್ರವಾಹೋಪಾದಿಯಲ್ಲಿ ನೀರು ಏಕೆ ಹರಿಯಿತು? ಎಂಬಿತ್ಯಾದಿ ಪ್ರಶ್ನೆಗಳು

ಸುಶಿಕ್ಷಿತರನ್ನು ಮಾತ್ರವಲ್ಲದೆ ಜನಸಾಮಾನ್ಯರನ್ನು ಕಾಡುತ್ತಿವೆ. ಮಾನವ ನಿರ್ಮಿತ ಅಣೆಕಟ್ಟುಗಳೇ ಸ್ವಾಭಾವಿಕ ಪ್ರಕೃತಿಯ ಮುನಿಸಿಗೆ ಗಡಗಡ ನಡುಗುವಂತಾದವು. ಇವುಗಳಿಗೆ ಉತ್ತರ ಹುಡುಕುವ ಪ್ರಯತ್ನ ಮಾತ್ರ ತಜ್ಞರದ್ದು ಎಂದು ಭಾವಿಸಿ ಸುಮ್ಮನಾಗಿದ್ದೇವೆ.

ಪ್ರಸ್ತುತ ಭೂಮಿಯ ಉಳಿವಿನ ಚಿಂತನೆಯಲ್ಲಿ ಈ ಪ್ರಶ್ನೆಗಳನ್ನು ನಾವು ಅಗತ್ಯವಾಗಿ ಬಿಡಿಸಿಕೊಳ್ಳಲೇಬೇಕು. ಅಭಿವೃದ್ಧಿಯ ನೆಪದಲ್ಲಿ ಯಂತ್ರನಾಗರೀಕತೆಯು ಹಸಿರು ಭೂಮಿಯಲ್ಲುಂಟುಮಾಡಿದ ಪಲ್ಲಟಗಳ ಸ್ವರೂಪವೇನು? ಮಲೆನಾಡು ಮತ್ತು ಘಟ್ಟ ಪ್ರದೇಶಗಳ ಇಳಿಜಾರಿನಲ್ಲಿ ಮಣ್ಣಿನ ಸವಕಳಿ ತಪ್ಪಿಸಲು ಆದಂತಹ ಪ್ರಯತ್ನಗಳಾವುವು? ಕಾಯ್ದಿಟ್ಟ ಸಂರಕ್ಷಿತ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡದಂತೆ ಕೈಗೊಂಡ ಕ್ರಮಗಳು ಅನುಪಾಲನೆಯಲ್ಲಿವೆಯೇ? ಮೈದಾನ ಪ್ರದೇಶ ಮತ್ತು ಬಂಜರು ಭೂಮಿಯನ್ನು ಹಸಿರಾಗಿಸಲು ನಾವೇನು ಮಾಡಿದ್ದೇವೆ? ನಾಡಿನಾದ್ಯಂತ ಪ್ರಾದೇಶಿಕವಾರು ಅಸ್ತಿತ್ವ ಹೊಂದಿರುವ ಜೀವವೈವಿಧ್ಯದ ಶ್ರೀಮಂತಿಕೆ ಕಾಪಾಡಿಕೊಳ್ಳಲು ಸ್ವಾಭಾವಿಕ ಭೌಗೋಳಿಕ ಪರಿಸರವನ್ನು ಹೇಗೆಲ್ಲಾ ಸಂಘಟಿಸಿದ್ದೇವೆ? ಎಂಬುದರ ಚಿಂತನೆ ಸಾಂಸ್ಕೃತಿಕ ಪರಿಸರದ ಅಗತ್ಯತೆಯ ದೃಷ್ಟಿಯಿಂದಲೂ ಅನಿವಾರ್ಯ ಎನಿಸಿಕೊಳ್ಳುತ್ತದೆ. ಈ ಬಗ್ಗೆ ಕಾರ್ಯೋನ್ಮುಖರಾಗಲು ಜನಸಾಮಾನ್ಯರನ್ನು ತುರ್ತು ಅರಿವುಗೊಳಿಸಬೇಕಿದೆ. ಈ ಭೂಮಿಯು ಇನ್ನೆಂದಿಗೂ ಸಹಿಸಿಕೊಳ್ಳಲಾಗದಷ್ಟು ಆಕ್ರಮಣದ ಪರಿಮಿತಿಯನ್ನು ತಲುಪಿದೆ. ಮನುಷ್ಯನ ವಿವೇಕರಹಿತ ಅಭಿವೃದ್ಧಿ ಚಟುವಟಿಕೆಗಳಿಂದಾದ ಅವಮಾನಗಳಿಗೆ ಪ್ರತಿರೋಧವೆಂಬಂತೆ ಪ್ರಕೃತಿ ಸೇಡು ತೀರಿಸಿಕೊಂಡಿದ್ದನ್ನು ಕಣ್ಣಾರೆ ಕಂಡಿದ್ದೇವೆ.

ಜೀವಿಗಳಿಂದ ತುಂಬಿ ತುಳುಕುವ ಗ್ರಹವೆಂದರೆ ಈ ಭೂಮಿ ಮಾತ್ರ. ಜೀವಿಗಳಿಂದಲೇ ಈ ಭೂಮಿಗೊಂದು ಅರ್ಥ. ಕೇರಳ ಮತ್ತು ಕೊಡಗಿನ ವಿಪತ್ತಿನಲ್ಲಿ ಪ್ರಾಣಾಪಾಯಕ್ಕೆ ಒಳಗಾದ ಮನುಷ್ಯರನ್ನು ಮಾತ್ರ ಉಳಿಸಿಕೊಳ್ಳುವ ಮಾನವತೆಯ ಜವಾಬ್ದಾರಿ ನಡುವೆ ಅದೆಷ್ಟೋ ಜೀವಿಗಳು ಕಣ್ಣೆದುರೇ ನೀರಲ್ಲಿ ಕೊಚ್ಚಿ ಹೋಗುತ್ತಿದ್ದವು. ಮಣ್ಣಲ್ಲಿ ಸಿಲುಕಿ ಅವಶೇಷಗಳಾದವು. ಅರಣ್ಯರೋಧನ ಮನಮಿಡಿಯುವಂತದ್ದು. ನಾಯಿಗೂ ಗೋವಿಗೂ ಹಾವಿಗೂ ಆನೆಗೂ ಮಂಗಗಳಿಗೂ ಪಕ್ಷಿ ಸಂಕುಲಕ್ಕೂ ಬದುಕುವಾಸೆ. ಆದರೆ ಅವುಗಳಿಗೆ ಆಸರೆಯಾಗಿ ನಿಲ್ಲಲಾಗಲಿಲ್ಲ. ಪ್ರಕೃತಿಯ ಮುನಿಸಿನ ಮುಂದೆ ಎಲ್ಲವೂ ಕೈ ಮೀರಿತ್ತು. ನಾಗೇಶ ಹೆಗಡೆ ಅವರು ಹೇಳುವಂತೆ **'ನಾವು ಈ ಭೂಮಿಯಿಂದ ಬಂದವರಲ್ಲವೇ? ವಿ ಆರ್ ಆಲ್ ಟುಗೆದರ್. ಬಿಲಾಂಗ್ ಟು ದಿಸ್ ಪ್ಲಾನೆಟ್ ಅರ್ಥ್ ನಮ್ಮ ಹೆಚ್ಚಿನ ಪ್ರಣಾಮಗಳು, ನಮ್ಮ ಪ್ರಯತ್ನಗಳು, ಆಲೋಚನೆಗಳು ಈ ಬಗ್ಗೆ ಮೊದಲ ಸ್ಥಾನದಲ್ಲಿರಬೇಕು. ವಿ ಆರ್ ಆಲ್ ಪ್ಲಾನೆಟ್ ಅರ್ಥ್‌ನ ಪ್ಲಾನೆಟರಿ ಸಿಟಿಜನ್ಸ್. ಪ್ಲಾನೆಟರಿ ಸಿಟಿಜನ್ಸ್ ಆದಾಗ ಜಾತಿ ಬೇಡ, ರಾಜಕೀಯ ಬೇಡ, ಹಣ ಬೇಡ. ಇಂತಹ ಮನುಕುಲವನ್ನು ಹುಟ್ಟುಹಾಕಲು ಭೂದೇವಿ ಹಲವರಿಗೆ ಸೌಲಭ್ಯ ಕೊಟ್ಟಿದ್ದಾಳೆ. ಆ ಸೌಲಭ್ಯವೇ ನಾವಾಗೋಣ'**[೨೦] ಎಂದಿದ್ದಾರೆ. ಇದೊಂದು ವಿಶಿಷ್ಟವಾದ ಅರ್ಥಗರ್ಭಿತ ಕಲ್ಪನೆಯಾಗಿದೆ. ಈ ಚಿಂತನೆಯು ಜಾಗತಿಕವನ್ನೇ ಮೀರುವಂತದ್ದು. ಇಂತಹ ಜಾಗತಿಕ ಕಲ್ಪನೆಯೆಡೆಗೆ ನಮ್ಮ ಆಲೋಚನೆಯನ್ನು ಒಟ್ಟುಗೂಡಿಸಿ ಮುಖಾಮುಖಿಯಾಗುವುದು ಮತ್ತು ಈ ಬಗ್ಗೆ ನಮ್ಮನ್ನು ಪ್ರಜ್ಞೆ ಮತ್ತು ಅಪ್ರಜ್ಞಾವಸ್ಥೆಯಲ್ಲಿಯೂ ಅನುಸಂಧಾನಕ್ಕೊಳಪಡಿಸುವುದು ಅವಶ್ಯವಾಗಿದೆ ಎಂಬ

ಆಶಯವನ್ನು ಕೃತಿಯು ಹೊರಹೊಮ್ಮಿಸುತ್ತದೆ. ಭೂಮಿಯ ಅಖಂಡತೆಯಲ್ಲಿ ಅಂದರೆ ಜೀವಗೋಲದ ಯಾವುದೇ ಭಾಗದಲ್ಲಿ ಆಗಬಹುದಾದ ಅನಾಹುತವನ್ನು ತಪ್ಪಿಸುವ ಹೊಣೆಯೂ ಸಹ ನಮ್ಮ ಮೇಲಿದೆ ಎಂಬುದನ್ನು ಒತ್ತಿಹೇಳುವ ಪ್ರಜ್ಞೆಯನ್ನು ಕೃತಿಯಿಂದ ಗ್ರಹಿಸಬಹುದಾಗಿದೆ. ಪ್ರಗತಿಯನ್ನಷ್ಟೇ ಅರಸುತ್ತಾ ಸಾಗುವ ಮಾನವ ಮನುಕುಲದ ವಿನಾಶದೊಂದಿಗೆ ಮುಖಾಮುಖಿಯಾಗುವ ದುರಂತದ ಬಗ್ಗೆ ಚಿಂತನೆ ನಡೆಸುವುದೇ 'ಇರುವುದೊಂದೇ ಭೂಮಿ' ಕೃತಿಯನ್ನು ಓದುವಂತೆ ಮತ್ತು ಅದರ ರಕ್ಷಣೆಗೆ ದೀಕ್ಷೆ ತೊಡುವಂತೆ ನಮ್ಮನ್ನು ಪ್ರೇರೇಪಿಸುತ್ತದೆ. 'ಸಾಗರದಾಳದಿಂದ ಬಾಹ್ಯಾಕಾಶದವರೆಗಿನ ಹತ್ತು ಹಲವು ಸಂಗತಿಗಳನ್ನು ಅಕ್ಷರಗಳ ಮೂಲಕ ಸ್ಪರ್ಶಿಸುವ ನಾಗೇಶ ಹೆಗಡೆ ಅವರ ಶೈಲಿ ಕನ್ನಡ ಪತ್ರಿಕಾರಂಗದಲ್ಲೇ ಅನನ್ಯ' ಎಂದಿದ್ದಾರೆ ಉದಯವಾಣಿ ಸಂಪಾದಕರಾದ ಡಾ.ಆರ್.ಪೂರ್ಣಿಮಾ ಅವರು.

ಅಭಿವೃದ್ಧಿ ನಮಗೆ ಬೇಕು ನಿಜ. ಆದರೆ ಅದು ನಾಳಿನ ಪೀಳಿಗೆಯನ್ನು ಪ್ರಪಾತಕ್ಕೆ ತಳ್ಳಬಾರದು. ಸುಸ್ಥಿರ ಅಭಿವೃದ್ಧಿಯ ನಾಲ್ಕು ಮೂಲ ತತ್ವಗಳೆಂದರೆ, ೧. ಪೆಟ್ರೋಲ್, ಕಲ್ಲಿದ್ದಲಿನಂಥ ಪಳೆಯುಳಿಕೆ ಇಂಧನ ಮತ್ತು ಖನಿಜಗಳ ಮೇಲಿನ ಅವಲಂಬನೆಯನ್ನು ಕಮ್ಮಿ ಮಾಡುತ್ತ ಹೋಗಬೇಕು ೨. ಪರಿಸರದಲ್ಲಿ ಬಹುದೀರ್ಘ ಕಾಲ ಉಳಿಯುವಂಥ ಕೆಮಿಕಲ್‌ಗಳನ್ನು ಬಳಸಬಾರದು, ೩.ಗಿಡಮರ, ಜೀವಜಂತುಗಳ ಧ್ವಂಸಕಾರ್ಯವನ್ನು ಕಡಿಮೆ ಮಾಡಬೇಕು, ಮತ್ತು ೪. ಮುದಿನ ಪೀಳಿಗೆಯವರ ಬದುಕುವ ಹಕ್ಕುಗಳನ್ನು ಹೊಸಕಿ ಹಾಕಬಾರದು. ಆದರೆ ನಾವು ಇಂದು ಆ ಎಲ್ಲಾ ಮಾಡಬಾರದ ಕೃತ್ಯಗಳನ್ನೂ ಮಾಡುತ್ತಿದ್ದೇವೆ. ಆಳುವವರಂತೂ ಅಂಥ ಕೃತ್ಯಗಳಿಗೆ ತಡೆ ಹಾಕುವ ಬದಲು, ಈಗಿನ ದುಸ್ಥಿರ ಪಥದಲ್ಲೇ ಮುಂದುವರೆಯುವಂಥ ಸಾಮಾಜಿಕ ಯೋಜನೆಗಳನ್ನು ರೂಪಿಸುತ್ತಾರೆ. ತಾವೇ ಸ್ವತಃ ಆ ಪಥದ ಮುಂಚೂಣಿಯಲ್ಲಿ ಸಾಗುತ್ತಿರುತ್ತಾರೆ. ಅಭಿವೃದ್ಧಿಯ ಇಂದಿನ ಹಪಾಹಪಿಯಲ್ಲಿ ಸಾಮಾಜಿಕ ನ್ಯಾಯವಾದರೂ ಇದೆಯೇ–ಅದೂ ಇಲ್ಲ. ಇದ್ದವರ, ಇಲ್ಲದವರ ನಡುವಣ ಕಂದರ ದಿನದಿನಕ್ಕೆ ಅಗಲವಾಗುತ್ತಿದೆ, ಆಳವಾಗುತ್ತಿದೆ. ಇತ್ತೀಚಿನ ವರದಿಗಳ, ಪ್ರಕಾರ ಭಾರತದ ಅತಿ ಶ್ರೀಮಂತ ಶೇ. ೧೦ ಜನರ ಸಂಪತ್ತು ಅತಿ ಕೆಳಗಿನ ಶೇ.೧೦ ಜನರ ಒಟ್ಟೂ ಸಂಪತ್ತಿಗಿಂತ ೩೭೦ ಪಟ್ಟು ಹೆಚ್ಚಿಗೆ ಇದೆ. ಕಳೆದ ೧೫ ವರ್ಷಗಳಿಂದ ಶ್ರೀಮಂತರ ಸಂಪತ್ತು ಹೆಚ್ಚುತ್ತಲೇ ಹೋಗುತ್ತಿದ್ದು, ಇಂದು ಇಡೀ ಭಾರತದ ಮುಕ್ಕಾಲು ಪಾಲು ಸಂಪತ್ತೆಲ್ಲ ಶೇ.೧೦ ಜನರ ಬಳಿ ಬಂದು ಸೇರಿದೆ. ಹಾಗೆಂದು ಅವರು ಅಮೇರಿಕ, ಜಪಾನ್‌ಗಳ ಉದ್ಯೋಗಪತಿಗಳ ಹಾಗೆ ಸರಕುಗಳ ಉತ್ಪಾದನೆಯನ್ನು ಹೆಚ್ಚಿಸಿದ್ದಾರೆಯೇ ಅಥವಾ ಉದ್ಯೋಗವನ್ನು ಸೃಷ್ಟಿಸಿದ್ದಾರೆಯೇ ಅದೂ ಇಲ್ಲ! ನಮ್ಮ ಧನಿಕರ ಸಂಪತ್ತಿನ ಬಹುಪಾಲೆಲ್ಲ ಖನಿಜ, ಖನಿಜ ತೈಲ ಮತ್ತಿತ್ತರ ನೈಸರ್ಗಿಕ ಸಂಪತ್ತಿರುವ ಆಯಕಟ್ಟಿನ ಭೂಮಿಯ (ರಿಯಲ್ ಎಸ್ಟೇಟ್) ಸ್ವಾಹಾಕಾರದಿಂದಾಗಿ ಬಂದಿದೆ; ಇಲ್ಲವೇ ಸರಕಾರಿ ಸ್ವಾಮ್ಯದ ಕಂಪನಿಗಳ (ಅಂದರೆ ನಮ್ಮೆಲ್ಲರ ಪಾಲಿನ) ಶೇರು ಖರೀದಿಯಿಂದಾಗಿ ಬಂದಿದೆ. ರಾಷ್ಟ್ರದ ನಿವ್ವಳ ಸಂಪತ್ತಿನ ನಿರಂತರ ವೃದ್ಧಿಗೆ ಸಹಾಯಕವಾಗುವ ಬದಲು ಈ ಧನಿಕರ ಸೊತ್ತೆಲ್ಲ ಭವಿಷ್ಯದ ಪೀಳಿಗೆಯ ಸಂಪತ್ತನ್ನು ದೋಚುವುದರಲ್ಲೇ ನಿರತವಾಗಿದೆ ಎಂಬ ಅಭಿಪ್ರಾಯದಲ್ಲಿ ಸಂಪತ್ತುಗಳ ಅಸಮಾನ ಹಂಚಿಕೆ, ಒಂದೆಡೆಗೆ

ಎದುರುತ್ತಿವ ಅದರ ಸಾಂದ್ರತೆ ಹಾಗೂ ಅವುಗಳ ಮೇಲೆ ಪ್ರಭುತ್ವ ಅಥವಾ ಒಡೆತನ ಸಾಧಿಸಲು ಉಂಟಾಗಿರುವ ಸಂಘರ್ಷವನ್ನು ಹೆಗಡೆ ಚಿತ್ರಿಸಿದ್ದಾರೆ.

ಅಭಿವೃದ್ಧಿಯನ್ನು ಸ್ಥಗಿತಗೊಳಿಸಬೇಕೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ, ನಾವು ಮೂಲಸೌಲಭ್ಯಗಳ ಹೆಸರಿನಲ್ಲಿ ಮೂಲ ಸಂಪತ್ತುಗಳನ್ನೇ ಬಲಿ ಹಾಕುತ್ತಿದ್ದೇವೆ. ನದಿ, ಕೆರೆ, ಕಡಲು, ಕರಾವಳಿ, ಅಂತರ್ಜಲ, ಅರಣ್ಯಗಳೇ ನಮ್ಮ ಅಸಲೀ ಮೂಲ ಸೌಲಭ್ಯಗಳಾಗಿದ್ದವು. ಅವನ್ನೆಲ್ಲ ಕೊಳಕು ಮಾಡುತ್ತಾ, ಇಲ್ಲವೆ ಬರಿದು ಮಾಡುತ್ತಾ, ಅದ್ದೂರಿಯ ನಿಲ್ದಾಣಗಳನ್ನೋ ಬಂದರುಗಳನ್ನೋ ಸೂಪರ್ ಹೈವೇಗಳನ್ನೋ ನಿರ್ಮಿಸಿ ಅದೆಂಥದೋ ಸ್ವರ್ಗವನ್ನು ಕಟ್ಟಲು ಹೊರಟಿದ್ದೇವೆ. ಪಶ್ಚಿಮಘಟ್ಟಗಳ ಹಸುರನ್ನು ಅಷ್ಟಿಷ್ಟಾದರೂ ಉಳಿಸೋಣವೆಂಬ ತಜ್ಞರ ಶಿಫಾರಸನ್ನು ಹೊಸಕಿ ಹಾಕಲು ಇಡೀ ಶಾಸಕ ಸಮುದಾಯವೇ ಒಗ್ಗಟ್ಟಾಗಿ ನಿಂತಿದೆ. ನಮಗಷ್ಟೇ ಅಲ್ಲ ಇಡೀ ಜಗತ್ತಿಗೆ ಬೇಕಿರುವುದು 'ಹಸುರು ಆರ್ಥಿಕತೆ' ಎನ್ನುತ್ತಾ ಆರ್ಥಿಕತೆಯ ಸಮೃದ್ಧತೆ ನಿಸರ್ಗದ ಸಮೃದ್ಧತೆಯನ್ನು ಅವಲಂಬಿಸಿದೆ ಎಂಬ ನಿಸರ್ಗಮುಖಿ ಅಭಿವೃದ್ಧಿ ಮಾದರಿಗಳ ಬಗ್ಗೆ ಹೆಗಡೆ ಪ್ರಸ್ತಾಪಿಸುತ್ತಾರೆ. ಮಾನವನ ಚಟುವಟಿಕೆಗಳಲ್ಲಿ 'ನಿಸರ್ಗ ವಿರೋಧಿ' ಹಾಗೂ 'ನಿಸರ್ಗ ಮೈತ್ರಿ' ಎಂಬ ಎರಡು ವರ್ಗ ಇರಬೇಕಲ್ಲದೆ ನಿಸರ್ಗಪರವಾದ ಜಿ.ಡಿ.ಪಿ ಕಂಡುಕೊಳ್ಳುವ ಬಗೆಯನ್ನು ವಿವರಿಸಿದ್ದಾರೆ. **"ರಾಷ್ಟ್ರದ ಆರ್ಥಿಕ ಅಭಿವೃದ್ಧಿಯ ಬಗ್ಗೆ ಲೆಕ್ಕಹಾಕುವಾಗ 'ನಿಸರ್ಗ ವಿರೋಧಿ' ಕೃತ್ಯಗಳನ್ನು ವಜಾ ಮಾಡಿ, ಪ್ರಕೃತಿ ಸಿರಿಯನ್ನು ಹೆಚ್ಚಿಸುವ ಕೃತ್ಯಗಳನ್ನು ಜಮಾ ಮಾಡಬೇಕೆಂದೂ, ಭೂತಾನ್ ದೇಶದಲ್ಲಿ ಜಿಡಿಪಿ ಬದಲು 'ರಾಷ್ಟ್ರೀಯ ನೆಮ್ಮದಿ ಸೂಚ್ಯಂಕ'ವನ್ನು ಜಾರಿಗೆ ತಂದಿರುವುದು ಇಡೀ ಜಗತ್ತಿಗೆ ಮಾದರಿಯಾಗುತ್ತಿದೆಯೆಂದೂ, ಈ ಹೊಸ ಲೆಕ್ಕಾಚಾರ ಜಾರಿಗೆ ಬಂದಿದ್ದೇ ಆದರೆ ನಿಸರ್ಗ ಪರಿಶುದ್ಧ ಇದ್ದಷ್ಟೂ ರಾಷ್ಟ್ರದ ಅಸಲೀ ಸಂಪತ್ತು ಹೆಚ್ಚುತ್ತದೆ"**[೨೧]ಎನ್ನುವುದು ಭಾರತದ ಭವಿಷ್ಯ ಕುರಿತು ಹೆಗಡೆ ಅವರಿಗಿರುವ ಆಶಯವನ್ನು ಗ್ರಹಿಸಲು ಸಹಕಾರಿಯಾಗುವುದು. ಜುಳುಜುಳು ಹರಿಯುವ ಶುದ್ಧ ತೊರೆ, ಹಕ್ಕಿಪಕ್ಷಿಗಳ ಇಂಚರ, ತಂಪಿನ ಸುಳಿಗಾಳಿ, ಜೇನ್ನೊಣಗಳ ಝೇಂಕಾರ, ಸುಂದರ ಸೂರ್ಯೋದಯ, ಹಸಿರು ತೆನೆಯ ಸಹಜ ಸುಗಂಧ ಇವೆಲ್ಲವೂ ಸಮೃದ್ಧವಾಗಿದ್ದಷ್ಟೂ ರಾಷ್ಟ್ರದ ಸಂಪತ್ತು ಹೆಚ್ಚುತ್ತಿರುತ್ತದೆ. ಇವುಗಳ ಮಧ್ಯೆ ಬದುಕುತ್ತಲೇ ಇವುಗಳ ಪರಿಶುದ್ಧತೆಯನ್ನು ರಕ್ಷಿಸುವ ಹಾಗೂ ಹೆಚ್ಚಿಸುವುದರಲ್ಲೇ ನೆಮ್ಮದಿ ಕಾಣುವ ರೈತಾಪಿ ಜನರೇ ದೇಶದ ಅಸಲೀ ಬಂಡವಾಳವಾಗಿದ್ದಾರೆ ಎಂಬ ಆಶಯ ಗುರುತಿಸಬಹುದು.

'ಅಭಿವೃದ್ಧಿಯ ಅಂಧಯುಗ' ಕೃತಿಯ 'ಫೂಕುವೂಕ ಎಂಬ ಡೇಂಜರ್ ಸಿಗ್ನಲ್' ಎಂಬ ಲೇಖನದಲ್ಲಿ 'ಫಸಲು ಪಡೆಯುವುದು ಬೇಸಾಯದ ಅಂತಿಮ ಉದ್ದೇಶ ಅಲ್ಲ; ಮನುಷ್ಯರ ನಡವಳಿಗಳನ್ನು ತಿದ್ದುವುದೇ ಅದರ ಉದ್ದೇಶ' ಎಂದಿರುವ ಫುಕುವೂಕರ ಸಂದೇಶವನ್ನು ನೆನಪಿಸಿದ್ದಾರೆ. ಅದನ್ನು ಅರ್ಥ ಮಾಡಿಕೊಳ್ಳದವರು ಆತನ ಕೃಷಿ ತಂತ್ರವನ್ನಷ್ಟೇ ಪ್ರಶ್ನಿಸಿದರು. ಇದರಿಂದ ಜಗತ್ತಿನ ಆರುನೂರು ಕೋಟಿಗೆ ಊಟ ಹಾಕಲು ಸಾಧ್ಯವೆ?ಎಂದು ಟೀಕಿಸಿದರು. **"ಇಂದು ಸಾವಿರ ಕೋಟಿ ಜನರ ಹೊಟ್ಟೆ ತುಂಬಿಸುವಷ್ಟು ಆಹಾರ ಬೆಳೆಯುತ್ತಿದ್ದರೂ ಅದು ಹಸಿದವರಿಗೆ ತಲುಪದೆ ಕೊಳೆತು ತಿಪ್ಪೆ ಸೇರುತ್ತಿರುವುದು ಮನುಷ್ಯರ ನಡವಳಿಕೆಯಿಂದಾಗಿ ಎಂಬುದು ಅಂಥವರಿಗೆ ಅರ್ಥವಾಗುತ್ತಿಲ್ಲ"**[೨೨]ಎನ್ನುವ ಮೂಲಕ ಭಾರತದ ಜನಸಂಖ್ಯೆಯ ಹಸಿವಿನ

ಸಮಸ್ಯೆಯಲ್ಲಿ ಉಂಟಾಗಿರುವ ಆಹಾರ ಪೂರೈಕೆ ಹಾಗೂ ಹಂಚಿಕೆಯ ವಿಷಮತೆಯನ್ನು ಮತ್ತು ಈ ಹಂತದಲ್ಲಿ ತೋರುವ ಮನುಷ್ಯತ್ವದ ಅಮಾನವೀಯತೆಯನ್ನು ಟೀಕಿಸಿರುವುದು ಕಂಡುಬರುತ್ತದೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಇಂದಿಗೂ ಹಸಿವು ಮತ್ತು ಬಡತನವನ್ನು ನಿರ್ಮೂಲನೆ ಮಾಡಲಾಗಲಿಲ್ಲ. ಇವು ಪರಂಪರಾಗತ ಸಮಸ್ಯೆಗಳೆಂಬಂತೆ ಉಳಿದುಕೊಂಡು ಬಂದಿವೆ. ನಿಸರ್ಗವನ್ನು ಬರಿದು ಮಾಡುತ್ತಿರುವ ನಾವೀನ್ಯಯುತ ಅಭಿವೃದ್ಧಿಯ ಕ್ರಮಗಳು ಮತ್ತು ಹಸಿರು ಕ್ರಾಂತಿಯಲ್ಲಾಗುತ್ತಿರುವ ಶೋಷಣೆಗಳೆಲ್ಲವೂ ಸಮಾಜದಲ್ಲಿ ಸಂಪನ್ಮೂಲಗಳ ಅಸಮಾನತೆಯನ್ನು ಸೃಷ್ಟಿಮಾಡಿರುವುದರ ಬಗ್ಗೆ ಆಲೋಚಿಸಿದಾಗ, ಎದುರಾಗುತ್ತಿರುವ ರೈತರ ಸಂಕಷ್ಟಗಳನ್ನು ಅವಲೋಕಿಸಿದಾಗ ಉತ್ಕೃಷ್ಟತೆ ಎಂಬುದು ಪ್ರತಿಬಾರಿಯೂ ಉಳ್ಳವರ ಪಾಲಾಗುತ್ತಿದೆ ಎಂಬ ಅಭಿಪ್ರಾಯ ಲೇಖಕರಲ್ಲಿ ಮೂಡಿದೆ. ಅದು ಬೀಜ ಸರಬರಾಜಿರಲಿ, ಗೊಬ್ಬರದ ವಿತರಣೆಯಿರಲಿ, ಬೆಂಬಲ ಬೆಲೆ ಘೋಷಣೆಯಿರಲಿ, ಕೃಷಿ ಮಾರುಕಟ್ಟೆಯ ನೀತಿಗಳಿರಲಿ. ಇಂತಹ ರಾಡಿಗಳಿಂದ ಹೊರತಾದ ಗಾಂಧಿಯಂತೆ ಯೋಚಿಸುವ ಹಸಿರು ಕೃಷಿಮುಖಿ ಅಭಿವೃದ್ಧಿ ಚಿಂತನೆಗೆ ನೆನಪಾಗುವುದೇ ಫುಕುವೂಕ ಎಂಬ ದಾರ್ಶನಿಕನ ಸಹಜ ಕೃಷಿಯ ತತ್ವದರ್ಶನಗಳು. ನಾಗೇಶ ಹೆಗಡೆ ಅವರ ಪರಿಸರ ಪ್ರಜ್ಞೆಯ ಚಿಂತನಾ ಕ್ರಮಗಳು ಗಾಂಧಿ ಪರಿಸರೀಯತೆಯ ದೇಸಿ ಪ್ರಜ್ಞೆಯ ತಾತ್ವಿಕ ದರ್ಶನದಿಂದಲೂ ಮತ್ತು ಫುಕುವೂಕರ ಹಸಿರುಮುಖಿ ಪ್ರತಿಪಾದನೆಯಿಂದಲೂ ಬಹಳಷ್ಟು ಪ್ರೇರೇಪಿಸಲ್ಪಟ್ಟಿರುವುದನ್ನು ಕಂಡುಕೊಳ್ಳಬಹುದಾಗಿದೆ.

'ಅಭ್ಯುದಯ' ಎಂದರೆ ಜನರ ಅಭ್ಯುದಯವೇ ಹೊರತು, ಬಹುಸಂಖ್ಯಾತ ಜನರನ್ನೆಲ್ಲಾ ಮೂಲೆಗೊತ್ತಿ ಕೆಲವರ ಹಿತವನ್ನಷ್ಟೇ ಸಾಧಿಸುವ ಕಾರ್ಖಾನೆಗಳ–ಕಾಂಕ್ರೀಟ್ ಸೌಧಗಳ ಅಭಿವೃದ್ಧಿಯಲ್ಲ. ನಿಸರ್ಗವನ್ನು ಬಗ್ಗು ಬಡಿದೇ ಮಾನವನ ಏಳಿಗೆ ಸಾಧಿಸುವಂತಹ ಧೋರಣೆಯನ್ನು ಬದಲಾಯಿಸಬೇಕಾದ ಪರ್ವಕಾಲದ ಅಗತ್ಯತೆಯನ್ನು ನಾಗೇಶ ಹೆಗಡೆ ಅವರ ಲೇಖನಗಳು ಪುನರಾವರ್ತಿಸಿವೆ. ಗಾಂಧೀಜಿ ಬೇಡವೆಂದರೂ ನಾವು ಅಳವಡಿಸಿಕೊಂಡಿರುವ ಇಂದಿನ ಥಳುಕಿನ ತಂತ್ರಜ್ಞಾನದೊಂದಿಗೆ ಗಾಂಧೀಜಿ ಕನಸಿನ ಮಧ್ಯಂತರ ತಂತ್ರಜ್ಞಾನವನ್ನು ಹೋಲಿಸುತ್ತಾರೆ.

ನಿಸರ್ಗಮುಖಿಯಾದ ಮತ್ತು ಸರ್ವರ ಏಳಿಗೆಗಾಗಿ ಉಪಯುಕ್ತವೆನಿಸುವ ಶ್ಯುಮಾಕರ್ ಮಾನವಾಭಿಮುಖ ತಂತ್ರಜ್ಞಾನವನ್ನೇ ಪ್ರತಿಪಾದಿಸುವ ಮೂಲಕವಾಗಿ ಗಾಂಧಿ ಪರಿಸರೀಯತೆಯ ಅಭಿವೃದ್ಧಿಮುಖಿ ಚಿಂತನೆಗಳಿಗೆ ಮುಖಾಮುಖಿಯಾಗುತ್ತಾರೆ. **"ಲಕ್ಷಾಂತರ ಜನರನ್ನು ತೊಡಗಿಸಿಕೊಳ್ಳಬಲ್ಲ, ವಿಕೇಂದ್ರೀಕೃತ, ಪರಿಸರಕ್ಕೆ ಪೂರಕವಾದ ಹಾಗೂ ಶಕ್ತಿಯ ಹಿತಮಿತ ಬಳಕೆಯ ತಂತ್ರಜ್ಞಾನ ನಮ್ಮದಾಗಬೇಕು. ಮನುಷ್ಯನನ್ನು ತನ್ನ ದಾಸನಾಗಿ ಮಾಡುವ ಬದಲು ಮನುಷ್ಯನ ಸೇವಕನಾಗಬಲ್ಲ ತಂತ್ರಜ್ಞಾನ ಅದಾಗಿರಬೇಕು. ಇಂಥ ಬದಲಿ ತಂತ್ರಜ್ಞಾನಕ್ಕೆ ನಾನು 'ಮಧ್ಯಂತರ ತಂತ್ರಜ್ಞಾನ' ಎಂದು ಹೆಸರಿಸುತ್ತೇನೆ. ಅಂದರೆ ಅದು ಆದಿಮಾನವನ ತಂತ್ರಜ್ಞಾನಕ್ಕಿಂತ ಅದೆಷ್ಟೋ ಪಟ್ಟು ಉತ್ತಮವಾಗಿದ್ದು, ಧನಿಕರ ಥಳುಕಿನ ತಂತ್ರಜ್ಞಾನಕ್ಕಿಂತ ಸರಳ, ಮುಕ್ತ ಹಾಗೂ ಅಗ್ಗದ್ದಾಗಿರುತ್ತದೆ. ಅದಕ್ಕೆ ಸ್ವಯಂ ತಂತ್ರಜ್ಞಾನವೆನ್ನಿ, ಗಣತಂತ್ರಜ್ಞಾನ ಅಥವಾ ಜನತಾ ತಂತ್ರಜ್ಞಾನವೆನ್ನಿ–ಅದು ಎಲ್ಲರಿಗೂ ಲಭ್ಯವಾಗುವಂತಿದ್ದರೆ ಸರಿ"**[೨೩] ಎನ್ನುವ ಶ್ಯುಮಾಕರ್ ಅವರ

ಮಾನವಾಭಿಮುಖ ತಂತ್ರಜ್ಞಾನಾಧಾರಿತ ಬದಲಾವಣೆಗಳನ್ನು ಹೆಗಡೆ ಒಪ್ಪುವುದನ್ನು ಮತ್ತು ಸಮರ್ಥಿಸುವುದನ್ನು ಅವರ ಲೇಖನಗಳಲ್ಲಿ ಗುರುತಿಸಬಹುದು.

ಇತ್ತೀಚೆಗಷ್ಟೇ ಚಾಮರಾಜನಗರದ ಉಪನ್ಯಾಸವೊಂದರಲ್ಲಿ ನಾಗೇಶ ಹೆಗಡೆ ಅವರು **"ಭೂಮಿಯ ಮೇಲೆ ಅತಿಯಾದ ಜಲ, ಧೂಳು, ಹಿಮದ ಪ್ರಳಯಗಳು ಜನರ ಚಲನೆಯನ್ನು ದಿಗ್ಬಂಧನ ಮಾಡುತ್ತಿವೆ. ದೇಶದಲ್ಲಿ ಚಂಡಮಾರುತ ಹೆಚ್ಚಾಗುತ್ತಿದ್ದು, ಹೊಸಯುಗ ಸೃಷ್ಟಿ ಮಾಡಲಾಗುತ್ತಿದೆ. ಮನುಷ್ಯ ನಿಸರ್ಗ ಸೃಷ್ಟಿಯನ್ನು ನಾಶ ಮಾಡುತ್ತಿದ್ದು ಅದನ್ನು ಅಭಿವೃದ್ಧಿ ಎಂದು ಹೇಳುತ್ತಿರುವುದು ದುರದೃಷ್ಟಕರ"** ಎಂದು ಅಭಿವೃದ್ಧಿಯನ್ನು ವ್ಯಾಖ್ಯಾನಿಸಿದ್ದಾರೆ. ಮನುಷ್ಯ ಕಮರ್ಷಿಯಲ್ ಜಾಲದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾನೆ. ಸಮಾಜದಲ್ಲಿ ಮೌಢ್ಯ ಹೆಚ್ಚಾಗುತ್ತಿದೆ. ಏಳು ಸಾವಿರ ವಿಜ್ಞಾನಿಗಳು ಭೂಮಿಯ ತಾಪಮಾನವನ್ನು ಅಳೆಯುತ್ತಿದ್ದಾರೆ. ದೇಶದ ಎರಡನೇ ಮರುಭೂಮಿಯು ಕರ್ನಾಟಕದಲ್ಲಿ ಸೃಷ್ಟಿಯಾಗುತ್ತಿದೆ. ಪ್ರಸ್ತುತ ಪ್ರಾಣಿಗಳ ದೇಹದಲ್ಲಿ ಶೇ. ೨೦ರಷ್ಟು ಪ್ಲಾಸ್ಟಿಕ್ ಇರುತ್ತದೆ ಎಂಬಿತ್ಯಾದಿ ಆತಂಕಕಾರಿ ಸಂಗತಿಗಳೊಂದಿಗೆ ಪರಿಸರ ವಿನಾಶದ ಅಭಿವೃದ್ಧಿ ಬೇಡ ಎಂಬ ಪ್ರತಿಪಾದನೆಗಳನ್ನು ಅವರ ಮಾತುಗಳಲ್ಲಿ ಕಾಣಬಹುದಾಗಿದೆ. ಪಳೆಯುಳಿಕೆ ಇಂಧನದ ಮೇಲಿನ ಅವಲಂಬನೆಯನ್ನು ಕ್ರಮೇಣ ಕಡಿಮೆ ಮಾಡುತ್ತ, ಸೌರಶಕ್ತಿ, ಗಾಳಿಶಕ್ತಿ, ಕಡಲಶಕ್ತಿ, ಜೀವದ್ರವ್ಯ ಶಕ್ತಿಯನ್ನು ಬಳಸಿಕೊಳ್ಳುವತ್ತ ನಮ್ಮ ತಂತ್ರಜ್ಞಾನವನ್ನು ಒಗ್ಗಿಸಿಕೊಳ್ಳಬೇಕು. ದೇಶದ ಇಕಾನಮಿಯನ್ನು ಜೀವಾಧಾರಿತ ಆರ್ಥಿಕತೆಯತ್ತ ಕ್ರಮೇಣ ತಿರುಗಿಸಬೇಕು. ನಗರಗಳಿಂದ ಹೊರ ಹೊಮ್ಮುವ ತ್ಯಾಜ್ಯ ದ್ರವ್ಯಗಳನ್ನೂ ಸಂಪತ್ತನ್ನಾಗಿ ಪರಿವರ್ತಿಸಲು ಸಾಧ್ಯವಿದೆ ಎಂಬುದನ್ನು ಸಿಂಗಾಪುರದ ನಗರಾಡಳಿತ ತೋರಿಸಿಕೊಟ್ಟಿದೆ. ಇಂದಿನ ಬದುಕಿನ ಯಾವ ಸೌಕರ್ಯವನ್ನೂ ಬಲಿಹಾಕದೆ ನಾಳಿನ ಹಸಿರು ಆರ್ಥಿಕತೆಯನ್ನು ಕಟ್ಟಿಕೊಳ್ಳಲು ಸಾಧ್ಯವಿದೆ. ಚಂದ್ರನತ್ತ, ಮಂಗಳನತ್ತ ತಂತ್ರಜ್ಞಾನದ ರೇಸ್ ಮಾಡುವ ಬದಲು, ನಾಳಿನ ಸುಸ್ಥಿರ ಬದುಕಿನ ತಂತ್ರಜ್ಞಾನವನ್ನು ರೂಪಿಸುವಂತೆ ವಿಜ್ಞಾನಿಗಳಿಗೆ ಪ್ರೇರಣೆ ನೀಡಬಲ್ಲ, ಇಡೀ ರಾಷ್ಟ್ರದ ಪ್ರತಿಭೆಯನ್ನೆಲ್ಲ ಒಗ್ಗೂಡಿಸಬಲ್ಲ ನೇತೃತ್ವ ನಮಗಿಂದು ಬೇಕು[(೨೪)] ಎನ್ನುವುದರೊಂದಿಗೆ ಪ್ರಸ್ತುತದ ಅಗತ್ಯತೆ ಮತ್ತು ನವೀಕರಿಸಲಾಗುವ ಸಂಪನ್ಮೂಲಗಳ ಬಳಕೆ ಮತ್ತು ಪರ್ನಬಳಕೆಯಂತಹ ಭವಿಷ್ಯಮುಖಿ ಅಭಿವೃದ್ಧಿ ಮಾದರಿಗಳ ರೂಪುರೇಷೆಗಳಿಗೆ ನಿರ್ದೇಶಿಸುತ್ತಾ ಬದಲಿ ಸಾಧ್ಯತೆಗಳನ್ನು ಒದಗಿಸುತ್ತಾರೆ.

ಪ್ರಗತಿಯ ದಿಶೆಯಲ್ಲಿ ಸಾಗುತ್ತಿದ್ದ ಹಾಗೆಯೇ ನಿಸರ್ಗದಿಂದ ದೂರವಾಗುತ್ತ ನಗರದ ಕಡೆಗೆ ನಾಗರೀಕತೆ ಚಲಿಸುತ್ತದೆ. ನಗರದ ಅನುಕೂಲಸ್ಥರ ಬದುಕನ್ನು ಸುಖಮಯವಾಗಿಸಲು ಟೆಕ್ನಾಲಜಿಯ ಎಲ್ಲಾ ಬಗೆಯ ಪರಿಕರಗಳೂ ಸಾಧನಗಳೂ ಅಲ್ಲಿ ಮಡುಗಟ್ಟಿರುತ್ತವೆ. ಅದಕ್ಕಾಗಿ ಯಾವ ಬಗೆಯ ಸಂಪನ್ಮೂಲಗಳನ್ನು ನಾವು ಬಲಿ ಹಾಕುತ್ತಿದ್ದೇವೆ ಮತ್ತು ಭೂಮಿಯ ಆರೋಗ್ಯಕ್ಕೆ ಅವು ಯಾವ ರೀತಿಯಲ್ಲಿ ಮಾರಕವಾದೀತು ಎಂಬುದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವವರು ತೀರಾ ಕಮ್ಮಿ ಎಂದು ಹೆಗಡೆ ವಿಷಾದ ವ್ಯಕ್ತಪಡಿಸುವುದನ್ನು ಕೃತಿಗಳಲ್ಲಿ ನೋಡಬಹುದು. ಪಶ್ಚಿಮದಿಂದ ರವಾನಿಸಲ್ಪಡುತ್ತಿರುವ ಟೆಕ್ನಾಲಜಿಯ ಗುಣಮಟ್ಟವನ್ನು ಗಂಭೀರವಾಗಿ ವ್ಯಾಖ್ಯಾನಿಸಿದ್ದು, **"ಕೊಳೆಭರಿತ ಹಳೆ ಟೆಕ್ನಾಲಜಿಯೂ ಭಾರತಕ್ಕೆ ಬರುತ್ತಿದೆ, ಅತ್ಯಾಧುನಿಕ ಅಪಾಯಕಾರಿ ಟೆಕ್ನಾಲಜಿಯು ಬರುತ್ತಿದೆ. ನಾವು ವಿದೇಶಿಯರ ಮುಂದಿನ ಪೀಳಿಗೆಗೆ**

ಬೇಕಾಗಬಹುದಾದುದ್ದನ್ನು ಕಳುಹಿಸುತ್ತಿದ್ದೇವೆ. ಒಟ್ಟಾರೆ ದೇಶ ಸುಭದ್ರತೆಯತ್ತ, ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತಿದೆ ಎಂಬ ಭ್ರಮೆಯನ್ನು ನಮಗೆ ಹಂಚಲಾಗುತ್ತಿದೆ. ಭಾಕ್ರಾನಾಂಗಲ್ ರೈತರ ಕತೆ ಮತ್ತೆ ನೆನಪಾಗುತ್ತದೆ"[(೨೫)] ಎನ್ನುವ ಮೂಲಕ ಟೆಕ್ನಾಲಜಿಯ ಆಮದು ಮತ್ತು ರಫ್ತು ನೆಪದಲ್ಲಿ ಭಾರತಕ್ಕಾಗುತ್ತಿರುವ ವಿದೇಶಿ ಮೋಸದಾಟಗಳ ತಂತ್ರಗಳನ್ನು, ರವಾನಿಸುವ ಹಿಂದೆ ಅಡಗಿರುವ ಮರ್ಮಗಳನ್ನು ಸೂಕ್ತ ನಿದರ್ಶನಗಳ ಸಹಿತ ನಿರೂಪಿಸಿದ್ದಾರೆ. **"ಧನಿಕ ದೇಶಗಳಿಂದ ಸಾಲುಗಟ್ಟಿ ಬರುತ್ತಿರುವ ಟೆಕ್ನಾಲಜಿ ನಮ್ಮಲ್ಲಿ ಯಾವ ಬಗೆಯ ತ್ಯಾಜ್ಯಗಳನ್ನು, ವಿಷವಸ್ತುಗಳನ್ನು, ಹಳೆಯ ಹಾಗೂ ಅನಗತ್ಯ ಯಂತ್ರೋಪಕರಣಗಳನ್ನು ಸುರಿಯುತ್ತಿದೆ ಎಂಬುದರ ದಾಖಲೆಗಳು ಇಲ್ಲಿವೆ. ಈ ಟೆಕ್ನಾಲಜಿ ನಮ್ಮ ಹಳ್ಳಿಗರನ್ನು ನಗರದ ಕಡೆ ಗುಳೆ ಎಬ್ಬಿಸುತ್ತಿವೆ ವಿನಃ ಗ್ರಾಮಜೀವನವನ್ನು ಸಮೃದ್ಧಗೊಳಿಸುತ್ತಿಲ್ಲ. ಮಾರುಕಟ್ಟೆ ನೀತಿಯನ್ನು ನಮಗೆ ಕಲಿಸುವ ನೆಪದಲ್ಲಿ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಈವರೆಗೆ ಇರದಿದ್ದ ಸ್ವಾರ್ಥಪರತೆಯನ್ನೂ ಲಾಭಕೋರ ಮನೋವೃತ್ತಿಯನ್ನೂ ಬಿತ್ತನೆ ಮಾಡುವ ಟೆಕ್ನಾಲಜಿ, ನಿಸರ್ಗವನ್ನು ತಿದ್ದಿ ತೀಡಿ ಪೋಷಿಸಿ ಒಲಿಸಿಕೊಳ್ಳುವ ಬದಲು ಅದನ್ನು ಬಗ್ಗುಬಡಿದು, ಧಮಕಿ ಹಾಕಿ ಒಗ್ಗಿಸಿಕೊಳ್ಳಬೇಕೆಂಬ ಕೆಡುಪಾಠವನ್ನು ನಮಗೆ ಕಲಿಸುತ್ತಿದೆ"**[(೨೬)] ಹೀಗೆ ಹೇಳುತ್ತಾ, ಆಧುನೀಕರಣ ಮತ್ತು ಜಾಗತೀಕರಣ ನಮ್ಮ ಸುತ್ತಲೂ ನಿರ್ಮಿಸಿರುವ ಕರಿಛಾಯೆಯ ವರ್ತುಲದ ಪರಿಣಾಮಗಳ ಬಗ್ಗೆ ವಿಷಾದಿಸುವರು. ಮುಂದುವರೆದು ಇಂದು ನಾವು 'ನದಿಗಳ ಜೋಡಣೆಗೆ' ಒಪ್ಪಿಕೊಂಡು ಗಂಗಾ ಕಾವೇರಿ ಜೋಡಣೆಗೆ ಕೈ ಹಾಕಿದಾಗ ಗಂಗಾ ನದಿಯ ಸಮೃದ್ಧ ನೀರು ನಮಗೆ ನಾಳೆ ಬಂದೀತು. ಅದರ ಜತೆ ಜತೆಗೇ ಗಂಗೆಯ ದಡದಲ್ಲಿರುವ ಕಾನಪುರ, ಲಖ್ನೋ, ಅಲಹಾಬಾದ್ ನಗರಗಳ ಕೊಳೆನೀರೂ ನಮ್ಮಲ್ಲಿಗೆ ಬರುತ್ತದೆ ನಾವು ಎಚ್ಚರವಾಗಿರದಿದ್ದರೆ! ಎನ್ನುವ ಮೂಲಕ ಇಂದಿನ ಜಾಗತೀಕರಣದ ವಾಸ್ತವ ಪ್ರಜ್ಞೆಯನ್ನು ಆಳವಾಗಿ ಮೂಡಿಸಲೆತ್ನಿಸುತ್ತಾರೆ.

ಇಂದು ನಮ್ಮ ದೇಶದಲ್ಲಿ ಅಷ್ಟೋ ಇಷ್ಟೋ ಜೀವಿವೈವಿಧ್ಯ ಉಳಿದಿದೆ ಎಂದರೆ ಅದು ಪಾರಂಪರಿಕ ಕೃಷಿ ಚಟುವಟಿಕೆ ಇದ್ದಲ್ಲಿ ಮಾತ್ರ. ಮಲೆನಾಡಿನ ಅಡಿಕೆ ತೋಟಗಳಲ್ಲಿ ನೂರಾರು ಬಗೆಯ ಹಕ್ಕಿಪಕ್ಷಿಗಳು ಇಂಚರಿಸುತ್ತವೆ. ಏಡಿ, ಜೇಡ, ಕೀಟ, ಪತಂಗಗಳು ಚಲಿಸುತ್ತಿರುತ್ತವೆ. ಬೇಡ ಬೇಡವೆಂದರೂ ನರಿ, ಮುಂಗುಸಿ, ಬಾವಲಿ, ಮುಳ್ಳುಹಂದಿ, ಕಾಡು ಹಂದಿ, ಕಾಡುಕೋಣ, ಕಪಿ ಸೈನ್ಯಗಳು ಕೃಷಿ ಇದ್ದಲ್ಲಿ ಮೂಗು ತೂರಿಸುತ್ತಲೇ ಇರುತ್ತವೆ. ಅಸಂಖ್ಯಾ ಜಾತಿಯ ಗಿಡ ಮೂಲಿಕೆಗಳು, ಔಷದ ಸಸ್ಯಗಳು, ಗಡ್ಡೆ ಗೆಣಸುಗಳು ಈಗಲೂ ಇವೆ. ಏಕೆಂದರೆ ಇವುಗಳ ಬದುಕಿಗೆ ಬೇಕಾದ ಜಲಮೂಲಗಳ ರಕ್ಷಣೆ ಇದೆ. ಮಣ್ಣಿನ ಸವಕಳಿಗೆ ತಡೆಹಾಸು ಇರುತ್ತದೆ. ಗಿಡ, ಪೊದೆ, ಮರಬಳ್ಳಿ, ಮಾವು ಹಲಸಿನ ಹೆಮ್ಮರಗಳಿಗೆ ಕಾವಲು ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ನಿಸರ್ಗದ ನಿಗೂಢ ಭಂಡಾರ ಕುರಿತ ಜ್ಞಾನ ಇನ್ನೂ ಉಳಿದುಕೊಂಡಿದೆ. ಅದಕ್ಕೆ ತಕ್ಕಂತೆ ತಾನಾಗಿ ವಿಕಾಸಗೊಂಡ ಭಾಷೆ ಸಂಸ್ಕೃತಿ, ಸಂಪ್ರದಾಯಗಳೂ ಉಳಿದಿವೆ. ಇದನ್ನೆಲ್ಲಾ ನಿಜವಾದ ಸಂಪತ್ತೆಂದು ಪರಿಗಣಿಸುವುದನ್ನು ಸುಶಿಕ್ಷಿತ ಪ್ರಜೆಗಳೇ ಆಕ್ಷೇಪಿಸುತ್ತಾರೆ. ನಿಸರ್ಗ ಲೂಟಿ ಹಾಗೂ ಕಾಳಸಂತೆಯ ಅರಣ್ಯ ದಂಧೆಯಲ್ಲಿ ಭಾಗಿಯಾಗುವವರ ಸಂಸ್ಕೃತಿಯ ಬಗ್ಗೆ ಹೆಗಡೆ ಪ್ರಸ್ತಾಪಿಸುತ್ತಾ, ಅದರಲ್ಲಿ ಬಹುಪಾಲು ಮಂದಿ ಸುಶಿಕ್ಷಿತರೇ ಆಗಿದ್ದಾರೆ ಎಂಬುದನ್ನು ಕೃತಿಗಳಲ್ಲಿ ಗಮನಕ್ಕೆ ತರುತ್ತಾ ಸುಶಿಕ್ಷಿತರಲ್ಲಿರುವ ಪರಿಸರ ಪ್ರಜ್ಞೆಯ ಅವಸ್ಥೆಯನ್ನು ಚಿತ್ರಿಸುತ್ತಾರೆ.

ಹೆಗಡೆ 'ದೇಸಿ' ಜ್ಞಾನ ಸಂಪತ್ತು ಸಂರಕ್ಷಣೆಯ ಕಡೆಗೆ ಆದ್ಯತೆ ನೀಡುತ್ತಾರೆ. ನಿಸರ್ಗದ ನಿಗೂಢ ಭಂಡಾರ ಕುರಿತ ಜ್ಞಾನ ಸಂಪತ್ತು ಪರಭಾರೆ ಆಗದಂತೆ ಎಚ್ಚರ ವಹಿಸುವುದು ಅಭಿವೃದ್ಧಿಯ ವಿಚಾರಗಳಲ್ಲಿ ಒಂದು ಎಂಬುದು ಹೆಗಡೆ ಅವರ ಪ್ರಮುಖ ನಿಲುವು. ವಿದೇಶೀ ಪೇಟೆಂಟ್ ಹೆಸರಲ್ಲಿ ಇವು ಹಿಂಬಾಗಿಲಿನಿಂದ ರಾಷ್ಟ್ರ ಬಿಟ್ಹೋಗದಂತೆ ನೋಡಿಕೊಳ್ಳುವ ಗಂಭೀರತೆಯ ಬಗ್ಗೆಯೂ ಹೆಗಡೆ 'ಭೂಮಿಯೆಂಬ ಗಗನನೌಕೆ' ಕೃತಿಯ ಲೇಖನಗಳಲ್ಲಿ ಪ್ರಸ್ತಾಪಿಸಿದ್ದಾರೆ. ಆದಿವಾಸಿ, ಬುಡಕಟ್ಟು ಸಮುದಾಯದ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ತಾನಾಗಿ ವಿಕಾಸಗೊಂಡ ಭಾಷೆ ಸಂಸ್ಕೃತಿ ಸಂಪ್ರದಾಯಗಳನ್ನು ಯಥಾವತ್ತೂ ಕಾಪಾಡಿಕೊಳ್ಳುವ ಬಗ್ಗೆಯೂ ವ್ಯಕ್ತವಾಗುವಲ್ಲಿ ದೇಸೀ ಪರಿಸರ ಪ್ರಜ್ಞೆಯನ್ನು ಗುರುತಿಸಬಹುದಾಗಿದೆ.

ಒಂದು ಆದಿವಾಸಿ ಸಮುದಾಯವು ತನ್ನ ಸ್ಥಳೀಯ ಪರಿಸರವನ್ನು ಅವಲಂಬಿಸಿ ತನ್ನದೇ ನಂಬಿಕೆಗಳ ಮೂಲಕ, ಸ್ಥಳೀಯವಾಗಿಯೇ ಬದುಕುವ ಲೋಕದೃಷ್ಟಿಯ ಮಾದರಿಯನ್ನು ಯಾವ ಯೋಜನೆಯು ಒಳಗೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ ಈ ಯೋಜನೆಗಳ ಪ್ರಧಾನ ಆಶಯವೇ ಈ ವಿವೇಕವನ್ನು ನಾಶಗೊಳಿಸುವುದೇ ಆಗಿರುತ್ತದೆ. ಈ ವಿವೇಕವನ್ನು ನಾಶಗೊಳಿಸದ ಹೊರತೂ ಅಲ್ಲಿನ ಸಂಪನ್ಮೂಲಗಳ ಮೇಲೆ ಹಿಡಿತ ಈ ದೇಶದ ಯಾವುದೋ ಮೂಲೆಯಲ್ಲಿ ಕುಳಿತ ಸರ್ವಭಕ್ಷಕನಿಗೆ ಸಾಧ್ಯವಾಗುವುದಿಲ್ಲ. ರೈತಾಪಿಗಳ ಅಥವಾ ಆದಿವಾಸಿಗಳ ನಂಬಿಕೆಯ ಮೇಲೆ ಲೋಕವನ್ನು ಮಾರುಕಟ್ಟೆ ಅಥವಾ ವಿಜ್ಞಾನಗಳೆರಡೂ ಅರಿಯಲಾರವು. ಗಯಾನದ 'ಅಕವೆಯೋ ಇಂಡಿಯನ್ನರನ್ನು ನೀವು ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಿ' ಎಂದು ಅಲ್ಲಿನ ಸರ್ಕಾರ ಅವರನ್ನು ಕಾಡಿನಿಂದ ಹೊರಹಾಕಲು ಪ್ರಯತ್ನಿಸಿದಾಗ, ಆ ಜನಾಂಗದ ನಾಯಕ ಪ್ರಧಾನ ಮಂತ್ರಿಗಳಿಗೆ ಬರೆಯುತ್ತಾನೆ, **"ನಮ್ಮ ಸಂಬಂಧಗಳಿರುವುದು ಈ ಭೂಮಿಯ ಜೊತೆಗೆ. ಇದು ದೇವರಿಂದ ದೊರೆತ ಕೊಡುಗೆ. ಆ ಮೂಲಕ ನಾವೀಗ ಇರುವ ರೀತಿಯಲ್ಲಿ ಇದ್ದೇವೆ. ಈ ನೆಲದ ಮೇಲೆ ನಮ್ಮ ಮನೆಯಿದೆ. ಇಲ್ಲಿನ ದಾರಿಗಳು ನಮಗೆ ಗೊತ್ತಿವೆ. ನಾವಿಲ್ಲಿ ಹೇಳಿಕೊಳ್ಳುವ ಕತೆಗಳ ಮೂಲಕ ಅವರೆಲ್ಲಾ ಇಲ್ಲಿ ನಮ್ಮೊಂದಿಗೆ ಬದುಕಿಕೊಂಡಿದ್ದಾರೆ. ಈ ಭೂಮಿಯೊಂದರಲ್ಲಿ ಮಾತ್ರವೇ ನಾವು ಈ ಭೂಮಿಯು ನಮಗೆ ಕೊಡುವ ವಸ್ತುಗಳನ್ನು ಪಡೆದುಕೊಳ್ಳಬಲ್ಲೆವು. ಬೇಟೆಯಾಡಲಿಕ್ಕೆ, ಮೀನುಹಿಡಿಯಲಿಕ್ಕೆ, ನೆಲ ಉಳಲಿಕ್ಕೆ, ಮನೆ ಕಟ್ಟಲಿಕ್ಕೆ, ಔಷಧಿಯನ್ನು ಹುಡುಕಿಕೊಳ್ಳಲಿಕ್ಕೆ ಇಲ್ಲಿ ಮಾತ್ರವೇ ನಮಗೆ ಸಾಧ್ಯ. ಇಲ್ಲಿರುವ ದೈವಗಳಿಗೂ ನಮ್ಮ ಪರಿಚಯವಿದೆ. ಆದ್ದರಿಂದಲೇ ಅವು ನಮಗೆ ವಿಶ್ವಾಸದಿಂದ ನೆರವು ನೀಡುತ್ತವೆ. ನಾವಿಲ್ಲಿಂದ ಜಾಗ ಬಿಡಬೇಕೆಂದಾದರೆ, ನಾವು ದಿಕ್ಕು ತಪ್ಪಿ ಬೇರೆ ಊರಿನವರ ಆಸರೆಗೆ ಬೀಳಬೇಕಾಗುತ್ತದೆ. ಇವೆಲ್ಲವೂ ನಮಗೆ ದು:ಖದ ಸಂಗತಿ, ಸಾವಿನಷ್ಟೇ ದು:ಖದ ಸಂಗತಿ."**[೨೭] ಅಂದು ಮನವಿಯಂತೆ ಉಚ್ಚರಿಸಿದ ಈತನ ಮಾತುಗಳು ಇಂದು ಚರಮಗೀತೆಯಾಗಿ ಕೇಳುತ್ತಿವೆ. ಏಕೆಂದರೆ ಪ್ರಗತಿ ಪಥದ ಹಿಂದಿರುವ ನಿರ್ಲಕ್ಷಕ್ಕೆ ಪವಿತ್ರ ಸ್ಮೃತಿಗಳ ಬಗ್ಗೆ ಗೌರವವಿಲ್ಲ ಎನ್ನುತ್ತಾರೆ ಶಿವ ವಿಶ್ವನಾಥನ್.

ಪ್ರಗತಿಯಾಗಲಿ ಸರ್ವಜನರ ಏಳಿಗೆಗೆ ರೂಪಿಸುವ ಯಾವುದೇ ಯೋಜನೆಗಳಾಗಿರಲಿ ಅವು ಪ್ರಜಾಸತ್ತಾತ್ಮಕವಾಗಿರಬೇಕು. ಸಹಭಾಗಿತ್ವದಲ್ಲಿ ಮತ್ತು ಪರಸ್ಪರ ಅನುಭವಗಳ ಹಂಚಿಕೆ,

ಹಿಮ್ಮಾಹಿತಿ ಆಧರಿಸಿ ಯೋಜನೆಗಳು ರೂಪುಗೊಳ್ಳಬೇಕು. ಒಕ್ಕಲೆಬ್ಬಿಸಿ ಅನುಷ್ಠಾನಕ್ಕೆ ಮುಂದಾಗುವ ಅಭಿವೃದ್ಧಿಯು ಒಂದು ಸಮುದಾಯದ ಹಿತವನ್ನೇ ಬಲಿತೆಗೆದುಕೊಳ್ಳುತ್ತಿದೆ ಎಂಬ ಅಭಿಪ್ರಾಯ ಸ್ಥಳಿಯರಿಂದಲೇ ವ್ಯಕ್ತಗೊಳ್ಳುವಾಗ ಯೋಜನೆಗಳಿಗೆ ಸ್ಪಷ್ಟ ಮತ್ತು ಮರು ಆಲೋಚನೆ ಎಂದಿಗೂ ಅಗತ್ಯ ಸ್ಥಳಿಯರ ಅಭಿವ್ಯಕ್ತಿಗಳನ್ನು ಹರಣ ಮಾಡುತ್ತಲೇ ನಿಸರ್ಗವನ್ನು ದೋಚುತ್ತಿರುವ ಪಟ್ಟಭದ್ರ ಹಿತಾಸಕ್ತಿಗಳು ಇರುವವರೆಗೂ ಇಂತಹ ಅನೇಕ ಚರಮಗೀತೆಗಳಿಗೆ ಬೆಲೆಯೇ ಇರುವುದಿಲ್ಲ ಎನಿಸುತ್ತದೆ.

'ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು' ಕೃತಿಯಲ್ಲಿ ನೆಡುತೋಪು ದಿನದ ಬಗ್ಗೆ ಚರ್ಚಿಸುತ್ತಾ, ವಿಪರ್ಯಾಸ ಏನೆಂದರೆ, ಏಕಜಾತಿಯ ನೆಡುತೋಪುಗಳ ವಿರುದ್ಧ ಎಲ್ಲರಿಗಿಂತ ಮೊದಲು ಚಳವಳಿ ಆರಂಭಿಸಿದವರು ಕನ್ನಡಿಗರು. ನೀಲಗಿರಿ ಸಸ್ಯಗಳನ್ನು ಕಿತ್ತುಹಾಕಿ, ಜನಪರ ಸಸ್ಯಗಳನ್ನು ಹಚ್ಚುವ 'ಕಿತ್ತಿಕೊ-ಹಚ್ಚಿಕೊ' ಚಳುವಳಿಯನ್ನು ಮೊದಲು ನಡೆಸಿದವರು ನಾವು! ಡಾ.ಶಿವರಾಮ ಕಾರಂತರ ನೇತೃತ್ವದಲ್ಲಿ ನ್ಯಾಯಾಲಯಕ್ಕೆ ಹೋಗಿ ನೆಡುತೋಪು ನಿಗಮದ ವಿರುದ್ಧ ದಾವೆ ಹೂಡಿ ಗೆದ್ದವರು ನಾವು. ನೆಡುತೋಪು ಬೆಳೆಸಲೆಂದೇ ಆರಂಭವಾಗಿದ್ದ 'ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್' ಎಂಬ ಸರಕಾರಿ ಕಂಪನಿಯನ್ನೇ ಮುಚ್ಚಿಸಿದವರು ನಾವು. ಆದರೆ ಸೆಪ್ಟಂಬರ್ ೨೧ರ ಜಾಗತಿಕ ಮಟ್ಟದ 'ನೆಡುತೋಪು ವಿರೋಧಿ ದಿನ' ಮಾತ್ರ ನಮಗೆ ಹೊಸದು[೨೮] ಎನ್ನುವುದರೊಂದಿಗೆ ಆಚರಣೆಯಲ್ಲಿ ಮರೆತಿರುವ ಪರಿಸರದ ಮುಖ್ಯದಿನಗಳ ಅಲಕ್ಷಿತ ಪ್ರಜ್ಞೆಯನ್ನು ಹೆಗಡೆ ಗುರುತಿಸಿದ್ದಾರೆ. ನಿಸರ್ಗದ ಶಕ್ತಿಗಳು ಲಕ್ಷಾಂತರ ವರ್ಷಗಳಿಂದ ನಿಧಾನವಾಗಿ ಕೆಲಸ ಮಾಡಿ ನಮ್ಮೆಲ್ಲರ ಬದುಕಿಗೆ ಅನುಕೂಲವಾಗುವಂತೆ ನಿರ್ಮಿಸಿಟ್ಟ ಸಮತೋಲನವನ್ನು ಒಂದೇ ಪಂಚವಾರ್ಷಿಕ ಯೋಜನೆಯಲ್ಲಿ ಅಧ್ವಾನ ಮಾಡಿ, ಮುಂದಿನ ಇಡೀ ಪೀಳಿಗೆಯ ಬದುಕು ದುಸ್ತರವಾಗುವಂತೆ ಮಾಡುವ ಅಪರಾಧಿಯೇ ಬುಲ್‌ಡೋಜರ್ ಎನ್ನುವ ಮೂಲಕ ಯಂತ್ರ ನಾಗರೀಕತೆಯ ಅಭಿವೃದ್ಧಿಯನ್ನು ಹೆಗಡೆ ಅವರು ದೂಷಿಸುವರು. ಬುಡಮೇಲು ಮಾಡುವ, ನೆಲಸಮಗೊಳಿಸುವ, ಕ್ಷಣಮಾತ್ರದಲ್ಲಿ ನಿಸರ್ಗ ಮತ್ತು ಭೂ ಸ್ವರೂಪವನ್ನೇ ಅಲ್ಲೋಲ ಕಲ್ಲೋಲ ಮಾಡಿಬಿಡುವ ಬುಲ್‌ಡೋಜರ್ ಸಂಸ್ಕೃತಿಯ ವಿಧ್ವಂಸಕಾರಿ ಕೃತ್ಯಗಳನ್ನು ನಾನಾಬಗೆಯಲ್ಲಿ ಚಿತ್ರಿಸಿದ್ದಾರೆ. **"ಮನುಷ್ಯನ ಲೌಕಿಕ ಅವಶ್ಯಕತೆಗಳನ್ನೂ, ಆಡಂಬರಗಳನ್ನೂ ಪೂರೈಸಿಕೊಳ್ಳಬೇಕೆಂದರೆ ಕುಡುಗೋಲಿನಷ್ಟೇ ಬುಲ್‌ಡೋಜರ್ ಕೂಡಾ ಅಗತ್ಯ ಎಂಬುದನ್ನು ನಾನು ನನಗೆ ಹೇಳಿಕೊಳ್ಳಲು ಯತ್ನಿಸುತ್ತೇನೆ. ನನ್ನ ಒಲೆಯ ಮೇಲೆ ಅನ್ನ ಬೇಯಬೇಕೆಂದರೆ ಅಲ್ಯೂಮಿನಿಯಮ್ ಪಾತ್ರೆಬೇಕು; ಅದಕ್ಕೆ ಬೇಕಾದ ಬಾಕ್ಸಾಯಿಟ್ ಅದುರನ್ನು ಅಗೆಯಲು ಈ ದೈತ್ಯಯಂತ್ರಬೇಕು. ಅನ್ನ ಬೆಂದಿತೋ ಇಲ್ಲವೋ ನೋಡಲು ಬೆಳಕು ಬೇಕು; ವಿದ್ಯುತ್ ಸ್ಥಾವರ ನಿರ್ಮಾಣ ಮಾಡಲು ಬುಲ್‌ಡೋಜರ್ ಬೇಕು. ಮೂಲಕ್ಕೇ ಬರಬೇಕೆಂದರೆ, ಅಕ್ಕಿ ಬೆಳೆಯಲು ನೀರಾವರಿ ಬೇಕು; ಅಣೆಕಟ್ಟು ನಿರ್ಮಿಸಲು ಬುಲ್‌ಡೋಜರ್ ಬೇಕೇ ಬೇಕು. ಆದರೂ ಕಾಂಪ್ರೊಮೈಸ್ ಸಾಧ್ಯವಾಗುತ್ತಿಲ್ಲ. ಕುದುರೆಮುಖದಿಂದ ಕಕ್ಕಲಾಗುತ್ತಿರುವ ಅದುರಿನ ಪುಡಿ ರಾಶಿರಾಶಿಯಾಗಿ ಬಂದು ಭದ್ರಾನದಿಗೆ ಬೆಟ್ಟದಷ್ಟು ಮೆಕ್ಕಲು ಸೇರಿಸಲು ಇದೇ ಬುಲ್‌ಡೋಜರ್ ಕಾರಣ. ವೇದಕಾಲದಿಂದಲೂ ಪಂಚ ಮಹಾಭೂತಗಳ ಬಗ್ಗೆ ಹಾಗೂ ಪ್ರಕೃತಿ-ಪುರುಷರ ಏಕತಾನದ ಬಗ್ಗೆ ಉದಾತ್ತ ವಿಚಾರಗಳನ್ನಿಟ್ಟುಕೊಂಡು ಬಂದ ನಾವು ಕಳೆದ ಕೆಲವೇ ದಶಕಗಳಲ್ಲಿ ನೀರು-ಗಾಳಿ-ಭೂಮಿ-ಸಸ್ಯ-ಪ್ರಾಣಿಗಳ ಮಧ್ಯೆ ಹೀಗೇಕೆ ಸಮತೋಲನ ಬಿಗಡಾಯಿಸುವಲ್ಲಿ**

ತಲ್ಲೀನರಾಗಿದ್ದೇವೆ? ಅಭಿವೃದ್ಧಿ ಎಂದರೆ ಅರಣ್ಯ ಬಲಿದಾನ, ಬಂಜರು ಭೂಮಿಯ ವಿಸ್ತರಣೆ, ನೆಲಜಲಮಾಲಿನ್ಯ ಅನಿವಾರ್ಯವೆಂಬುದನ್ನು ಒಪ್ಪಿಕೊಳ್ಳತೊಡಗಿದ್ದೇವೆ. ಬುಲ್‌ಡೋಜರ್ ಸಂಸ್ಕೃತಿ ನಮಗೇಕೆ ಆಪ್ಯಾಯಮಾನವಾಗುತ್ತಿದೆ?[೨೯] ಎನ್ನುತ್ತಾ, ಈ ಯಂತ್ರ ಸಂಸ್ಕೃತಿಯು ನಿತ್ಯದ ಬದುಕನ್ನು ಮತ್ತು ಸುತ್ತುವರಿದ ಪರಿಸರವನ್ನು ಹೇಗೆಲ್ಲಾ ಆವರಿಸಿಕೊಂಡು ಪರಿಸರದ ಮೂಲ ಸ್ವರೂಪವನ್ನು ಭಗ್ನಗೊಳಿಸುತ್ತಿದೆ ಹಾಗೂ ಪಶ್ಚಿಮದ ಯಂತ್ರ ನಾಗರೀಕತೆಯು ಪೂರ್ವರಾಷ್ಟ್ರಗಳ ಅಭಿವೃದ್ಧಿ ಕ್ರಮಗಳನ್ನು ಮತ್ತು ರವಾನಿಸುತ್ತಿರುವ ತಂತ್ರಜ್ಞಾನದ ಮೂಲಕ ಬೆಳವಣಿಗೆಯ ರೀತಿನೀತಿಗಳನ್ನು ನಿಯಂತ್ರಿಸುತ್ತಿರುವ ಬಗ್ಗೆಯೂ ಹೆಗಡೆ ಲೇಖನದಲ್ಲಿ ಎಳೆಎಳೆಯಾಗಿ ವಿವರಿಸಿದ್ದಾರೆ. ದೇಶ ಕಟ್ಟುವ ಕೆಲಸವನ್ನು ಖಾಸಗಿ ಕಂಪನಿಗಳಿಗೆ ಒಪ್ಪಿಸಿದ್ದಾಗಿದೆ. ಕೊಳ್ಳುಬಾಕತನವೇ ಪ್ರಗತಿಯ ಮೂಲಮಂತ್ರವಾಗಿದೆ. ಇದರ ಪರಿಣಾಮವೇನೆಂದರೆ ಕೇವಲ ೧೫ ವರ್ಷಗಳಲ್ಲಿ ನಮ್ಮ ಶತಕೋಟ್ಯಾಧೀಶರ ಸಂಖ್ಯೆ ಐವತ್ತಕ್ಕೇರಿದೆ. ಗೌರವಯುತ ಬದುಕನ್ನು ನಡೆಸಲಾಗದೆ ಸುಮಾರು ಎರಡು ಲಕ್ಷ ಪ್ರಜೆಗಳು ಇದೇ ಅವಧಿಯಲ್ಲಿ ಜೀವಹರಣ ಮಾಡಿಕೊಂಡಿದ್ದಾರೆ. ಇವೆರಡರ ಮಧ್ಯೆ ನಿತ್ಯದ ಬದುಕಿನಲ್ಲಿ ಗ್ರಹಿಕೆಗೆ ಬಾರದ ಅವೆಷ್ಟೋ ಚಿಕ್ಕ ದೊಡ್ಡ ಸಂಗತಿಗಳು ನಮ್ಮ ದೇಶವನ್ನು ಹಂತ ಹಂತವಾಗಿ ದುರಂತದತ್ತ ತಳ್ಳುತ್ತಿರುವ ವ್ಯವಸ್ಥಿತ ಸಂಚುಗಳ ಬಗ್ಗೆ ಅಭಿವೃದ್ಧಿಯ ಅಂಧಯುಗದಲ್ಲಿ ಚಿತ್ರಿಸಲಾಗಿದೆ. ಇಂದಿನ ಭಾರತದ ದಾರುಣ ಕತೆಯನ್ನು ಅರ್ಥೈಸಲು ಹೆಗಡೆ ಕೊಡುವ ಉದಾಹರಣೆಗಳೇ ಈ ದೇಶದ ಭವಿಷ್ಯ ಕುರಿತು ಯುವಪೀಳಿಗೆ ಗಂಭೀರವಾಗಿ ಚಿಂತಿಸಲು ದಾರಿಯಾಗುತ್ತವೆ. ಪ್ರಪಂಚದ ಬಹುಸಂಖ್ಯಾತ ಜನರು ನಿಸರ್ಗದೊಂದಿಗಿನ ತಮ್ಮ ಸಂಬಂಧವನ್ನು ತುಂಡರಿಸಿಕೊಂಡಿದ್ದು, ಚರ್ನೊಬಿಲ್‌ನಂಥ ದುರ್ಘಟನೆಗಳು ಮನುಷ್ಯ ಮತ್ತು ಪರಿಸರದ ಮಧ್ಯೆ ಹದಗೆಟ್ಟ ಬಾಂಧವ್ಯದ ಪ್ರತೀಕವಾಗುತ್ತಿರುವುದನ್ನು ಪ್ರಸ್ತಾಪಿಸಿದ್ದಾರೆ.

'ಕಾಳಿ ಕಣಿವೆಯಲ್ಲಿ ಕಣ್ಣೀರ ಧಾರೆ' ಲೇಖನದಲ್ಲಿ ಕಾಳಿ ಕಣಿವೆಯಲ್ಲಾಗುತ್ತಿರುವ ಅಭಿವೃದ್ಧಿಯ ಮುಖಗಳಲ್ಲಿ ಮಾನವನ ಹಸ್ತಕ್ಷೇಪದ ಅಧ್ವಾನಗಳನ್ನು ಕಾಣಬಹುದಾಗಿದೆ. ಕೇವಲ ೨೦ ವರ್ಷಗಳ ಹಿಂದೆ ಸ್ವಚ್ಛಂದವಾಗಿ ಹರಿಯುತ್ತಿದ್ದ ಪುಟ್ಟ ನದಿ ಕಾಳಿ ಈಗ ಅಲ್ಲಿನ ಜೀವಜಂತುಗಳ ಪಾಲಿಗೆ ಕಣ್ಣೀರಿನ ಕೋಡಿಯಾಗಿರುವ ರೀತಿ, ಸಹಸ್ರಾರು ವರ್ಷಗಳಿಂದ ಕಗ್ಗಾಡಿನ ಮಧ್ಯೆ ತನ್ನ ಮಾರ್ಗ ತಾನೇ ಸವೆಸುತ್ತ, ಕೊಳ್ಳ ನಿರ್ಮಿಸಿಕೊಳ್ಳುತ್ತ, ಜೀವಂತ ಧಾರೆಯಾಗಿ ಧುಮುಕುತ್ತಿದ್ದ ಕಾಳಿ ಸ್ವತಃ ಈಗ ಕಂಗೆಟ್ಟು ಅಲ್ಲಲ್ಲಿ ಮಡುಗಟ್ಟಿ, ಕೊಳೆ ಪೇರಿಸಿಕೊಂಡು ಅಶ್ರುಧಾರೆಯಂತಾಗಿ ಅರಬ್ಬೀ ಸಮುದ್ರ ಸೇರುತ್ತಿರುವ ವಾಸ್ತವ ಚಿತ್ರಣವನ್ನು ಲೇಖನದಲ್ಲಿ ತೆರೆದಿಟ್ಟಿದ್ದಾರೆ. ಕರ್ನಾಟಕದಲ್ಲಷ್ಟೇ ಅಲ್ಲ, ಬಹುಶಃ ಭಾರತ ದೇಶದ ಬೇರೆಲ್ಲೂ ಇಷ್ಟು ಚಿಕ್ಕ ನದಿ ಇಷ್ಟು ಕ್ಷಿಪ್ರ ಅವಧಿಯಲ್ಲಿ ಇಷ್ಟೆಲ್ಲ ಮಾರ್ಪಾಡಿಗೆ ಕಾರಣವಾದದ್ದಿಲ್ಲ ಎಂಬುದು ಹೆಗಡೆ ಅವರ ಬಲವಾದ ಅಭಿಪ್ರಾಯವಾಗಿದೆ. ಇಂದಿನ 'ಯಂತ್ರಮಾನವ' ಕೇವಲ ತಾತ್ಪೂರ್ತಿಕ ಲಾಭಕ್ಕೆಂದು ತನ್ನೆಲ್ಲ ವಿವೇಕವನ್ನೂ ಬದಿಗಿಟ್ಟು ಇಲೆಕ್ಟ್ರಿಕ್ ಗರಗಸವನ್ನೋ, ಡೈನಮೈಟ್-ಡ್ರಿಲ್ಲಿಂಗ್ ಯಂತ್ರಗಳನ್ನೋ ಕೈಗೆತ್ತಿಕೊಂಡು ಕಣಿವೆಗೆ ಇಳಿದರೆ ಎಂಥ ಅಧ್ವಾನ ಆಗುತ್ತದೆ ಎಂಬುದನ್ನು ನೋಡಲು ಕಾಳಿ ಕಣಿವೆಗೆ ಬರಬೇಕು ಎನ್ನುವಂತಹ ವಿಷಾದನೀಯ ನಿವೇದನೆಯನ್ನು ಅಲ್ಲಿ ಕಾಣಬಹುದಾಗಿದೆ. ಹುಳುಹುಪ್ಪಡಿ, ಕಿರುಜಂತುಗಳ ಮಾತಂತಿರಲಿ, ಮುಳುಗಡೆಗೆ ಮುಂಚೆ ಹುಲಿ, ಕಡವೆ, ದೈತ್ಯ ಗಿಡ ಮರಗಳ ವನಗಣತಿ ನಡೆಸುವ ಗೋಜಿಗೂ

ಯಾರೂ ಹೋಗಲಿಲ್ಲ. ಅಲ್ಲಿನ ದಟ್ಟ ಜೀವಾಶ್ರಯವನ್ನೇ ಸರ್ವೆ ಮಾಡಬಲ್ಲ ತಜ್ಞರೇ ಇರಲಿಲ್ಲವೆ? ಡ್ಯಾಮ್ ಕಟ್ಟುವ ಕ್ಲಿಷ್ಟ ಕೆಲಸಕ್ಕೆ ಇಟಲಿ ದೇಶದಿಂದ ಎಂಜಿನಿಯರಿಂಗ್ ತಜ್ಞರನ್ನು ಕರೆಸಿದ್ದ ಕೆ.ಪಿ.ಸಿ ಧುರಂಧರರು ಇಲ್ಲೇ ಪಕ್ಕದ ವಿಶ್ವವಿದ್ಯಾಲಯಗಳಿಂದ ಸಸ್ಯತಜ್ಞ, ಕೀಟ ತಜ್ಞರನ್ನು ಕರೆಸಲು ಆಸಕ್ತಿ ತೋರಿಸಲಿಲ್ಲವೆ?[೩೦] ಎನ್ನುತ್ತಾ, ಸರ್ಕಾರದ ಹಂತದಲ್ಲಿ ಯೋಜಿಸಲ್ಪಡುವ ಇಂದಿನ ಅಭಿವೃದ್ಧಿ ಕಾರ್ಯಕ್ರಮಗಳ ರೂಪುರೇಷೆ, ನೀತಿಗಳ ನಿರೂಪಣೆ, ನೀಲಿನಕಾಶೆ, ಕಾರ್ಯಚಟುವಟಿಕೆಗಳ ಆಯೋಜನೆ, ಸ್ಥಳೀಯ ಮಾನವ ಸಂಪನ್ಮೂಲ ಬಳಕೆಗೆ ಅವಕಾಶ ಇಲ್ಲದಿರುವಿಕೆ, ಪ್ರಾಥಮಿಕ ಹಂತದ ಜವಾಬ್ದಾರಿಗಳ ನಿರ್ವಹಣೆಯಲ್ಲಿ ಸ್ಥಳಿಯರು ಭಾಗಿಯಾಗಲು ಅವಕಾಶಗಳಿಲ್ಲದಿರುವುದು, ಪರಿಸರ ತಜ್ಞರ, ಅನುಭವಸ್ಥರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮೇಲ್ಮಟ್ಟದ ಯೋಜನೆಗಳಲ್ಲಿ ಮನ್ನಣೆ ಇಲ್ಲದಿರುವುದನ್ನು ಗುರುತಿಸುತ್ತಾರೆ. ಹೊರದೇಶದಿಂದ ಇಂಜಿನಿಯರ್‌ಗಳನ್ನು ಕರೆಸುವಲ್ಲಿ ಉತ್ಸುಕರಾಗುವ ಅಧಿಕಾರಿಗಳು ಮತ್ತು ರಾಜಕಾರಣಿಗಳು ನಮ್ಮ ನೆಲವನ್ನು ಅರಿತ ಮತ್ತು ನಿಸರ್ಗದ ಅಪಾಯವನ್ನು ಕುರಿತು ಅನುಭವ ಜನ್ಯತೆಯಿಂದ ವಿವರಿಸಬಲ್ಲವರು ಈ ವ್ಯವಸ್ಥೆಗೆ ಬೇಕಿಲ್ಲದಿರುವುದನ್ನು ಗಮನಕ್ಕೆ ತರುವ ಮೂಲಕ ಸರ್ಕಾರದ ಅಭಿವೃದ್ಧಿ ಧೋರಣೆಗಳನ್ನು ಕಟುವಾಗಿ ಟೀಕಿಸಿದ್ದಾರೆ.

ಆಧುನಿಕ ವಿಜ್ಞಾನದ ತತ್ವಗಳನ್ನೇ ನಾವೀಗ ಬದಲಾಯಿಸಬೇಕಾಗಿ ಬಂದಿದೆ. ಪುಷ್ಕಿನಾನೋಕಾ ಪಟ್ಟಣದಲ್ಲಿ ಮನುಷ್ಯ ಮತ್ತು ಜೀವಮಂಡಲ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ ನಡೆದಿರುವ ಬಗ್ಗೆ ದಾಖಲಿಸುತ್ತಾ, ನಿಸರ್ಗವನ್ನು ಬಗ್ಗು ಬಡಿದೇ ಪ್ರಗತಿ ಸಾಧಿಸಬೇಕೆಂಬ ಪರಿಸರ ವಿರೋಧಿಗಳನ್ನು ತಿದ್ದಲು ಈ ಸಮಾವೇಶ ಸಹಾಯವಾಗುವುದು ಎಂದು ನಂಬಿರುವ ನಾಗೇಶ ಹೆಗಡೆ ಅವರು ಅಭಿವೃದ್ಧಿಯ ಅಂಧಯುಗ' ಕೃತಿಯಲ್ಲಿ ಇಕಾಲಜಿಯ ಬಗ್ಗೆ ನಾಗೇಶ ಹೆಗಡೆ ಅವರು ಚರ್ಚಿಸುತ್ತಾ, **"ಇಕಾಲಜಿಯ ಪ್ರಶ್ನೆ ಬಂದಾಗ ಅಭಿವೃದ್ಧಿಯ ಪ್ರಶ್ನೆ ಹಾಗಿರಲಿ 'ರಾಷ್ಟ್ರ'ದ ಪರಿಕಲ್ಪನೆಯೇ ಅಪ್ರಸ್ತುತವಾಗುತ್ತದೆ. ಶರಾವತಿ ಕೊಳ್ಳವಾಗಲಿ, ಸೈಲೆಂಟ್ ವ್ಯಾಲಿಯಾಗಲೀ ರಾಷ್ಟ್ರದ ಆಸ್ತಿಯಲ್ಲ. ಅದು ಪೃಥ್ವಿಯ ಆಸ್ತಿ. ಅಲ್ಲಿಯದೇನಾದರೂ ಈ ಭೂಮಿಯಿಂದ ಶಾಶ್ವತವಾಗಿ ಕಣ್ಮರೆಯಾದರೆ ಪೃಥ್ವಿಯ ಇನ್ನೊಂದು ಮಗ್ಗುಲಲ್ಲಿರುವ ಸಹೃದಯಿಯ ಮನಸ್ಸು ಮಿಡುಕಬೇಕಾಗುತ್ತದೆ. ವಿಜ್ಞಾನಿಗಳೂ ಕಾಲಿಡದ, ವಿವೇಕಿಗಳ ಗಮನಕ್ಕೂ ಬಾರದ ಭೂಭಾಗವೊಂದು ಇಂದಿನವರ ತುರ್ತಿಗಾಗಿ ಧ್ವಂಸವಾಗುತ್ತದೆ. ಪೃಥ್ವಿ ಅಪ್ಪರಮಟ್ಟಿಗೆ ಶಾಶ್ವತವಾಗಿ ಊನವಾಗುತ್ತದೆ. ಮಹಾ ಮಾರಿಯೊಂದು ದಾಳಿಯಿಟ್ಟು ದಾಂಧಲೆ ಮಾಡಿದ ಕುರೂಪಿ ಕಲೆ ಮಾತ್ರ ಅಲ್ಲಿ ಉಳಿಯುತ್ತದೆ."**[೩೧] ಎನ್ನುತ್ತಾರೆ. ತಮ್ಮ ಕೃತಿಗಳಲ್ಲಿ ಸಮಸ್ತ ಜೀವರಾಶಿಗಳ ಬದುಕಿಗೆ ಏಕೈಕ ಜೀವಗೋಲವಾದ ಈ ಭೂಮಿಯ ಉಳಿವನ್ನು ಪ್ರಧಾನ ಆಶಯವನ್ನಾಗಿ ಇಟ್ಟುಕೊಳ್ಳುತ್ತಾ ಸವಿಸ್ತಾರ ನಿದರ್ಶನಗಳ ಮೂಲಕ ಪರಿಣಾಮಕಾರಿಯಾಗಿ ಮಂಡಿಸಿದ್ದಾರೆ ಮತ್ತು ಸೈದ್ಧಾಂತಿಕವಾಗಿ ಅದನ್ನು ಪ್ರತಿಪಾದಿಸಿದ್ದಾರೆ. ಒಟ್ಟಾರೆ ಹೇಳುವುದಾದರೆ, ಭಾರತದ ಅಭಿವೃದ್ಧಿಯ ಚಿತ್ರವೆಂದರೆ ಅತಿವೆಚ್ಚ, ಕಡಿಮೆ ಗುಣಮಟ್ಟ, ಪರಿಸರಕ್ಕೆ ಹಾನಿ ಮತ್ತು ಸಾರ್ವಜನಿಕ ಅಸಮಾನತೆಗಳೇ ಆಗಿಬಿಟ್ಟಿವೆ. ಭಾರತ ಇಂದು ಸರ್ವಭಕ್ಷಕರಿಗಾಗಿ, ಸರ್ವಭಕ್ಷಕರಿಂದ ಆದ ಸರ್ವಭಕ್ಷಕ ಪ್ರಜಾಪ್ರಭುತ್ವವಾಗಿದೆ. ಇಲ್ಲಿ ಯಾವ ಯೋಜನೆ ಜಾರಿಗೆ ಬಂದರೂ ಅದು ಸರ್ವಭಕ್ಷಕರಿಗಾಗಿಯೇ ಇರುತ್ತದೆ. ಇದರ ಮುಂದೆ ಪರಿಸರವು ನಿಲ್ಲಲಾರದು. ಪರಿಸರ ಸ್ನೇಹಿ ಜನರು ನಿಲ್ಲುವಂತಿಲ್ಲ. ಪರಿಸರದಿಂದ ತಮಗೆ ಬೇಕಾದ ಸಂಪನ್ಮೂಲಗಳನ್ನು

ಇವರು ಕಿತ್ತುಕೊಳ್ಳುತ್ತಾರೆ. ಕಿತ್ತುಕೊಳ್ಳುವ ವೆಚ್ಚ ಪರಿಸರ ಸ್ನೇಹಿ ಜನರ ಹೆಗಲಿಗೆ. ಏನನ್ನೂ ತೆರಬೇಕಾಗಿಯೂ ಇಲ್ಲ. ಯಾರಿಗೂ ಲೆಕ್ಕ ಕೊಡಬೇಕಾಗಿಯೂ ಇಲ್ಲ ಎಂದಾಗ ಜವಾಬ್ದಾರಿ ಎಲ್ಲಿಂದ ಬರಬೇಕು? [(೩೨)] ನಮ್ಮ ಕ್ಷೀಣಿಸುತ್ತಿರುವ ಸಂಪನ್ಮೂಲಗಳ ಅತ್ಯಂತ ಬೇಜವಾಬ್ದಾರಿಯುತ ಹಾಗೂ ಅದಕ್ಷ ಬಳಕೆ ಇಲ್ಲಿ ನಡೆದಿದೆ. ಅಭಿವೃದ್ಧಿ ಪಥದ ಬಗ್ಗೆ ಅತ್ಯಂತ ಕಟುವಾದ ಟೀಕೆ ಬಂದಿರುವುದು ಈ ನೆಲೆಯಲ್ಲಿ. ಯೂರೋಪಿನಲ್ಲಿ ಹೊಸ ನಾಗರೀಕತೆಯಾದ ಬಂಡವಾಳಶಾಹಿ ಹುಟ್ಟಿದ್ದೇ ಕೆಲವು ರೀತಿಯ ಮೌಲ್ಯಗಳಿಂದ. ಇದು 'ಎನ್‌ಲೈಟನ್‌ಮೆಂಟ್‌ನ ಯುಗ' ಎಂದು ಚರಿತ್ರಕಾರರು ಕರೆಯುವ ಚಾರಿತ್ರಿಕ ಘಟ್ಟದಿಂದ ಪ್ರಾರಂಭವಾಯಿತು. ಒಟ್ಟಾರೆ ಒತ್ತಡ ನಿರ್ಮಾಣಗೊಂಡಿರುವುದು, ಪ್ರಕೃತಿ ಇರುವುದು ಮಾನವನ ಉಪಭೋಗಕ್ಕೆ ಎಂಬುವಲ್ಲಿ. ಪ್ರಕೃತಿ ಒಂದು ಜೀವ ರಹಿತ ಜಡಪದಾರ್ಥ ಸಮೂಹ. ಸದನ್ನು ಮಾನವ ತನ್ನ ಸುಖವಿಲಾಸಿ ಸೌಲಭ್ಯಗಳನ್ನಾಗಿ ಪರಿವರ್ತಿಸುವುದೇ ನಾಗರೀಕತೆಯ ಮುಖ್ಯ ಲಕ್ಷಣ ಎಂಬರ್ಥದಲ್ಲಿ ಜ್ಞಾನಕ್ರಮಗಳು ಬೆಳೆಯುತ್ತಾ ಬಂದವು. 'ಪ್ರಗತಿ' ಎನ್ನುವ ಕಲ್ಪನೆ ಪ್ರಧಾನವಾಗಿ ಸರಳರೇಖಾತ್ಮಕವಾದದ್ದು ಮತ್ತು ನಿರಂತರವಾದದ್ದು ಎಂಬ ನಂಬಿಕೆ ಬೆಳೆಯುತ್ತಾ ಹೋಯಿತು. ಇದರ ಜೊತೆಗೆ 'ಅಭಿವೃದ್ಧಿ' ಎನ್ನುವ ಪರಿಕಲ್ಪನೆ ಕೂಡ ಪ್ರಶ್ನಾತೀತ ಆದರ್ಶವಾಗಿ ಬೆಳೆಯುತ್ತಾ ಬಂತು.[(೩೩)] ಇದು ಕೇವಲ ಕೋಟಿಗಳ ಮೇಲಿನ ಚಿಲ್ಲರೆಯನ್ನು ಗುರಿಯಾಗಿ ಹೊಂದಿತ್ತು ಎಂಬುದೇ ಸಹಭಾಗಿತ್ವದ ಕಲ್ಪನೆಯನ್ನು 'ಹೊಸದು' ಎಂದು ಹೇಳುತ್ತಿರುವ ಹಿನ್ನೆಲೆಗಳಿಗೆ ಕಾರಣವಾಗಿರಬೇಕು.

೭.೫ ಕೃತಿಕಾರರ 'ಅಭಿವೃದ್ಧಿ' ಪರಿಭಾಷೆಯ ಗ್ರಹಿಕೆಗಳು

ಈ ಅಧ್ಯಾಯದಲ್ಲಿ ಪರಿಗಣಿಸಬಹುದಾದ ಮುಖ್ಯ ಅಂಶವೆಂದರೆ, ತಾವು ವಾಸಮಾಡಿದ ಮತ್ತು ಅನುಭವಗಳನ್ನು ಕಟ್ಟಿಕೊಟ್ಟ ತಮ್ಮ ಸ್ಥಳೀಯ ಪರಿಸರದ ವಿರುದ್ಧ ಅಭಿವೃದ್ಧಿ ಹೆಸರಿನಲ್ಲಿ ನಡೆಸಲ್ಪಡುವ ಆಕ್ರಮಣಶೀಲ ಪ್ರವೃತ್ತಿಯ ಬಗ್ಗೆ ವರ್ತಿಸುವ ಇಬ್ಬರ ಸಂವೇದನೆಗಳು ಒಂದೇ ತೆರನಾಗಿವೆ. ಇಬ್ಬರೂ ಪಶ್ಚಿಮಘಟ್ಟದ ಮಡಿಲಲ್ಲೇ ಹುಟ್ಟಿ ಬೆಳೆದವರು. ದಟ್ಟ ಕಾನನವನ್ನು, ಅಲ್ಲಿನ ಜೀವ–ವೈವಿಧ್ಯದ ಜಗತ್ತನ್ನು ಹತ್ತಿರದಿಂದಲೇ ಕಂಡವರು. ಇಂದ್ರೀಯ ಜನ್ಯವಾಗಿ ಅನುಭವಿಸಿದವರು. ಪಶ್ಚಿಮ ಘಟ್ಟಗಳ ಪತನದ ಸಂಗತಿಗಳಿಗೆ, ಅತಿಕ್ರಮಣಗಳಿಗೆ ಸಂದರ್ಭಾನುಸಾರ ಸ್ಪಂದಿಸಿದವರು. ಆದ್ದರಿಂದಲೇ ತೇಜಸ್ವಿ ಅವರಿಗೆ ಸ್ಥಳೀಯವಾಗಿ ಕಂಡುಬರುವ ಕುದುರೆಮುಖ ಗಣಿ ಕೈಗಾರಿಕೆ, ಭದ್ರಾ ಉದ್ಯಾನವನ ಮತ್ತು ಭದ್ರಾನದಿಯ ಉಳಿವಿನ ಹೋರಾಟಗಳು ಮುಖ್ಯವಾದರೆ, ಹೆಗಡೆ ಅವರಿಗೆ ಹೊನ್ನಾವರದ ಸುತ್ತಲಿನ ಕಾಳೀನದಿ ಯೋಜನೆ, ಶರಾವತಿ ಟೇಲ್‌ರೇಸ್‌ನ ಪ್ರಕರಣಗಳು, ಆ ಭಾಗದ ಗಣಿಗಾರಿಕೆಗಳು, ಒಟ್ಟಾರೆ ಪಶ್ಚಿಮಘಟ್ಟಗಳ ಅಧ್ವಾನದಲ್ಲಿ ಉಳಿವಿನ ಸಂಗತಿಗಳು ಮುಖ್ಯವಾಗುತ್ತವೆ.

ಇವರಿಬ್ಬರೂ ಪರಿಸರ ಕಾಳಜಿಗಳನ್ನೊಳಗೊಂಡ ದೂರದರ್ಶಿತ್ವದಲ್ಲಿ ಇಂತಿಷ್ಟೇ ಎಂದು ಪರಿಧಿಯನ್ನು ಹಾಕಿಕೊಂಡು ಚಿಂತಿಸಿದವರಲ್ಲ. ತೇಜಸ್ವಿ ಅವರಿಗೆ ಮನುಷ್ಯನ ಸುತ್ತಲಿನ ಪರಿಸರದಲ್ಲಾಗುವ ವಾಸ್ತವಿಕ ಸಂಗತಿಗಳು ಮುಖ್ಯವಾದರೆ, ಹೆಗಡೆ ಅವರಿಗೆ ಸುತ್ತಲಿನ ಪರಿಸರದೊಂದಿಗೆ ಜಾಗತಿಕ ಪರಿಸರ ವ್ಯವಸ್ಥೆಯ ಆದ್ಯತೆ ಮತ್ತು ಆತಂಕಗಳು ಮುಖ್ಯವಾಗುತ್ತವೆ. ತೇಜಸ್ವಿ ಅವರ ಅಭಿವೃದ್ಧಿ ಕುರಿತ ವಿಚಾರಗಳಲ್ಲಿ ಪ್ರಾಯೋಗಿಕತೆ ಹೆಚ್ಚು

ಕಂಡುಬಂದರೆ, ಹೆಗಡೆ ಅವರ ಮಂಡನೆಗಳಲ್ಲಿ ಅಭಿವೃದ್ಧಿ ಬಗ್ಗೆ ಸೈದ್ಧಾಂತಿಕ ವಿಚಾರಗಳಿದ್ದು ಪರಿಕಲ್ಪನೆಗಳಿಗೆ ತಾತ್ವಿಕತೆಯನ್ನು ಕಟ್ಟಿಕೊಡುವವರಾಗಿದ್ದಾರೆ.

ತೇಜಸ್ವಿ ಅವರ ಸೃಜನಶೀಲ ಕೃತಿಗಳಾದ ಚಿದಂಬರ ರಹಸ್ಯ, ಜುಗಾರಿ ಕ್ರಾಸ್, ಸಹಜ ಕೃಷಿ, ಮಾಯಾಲೋಕವು ಆಧುನೀಕರಣ, ಜಾಗತೀಕರಣ, ಉದಾರೀಕರಣದ ಪ್ರಜ್ಞೆಗಳನ್ನು ಅನಾವರಣಗೊಳಿಸುವಂತಹ ವಸ್ತು ವಿಷಯಗಳನ್ನು ಒಳಗೊಂಡಿದ್ದು, ಸೃಜನಾತ್ಮಕ ಪಾತ್ರಗಳ ಮೂಲಕ ಪರಿಸರಾತ್ಮಕ ಮತ್ತು ಸಾಮಾಜಿಕ ಆಶಯದತ್ತ ಚಲಿಸುತ್ತವೆ. ನಾಗೇಶ ಹೆಗಡೆ ಅವರ ಸೃಜನೇತರ ಕೃತಿಗಳಾದ ಇರುವುದೊಂದೇ ಭೂಮಿ, ಅಭಿವೃದ್ಧಿಯ ಅಂಧಯುಗವು ಇವುಗಳನ್ನೇ ಪರಿಕಲ್ಪನಾತ್ಮಕವಾಗಿ ದತ್ತಾಂಶಗಳೊಂದಿಗೆ ನಿರೂಪಿಸುತ್ತವೆ.

ಉದಾರೀಕರಣದ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಏಳಿಗೆ ಸಾಧ್ಯವಾದರೂ ಅದು ಅಂದುಕೊಂಡಷ್ಟು ಸುಲಭವಾದುದಲ್ಲ. ಕೆಲವು ಕಾನೂನುಗಳನ್ನು ಸುಲಭ ಮಾಡಿದ ಕೂಡಲೇ ವಿದೇಶಿ ಹಣ ದೇಶದತ್ತ ನುಗ್ಗುತ್ತದೆ ಎಂಬುದು ಸುಳ್ಳು. ಎನ್.ಆರ್.ಐ.ಗಳಿಗೆ ವಿದೇಶಿ ಕಂಪೆನಿಗಳಿಗೆ ದುಡಿಮೆಗೆ ಅನುಕೂಲಕರವಾದ ವಾತಾವರಣ ಕಲ್ಪಿಸುತ್ತೇವೆ ಎಂದು ಹೇಳುವ ನಮ್ಮ ರಾಜಕಾರಣಿಗಳು ದೇಶಿಯ ಕಂಪೆನಿ ಮತ್ತು ಉದ್ಯಮಗಳು ಪರವಾನಗಿ ನವೀಕರಣಕ್ಕಾಗಿ, ಬ್ಯಾಂಕ್ ಸಾಲಕ್ಕಾಗಿ ಪರದಾಡುವ ಸ್ಥಿತಿ ನಿರ್ಮಿಸಿದ್ದಾರೆ. ಈ ಉದಾರೀಕರಣ ಚಿಂತನೆಯು ಎನ್.ಆರ್.ಐ., ಐ.ಎಂ.ಎಫ್.ಗಳ ಹಣ ಸೆಳೆಯಲು ಮಾತ್ರ ನಡೆದಿರುವ ಕುತಂತ್ರವೆಂದು ತೇಜಸ್ವಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ವತಂತ್ರನಾಗಿರುವಂತೆ ಕಂಡುಬಂದರೂ ಸುಮಾರು ಐದು ಮಿಲಿಯನ್ ವರ್ಷಗಳ ಹಿಂದೆ ಕಾಡು ಮನುಷ್ಯನಾಗಿದ್ದಾಗ ಗಾಳಿ ನೀರು ಮತ್ತು ಆಹಾರಗಳಿಗಾಗಿ ಎಷ್ಟು ಪರಿಸರವನ್ನು ಅವಲಂಬಿಸಿದ್ದನೋ ಇವತ್ತಿಗೂ ಅಷ್ಟೇ ಅವಲಂಬಿಸಿದ್ದಾನೆ ಎನ್ನುವುದು ವಾಸ್ತವ ಸಂಗತಿ. ಮನುಷ್ಯನು ಜೀವಸ್ತರದ ಇತರ ಜೀವಿಗಳೊಡನೆ ಇರುವ ಇಕೊವ್ಯೂಹದ ಅದೃಶ್ಯ ತಂತುಗಳನ್ನು ಮರೆತಿದ್ದಾನೆಯೇ ಹೊರತು ಕಡಿದುಕೊಂಡಿದ್ದಾನೆ ಎನ್ನುವುದು ಭ್ರಮೆ. ಈ ಭ್ರಮೆಯ ದೆಸೆಯಿಂದ ಮಾನವ ತನ್ನ ಏಕಾಕಿತನದಲ್ಲಿ ನರಳುತ್ತಿರುವುದಷ್ಟೇ ಅಲ್ಲದೆ ಇತರ ಜೀವಿಗಳಿಗೂ ಕೊನೆಗೆ ತನ್ನ ಜೀವಕ್ಕೂ ಹಾನಿ ತಂದುಕೊಳ್ಳುವುದರಲ್ಲಿ ಉದ್ಯುಕ್ತನಾಗಿದ್ದಾನೆ[೩೪]ಎನ್ನುತ್ತಾರೆ ತೇಜಸ್ವಿ.

ಆಧುನೀಕರಣ ಮತ್ತು ಜಾಗತೀಕರಣದ ಆದ್ಯತೆಗಳು ಪರಿಸರದ ಮೇಲೆ ಹೇರುವ ಒತ್ತಡವನ್ನು ತೇಜಸ್ವಿ ಗಮನಿಸಿದ್ದರು. **ತೇಜಸ್ವಿ ವ್ಯಾಖ್ಯಾನಿಸುವಂತೆ ಜಾಗತೀಕರಣದ ಕಲ್ಪನೆಯನ್ನು ನೋಡುವುದಾದರೆ ಪ್ರಾದೇಶಿಕ ಸಂಸ್ಕೃತಿಗಳು, ಸ್ಥಳೀಯರ ಸ್ವಯಂ ನಿರ್ಣಯಗಳು ಇದರಲ್ಲಿ ನಾಶವಾಗುವವು. ಅವುಗಳೆಲ್ಲವೂ ಇದರಲ್ಲಿ ಅಸ್ತಿತ್ವವನ್ನೇ ಪಡೆದುಕೊಳ್ಳಲಾರವು. ಜಾಗತಿಕವಾಗಿ ಒಪ್ಪಿತವಾದ ಒಂದೆನಿಸಿಕೊಳ್ಳುವ ನೀತಿ ನಿಯಮಗಳೇ ಬಹುತೇಕವಾಗಿ ಅಧಿಪತ್ಯ ಸಾಧಿಸುವವು. ಅಭಿವೃದ್ಧಿಯಲ್ಲಿ ಅರ್ಥಶಾಸ್ತ್ರದ ಚಿಂತನೆಯೇ ಪ್ರಮುಖವಾಗಿ ನಿಲ್ಲುವುದರಿಂದ ಅದು ಗಳಿಸುವುದರ ಕಡೆಗೆ ಗಮನ ಕೇಂದ್ರೀಕರಿಸುತ್ತದೆಯೇ ಹೊರತೂ ನಿಸರ್ಗ ಸಂಪನ್ಮೂಲಗಳ ಉಳಿಕೆ ಮತ್ತು ಸಂರಕ್ಷಣೆಯ ಕಡೆಗೆ ವಾಲುವುದಿಲ್ಲ ಎಂಬುದನ್ನು ತೇಜಸ್ವಿ ಸೂಕ್ಷ್ಮವಾಗಿ ಅರಿತಿದ್ದರು.** ಮೈಸೂರಲ್ಲಿ ನಡೆದ ತೇಜಸ್ವಿ ಅವರ ೮೦ನೇ ಜಯಂತಿಯ ಸಂದರ್ಭದಲ್ಲಿ ನಾಗೇಶ ಹೆಗಡೆ ಮಾತನಾಡುತ್ತಾ, **‘ತೇಜಸ್ವಿ ಜಾಗತೀಕರಣದ ಎಚ್ಚರದ ಪ್ರಜ್ಞೆಯಾಗಿದ್ದರು’** ಎಂದಿದ್ದಾರೆ.

ಹೆಗಡೆ ಅವರ ಅಭಿಪ್ರಾಯದಲ್ಲಿ **"ಜಾಗತೀಕರಣ ಅಂದರೆ ಒಂದು ದೇಶದ ಸಂಪನ್ಮೂಲಗಳು, ಮಾನವ ಸಂಪನ್ಮೂಲಗಳು, ಮಾನವ ಕೌಶಲಗಳು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಮುಕ್ತವಾಗಿ ಚಲಿಸಲು ಅವಕಾಶ ಮಾಡಿಕೊಡುವುದು ಅಷ್ಟೇ ಅಲ್ಲ, ಜಾಗತೀಕರಣ ಅಂದರೆ ಒಂದು ದೇಶದ ತಿಪ್ಪೆ ಸಾಮಗ್ರಿಗಳೂ ಇನ್ನೊಂದು ದೇಶಕ್ಕೆ ಸಲೀಸಾಗಿ ಸಂಚರಿಸಲು ಅವಕಾಶ ಮಾಡಿಕೊಡುವುದು ಎಂದೇ ಅರ್ಥೈಸಬೇಕಾಗುತ್ತದೆ"** [೩೫] ಎಂದಾಗುತ್ತದೆ.

'ಜಾಗತೀಕರಣದ ವಿರೋಧದ ಚಿಂತನೆಯೇ ಪರಿಸರ ಪ್ರಜ್ಞೆಯೇ? ಎಂಬ ಇದೇ ಅಧ್ಯಾಯದ ಸಮಸ್ಯಾ ಹೇಳಿಕೆಗೆ ಅಧ್ಯಯನದ ವಿಚಾರಗಳನ್ನು ಹೋಲಿಸುವುದಾದಲ್ಲಿ ತೇಜಸ್ವಿ ಮತ್ತು ನಾಗೇಶ ಹೆಗಡೆ ಇಬ್ಬರೂ ತಮ್ಮ ತಮ್ಮ ಕೃತಿಗಳ ಮೂಲಕ ಸಾಬೀತುಪಡಿಸುವುದನ್ನು ಕಂಡುಕೊಳ್ಳಬಹುದಾಗಿದೆ.

ಇವರಿಬ್ಬರೂ ನಿಸರ್ಗಮುಖಿ ಅಭಿವೃದ್ಧಿಯನ್ನು ಪ್ರತಿಪಾದಿಸುವರು. ಗಾಂಧೀಜಿಯವರ ನಿಸರ್ಗಮುಖಿ ಪರಿಸರೀಯತೆ, ಫೂಕುವೂಕರ ಸಹಜಕೃಷಿ ತತ್ವಚಿಂತನೆಗಳಿಂದಲೂ ಇಬ್ಬರೂ ಪ್ರೇರಣೆಗೊಂಡಿರುವುದನ್ನು ಕೃತಿಗಳ ಅಧ್ಯಯನದಲ್ಲಿ ಅವಲೋಕಿಸಬಹುದಾಗಿದೆ. ಗಣಕ ತಂತ್ರಜ್ಞಾನ, ತಂತ್ರಾಂಶದ ಪ್ರಗತಿ ಹೊರತುಪಡಿಸಿ ನಾವೀನ್ಯಯುತ ಅಭಿವೃದ್ಧಿಯ ಮಾದರಿಗಳನ್ನು ಇಬ್ಬರೂ ನಿರಾಕರಿಸುತ್ತಾರೆ. ನಿಸರ್ಗವನ್ನು ಬಗ್ಗುಬಡಿದು ಅಭಿವೃದ್ಧಿ ಸಾಧಿಸುವ ಚಿಂತನೆಗಳ ಬಗ್ಗೆ ಕೃತಿಗಳಲ್ಲಿ ಸಾಕಷ್ಟು ಟೀಕೆ ಟಿಪ್ಪಣಿಗಳನ್ನು ಕಾಣಬಹುದಾಗಿದೆ. ಈಗಿನ ಆಧುನಿಕ ಕೃಷಿ ಪದ್ಧತಿಗೆ ಬದಲಾಗಿ ಫೂಕುವೊಕರ ಸಹಜ ಇಳುವರಿ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದಾದರೆ ಜನಸಂಖ್ಯೆಯಲ್ಲಿ ಅಧಿಕ್ಯವನ್ನು ಪ್ರದರ್ಶಿಸುತ್ತಿರುವ ಭಾರತದ ಜನರ ಹಸಿವಿಗೆ ಬೇಕಾದ ಅಗಾಧ ಪ್ರಮಾಣದ ಆಹಾರ ಪೂರೈಕೆ ಸಾಧ್ಯವೇ ಎಂಬ ಪ್ರಶ್ನೆಯು ಜೊತೆಯಲ್ಲೇ ಉಳಿಯುವುದು. ಒಂದೆಡೆ ಪಶ್ಚಿಮದ ಆಧುನೀಕತೆಯ ನಾಗಾಲೋಟದ ಬೆಳವಣಿಗೆ, ತೀವ್ರಗೊಂಡ ಜಗತ್ತಿನ ಜ್ಞಾನಾಧಾರಿತ ಪ್ರತಿಭಾ ಸ್ಪರ್ಧೆಗಳು, ವಿಜ್ಞಾನಯುಗ ಸೃಷ್ಟಿಸಿರುವ ಆಸಕ್ತಿಗಳು ಮತ್ತು ಆವಿಷ್ಕಾರಗಳು ಇಂದಿನ ಅಭಿವೃದ್ಧಿಯ ಮಾದರಿಗಳನ್ನು ಮತ್ತು ಅನುಸರಣೆಯ ಕ್ರಮಗಳನ್ನು ಬಹುವಾಗಿ ಪ್ರಭಾವಿಸುತ್ತಿವೆ. ನಿಸರ್ಗದ ಬಳಕೆಯಿಲ್ಲದೆ ಅಭಿವೃದ್ಧಿಯನ್ನು ಸಾಧಿಸಲಾಗದು. ಶರವೇಗದಲ್ಲಿ ಬೆಳೆಯುತ್ತಿರುವ ಐ.ಟಿ., ಬಿ.ಟಿ.,ಗಳು ಉನ್ನತ ವ್ಯಾಸಂಗ ವಿದ್ಯಾರ್ಥಿಗಳ ಐಚ್ಛಿಕ ಕೋರ್ಸುಗಳ ಆಯ್ಕೆಯನ್ನು ಮತ್ತು ಶಿಕ್ಷಣದ ಗುರಿ ಉದ್ದೇಶಗಳನ್ನು ಜಾಗತೀಕರಣವು ಬದಲಿಸುತ್ತಿರುವಾಗ ಯಂತ್ರ ನಾಗರೀಕತೆಯನ್ನು ಬಿಟ್ಟು ನಾವು ಬದುಕಲಾದೀತೆ? ಇಂದಿನ ದಿನಗಳಲ್ಲಿ ದೇಸಿ ಅಭಿವೃದ್ಧಿ ಮಾರ್ಗಗಳ ಚಿಂತನೆ, ಅನುಸರಣೆ ಹಾಗೂ ಆಚರಣೆ ವಿಶ್ವದಲ್ಲಿ ಭಾರತವನ್ನು ಪ್ರತ್ಯೇಕಗೊಳಿಸುತ್ತಾದರೂ, ಇಂದಿನ ಯುವ ಮನಸ್ಸುಗಳನ್ನು ಇದಕ್ಕಾಗಿ ಪ್ರೇರೇಪಿಸಲು ಸದ್ಯದ ಪರಿಸ್ಥಿತಿಯಲ್ಲಿ ಆಗುವುದೇ!? ಇಂತಹ ಮಹಾಕ್ರಾಂತಿಯ ಉದ್ದೀಪನಕ್ಕೆ ಮತ್ತು ಸಂಚಲನೆಗೆ ದೀಕ್ಷೆ ತೊಡುವವರಾರು ಎಂಬ ಜಿಜ್ಞಾಸೆ ಎದುರುಗೊಳ್ಳುತ್ತದೆ. ನಾಗೇಶ ಹೆಗಡೆ ನಿಸರ್ಗವನ್ನು ಮರುಪೂರಣಗೊಳಿಸುವ ಅಭಿವೃದ್ಧಿ ಕುರಿತು ಚಿಂತಿಸುತ್ತಾರೆ. ಸ್ಥಳೀಯ ಭಾಷೆ ಉಳಿದಷ್ಟು ದಿನ ಮಾತ್ರ ಅಲ್ಲಿ ಏನಿದೆ ಎಂಬುದು ಗೊತ್ತಿರುತ್ತದೆ. ಅಂಥ ಆದಿವಾಸಿ ಮಕ್ಕಳು ಶಾಲೆಯ ಮೆಟ್ಟಿಲು ಹತ್ತಿ ಹೊರ ಪ್ರಪಂಚಕ್ಕೆ ಕಾಲಿಟ್ಟರೆ ಸಾಕು. ಭಾಷೆಯ ನೆನಪು ಮರೆಯಾಗುತ್ತದೆ, ಜ್ಞಾನದ ಅವಸಾನವಾಗುತ್ತದೆ ಎನ್ನುವ ಹೆಗಡೆ

ಅವರ ವಿಚಾರಗಳು ಚರ್ಚೆಗೆ ಗ್ರಾಸವಾಗುತ್ತವೆ. ಆದಿವಾಸಿ ಮಕ್ಕಳು ಬದಲಾಗುತ್ತಿರುವ ಪ್ರಪಂಚಕ್ಕೆ ತೆರೆದುಕೊಳ್ಳದೆ ಎಷ್ಟು ದಿನ ಹಾಗೆಯೇ ಇರಬೇಕು? ಶಿಕ್ಷಣದಿಂದ ಅರಿವಿನ ಸಾಕ್ಷರರಾಗದೆ ತಮ್ಮೊಂದಿಗೆ ಜೀವಂತವಾಗಿರುವ ಭಾಷೆ ಮತ್ತು ಕಲೆಯ ಜ್ಞಾನವನ್ನು ಉಳಿಸಿಕೊಳ್ಳುವುದಾದರೂ ಹೇಗೆ? ಭಾಷಾ ಅಸ್ಮಿತೆಯೊಂದಿಗೆ ವರ್ಗಬೇಧವಿಲ್ಲದ ಸಾಂಸ್ಕೃತಿಕ ಅಸ್ಮಿತೆಯು ಬಲಗೊಳ್ಳುವುದು ಬೇಡವೇ? ಅವರು ಹಾಗೆಯೇ ಬದುಕಲು ಇಚ್ಛಿಸಿದಾದಲ್ಲಿ, ಇತ್ತೀಚಿನ ಒತ್ತಡಗಳಲ್ಲಿ ಸಹಜವಾದ ಮತ್ತು ಮೂಲಸ್ವರೂಪವನ್ನು ಕಾಯ್ದಿಟ್ಟುಕೊಂಡ ಪರಿಸರ ವ್ಯವಸ್ಥೆಯನ್ನು ನಾವು ಅವರಿಗೆ ಒದಗಿಸಿಕೊಡಬಹುದೇ? ಎಂಬಿತ್ಯಾದಿ ಪ್ರಶ್ನೆಗಳು ಚರ್ಚೆಯಲ್ಲಿ ಮುಖ್ಯವಾಗುತ್ತವೆ. ಆದಾಗ್ಯೂ ಜನಸಾಮಾನ್ಯರ, ಪರಿಸರದ ಸಕಲ ಜೀವಸ್ತೋಮಗಳ ಉಳಿವಿನ ಪರವಾಗಿ ಯಂತ್ರಗಳನ್ನು ಬಳಸುವ, ಪರಿಸರದ ಕಾಳಜಿ ಮತ್ತು ಬದ್ಧತೆ ಹೊಂದಿರುವ ಪ್ರಭುತ್ವವನ್ನು ಸ್ಥಾಪಿಸಲು ಮುಂದಾಗುವುದರ ಕಡೆಗೆ ಆರೋಗ್ಯಕರ ಚರ್ಚೆ ಬೆಳೆಸಬೇಕಾಗಿರುವುದು ಅನಿವಾರ್ಯವೂ ಮಹತ್ವವೂ ಆಗಿದೆ.

ಚಿದಂಬರ ರಹಸ್ಯ ಕೃತಿಯಲ್ಲಿನ **"ವಿಶ್ವದ ವಿವಿಧ ಪ್ರದೇಶ, ಜನಾಂಗಗಳನ್ನು ಇಂದು ಒಟ್ಟುಗೂಡಿಸುವ ಶಕ್ತಿ ಇರುವುದೇ ಈ ಇಕಾಲಜಿಗೆ ಮಾತ್ರ ನೋಡಿ....**ಎಂಬ ತೇಜಸ್ವಿಯವರ ಇಕಾಲಜಿ ವಿಶ್ಲೇಷಣೆಯು ಜಗತ್ತನ್ನೇ ಒಂದುಗೂಡಿಸುವ ಇಕಾಲಜಿಯ ಶಕ್ತಿ ಸಾಮರ್ಥ್ಯದ ಅಗಾಧತೆಯನ್ನು ಅರ್ಥೈಸುವುದಲ್ಲದೆ ಪರಿಸರ ಪ್ರಾಮುಖ್ಯತೆಯ ತಳಹದಿಯಲ್ಲಿ ಸರ್ಕಾರಗಳ ರಚನೆ ಮತ್ತು ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕೆಂಬುದನ್ನು ಬಯಸುತ್ತದೆ. ಹಾಗೆಯೇ ಅಭಿವೃದ್ಧಿಯ ಅಂಧಯುಗ' ಕೃತಿಯಲ್ಲಿ **"ಇಕಾಲಜಿಯ ಪ್ರಶ್ನೆ ಬಂದಾಗ ಅಭಿವೃದ್ಧಿಯ ಪ್ರಶ್ನೆ ಹಾಗಿರಲಿ 'ರಾಷ್ಟ್ರ'ದ ಪರಿಕಲ್ಪನೆಯೇ ಅಪ್ರಸ್ತುತವಾಗುತ್ತದೆ** ಎಂದು ಪ್ರಸ್ತಾಪಿಸುವ ಹೆಗಡೆ ಅವರ ಹೇಳಿಕೆಗಳು ಪರಿಸರದ ಬಗ್ಗೆ ನಮ್ಮ ದೃಷ್ಟಿಕೋನಗಳಾಗಲಿ, ಆಲೋಚನಾಕ್ರಮಗಳಾಗಲಿ ಅವೆಲ್ಲವೂ 'ದೇಶ'ವೆಂಬ ಗಡಿರೇಖೆಯನ್ನು ಮೀರಿ ಜಾಗತಿಕದತ್ತ ಚಲಿಸಬೇಕೆನ್ನುತ್ತದೆ. 'ವಿ ಆರ್ ಆಲ್ ಟುಗೆದರ್', **'ವಿ ಆರ್ ಆಲ್ ಪ್ಲಾನೆಟರಿ ಸಿಟಿಜನ್ಸ್',** ನಾವಾಗುವ ಮೂಲಕ ನಮ್ಮೆಲ್ಲರ ಪ್ರಣಾಮಗಳು, ಆಚರಣೆಗಳು ಪ್ಲಾನೆಟ್ ಅರ್ಥ್‌ನ ಉಳಿವಿನಲ್ಲಿ ಯಾವತ್ತೂ ಮೊದಲ ಸ್ಥಾನದಲ್ಲಿರಬೇಕು ಎಂದಿದ್ದಾರೆ. ಈ ಇಬ್ಬರೂ ಲೇಖಕರು ಇಕಾಲಾಜಿಕಲ್ ಪ್ರಜ್ಞೆಯ ದೂರದರ್ಶಿತ್ವದಲ್ಲಿ ಬಹುಮಟ್ಟಿಗೆ ವಿಶಾಲತೆಯನ್ನು ಮತ್ತು ಸಾಮ್ಯತೆಯನ್ನು ಪ್ರತಿನಿಧಿಸುತ್ತಾರೆನ್ನಬಹುದು.

ಇತ್ತೀಚೆಗೆ ಜಾಗತಿಕ ಪರಿಸರದ ಅರಿವು ಹೆಚ್ಚು ಪ್ರಜ್ಞಾದಾಯಕವಾಗಬೇಕಿದೆ ಎಂದೆನಿಸುತ್ತದೆ. ಇದಕ್ಕೆ ಮೂಲ ಕಾರಣ ಪರಿಸರದಿಂದ ಉದ್ಭವಿಸುವ ಯಾವ ಸಮಸ್ಯೆಯನ್ನೂ ಅದು ಆಂಶಿಕವಾಗಿರಲಿ ಬಿಡಿಯಾಗಿದ್ದಿರಲಿ ಸ್ಥಾನಿಕವಾದ ಪರಿಹಾರಗಳು ಲಭ್ಯವಿಲ್ಲದ ಕಾರಣ, ಲಾಭಕ್ಕಿಂತ ಹೆಚ್ಚು ನಷ್ಟಗಳು ವಿಶ್ವದಾದ್ಯಂತ ಕಾಣಿಸುತ್ತಿರುವುದೇ ಆಗಿದೆ. ಉದ್ದೇಶಿತ ಗುರಿಯಿಲ್ಲದ ಬೃಹತ್ ಉತ್ಪಾದನೆಗೆ ಶರಣಾಗಿ ಪರಿಸರಮುಖಿಯಾಗಿ ಪರಿಸರಾಧ್ಯಾತ್ಮಿಕ ಉತ್ಪಾದನಾ ನೀತಿಯನ್ನು ಪಾಲಿಸದೇ ನಮ್ಮಲ್ಲಿರುವ ನಿಸರ್ಗ ಸಂಪನ್ಮೂಲಗಳ ನಾಶಕ್ಕೆ ಕಾರಣವಾಗುತ್ತಿದ್ದೇವೆ. ಇದರೊಂದಿಗೆ ಭಾರತದ ಮೇಲೆ ವಿಪರೀತ ಪರಿಣಾಮವನ್ನುಂಟುಮಾಡುವ ಅಂತಾರಾಷ್ಟ್ರೀಯ ಒಪ್ಪಂದಗಳು ಈ ನೆಲದ ಪರಿಸರವನ್ನೇ ಪ್ರಮುಖ ಅಗತ್ಯತೆಯಾಗಿ ಗುರುತಿಸಿಕೊಳ್ಳುತ್ತಿವೆ. ಈಗಾಗಲೇ ನಮ್ಮ ದೇಶದ ಜೈವಿಕವೈವಿಧ್ಯತೆ

ಕುಗ್ಗಿ ಕುಸಿಯುತ್ತಿರುವ ಸನ್ನಿವೇಶದಲ್ಲಿ ಈ ಒಪ್ಪಂದಗಳಿಂದ ಅಳಿದುಳಿದ ನಿಸರ್ಗ ಕೋಶವು ನಾಶವಾಗುವ ಸೂಚನೆಗಳು ಕಂಡುಬರುತ್ತಿವೆ.

ಅಂತಿಮವಾಗಿ ನಿರಂತರ ಅಭಿವೃದ್ಧಿ ಎನ್ನುವುದು ಕ್ಷಣಿಕವಲ್ಲ. ಅದೊಂದು ಸತತ ಪ್ರಕ್ರಿಯೆ. ಎಲ್ಲವನ್ನೂ, ಎಲ್ಲರನ್ನೂ, ಎಲ್ಲಾ ಕಾಲಕ್ಕೂ ಗಮನದಲ್ಲಿಟ್ಟುಕೊಂಡು ನಡೆಯುವ ಕೆಲಸವಿದು. ಇದರಲ್ಲಿ ನಾಶವಿಲ್ಲ. ಬದಲಿಗೆ ಒಳ್ಳೆಯ ಮತ್ತು ಆರೋಗ್ಯಕರವಾದ ಬೆಳವಣಿಗೆಗೆ ಅವಕಾಶಗಳು ಸದಾ ತೆರೆದಿರುತ್ತವೆ. ಮುಂದಿನ ದಿನಗಳ ಅನಾಹುತಗಳ ಬಗ್ಗೆ ಚಿಂತಿಸದೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗಿಯಾದರೆ, ಅದು ತಪ್ಪುದಾರಿ ಹಿಡಿಯುತ್ತದೆ. ನಮ್ಮ ಜೀವನವನ್ನು ಸುಖಕರ ಮಾಡಿಕೊಳ್ಳಲು ನಮ್ಮ ಪರಿಸರದ ಎಲ್ಲಾ ಅಂಶಗಳನ್ನು ಅಪರಿಮಿತ ಶೋಷಣೆಗೆ ಒಳಪಡಿಸುತ್ತಿದ್ದೇವೆ. ಇದರಿಂದಾಗಿ ನಿಸರ್ಗಕ್ಕೆ ಅನ್ಯಾಯವಾಗುತ್ತಿರುವುದನ್ನು ಗಮನಿಸಬೇಕು. ನಿರಂತರ ಅಭಿವೃದ್ಧಿಯೂ ವಿಶ್ವದಲ್ಲಿರುವ ಎಲ್ಲವನ್ನೂ ಗಮನಿಸುತ್ತದೆ ಮತ್ತು ಗೌರವಿಸುತ್ತದೆ ಹಾಗೆಯೇ, ಪ್ರತಿಯೊಂದರ ಅಭಿವೃದ್ಧಿಗಾಗಿ ದುಡಿಯುತ್ತದೆ. ಆರ್ಥಿಕ ಸಮಸ್ಯೆಗಳನ್ನು ನೀಗಬಲ್ಲ, ಪರಿಸರಕ್ಕೆ ಧಕ್ಕೆ ಉಂಟುಮಾಡದಂತಹ, ಸಾಮಾಜಿಕ ನ್ಯಾಯವನ್ನು ಒಳಗೊಂಡ, ಮಾನವೀಯ ಹೊಂದಾಣಿಕೆ ಇರುವ, ಸ್ಥಳೀಯರ ಆಶಯಗಳಿಗೆ ಒಪ್ಪಿತವಾಗುವ ಅಭಿವೃದ್ಧಿ ಕಾರ್ಯಕ್ರಮಗಳು ರೂಪಿತಗೊಳ್ಳಬೇಕು.

ಕೊನೆ ಟಿಪ್ಪಣಿಗಳು:

೧. ಡಾ.ಪಿ.ಕೃಷ್ಣಪ್ಪ ಶೆಟ್ಟಿ, ಡಿ.ಆರ್.ನಟರಾಜ್. ಸಂಪಾದಕರು ಪರಿಸರ: ಮುಂದೇನು? ಪುಟ:೮೩

೨. ಡಾ.ಹೆಚ್.ಆರ್. ಕೃಷ್ಣಮೂರ್ತಿ, ಪರಿಸರ ಅಧ್ಯಯನ, ಪುಟ:೮೦,

೩. ನಾಗೇಶ ಹೆಗಡೆ, ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು, ಪುಟ ೩–೮

೪. ಶೂದ್ರ ಶ್ರೀನಿವಾಸ ಸಂಪಾದನೆ, ನೆಲದ ಮಾತು, ಪುಟ:೧೦೨, ೧೦೩

೫. ನಾಗೇಶ ಹೆಗಡೆ, ಭೂಮಿಯೆಂಬ ಗಗನನೌಕೆ, ಪುಟ:೪೯

೬. ಟಿ.ಎಸ್.ವಿವೇಕಾನಂದ, ಪರಿಸರ ಕಥನ, ಪುಟ:೧೦೭

೭. ಶೂದ್ರ ಶ್ರೀನಿವಾಸ ಸಂಪಾದನೆ, ನೆಲದ ಮಾತು, ಪುಟ:೧೦೫

೮. ಟಿ.ಎಸ್.ವಿವೇಕಾನಂದ, ಪರಿಸರ ಕಥನ, ಪುಟ:೯೫

೯. ಅದೇ ಪು ಪುಟ:೧೦೭

೧೦. ಶೂದ್ರ ಶ್ರೀನಿವಾಸ ಸಂಪಾದನೆ, ನೆಲದ ಮಾತು, ಪುಟ:೧೦೪

೧೧. ಅದೇ ಪು ಪುಟ:೮೨–೮೩

೧೨. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಅಲೆಮಾರಿಯ ಅಂಡಮಾನ್ ಮತ್ತು ನೈಲ್ ನದಿ, ಪುಟ:೫೭

೧೩. ಜಿ.ಎಸ್.ಭಟ್ಟ ಸಂಪಾದನೆ, ತೇಜಸ್ವಿಯವರ ಕೃತಿಗಳು, ಪುಟ:೧೧೦

೧೪. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪುಟ:೧೩೩

೧೫. ಆರ್.ಡಿ.ಜಿ.ಸಂಪಾದನೆ, ತೇಜಸ್ವಿಯನ್ನು ಹುಡುಕುತ್ತಾ, ಪುಟ:೧೬೬

೧೬. ಅದೇ ಪು ಪುಟ:೧೭೮-೧೭೯

೧೭. ಅದೇ ಪು ಪುಟ:೧೭೨

೧೮. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ವಿಸ್ಮಯ-೧, ಪುಟ:೯೬-೧೦೦

೧೯. ಕರಿಗೌಡ ಬೀಚನಹಳ್ಳಿ, ತೇಜಸ್ವಿ ಬದುಕು-ಬರಹ, ಪುಟ:೦೫

೨೦. ನಾಗೇಶ ಹೆಗಡೆ, ಇರುವುದೊಂದೇ ಭೂಮಿ, ಪುಟ:೧೫೯

೨೧. ನಾಗೇಶ ಹೆಗಡೆ ವಿಶ್ವ ಭೂಮಿಯ ದಿನದಂದು ಗಾಂಧೀ ಭವನದಲ್ಲಿ ಮಾತನಾಡಿದ ಸಂದರ್ಭ (ವಿಡಿಯೋ ಬ್ಲಾಗ್‌ನಲ್ಲಿ ಲಭ್ಯವಿದೆ)

೨೨. ನಾಗೇಶ ಹೆಗಡೆ, ಅಭಿವೃದ್ಧಿಯ ಅಂಧಯುಗ, ಪುಟ:೧೦೫

೨೩. ಅದೇ ಪು ಪುಟ:೧೦೦

೨೪. ಚಾಮರಾಜನಗರ ಜಿಲ್ಲೆಯ ಉಪನ್ಯಾಸದ ಮಾತುಗಳು, ೧೨.೦೯.೧೮ ರ ವಿಜಯವಾಣಿ ಪ್ರಕಟಣೆ

೨೫. ನಾಗೇಶ ಹೆಗಡೆ, ಸುರಿಹೊಂಡ ಭರತ ಖಂಡ, ಪುಟ: ೧೬-೧೮

೨೬. ಅದೇ ಪು, ಬೆನ್ನುಡಿ

೨೭. ಶಿವ ವಿಶ್ವನಾಥನ್, ಪ್ರತಿಭೆಯ ಒಂದು ಪ್ರವಾಹ, ಪುಟ:೧೫

೨೮. ನಾಗೇಶ ಹೆಗಡೆ, ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು, ಪುಟ:೧೩೨

೨೯. ನಾಗೇಶ ಹೆಗಡೆ, ಇರುವುದೊಂದೇ ಭೂಮಿ, ಪುಟ:೧೨೧-೧೨೪

೩೦. ಅದೇ ಪು ಪುಟ:೬೪-೬೫

೩೧. ನಾಗೇಶ ಹೆಗಡೆ, ಪ್ರತಿದಿನ ಪರಿಸರದಿನ, ಪುಟ:೪೩

೩೨. ಗಾಡ್ಗೀಳ್, ಗುಹಾ, ಪರಿಸರ ನ್ಯಾಯದ ತಕ್ಕಡಿಯಲ್ಲಿ, ಅನು.ಶಾರದಾಗೋಪಾಲ, ಪುಟ:೩೫

೩೩. ಟಿ.ಎಸ್.ವಿವೇಕಾನಂದ, ಪರಿಸರ ಕಥನ, ಪುಟ:೮೬

೩೪. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಹೊಸವಿಚಾರಗಳು, ಪುಟ:೨೩

೩೫. ನಾಗೇಶ ಹೆಗಡೆ, ಸುರಿಹೊಂಡ ಭರತ ಖಂಡ, ಪುಟ:೫೯

ಅಧ್ಯಾಯ : ಎಂಟು

ಗ್ರಹಿಕೆಯ ತುಲನಾತ್ಮಕ ವಿಚಾರಗಳು

೮.೧ ಪರಿಸರ ಪ್ರಜ್ಞೆಗೆ ಹಿನ್ನೆಲೆಯ ಆಯಾಮಗಳು:

೮.೧.೧ (೧೯೭೦-೮೦ರ ದಶಕದಲ್ಲಿ ನಡೆದ ಪರಿಸರ ಹೋರಾಟಗಳು)

ಭಾರತದ ಪ್ರಖ್ಯಾತ ಸಮಾಜಶಾಸ್ತ್ರಜ್ಞರು ಹಾಗೂ ವಿದ್ವಾಂಸರು ಆದಂತಹ ರಾಮಚಂದ್ರ ಗುಹಾ ಅವರು ಅಭಿಪ್ರಾಯಿಸುವಂತೆ ಭಾರತದಲ್ಲಿ ಪರಿಸರವಾದವು ಪಶ್ಚಿಮದಂತೆ ಪ್ರಾಣಿ ಜಾತಿಗಳ ಸಂರಕ್ಷಣೆ ಮತ್ತು ಆವಾಸ ಸ್ಥಾನ ನಾಶ ತಪ್ಪಿಸುವಿಕೆಯ ಭಾಗವಾಗಿ ರೂಪುಗೊಳ್ಳಲಿಲ್ಲ. ಅದು ಮಾನವ ಬದುಕುಳಿಯುವ ಕಡ್ಡಾಯದ ಭಾಗವಾಗಿ ಪ್ರೇರೇಪಿಸಲ್ಪಟ್ಟಿತ್ತು ಎಂದಿದ್ದಾರೆ. ಮೂಲತಃ ಇದು ಗ್ರಾಮೀಣ ಸಮುದಾಯಗಳ ಪ್ರತಿಭಟನೆಯ ಮೂಲಕವೇ ಪ್ರಾರಂಭವಾಯಿತು. ೭೦ರ ದಶಕದಲ್ಲಿ ಹಿಮಾಲಯನ್ ಗ್ರಾಮದ ರೈತರು ಮರಗಳ ತೇಪೆ ಬೀಳದಂತೆ ಲಾಗರ್ಸ್ ಗುಂಪನ್ನು ನಿಲ್ಲಿಸಿದ್ದರು. ಕಾಡುಗಳನ್ನು ನಾಶಪಡಿಸುವುದನ್ನು ಯಶಸ್ವಿಯಾಗಿ ತಡೆಗಟ್ಟುತ್ತಿದ್ದರು. ಈ ಪ್ರತಿಭಟನೆ ಭಾರತೀಯ ಪರಿಸರ ಚಳುವಳಿಗೆ ಜನ್ಮ ನೀಡಿತು. ಈ ದಿಸೆಯಲ್ಲಿ ಗುರುತಿಸಬಹುದಾದ ಚಿಪ್ಕೋ ಚಳುವಳಿ ಬಗ್ಗೆ ನಾವು ನೆನಪಿಟ್ಟುಕೊಳ್ಳುವ ಒಂದು ಮುಖ್ಯ ಅಂಶವೆಂದರೆ ಅದು ಅನನ್ಯವಾದುದಲ್ಲ. ಎಲ್ಲಕ್ಕಿಂತ ಅದು ೧೯೭೦ ಮತ್ತು ೧೯೮೦ರ ದಶಕಗಳಲ್ಲಿ ವ್ಯಾಪಕವಾದ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಸಂಘರ್ಷಗಳ ಪ್ರತಿನಿಧಿಯಾಗಿತ್ತು. ಕಾಡುಗಳು, ಮೀನುಗಳು ಮತ್ತು ಹುಲ್ಲುಗಾವಲುಗಳ ಮೇಲಿನ ಘರ್ಷಣೆಗಳು, ಬೃಹತ್ ಅಣೆಕಟ್ಟು ನಿರ್ಮಾಣದ ಬಗ್ಗೆ ಸಂಘರ್ಷಗಳು, ಅನಿಯಂತ್ರಿತ ಗಣಿಗಾರಿಕೆಯು ಉಂಟುಮಾಡುವ ಸಾಮಾಜಿಕ ಮತ್ತು ಪರಿಸರದ ಪರಿಣಾಮಗಳ ಬಗೆಗಿನ ಸಂಘರ್ಷಗಳನ್ನು ಆ ಪ್ರತಿಭಟನೆಯು ಪ್ರತಿನಿಧಿಸಿತ್ತು. ನಗರಾಭಿವೃದ್ಧಿ ಮತ್ತು ಕೈಗಾರಿಕಾಭಿವೃದ್ಧಿಯ ಒತ್ತಡಗಳಿಗೆ ಸ್ಥಳೀಯರು ತಮ್ಮ ಜೀವನೋಪಾಯಕ್ಕಾಗಿ ಇದ್ದ ನೆಲೆಗಳನ್ನು, ಪ್ರದೇಶಗಳನ್ನು ಕಳೆದುಕೊಂಡರು. ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಪ್ರಭುತ್ವ, ಒಡೆತನ, ಅರಣ್ಯನೀತಿಗಳು ಮತ್ತು ಅಸಮಾನತೆಯ ವಿರುದ್ಧ ಜಾಗೃತಗೊಂಡ ಪರಿಸರ ಹೋರಾಟಗಳು ಈ ಕಾಲಘಟ್ಟದಲ್ಲಿನ ಕೆಲವು ವಿದ್ವಾಂಸರನ್ನೂ, ಪತ್ರಕರ್ತರನ್ನು,

ಚಿಂತನಾಶೀಲರನ್ನು ಮತ್ತು ಸಮಾಜವಾದಿ ಕಾರ್ಯಕರ್ತರನ್ನು ಪ್ರಭಾವಿಸಿದ್ದವು ಮಾತ್ರವಲ್ಲದೆ ಅವರ ಅರಿವಿನ ಗ್ರಹಿಕೆಯನ್ನು ಮತ್ತು ದೂರದರ್ಶಿತ್ವವನ್ನು ಸಹ ಬದಲಾಯಿಸಿದ್ದವು. [೧೧]

೧೯೮೦ ರ ದಶಕವನ್ನು 'ಚಳುವಳಿಗಳ ಆರಂಭದ ದಶಕ' ಎಂತಲೇ ಗುರುತಿಸಲಾಗುತ್ತದೆ. ಉತ್ತರ ಭಾರತದಲ್ಲಿ ೧೯೭೦ರ ದಶಕದಲ್ಲಿ ಜಯಪ್ರಕಾಶ್ ನಾರಾಯಣರಿಂದ ಉದ್ದೀಪನಗೊಂಡ ಹಲವು ಬಗೆಯ ಚಳುವಳಿಗಳು ಹೊಸ ಹೊಸ ಆಲೋಚನೆಗಳಿಗೆ ಕಾರಣವಾದವು. ಕರ್ನಾಟಕದಲ್ಲಿ ನಾಡನ್ನು ಕಟ್ಟುವ ಹೊಸ 'ಗ್ರಾಮಮುಖಿ' ಚಿಂತನೆಗಳು ಆರಂಭವಾದ ಕಾಲ ಅದು. ಒಂದೆಡೆ ಪಂಚಾಯತ್ ರಾಜ್ ಕಲ್ಪನೆ ರೂಪು ತಳೆಯುತ್ತಿತ್ತು. ಹೊಸ ಪೀಳಿಗೆಯ ಸುಶಿಕ್ಷಿತ ಯುವಕರು ಹಳ್ಳಿಗಳಿಗೆ ಹೊರಡುವ ಸಿದ್ಧತೆ ನಡೆಸಿದ್ದರು. ಉದಾ: ಡಾ.ಸುದರ್ಶನ್ ಅವರು ಬಿಳಿಗಿರಿ ರಂಗನಬೆಟ್ಟಕ್ಕೂ, ಡಾ. ಬಾಲಸುಬ್ರಹ್ಮಣ್ಯ ಅವರು ಹೆಚ್.ಡಿ.ಕೋಟೆಗೂ, ಡಾ.ಕುಸುಮಾಸೊರಬ ಅವರು ಹೊನ್ನಾವರಕ್ಕೂ, ಸಾಹಿತಿ ಎ.ಎನ್.ಮೂರ್ತಿರಾಯರ ಮಗ ಡಾ.ಎ.ಎನ್.ನಾಗರಾಜು ಅವರು ವಿಶ್ವಸಂಸೆಯ ಆಹಾರ ಮತ್ತು ಕೃಷಿ ಅಧಿಕಾರಿಯಾಗಿದ್ದವರು ತೀರ್ಥಹಳ್ಳಿಯ ತುಂಗಾ ನದಿತೀರಕ್ಕೂ, ಡಾ.ಎಸ್.ಆರ್.ಹಿರೇಮಠ ಅವರು ಧಾರವಾಡದ ಮಡ್ಲೇರಿ ಎಂಬ ಹಳ್ಳಿಗೂ, ವರ್ಧಾದಲ್ಲಿ ಸೈನ್ಸ್ ಫಾರ್ ವಿಲೇಜ್ ಹೆಸರಿನ ಪತ್ರಿಕೆಯನ್ನು ರೂಪಿಸುತ್ತಲೇ ದಿಲ್ಲಿಯ ನೆಹರೂ ವಿಶ್ವವಿದ್ಯಾಲಯದಲ್ಲಿ ಪರಿಸರ ವಿಜ್ಞಾನ ಪದವಿ ಪಡೆದು ನೈನಿತಾಲದಲ್ಲಿ ಬೋಧಕವೃತ್ತಿ ಆರಂಭಿಸಿದ್ದ ನಾಗೇಶ ಹೆಗಡೆ ಬೆಂಗಳೂರಿನ 'ಪ್ರಜಾವಾಣಿ' ಬಳಗದಲ್ಲಿ ವಿಜ್ಞಾನ ಮತ್ತು ಅಭಿವೃದ್ಧಿಯ ಬಾತ್ಮೀದಾರರಾಗಿಯೂ ಸೇರಿದರು. ಭೌತವಿಜ್ಞಾನದಲ್ಲಿ ಚಿನ್ನದ ಪದಕವನ್ನು ಪಡೆದಿದ್ದ ಹೆಚ್.ಆರ್ ಕೃಷ್ಣಮೂರ್ತಿ ಮತ್ತು ಹಿಮಾಲಯದಲ್ಲಿ ಚಿಪ್ಕೋ ಚಳುವಳಿಯಲ್ಲಿ ನಿರಂತರವಾಗಿ ಪಾಲ್ಗೊಂಡಿದ್ದ ಪಾಂಡುರಂಗ ಹೆಗಡೆ ಅವೆಲ್ಲವನ್ನೂ ಬಿಟ್ಟು ಉತ್ತರ ಕನ್ನಡ ಜಿಲ್ಲೆಗೆ ಮರಳಿದರು. ಇದೊಂದು 'ಐತಿಹಾಸಿಕ ವಿಲಕ್ಷಣತೆ' ಎಂದೇ ಹೇಳಬೇಕು ಎನ್ನುತ್ತಾರೆ ಸ್ವತ: ನಾಗೇಶ ಹೆಗಡೆ ಅವರು. ಪರಸ್ಪರ ಪರಿಚಯವೇ ಇಲ್ಲದ ಇವರೆಲ್ಲ ಅದಾವುದೋ ಸೆಳೆತಕ್ಕೆ ಒಂದಾದಂತೆ ೧೯೭೯–೮೦ರ ಇಸವಿಯಲ್ಲಿ ಕರ್ನಾಟಕದ ನಾನಾ ಭಾಗಗಳಲ್ಲಿ ತಳವೂರಿದರು.

ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಿಂದ ಬಂದ ಮಾಧವ ಗಾಡ್ಗೀಳ್ ಮತ್ತವರ ಪತ್ನಿ ಪರಿಸರ ಮತ್ತು ಪರಿಸರ ವಿಜ್ಞಾನದಲ್ಲಿ ಸಂಶೋಧನೆಗೆ ತೊಡಗಿದರು. ಗಾಡ್ಗೀಳ್‌ರು ಉತ್ತರ ಕನ್ನಡ ಜಿಲ್ಲೆಯ ನಿಸರ್ಗವನ್ನು ಸಂಶೋಧನೆಯ ರಂಗವನ್ನಾಗಿ ಆಯ್ಕೆ ಮಾಡಿಕೊಂಡರು. ಡೆಹರಾಡೂನ್ ಅರಣ್ಯಾಧಿಕಾರಿಯ ಮಗಳಾದ ಡಾ.ವಂದನಾಶಿವ ಅಮೆರಿಕಾದಲ್ಲಿ ನ್ಯೂಕ್ಲಿಯರ್ ಫಿಜಿಕ್ಸ್ ಓದಿ ಬೆಂಗಳೂರಿನ ಐಐಎಸ್‌ಸಿ ಸೇರಿದರು. ಅದೇ ತಾನೆ 'ಕರ್ವಾಲೋ' ಮೂಲಕ ಕನ್ನಡ ಸಾಹಿತ್ಯ ಧಾರೆಗೆ ಹಠಾತ್ ಹೊಸ ಹರಿವನ್ನು ಸೇರಿಸಿದ ಪೂರ್ಣಚಂದ್ರ ತೇಜಸ್ವಿ ಹಳ್ಳಿಯ ಮತ್ತು ಕಾಡಿನ ಬದುಕಿನ ವೈಖರಿಯನ್ನು ಹೊಸರೀತಿಯಲ್ಲಿ ಅನಾವರಣ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಶಿವರಾಮ ಕಾರಂತರ ಮಗ ಉಲ್ಲಾಸ್ ಕಾರಂತರು ಸಹ ನಿಸರ್ಗಕ್ಕೆ ಹತ್ತಿರವಾಗಿ ಬದುಕಲೆಂದು ಮೈಸೂರಿನ ಬಳಿ ಕೃಷಿ ಚಟುವಟಿಕೆ ಆರಂಭಿಸಿದರು. ಯಾವುದೋ ಸೆಳೆತಕ್ಕೆ ಸೇರಿದಂತೆ ಸುಶಿಕ್ಷಿತರು ಏಕಕಾಲಕ್ಕೆ ಗ್ರಾಮಮುಖಿಗಳಾಗಿದ್ದು ಈ ಸಂದರ್ಭದ ಅಪೂರ್ವ ಸಂಗತಿಯಾಗಿದೆ.

೧೯೮೦ರ ಬೇಡ್ತಿ ಅಣೆಕಟ್ಟಿನ ವಿರುದ್ಧ ನಡೆದ ವ್ಯಾಪಕ ಜನಾಂದೋಲನವೇ ಕರ್ನಾಟಕದ ಮೊದಲ ಪರಿಸರ ಹೋರಾಟವಾಯಿತು. ಸಿರಸಿಯಲ್ಲಿ ಕಾಲೇಜೊಂದರ ಪ್ರಾಂಶುಪಾಲರಾಗಿದ್ದ 'ಲಿಂಗೇಶ್‌ಶರ್ಮ' ಅವರು ಸಂಘಟಿಸಿದ್ದ ನಾಲ್ಕು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ನಾಡಿನ ಪರಿಸರ ಚಳುವಳಿಯಲ್ಲಿ ಒಂದು ಮೈಲುಗಲ್ಲಾಗಿ ಗುರುತಿಸಬಹುದು. ಬೇಡ್ತಿ ಸಂಕಿರಣವನ್ನು ಕರ್ನಾಟಕ ಪರಿಸರವಾದಿಗಳ 'ವುಡ್‌ಸ್ಟಾಕ್' ಎಂತಲೇ ಹೇಳಬೇಕು ಎನ್ನುತ್ತಾರೆ. (ಜಗತ್ತಿನಲ್ಲಿ ಮೊದಲ ಬಾರಿಗೆ ಪರಿಸರ ರಕ್ಷಣೆ ಮತ್ತು ಬದಲೀ ಜೀವನ ವಿಧಾನಕ್ಕೆ ಒತ್ತಾಯಿಸಿ ೧೯೬೯ರ ಆಗಸ್ಟ್ ೧೫ ರಂದು ನ್ಯೂಯಾರ್ಕಿನ ಶ್ವೇತಕೊಳದ ಬಳಿ ಐದು ಲಕ್ಷ ಯುವಜನರು ನಡೆಸಿದ ನಾಲ್ಕುದಿನಗಳ ಸಮ್ಮೇಳನಕ್ಕೆ 'ವುಡ್‌ಸ್ಟಾಕ್' ಎಂಬ ಹೆಸರು ಬಂದಿದೆ.) ಈ ಸಂಕಿರಣವು ಸರ್ಕಾರದ ವಿವೇಕಾರಹಿತ ಅಭಿವೃದ್ಧಿ ಚಟುವಟಿಕೆಗಳ ಬಗೆಗೆ ದೇಶದ ಗಮನವನ್ನು ಸೆಳೆದ ಮತ್ತು ಹಸಿರು ಚಿಂತನೆಗೆ ಬಹುಮುಖ ಆಯಾಮ ನೀಡಿದ ಘಟನೆಯಾಗಿಯೂ ಇದನ್ನು ಪರಿಸರ ಹೋರಾಟದ ಚರಿತ್ರೆಯಲ್ಲಿ ದಾಖಲಿಸಬಹುದಾಗಿದೆ. ಡಾ. ಶಿವರಾಮ ಕಾರಂತರು ಈ ಸಂಕಿರಣಕ್ಕೆ ಅಧ್ಯಕ್ಷರಾಗಿದ್ದರಲ್ಲದೆ ಅಣೆಕಟ್ಟುಗಳ ವಿರುದ್ಧ ಆಯೋಜಿಸಲ್ಪಟ್ಟ ದೇಶದಲ್ಲೇ ಮೊದಲ ವಿಚಾರಗೋಷ್ಠಿ ಎಂದೇ ಇದನ್ನು ಕರೆಯುತ್ತಾರೆ. ಅಣೆಕಟ್ಟೆಯಷ್ಟೇ ಅಲ್ಲ, ಸ್ವಾತಂತ್ರ್ಯೋತ್ತರ ಭಾರತದ ಎಲ್ಲಾ ಬಗೆಯ ಅಭಿವೃದ್ಧಿ ಯೋಜನೆಗಳೂ ಹೇಗೆ ಗ್ರಾಮೀಣ ಸಂಪನ್ಮೂಲಗಳನ್ನು ಹೀರುತ್ತಾ ಅಲ್ಲಿನವರ ಬದುಕನ್ನು ನರಕಗೊಳಿಸುತ್ತಿವೆ ಎಂಬ ವಿಚಾರವೂ ಸಹ ಚರ್ಚೆಗೆ ಬಂದಂತಹ ವೇದಿಕೆಯೂ ಇದಾಗಿದೆ. ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳ 'ಲಾರ್ಜ್ ಡ್ಯಾಂ' ಹೆಸರಿನ ಸಂಕಲನ ದಿಲ್ಲಿಯ ಶಾಂತಿ ಪ್ರತಿಷ್ಠಾನದಿಂದ ಪ್ರಕಟವಾಗುತ್ತದೆ. ಇದು ಭಾರತದ ಸ್ವಾತಂತ್ರ್ಯೋತ್ತರ ಅಭಿವೃದ್ಧಿ ಪಥವನ್ನು ಪ್ರಶ್ನಿಸುವ ಮೊದಲ ಗ್ರಂಥವೆಂಬ ಹೆಗ್ಗಳಿಕೆಗೆ ಕಾರಣವಾಯಿತು ಎಂಬುದನ್ನು ನಾಗೇಶ ಹೆಗಡೆ 'ನೆನಪಾಗಿ ಉಳಿದ ಪರಿಸರ ದ-ಶಕ' ಲೇಖನದಲ್ಲಿ ಉಲ್ಲೇಖಿಸುತ್ತಾರೆ. ಈ ರೀತಿಯ ಐತಿಹಾಸಿಕ ವಿಲಕ್ಷಣತೆಗೆ ಮತ್ತು ಯಾವುದೋ ಸೆಳೆತಕ್ಕೆ ಒಳಗಾದಂತೆ ಸುಶಿಕ್ಷಿತರೆಲ್ಲರ ಚಿಂತನೆ, ಚರ್ಚೆ, ತಿರುಗಾಟ, ಲೇಖನ, ಅಭಿವ್ಯಕ್ತಿಗಳೆಲ್ಲಾ ಪರಿಸರಮುಖಿಯಾಗಲು ಈ ಸಮ್ಮೇಳನವೇ ನೆಲೆಗಟ್ಟು ಒದಗಿಸಿತೆಂದು ಹೇಳಬಹುದು.[೦೨]

'ಪರಿಸರ' ಸರಳವಾದ ಪದ ಎನಿಸಿದರೂ ಅದರ ಆಯಾಮಗಳು ಸಂಕೀರ್ಣವಾಗಿವೆ. ಪಶ್ಚಿಮ ಘಟ್ಟಗಳಲ್ಲಿ ಏಕರೂಪ ಕೃಷಿ ಅಂದರೆ ವ್ಯಾಪಕ ಪ್ರದೇಶದ ಮೇಲೆ ಒಂದೇ ಬೆಳೆ ಉತ್ಪಾದಿಸುವ ಅಭ್ಯಾಸ ಮತ್ತು ಅಲ್ಲಿನ ಮರಗಳ ಬೀಳುವಿಕೆ ವಿರುದ್ಧ ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಸಮೀಪದ ಸಣ್ಣ ಹಳ್ಳಿಯಾದ ಗುಬ್ಬಿ ಗದ್ದೆಯಲ್ಲಿ ಚಳುವಳಿ ಆರಂಭವಾಯಿತು. ಪರಿಸರದ ಸೂಕ್ಷ್ಮ ಪ್ರದೇಶದಲ್ಲಿ ಅರಣ್ಯ ನೀತಿಗೆ ತಿದ್ದುಪಡಿ ತರಲು ಇದೊಂದು ರೀತಿಯಲ್ಲಿ ಅಹಿಂಸಾತ್ಮಕ ಚಳುವಳಿಯಾಗಿತ್ತು. ಸೆಪ್ಟೆಂಬರ್ ೮, ೧೯೮೩ ರಂದು ಪಾಂಡುರಂಗ ಹೆಗ್ಗಡೆ ಅಪ್ಪಿಕೋ ಚಳುವಳಿಯನ್ನು ಆರಂಭಿಸಿದರು. ಈ ಚಳುವಳಿಗಳು ಗಾಂಧಿ ಪರಿಸರ ಚಳುವಳಿ, ಸುಂದರ್‌ಲಾಲ್ ಬಹುಗುಣ ಅವರ ಚಿಪ್ಕೋ ಚಳುವಳಿಗಳಿಂದ ಪ್ರೇರಿತಗೊಂಡಿದ್ದವು. ದಕ್ಷಿಣ ಭಾರತದಲ್ಲಿ ಮೊಟ್ಟಮೊದಲ ಹಸಿರು ಚಳುವಳಿಯಾಗಿ ಇದನ್ನು ಗುರುತಿಸಲಾಗಿದೆ.

ಮತ್ತೊಂದು ಆಯಾಮದಲ್ಲಿ ನೋಡುವುದಾದರೆ, ಗ್ರಾಮಮುಖಿ ಚಿಂತನೆಗಳೊಂದಿಗೆ ಮತ್ತು ಕ್ರಿಯಾಶೀಲಗೊಂಡ ಕೃಷಿ ಚಟುವಟಿಕೆಗಳ ಪ್ರಭಾವದೊಂದಿಗೆ ಪರಿಸರವಾದವು

ಜಾಗೃತಗೊಳ್ಳುತ್ತಿದ್ದ ಅದೇ ಕಾಲಘಟ್ಟದಲ್ಲಿ ಕೆಲವು ಸಮಾಜವಾದಿ ಕಾರ್ಯಕರ್ತರು ಗ್ರಹಿಕೆಯ ಬದಲಾವಣೆಯಿಂದಾಗಿ (ಚೇಂಜ್ ಆಫ್ ಪರ್‌ಸೆಪ್‌ಷನ್) ಪರಿಸರ ಸಮಾಜವಾದಿ ಕಾರ್ಯಕರ್ತರಾಗಿಯೂ ಪರಿವರ್ತನೆಗೊಂಡಿರುವ ಸಂಭವಗಳುಂಟಾದವು ಎಂಬುದನ್ನು ಗುಹಾ ಅವರ ವಿಶ್ಲೇಷಣೆಯ ಮೂಲಕ ಅರ್ಥೈಸಿಕೊಳ್ಳಬಹುದಾಗಿದೆ. ಮಾನವ ಬದುಕುಳಿಯುವ ಅನಿವಾರ್ಯತೆಯ ದೃಷ್ಟಿಯಿಂದ ನೋಡುವುದಾದಲ್ಲಿ ಭಾರತದಲ್ಲಿ ಪರಿಸರೀಯತೆಯು ಬಡವರ ಪರಿಸರೀಯತೆಯಾಗಿತ್ತು ಎಂದಿದ್ದಾರೆ ಗುಹಾ. ಪ್ರಮುಖವಾಗಿ ಪರಿಸರೀಯತೆಯು (ಎನ್‌ವಿರಾನ್‌ಮೆಂಟಲಿಸಮ್) ಹೊಂದಿದ್ದ ಸಾಮಾಜಿಕ ನ್ಯಾಯದ ಕಾಳಜಿಯು ಮತ್ತೊಂದರಲ್ಲಿ ಸಮರ್ಥನೀಯತೆಯನ್ನು ವಿವಾಹವಾಯಿತು ಎನ್ನುತ್ತಾರೆ. ಅಂದರೆ ಸಂಪನ್ಮೂಲಗಳ ಸಮಾನ ಹಂಚಿಕೆಯಷ್ಟೇ ಅಲ್ಲದೆ ಪರಿಸರದ ಸುಸ್ಥಿರತೆಯ ಬಗ್ಗೆ ಆಲೋಚಿಸುವಂತಹ ಪ್ರವೃತ್ತಿ ಹಾಗೂ ನಿಸರ್ಗದ ಮೇಲಿನ ಮಾನವನ ಅತಿಕ್ರಮಣಗಳನ್ನು ಪ್ರತಿರೋಧಿಸುವಂತಹ ಒಂದು ಮನೋಧರ್ಮ ಅಥವಾ ಸಂಚಲನ ನಿರ್ಮಾಣವಾಯಿತೆನ್ನಬಹುದು. ನೈಸರ್ಗಿಕ ಸಂಪನ್ಮೂಲ ಸಂಘರ್ಷ ಕುರಿತಂತೆ ಭಾರತದಲ್ಲಾದ ಇಂತಹ ಸ್ಥಿತ್ಯಂತರಗಳಿಂದಾಗಿ ಈ ಇಬ್ಬರೂ ಕೃತಿಕಾರರು ಪರಿಸರದ ಸಂಪನ್ಮೂಲಗಳನ್ನು ಸೂಕ್ಷ್ಮವಾಗಿ ಅವಲೋಕಿಸುವಂತೆಯೂ, ಅದರ ಪರಿಣಾಮಗಳನ್ನು ಗ್ರಹಿಸುವಂತೆಯೂ, ಜೊತೆಗೆ ಈ ಸಂಗತಿಗಳ ಬಗ್ಗೆ ಆಸಕ್ತಿ ಕುತೂಹಲ ಮೂಡಿಸಿಕೊಳ್ಳಲು ಕಾರಣವಾಯಿತೆನ್ನಬಹುದು. ಪರಿಸರ ಚಳುವಳಿಗಳು ಅಪೇಕ್ಷಿಸಿದ್ದ ಬೇಡಿಕೆಗಳೆಡೆಗೆ ಮುಖಮಾಡಿದ್ದ ಈ ಇಬ್ಬರೂ ನೈಸರ್ಗಿಕ ಸಂಪನ್ಮೂಲ ಬಳಕೆ ಮತ್ತು ದಮನಗಳ ವಿಚಾರದಲ್ಲಿ ಅಸಮಾನತೆಯ ಹಂಚಿಕೆಯನ್ನು ವಿರೋಧಿಸುತ್ತಲೇ ಬಂದವರಾಗಿದ್ದಾರೆ. ಸ್ವಭಾವತಃ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಚಿಂತಕರಾಗಿಯೂ ಕಾಣಿಸಿಕೊಳ್ಳುತ್ತಾರೆ. ಈ ಇಬ್ಬರೂ ಲೇಖಕರ ಪರಿಸರ ಪ್ರಜ್ಞೆಯ ಅವಲೋಕನದ ದೃಷ್ಟಿಯಿಂದ ರಾಷ್ಟ್ರ ಮತ್ತು ನಾಡಿನ ಪರಿಸರ ಹೋರಾಟಗಳ ಸಂಗತಿಗಳು ಅರ್ಥೈಸಿಕೊಳ್ಳುವಿಕೆಯ ಆಯಾಮವಾಗಿ ಬಹುಮುಖ್ಯವಾಗುತ್ತವೆ. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಮತ್ತು ನಾಗೇಶ ಹೆಗಡೆ ಅವರ ಪರಿಸರ ಪ್ರಜ್ಞೆ ಆಧಾರಿತ ಬರಹಗಳ ಅನಾವರಣಕ್ಕೆ ಭಾರತದ ಪರಿಸರದ ಹೋರಾಟಗಳು ಮತ್ತು ಚಳುವಳಿಗಳ ಸಂದರ್ಭಗಳು ಹಿನ್ನೆಲೆಯಾಗಿರುವುದನ್ನು ಕಂಡುಕೊಳ್ಳಬಹುದು.

೮.೧.೨ ವೈಜ್ಞಾನಿಕ ಕಥಾ ಸಾಹಿತ್ಯದ ಸ್ವರೂಪಗಳು:

ಇಪ್ಪತ್ತನೇ ಶತಮಾನದ ವೈಜ್ಞಾನಿಕ ಕತೆಗಳ ರಚನಾಕಾರರಲ್ಲಿ ಅನಭಿಷಕ್ತರ ಗುಂಪಿಗೆ ಸೇರುವ **'ಐಸಾಕ್ ಆಸಿಮೋವ್'** ಒಬ್ಬ ಯುವ ಕತೆಗಾರನ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: *'A science fiction story must be set against a society significantly different from our own- usually but not necessarily, because of some change in the level of science and technology-or it is not a science fiction....*[೦೩] ಅಂದರೆ ನಮ್ಮ ಈ ಪ್ರಪಂಚದಿಂದ ಭಿನ್ನವಾದ ಸಾಮಾಜಿಕ ಅಥವಾ ಭೌತಿಕ ಲಯದ ಪ್ರಪಂಚವನ್ನು ಸೃಷ್ಟಿಮಾಡಿಕೊಳ್ಳದ ಕತೆ ಸಾಮಾನ್ಯವಾಗಿ ವೈಜ್ಞಾನಿಕ ಕತೆ ಎನಿಸಿಕೊಳ್ಳದು ಎನ್ನುವುದು ಆತನ ಅಭಿಪ್ರಾಯ. ಈ ವ್ಯಾಖ್ಯಾನವನ್ನು ಎಲ್ಲರೂ ಸ್ವಿಕರಿಸುವುದಿಲ್ಲವಾದರೂ, ವೈಜ್ಞಾನಿಕ ಕತೆಗಳ

ಬಗೆಗಿನ ಈ ಭಾವನೆ ಪ್ರಪಂಚದಾದ್ಯಂತ ಒಂದು ಇಡೀ ಶತಮಾನದ ಬರಹಗಾರರನ್ನೂ ಪ್ರಭಾವಿತಗೊಳಿಸಿದೆಯಲ್ಲದೆ ಕನ್ನಡದಲ್ಲಿ ಬಹಳಷ್ಟು ಜನಪ್ರಿಯ ವೈಜ್ಞಾನಿಕ ಕತೆಗಳ ಸೃಷ್ಟಿಗೂ ಕಾರಣವಾಗಿದೆ ಎನ್ನಲಾಗುತ್ತದೆ.

ವೈಜ್ಞಾನಿಕ ಆವಿಷ್ಕಾರ ಮತ್ತು ಸಂಶೋಧನೆಗಳ ಅಳವಡಿಕೆಯಿಂದ ನಾವು ಅನುಭವಿಸಬಹುದಾದ ದುರಂತಗಳನ್ನು ಅಥವಾ ಪ್ರಯೋಜನಗಳನ್ನು ಕತೆಯ ರೂಪದಲ್ಲಿ ತರಬಲ್ಲ ಎಲ್ಲಾ ಸೃಜನಾತ್ಮಕ ಕೃತಿಗಳೂ ಕೂಡ ವೈಜ್ಞಾನಿಕ ಕತೆಗಳೆ. ಸರ್ಡಾರ್ ಎಗುಲಲ್ಪ್ ಹೇಳುವ ಹಾಗೆ ವೈಜ್ಞಾನಿಕ ಕತೆಯು *'A kind of fiction that could only result from a sceientifically influenced world view'*... ಹಾಗಾಗಿ ವೈಜ್ಞಾನಿಕ ಕತೆಗಳು ವಿಜ್ಞಾನದಿಂದ ಪ್ರಭಾವಿತಗೊಂಡ ಪ್ರಪಂಚದ ಅಥವಾ ಬದುಕಿನ ನಿರೂಪಣೆಗಳೂ ಆಗಿರಲು ಸಾಧ್ಯ. ವಿಜ್ಞಾನದ ಆವಿಷ್ಕಾರಗಳ ಅಳವಡಿಕೆಯಿಂದ ಉದ್ಭವವಾಗುವ ಅಥವಾ ಬೆಳೆಯುವ ವಿಭಿನ್ನ ವಿಶ್ವಗಳನ್ನು ನಿರೂಪಿಸುವ ಕತೆಗಳು ಕೂಡ ವೈಜ್ಞಾನಿಕ ಕತೆಗಳೆ. ಒಟ್ಟಿನಲ್ಲಿ ಸರಳವಾಗಿ ಹೇಳುವುದಾದರೆ ಭವಿಷ್ಯತ್ತಿನ ಸಂಭವನೀಯ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕತೆಗಳ ರೂಪದಲ್ಲಿ ತರುವ ಪ್ರಯತ್ನವೆಲ್ಲವೂ ವಿಜ್ಞಾನ ಕಥಾಸಾಹಿತ್ಯಕ್ಕೆ ಸೇರುತ್ತವೆ. ಈ ದೃಷ್ಟಿಯನ್ನು ಬಿಂಬಿಸುವ ವ್ಯಾಖ್ಯೆ ಹೀಗಿದೆ: *'Science fiction is a genre of fiction in which stories often tell about science and technology of the future... These stories involve partially true, partially fictitious laws or theories of science. It should not be completely unbelievable because it then ventures in to the genre of fantasy'*[೦೪]

ತ್ರಿವೇಣಿಯವರ ಶರಪಂಜರ ಅತೀ ಸಂಭವನೀಯ ಮನೋವೈಜ್ಞಾನಿಕ ಕತೆಯಾಗಿದ್ದು ಕನ್ನಡದ ವೈಜ್ಞಾನಿಕ ಕಥಾಸಾಹಿತ್ಯದ ವ್ಯಾಪ್ತಿಯ ಒಂದು ತುದಿಯಲ್ಲಿ ನಿಂತರೆ, ಡಾ. ಭೂಸನೂರಮಠ ಅವರ ಕತೆಗಳು ಫ್ಯಾಂಟಸಿಯ ಗಡಿಯಲ್ಲಿಯೇ ಓಡಾಡುತ್ತಾ, ಭವಿಷ್ಯತ್ತಿನ ಸಾಧ್ಯತೆಗಳನ್ನು ತೆರೆದಿಡುವ ಕತೆಗಳಾಗಿ ಮತ್ತೊಂದು ತುದಿಯಲ್ಲಿ ನಿಲ್ಲುತ್ತವೆ. ಇವೆರಡರ ಮಧ್ಯದ ವಿಶಾಲ ವ್ಯಾಪ್ತಿಯ ಅನೇಕ ಶ್ರೇಣಿಗಳಲ್ಲಿ ನಾವು ಕನ್ನಡದ ವೈಜ್ಞಾನಿಕ ಕತೆಗಳನ್ನು ಗುರುತಿಸಬಹುದು. ಉದಾಹರಣೆಗೆ, ಕಾಲೇಜಿನ ಪದವಿ ವಿದ್ಯಾರ್ಥಿಗಳನ್ನು ಸಸ್ಯಗಳ ಅಧ್ಯಯನಕ್ಕೆಂದು ಪ್ರೋಫೆಸರ್ ಒಬ್ಬರು ಕಾಡಿಗೆ ಕರೆದೊಯ್ದಾಗ ನಡೆಯುವ ನವಿರಾದ ಹಾಸ್ಯ ಘಟನೆಗಳ ಸುತ್ತ ಹೆಣೆದ ಕತೆಯ ಮೂಲಕವೇ ಸಸ್ಯಗಳ ಬಗ್ಗೆ ಸಾರಾಸಗಟಾಗಿ ಕುತೂಹಲಭರಿತ ಮಾಹಿತಿಗಳನ್ನು ನೀಡುವ ಬಿ.ಜಿ.ಎಲ್. ಸ್ವಾಮಿಯವರ **'ಹಸಿರುಹೊನ್ನು'** ರಚನೆಯು ಸಾಹಿತ್ಯ ಮತ್ತು ವಿಜ್ಞಾನ ಸಾಹಿತ್ಯದ ಅಂತರವನ್ನೇ ಅಳಿಸಿಹಾಕುವಷ್ಟು ಪ್ರಭಾವಶಾಲಿಯಾದ ಪ್ರಯತ್ನ. ಇಡೀ ಪ್ರಪಂಚದ ವೈಜ್ಞಾನಿಕ ಸಾಹಿತ್ಯದಲ್ಲಿಯೇ ವಿರಳ ಎನ್ನಬಹುದಾದ ಅಪೂರ್ವ ರಚನೆ. ಒಂದು ರೀತಿಯಲ್ಲಿ ಇದನ್ನು ವೈಜ್ಞಾನಿಕ ಕತೆ ಎನ್ನುವುದಕ್ಕಿಂತ ವಿಜ್ಞಾನ ಸಾಹಿತ್ಯ ಎನ್ನುವುದೇ ಸೂಕ್ತ. ಅಂಥದೆ ನವಿರಾದ ಹಾಸ್ಯಲೇಪನದ ಸೊಗಡನ್ನು ಅಳವಡಿಸಿಕೊಂಡು ರಚಿಸಿರುವ ಮತ್ತೊಂದು ಕೃತಿ ಪೂರ್ಣಚಂದ್ರ ತೇಜಸ್ವಿಯವರ **'ಕರ್ವಾಲೊ'**. ಒಂದು ನಿಗೂಢವಾದ ಹಾರುವ ಹಲ್ಲಿಯಂತಹ ಪ್ರಾಣಿಯನ್ನು ಹುಡುಕಲು ವಿಜ್ಞಾನಿಯೊಬ್ಬರ ಜೊತೆ ಒಂದು ಗುಂಪು ಕಾಡಿಗೆ ಹೊರಟಾಗ ನಡೆಯುವ ಘಟನೆಗಳ ಸರಮಾಲೆಯನ್ನು ಕೌತುಕವಾಗಿ ಪೋಣಿಸುವ ಈ ಕತೆಯಲ್ಲಿನ ಎಲ್ಲಾ ವಿವರಗಳು ಸತ್ಯ ಅಥವಾ ಸತ್ಯಕ್ಕೆ ಹತ್ತಿರ ಕತೆಯ ಹೊರತಾಗಿವೆ. ಹಾಗಾಗಿ

'ಕರ್ವಾಲೊ' ಸಹ **'ಹಸಿರು ಹೊನ್ನು'** ಹಾಗೆ ವೈಜ್ಞಾನಿಕ ಕತೆಗಳ ಮತ್ತು ವಿಜ್ಞಾನದ ಮೇಲಿನ ಪ್ರಬಂಧಗಳ ಮಧ್ಯದ ಗಡಿಗಳನ್ನು ಅಳಿಸಿಹಾಕುವ ಕೃತಿಗಳಿಗೆ ಒಂದು ಅತ್ಯುತ್ತಮ ಉದಾಹರಣೆ. ಇವಲ್ಲದೆ ನಾಗೇಶ ಹೆಗಡೆಯವರು ವಿಜ್ಞಾನದ ಪರಿಕಲ್ಪನೆಗಳನ್ನು ಪ್ರಸ್ತುತ ಬದುಕಿಗೆ ತಂದು, ಅತೀ ಸಂಭವನೀಯವಾಗಿ ಮಾನವ ಸಂಬಂಧಗಳ ಮತ್ತು ಭಾವಗಳ ಜೊತೆ ಹೆಣೆದು ಕತೆ ರಚಿಸಬಹುದು ಎಂದು ತೋರಿಸಿಕೊಡುತ್ತಾರೆ. ಹೀಗೆ ಕನ್ನಡದ ವಿಜ್ಞಾನ ಕಥಾ ಸಾಹಿತ್ಯದಲ್ಲಿ ವಿಜ್ಞಾನದ ಬೋಧನೆಯನ್ನೇ ಪ್ರಧಾನವಾಗಿಸಿಕೊಂಡಿರುವ ಬಿ.ಜಿ.ಎಲ್.ಸ್ವಾಮಿಯವರ ಕೃತಿಗಳಿಂದ ಹಿಡಿದು ಪ್ರಸ್ತುತ ಬದುಕಿನ ಮತ್ತು ಸಮಾಜದ ಮೇಲೆ ವಿಜ್ಞಾನದ ಬೆಳವಣಿಗೆಗಳು ಬೀರಬಹುದಾದ ಪರಿಣಾಮಗಳನ್ನು ಬಿಂಬಿಸುವ ತ್ರಿವೇಣಿ, ಹಾವನೂರ್, ತೇಜಸ್ವಿ, ನಾಗೇಶ ಹೆಗಡೆ ಅಂತವರ ಕತೆಗಳನ್ನು ಒಳಗೊಂಡು, ಭ್ರಮಾಲೋಕವನ್ನೇ ಓದುಗರ ಮುಂದೆ ನಿಲ್ಲಿಸುವ ಭೂಸನೂರಮಠ ಅವರ ಕತೆಗಳವರೆಗೆ ವಿಶಾಲವಾದ ವ್ಯಾಪ್ತಿಯನ್ನು ಕಾಣಬಹುದು.

ವಿಜಾನಿಗಳು ತಮ್ಮ ಸಂಶೋಧನೆಗಳೊಂದಿಗೆ ಜನಸಾಮಾನ್ಯರಿಂದ ದೂರವಾದಂತೆ ಮತ್ತು ಅವರ ಆವಿಷ್ಕಾರಗಳ ಬಗ್ಗೆ ಜನರಲ್ಲಿ ತಿಳುವಳಿಕೆ ಕಡಿಮೆಯಾಗುತ್ತಾ ಹೋದಂತೆ ಸಮಾಜದಲ್ಲಿ ಒಂದು ವಿಚಿತ್ರ ಸ್ಥಿತಿ ನಿರ್ಮಾಣವಾಗುತ್ತದೆ. ವಿಜ್ಞಾನದಲ್ಲಿ ನಡೆಯುವ ಬೆಳವಣಿಗೆಗಳು ಮತ್ತು ಸಂಶೋಧನೆಗಳು ಸಾಮಾನ್ಯ ಜನರ ಅರಿವಿಗೆ ನಿರ್ಭೇದ್ಯವೂ ರಹಸ್ಯವೂ ಆಗಿ ಕಾಣತೊಡಗುವುದರಿಂದಾಗಿ ವಿಜ್ಞಾನಿ ಮತ್ತು ಜನಸಾಮಾನ್ಯರ ನಡುವೆ ಅಗಾಧ ಕಂದರ ನಿರ್ಮಾಣವಾಗುತ್ತದೆ. ಆ ಕಂದರದ ಎರಡೂ ಕಡೆಯ ಈ ಸಮುದಾಯಗಳ ನಡುವೆ ಸೇತುವೆ ಕಟ್ಟಿ, ಅವರಿಬ್ಬರನ್ನೂ ಸೇರಿಸಲು ಸೂಕ್ತ ಮಧ್ಯವರ್ತಿಗಳ ಅವಶ್ಯಕತೆ ಉಂಟಾಗುತ್ತದೆ. ಅವಶ್ಯಕತೆಯನ್ನು ಅವಕಾಶವನ್ನಾಗಿ ಪರಿವರ್ತಿಸಿಕೊಳ್ಳುವ ಕತೆಗಾರ ಹುಟ್ಟಿಕೊಳ್ಳುತ್ತಾನೆ. ಆ ಕತೆಗಾರ ವಿಜ್ಞಾನಿಗಳ ನಿಗೂಢ ಸಂಶೋಧನೆಗಳನ್ನು ಅರ್ಥೈಸಿಕೊಂಡು ಅವನ್ನು ಅರಿಯಲು ಕಾತುರದಿಂದ ಕಾದು ಕುಳಿತಿರುವ ಜನಸಾಮಾನ್ಯನಿಗೆ ಸರಳವಾದ ಭಾಷೆಯಲ್ಲಿ ಕತೆಗಳ ಮೂಲಕ ಉಣಬಡಿಸುತ್ತ, ಅವರಿಬ್ಬರ ನಡುವಿನ ಸೇತುವೆಯಾಗುತ್ತಾನೆ. ಆ ಕತೆಗಳ ಮೂಲಕ ತಮಗೆ ಅಭೇದ್ಯವಾಗಿರುವ ರಹಸ್ಯಗಳನ್ನು ಅರಿತೆವೆಂಬ ಸಂತೃಪ್ತಿ ಜನಸಾಮಾನ್ಯನಲ್ಲಿ ಮೂಡುತ್ತಿದ್ದಂತೆ ಆತ ಅಂತಹ ಕತೆಗಳನ್ನು ಮತ್ತೆ ಮತ್ತೆ ಬಯಸುತ್ತಾನೆ. ಹೀಗೆ ವೈಜ್ಞಾನಿಕ ಕತೆಗಳು ವೃದ್ಧಿಯಾಗುತ್ತವೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಕನ್ನಡದಲ್ಲಿ ಬಂದಿರುವ ಬಹುಪಾಲು ವೈಜ್ಞಾನಿಕ ಕತೆಗಳು ಪಾಶ್ಚಿಮಾತ್ಯ ವೈಜ್ಞಾನಿಕ ಕಾದಂಬರಿಗಳ ಅನುಕರಣೆ ಮಾತ್ರ ಆಗಿರಲು ಸಾಧ್ಯ ಎಂಬ ದುಗುಡ ನಮ್ಮನ್ನು ಕಾಡುತ್ತದೆ ಎಂದಿದ್ದಾರೆ ಡಾ. ಕೆ.ಎನ್. ಗಣೇಶಯ್ಯನವರು. ಇದಕ್ಕೆ ಕಾರಣ ವಿಜ್ಞಾನದ ಬೆಳವಣಿಗೆಯಲ್ಲಿ ಕಂಡುಬರುವ ಭೌಗೋಳಿಕ ಅಸಮತೆ. ವೈಜ್ಞಾನಿಕ ಕತೆಗಳಿಗೆ ಬೇಕಾಗುವ ವಿಷಯ ಮತ್ತು ವಸ್ತುಗಳು ಇತ್ತೀಚಿನ ಶತಮಾನಗಳಲ್ಲಿ ಪಾಶ್ಚಿಮಾತ್ಯ ದೇಶದಲ್ಲಿಯೇ ಪ್ರಮುಖವಾಗಿ ಉದ್ಭವಿಸಿದ್ದು. ಅಲ್ಲಿನ ಕತೆಗಾರರು ವಿಜ್ಞಾನದ ಆ ಹೀರೋಗಳೊಂದಿಗೆ ಭುಜ ತಾಕಿಸಿಕೊಂಡು ಬೆಳೆದವರು. ಆದರೆ ಭಾರತದ ಕತೆಗಾರರಿಗೆ ಈ ರೀತಿಯ ಅವಕಾಶವಿಲ್ಲ. ವಿಜ್ಞಾನದ ಎಲ್ಲಾ ನಿಗೂಢಗಳು ಎಲ್ಲೋ ದೂರದಿಂದ ಬಂದ ಫಾರಿನ್ ವಸ್ತುಗಳು. ವಿಜ್ಞಾನದ ಆವಿಷ್ಕಾರಗಳನ್ನು ಹತ್ತಿರದಿಂದಲೇ ಕಂಡ ಫಾರಿನ್ ಕತೆಗಾರರಿಗೆ ಅವುಗಳನ್ನು ಕಥಾರೂಪದಲ್ಲಿ

ತರಲು ಹಿಂಜರಿಕೆ ಇಲ್ಲದೆ ಆತ್ಮವಿಶ್ವಾಸವಿರುತ್ತದೆ. ನಮ್ಮಲ್ಲಿನ ಬಹುಪಾಲು ವೈಜ್ಞಾನಿಕ ಕತೆಗಳು ಪಾಶ್ಚಿಮಾತ್ಯರ ಅನುಕರಣೆಯಾಗಿ ಬೆಳೆಯುವ ಅನಿವಾರ್ಯತೆ ಇದೆ. ಆದರೂ 'ಹಸಿರು ಹೊನ್ನು' 'ಕರ್ವಾಲೊ' ಇಂತಹ ಅನುಕರಣೆಗಳಿಗೆ ಅಪವಾದಗಳಾಗಿ ತಲೆಯೆತ್ತಿ ನಿಲ್ಲುತ್ತವೆ.[೦೫]

೮.೨ ಕೃತಿಕಾರರ ಪರಿಸರ ಪ್ರಜ್ಞೆಯ ತೌಲನಿಕ ವಿಚಾರಗಳು:

ತೇಜಸ್ವಿ ಮತ್ತು ನಾಗೇಶ ಹೆಗಡೆ ಇಬ್ಬರೂ ವೈಜ್ಞಾನಿಕತೆ ಮತ್ತು ವೈಚಾರಿಕತೆಯಲ್ಲಿ ಪಶ್ಚಿಮವನ್ನು ನೋಡಿದವರು. ವಿಜ್ಞಾನದ ಸಂಶೋಧನೆಗಳ ಸತ್ಯಾಸತ್ಯತೆಯನ್ನು ಅರಿಯುವ ಮನೋಧರ್ಮ ಇಬ್ಬರಲ್ಲೂ ಇದೆ. ಸಂಶೋಧನೆಗಳನ್ನು, ವಿಜ್ಞಾನದ ತರ್ಕಗಳನ್ನು, ಅಖಂಡ ಪರಿಸರದ ಸತ್ಯಗಳನ್ನು ಗ್ರಹಿಸಿ ಓದುಗರಿಗೆ ಅರ್ಥವಾಗುವಂತೆ ಸರಳವಾಗಿ ನಿರೂಪಿಸುವ ಸೃಜನಾತ್ಮಕತೆಯನ್ನು ಇಬ್ಬರ ಕೃತಿಗಳಲ್ಲೂ ಕಾಣಬಹುದಾಗಿದೆ. ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕತೆ ಕಾದಂಬರಿಗಳಲ್ಲಿ ವೈಜ್ಞಾನಿಕತೆಯ ಪ್ರಯೋಗವನ್ನು ತೇಜಸ್ವಿ ಮಾಡಿದಂತೆ ನಾಗೇಶ ಹೆಗಡೆ ಅವರು ಮಾಡಲಾರರು. ಅವರದು ಶುದ್ಧ ವಿಜ್ಞಾನ ಮತ್ತು ಶುಷ್ಕತೆಯ ನಿರೂಪಣೆಯಿಂದ ಬೇರ್ಪಡುವ ನವಿರಾದ ಭಾಷಾ ಪ್ರಯೋಗವಿರುವ ಸೃಜನೇತರ ಕೃತಿಗಳ ರಚನೆಯಾಗಿದೆ. ಸರಳ ಉಪಮೆಯನ್ನು ಇಬ್ಬರಲ್ಲೂ ಕಾಣಬಹುದು. ಇದಕ್ಕೊಂದು ಉತ್ತಮ ಉದಾಹರಣೆ ಎಂದರೆ ತೇಜಸ್ವಿ ಅವರ 'ಪರಿಸರದ ಕತೆ' ಮತ್ತು ಹೆಗಡೆ ಅವರ 'ಹಳ್ಳಿಮುಕ್ಕ ಎಲ್ಲೆಲ್ ಹೊಕ್ಕ' ಕೃತಿಗಳು. ಹಾಗೆಯೇ ಕರ್ವಾಲೋ, ವಿಸ್ಮಯ, ಅಭಿವೃದ್ಧಿಯ ಅಂಧಯುಗ, ಇರುವುದೊಂದೇ ಭೂಮಿ, ನಮ್ಮೊಳಗಿನ ಬ್ರಹ್ಮಾಂಡ, ದುಂದುಮಾರದಂತಹ ಕೃತಿಗಳು ಪಶ್ಚಿಮದ ಆವಿಷ್ಕಾರಗಳನ್ನು, ವಿಕಾಸವಾದದ ಚಿಂತನೆಗಳನ್ನು, ಭೂಗೋಲದ ಜೀವವೈವಿಧ್ಯದ ರಹಸ್ಯಗಳನ್ನು ಪ್ರಾಕೃತಿಕ ಮತ್ತು ಪ್ರಾದೇಶಿಕ ಪರಿಸರದ ನೆಲೆಗಟ್ಟಿನ ಹೊದಿಕೆಯೊಳಗೆ ತರಬಲ್ಲ ಸ್ವಲ್ಪಮಟ್ಟಿನ ವೈಜ್ಞಾನಿಕ ಕತೆಗಳ ಸ್ವಭಾವವನ್ನು ಒಳಗೊಂಡಿವೆ ಎನ್ನಬಹುದು.

ಇಬ್ಬರ ಕೃತಿಗಳಲ್ಲೂ ಬಹಳಷ್ಟು ಕಡೆ ಸಾಮ್ಯತೆ ಮತ್ತು ವೈವಿಧ್ಯತೆಗಳೆರಡೂ ಕಂಡುಬರುತ್ತವೆ. ಪರಿಸರವಾದತ್ವದೊಂದಿಗೆ ಇಕಾಲಜಿಯ ವಿಶ್ವರೂಪವನ್ನು ಅರ್ಥೈಸಿಕೊಂಡಿದ್ದ ಇವರಿಬ್ಬರ ಕೃತಿಗಳನ್ನು ತುಲನಾತ್ಮಕವಾಗಿ ಹೋಲಿಸುವುದು ಕಷ್ಟಸಾಧ್ಯವಾದರೂ ಸಂಶೋಧನಾ ಅಧ್ಯಯನ ಪ್ರಸ್ತುತವೂ ಮತ್ತು ಸಾಂಸ್ಕೃತಿಕ ಜವಾಬ್ದಾರಿಯೂ ಸಹ ಆಗಿದೆ. ತುಲನಾತ್ಮಕವಾಗಿ ಅರ್ಥಮಾಡಿಕೊಳ್ಳುವ ಸಂದರ್ಭದಲ್ಲಿ ಎದುರಾಗುವ ಪ್ರಮುಖ ಸಮಸ್ಯೆಯೆಂದರೆ, ಸಂಶೋಧನಾ ವಿದ್ಯಾರ್ಥಿಗೆ ಪರಿಸರದ ಕೆಲವು ಮೂಲ ಪರಿಕಲ್ಪನೆಗಳ ಬಗ್ಗೆ ಅಗತ್ಯ ಜ್ಞಾನ ಇರಬೇಕಾಗುತ್ತದೆ. ಉದಾ:ಇಕಾಲಜಿ (Ecology)ಯ ಅರ್ಥ ಮತ್ತು ವ್ಯಾಪ್ತಿ, ಜೀವ-ವೈವಿಧ್ಯ (Bio-diversity), ಜೀವ-ವೈವಿಧ್ಯದ ದಾಖಲಾತಿ (Enrollment), ಜೀವ-ಪ್ರಬೇಧ, ಡಾರ್ವಿನ್ನನ ಜೀವ ವಿಕಾಸದ ತತ್ವ, ಜಾಗತಿಕ ಪರಿಸರ ವ್ಯವಸ್ಥೆಗೆ ಒಳಪಡುವ ಅಂಶಗಳು, ನೈಸರ್ಗಿಕ ಸನ್ನಿವೇಶಗಳಲ್ಲಿ ಅಭಿವೃದ್ಧಿಯ ಅರ್ಥ, ಸುಸ್ಥಿರ ಅಭಿವೃದ್ಧಿಯ ಕಲ್ಪನೆ ಇತ್ಯಾದಿಗಳನ್ನು ಸಂಶೋಧನಾ ವಿದ್ಯಾರ್ಥಿ ಸ್ವಅಧ್ಯಯನಕ್ಕೆ ಒಳಪಡಿಸಿಕೊಳ್ಳಬೇಕಾಗುವುದು. ಸಾಹಿತ್ಯಾಧ್ಯಯನ ವಿದ್ಯಾರ್ಥಿಗೆ ಇಂತಹ ಪರಿಕಲ್ಪನೆಗಳ ಆಳ ಗ್ರಹಿಕೆ ಕಷ್ಟಸಾಧ್ಯವಾದುದು. ವಿಜ್ಞಾನ ಅಥವಾ ಪರಿಸರ ಅಧ್ಯಯನ ವಿಷಯವಾಗಲಿ ಆಸಕ್ತಿಯುತ ಸಬ್‌ಜೆಕ್ಟ್ ಆಗಿರಬೇಕು. ಆಗ ಹೆಗಡೆ

ಅವರನ್ನು ಇನ್ನಷ್ಟು ಅರ್ಥೈಸಿಕೊಳ್ಳಲು ಸುಲಭವಾಗುತ್ತದೆ. ಇದನ್ನು ಸಂಶೋಧನೆಯಲ್ಲಿ ಮಿತಿಯಾಗಿ ಗುರುತಿಸುತ್ತೇನೆ.

ಲೇಖಕರ ಕೃತಿಗಳನ್ನು ಅವಲೋಕಿಸಿದಾಗ ಅಂತರಾಳದಲ್ಲಿ ತುಡಿಯುವ ಪರಿಸರ ಪ್ರಜ್ಞೆಗೆ ಅವರನ್ನು ಬಹುವಾಗಿ ಆವರಿಸಿಕೊಳ್ಳುವ ಅಂಶವೆಂದರೆ ಒಡನಾಟವೊಂದಿದ ಅವರ ಮೂಲಪ್ರದೇಶ. ಪ್ರಾದೇಶಿಕತೆಯಲ್ಲಿ ಪಶ್ಚಿಮಘಟ್ಟಗಳು ಮತ್ತು ಮಲೆನಾಡು ಪ್ರದೇಶಗಳು ನೇರವಾಗಿ ಕಟ್ಟಿಕೊಡುವ ಒಳಹುಗಳು ಪರಿಸರದ ಸಂವೇದನೆಯುಳ್ಳ ಕಲಾಕೃತಿ ನಿರ್ಮಾಣಕ್ಕೆ ಪ್ರೇರಕವಾಗಿದೆ ಎನ್ನಬಹುದು. ದಟ್ಟಕಾನನದಿಂದ ತುಳುಕುತ್ತಿದ್ದ, ಜೀವವೈವಿಧ್ಯದಿಂದ ಸಮೃದ್ಧವಾಗಿದ್ದ, ಚಿಕ್ಕ ದೊಡ್ಡ ಜಲರಾಶಿಯನ್ನು ಹೊಂದಿರುವ ಪರಿಸರವು ಅಭಿವೃದ್ಧಿಯ ಹೆಸರಿನಲ್ಲಿ ದಿನೇ ದಿನೇ ಹೇಗೆ ಬರಿದಾಗುತ್ತಿದೆ ಎಂಬುದರ ದೃಷ್ಟಿಗೋಚರ ತುಲನಾತ್ಮಕ ಹೋಲಿಕೆ–ವ್ಯತ್ಯಾಸಗಳು ಹಾಗೂ ಆಂತರಿಕ ಅಭಿಪ್ರೇರಣೆಗಳು ಪರಿಸರ ಪ್ರಜ್ಞೆಯ ಬರಹಗಳಿಗೆ ಅಥವಾ ಕೃತಿಗಳಲ್ಲಿ ಅವುಗಳನ್ನು ತರುವ ಒತ್ತಾಸೆಗೆ ಕಾರಣವಾಗಿವೆ ಎಂದು ಅಭಿಪ್ರಾಯಿಸಬಹುದು. ಹಾಗೆಯೇ ಹಿನ್ನೆಲೆಯಲ್ಲಿ ವಿವರಿಸಿದಂತೆ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಸಂಘರ್ಷಗಳು ಇಬ್ಬರನ್ನು ಪ್ರಭಾವಿಸಿರಲೂಬಹುದು.

೮.೨.೧ ತೇಜಸ್ವಿ ಪರಿಸರ ಪ್ರಜ್ಞೆಯ ಗ್ರಹಿಕೆಗಳು:

ತೇಜಸ್ವಿ ಪರಿಸರವಾದಿ ಬರಹಗಾರನಂತೆಯೇ ಕಂಡರೂ "ಪರಿಸರೀಯತೆಗೂ ಮತ್ತು ಅವರು ನಿರೂಪಿಸಿದ ಹಲವಾರು ಸಣ್ಣ ಘಟನೆಗಳಿಗೂ ನಡುವೆ ಯಾವುದೇ ನೇರ ಸಂಬಂಧವಿಲ್ಲ" ಎಂದು ಅವರೇ ಹೇಳುತ್ತಾರೆ. ಆದರೂ ಅವರ ಅನೇಕ ಕೃತಿಗಳನ್ನು ಓದಿದ ನಂತರ ನಾವು ಅವರನ್ನು ಬಲವಾದ ಪರಿಸರವಾದಿ ಎಂದು ಭಾವಿಸಬಹುದಾಗಿದೆ. ಪರಿಸರ ವಿಷಯಗಳ ಮೇಲೆ ತಮ್ಮ ಕಲಾ ಪ್ರತಿಮೆಯನ್ನು ಕೇಂದ್ರೀಕರಿಸಿದ ಮೊದಲ ಭಾರತೀಯ ಲೇಖಕ ಎಂದೇ ಗುರುತಿಸಬಹುದು. ಆದರೆ ಇವರೊಬ್ಬ ಧ್ವಜ ಪ್ರೇರಿತ ಕಾರ್ಯಕರ್ತರಲ್ಲ. ನಿಸರ್ಗವನ್ನು ಹತ್ತಿಕ್ಕುವ ಅಭಿವೃದ್ಧಿ ಚಟುವಟಿಕೆಗಳನ್ನು ಅದರಲ್ಲೂ ಮಲೆನಾಡು ಪರಿಸರ ವಿರೋಧಿ ಚಟುವಟಿಕೆಗಳನ್ನು ಅವರು ಪ್ರತಿಭಟಿಸುತ್ತಲೇ ಬಂದವರು. ನಿಸರ್ಗದಲ್ಲಿನ ಕುತೂಹಲಕಾರಿ ಸಂಗತಿಗಳು ಅವರನ್ನು ದೂರದ ಹಳ್ಳಿಗೆ ಹಿಂತಿರುಗಿ ನೆಲೆಸುವಂತೆ ಮಾಡಿತು ಎಂಬುದನ್ನು ಅಲ್ಲಗಳೆಯಲಾಗದು.

ತೇಜಸ್ವಿ ಅವರು ನಾನು ಪರಿಸರವಾದಿಯಲ್ಲ ಎಂದು ಹೇಳಿಕೊಂಡರೂ, ಪಕ್ಷಿಗಳು ಮತ್ತು ಪ್ರಕೃತಿಯ ಬಗ್ಗೆ ಅವರ ಪ್ರೀತಿಯು ಸ್ಪಷ್ಟವಾಗಿತ್ತು. ಪಕ್ಷಿವಿಜ್ಞಾನದ ಬಗೆಗಿನ ಅವರ ತೀವ್ರವಾದ ಉತ್ಸಾಹದಿಂದಾಗಿ ಮತ್ತು ನಿರ್ದಿಷ್ಟತೆಯಿಂದಾಗಿ ಅವರು ಛಾಯಾಗ್ರಹಣವನ್ನು ಕಲಿತರು. ಪಕ್ಷಿಗಳು ಮತ್ತು ಅವುಗಳ ಚಲನವಲನ ಕುರಿತ ವಿವರಣೆಗಳು ಅವರ ಅನೇಕ ಕಾದಂಬರಿಗಳಲ್ಲಿ ಬಂದು ಹೋಗಿವೆ. ಕನ್ನಡ ನಾಡಿನ ಹಕ್ಕಿಗಳಲ್ಲಿ ವಿವಿಧ ರೀತಿಯ ಹಕ್ಕಿಗಳ ಜೀವನಕ್ರಮವನ್ನು ತಮ್ಮ ಕೃತಿಗಳಲ್ಲಿ ತಂದಿದ್ದಾರೆ. ಮಿಂಚುಳ್ಳಿ, ಬಾಳೆಗುಬ್ಬಿ, ನೆಲಕುಟುಕ, ಮಂಗಾಟೆ ಹಕ್ಕಿ, ನೇಯ್ಗೆ ಹಕ್ಕಿ ಹೀಗೆ. ಕರ್ನಾಟಕದ ಹಕ್ಕಿಗಳು ಒಂದು ವಿಶಿಷ್ಟ ಕೃತಿ. ಹಾಗೆಯೇ ಪರಿಸರ ಕತೆ ಮತ್ತು ಕರ್ವಾಲೋವಿನಲ್ಲಿ ಘಟನೆಗಳೊಂದಿಗೆ ಸಾಂದರ್ಭಿಕವಾಗಿಯೂ ಪಕ್ಷಿಗಳ ಬಗ್ಗೆ ವಿವರಣೆಗಳನ್ನು

ನೀಡಿರುವುದನ್ನು ಕಾಣಬಹುದು. ಮಗಳ ಒತ್ತಾಸೆಗೆ ಮನೆಯಲ್ಲಿ ಮರಿಯೊಂದನ್ನು ಸಾಕುವ ಪ್ರಸಂಗ, ಮನುಷ್ಯ ನೀಡುವ ಆಹಾರವನ್ನು ಅದು ಜೀರ್ಣಿಸಿಕೊಳ್ಳಲು ಸಾಧ್ಯವಾಗದ ಸ್ಥಿತಿ, ನಂತರ ಅದರ ಸಾವು ಹೀಗೆ ಅವರಿಗಾದ ಅನುಭವಗಳ ನಿರೂಪಣೆ ಕೃತಿಗಳಲ್ಲಿನ ಅವರ ಪರಿಸರ ಪ್ರಜ್ಞೆಯನ್ನು ಅರ್ಥೈಸುತ್ತವೆ.

ತೇಜಸ್ವಿ ಅವರಿಗೆ 'ವೈಜ್ಞಾನಿಕ ಬರಹಗಾರ' ಎಂಬ ಹಣೆಪಟ್ಟಿಗಿಂತ ಸಾಹಿತ್ಯಿಕ ಅಂಶಗಳ ಮೂಲಕ ವೈಚಾರಿಕತೆಯನ್ನು, ವಿಜ್ಞಾನದ ವಿಸ್ಮಯಗಳನ್ನು, ಪ್ರಕೃತಿಯ ಕೌತುಕಗಳನ್ನು ಸಾಮಾನ್ಯರಲ್ಲೂ ಮೂಡಿಸುವ ಇರಾದೆ ಇತ್ತೇ ವಿನಃ ಯಾವುದೇ ಬ್ರ್ಯಾಂಡ್ ಪೋಷಿತ ಬರಹಗಾರನೆಂದು ಕರೆಸಿಕೊಳ್ಳುವ ಇಂಗಿತ ಇರಲಿಲ್ಲ. ಆದರೂ ತಾನೊಬ್ಬ ಸಾಹಿತ್ಯವನ್ನು ಪ್ರೀತಿಸುವ ಸಾಹಿತಿಯಾಗಿ ಗುರುತಿಸಿಕೊಳ್ಳುವ ಅಭಿಮಾನವಿತ್ತು. ಮನುಷ್ಯನ ಬದುಕು ಪ್ರಾಕೃತಿಕ ಪರಿಸರದ ಬೆಸುಗೆಗಳೊಂದಿಗೆ ಬೆಸೆದುಕೊಂಡಿದ್ದು ಆ ಪರಿಸರದ ಮೂಲಕವೇ ಅದು ಸಾಂಸ್ಕೃತಿಕತೆಯನ್ನು ಕಟ್ಟಿಕೊಳ್ಳುತ್ತದೆ. ಚಾರಿತ್ರಿಕ ಇತಿಹಾಸವು ಸಹ ಭೌಗೋಳಿಕ ಅಂಶಗಳನ್ನು ಪ್ರಭಾವಿಸಿರುತ್ತವೆ ಎಂಬುದನ್ನು ಅನೇಕ ಅಧ್ಯಯನಗಳಿಂದ ನಾವು ತಿಳಿದಿದ್ದೇವೆ. ತೇಜಸ್ವಿ ನಾಡಿನ ಪ್ರಸಿದ್ಧ ಸಾಹಿತಿ ಎಂದು ಗುರುತಿಸಿಕೊಂಡಿದ್ದರೂ ಅವರ ಆಲೋಚನೆಗಳಿಗಾಗಲಿ, ಚಿಂತನಾಕ್ರಮಗಳಿಗಾಗಲಿ ನಿರ್ದಿಷ್ಟಪಡಿಸಿದ ಶಿಸ್ತುಗಳ ನಿರ್ಬಂಧವಿರಲಿಲ್ಲ. ಅಗತ್ಯವೆನಿಸುವ ಶಿಸ್ತನ್ನು ಅಗತ್ಯಾನುಸಾರ ಕತೆ ಕಾದಂಬರಿಗಳ ಕಲಾಪ್ರತಿಮೆಗಳಲ್ಲಿ ಅನ್ವಯಮಾಡಿಕೊಳ್ಳುವ ಜಾಣ್ಮೆಯನ್ನು ತೇಜಸ್ವಿ ಹೊಂದಿದ್ದರು. ಸಾಹಿತಿಗಳಲ್ಲೂ ಯುನಿಕ್ ಪರ್ಸನಾಲಿಟಿ ಹೊಂದಿದ ಅಪರೂಪದ ವ್ಯಕ್ತಿಯಾಗಿದ್ದರು. ವಿಜ್ಞಾನ ವಸ್ತುವನ್ನು ಒಳಗೊಂಡಂತೆ ಯಾವುದೇ ವಸ್ತುವನ್ನು ನೇರ ನೋಡಿದಾಗ ಸಹೃದಯನಲ್ಲಿ ಉಂಟಾಗುವ ಭಾವನೆಗಳಿಗೂ ಅದನ್ನೇ ಸಾಹಿತ್ಯ ಕೃತಿಯೊಂದರಲ್ಲಿ ಕಂಡಾಗ ಉಂಟಾಗುವ ಭಾವತೀವ್ರತೆಗೂ ವ್ಯತ್ಯಾಸವಿರುತ್ತದೆ. ವಸ್ತು ಸಾಹಿತ್ಯ ವಸ್ತುವಾದಾಗ, ಸಾಹಿತಿ ತನ್ನ ಪ್ರತಿಭೆಯಿಂದ ಸಾಮಾನ್ಯನೊಬ್ಬ ಕಾಣಲಾರದ್ದನ್ನು ಸಹ ಓದುಗರಿಗೆ ರುಚಿಸುವಂತೆ ಕಾಣಿಸುತ್ತಾನೆ ಎಂದು ಎ.ಓ ಆವಲಮೂರ್ತಿ ಅವರು ತಮ್ಮ ಜನಪ್ರಿಯ ವಿಜ್ಞಾನ ಸಾಹಿತ್ಯ ಕುರಿತ ಸಂಶೋಧನಾ ಪ್ರಬಂಧದಲ್ಲಿ ದಾಖಲಿಸಿದ್ದಾರೆ. ಈ ಗುಣಧರ್ಮವನ್ನು ತೇಜಸ್ವಿ ಅವರ ಪರಿಸರ ಪ್ರಜ್ಞೆಯಲ್ಲಿ ಗುರುತಿಸಬಹುದಾಗಿದೆ.

ಮನುಷ್ಯನಿಲ್ಲದೆ ಬದುಕಿಲ್ಲ, ಜೀವನ ಸಂದರ್ಭವಿಲ್ಲ. ಇವೆರಡೂ ಇಲ್ಲದೆ ಚಾರಿತ್ರಿಕ ಮತ್ತು ಸಾಮಾಜಿಕ ಸಂದರ್ಭಗಳಿಲ್ಲ. ಈ ನೆಲೆಯಲ್ಲಿ ವಿವೇಚಿಸುವುದಾದರೆ ತೇಜಸ್ವಿ ಅವರು ಒಬ್ಬ ವ್ಯಕ್ತಿ ವಿಶಿಷ್ಟವಾದಿ ನೆಲೆಯ ಟಿಪಿಕಲ್ ನವ್ಯ ಲೇಖಕರು. ಅವರ ಸಾಹಿತ್ಯದಲ್ಲಿ ಬರುವ ಬಹುತೇಕ ಪಾತ್ರಗಳ ಜೀವನ ಸಮಸ್ಯೆಯ ಕಾರಣಗಳು ಕೇವಲ ಅವರಲ್ಲದೆ ಅವರ ಹಿಂದಿರುವ ಸಮಾಜವೂ ಬಹುದೊಡ್ಡ ಹಿನ್ನೆಲೆಯಾಗಿ ಗೋಚರಿಸುತ್ತದೆ. ಮನುಷ್ಯರ ಭಿನ್ನವೇದನೆ, ಸಂಕಟ, ಸಂತೋಷಗಳನ್ನು ಸೆರೆಹಿಡಿಯಲು ಯತ್ನಿಸುತ್ತಾರೆ. ಸೃಷ್ಟಿಯನ್ನು ಸೂಕ್ಷ್ಮವಾಗಿ ದೃಷ್ಟಿಸಿ ಸೃಷ್ಟಿಸುತ್ತಿದ್ದ ತೇಜಸ್ವಿ ಅವರು ಒಂದು ತತ್ವ, ಚಿಂತನೆ, ಅಭಿವ್ಯಕ್ತಿಗೆ ಸೀಮಿತವಾದವರಲ್ಲ. ಅವರು ಪ್ರಕೃತಿ, ಮನುಷ್ಯ ಮತ್ತು ಸಮಾಜವನ್ನು ಮೌನವಾಗಿ ವೀಕ್ಷಿಸಿ, ಆಳಕ್ಕಿಳಿದು ಅಭ್ಯಸಿಸಿ, ರೂಪುಗೊಂಡ ಚಿಂತನೆಗಳನ್ನು ಸಹಜವಾಗಿ ಹೊರಹಾಕುತ್ತಿದ್ದವರು. 'ಮಾನವ' ಕಲ್ಪನೆಯ ಹಿನ್ನೆಲೆಯಲ್ಲಿ ಪರಿಸರ ಪ್ರಜ್ಞೆ ಅವಲೋಕಿಸುವಾಗ ಗ್ರಹಿಕೆಗೆ ಎಟುಕುವಂತಹ ಅಂಶಗಳಿವು.

ತೇಜಸ್ವಿಯವರು ತಮ್ಮ ಸಾಹಿತ್ಯ ಮತ್ತು ಚಿಂತನೆಗಳಲ್ಲಿ ಮಾನವನ ಇರುವಿಕೆಯನ್ನು ಸೂಕ್ಷ್ಮವಾಗಿ ಗುರುತಿಸುತ್ತಲೇ ಪರಿಸರ ಅವಸಾನದ ಬಗ್ಗೆ ಮನುಕುಲವನ್ನು ಎಚ್ಚರಿಸಿದ್ದಾರೆ. ಜೈವಿಕ ಸಂಕೀರ್ಣತೆಯ ಸಮತೋಲನವನ್ನು ಕಾಯ್ದುಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು ಇದನ್ನು ಕಾರ್ಯರೂಪಕ್ಕೆ ತರುವಲ್ಲಿ ಯುವಜನತೆ ಆಶಾಕಿರಣವಾಗಬೇಕೆಂದು ಆಶಿಸುತ್ತಾರೆ. ಪರಿಸರದ ಮೇಲೆ ಮಾನವನ ಅತಿಕ್ರಮಣವನ್ನು ಕುರಿತು **"ನೈಜ ಪರಿಸರವನ್ನು ನಾಶ ಮಾಡಿದಾಗ ನಮ್ಮ ಕಿರಿಯ ಜನಾಂಗ ಅಮೂಲ್ಯವಾದುದನ್ನು ಕಳೆದುಕೊಂಡಿತಲ್ಲ ಎಂದು ಮನಸ್ಸು ಖಿನ್ನವಾಗುತ್ತದೆ. ನನ್ನ ಮನಸ್ಸಿನ ದುಗುಡವನ್ನು ನಿರ್ಜೀವ ಅಂಕಿಸಂಖ್ಯೆಗಳ ಮೂಲಕ ಹೇಳಿ ಹೇಗೆ ತಾನೆ ಪ್ರತಿಸ್ಪಂದನೆ ಉಂಟುಮಾಡಲಿ?"** ಎಂಬ ಖಿನ್ನತೆ ವ್ಯಕ್ತಪಡಿಸುವರು. ಪರಿಸರದ ಇಂದಿನ ದುಸ್ಥಿತಿಯನ್ನು ನೆನೆದು ಭವಿಷ್ಯದ ಆತಂಕಗಳೆಡೆಗೆ ಯೋಚಿಸುವ ತೇಜಸ್ವಿ ಅವರ ಅಂತಃಕರಣದಿಂದ ಕೂಡಿದ ಪರಿಸರ ಪ್ರಜ್ಞೆಗೆ ಈ ಹೇಳಿಕೆಗಳು ಪುಷ್ಟಿ ನೀಡುವವು.

ದೇಶದ ಹಸಿರು ಚಳುವಳಿಯ ಚಿಂತನೆಗಳು ತೇಜಸ್ವಿ ಅವರನ್ನು ಆಕರ್ಷಿಸಿದ್ದವು. ಆ ಕಾಲಕ್ಕೆ ದಟ್ಟ ಮಲೆನಾಡು ಮತ್ತು ಪಶ್ಚಿಮ ಘಟ್ಟಗಳ ಪರಿಸರ ವ್ಯವಸ್ಥೆಯಲ್ಲಾದ ಸರ್ಕಾರದ ಆಕ್ರಮಣಕಾರಿ ಚಟುವಟಿಕೆಗಳು, ಅರಣ್ಯವಾಸಿ ಮತ್ತು ಆದಿವಾಸಿಗಳನ್ನು ಮೂಲ ನೆಲೆಯಿಂದ ಒಕ್ಕಲೆಬ್ಬಿಸುವ ಪ್ರತ್ಯಕ್ಷ ಪರೋಕ್ಷ ತಂತ್ರಗಳು ಇಬ್ಬರು ಕೃತಿಕಾರರನ್ನು ಆಂತರಿಕವಾಗಿಯೂ ಮತ್ತು ಬಾಹ್ಯವಾಗಿಯೂ ಪ್ರಭಾವಿಸಿದ್ದವು. ಪರಿಸರ ಸಂರಕ್ಷಣೆ ಮತ್ತು ಉಳಿವಿನ ಹೋರಾಟಗಳಲ್ಲಿ ಇಬ್ಬರೂ ಭಾಗವಹಿಸಿರುವುದನ್ನು ಗಮನಿಸಬಹುದಾಗಿದೆ.ತೇಜಸ್ವಿ ತಮ್ಮ ಸುತ್ತಲಿನ ಕೀಟಲೋಕದ ಬಗೆಗೂ ತುಂಬಾ ಅಧ್ಯಯನ ಮಾಡುತ್ತಾ, ಪ್ರಕೃತಿಯ ಮಡಿಲಲ್ಲಿ ಕಣ್ಣಿಟ್ಟಲ್ಲಿ ಕಾಣುವ ಕೀಟಗಳನ್ನು ಗಮನಿಸಿದರು. ಅವುಗಳ ಚಹರೆಗಳನ್ನು ಕೂಲಂಕಷ ನೋಡಿದರು. ವಿಜ್ಞಾನಿಗಳ ಜೊತೆ ಚರ್ಚೆ ಮಾಡಿದರು. ಅವುಗಳ ಬಗೆಗಿದ್ದ ಮುದ್ರಿತ ಮಾಹಿತಿಗಳನ್ನು ತರಿಸಿ ಓದಿದರು. ಪುಸ್ತಕಗಳನ್ನು ಬರೆದರು. ಬರೀ ಕೀಟಗಳಷ್ಟೇ ಅಲ್ಲ, ಅವುಗಳ ಜೊತೆ ಜೊತೆಗೆ ವಿಕಾಸಗೊಂಡ ಹೂವುಗಳನ್ನು, ಆರ್ಕಿಡ್‌ಗಳನ್ನು ಕುರಿತು ಅಧ್ಯಯನ ಮಾಡಿದರು. ಪರಿಸರ ಪ್ರಜ್ಞೆಯಿಂದಾಗಿಯೇ ತೇಜಸ್ವಿ ಬರಹಗಳನ್ನು ಒಳಹೊಕ್ಕಿ ನೋಡುವುದಾದರೆ, ಅವು ಎಂದಿಗೂ ಶುಷ್ಕ ಎನಿಸಲಾರವು. ಕಿವಿಯೊಂದಿಗೆ ಹೊರಡುವ ಶಿಕಾರಿ ಚಿತ್ರಗಳು, ಕರ್ವಾಲೋ ಕೃತಿಯಲ್ಲಿ ಕಾಲ್ಪನಿಕ ಜಗತ್ತನ್ನು ವಿಸ್ತರಿಸುವಾಗ ವಿವರಿಸಲ್ಪಡುವ ಪರಿಸರದ ಚಿತ್ರಗಳು, ಚಿದಂಬರ ರಹಸ್ಯದಲ್ಲಿನ ಪರಿಸರ ಅವನತಿಯ ಸನ್ನಿವೇಶಗಳು, ಕನ್ನಡ ನಾಡಿನ ಹಕ್ಕಿಗಳ ವರ್ಣನೆಗಳು, ಪರಿಸರದ ಕತೆಗಳು ಪಕ್ಕಾ ಪರಿಸರದ ಜೀವಂತ ಅಥವಾ ತಾಜಾ ಎನ್ನಬಹುದಾದ ಬರಹಗಳಾಗಿ ಕಂಡುಬರುತ್ತವೆ.

ಸಣ್ಣಕತೆ ಪ್ರಕಾರವಾದ 'ಪರಿಸರದ ಕತೆ'ಯಲ್ಲಿ 'ಕುಕ್ಕುಟ ಪಿಶಾಚಿ' ಎಂಬ ಸಂಚಿಕೆಯಲ್ಲಿ ತೇಜಸ್ವಿ ಒಂದು ಸರಳ ಕತೆಯನ್ನು ನಿರೂಪಿಸುತ್ತಾರೆ. ಕಾಡುಕೋಳಿ ನಿಯಮಿತವಾಗಿ ದಾರಿಹೋಕರ ಮುಂದೆ ಕಾಣಿಸಿಕೊಳ್ಳುತ್ತದೆ. ಗರ ಬಡಿದಂತೆ ವರ್ತಿಸಿ ಹುಚ್ಚು ಬಂದಂತೆ ಕುಣಿಯುತ್ತದೆ. ಅದನ್ನು ಹಿಡಿಯುವಂತೆ ಪ್ರೇರೇಪಿಸುತ್ತದೆ. ದಾರಿಹೋಕರ ಗಮನ ಅತ್ತಿತ್ತ ಸುಳಿಯದಂತೆ ನೋಡಿಕೊಳ್ಳುತ್ತದೆ. ಅದರ ಹುಚ್ಚಾಟಕ್ಕೆ ಹೆದರಿ ಓಡಿದರೆ ಮತ್ತೆ ಈ ಕಡೆ ಬರದಂತೆಯೇ ಮಾಡಿಬಿಡುವ ಅದರ ವರ್ತನೆಯೇ ವಿಚಿತ್ರವಾದುದು. ಅದರ ಗೂಡುಗಳಿಂದ

ದೂರದಲ್ಲಿರುವಾಗ ಅದರ ಮೊಟ್ಟೆಯೊಡೆದು ಮರಿಯಾಗುವುದು ಇದರ ಕಲ್ಪನೆಯಾಗಿದೆ. ಜೀವಸಂಕುಲದ ವಿಚಾರದಲ್ಲಿ ಪ್ರಕೃತಿಯು ತನ್ನದೇ ಆದ ಸಮೀಕರಣವನ್ನು ಹೊಂದಿದ್ದು, ಈ ಕಾಡಿನ ಪ್ರಪಂಚದಲ್ಲಿ ಬದುಕಲು ಪ್ರಕ್ಷೇಪಣಾ ತಂತ್ರಗಳು(ಡಿಫೆನ್ಸ್ ಮೆಕಾನಿಸಂ) ಅಗತ್ಯ ಎಂಬ ದೊಡ್ಡ ಪಾಠವನ್ನೇ ಅದು ಕಲಿಸುತ್ತದೆ. ಈ ಬಗೆಯ ಮನೋವೈಜ್ಞಾನಿಕ ಪರಿಸರ ಪ್ರಜ್ಞೆಗಳು ತೇಜಸ್ವಿ ಕೃತಿಯಲ್ಲಿ ಸಮೃದ್ಧವಾಗಿರುವುದನ್ನು ಕಾಣಬಹುದು.

ತೇಜಸ್ವಿಯವರು ವಿಜ್ಞಾನದ ವಿಶ್ಲೇಷಣಾ ವಿಧಾನಕ್ಕಿಂತ ಫಿಲಾಸಫಿಯ ಸಂಶ್ಲೇಷಣಾ ವಿಧಾನಕ್ಕೆ ಹೆಚ್ಚು ಒಲಿದಿದ್ದಾರೆ ಎಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಮುಂದುವರೆದು **"ಆಧುನಿಕ ನಾಗರಿಕತೆ ಮತ್ತು ವಿಜ್ಞಾನ, ವಿಶ್ಲೇಷಣಾತ್ಮಕ ಪ್ರತಿಭೆಯ ಮೇಲೆ ನಿಂತಿದೆ. ಎಲ್ಲವನ್ನು ಬಿಡಿಸಿ, ಒಡೆದು, ಸೀಳಿ ಅರ್ಥಮಾಡಿಕೊಳ್ಳುತ್ತದೆ... ಆದರೆ ಇಕಾಲಜಿಯ ಸತ್ಯವನ್ನು ಅರಿಯಲು ಸಂಶ್ಲೇಷಣಾತ್ಮಕ ಪ್ರತಿಭೆ ಅಗತ್ಯ. ಅದು ಖಂಡತುಂಡವಾಗಿ ಕಂಡದ್ದನ್ನು ಅಖಂಡವಾಗಿ ಸಂಗ್ರಹಿಸುವ ಕ್ರಿಯೆ"** ಎಂದು ನಂಬಿ ಆ ವಿಧಾನವನ್ನು ಕರ್ನಾಟಕದ ಹಕ್ಕಿಗಳಲ್ಲಿ ಯಶಸ್ವಿ ಪ್ರಯೋಗ ಮಾಡಿದ್ದಾರೆ ಎಂಬುದನ್ನು 'ತೇಜಸ್ವಿಯನ್ನು ಹುಡುಕುತ್ತಾ' ಕೃತಿಯಲ್ಲಿ ದಾಖಲಿಸಲಾಗಿದೆ. ತೇಜಸ್ವಿಯವರ ಕಲಾ ಪ್ರತಿಮೆಗಳಲ್ಲಿ ಬಹುತೇಕ ವಿವರಗಳು ಅವರ ಬದುಕಿನ ಆವರಣದಿಂದ ಹೊರಗೆ ನಡೆಯುವುದರಿಂದ ಸಹಜವಾಗಿ ಸಮಾಜ ವಿಜ್ಞಾನದ ತತ್ವಗಳನ್ನು ಅಳವಡಿಸಲು ಸಾಧ್ಯವಾಗಿಲ್ಲ ಎಂಬುದನ್ನು ಸಹ ದಾಖಲಿಸಿದ್ದಾರೆ. ತೇಜಸ್ವಿಯವರ ಬರಹಗಳು ಅಚ್ಚರಿ, ವಿಸ್ಮಯ, ಕುತೂಹಲಗಳನ್ನೇ ಸಾಕಷ್ಟು ಕೇಂದ್ರೀಕರಿಸುವುದರಿಂದ ಇಕಾಲಜಿಯ ಮೂಲಭೂತ ತತ್ವಗಳು ಸ್ಪಷ್ಟಗೊಳ್ಳುವುದಿಲ್ಲ ಎಂಬುದರ ಅಭಿಪ್ರಾಯವನ್ನು ಕಾಣಬಹುದು.

ತೇಜಸ್ವಿಯವರ ಕೆಲವು ಕೃತಿಗಳಲ್ಲಿನ ವಸ್ತು, ಪ್ರತಿಮೆ ಅಥವಾ ಸನ್ನಿವೇಶವನ್ನಾಗಲಿ ಇಂದಿಗೆ ಮತ್ತಷ್ಟು ಅವಲೋಕಿಸಿದರೆ ಸಂಶ್ಲೇಷಣೆಯೊಂದಿಗೆ ವಿಶ್ಲೇಷಣೆಯ ವಿಧಾನದಿಂದಲೂ ಕೆಲವನ್ನು ನೋಡಿದ್ದಾರೆ ಎಂಬ ಅಭಿಪ್ರಾಯ ಮೂಡುತ್ತದೆ. ವಿಶ್ಲೇಷಣೆಯ ವಿಧಾನದ ಕೆಲವು ವ್ಯಾಖ್ಯಾನಗಳನ್ನು ಅಧ್ಯಯನಕ್ಕೊಳಪಡಿಸಿದರೆ ಈ ರೀತಿ ಅರ್ಥ ಲಭ್ಯವಾಗುತ್ತದೆ. ಬ್ರಿಟಿಷ್ ನಿಘಂಟು ವ್ಯಾಖ್ಯಾನಗಳಲ್ಲಿ **'ವಿಶ್ಲೇಷಣೆಯೆಂದರೆ, ಯಾವುದೇ ವಸ್ತು ಅಥವಾ ಅಮೂರ್ತ ವಸ್ತುವಿನ ಅಂಶಗಳನ್ನು ಅದರ ಘಟಕಗಳಾಗಿ ವಿಭಜಿಸುವುದು ಮತ್ತು ಈ ಪ್ರಕ್ರಿಯೆಯು ಏನಾದರೂ ಸ್ವಭಾವವನ್ನು ಅಧ್ಯಯನ ಮಾಡುವ ವಿಧಾನ ಅಥವಾ ಅದರ ಅಗತ್ಯ ಲಕ್ಷಣಗಳನ್ನು ಮತ್ತು ಸಂಬಂಧಗಳನ್ನು ನಿರ್ಧರಿಸುವ ವಿಧಾನವಾಗಿದೆ'** ಎನ್ನುತ್ತದೆ. **'ಅವುಗಳ ಸಂಬಂಧ ಅಥವಾ ಮೌಲ್ಯವನ್ನು ಪರೀಕ್ಷಿಸಲು ಅಥವಾ ನಿರ್ಧರಿಸಲು ಅದರ ಅಂಗ ಭಾಗಗಳಾಗಿ ಭೌತಿಕ ಅಥವಾ ಅಮೂರ್ತ ಭಾಗವನ್ನು ವಿಭಜಿಸುವುದಾಗಿದೆ'** ಎನ್ನುತ್ತದೆ. ತೇಜಸ್ವಿ ತನ್ನ ಸುತ್ತಲಿನ ಪರಿಸರದಲ್ಲಿ ಜೀವ ವೈವಿಧ್ಯದ ಸ್ವಭಾವವನ್ನು/ಲಕ್ಷಣವನ್ನು/ಸಂಬಂಧವನ್ನು ಹೆಚ್ಚಾಗಿ ಸ್ವಯಂ ಅಧ್ಯಯನಕ್ಕೆ ಒಳಪಡಿಸಿಕೊಳ್ಳುತ್ತಾರೆ. ಅದೊಂದು ಪಕ್ಷಿಯಾಗಿರಲಿ, ಕೀಟವಾಗಿರಲಿ ಅಥವಾ ಜೀವಿಯಾಗಿರಲಿ ಅದರ ಆಹಾರದ ಕ್ರಮ, ಜೀವನ ನಡೆಸುವಿಕೆ, ಅದರ ವಿಶಿಷ್ಟತೆ, ಗೂಡು ಕಟ್ಟುವಿಕೆ, ಆವಾಸಗಳ ಭಿನ್ನತೆ, ಸಂತಾನಾಭಿವೃದ್ಧಿ, ಬೇಟೆಯ ಕ್ರಮ, ಚಲನವಲನ, ಅವು ಕಾಣಿಸಿಕೊಳ್ಳುವ ಸ್ಥಳ ಮತ್ತು ಋತುಮಾನಗಳ ಕಾಲ ಇತ್ಯಾದಿಗಳ ಬಗ್ಗೆಯೂ ಹೆಚ್ಚು ಆಸಕ್ತಿ ಹೊಂದುವುದನ್ನು ಅವರ ಕೃತಿಗಳಲ್ಲಿ ನೋಡಬಹುದಾಗಿದೆ. ಇವು ಸಾಕಷ್ಟು ವಿಶ್ಲೇಷಣೆಯ ವಿಧಾನವನ್ನು ಪುಷ್ಟೀಕರಿಸುತ್ತವೆ.

ಮೂರ್ತಪ್ರತಿಮೆಗಳನ್ನು ಬಿಡಿ ಬಿಡಿಯಾಗಿಸಿ, ಒಡೆದು, ನಂತರ ಆ ಕೌತುಕಗಳಿಗೆ ಸಮಗ್ರತೆಯ ರೂಪು ನೀಡುವ ಪ್ರಯೋಗಗಳನ್ನು ಕೃತಿಗಳಲ್ಲಿ ಕಾಣಬಹುದಾಗಿದೆ. ಉದಾ:ಕರ್ವಾಲೋದಲ್ಲಿನ ಕಲ್ಪನೆಯಾದ ಹಾರುವ ಓತಿ 'ಹಾರುವ' ಸ್ವಭಾವದಿಂದಲೇ ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತದೆ. ವಿಲಕ್ಷಣ ಸ್ವಭಾವದ ಹಾರುವ ಓತಿಯೊಂದು ಕಾಲದ ಅಂಚಿನಲ್ಲಿ ಮರೆಯಾಗುತ್ತಾ, ಪಶ್ಚಿಮ ಘಟ್ಟಗಳ ಅನಂತದಲ್ಲಿ ಲೀನವಾಗುತ್ತದೆ. ಹಾಗೆಯೇ ಗುರಿ ತಪ್ಪಿ ಹಕ್ಕಿಗೆ ಅಪಾಯವಾಗದೆ, ಅದು ಜೀವಂತವಾಗಿ ಉಳಿದ ಮೇಲೆ ಆ ಹಕ್ಕಿಯ ಬಗ್ಗೆ ವಿವರಿಸುತ್ತಾ **“ ಮರದ ಮೇಲೆ ನೋಡುತ್ತೇನೆ ಒಂದು ದೊಡ್ಡ ಜಾತಿಯ ಮಂಗಾಟೆ ಹಕ್ಕಿ ಕೂತಿದೆ ನೀವು ಕೊಕ್ಕಾನಕ್ಕಿ ಅಂತಿರಲ್ಲ ಅದು, ನನಗೆ ಅದರ ಇತ್ಯೋಪರಿಯೆಲ್ಲಾ ಒಂದು ಏಟಿಗೆ ಸ್ಮೃತಿಪಟಲದಲ್ಲಿ ಆವರಿಸಿತು. ಅದರ ಹೆಣ್ಣು ಹಕ್ಕಿ ಮರದ ಪೊಟರೆಯೊಳಗೆ ಗೂಡು ಮಾಡಿ ಮೊಟ್ಟೆ ಇಡುತ್ತದೆ. ಎಲ್ಲಾ ಆಗಿ ಕಾವು ಕೊಡಲು ಕುಳಿತ ನಂತರ ಗಂಡುಹಕ್ಕಿ ಇನ್ನಾವುದೂ ಗೂಡೊಳಗೆ ಹೋಗದಂತೆ ಬಲವಾದ ತೆರೆಯನ್ನು ಹೊಗಿನಿಂದ ನೇಯ್ದು ಹೆಣ್ಣು ಹಕ್ಕಿಯ ಕೊಕ್ಕು ಮಾತ್ರ ಹೊರಬರುವಂತೆ ಕಂಡಿ ಬಿಟ್ಟಿರುತ್ತದೆ. ಗಂಡು ಹಕ್ಕಿ ತಂದು ಕೊಟ್ಟ ಆಹಾರವೇ ಹೆಣ್ಣು ಹಕ್ಕಿಗೆ ಆಧಾರ. ಗಂಡು ಹಕ್ಕಿಯನ್ನೇನಾದರೂ ಹೊಡೆದುಬಿಟ್ಟರೆ ಹೆಣ್ಣುಹಕ್ಕಿಗೆ ಆಹಾರವಿಲ್ಲದೆ ಸೊರಗಿ ಮರಿಗಳೊಂದಿಗೆ ಸಾಯುತ್ತದೆ”** ಎಂಬ ವಿವರಗಳಲ್ಲಿ ಮಂಗಾಟೆ ಹೆಣ್ಣು ಹಕ್ಕಿ ಮತ್ತು ಗಂಡು ಹಕ್ಕಿಯ ಸ್ವಭಾವದಂತಹ ನಿರೂಪಣೆಗಳು ವಿಶ್ಲೇಷಣೆ ವಿಧಾನವನ್ನು ಸಾದರಪಡಿಸುವವು. ಎಂಬುದನ್ನು ಕಂಡುಕೊಳ್ಳಬಹುದು. ಪರಿಸರದ ಕತೆಗಳು ಮತ್ತು ಹಕ್ಕಿ–ಕೀಟ ಪ್ರಪಂಚವು ಜೀವನಕ್ರಮ ಮತ್ತು ಸ್ವಭಾವದೊಂದಿಗೆ ತೆರೆದುಕೊಳ್ಳುವುದನ್ನು ಕೃತಿಗಳಲ್ಲಿ ಕಾಣಬಹುದು. ತೇಜಸ್ವಿ ಅವರು ಕಲ್ಪನೆಗಳಿಗೆ, ಆಯ್ದ ಸನ್ನಿವೇಶಗಳಿಗೆ ರೂಪಕಗಳ ಚಮತ್ಕಾರವನ್ನು ನೀಡುವುದಿಲ್ಲ. ಕತೆ ಕಾದಂಬರಿ ಪ್ರಕಾರದ ಲಕ್ಷಣಗಳಿಟ್ಟುಕೊಂಡೆ ನಿಸರ್ಗದ ಕೌತುಕಗಳನ್ನು ಮತ್ತು ಸಮಸ್ಯೆಯನ್ನು ನವೀರಾಗಿ ಬಿಡಿಸುತ್ತಾರೆ. ಪರಿಸರದ ವಾಸ್ತವ ಸಂಗತಿಗಳನ್ನು ಪರಿಸರದ ನಡುವಲ್ಲಿಯೇ ಬದುಕುತ್ತಿರುವ ಮನುಷ್ಯ ಸಂಬಂಧದೊಂದಿಗೆ ಬೆಸೆಯುತ್ತಾರೆ. ನಿಸರ್ಗದ ಬಗ್ಗೆ ತೇಜಸ್ವಿಯವರಿಗಿದ್ದ ಕುತೂಹಲ ಅದರಿಂದಾಗಿ ಉದ್ಭವಿಸುವ ಪ್ರಶ್ನೆಗಳು, ಗಮನಿಸಿದ ಎನ್ನುವುದಕ್ಕಿಂತ ಸೂಕ್ಷ್ಮವಾಗಿ ವೀಕ್ಷಿಸಿದ ವೈಚಿತ್ರ್ಯಗಳು ಅವರನ್ನು ಫಿಲಾಸಫಿಯ ಸಂಶ್ಲೇಷಣಾ ವಿಧಾನದೊಂದಿಗೆ ವಿಶ್ಲೇಷಣಾ ವಿಧಾನದ ಕಡೆಗೂ ಹೆಚ್ಚಾಗಿ ಕರೆದೊಯ್ದಿವೆ.

ಇಂದು ಸಮಾಜವಾಗಲಿ, ವೈಚಾರಿಕತೆಯ ವಿಜ್ಞಾನವಾಗಲಿ ಬದುಕಿಗೆ ದೂರವಾದುದುಲ್ಲ. ಸಮಾಜ ವಿಜ್ಞಾನದಲ್ಲಿ ಸಮನ್ವಯಗೊಂಡಿರುವ 'ವಿಜ್ಞಾನ' ಮತ್ತು 'ಸಮಾಜ'ದ ಸಂಗತಿಗಳೆರಡೂ ಮನುಷ್ಯನನ್ನು ಒಳಗೊಂಡಂತೆ ಸುತ್ತಲಿನ ಮೂಲ ಪ್ರಾಕೃತಿಕ ಅಥವಾ ಭೌಗೋಳಿಕ ಪರಿಸರದ ನೆಲೆಗಟ್ಟಿನಲ್ಲಿಯೇ ಬೆಳವಣಿಗೆ ಹೊಂದುವ ವಿಷಯಗಳಾಗಿವೆ. ಯಾವುದೂ ಪರಿಸರದಿಂದ ಹೊರತಾದುದಲ್ಲ. ಎಲ್ಲಾ ಅಧ್ಯಯನಗಳ ಮೂಲ ಪರಿಸರವೇ ಆಗಿದೆ. ಗಮನಿಸುವುದಾದರೆ ನಾಗರೀಕತೆಗಳ ಉಗಮವೆಲ್ಲವೂ ನದಿ ಮುಖಜ ಭೂಮಿಯನ್ನೇ ಅವಲಂಬಿಸಿದ್ದವು. ಭೂ ಸ್ವರೂಪಗಳ ಲಕ್ಷಣಕ್ಕೆ ಮತ್ತು ಅದರಲ್ಲಿ ಉಂಟಾಗುವ ವಿಲಕ್ಷಣತೆಗೆ ತಕ್ಕಂತೆ ಜೀವವೈವಿಧ್ಯತೆಗಳು ಸೃಷ್ಟಿಗೊಳ್ಳುತ್ತಾ, ವಿಸ್ತಾರಗೊಂಡವು. ಭೂಭಾಗದ ಸ್ವಾಭಾವಿಕ ವಲಯಗಳು, ಪ್ರಾಕೃತಿಕ ಲಕ್ಷಣಗಳು ಪ್ರಾಪಂಚಿಕ ಭೌಗೋಳಿಕ ವೈವಿಧ್ಯತೆಯಲ್ಲಿ ಪ್ರಭಾವಬೀರಿರುವುದನ್ನು ಗಮನಿಸಬಹುದಾಗಿದೆ. ಇಂದು ಜ್ಞಾನ ಗ್ರಹಿಕೆಯಲ್ಲಿ

ವರ್ತನಾವಾದಗಳು ಅಪ್ರಸ್ತುತವಾಗುತ್ತಿದ್ದು ಜ್ಞಾನ ಸಂರಚನಾವಾದಗಳು ಹೆಚ್ಚು ಪ್ರಸ್ತುತವಾಗುತ್ತಿವೆ. ಒಂದು ಜೀವಿ, ಸನ್ನಿವೇಶ, ಸಮಸ್ಯೆಗಳ ಬಗ್ಗೆ ಕುತೂಹಲ ಹುಟ್ಟಿಕೊಳ್ಳುತ್ತಾ, ಚಿಕ್ಕ ಚಿಕ್ಕ ಪ್ರಶ್ನೆಗಳೊಂದಿಗೆ ಅದಕ್ಕನುಗುಣವಾದ ಜ್ಞಾನ ಕಟ್ಟಿಕೊಳ್ಳುತ್ತಾ ನಂತರದಲ್ಲಿ ಆ ಎಲ್ಲಾ ಜ್ಞಾನವನ್ನು ಸಂರಚನೆಗೆ ಒಗ್ಗೂಡಿಸುವ ಪ್ರಯತ್ನಗಳು ಇಂದಿನ ಕಲಿಕಾ ವಿಧಾನದ ಭಾಗವಾಗುತ್ತಿವೆ. ಪರಿಸರದ ಬಗ್ಗೆ ಮೂಡುವ ಎಲ್ಲಾ ಕೌತುಕಗಳು ವೀಕ್ಷಣೆ ಮತ್ತು ಪ್ರಶ್ನೆಗಳಿಂದಲೇ ಆರಂಭಗೊಳ್ಳುವವು ಮತ್ತವು ಕಲಿಕೆಯಲ್ಲಿ ವಿಶ್ಲೇಷಣೆ ಕಡೆಗೆ ಮುಖಮಾಡುತ್ತಿರುವವು. ಈ ದೃಷ್ಟಿಯಿಂದಲೂ ತೇಜಸ್ವಿ ಕೃತಿಯ ಕೆಲವು ಅಂಶಗಳು ವಿಶ್ಲೇಷಣೆಯ ವಿಧಾನವನ್ನು ಒಳಗೊಂಡಿವೆ ಎಂಬುದನ್ನು ಅರ್ಥೈಸಿಕೊಳ್ಳಬಹುದಾಗಿದೆ.

ತೇಜಸ್ವಿಯವರ ಪರಿಸರ ಪ್ರಜ್ಞೆಯನ್ನು ಗ್ರಹಿಸುವುದಾದರೆ ಸೃಜನಾತ್ಮಕತೆಯಿಂದಲೇ ಅವರು ಪರಿಸರವನ್ನು ಕಂಡವರು. ಬದುಕಿನ ಅನುವಭದಿಂದಲೇ ಅಲ್ಲಿನ ಪಾತ್ರ ಮತ್ತು ಸನ್ನಿವೇಶಗಳನ್ನು ಕ್ರಿಯಾಶೀಲಗೊಳಿಸಿದ್ದಾರೆ. ಇಕಾಲಜಿಯಲ್ಲಿ ಅವಿರತ ಸೆಳೆತವಿತ್ತೇ ವಿನಃ ಅದರ ತತ್ವ ಸಿದ್ಧಾಂತಗಳ ಅಳವಡಿಕೆಯ ಕಡೆಗೆ ತೀರಾ ಒಳಹೊಕ್ಕವರಲ್ಲ. ಅಗತ್ಯ ಶಾಸ್ತ್ರಗಳ ಮೂಲಭೂತ ವಿಚಾರಗಳನ್ನು ಮತ್ತು ಸಿದ್ಧಾಂತಗಳ ಸಮಗ್ರತೆಯ ಸಾರವನ್ನು ಅವರು ಸಾಕಷ್ಟು ಅರಿತಿದ್ದರು. ಜೀವವೈವಿಧ್ಯದ ಬಲೆಯಲ್ಲಿ ಎಲ್ಲಿಯಾದರೂ ಸ್ವಲ್ಪ ಲೋಪವಾದರೂ ಸರಿಯೆ ಈ ಜಗತ್ತಿನ ಉತ್ತರದ ಅಂಶಗಳು ದಕ್ಷಿಣಕ್ಕೂ, ಪೂರ್ವದ್ದು ಪಶ್ಚಿಮಕ್ಕೂ ವ್ಯತಿರಿಕ್ತ ಪರಿಣಾಮ ಬೀರುವುದು ಗ್ಯಾರಂಟಿ ಎಂಬುದನ್ನು ಚಿದಂಬರ ರಹಸ್ಯ ಕೃತಿಯಲ್ಲಿ ತರುತ್ತಾ ಇಕಾಲಜಿಯ ಅಂತಃ ಸತ್ಯವನ್ನು ಬಿಡಿಸುತ್ತಾರೆ. ಇಕಾಲಜಿಯ ಸಮತೋಲನ ಕಾಪಾಡದಿದ್ದರೆ ಅಥವಾ ಪರಿಸರವನ್ನು ಸಂರಕ್ಷಿಸಿ ಸಹಜ ಸ್ಥಿತಿಯಲ್ಲಿಡಲು ಮನುಷ್ಯ ಮುಂದಾಗದಿದ್ದರೆ ಈ ವಿಶ್ವಕ್ಕೆ ಅಪಾಯ ತಪ್ಪಿದ್ದಲ್ಲ ಎಂಬುದನ್ನು ತೇಜಸ್ವಿ ವಿಸ್ಮಯ-೧,೨,೩ ರಲ್ಲಿ ತಂದಿದ್ದಾರೆ. ಇಕಾಲಜಿ ಮತ್ತು ಪರಿಸರದ ವಿಶ್ವರೂಪ ಪರಿಚಯವನ್ನು ಮನೋಜ್ಞವಾಗಿ ನಿರೂಪಿಸಿದ್ದಾರೆ. ಪ್ರಕೃತಿ ವೈಚಿತ್ರ್ಯ, ಜ್ಯೋತಿರ್ಭೌತಶಾಸ್ತ್ರದ ಅಮೂರ್ತ ಪರಿಕಲ್ಪನೆಗಳನ್ನು ಅತ್ಯಂತ ಸರಳವಾಗಿ ವಿಶ್ವ ಸಾಮರಸ್ಯದ ಆಶಯದೊಂದಿಗೆ ಹಾಗೂ ಅಲ್ಲಿನ ಅನಂತ ಜೀವಸ್ಥರಗಳ ಸೌರಶಕ್ತಿಯ ವಿಶ್ವರೂಪಗಳನ್ನು ಇಕಾಲಜಿಯ ದರ್ಶನದೊಂದಿಗೆ ವಿವರಿಸುತ್ತಾರೆ.

ವಿಸ್ಮಯದ ಓದಿಗೆ ಹೊರಡುವ ಓದುಗನಿಗೆ ವಸ್ತು ವಿಷಯ ವೈವಿಧ್ಯಮಯ ಮಾತ್ರವಾಗದೇ ಓದುಗನ ಅಂತಃಕರಣವನ್ನು ಮುಟ್ಟುತ್ತದೆ. ಪರಿಸರ ಪ್ರಜ್ಞೆಯು ಒಮ್ಮೆ ಬುದ್ಧಿಯನ್ನು ಜಾಗೃತಗೊಳಿಸಿದರೆ, ಮತ್ತೊಮ್ಮೆ ಮನಸ್ಸನ್ನೇ ಮುದಗೊಳಿಸುತ್ತಾ ಹದಗೊಳಿಸುತ್ತದೆ. ಉದಾಹರಣೆಗೆ ದ್ವೀಪವೊಂದರ ಜನಾಂಗ ದುಡ್ಡಿನ ಕಲ್ಪನೆ ಇಲ್ಲದಿದ್ದಾಗ ಶ್ರಮಜೀವಿಗಳಾಗಿ ಆರೋಗ್ಯಕರವಾಗಿದ್ದರು. ಆಧುನಿಕ ನಾಗರೀಕತೆಯ ಪ್ರಭಾವಕ್ಕೆ ಸಿಲುಕಿ ಸೋಮಾರಿಗಳಾಗಿ ಅನಾರೋಗ್ಯಕ್ಕೆ ಈಡಾಗುವ ಜನಾಂಗವಾಗಿ ಬದಲಾಗುವುದು ಓದುಗನಲ್ಲಿ ಚಿಂತನೆಗೆ ಪ್ರೇರೇಪಿಸುತ್ತದೆ. ಪ್ರಕೃತಿ ತನ್ನ ಪ್ರಾದೇಶಿಕ ವ್ಯತಿರಿಕ್ತತೆಯಿಂದಾಗಿ ವಿವಿಧ ಸೃಷ್ಟಿಗೆ ಹೇಗೆ ಕಾರಣವಾಗುತ್ತದೆಯೋ ಹಾಗೆಯೇ ತೇಜಸ್ವಿ ಅವರ ಅನ್ವೇಷಣೆಯ ಆಸಕ್ತಿಯ ವಸ್ತು ವಿಷಯ ಬದಲಾದಂತೆ ವಸ್ತು ಸ್ವರೂಪದ ಬರಹವು ಸಹ ಬದಲಾಗುತ್ತದೆ. ಪರಿಸರ ಮತ್ತು ನಾಗರೀಕ ಪ್ರಪಂಚದ ಕ್ರಾಂತಿಯನ್ನು ವಿಸ್ಮಯ-೧ ಚರ್ಚಿಸುತ್ತದೆ. ಇಂತಹ ಸೃಜನೇತರ ಸಾಹಿತ್ಯದಲ್ಲಿ

ರಾಸಾಯನಿಕ ಕೃಷಿ ವಿಧಾನ ಅದರಿಂದಾಗುವ ಅನಾಹುತ, ದುಸ್ಥಿತಿ, ವಿಶ್ವಸೃಷ್ಟಿ, ವಿನಾಶದ ಪ್ರಕ್ರಿಯೆ, ಪರಿಸರ ನಾಶ, ಮುಂತಾದ ಅಂಶಗಳನ್ನು ವಿವರಿಸಿದ್ದಾರೆ. ವಿಜ್ಞಾನ ಮತ್ತು ಪರಿಸರ ವಿಜ್ಞಾನದ ಶಾಸ್ತ್ರಜ್ಞರು ನಡೆಸಿರುವ ಚಿಂತನೆ ಮತ್ತು ವಾಗ್ವಾದಗಳ ಹಿನ್ನೆಲೆಯಲ್ಲಿ ಮನುಷ್ಯನ ಜಾಗತಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳನ್ನು ಈ ಕೃತಿಗಳು ಅರಿವಿಗೆ ತಂದುಕೊಡುತ್ತದೆ.

ತೇಜಸ್ವಿ ಬರೆದುದೆಲ್ಲಾ ಸಾರ್ಥಕ ಸಾಹಿತ್ಯ. ಜನಪ್ರಿಯ, ಪರಿಣಾಮಕಾರಿ, ಸುಲಭ ಗ್ರಾಹ್ಯ, ಹೀಗೆ ಯಾವುದೇ ಆಯಾಮದಿಂದ ಅಳೆದರೂ ಅದು ಸಾರ್ಥಕ. ಈ ಪ್ರಕೃತಿಯ ಸಕಲ ಚರಾಚರ ವಸ್ತುಗಳನ್ನೂ ವೈಜ್ಞಾನಿಕವಾಗಿ ಬಲ್ಲ ಆದರೆ ವೈಜ್ಞಾನಿಕ ಪ್ರಯೋಗಾಲಯದ ವಿಜ್ಞಾನಿಯಂತಲ್ಲದೇ, ಸಹಜ ಸರಳವಾಗಿ ಅವುಗಳನ್ನೆಲ್ಲಾ ಬಲ್ಲ ತೇಜಸ್ವಿಯವರು ಹಕ್ಕಿಗಳ ಲೋಕವನ್ನು ಸಸ್ಯ ಪ್ರಪಂಚದ ರಹಸ್ಯವನ್ನು ಎಳೆ ಎಳೆಯಾಗಿ ಬಿಡಿಸಿಡುವ ರೀತಿ ಅದ್ಭುತ. ಅಷ್ಟೇ ಸುಲಭವಾಗಿ ಮಾನವೀಯ ಸಂಬಂಧಗಳ ಬಗೆಗೆ ಇರುವ ಕಾಳಜಿಯನ್ನೂ ತೋರಬಲ್ಲರು. ಹೀಗಾಗಿಯೇ ಪರಿಸರ ಕುರಿತಾದ ಅವರ ಅನೇಕ ಕೃತಿಗಳು ಎಳೆಯ ಮಕ್ಕಳನ್ನೂ ಸೆಳೆಯುತ್ತವೆ. ಅಂತಹ ಮುಗ್ಧತೆ ತುಂಬಿದ ಪರಿಸರ ಪ್ರಜ್ಞೆಯು ಸಹ ಅವರಲ್ಲಿ ತುಂಬಿತ್ತು. **"ತೇಜಸ್ವಿ ಅವರು ಸ್ವಭಾವತ: ಹೊಸತರೆಡೆಗೆ ಅನ್ವೇಷಣಾತ್ಮಕವಾಗಿ ಚಲಿಸುವ ಸೃಜನಶೀಲ ವ್ಯಕ್ತಿತ್ವ ಅವರನ್ನು ಮಲೆನಾಡಿನ ದಟ್ಟ ಪ್ರಾಕೃತಿಕ ಚೆಲುವು ಹಲವು ರೀತಿಯಲ್ಲಿ ಪ್ರಭಾವಿಸಿದೆ. ನಿರಂತರ ವಿಸ್ಮಯದ ಅಲೆಗಳನ್ನು ಚಿಮ್ಮಿಸುವ ಮಲೆನಾಡಿನ ದಟ್ಟ ಕಾಡುಗಳ ಮಡಿಲಲ್ಲಿ ಆವಿರ್ಭವಿಸುವ ಅನಂತ ಜೀವಜಾಲಗಳೊಂದಿಗಿನ ಆಪ್ತ ಕ್ಷಣಗಳು ಅವರನ್ನು ಸೆಳೆದಿವೆ."**(೧೬)

ಕುವೆಂಪು ಅವರ ಕಾಲಕ್ಕೆ ಮೃಣ್ಮಯಿಯಾಗಿ, ಚಿನ್ಮಯಿಯಾಗಿ, ನಿಯಮಯಿಯಾಗಿದ್ದ ಪ್ರಕೃತಿ ತೇಜಸ್ವಿಯವರ ಕಾಲಕ್ಕೆ ದೀನಮಯಿಯಾಗಿತ್ತು. ಇಂಥ ಊನಗೊಂಡ ಅಂಗಗಳ ಪ್ರಕೃತಿಯಲ್ಲಿ ಸಹಜವಾಗಿ ಬೆಳೆದುಬಂದ ಹುಟ್ಟಾ ನ್ಯಾಚುರಲಿಸ್ಟ್‌ಗಳನ್ನು, ನಿಸರ್ಗದ ಅವನತಿಯನ್ನು, ಅದರ ಅಳಿದುಳಿದ ವೈಭವವನ್ನು ಬಹುಶಿಸ್ತಿನ ಅಧ್ಯಯನವನ್ನಾಗಿ ತೇಜಸ್ವಿಯವರು ಮೊದಲಬಾರಿಗೆ ಪರಿಸರದ ಕತೆಯಲ್ಲಿ ನಿರ್ವಹಿಸಿದ್ದರು ಎನ್ನುತ್ತಾರೆ ವಿಮರ್ಶಕರು. ಯಾರು ಮಲೆನಾಡು, ಪಶ್ಚಿಮಘಟ್ಟಗಳ ವೈಭವವನ್ನು ಪೂರ್ಣದೃಷ್ಟಿಯಲ್ಲಿ ಕಂಡುಕೊಂಡಿದ್ದರೋ ಅವರು ಮಾತ್ರವೇ ಅಲ್ಲಿನ ಅವನತಿಯ ಗತಿಯನ್ನು ಸುಲಭವಾಗಿ ಗ್ರಹಿಸಲು ಸಾಧ್ಯ. ವಿವೇಕಾರಹಿತ ಅಭಿವೃದ್ಧಿಯ ಆಲೋಚನೆಯ ಕ್ರಮಗಳು, ಅಸಂಬದ್ಧ ರಾಜಕೀಯ ಚಿಂತನೆಗಳು, ಸರ್ಕಾರದ ನೀತಿಗಳ ಅಪಮೌಲ್ಯತೆಯಿಂದಾಗಿ ನಶಿಸುತ್ತಿರುವ ಪ್ರಕೃತಿಯ ಚಿತ್ರಣ ತೇಜಸ್ವಿ ಅವರ ಕಾಲಕ್ಕೆ ನಿಜವಾಗಿಯೂ ದೀನಮಯಿಯಾಗಿದ್ದವು.

ತೇಜಸ್ವಿಯವರು ವಿಜ್ಞಾನ ಸಾಹಿತ್ಯದೊಡನೆ ನಡೆಸಿದ ಮುಖಾಮುಖಿ ಕಾರಂತರಿಗಿಂತ ಭಿನ್ನವಾಗಿತ್ತು. ತಮ್ಮ ಸೃಜನಶೀಲ ಕೃತಿಗಳಲ್ಲಿ ತೇಜಸ್ವಿಯವರು ಸಾಮಾಜಿಕ ಶಿಸ್ತುಗಳಷ್ಟೇ ವೈಜ್ಞಾನಿಕ ಪರಿಕಲ್ಪನೆಗಳನ್ನು ಬಳಸುತ್ತಾರೆ. ವೈಜ್ಞಾನಿಕ ಕೃತಿಗಳಲ್ಲಿ ಸಾಮಾಜಿಕ ಶಿಸ್ತನ್ನು ಸಮುಚಿತವಾಗಿ ಬೆರೆಸುತ್ತಾರೆ. ಆದ್ದರಿಂದಲೇ ಅವರ ಕೃತಿಗಳಲ್ಲಿ ನವೀರಾದ ಹೊಸತನ ಕಂಡುಬರುತ್ತದೆ. ಈ ಸಮ್ಮಿಳಿತದಿಂದಾಗಿ ಹಲವು ಬಾರಿ ಅವರ ವಿಜ್ಞಾನದ ಕೃತಿಗಳನ್ನು ಸೃಜನಶೀಲ ಕೃತಿಗಳಿಂದ ಪ್ರತ್ಯೇಕಿಸುವುದು ಕಷ್ಟವಾಗುತ್ತದೆ. ೨೦ನೇ ಶತಮಾನದ ವೈಜ್ಞಾನಿಕ ಚಿಂತನೆಯು, ವಿಶ್ಲೇಷಣೆಯ ವಿಧಾನದಿಂದ ಸಂಶ್ಲೇಷಣೆಯತ್ತ ಹೊರಳಿದ್ದು ತೇಜಸ್ವಿಯವರಿಗೆ

ಒಂದು ಸಮರ್ಥ ಸಾಧನ ಸಿಕ್ಕಂತಾಯಿತು. ಸಾಹಿತ್ಯ, ಫಿಲಾಸಫಿ ಮತ್ತು ವಿಜ್ಞಾನದ ವಿದ್ಯಾರ್ಥಿಯಾಗಿದ್ದ ತೇಜಸ್ವಿಯವರಿಗೆ ಇದರಿಂದಾಗಿ ವೈಜ್ಞಾನಿಕ ತರ್ಕದ ಹಿನ್ನೆಲೆಯಲ್ಲಿ ಸೃಜನಶೀಲ ಕೃತಿಗಳನ್ನು ಹಾಗೂ ಸಾಹಿತ್ಯ, ಫಿಲಾಸಫಿಯ ಹಿನ್ನೆಲೆಯಲ್ಲಿ ವೈಜ್ಞಾನಿಕ ಕೃತಿಗಳನ್ನು ರಚಿಸಲು ಸಾಧ್ಯವಾಯಿತು.[೦೭]

ಸಾಹಿತ್ಯ ಕ್ಷೇತ್ರದಲ್ಲಿ ಕಾರಂತರು ವೈಚಾರಿಕ ಕೃತಿಗಳಿಗೆ ನಾಂದಿ ಹಾಡಿದವರು. ವಿಜ್ಞಾನ ಬರಹವನ್ನು ಸರಳವಾಗಿಸಿದವರು ಮತ್ತು ಜನಪ್ರಿಯವಾಗಿಸಿದವರು. ಸಾಹಿತ್ಯದಲ್ಲಿ ವಿಜ್ಞಾನವನ್ನು ಬೆರೆಸಿ ತಮ್ಮ ಕೃತಿಗಳನ್ನು ವಿಶಿಷ್ಟವಾಗಿಸಿದ್ದಾರೆ. ಕಾರಂತರನ್ನು ಮೆಚ್ಚಿಕೊಳ್ಳುತ್ತಿದ್ದ ತೇಜಸ್ವಿ ಅವರಿಗೆ ಅವರ ತಂದೆಯವರಂತೆ ಪರಿಸರದಲ್ಲಿ ಆಧ್ಯಾತ್ಮವನ್ನು ಕಾಣುವುದು ಮತ್ತು ಪರವಶರಾಗಿ ಅದನ್ನು ಆರಾಧಿಸುವುದು ಹೆಚ್ಚು ರುಚಿಸಲಿಲ್ಲ ಎಂದೇ ಹೇಳಬಹುದು. ಪ್ರಾಯೋಗಿಕ ಅನುಭವಗಳಿಗೆ ಹತ್ತಿರವಾದ ಮತ್ತು ವಾಸ್ತವ ಪರಿಸರದಲ್ಲಿನ ವಿಸ್ಮಯಗಳನ್ನು ಬೆನ್ನಹತ್ತಿ ಅದರೊಳಗಿನ ಒಗಟುಗಳನ್ನು ಪ್ರಕೃತಿಯ ಸಮೀಕರಣಗಳನ್ನು ಬಿಡಿಸುವುದೇ ಅವರಿಗೆ ಹೆಚ್ಚು ಸಿಂಕ್ ಆದಂತಿದೆ. ನಿರಂತರ ಅಧ್ಯಯನ, ಹುಟ್ಟನಿಂದ ಸಹಜವಾಗಿ ಪರಿವೀಕ್ಷಣೆಗೆ ನಿಲುಕಿದ ಮಲೆನಾಡಿನ ಪರಿಸರದ ಪ್ರಭಾವ ಹಾಗೆಯೇ ರೂಢಿಸಿಕೊಂಡು ಬಂದ ಸಾಮಾಜಿಕ ತತ್ವಗಳು ಅವರ ಕೃತಿಯನ್ನು ಸೃಜನಶೀಲವಾಗಿಸಿವೆ. ಅವರು ಆಯ್ಕೆಮಾಡಿಕೊಳ್ಳುವ ಘಟನೆಯಾಗಲಿ, ವಿಷಯವಾಗಲಿ, ವಸ್ತುವಾಗಲಿ ಮತ್ತು ವ್ಯಕ್ತಿಯಾಗಲಿ ಇವೆಲ್ಲವೂ ರಹಸ್ಯ, ಬೆಡಗು ಮತ್ತು ನಿಗೂಢತೆಯಿಂದ ಕೂಡಿರುತ್ತವೆ ಎಂಬ ದೃಷ್ಟಿಕೋನದಿಂದಲೇ ಕಲಾಕೃತಿಯನ್ನು ಪ್ರವೇಶಿಸುತ್ತವೆ. ಇಂತಹದೊಂದು ಮನೋಧರ್ಮ ಅವರ ಸೃಜನಶೀಲ ಕೃತಿಗಳಿಗೂ ಅನ್ವಯಿಸುತ್ತದೆ. ಸೃಜನಾತ್ಮಕ ಪ್ರತಿಭೆಯನ್ನು ದುಡಿಸಿಕೊಳ್ಳಲು ಇಂತಹ ಉತ್ಪ್ರೇಕ್ಷಿತ ದೃಷ್ಟಿ ಮತ್ತು ಆವರಣದಿಂದ ಹೊರಗೆ ಜಿಗಿಯುವ ಪ್ರವೃತ್ತಿ ಅಗತ್ಯವೆಂಬುದು ಅವರ ನಂಬಿಕೆ. ಆದರೆ ವಸ್ತುನಿಷ್ಠತೆಯನ್ನು ಬೇಡುವ ವೈಜ್ಞಾನಿಕ ಬರಹಗಳಲ್ಲೂ ಈ ರೀತಿಯ ಉತ್ಪ್ರೇಕ್ಷಿತ ದೃಷ್ಟಿ ಅನಿವಾರ್ಯವೇ? ನಿಗೂಢ, ರಹಸ್ಯಮಯ ಎಂದು ಪ್ರಾರಂಭಿಸುವುದೇ ವೈಜ್ಞಾನಿಕ ವಾಸ್ತವಗಳಿಗೆ ಅಪಚಾರವೆಸಗಿದಂತಲ್ಲವೇ? ಎಂಬ ಪ್ರಶ್ನೆಗಳನ್ನು ಇವರ ವೈಜ್ಞಾನಿಕ ಕೃತಿಗಳಿಗೆ ಸಕಾರಣವಾಗಿ ಎತ್ತಬಹುದು ಎನ್ನುತ್ತಾರಲ್ಲದೆ ತೇಜಸ್ವಿಯವರು ಒಂದು ಸರಳವಾದ ಘಟನೆಯನ್ನು ಸಹಜವಾದ ರೀತಿಯಲ್ಲೇ ಆರಂಭಿಸಿ ಅದನ್ನು ಬೆಳೆಸುತ್ತಾ, ವಿಸ್ತಾರವಾದಂತೆ ಸಂಕೀರ್ಣಗೊಳಿಸುತ್ತಾ, ನಿಗೂಢಗೊಳಿಸುತ್ತಾ ಕೊನೆಗೆ ಪಾರದರ್ಶಕವಾಗಿಸುವ ಪತ್ತೇದಾರಿ ತಂತ್ರವನ್ನು ಅವರು ಸಹಜವಾಗಿ ದುಡಿಸಿಕೊಳ್ಳುತ್ತಾರೆ. ಶುಷ್ಕ ವೈಜ್ಞಾನಿಕ ಮಾಹಿತಿಯನ್ನು ಕಲೆಯ ಮಟ್ಟದಲ್ಲಿ ನಿರ್ವಹಿಸುತ್ತಾರೆ. **"ಮಿತಿಮೀರಿಯೇ ಮಿತಿಯನ್ನು ಅರಿಯಬೇಕಾದ ಅನಿವಾರ್ಯತೆ ಎಲ್ಲಾ ಸೃಷ್ಟಿಶೀಲ ಕಲಾವಿದರಿಗೂ ಅನೇಕ ವೇಳೆ ಅನಿವಾರ್ಯವಾಗುತ್ತದೆ"**[೦೮]

ತೇಜಸ್ವಿ ಅವರು ಶಿವರಾಮ ಕಾರಂತರ ಪರಂಪರೆಯನ್ನು ಮುಂದುವರೆಸಿದರು. ಇಬ್ಬರಿಗೂ ತುಂಬಾ ಮುಖ್ಯವಾಗಿ ಕಾಣುವುದು ಈ ವಿಶ್ವದ ಅಗಾಧ ವಿಸ್ಮಯ ಮತ್ತು ಅದನ್ನು ಓದುಗರಿಗೆ ಪರಿಚಯಿಸುವ ಆಕಾಂಕ್ಷೆ. ಕಾರಂತರು ಮತ್ತು ತೇಜಸ್ವಿ ಇವರಿಬ್ಬರನ್ನೂ ಹೊರತುಪಡಿಸಿದರೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬೇರೆ ಯಾವ ಸಾಹಿತಿಯೂ ಇಷ್ಟು ವ್ಯಾಪಕವಾಗಿ ಪ್ರಾಣಿ–ಪಕ್ಷಿ–ಕ್ರಿಮಿಕೀಟಗಳ ಬಗ್ಗೆ, ನಿಸರ್ಗದ ಬಗ್ಗೆ, ಗ್ರಹ–ತಾರೆಗಳ ಬಗ್ಗೆ, ಭೌಗೋಳಿಕ ವಿಸ್ಮಯಗಳ ಬಗ್ಗೆ

ಬರೆದಿಲ್ಲ. ತನ್ನ ಮಿತಿಗಳ ನಡುವೆಯೇ ಸಾಗಬೇಕಾದ ಮಾನವನ ಬದುಕು ಮತ್ತು ಈ ಬದುಕನ್ನು ಸ್ವಲ್ಪವಾದರೂ ಉತ್ತಮಗೊಳಿಸಲು ಬೇಕಾದ ಜೀವಪರ ಮೌಲ್ಯಗಳು ಇವುಗಳನ್ನು ಕಾರಂತ ಮತ್ತು ತೇಜಸ್ವಿ ತಮ್ಮ ಬದುಕಿನಲ್ಲಿ ಹಾಗೂ ಬರವಣಿಗೆಯಲ್ಲಿ ಮುಖ್ಯವಾಗಿ ಪರಿಗಣಿಸಿದರು.

ಕನ್ನಡ ಲೋಕಕ್ಕೆ ಅಪೂರ್ವ ಸಾಹಿತ್ಯ ನೀಡಿದ್ದ ತೇಜಸ್ವಿ ನಡೆದ ಹಾದಿ ಭಿನ್ನವಾದುದು. ಮಲೆನಾಡಿನಲ್ಲಿ ಹುಟ್ಟಿ ಬೆಳೆದ ಕುವೆಂಪು ಮೈಸೂರಿನಲ್ಲಿ ನೆಲೆಸಿದರೆ ಮೈಸೂರಿನಲ್ಲಿ ಹುಟ್ಟಿ ಬೆಳೆದ ತೇಜಸ್ವಿ ಮೂಡಿಗೆರೆಗೆ ಬಂದು ಕೃಷಿ ತೋಟಗಾರಿಕೆಯಲ್ಲಿ ತೊಡಗಿಕೊಂಡವರು. ನಗರ ಜೀವನದಿಂದ ಗ್ರಾಮಮುಖಿಯಾಗಿ ಸಾಗಿದ ತೇಜಸ್ವಿ ಜೀವನ ಯಾತ್ರೆ ಪರಿಸರ ಪ್ರೀತಿಯ ಅನ್ವೇಷಣೆಯಲ್ಲಿ ನಿರತವಾದದ್ದು. ಕುವೆಂಪು ನಿಸರ್ಗದಲ್ಲಿ ಆಧ್ಯಾತ್ಮದ ಅನುಭೂತಿಯನ್ನು ಕಂಡವರು. ವಿಜ್ಞಾನದ ಅಪೂರ್ವ ರಹಸ್ಯಗಳ ಅನ್ವೇಷಣೆ ನಡೆಸಿದ ತೇಜಸ್ವಿ ಆಧ್ಯಾತ್ಮದಿಂದ ದೂರ ನಿಂತವರು. ಕುವೆಂಪು ರಾಮಕೃಷ್ಣ ವಿವೇಕಾನಂದರ ಪ್ರಣೀತ ವೇದಾಂತವನ್ನು ಒಪ್ಪಿಕೊಂಡರೆ, ತೇಜಸ್ವಿ ಲೋಹಿಯಾ ಅವರ ಸಾಮಾಜಿಕ, ರಾಜಕೀಯ ಚಿಂತನೆಯಿಂದ ಪ್ರಭಾವಿತರಾದವರು[೯] ಎನ್ನುತ್ತಾರೆ ಸತ್ಯನಾರಾಯಣರಾವ್ ಅಣತಿ.

ಇದೇ ಅಧ್ಯಾಯದ ಹಿನ್ನೆಲೆಯಲ್ಲಿ ಚರ್ಚಿಸಿದಂತೆ ೧೯೭೦–೮೦ರ ದಶಕದಲ್ಲಿ ರೂಪುಗೊಂಡ ಚಳುವಳಿಗಳ ಪ್ರಭಾವದಿಂದಾಗಿ ಯಾವುದೋ ಸೆಳೆತಕ್ಕೆ ಒಳಗಾದಂತೆ ಸುಶಿಕ್ಷಿತರು ಗ್ರಾಮಮುಖಿ ಚಿಂತನೆಯೆಡೆಗೆ ಮುಖಮಾಡುವ ಐತಿಹಾಸಿಕ ವಿಲಕ್ಷಣತೆಯ ಅಂಶವನ್ನು ಅಣತಿ ಅವರ ಮಾತುಗಳಲ್ಲಿ ವ್ಯಕ್ತವಾಗುವುದನ್ನು ಗಮನಕ್ಕೆ ತಂದುಕೊಳ್ಳಬಹುದು. ವಿಮರ್ಶೆಯ ವಿಮರ್ಶೆಯಲ್ಲಿ ಸ್ವತ: ತೇಜಸ್ವಿ **"ನಮ್ಮ ವಿದ್ಯಾಭ್ಯಾಸದ ಅನಂತರ ನಾನು ಅನಿರೀಕ್ಷಿತವಾಗಿ ವ್ಯವಸಾಯಗಾರನಾಗಿ ಹಳ್ಳಿಗೆ ಹಿಂದಿರುಗಬೇಕಾಯಿತು. ಹೊಸ ದಿಕ್ಕಿನಲ್ಲಿ ಅನ್ವೇಷಿಸಬೇಕಿದೆ ಎನ್ನಲು ಇವೂ ಹಲವಾರು ಕಾರಣಗಳಲ್ಲಿ ಒಂದೆಂದೇ ಹೇಳಬಹುದು. ವಿಶ್ವವಿದ್ಯಾಲಯದ ಪದವೀಧರನಾದ, ಬರಹಗಾರನಾದ ನಾನು ಹಳ್ಳಿಯಲ್ಲಿ ಒಂದು ಅತಿ ವಿಚಿತ್ರ ಸಂದರ್ಭದಲ್ಲಿ ಸಿಲುಕಿಕೊಂಡೆನು"** ಎನ್ನುತ್ತಾರೆ. ಈ ಮಾತುಗಳು ಹಿನ್ನೆಲೆಯಲ್ಲಿ ಚರ್ಚಿಸಿದಂತೆ ಐತಿಹಾಸಿಕ ವಿಲಕ್ಷಣತೆ ಗುರುತಿಸಲು ಸಮರ್ಥನೆಗಳಾಗಬಲ್ಲವು. "ಪೂರ್ಣಚಂದ್ರ ತೇಜಸ್ವಿ ಅವರು ತಾವು ಬದುಕಿದ್ದ ತಲೆಮಾರಿಗೆ ಅಷ್ಟೊಂದು ಪ್ರಿಯ ಲೇಖಕರೆನಿಸಿಕೊಂಡರೂ ನಂತರದ ತಲೆಮಾರುಗಳಿಗೂ ಅವರು ಪ್ರಿಯರಾಗುವುದಕ್ಕೆ ಮುಖ್ಯ ಕಾರಣಗಳಿವೆ. ಮೊದಲನೆಯದಾಗಿ ಅವರ ನೆಚ್ಚಿನ ಪರಿಸರ ಮತ್ತು ನಿಸರ್ಗ ಪ್ರೀತಿ. ಎರಡನೆಯದು ಇವುಗಳ ಬಗೆಗಿನ ಅವರ ಅಸ್ಖಲಿತ ಬರಹ. ನಿಸರ್ಗ ರೂಪುಗೊಳ್ಳುವುದರ ಹಿಂದಿರುವ ಪ್ರಾಕೃತಿಕ ಶಕ್ತಿಗಳ ಅಥವಾ ವೈಜ್ಞಾನಿಕ ಅಂಶಗಳ ಸೋದಾರಣೆಯ ಸಮೇತ ನೀಡುವ ವಿವರಣೆಗಳಲ್ಲಿನ ಸ್ಪಷ್ಟತೆ ಮತ್ತು ನಿಖರತೆಯ ಬಗೆಗಿನ ಅವರ ಆಳವಾದ ಅಧ್ಯಯನ ಮತ್ತು ಅರಿವು ನನಗೆ ಬಹಳ ಅಚ್ಚರಿಯನ್ನುಂಟುಮಾಡಿತು"[೧೦] ಎನ್ನುತ್ತಾರೆ ಡಾ. ಹೆಚ್.ಎಸ್.ಎಂ. ಪ್ರಕಾಶ್ ಅವರು.

ತೇಜಸ್ವಿ ಒಬ್ಬ 'ವೈಜ್ಞಾನಿಕ ಬರಹಗಾರ' ಎಂದು ಕರೆಸಿಕೊಳ್ಳುವಂತಹ ಪರಿಧಿಗೆ ಒಳಪಡಲು ಇಚ್ಚಿಸುವುದಿಲ್ಲ. ಆದರೆ ಪಶ್ಚಿಮದ ವೈಜ್ಞಾನಿಕ ಆವಿಷ್ಕಾರಗಳ ಬಗ್ಗೆ ಹೆಚ್ಚಿನ ಒಲವು ತೋರುವವರಾಗಿದ್ದಾರೆ. ಆ ಬೆಳವಣಿಗೆ ಕುರಿತು ಅಧ್ಯಯನ ಮಾಡುವ ಮನೋಧರ್ಮವು ಸಹ

ಅವರಲ್ಲಿತ್ತು. ವಿಸ್ಮಯದಲ್ಲಿ ಅವರು ನೀಡುವ ವಿವರಣೆಗಳು, ಮಿಸ್ಸಿಂಗ್‌ಲಿಂಕ್‌ನಂತಹ ಸೃಜನೇತರ ಸೃಷ್ಟಿಯು ಇಂತಹ ಮನೋಧರ್ಮಕ್ಕೆ ಸಾಕ್ಷಿಯಾಗುತ್ತವೆ. ನಿತ್ಯ ಶೋಧನೆಯಲ್ಲಿ ತೊಡಗಿರುವ ಪಶ್ಚಿಮದ ವಿಜ್ಞಾನದ ಆವಿಷ್ಕಾರಗಳು ಅವರನ್ನು ಸಾಕಷ್ಟು ಪ್ರಭಾವಿಸಿದ್ದವು. ಅವುಗಳ ಫಲಿತದ ಆಧಾರದಲ್ಲಿಯೇ ತೇಜಸ್ವಿ ಸುತ್ತಲಿನ ಪರಿಸರದ ಕೌತುಕಗಳನ್ನು ಹೆಚ್ಚು ಗ್ರಹಿಸತೊಡಗಿದರು. ಓದುಗನೊಬ್ಬ ಪರಿಸರದ ವಿಶ್ವರೂಪ ದರ್ಶನ ಪಡೆದುಕೊಳ್ಳುವ ಅಗತ್ಯತೆಯನ್ನು ಅವರ ಬರಹಗಳು ಎತ್ತಿಹಿಡಿಯುತ್ತವೆ.

ತೇಜಸ್ವಿ "ನನ್ನ ಸೃಜನೇತರ ಸಾಹಿತ್ಯ ಓದೋರಿಗೆ ಮಾತ್ರ ಸೃಜನಶೀಲ ಕೃತಿಗಳು ಅರ್ಥವಾಗ್ತವೆ. ಆಂಥ್ರಪಾಲಜಿ ಮೇಲೆ ಮಿಸ್ಸಿಂಗ್ ಲಿಂಕ್ ಬರ್ದಿದೀನಿ. ಅದರಿಂದ ಜೀವನಕ್ಕೆ ನೇರವಾಗಿ ಹೇಗೆ ಪ್ರಯೋಜನ ಆಗುತ್ತೆ ಅಂತ ನನಗೊತ್ತಿಲ್ಲ. ಒಂದ್ಸಲ ಕರ್ವಾಲೋನ ಟೆಕ್ಸ್ಟ್‌ಬುಕ್ ಆಗಿ ಇಟ್ಟಾಗ ಕೆಲವು ಅಧ್ಯಾಪಕರು ಬಂದು ಇದನ್ನು ಮಕ್ಕಳಿಗೆ ಪಾಠ ಹೇಳೋದು ತುಂಬಾ ಕಷ್ಟ ಅಂದ್ರು. ಏನಪ್ಪಾ ಇವರು ಇಂಥ ಸರಳವಾದ ಕತೇನ ಹೀಗಂತಾರೆ ಅಂತ ನೋಡಿದ್ರೆ ಅವರ ಸಮಸ್ಯೆ ಅದಲ್ಲ. ಅದರಲ್ಲಿ ವಿಕಾಸವಾದದ ರೆಫೆರೆನ್ಸ್ ಬರ್ತವೆ. ಅದು ಅವರಿಗೆ ಅರ್ಥವಾಗಿಲ್ಲ. ಕನ್ನಡ ಕರಿಕ್ಯುಲಂನಲ್ಲಿ ಇದನ್ನೆಲ್ಲಾ ಹೇಳೋಲ್ಲ. ಬರೀ ಪುರಾಣ, ಹಾಳು ಭಜನೆ ಹೇಳಿಕೊಡೋದ್ರಿಂದ ವಿಕಾಸವಾದದ ಬಗ್ಗೆ ಅವರಿಗೆ ಗೊತ್ತೇ ಇರಲಿಲ್ಲ. ಇದೊಂದು ಸರಳ ಉದಾಹರಣೆ ಮಾತ್ರ. ಅಂಥವರಿಗೆ ನನ್ನ ಕೃತಿಗಳು ಕೇವಲ ೨೫ ಪರ್ಸೆಂಟ್ ಮಾತ್ರ ಅರ್ಥ ಆಗ್ತವೆ. ಆಯಾ ಕ್ಷೇತ್ರದ ಪರಿಣಿತರು ಪುಸ್ತಕ ಬರೀದೇ ಇದ್ದುದರಿಂದ ನಾನೇ ಬರ್ದೆ."[೧೧] ಎಂದಿದ್ದಾರೆ.

ತೇಜಸ್ವಿ ಮಾತು ಒಂದರ್ಥದಲ್ಲಿ ನಿಜ. ವಿಜ್ಞಾನದ ಮುಖ್ಯ ಉದ್ದೇಶ ವೈಚಾರಿಕತೆಯನ್ನು ಅರಿಯುವುದಾಗಿದೆ. ಹಾಗೆಯೇ ಶಿಕ್ಷಣದ ಉದ್ದೇಶ ವೈಚಾರಿಕತೆಯೊಂದಿಗೆ ಬದುಕಿನ ಸತ್ಯಗಳನ್ನು ಶೋಧಿಸುವುದಾಗಿದೆ. ವಿಕಾಸವಾದದ ವಿಚಾರಗಳು ಕೇವಲ ವಿಜ್ಞಾನಕ್ಕೆ ಸೀಮಿತಗೊಂಡ ಸಂಗತಿಯೇನಲ್ಲ. ಸಂಯೋಜಿತ ಪಠ್ಯಕ್ರಮ/ಏಕೀಕೃತ ಪಠ್ಯಕ್ರಮದ ಅಳವಡಿಕೆ ಶಿಕ್ಷಣದ ಬಹುದೊಡ್ಡ ಆಶಯವಾಗಿ ನಿಲ್ಲುತ್ತದೆ. ಇಂದಿಗೂ ಸಮಾಜ ವಿಜ್ಞಾನ ವಿಷಯದಲ್ಲಿ ಪ್ರಬಂಧ ಬರವಣಿಗೆಯನ್ನು ಒಂದು ಪ್ರಶ್ನೆಯಾಗಿ ವಿದ್ಯಾರ್ಥಿಗಳಿಗೆ ನೀಡಿದ್ದಕ್ಕೆ ಸಮಾಜ ವಿಜ್ಞಾನದ ಶಿಕ್ಷಕರು ವಿರೋಧಿಸಿದ್ದುಂಟು. ಭಾಷಾ ವಿಷಯದಲ್ಲಿ ಪ್ರಬಂಧ ನಿರೂಪಿಸುವ ವಿಷಯಗಳೆಲ್ಲವೂ ಸಾಮಾಜ ವಿಜ್ಞಾನವನ್ನೇ ಅವಲಂಬಿಸಿರುತ್ತವೆ. ಉದಾ: ಜನಸಂಖ್ಯೆ, ಸಂಪರ್ಕ ಸಾಧನ, ದೂರದರ್ಶನ, ವರದಕ್ಷಿಣೆ, ಇತ್ಯಾದಿ. ಅಂತರ್ ಶಿಸ್ತೀಯ ಜ್ಞಾನ ಅನ್ವಯಾಧಾರಿತ ಪಠ್ಯಕ್ರಮ, ಪಠ್ಯವಸ್ತು ಅಳವಡಿಕೆ ಸುಲಭವಾದುದೇನೂ ಅಲ್ಲ. ಈ ಬಗ್ಗೆ ಜ್ಞಾನ ಸಂರಚನೆಯನ್ನು ಸಮಗ್ರವಾಗಿ ಗ್ರಹಿಸುವ ಸಾಮರ್ಥ್ಯ ಶಿಕ್ಷಕರೆಲ್ಲರಿಗೂ ಲಭಿಸಿರಬೇಕು. 'ವಿಸ್ಮಯ' ಹಾಗೂ 'ಮಿಸ್ಸಿಂಗ್ ಲಿಂಕ್'ನಂತಹ 'ಇಕಾಲಜಿ' ವಿಷಯ ಸಾಮರ್ಥ್ಯವನ್ನು ಅರ್ಥೈಸಿಕೊಳ್ಳಬೇಕಾಗುವ ಮನಸ್ಥಿತಿಗೆ ಕಲಿಕೆಯ ಅನುಭವಗಳು ತರಗತಿ ಬೋಧನೆಯ ನಂತರವೂ ವಿಸ್ತರಿಸಿರಬೇಕು. ತೇಜಸ್ವಿ ಅವರಲ್ಲಿ ಪ್ರಕಟಗೊಳ್ಳುತ್ತಿದ್ದ ಇಕಾಲಜಿಯ ದೂರದರ್ಶಿತ್ವ ಮನೋಧರ್ಮವು ಆಸಕ್ತಿ ಮತ್ತು ಕೌತುಕದಿಂದಲೇ ಜೊತೆಗೂಡಿದ್ದು. ಆ ಬಗ್ಗೆ ನಿರ್ದಿಷ್ಟ ಅಧ್ಯಯನ ನಡೆಸಿ ಸ್ನಾತಕ ಪದವಿಯೊಂದಿಗೆ ಗಳಿಸಿಕೊಂಡಿದ್ದಲ್ಲ. ಆಸಕ್ತಿ ಮತ್ತು ಸಿದ್ಧಗೊಳ್ಳುವ

ಮನಸ್ಥಿತಿಯೇ ಮುಖ್ಯ. ಅಂತಹ ಸ್ಥಿತಿಯನ್ನು ತನ್ನತ್ತ ವಶೀಕರಣಗೊಳಿಸಿಕೊಳ್ಳುವಲ್ಲಿ ತೇಜಸ್ವಿ ಯಶಸ್ವಿಯಾಗಿದ್ದರು.

ನವ್ಯ ಚಳುವಳಿಯ ಕಾಲದಲ್ಲಿ 'ಗಂಭೀರ ಸಾಹಿತ್ಯ'ಕ್ಕೆ ಇದ್ದ ಅತಿ ವಿಶಿಷ್ಟ ಸ್ಥಾನವನ್ನೇ ತೇಜಸ್ವಿ ನಿರಾಕರಿಸುತ್ತಾರೆಂದು ಕಾಣುತ್ತದೆ. ಅವರ ಹೆಚ್ಚಿನ ಬರವಣಿಗೆ ನವ್ಯಯುಗದಲ್ಲಿ 'ಸಾಹಿತ್ಯೇತರ' ಎಂದು ಕಡೆಗಾಣಿಸಲ್ಪಟ್ಟಿದ್ದ ಮಾಹಿತಿ ಪ್ರಧಾನ ವಾಙ್ಮಯ ಕ್ಷೇತ್ರದಲ್ಲಾಗಿದೆ: ಪರಿಸರದ ಕಥೆ, ಮಿಸ್ಸಿಂಗ್ ಲಿಂಕ್, ಕಾಡಿನ ಕಥೆಗಳು, ಫ್ಲೈಯಿಂಗ್ ಸಾಸರ್ಸ್, ಮಿಲೆನಿಯಮ್ ಸರಣಿಯ ಕೃತಿಗಳು, ಇತ್ಯಾದಿ. ಅರ್ಥಾತ್, ತೇಜಸ್ವಿಯವರಿಗೆ 'ಸಾಹಿತ್ಯ' ವೆಂಬ ವರ್ಗ ಬರವಣಿಗೆಯ ಬಗ್ಗೆ ಎಷ್ಟು ಆದರವಿತ್ತೋ ಅಷ್ಟೇ ಆದರ ವೈಜ್ಞಾನಿಕ ಬರಹಗಳ ಬಗ್ಗೆಯೂ ಇತ್ತು.(೧೨)

ತೇಜಸ್ವಿ ವಿಮರ್ಶೆಯ ವಿಮರ್ಶೆಯಲ್ಲಿ ಚಂದ್ರ ಶೇಖರ ನಂಗಲಿ ಅವರ ಟೀಕೆ ಟಿಪ್ಪಣಿಗಳಿಗೆ ಉತ್ತರಿಸುತ್ತಾ, ಈಗ ನೀವು 'ಪರಿಸರ ಕಥೆ' ಅಥವಾ 'ಏರೋಪ್ಲೇನ್ ಚಿಟ್ಟೆ' ಮೊದಲಾದ ಕೃತಿಗಳ ಬಗ್ಗೆ ಬರೆಯುತ್ತ ಅವುಗಳ ಕಾಮರೂಪಿ ಸ್ವರೂಪದ ಬಗ್ಗೆ ಮಾತಾಡಿದ್ದೀರಿ. ಇಲ್ಲಿ ಇದೊಂದು ಸಾಹಿತ್ಯದಲ್ಲಿನ ಬರವಣಿಗೆ ತಂತ್ರ ಎಂದು ನೀವು ಭಾವಿಸಿದರೆ ತಪ್ಪು. ಏಕೆಂದರೆ ಇದು ಕೇವಲ ಸಂವೇದನೆಯ ಮಟ್ಟದಲ್ಲಿರುವ ಜೀವನಾನುಭವಗಳಿಗೆ ಕಲಾಕೃತಿಗಳನ್ನು ಆದಷ್ಟು ಹತ್ತಿರಕ್ಕೆ ಒಯ್ಯುವ ಪ್ರಯತ್ನ. ಆಲೋಚಿಸಿ ಸಂಯೋಜಿಸಿದ ಬುದ್ಧಿಪೂರ್ವಕ ಪ್ರಯತ್ನವಲ್ಲ ಎನಿಸುತ್ತದೆ. ಹಲವಾರು ಬಾರಿ ಇತರರು ನನ್ನನ್ನು ವೈಜ್ಞಾನಿಕ ಬರಹಗಾರನೆಂದು ವಿವರಿಸುವುದನ್ನು ಕೇಳಿದ್ದೇನೆ. ಆದರೆ ಆಗೆಲ್ಲ ನನಗೆ ನಾವೆಲ್ಲ ಇರಬೇಕಾದ್ದೆ ಹೀಗಲ್ಲವೇ ಎಂದೆನಿಸುತ್ತದೆ. ಭೂಮಿಯನ್ನು ವರಾಹ ತನ್ನ ಕೋರೆದಾಡೆಗಳಿಂದ ಎತ್ತಿ ಹಿಡಿದಿದೆ ಎಂದು ನಂಬಿ ಬರೆಯುವವನು ಪೌರಾಣಿಕ ಅಥವಾ ಧಾರ್ಮಿಕ ಬರಹಗಾರನೆನಿಸಬಹುದೇನೋ! ಆದರೆ ವಿಶ್ವದ ಶೂನ್ಯದಲ್ಲಿ ಪರಿಭ್ರಮಿಸುತ್ತಿರುವ ಗ್ರಹ ಭೂಮಿ ಎಂದು ನಂಬಿ ಬರೆಯುವವನನ್ನೂ ಅದೇ ರೀತಿಯಲ್ಲಿ ನೀವು ವೈಜ್ಞಾನಿಕ ಬರಹಗಾರನೆಂದು ವರ್ಗೀಕರಿಸುವುದು ಸರಿಯಾಗಲಾರದು(೧೩) ಎನ್ನುತ್ತಾ, ಆ ಪರಿಧಿಯಿಂದಾಚೆಗೆ ಅವರನ್ನು ಓದುಗರು ಗ್ರಹಿಸುವಂತೆ ಸೂಚಿಸಿರುವುದನ್ನು ನಾವು ಗುರುತಿಸಬಹುದು.

ಇವತ್ತಿಗೂ ವಿಜ್ಞಾನವನ್ನು ಜನಪ್ರಿಯ ಸಾಹಿತ್ಯವಾಗಿಸಲು ಜನರಿಗೆ ಹತ್ತಿರವಾಗಿಸಲು ಜನರು ಓದುವಂತೆ ಮಾಡಲು ಅನುಸರಿಸಬೇಕಾದ ತಂತ್ರವೇನು ಎಂಬುದು ಅನೇಕ ವಿಜ್ಞಾನ ಬರಹಗಾರರನ್ನು ಕಾಡುತ್ತಿರುವ ಪ್ರಶ್ನೆ. ಅದಕ್ಕಿರುವ ಪರಿಹಾರವೆಂದರೆ ಅದು ಮನುಷ್ಯ ಸ್ಪಂದಿಯಾಗುವಂತೆ ಮಾಡಬೇಕು, ಮನುಷ್ಯ ಸಂಬಂಧವನ್ನು ಹೊಂದಿರಬೇಕು, ಮನುಷ್ಯರನ್ನು ಪ್ರಭಾವಿಸುವಂತಿರಬೇಕು, ಒಟ್ಟಿನಲ್ಲಿ ಅದು ಮಾನವೀಕರಣಗೊಂಡಿರಬೇಕು. ತೇಜಸ್ವಿ 'ಮಿಸ್ಸಿಂಗ್‌ಲಿಂಕ್'ನ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ; **"ಗೆಳೆಯರೊಡನೆ, ಓರಿಗೆಯವರೊಡನೆ, ಮಕ್ಕಳೊಡನೆ ಮಾತಾಡುವಾಗಲೆಲ್ಲ ನಾನು ಓದಿ ತಿಳಿದುದನ್ನು ವಿವರಿಸುತ್ತಾ ಅರ್ಥೈಸುತ್ತಾ ಪೂರ್ವ ಸಿದ್ಧತೆಗಳು ಯಾವುದು ಇಲ್ಲದವರಿಗೆ ಈ ಜ್ಞಾನವನ್ನು ತಲುಪಿಸುವ ಭಾಷೆ ಮತ್ತು ಕ್ಷಿಪ್ರ ವಿಧಾನಗಳಿಗೆ ಹುಡುಕಾಟ ನಡೆಸುತ್ತಲೇ ಇದ್ದೆ. ಅತಿ ಸೂಕ್ಷ್ಮ ಆಲೋಚನೆಗಳನ್ನು ಕಲ್ಪನೆಗಳನ್ನು ಜೀವನ ಸಂದರ್ಭಗಳಲ್ಲಿ ಹೇಳಿದಾಗ ಚರ್ಚಿಸಿದಾಗ ಚಕ್ಕನೆ ಅವುಗಳಲ್ಲಿ ಪ್ರಾಣ ಸಂಚಾರವಾಗಿ ಕೇಳಿದವರಿಗೆ ಕೂಡಲೇ ಹೃದ್ಗತವಾದುದನ್ನು ನೋಡಿದ್ದೇನೆ. ಆದರೆ ಬರೆಯುವಾಗ ನಮಗೆ ಓದುವವರ ಜೀವನ**

ಸಂದರ್ಭಗಳ ಅರಿವಿನ ಅನುಕೂಲ ಇರುವುದಿಲ್ಲ. ಆದ್ದರಿಂದ ಈ ಜ್ಞಾನವನ್ನು ತಲುಪಿಸಲು ಅದು ರೂಪುಗೊಂಡಾಗಿನ ಚಾರಿತ್ರಿಕ ಮತ್ತು ಸಾಮಾಜಿಕ ಸಂದರ್ಭಗಳೊಂದಿಗೆ ಸೇರಿಸಿ ಕತೆ ಕಾದಂಬರಿಗಳಂತೆ ಹೇಳುವ ಪ್ರಯೋಗ ಮಾಡಿದ್ದೇನೆ" ಎಂದಿದ್ದಾರೆ. ವಿಮರ್ಶೆಯ ವಿಮರ್ಶೆಯಲ್ಲಿ "ವಿಜ್ಞಾನದ ವಿಸ್ಮಯಗಳಿಗೆ ನಾನು ಗಂಟು ಬಿದ್ದಿದ್ದೇನೆನ್ನುವುದು ಸಂಪೂರ್ಣ ತಪ್ಪು. ಅಲ್ಲಯ್ಯ! ತನ್ನ ಪಾಡಿಗೆ ತಾನಿರುವ, ಇದ್ದುದನ್ನು ಇದ್ದಹಾಗೆ, ಕಂಡುದ್ದನ್ನು ಕಂಡಹಾಗೆ, ನೋಡುವ ಮತ್ತು ಹೇಳುವ ಮನುಷ್ಯ ಇರಬೇಕಾದುದೇ ಹೀಗಲ್ಲವೆ? ಬೋಗಸ್ ಜನಿವಾರ, ಉಡುದಾರ, ಶಿವದಾರಗಳನ್ನೆಲ್ಲಾ ಮಹಾ ಮಹಾ ಸಂಕೇತಗಳೆಂದು ಕತೆ ಬರೆಯುವವರಿಗೆ ಗಂಟು ಬಿದ್ದವರೆಂದು ಬೇಕಾದರೆ ಹೇಳು. ನಾನು ನಿನ್ನ ಹಾಗೇ ಅನ್ನ ತಿನ್ನುವ ನರಮನುಷ್ಯ. ನನ್ನ ಅನುಭವಗಳನ್ನೂ, ನನ್ನ ಅನುಭವಕ್ಕೆ ನಿಲುಕಿದ ಸತ್ಯಗಳನ್ನೂ ನಿನಗೆ ಹೇಳುತ್ತಿದ್ದೇನಷ್ಟೇ ಹೊರತು ನನ್ನ ಬರವಣಿಗೆಗೆ ಒಂದು ಹಣೆಪಟ್ಟಿ ಖಂಡಿತ ಅನವಶ್ಯಕ. ನಾನು ವೈಜ್ಞಾನಿಕ ಬರಹಗಾರನಂತೂ ಅಲ್ಲ. ನನ್ನಂಥ ಕಥೆಗಾರನೊಬ್ಬ ಮಿಸ್ಸಿಂಗ್ ಲಿಂಕ್‌ನಂಥ ಮಾನವಶಾಸ್ತ್ರದ ಪುಸ್ತಕವನ್ನಾಗಲೀ ವಿಸ್ಮಯದಂಥ ಇಕಾಲಜಿ ಮೇಲಿನ ಪುಸ್ತಕವನ್ನಾಗಲೀ ಬರೆಯಬೇಕಾಗಿ ಬಂದದ್ದು ಕನ್ನಡ ಸಾಹಿತ್ಯದ ದುರಂತ ಪರಿಸ್ಥಿತಿಯನ್ನು ತೋರಿಸುತ್ತದೆ. ಆಯಾ ಕ್ಷೇತ್ರಗಳಲ್ಲಿರುವ ಪ್ರತಿಭಾವಂತರಿಗೆ ತಮ್ಮ ಕ್ಷೇತ್ರದ ಜ್ಞಾನವನ್ನು ಇತರರೊಡನೆ ಹಂಚಿಕೊಳ್ಳಬೇಕೆಂಬ ದೊಡ್ಡತನ ಇಲ್ಲ. ಅವರ ತಲೆಯೆಲ್ಲಾ ಹೇಗಾದರೂ ಮಾಡಿ ವೀಸಾ ಗಿಟ್ಟಿಸಿ ವಿದೇಶಕ್ಕೆ ಹೋಗಿ ನೆಲೆಸುವುದರ ಕಡೆಗೇ ಇರುತ್ತದೆ. ಹೀಗಾಗಿ ಅವರಂತೂ ಪುಸ್ತಕ ಬರೆಯುವುದಿಲ್ಲ. ಮಿಕ್ಕ ಎರಡನೇ ಮೂರನೇ ದರ್ಜೆಯವರಿಗೆ ಅವರಿಗೇ ಅವರ ವಿಷಯಗಳಲ್ಲಿ ಆಸಕ್ತಿ ಇರುವುದಿಲ್ಲ. ಇನ್ನು ಇತರರಿಗೆ ಆಸಕ್ತಿ ಹುಟ್ಟುವಂತೆ ಹೇಗೆತಾನೆ ಅವರು ಬರೆಯುತ್ತಾರೆ. ಇದರಿಂದಾಗಿಯೇ ಕೆಟ್ಟ ವೈಜ್ಞಾನಿಕ ಪುಸ್ತಕಗಳ ಗೊಬ್ಬರದ ಗುಂಡಿಯೇ ನಮ್ಮಲ್ಲಿ ನಿರ್ಮಾಣವಾಗಿದೆ"[೧೪] ಎಂದಿರುವುದನ್ನು ಗಮನಿಸಬಹುದಾಗಿದೆ.

ತೇಜಸ್ವಿ ಅವರು ಯಾವುದನ್ನು ಒಂದು ಅಧ್ಯಯನದ ಶಿಸ್ತಿನಿಂದ ಗೆರೆ ಎಳೆದು ಕೂತು ಬರೆದವರಲ್ಲ. ತಮ್ಮ ಸುತ್ತಮುತ್ತಲಿನ ಕೌತುಕ ವಿದ್ಯಮಾನಗಳನ್ನು ಬೆರಗುಗಣ್ಣಿನಿಂದ ನೋಡುತ್ತಾ ಸ್ವಾನುಭವದ ಎಲ್ಲೆಯೊಳಗೆ ವಿವರಿಸುತ್ತಾರೆ. ಹಾಗಾಗಿ ವಿಜ್ಞಾನದ ನಿಗೂಢತೆಗಳು ಓದುಗರ ಅನುಭವಕ್ಕೆ ತಟ್ಟನೆ ಬರುತ್ತವೆ. ತೇಜಸ್ವಿಯವರ ಬರವಣಿಗೆಯನ್ನು ಬಿಡಿ ಬಿಡಿಯಾಗಿ ಓದದೆ ಇಡಿಯಾಗಿ, ಅವುಗಳ ಒಟ್ಟಂದದಲ್ಲಿ, ಅಂತರ್ ಪಠ್ಯ ಸಂಬಂಧದಲ್ಲಿ ಓದಿದಾಗ ಅವರ ಎಲ್ಲ ಬರವಣಿಗೆಗಳ ಪ್ರಸ್ತುತತೆ ಮತ್ತು ಪ್ರಾಮುಖ್ಯಗಳು ನಮ್ಮ ಅರಿವಿಗೆ ಬರುತ್ತಾ ಹೋಗುತ್ತದೆ. ತೇಜಸ್ವಿಗೆ ಹೇಗೆ ಇಡೀ ಇಕಾಲಜಿ ಒದಗಿಬರುತ್ತದೋ ಹಾಗೆಯೇ ಕೊನೆಯ ಪಕ್ಷ ತೇಜಸ್ವಿ ಬರೆವಣಿಗೆಯ ಇಕಾಲಜಿ ಒಳಹುಗಳಾದರೂ ನಮಗೆ ಒದಗಿಬರಬೇಕು. ನಾನು ವಿಜ್ಞಾನ ಪದವೀಧರನಲ್ಲ. ವಿಜ್ಞಾನಿಯೂ ಅಲ್ಲ. ನಾನು ಉಚ್ಚ ಶಿಕ್ಷಣ ಪಡೆದದ್ದು ಸಾಹಿತ್ಯದಲ್ಲಿ. ಆದರೆ ಹಳ್ಳಿಗೆ ಬಂದ ಮೇಲೆ ಸುತ್ತಮುತ್ತಲ ಅನೇಕ ಕೌತುಕಮಯ ವಿದ್ಯಮಾನಗಳನ್ನು ನೋಡುತ್ತಾ ಅವುಗಳ ಬಗ್ಗೆ ಅಭ್ಯಾಸ ಮಾಡಿದವನು. ನಾನು ಜ್ಞಾನೋಪಾಸಕನಾಗಲೀ ವಿದ್ವಾಂಸನಾಗಲೀ ಅಲ್ಲ. ಸಾಹಿತ್ಯವೇ ನನ್ನ ಸ್ವಧರ್ಮ. ಹಾಗಾಗಿ ನಾನು ಏನನ್ನು ಬರೆದರೂ ಅದಕ್ಕೆ ಸಾಹಿತ್ಯದ ಪರಿವೇಷ, ಕತೆ ಕಾದಂಬರಿಗಳ ಛಾಯೆ ಇರುತ್ತದೆ. ಆದ್ದರಿಂದಲೇ ಈ ಪುಸ್ತಕದ ಹೆಸರು **'ಏರೋಪ್ಲೇನ್ ಚಿಟ್ಟೆ** ಮತ್ತು ಇತರ **ಕಥೆಗಳು'** ಎಂದು ಇಟ್ಟಿದ್ದು. ಸಾಹಿತ್ಯ ತನ್ನ ಅನುಭವವನ್ನು

ಸಮರ್ಥವಾಗಿ ಹೇಳಲು ಅನೇಕ ವೇಳೆ ತತ್ವಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದವುಗಳ ಉಪಯೋಗ ಆಗಿದೆಯಷ್ಟೆ. ಸ್ವಾನುಭವದ ಎಲ್ಲೆಯನ್ನು ಮೀರದೆ ನಿರೂಪಿಸಿರುವ ಇವನ್ನು ಕಥೆಗಳೆಂದೇ ಪರಿಗಣಿಸಬಹುದು. ಅಥವಾ ಇದನ್ನು ಏನೆಂದು ಪರಿಗಣಿಸುವ ಅಗತ್ಯವಾದರೂ ಏನಿದೆ? ಓದಿ ಸಂತೋಷ ಪಡುವ ಸಂಗತಿಗಳಾದರೆ ಸಾಕಲ್ಲವೆ! ಬರೆದುದನ್ನು ಓದಿ ವರ್ಗೀಕರಣ ಮಾಡಿ ತಲೆ ಬಿಸಿ ಮಾಡಿಕೊಳ್ಳಲು ವಿಮರ್ಶಕರಿರುವಾಗ ನನಗೇಕೆ ಈ ತೊಂದರೆಗಳು!' ಎಂದಿದ್ದಾರೆ ತೇಜಸ್ವಿ

ಸಮಾಜಮುಖಿ ಚಿಂತಕರಾಗಿದ್ದ ತೇಜಸ್ವಿ ಅವರು ತಮ್ಮ ಬರವಣಿಗೆಯ ಜೊತೆಯಲ್ಲಿಯೇ ತಮ್ಮ ಸುತ್ತಲಿನ ರೈತ ಚಳುವಳಿ, ಬರಹಗಾರರ ಒಕ್ಕೂಟ, ಬೂಸಾ ಪ್ರಕರಣ, ತುರ್ತು ಪರಿಸ್ಥಿತಿ, ಜೆ.ಪಿ.ಚಳುವಳಿ, ಸಮಾಜವಾದಿ ಚಳುವಳಿ ಹಾಗೂ ಸಾಂಸ್ಕೃತಿಕ ಸನ್ನಿವೇಶಕ್ಕೆ ಸ್ಪಂದಿಸಿದ್ದಾರೆ. ಸಮಕಾಲೀನ ವಿದ್ಯಮಾನಗಳು ಹಾಗೂ ಜಗತ್ತಿನ ವಿಸ್ಮಯಗಳ ಬಗ್ಗೆ ಲಹರಿ, ಲಂಕೇಶ್ ಪ್ರತಿಕೆ, ಮಾನವ, ಅಗ್ನಿ, ಕಸ್ತೂರಿ, ಸಂಕ್ರಮಣ ಹಾಗೂ ಕೆಲವು ದಿನ ಪತ್ರಿಕೆಗಳಲ್ಲಿ ಬರೆದು ಓದುಗರ ತಿಳುವಳಿಕೆಯ ವಿಸ್ತರಣೆಗೆ ಕಾರಣವಾಗಿದ್ದಾರೆ. ಮೌಢ್ಯ, ಕಂದಾಚಾರವನ್ನು ವಿರೋಧಿಸಿ ವೈಚಾರಿಕತೆ ಮತ್ತು ವೈಜ್ಞಾನಿಕತೆಯನ್ನು ಪ್ರತಿಪಾದಿಸಿದ್ದಾರೆ. ತಮ್ಮ ಅನೇಕ ಸಂದರ್ಶನಗಳಲ್ಲಿ ಸಾಹಿತ್ಯ, ಸಂಸ್ಕೃತಿ, ಜಾಗತೀಕರಣ, ಪರಿಸರ ಶಿಕ್ಷಣ ಪ್ರಶಸ್ತಿ ಮೊದಲಾದ ವಿಷಯಗಳಲ್ಲಿ ನಿರ್ಭಿಡೆಯಿಂದ ನುಡಿದಿದ್ದಾರೆ. ಉದಾರೀಕರಣದ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಏಳಿಗೆ ಸಾಧ್ಯವಾದರೂ ಅದು ಅಂದುಕೊಂಡಷ್ಟು ಸುಲಭವಾದುದಲ್ಲ. ಕೆಲವು ಕಾನೂನುಗಳನ್ನು ಸುಲಭ ಮಾಡಿದ ಕೂಡಲೇ ವಿದೇಶಿ ಹಣ ದೇಶದತ್ತ ನುಗ್ಗುತ್ತದೆ ಎಂಬುದು ಸುಳ್ಳು. ಎನ್.ಆರ್.ಐ.ಗಳಿಗೆ ವಿದೇಶಿ ಕಂಪೆನಿಗಳಿಗೆ ದುಡಿಮೆಗೆ ಅನುಕೂಲಕರವಾದ ವಾತಾವರಣ ಕಲ್ಪಿಸುತ್ತೇವೆ ಎಂದು ಹೇಳುವ ನಮ್ಮ ರಾಜಕಾರಣಿಗಳು ದೇಶಿಯ ಕಂಪೆನಿ ಮತ್ತು ಉದ್ಯಮಗಳು ಪರವಾನಗಿ ನವೀಕರಣಕ್ಕಾಗಿ, ಬ್ಯಾಂಕ್ ಸಾಲಕ್ಕಾಗಿ ಪರದಾಡುವ ಸ್ಥಿತಿಯಿದೆ. ಈ ಉದಾರೀಕರಣ ಚಿಂತನೆಯು ಎನ್.ಆರ್.ಐ., ಐ.ಎಂ.ಎಫ್.ಗಳ ಹಣ ಸೆಳೆಯಲು ಮಾತ್ರ ನಡೆದಿರುವ ಕುತಂತ್ರವೆಂದು ತೇಜಸ್ವಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಮ್ಮ ಭೂಮಿ ಮತ್ತು ಪರಿಸರವನ್ನು ಸಂರಕ್ಷಿಸುವುದು ಎಲ್ಲರ ಜವಾಬ್ದಾರಿಯಾಗಿದ್ದು ಕೇವಲ ಸರ್ಕಾರ ಮತ್ತು ಇಲಾಖೆಯಿಂದ ಅದು ಅಸಾಧ್ಯವಾದುದು. ಅರಣ್ಯೀಕರಣದ ಹೆಸರಿನಲ್ಲಿ ವಿಶ್ವಬ್ಯಾಂಕ್, ನಬಾರ್ಡ್ ಕೋಟ್ಯಾಂತರ ರೂಗಳನ್ನು ಕೊಟ್ಟಿದ್ದರೂ ಸದ್ವಿನಿಯೋಗವಾಗದೇ ಲ್ಯಾಪ್ಸ್ ಆಗುವುದರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. "ಚಾರ್ಮಾಡಿ ಬಳಿ ನೂರಾರು ಮೈಲುಗಳಷ್ಟು ವಿಸ್ತಾರವಾದ ಸೈಲೆಂಟ್ ವ್ಯಾಲಿಯ ಅಪ್ಪನಂತ ಕಾಡಿತ್ತು. ನಾನೇ ಆ ಕಾಡುಗಳ ಫೋಟೋವನ್ನು ಮೊನ್ನೆ ಮೊನ್ನೆಯಷ್ಟೇ ತೆಗೆದಿದ್ದೆ. ಕೆಲವು ದಿನಗಳ ನಂತರ ಅಲ್ಲಿ ಹೋಗಿ ನೋಡಿದಾಗ ಇಡೀ ಕಾಡನ್ನು ಅಲ್ಲಿ ಸರ್ವನಾಶ ಮಾಡಲಾಗಿತ್ತು. ಅರಣ್ಯ ಸಿಬ್ಬಂದಿ, ಒಬ್ಬ ಸರ್ವೆ ಹಾಗೂ ಮರದ ವ್ಯಾಪಾರಿ ಸೇರಿ ನಕ್ಷೆಯನ್ನು ನಿರಂತರ ಬದಲಾಯಿಸಿ ಮಾಡಿರುವ ಕೆಲಸವಿದು. ಈಗ ಅಲ್ಲಿ ಗೆಸ್ಟ್‌ಹೌಸ್ ಕಟ್ಟಲಾಗುತ್ತಿದೆ. ಅದಕ್ಕೆ ೫೦ಲಕ್ಷ ಮಂಜೂರು ಮಾಡಲಾಗಿದೆ. ಒಂಬತ್ತು ತಿಂಗಳು ಮಳೆ ಮಂಜು ಮುಸುಕಿರುವ ಜಾಗಕ್ಕೆ ಅರ್ಧಕೋಟಿ ವ್ಯಯಿಸಿದ್ದಾರೆ. ಯಾರು ಹೇಳು ಕೇಳುವವರಿಲ್ಲದೆ ಮಳೆಗಾಳಿ ಹೊಡೆತಕ್ಕೆ ಸಿಲುಕಿ ಗೆಸ್ಟ್‌ಹೌಸ್ ನೆಲಸಮವಾಯಿತು. ಇದನ್ನು ತಿಳಿದು ಯೋಜನೆ ಹಾಕಿ ಕಟ್ಟಿದ್ದೇಕೆ? ಹಣ ಸಿಕ್ಕರೆ ಇಲಾಖೆಗಳು ಅಧಿಕಾರಿಗಳು ಏನು

ಮಾಡುತ್ತಾರೆ ಎಂಬುದಕ್ಕೆ ಇದಕ್ಕಿಂತ ಒಳ್ಳೆಯ ಉದಾಹರಣೆ ಸಿಗಲಾರದು" ಎಂದು ನೈತಿಕತೆ, ಮುಂದಾಲೋಚನೆಯಿಲ್ಲದ ಕಾರ್ಯಕ್ರಮಗಳ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮರಗಳೆಲ್ಲಾ ಚೀತ್ಕರಿಸಿಕೊಂಡು ಧರೆಗುರುಳುತ್ತಿದ್ದು ಅವುಗಳ ಭಿನ್ನಹಕ್ಕೆ ಬಾಯಿಲ್ಲ. ಹೊಲಸೆದ್ದು ಕೊಚ್ಚೆಗುಂಡಿಗಳಾಗಿ ನದಿಗಳು ಹರಿಯುತ್ತಿದ್ದರೆ ನಮ್ಮ ಜನಪ್ರತಿನಿಧಿಗಳಿಗೆ ಗೋಳಿನ ನಿನಾದ ಕೇಳುತ್ತಲೇ ಇಲ್ಲ. ಚಳುವಳಿ, ಹೋರಾಟ, ಕೋರ್ಟಿನಲ್ಲಿ ದಾವೆ ಯಾವುವು ಪರಿಸರ ಉಳಿಸುವಲ್ಲಿ ಸಫಲವಾಗುತ್ತಿಲ್ಲ. ಚುನಾವಣೆ, ಗೆಳೆತನ, ಬಾಂಧವ್ಯ, ಹಣ ಮುಂತಾದವುಗಳ ಆಮಿಷಕ್ಕೆ ಸಿಲುಕಿ ಪರಿಸರ ವಿನಾಶಕ್ಕೆ ಸಿಲುಕುತ್ತಿದೆ ಎಂದು ವಿಷಾದಿಸುತ್ತಾರೆ. ತೇಜಸ್ವಿ ಅವರ ಪರಿಸರ ಪ್ರಜ್ಞೆಯಲ್ಲಿ ಪರಿಸರ ಕಾಳಜಿಯನ್ನು ಕಾಣಬಹುದಲ್ಲದೆ ಅದರ ಆಗುಹೋಗುಗಳಿಗೆ ಮಿಡಿಯುವ ನಿಷ್ಕಲ್ಮಷ ಮನಸ್ಥಿತಿಯನ್ನು ಗುರುತಿಸಬಹುದು.

೮.೨.೨ ನಾಗೇಶ ಹೆಗಡೆ ಪರಿಸರ ಪ್ರಜ್ಞೆಯ ಗ್ರಹಿಕೆಗಳು:

೧೯೮೦ರ ದಶಕದಲ್ಲಿ ಭಾರತೀಯ ಹಸಿರು ಚಳುವಳಿ ಅಥವಾ ಗ್ರೀನ್ಸ್ ಎಂಬುದು ಮೊದಲ ಬಾರಿಗೆ ಮಾಧ್ಯಮದ ಗಮನವನ್ನು ಪಡೆದುಕೊಂಡಿತು. ಈ ಕಾಲಘಟ್ಟದಲ್ಲಿ ಪತ್ರಕರ್ತರು ಮತ್ತು ವಿದ್ವಾಂಸರು ಭಾರತದಾದ್ಯಂತ ಸಂಚರಿಸಿ ಸಾಮಾಜಿಕ ಜೀವನದಲ್ಲಿ ಪರಿಸರದ ಅವನತಿಯ ಪರಿಣಾಮವನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿದರು. ಆ ಕಾಲಕ್ಕೆ ಪರಿಸರದ ವಿಷಯಗಳ ಮೂಲಕ ವರದಿಯ ನಿಜವಾದ ಪ್ರವಾಹ ಭಾರತದಲ್ಲಿ ಉಂಟಾದುದಲ್ಲದೆ ಹಲವು ಭಾಷೆಗಳಲ್ಲಿ ಬರವಣಿಗೆಯ ಕೆಲಸ ಆರಂಭವಾಯಿತು. ಹಿಂದಿ, ಇಂಗ್ಲಿಷ್, ಭಾಷಾ ಲೇಖಕರಂತೆ ಕನ್ನಡದಲ್ಲಿ ನಾಗೇಶ ಹೆಗಡೆ ಅವರು ಈ ಕುರಿತು ಅತ್ಯುತ್ತಮ ಕೆಲಸ ಮಾಡಿದರು.(೧೫) ಕಾಳಿ ಕಣಿವೆ ಹೋರಾಟ, ಪಶ್ಚಿಮ ಘಟ್ಟಗಳ ಉಳಿವಿನ ಹೋರಾಟದಲ್ಲಿ ಹಾಗೂ ಒಟ್ಟಾರೆ ಪರಿಸರ ಹೋರಾಟದಲ್ಲಿ ಅವರು ವಹಿಸುತ್ತಿರುವ ಪಾತ್ರ ಇಂದಿಗೂ ಅನನ್ಯವಾದುದು.

ಪ್ರಾದೇಶಿಕವಾಗಿಯೂ ನೋಡುವುದಾದರೆ ಉತ್ತರ ಕನ್ನಡದ ಸಿರ್ಸಿಯ ಗುಬ್ಬಿ ಗದ್ದೆಯಲ್ಲಿ ಆರಂಭವಾದ ಹಸಿರು ಚಳುವಳಿ ಮರಗಳ ಬೀಳಿಸುವಿಕೆಯ ಮೇಲೆ ಅರಣ್ಯ ನೀತಿಯನ್ನು ಬದಲಾಯಿಸುವಂತೆ ಒತ್ತಾಯಿಸಿತು. ಇದು ಇತರ ಭಾಗಗಳಿಗೂ ಹರಡಿತು. ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಕಾಡಿನ ಪತನದ ವಿರುದ್ಧ ನೀತಿಯನ್ನು ತಿದ್ದುಪಡಿ ಮಾಡಲು ಆದಂತಹ ಅಹಿಂಸಾತ್ಮಕ ಪ್ರತಿಭಟನೆಯು ಇಂದಿಗೂ ಪಶ್ಚಿಮಘಟ್ಟಗಳಲ್ಲಿ ಮೌನಕ್ರಾಂತಿ ಆವರಿಸಿಕೊಳ್ಳಲು ಕಾರಣವಾಗಿದೆ. ಇಲ್ಲಿಯೂ ಕೂಡ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಸಂಘರ್ಷವೇ ಚಳುವಳಿಗೆ ಪ್ರಮುಖ ಕಾರಣವಾಗಿತ್ತು. ಅಂದಾಜಿಸಿದಂತೆ ಉತ್ತರ ಕನ್ನಡ ಜಿಲ್ಲೆಯು ಭೌಗೋಳಿಕವಾಗಿ ಶೇ.೮೧ಕ್ಕಿಂತಲೂ ಹೆಚ್ಚು ಭಾಗ ಅರಣ್ಯಗಳನ್ನು ಒಳಗೊಂಡಿತ್ತು. ಇಂದು ಇದರ ಅರಣ್ಯ ಪ್ರಮಾಣ ತೀರಾ ಕುಸಿದಿದೆ. ಅಲ್ಲಿನ ನೀರಿನ ಮೂಲಗಳ ಒಣಗಿಸುವಿಕೆಯಂತಹ ಅಭಿವೃದ್ಧಿಯನ್ನು ಪರಿಸರವಾದಿಗಳು ದೂಷಿಸಿದ್ದಾರೆ. ಹಿಂದುಳಿದ ಪ್ರದೇಶವೆಂದು ಘೋಷಿಸಲ್ಪಟ್ಟಿದ್ದ ಉತ್ತರ ಕನ್ನಡವು ಕ್ರಮೇಣ ಪ್ರಮುಖ ಕೈಗಾರಿಕೆಗಳಿಗೆ ಆಯ್ಕೆಯಾಯಿತು. ನದಿಗಳನ್ನು ಸಜ್ಜುಗೊಳಿಸಲು ನಿರ್ಮಿಸಲಾದ ಜಲವಿದ್ಯುತ್ ಅಣೆಕಟ್ಟುಗಳ ಸರಣಿ ಕೆಲಸ ಆರಂಭಗೊಂಡವು. ಈ ಸಂದರ್ಭದಲ್ಲಿ ಅರಣ್ಯನಾಶದ ಮೇಲೆ ಪರಿಣಾಮ ಬೀರುವ ನೀರಿನ ಮೂಲಗಳನ್ನು ಒಣಗಿಸುವಂತಹ ಏಕಸಂಸ್ಕೃತಿಯನ್ನು ಪರಿಸರವಾದಿಗಳು ವಿರೋಧಿಸಿದರು.

ಹೀಗೆ ಸಿರ್ಸಿಯಲ್ಲಿ ಆರಂಭವಾದ ಅಪ್ಪಿಕೋ ಚಳುವಳಿ ಪಶ್ಚಿಮ ಘಟ್ಟಾದ್ಯಂತ ಹರಡಿತು. ಕ್ರಮೇಣ ಪಶ್ಚಿಮಘಟ್ಟದ ಜೀವವೈವಿಧ್ಯದ ಉಳಿವಿನ ಮಹತ್ವದಿಂದಲೂ ಈ ಚಳುವಳಿ ಮುಖ್ಯವಾಯಿತು. ದೇಸಿಯ ಪ್ರಭೇದಗಳು, ಹೂಬಿಡುವ ಸಸ್ಯಗಳು, ಪಕ್ಷಿಗಳು, ಸಸ್ತನಿಗಳು, ಸರೀಸೃಪಗಳು, ಕಪ್ಪೆಗಳು, ಮೀನುಗಳು ಮತ್ತು ಔಷಧೀಯ ಸಸ್ಯಗಳ ಸಮೃದ್ಧಿಯಿಂದಲೂ ಕೂಡಿರುವ ಪಶ್ಚಿಮಘಟ್ಟಗಳು ನಾಡಿನ ಪರಿಸರ ವ್ಯವಸ್ಥೆಯ ಜೀವನಾಡಿಯಾಗಿದ್ದವು. 'ಪಶ್ಚಿಮಘಟ್ಟ ಉಳಿಸಿ', 'ಮೌನ ಕಣಿವೆ ಉಳಿಸಿ' ಆಂದೋಲನಗಳು ನಾಡಿನ ಪರಿಸರ ಚಳುವಳಿಗಳ ಇತಿಹಾಸದ ದೃಷ್ಟಿಯಿಂದಲೂ ಉಲ್ಲೇಖಾರ್ಹವಾಗುತ್ತವೆ.(೧೬)

ನಾಗೇಶ ಹೆಗಡೆ ಉತ್ತರ ಕನ್ನಡದವರಾಗಿದ್ದು, ಅಪ್ಪಿಕೋ ಚಳುವಳಿ ಸಂಘಟಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದವರು. ಆ ಸಂದರ್ಭದಲ್ಲಿ ಬರೆದ ಅವರ ಲೇಖನಗಳು ಪರಿಸರ ಚಳುವಳಿಗೆ ಹೊಸ ದಿಕ್ಕು ತೋರಿಸಿದವು. ಹೆಗಡೆ ಇಲ್ಲಿನ ಹಸಿರು ಚಳುವಳಿ ಮತ್ತು ಮೌನಕ್ರಾಂತಿಯಿಂದಲೂ ಪ್ರೇರಿತಗೊಂಡವರು. ಇಲ್ಲಿಯೇ ಹುಟ್ಟಿ ಬೆಳೆದವರಲ್ಲದೆ ಘಟ್ಟ ಪ್ರದೇಶಗಳಲ್ಲಿ ಸಂಚರಿದವರು. ಜೀವವೈವಿಧ್ಯದ ಅಪಾರ ಶ್ರೀಮಂತಿಕೆಯನ್ನು ಹತ್ತಿರದಿಂದ ಕಂಡವರು. ಬಾಲ್ಯ ಹಾಗೂ ಒಂದು ಹಂತದ ಬೆಳವಣಿಗೆಯೊಂದಿಗೆ ಅಲ್ಲಿಯೇ ಸಹಜೀವನ ನಡೆಸಿದವರು. ಪಶ್ಚಿಮಘಟ್ಟಗಳ ಸಮಗ್ರತೆಯ ಅರಿವು ಅವರಿಗಿದೆ. ಅವನತಿಯಿಂದಾಗುತ್ತಿರುವ ಪಶ್ಚಿಮಘಟ್ಟಗಳ ವ್ಯತ್ಯಾಸವನ್ನು ಮತ್ತು ಜೀವವೈವಿಧ್ಯಗಳಲ್ಲಾದ ಏರುಪೇರನ್ನೆಲ್ಲಾ ಸುಲಭವಾಗಿ ಗುರುತಿಸಬಲ್ಲರು. ಉದಾಹರಣೆಯಾಗಿ ಹೇಳುವುದಾದರೆ, ಬಯಲು ಸೀಮೆಯ ಕರಗಿರುವ ಬೆಟ್ಟರಾಶಿ, ಮರಗಳು ಅಥವಾ ಮಾವಿನ ತೋಪುಗಳ ಅದೃಶ್ಯ ಚಿತ್ರಣವನ್ನು ಗ್ರಹಿಸಿಯೇ ಸಾಮಾನ್ಯ ವೃದ್ಧರೊಬ್ಬರು ಬೇಸರದಿಂದ "ನೋಡಿ ಈಗ ಹೇಗಾಗಿಬಿಟ್ಟದೆ!" ಎಂಬ ಉದ್ಗಾರ ತೆಗೆಯುತ್ತಾರೆಂದರೆ? ಪಶ್ಚಿಮ ಘಟ್ಟದ ಮಡಿಲಲ್ಲೇ ಬೆಳೆದವರ ಪರಿಸರದ ಮಮಕಾರ ಹೇಗಿರಬೇಡ ಎನಿಸುತ್ತದೆ. ಪರಿಸರ ಪ್ರಜ್ಞೆ ಎಂಬುದು ಪಠ್ಯದ ಅಧ್ಯಯನದಿಂದಾಗಲಿ, ಹೋರಾಟದಲ್ಲಿ ಘೋಷಣೆ ಕೂಗುವುದರಿಂದಾಗಲಿ ಬರುವಂತದ್ದಲ್ಲ. ಅದು ಪರಿಸರ ವ್ಯವಸ್ಥೆಯ ಆಗು ಹೋಗುಗಳಲ್ಲಿ ನಿರಂತರವಾಗಿ ಲೀನವಾಗುವ ಮತ್ತು ಅನುಸಂಧಾನಕ್ಕೊಳಪಡುವ ಮನಸ್ಥಿತಿಯಾಗಿದ್ದು ಇದನ್ನು ಹೆಗಡೆ ಅವರಲ್ಲಿ ಗುರುತಿಸಬಹುದಾಗಿದೆ.

ಹೆಗಡೆ ಅವರ ಪರಿಸರ ಪ್ರಜ್ಞೆಯನ್ನು ಹೀಗೆ, ಇಂತಿಷ್ಟೇ, ಎಂದು ಅಳೆಯಲಾಗುವುದಿಲ್ಲ. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಪರಿಸರದ ಎಲ್ಲಾ ಆಯಾಮಗಳನ್ನು ಅಂದರೆ, ಭೂಮಿ, ನೀರು, ಜೀವವೈವಿಧ್ಯ, ಅಭಿವೃದ್ಧಿ, ಉತ್ಪಾದಕತೆ, ಕೃಷಿ, ದೇಸೀಯತೆ, ವೈದ್ಯಕೀಯ, ಇಂಜಿನಿಯರಿಂಗ್, ರಾಜಕೀಯ, ತಂತ್ರಜ್ಞಾನದೊಂದಿಗೆ ಡಿಜಿಟಲ್ ಮಾಧ್ಯಮ ಯುಗವನ್ನು ಅವರ ಆಲೋಚನೆಗಳು ಮತ್ತು ಚಿಂತನೆಗಳು ಆವರಿಸಿಕೊಂಡಿವೆ. ಸಂಶೋಧನೆಯ ಅಧ್ಯಯನದಲ್ಲಿ ಎದುರಾಗುವ ಸವಾಲೆಂದರೆ ಅವರು ರಚಿಸಿರುವ ಕೃತಿಗಳಲ್ಲಿ ಶುದ್ಧ ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಕೃತಿಗಳಿಂದ ಪರಿಸರಾತ್ಮಕ ಕೃತಿಗಳನ್ನು ಬೇರ್ಪಡಿಸಿಕೊಳ್ಳುವುದು ಒಂದಾದರೆ, ಅಂಕಣಗಳಲ್ಲಿ ಸಂಶೋಧನಾ ಅಧ್ಯಯನಕ್ಕೆ ಪೂರಕವಾದ ಲೇಖನಗಳನ್ನು ಗುರುತಿಸುವುದು ಮತ್ತೊಂದು ಸವಾಲು. ಏಕೆಂದರೆ ಅವರ ಬರಹಗಳಲ್ಲಿ ಪರಿಸರ, ವಿಜ್ಞಾನ, ತಂತ್ರಜ್ಞಾನ, ಇವೆಲ್ಲಾ ಸಹಸಂಬಂಧದ ವಸ್ತು ವಿಷಯಗಳ ಜೋಡಣೆಗಳಾಗಿರುತ್ತವೆ. ಮತ್ತವು ಪ್ರಸ್ತುತದ ಪರಿಸರ

ಘಟನೆಗಳಿಗೆ ನೇರವಾಗಿ ಟಚ್ ಮಾಡುತ್ತಿರುತ್ತವೆ ಮಾತ್ರವಲ್ಲದೆ ಎದುರಾಗುವ ಸಮಸ್ಯೆಗಳಿಗೆ ಹತ್ತಿರವಾಗುತ್ತಿರುತ್ತವೆ.

ನಾಗೇಶ್ ಹೆಗಡೆ ಅವರನ್ನು ಕೆಲವರು ಎನ್‌ವಿರಾನ್‌ಮೆಂಟಲ್ ಆಕ್ಟಿವಿಸ್ಟ್ ಎನ್ನುತ್ತಾರೆ. ಆಕ್ಟಿವಿಸ್ಟ್ ಪದವನ್ನು ಆಂಗ್ಲ ಭಾಷೆಯಲ್ಲಿ ಭಾಷಾಂತರಿಸಿದರೆ, *the policy or action of using vigorous campaigning to bring about political or social change. "growing activism on the abortion issue"* ಎಂದಾಗುತ್ತದೆ. ಈ ಹೇಳಿಕೆಯ ಅರ್ಥವನ್ನು ಅವಲೋಕಿಸಿದರೆ ಪರಿಸರಾತ್ಮಕವಾಗಿ ಎದುರಾಗುವ ಸಂಧಿಗ್ಧತೆಗಳನ್ನು, ಈ ಭೂಮಿಯ ಅಸ್ಥಿತ್ವದ ಬಗೆಗಿನ ಭೀಕರ ತಲ್ಲಣಗಳನ್ನು, ರಾಜಕೀಯ ಪ್ರೇರಿತ ಪರಿಸರ ವಿರೋಧಿ ಚಟುವಟಿಕೆಗಳನ್ನು ಆಯ್ದು ಮತ್ತು ಸ್ಥಗಿತಗೊಳಿಸುವಲ್ಲಿ ಪ್ರಯತ್ನಿಸುವ ಒಬ್ಬ ಪರಿಸರವಾದಿ ಕಾರ್ಯಕರ್ತ ಎನ್ನಬಹುದಾಗಿದೆ. ಹೆಗಡೆ ಅವರ ಬಹುತೇಕ ಬರಹಗಳು ಮತ್ತು ಪ್ರತಿಪಾದನೆಗಳು ಪರಿಸರವಾದಿ ಕಾರ್ಯಕರ್ತನ ಪ್ರಜ್ಞೆಯ ಭಾಗವಾಗಿಯೇ ಗುರುತಿಸಲ್ಪಡುತ್ತವೆ.

ನಾಗೇಶ ಹೆಗಡೆ ಒಬ್ಬ ಶ್ರೇಷ್ಠ ಪರಿಸರ ತಜ್ಞರು ಹೌದು. ನಿಘಂಟಿನ ಪ್ರಕಾರ **"ಯಾವ ವ್ಯಕ್ತಿಯು ನಿರ್ದಿಷ್ಟ ಪಡಿಸಿದ ಕ್ಷೇತ್ರದಲ್ಲಿ ಅಪಾರ ಜ್ಞಾನ ಹೊಂದಿರುತ್ತಾನೋ ಮತ್ತು ಕೌಶಲಭರಿತನಾಗಿರುತ್ತಾನೋ ಅವನನ್ನು ತಜ್ಞ"** ಎನ್ನಲಾಗುತ್ತದೆ. ಹೆಗಡೆ ಅವರು ಪರಿಸರ ವಿಜ್ಞಾನ ಕ್ಷೇತ್ರದಲ್ಲಿ ಅಪಾರ ಜ್ಞಾನ ಹೊಂದಿದ ಕೌಶಲಭರಿತ ಪರಿಸರ ತಜ್ಞರಾಗಿದ್ದಾರೆ. ಸಿದ್ದಾಪುರ ತಾಲ್ಲೂಕಿನ ಬಕ್ಕೆಮನೆಯಲ್ಲಿ ಜನಿಸಿದವರು. ಅವರೇ ಹೇಳುವಂತೆ ಬಕ್ಕೆಮನೆ ಪರಿಸರವು ಜೀವವೈವಿಧ್ಯದ ಸಿರಿ. ಅಲ್ಲಿನ ಜೀವ ಸಿರಿ ಬೇರೆಲ್ಲೂ ಕಾಣಸಿಗದು. ಉದಾಹರಣೆಗೆ ಬೇರೆ ರಾಷ್ಟ್ರದಲ್ಲಿ ಒಂದು ಎಕರೆ ಭೂಮಿಯಲ್ಲಿ ೩೦ ರೀತಿಯ ಜೀವಿ ಕಂಡುಬಂದರೆ, ಅದರಲ್ಲೂ ಅರೇಬಿಯಾದಲ್ಲಿ ೨೦, ಅಮೆರಿಕಾದಲ್ಲಿ ೮೦ ಜೀವಿ ಕಾಣುವ ಸಾಧ್ಯತೆಯಿದೆ. ಹಾಗೆ ಭಾರತಕ್ಕೆ ಬಂದಾಗ ಒಂದು ಎಕರೆ ಭೂಪ್ರದೇಶದಲ್ಲಿ ೩೦೦೦ ದಿಂದ ೪೦೦೦ ಜೀವಿ ಪ್ರಭೇದವನ್ನು ಕಾಣಲು ಸಾಧ್ಯವಿದೆ. ಅದರಲ್ಲೂ ಪಶ್ಚಿಮ ಘಟ್ಟದಲ್ಲಿ ೩೩ ಲಕ್ಷ ಜೀವ ಪ್ರಭೇದವಿದೆ ಎಂದು ಇತ್ತೀಚೆಗೆ ಅಂದಾಜಿಸಲಾಗಿದೆ[೧೭] ಎಂಬ ವಿವರಣೆಗಳೇ ಅವರ ಪರಿಸರ ಪ್ರಜ್ಞೆಯ ವ್ಯಾಪಕತೆಯನ್ನು ಅರ್ಥೈಸುತ್ತವೆ. ಪರಿಸರದಲ್ಲಿ ಬಯೋಡೈವರ್ಸಿಟಿಯ ಮಹತ್ವವನ್ನು ಜಗತ್ತಿನಲ್ಲಿ ಅವುಗಳು ಸೃಷ್ಟಿಸಿರುವ ಸಹಸಂಬಂಧವನ್ನು ಅವರ ಬಹುತೇಕ ಕೃತಿಗಳಲ್ಲಿ ನೋಡಬಹುದಾಗಿದೆ.

ಇಪ್ಪತ್ತು ವರ್ಷಗಳ ಹಿಂದೆ 'ಇರುವುದೊಂದೇ ಭೂಮಿ' ಹೆಸರಿನ ಹೃದಯಸ್ಪರ್ಶಿ ಕೃತಿಯ ಮೂಲಕ ಕನ್ನಡಕ್ಕೆ ಪರಿಸರ ಸಾಹಿತ್ಯವೆಂಬ ಹೊಸ ಪ್ರಕಾರವನ್ನು ಪರಿಚಯಿಸಿದ ನಾಗೇಶ ಹೆಗಡೆ ವಿಜ್ಞಾನ ಮತ್ತು ಪರಿಸರ ವಿಷಯಗಳ ಮಟ್ಟಿಗೆ ಹೊಸ ಓದುಗ ಬಳಗವನ್ನೇ ಸೃಷ್ಟಿಸಿಕೊಂಡವರು. ಜಾಗತಿಕ ವಿದ್ಯಮಾನಗಳತ್ತ ದೃಷ್ಟಿಯನ್ನು ನೆಟ್ಟಿಟೇ ಸ್ಥಳೀಯ ಆಗುಹೋಗುಗಳನ್ನು ವ್ಯಾಖ್ಯಾನಿಸುವ, ಆ ಮೂಲಕ ನಾಡಿನ ಪ್ರಗತಿಯ ದಿಶೆಯನ್ನು ವಿಶ್ಲೇಷಿಸುವ ಈ ಕೃತಿಯ ಬರಹಗಳು ಓದುಗರನ್ನು ಕ್ಲಿಷ್ಟ ಹಾದಿಯಲ್ಲೂ ಸಲೀಸಾಗಿ ಕೈಹಿಡಿದು ಕೊಂಡೊಯ್ಯುತ್ತವೆ. ಹೊಸ ಚಿಂತನೆಗಳ ಕಿಟಕಿಯನ್ನು ತೆರೆಯುತ್ತಾ ಸಾಗುತ್ತವೆ ಎನ್ನಬಹುದು.

ವಿಚಾರ ಮಾಡುವುದಾದರೆ ಹೆಗಡೆ ಅವರ ಪರಿಸರ ಪ್ರಜ್ಞೆ ಜಾಗತಿಕವನ್ನು ಮೀರಿದ್ದು. ೧೯೭೫ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ದೆಹಲಿ ಗೆಳೆಯರೊಂದಿಗೆ ಸೇರಿ **'ಫ್ರೀ ತಿಂಕರ್ಸ್'** ಎಂಬ ಗುಂಪು ಕಟ್ಟಿದವರು. ಯಾವುದೇ ಪ್ರಾಗ್ಮ್ಯಾಟಿಕ್‌ಗೆ ಅಂಟಿಕೊಳ್ಳದೇ ರಾಜಕೀಯವಿಲ್ಲದೆ ಸಮುಚಿತ ಕ್ಷೇಮದ ಕಡೆಗೆ ಮುಕ್ತವಾಗಿ ಚಿಂತಿಸುವುದು ಆ ಗುಂಪಿನ ಉದ್ದೇಶವಾಗಿತ್ತು. ಹೆಗಡೆ ಅವರ ಪರಿಸರ ಪ್ರಜ್ಞೆಗೆ ಜಾತಿ, ಧರ್ಮ, ರಾಷ್ಟ್ರ, ಖಂಡ ಕೊನೆಗೆ ಈ ಭೂಮಿಯನ್ನು ಮೀರುವ ಶಕ್ತಿಯಿದೆ. **'ವಿ ಆರ್ ಆಲ್ ಟುಗೆದರ್' 'ವಿ ಆರ್ ಆಲ್ ಪ್ಲಾನೆಟ್ ಅರ್ಥ್‌ನ ಪ್ಲಾನೆಟರಿ ಸಿಟಿಜನ್ಸ್'** ಎಂಬ ತತ್ವವುಳ್ಳದ್ದು. ಅವರು ಭೂಮಿ ಕುರಿತು ಹೀಗೆ ಹೇಳಿದ್ದಾರೆ "೪೦೦೦ ವರ್ಷಗಳಷ್ಟು ಹಿಂದೆ ನಮ್ಮವರು ವೇದ ಉಪನಿಷತ್ತುಗಳಲ್ಲಿ ಭೂಮಿಯ ರಕ್ಷಣೆ ಬಗ್ಗೆ ಬರೆದಿದ್ದಾರೆ. ಭೂಮಿಯ ಮೂಲಕ ಸೂರ್ಯನೇ ಶ್ರೇಷ್ಠ ಎಂದು ಅದರಲ್ಲಿ ಬರೆದಿದ್ದಾರೆ. ಅದ್ಭುತವಾದ ವಾಕ್ಯಗಳಿವೆ. ನಾನು ಬೇರೆ ಅಲ್ಲ, ನೀವು ಬೇರೆ ಅಲ್ಲ ಎಂಬುದನ್ನು ಇಂದು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಬೇಕು. **ಅಯಾಮ್ ನಾಟ್ ಡಿಫ್ರೆಂಟ್ ಫ್ರಂ ಯು"** ಎನ್ನುವಂತಹ ಜಾಗತಿಕ ಪರಿಸರ ಪ್ರಜ್ಞೆ ಅವರದ್ದು. ಅದಕ್ಕೆ ಅವರು ಕೊಡುವ ಉದಾಹರಣೆಗಳು ಹೀಗಿವೆ. "ಇಂದು ಬೆಳಿಗ್ಗೆ ನಾವು ಪಲಾವ್ ತಿಂದು ಬಂದಿದ್ದೇವೆ ಎಂದಿಟ್ಟುಕೊಳ್ಳೋಣ. ಇದರಲ್ಲಿರುವ ಸಾಸಿವೆ, ಕಡಲೆಬೀಜ, ಬಟಾಣಿ, ಅಕ್ಕಿ ಅಥವಾ ಇಂದು ನಾವು ಚಪಾತಿ ತಿಂದಿದ್ದೇವೆ ಎಂದರೆ ಇದರಲ್ಲಿನ ಗೋಧಿ ಇದು ನಮ್ಮ ಶರೀರವನ್ನು ಸೇರಿ ಜಠರದಲ್ಲಿ ಪಚನವಾಗಿ, ಯಕೃತ್ ಸೇರಿ, ರಕ್ತಗತವಾಗಿ ಹೃದಯ ಸೇರಿ, ಶ್ವಾಸಕೋಶದಲ್ಲಿ ಸೇರಿ ನಮ್ಮದಾಗುತ್ತದೆ. ಪಂಜಾಬ್‌ನಲ್ಲಿ ಬೆಳೆದ ಗೋಧಿ ಅಲ್ಲಿನ ಮಣ್ಣಿನೊಂದಿಗೆ ಬೆರೆತು, ಗಾಳಿ ಪಡೆದು, ಸಟ್ಲೇಜ್ ನದಿ ನೀರಿನೊಂದಿಗೆ ಬೆರೆತು ನಮ್ಮನ್ನು ಸೇರುತ್ತದೆ. ಅದೆಲ್ಲಾ ಸೇರಿ ನಾವಾಗುತ್ತೇವೆ. ನಾವ್ ಬೇರೆ ಅಲ್ಲ, ಆ ಗಿಡ ಮರ ಬೇರೆ ಅಲ್ಲ, ಹಾವು ಹಕ್ಕಿ ಪಕ್ಷಿಗಳು ಬೇರೆ ಅಲ್ಲ. ವಿ ಆರ್ ಆಲ್ ಟುಗೆದರ್. ಹೋಲ್ ಅರ್ಥ್ ಪ್ಲಾನೆಟ್ ಇಸ್ ಒನ್ ಸ್ಪೀಷೀಸ್. ಮನುಷ್ಯನಾಗಿ ನಮ್ಮ ವಿಶೇಷ ಏನೆಂದರೆ ನಾವು ಎಕ್ಸ್ಟ್ರ ಅಡಿಷನಲ್ ಫ್ಯಾಕಲ್ಟೀಸ್ ಅಷ್ಟೇ. ನಾವು ಇನ್ನೊಬ್ಬರಿಗೆ ಈ ಭೂಮಿಯನ್ನು ಹಾಳು ಮಾಡಬೇಡಿ, ಇದನ್ನು ರಕ್ಷಣೆ ಮಾಡೋಣ, ಇದಕ್ಕೆ ಮೋಸ ಮಾಡೋದು ಬೇಡ ಎಂದು ಹೇಳಬಹುದು. ಇದೆಲ್ಲಾ ನಮ್ಮೊಳಗೆ ಅಂತರಂಗದಲ್ಲಿ ಇದೆ. ಆದರೆ ಇದು ಸಂಸ್ಕೃತಿಯಾಗಿ ಹೊರಗೆ ಬಂದಿಲ್ಲ. ನಮ್ಗೆ ನಮ್ಮ ಜಾತಿ ಬೇಕು. ಧರ್ಮ ಬೇಕು. ರಾಜಕೀಯ ಪಕ್ಷಗಳು ಬೇಕು. ಹೆಚ್ಚು ಅಂದ್ರೆ ನಮ್ಮ ದೇಶ ಬೇಕು. ನಮಗೆ ಭೂಮಿ ಬೇಡ. ಆದರೆ ನಾವು ಯಾರು ಈ ಭೂಮಿಯಿಂದ ಬಂದವರಲ್ಲವೆ? ಬಿಲಾಂಗ್ ಟು ದಿಸ್ ಪ್ಲಾನೆಟ್ ಅರ್ಥ್ ನಮ್ಮ ಎಲ್ಲಕ್ಕಿಂತ ಹೆಚ್ಚಿನ ಪ್ರಣಾಮಗಳು, ನಮ್ಮ ಪ್ರಯತ್ನಗಳು, ಆಲೋಚನೆಗಳು ಈ ಬಗ್ಗೆ ಮೊದಲ ಸ್ಥಾನದಲ್ಲಿರಬೇಕು. ವಿ ಆರ್ ಆಲ್ ಪ್ಲಾನೆಟ್ ಅರ್ಥ್ ಪ್ಲಾನೆಟರಿ ಸಿಟಿಜನ್ಸ್. ಆಮೇಲೆ ದೇಶದ ಸಿಟಿಜನ್ಸ್. ಪ್ಲಾನೆಟರಿ ಸಿಟಿಜನ್ಸ್ ಆದಾಗ ಜಾತಿ ಬೇಡ, ರಾಜಕೀಯ ಬೇಡ, ಹಣ ಬೇಡ. ಲೌಡ್ ಸ್ಪೀಕರ್‌ನಲ್ಲಿ ಕೂಗುತ್ತಿರುವ ರಾಜಕೀಯ ಭಾಷಣಗಳೆಲ್ಲ ಬೋಗಸ್ ಎಂದಾಗುತ್ತದೆ. ಇಂತಹ ಮನುಕುಲವನ್ನು ಹುಟ್ಟುಹಾಕಲು ಭೂದೇವಿ ಹಲವರಿಗೆ ಸೌಲಭ್ಯ ಕೊಟ್ಟಿದ್ದಾಳೆ. ಆ ಸೌಲಭ್ಯವೇ ನಾವಾಗೋಣ"[೧೮] ಎನ್ನುತ್ತಾರೆ.

ಹೆಗಡೆ ಅವರ ಪರಿಸರ ಪ್ರಜ್ಞೆ ವಾಸ್ತವವಾದುದಾಗಿದೆ. ಪರಿಸರ ಚಳುವಳಿಗಳ ಹೋರಾಟದ ಕಾಲಘಟ್ಟದಲ್ಲಿ ಹೇಳುವುದಾರೆ ೩೦ ವರ್ಷದ ಹಾದಿಯನ್ನು ನಾವೆಲ್ಲಾ ಕ್ರಮಿಸಿದ್ದೇವೆ.

ಹಿಂದೆಂದಿಗಿಂತಲೂ ಇಂದಿಗೆ ಈ ಪ್ರಜ್ಞೆ ಅಗತ್ಯ ಮತ್ತು ಅನಿವಾರ್ಯವೆನಿಸಿಕೊಳ್ಳುವ ವಾತಾವರಣ ನಿರ್ಮಾಣಗೊಂಡಿದೆ. ಈ ಪ್ರಜ್ಞೆ ಕೇವಲ ಮಾನವನ ಉಳಿವಿನ ಪ್ರಶ್ನೆ ಮಾತ್ರವಲ್ಲ ಜೀವಸಂಬಂಧಗಳ ಬೆಸುಗೆಯನ್ನು ಎಚ್ಚರಿಸುವಂತದ್ದು. ಭೂಮಿಯ ಸ್ಥಿತಿ ಹೀಗಾಗುತ್ತಿದೆಯಲ್ಲಾ ಎಂಬ ಮರುಕ ಹುಟ್ಟಿಸುವಂತದ್ದು. ಭೂಮಿಯ ರಕ್ಷಣೆಯ ಚಿಂತನೆಯ ತುರ್ತು ಪ್ರತಿ ಮನುಷ್ಯನಿಗೂ ಬಂತೆಂದರೆ ಈ ಪ್ರಕೃತಿಯಲ್ಲಿ ಉಳಿದೆಲ್ಲಾ ತಾನಾಗೆ ಸರಿಹೋಗಬಲ್ಲದು ಎಂಬ ಆಶಾದಾಯಕವಾದ ಪರಿಸರ ಪ್ರಜ್ಞೆ ಅವರದ್ದಾಗಿದೆ. ಈ ರೀತಿಯ ಸರ್ವಕಾಲಿಕ ಪರಿಸರ ಪ್ರಜ್ಞೆಯ ಮೌಲ್ಯವನ್ನು ಅವರ ಕೃತಿಗಳಲ್ಲಿ ವಿಫುಲವಾಗಿ ಕಾಣಬಹುದು.

ಅಭಿವೃದ್ಧಿ ವಾಸ್ತವದ ಬಗ್ಗೆ ಮಾತನಾಡುತ್ತಾ, ೧೦೦ ವರ್ಷಗಳಷ್ಟು ಹಿಂದೆ ನಾವು ಈ ಜಗತ್ತಿನಲ್ಲಿ ನೂರು ಕೋಟಿ ಇದ್ದೆವು. ಇಂದು ೭೦೦ ಕೋಟಿ ಆಗಿದ್ದೇವೆ. ನಾವೆಲ್ಲಾ ಸೇರಿ ಈ ಭೂಮಿಯ ಮೇಲೆ ಸವಾರಿ ಮಾಡುತ್ತಿದ್ದೇವೆ. ಹಾರೆ, ಗುದ್ದಲಿ, ಸನಕೆ ಹಿಡಿವ ಕೈಗೆ ಬಲ್‌ಡೋಜರ್, ಜೆಸಿಬಿ, ಕ್ರೇನ್ ಬಂದಿದೆ. ಸಾವಿರ ಜನ ಮಾಡೋ ಕೆಲಸವನ್ನ ಒಬ್ಬನೇ ಮಾಡುವ ಹಂತಕ್ಕೆ ತಲುಪಿದ್ದೇವೆ. ಪು.ತಿ.ನ. ಅವರ ಹೇಳುತ್ತಿದ್ದ ಮಾತೊಂದಿದೆ ಎನ್ನುತ್ತಾ, **"ಮಾಯಮಾಟ ಮಾಡೋರು ಇಲ್ಲಿ ಒಂದು ನಿಂಬೆಹಣ್ಣಿಗೆ ಸೂಜಿಯಿಂದ ಚುಚ್ಚಿದರೆ ಅಲ್ಲೆಲೋ ಒಬ್ಬನ ಕೈ ಸೊಟ್ಟಗಾಗುತ್ತಿತ್ತಂತೆ. ಅದು ಈಗ್ಲೋ ಇದೇರಿ. ಒಬ್ಬ ಅಧಿಕಾರಿ ಡ್ಯಾಂ ಕಟ್ಟಲು ೩೨೦೦ ಎಕರೆ ಭೂಮಿ ಮುಳುಗಡೆ ಮಾಡುವ ಬಗ್ಗೆ ಬರೆದಿರುವ ಫೈಲ್‌ನಲ್ಲಿ ಇಲ್ಲೆಲ್ಲೊ ಒಂದು ಸೈನ್ ಹಾಕಿದ್ರೆ ಸಾಕು, ಅಲ್ಲೆಲ್ಲೋ ಅದು ಢಮಾರ್. ಒಬ್ಬ ಅಧಿಕಾರಿ ನೆಲ ಪ್ರೀತಿಸೋನಾದ್ರೆ, ಈ ಭೂಮಿ ರಕ್ಷಿಸೋನಾದ್ರೆ ಅವನ ಒಂದು ಸೈನ್ ಅದೆಷ್ಟೋ ಜನರ ಜೀವನಾಡಿಗಳ ಬಾಳು ಬೆಳಗುವಂತೆ ಮಾಡುತ್ತೆ. ಅದೆಷ್ಟೋ ಜೀವಿಗಳ ರಕ್ಷಣೆ ಮಾಡುತ್ತೆ. ಇಂದು ಯಮುನಾ ನದಿಗೆ ಮಾನವಹಕ್ಕು ಸಿಕ್ಕಿದೆಯಂತೆ. ನಾಳೆ ಈ ಭೂಮಿಯ ಎಲ್ಲಾ ಜೀವಿಗಳಿಗೂ ಬದುಕುವ ಹಕ್ಕು ಸಿಗುವ ಸಂದೇಹವಿಲ್ಲ."**[೧೯] ಎನ್ನುತ್ತಾರೆ.

ಇಂದು ಭೂಮಿಯ ಜನ್ಮ ದಿನ ಎಂದು ವೇದಿಕೆಯಲ್ಲಿ ಮಾತನಾಡುತ್ತಾ ಜಗತ್ತಿನ ಎಲ್ಲಾ ರಾಷ್ಟ್ರಗಳು ಈ ದಿನವನ್ನು ಆಚರಿಸುತ್ತಿವೆ. ದುರಂತವೆಂದರೆ ನಾವು ಒಂದೂ ಕಾರ್ಯಕ್ರಮವನ್ನು ಮಾಡಲಿಲ್ಲ. ೧೦ ವರ್ಷಗಳ ಹಿಂದೆ ನಾನು ಮತ್ತು ಈಶ್ವರ ಪ್ರಸಾದ್ ಗಲ್ಲಿ ಗಲ್ಲಿ ತಿರುಗಿ ಇದನ್ನು ಆಗಲೇ ಮಾಡಿದ್ವಿ, ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮದಲ್ಲಿ ಜಾಗೃತಿ ಆಗಬೇಕು. ಅಂತಹ ಒಂದು ಕಾರ್ಯಕ್ರಮವನ್ನು ಕಾಣಲು ಆಗಲಿಲ್ಲ. ಭೂಮಿಯ ಜನ್ಮ ದಿನದ ಆಶಯ ಏನೆಂದರೆ **'ಎನ್‌ವಿರಾನ್‌ಮೆಂಟ್ ಲಿಟರರಿ' 'ಪರಿಸರ ಸಾಕ್ಷರರಾಗುವುದು' 'ಭೂ ಸಾಕ್ಷರರಾಗುವುದು'** ಎಂದಿದ್ದಾರೆ ನಾಗೇಶ ಹೆಗಡೆ. 'ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು' 'ಇರುವುದೊಂದೇ ಭೂಮಿ' ಕೃತಿಯಲ್ಲಿ ಭೂ ಜನ್ಮದಿನದ ವೈಜ್ಞಾನಿಕತೆಯನ್ನು ಮತ್ತು ವೈಚಾರಿಕತೆಯನ್ನು ಪ್ರಸ್ತುತ ಆಗುತ್ತಿರುವ ಭೀಕರ ತಲ್ಲಣಗಳೊಂದಿಗೆ ಸಮೀಕರಿಸಿ ಹಾಗೂ ಗಂಭೀರತೆಯೊಂದಿಗೆ ದಾಖಲಿಸಿ ಭೂಮಿಯ ಉಳಿವಿನ ಮಹತ್ವವನ್ನು ಹೆಗಡೆ ಪೃಥಕ್ಕೇರಿಸಿದ್ದಾರೆ. ಅವರ ಎಲ್ಲಾ ಕೃತಿಗಳಲ್ಲಿಯೂ ಬೇರೆ ಬೇರೆ ಶೀರ್ಷಿಕೆಗಳ ಲೇಖನಗಳಲ್ಲಿಯೂ ಈ ಆಶಯ ಪ್ರತಿಧ್ವನಿಸುತ್ತಲೇ ಇರುತ್ತದೆ.

ಹೆಗಡೆ ಅವರು ಹೆಚ್ಚು ಇಕಾಲಾಜಿಕಲ್ ಫ್ಯಾಕ್ಚುವಲ್ಸ್ ಕಡೆ ತಮ್ಮ ಗಮನವನ್ನು ಆದ್ಯತೆಗೊಳಪಡಿಸುವ ಕಾರಣ ನೆಗೆಟಿವ್ ಅಂಶಗಳ ಟೀಕೆ ಟಿಪ್ಪಣಿಗಳ ಅವಲೋಕನ ಅಧ್ಯಯನಕಾರನಿಗೆ ಕಷ್ಟಸಾಧ್ಯ. ಅದು ಹೀಗಿರಬೇಕಿತ್ತು, ಹಾಗಿರಬೇಕಿತ್ತು ಎನ್ನದೆ ಪರಿಸರದ ಸಮಸ್ಯೆಗಳಿಗೆ ಪರ್ಯಾಯ ಪರಿಹಾರೋಪಾಯಗಳನ್ನು ನಿದರ್ಶನಗಳ ಸಹಿತ ಸೂಚಿಸುವುದು ಇವರ ಕೆಲವು ಅಂಕಣದ ಬರಹಗಳ ವಿಶಿಷ್ಟತೆಯಾಗಿದೆ. **"ಬೃಹತ್ ಬೆಂಗಳೂರಿಗೆ ತಂತ್ರಜ್ಞಾನ ಅಷ್ಟೇ ವೇಗವಾಗಿ ಬರುತ್ತದೆ. ಪಶ್ಚಿಮದ ಆಧುನಿಕ ಆಲೋಚನೆಗಳು ಸಹ ಅಷ್ಟೇ ವೇಗವಾಗಿಯೇ ಬರುತ್ತವೆ. ಆದರೆ ತ್ಯಾಜ್ಯ ವಿಲೇವಾರಿ ತಂತ್ರಜ್ಞಾನ ಮಾತ್ರ ಏಕೆ ವೇಗವಾಗಿ ಬರಲಿಲ್ಲ ಎಂದು ಪ್ರಶ್ನಿಸಿಕೊಳ್ಳುತ್ತಾ, ಸಿಂಗಾಪುರ್, ಸ್ಟಾಕ್‌ಹೋಂನಲ್ಲಿ ಜಾರಿಯಲ್ಲಿರುವ ತ್ಯಾಜ್ಯ ವಿಲೇವಾರಿ ಕ್ರಮಗಳನ್ನು ನಾವೇಕೆ ಜಾರಿಗೊಳಿಸಲು ಮನಸ್ಸು ಮಾಡುತ್ತಿಲ್ಲ?"**[೨೦] ಎಂಬ ಮಾತಿನಲ್ಲೇ ಸದ್ಯದ ಪರಿಹಾರವನ್ನು ಸೂಚಿಸುತ್ತಾರೆ.

ಹೆಗಡೆ ಅವರು ಕೆಲವು ಲೇಖನಗಳಲ್ಲಿ ಪರಿಸರದ ಸಮಸ್ಯೆಗಳ ಸ್ವರೂಪ ಬಿಡಿಸುತ್ತಾರೆ ಮತ್ತು ಕಾರಣಸಹಿತ ಪರಿಣಾಮಗಳನ್ನು ತಿಳಿಸುತ್ತಾರೆ. ಒಂದು ಕೃತಿಯಲ್ಲಿ ಕೊರತೆಯಾಗಿದ್ದ ಪರಿಕಲ್ಪನೆಗಳ ಬಿಡಿಸುವಿಕೆಯನ್ನು ಬೇರೆ ಬೇರೆ ಕೃತಿಯ ಲೇಖನದಲ್ಲಿಯೂ ಮುಂದುವರೆಸುವವರಲ್ಲದೆ ಮತ್ತು ವಿಜ್ಞಾನ ವಿಶೇಷ ಅಂಕಣದ ಭಾಗವಾಗಿಯೂ ಕೆಲವೊಮ್ಮೆ ತಂದಿರುತ್ತಾರೆ. ಮತ್ತೊಮ್ಮೆ ವಿಜ್ಞಾನ ವಿಶೇಷ ಅಂಕಣದ ಲೇಖನಗಳನ್ನು ಸಂಗ್ರಹಿಸಿ ಒಂದು ಕೃತಿಯಾಗಿಸಿರುವುದನ್ನು ನಾವು ಕಾಣಬಹುದಾಗಿದೆ. ಉದಾ:'ಅಪರಂಜಿ' ಪತ್ರಿಕೆಗೆ ಬರೆದ ಬಿಡಿ ಲೇಖನಗಳು ಸೇರಿ 'ಹಳ್ಳಿಮುಕ್ಕ ಎಲ್ಲೆಲ್ ಹೊಕ್ಕ' ಕೃತಿಯಾಗಿದೆ. ಅಭಿವೃದ್ಧಿಯ ಅಂಧಯುಗ ಮತ್ತು ಭೂಮಿಯೆಂಬ ಗಗನನೌಕೆ ಕೃತಿಯು ಅಷ್ಟೇ. ಇವು ಪತ್ರಿಕೆ ಮತ್ತು ಸಂಘ ಸಂಸ್ಥೆಗಳಿಗೆ ಬರೆದ ವಿವಿಧ ಲೇಖನಗಳ ಒಟ್ಟು ಸಂಗ್ರಹವೆನಿಸಿಕೊಳ್ಳುತ್ತವೆ. ಲೇಖಕರು ಸಹ ಈ ಬಗ್ಗೆ ಮುನ್ನುಡಿಯಲ್ಲಿ ತಿಳಿಸಿರುವುದನ್ನು ಕಾಣಬಹುದು. ಕೆಲವು ಪರಿಕಲ್ಪನೆಗಳನ್ನು ಮತ್ತೆ ಮತ್ತೆ ಆಯ್ದು ಪ್ರಚಲಿತ ಘಟನೆಗಳೊಂದಿಗೆ ಸಮೀಕರಿಸಿ ಸೂಕ್ತ ಸಮರ್ಥನೆಗಳ ಮೂಲಕ ಬ್ಯಾಲೆನ್ಸ್ ಮಾಡಿರುವುದನ್ನು ಅವರ ಕೃತಿಗಳಲ್ಲಿ ನೋಡಬಹುದಾಗಿದೆ. ಕೆಲವು ಲೇಖನಗಳ ಹೂರಣವೇ ಪುನರಾವರ್ತನೆ ಎನಿಸಿಕೊಳ್ಳುವ ಸಂದರ್ಭವೂ ಲಭ್ಯವಾಗುವುದು.

'ಇರುವುದೊಂದೇ ಭೂಮಿ', 'ಕೆರೆಯಲಿ ಚಿನ್ನ ಕೆರೆಯೇ ಚಿನ್ನ' ಮತ್ತು 'ಆಚಿನ ಲೋಕಕ್ಕೆ ಕಾಲಕೋಶ' ಪುಸ್ತಕಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜೊತೆಗೆ ಶಿವರಾಮಕಾರಂತ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಜೀವಮಾನ ಸಾಧನೆಗಾಗಿ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಬಂದಿದ್ದರೂ ಕನ್ನಡ ಸಾಹಿತ್ಯ ಕ್ಷೇತ್ರದ ಅವಜ್ಞತೆಯೋ ಏನೋ! ಇವರ ಕೃತಿಗಳು ಸಾಹಿತಿಕಾರರ ವಿಮರ್ಶೆಯಲ್ಲಿ ಅಷ್ಟಾಗಿ ಪರಿಗಣಿಸಲ್ಪಟ್ಟಿಲ್ಲ. ಹೆಗಡೆ ಅವರ ಸಮಕಾಲೀನ ಸಾಹಿತಿಗಳು ಅವರ ಕೃತಿಗಳನ್ನು ಬಹುಮುಖಿ ಅವಲೋಕನಕ್ಕೆ ಒಳಪಡಿಸಿದ ಉದಾಹರಣೆಗಳು ಅಪರೂಪ. ಹೆಗಡೆ ಅವರು ಪರಿಸರದವರು, ಸಾಹಿತ್ಯಕ್ಕೂ ಅವರ ಕೃತಿಗಳಿಗೂ ಸಂಬಂಧವಿಲ್ಲ ಎನ್ನುವಂತಹ ಧೋರಣೆ ಸಾಹಿತ್ಯ ಕ್ಷೇತ್ರದಲ್ಲಿರಬಹುದೇನೊ ಎಂಬ ಅಭಿಪ್ರಾಯ ವ್ಯಕ್ತವಾಗುವುದು. ಜೊತೆಗೆ ಈ ಪ್ರಶ್ನೆಗಳು ಕೂಡ ಅಧ್ಯಯನ ಸಂದರ್ಭದಲ್ಲಿ ಎದುರಾಗುವವು. ಕಾರಂತರು ವಿಜ್ಞಾನ ಮತ್ತು ವೈಚಾರಿಕತೆ ಕುರಿತು ಬರೆಯಲಿಲ್ಲವೇ? 'ಪ್ರಾಣಿ ಪ್ರಪಂಚ'ದ ಸೃಷ್ಟಿ ಸೃಜನೆಗೊಳ್ಳಲಿಲ್ಲವೆ?

ಬಿ.ಜಿ.ಎಲ್ ಸ್ವಾಮಿ ಅವರು ಬಾಟ್ನಿ ವಿಷಯವನ್ನು ಕೇಂದ್ರೀಕರಿಸಿ ಸಾಹಿತ್ಯಾತ್ಮಕವಾಗಿ 'ಹಸುರು ಹೊನ್ನು' ರಚಿಸಲಿಲ್ಲವೇ? ಅವುಗಳನ್ನೆಲ್ಲಾ ಸಾಹಿತ್ಯ ಕ್ಷೇತ್ರ ಒಪ್ಪಿಕೊಂಡಿದೆ ಎಂದಮೇಲೆ ಹೆಗಡೆ ಹೇಗೆ ಸಾಹಿತ್ಯಕ್ಕೆ ಅಪರಿಚಿತವಾಗಬಲ್ಲರು? ಎಂದೆನ್ನಿಸುತ್ತದೆ.

ಸಂಶೋಧನೆಯ ಅಧ್ಯಯನದಲ್ಲಿ ಎದುರಾಗುವಸಮಸ್ಯೆಯೆಂದರೆ ತೇಜಸ್ವಿ ಅವರ ಕೃತಿಗಳಿಗೆ ಸಿಗುವಂತಹ ವಿಮರ್ಶೆಗಳಂತೆ ದೊಡ್ಡ ಪ್ರಮಾಣದ ವಿಮರ್ಶೆಗಳಾಗಲಿ, ಟೀಕೆ ಟಪ್ಪಣಿಗಳಾಗಲಿ ನಾಗೇಶ ಹೆಗಡೆ ಅವರ ಕೃತಿಗಳಿಗೆ ಸಾಕಷ್ಟು ಸಿಗಲಾರವು. ಬ್ಲಾಗ್, ಇ–ಮೀಡಿಯಾಗಳನ್ನು ಶೋಧಿಸಿದರೂ ಅವುಗಳಲ್ಲಿ ಅಪ್‌ಲೋಡ್ ಆದ ಬಹಳಷ್ಟು ಸಂದರ್ಶನಗಳು ಶುದ್ಧ ವಿಜ್ಞಾನ, ಡಿಜಿಟಲ್ ತಂತ್ರಾಂಶ ಮತ್ತು ಆಧುನಿಕ ತಂತ್ರಜ್ಞಾನದ ಬಗ್ಗೆ ಹೆಚ್ಚಾಗಿದ್ದು, ಅವರನ್ನು ಈ ಕುರಿತು ಸಂದರ್ಶಿಸಿವೆ. ಪ್ರಾಯಶಃ ತೇಜಸ್ವಿ ಕೃತಿಗಳು ಸಾಹಿತ್ಯ ಪ್ರಕಾರವಾದ ಕತೆ ಕಾದಂಬರಿಯ ಮೂಲಕ ಸೃಜನಾತ್ಮಕ ಪಾತ್ರಗಳ ಸೃಷ್ಟಿಯೊಂದಿಗೆ ಪರಿಸರವನ್ನಾಗಲಿ ಅಥವಾ ಪರಿಸರದ ವಸ್ತು ವಿಷಯವನ್ನಾಗಲಿ ಹಾಗೂ ವಿಜ್ಞಾನದ ವೈಚಾರಿಕತೆಯನ್ನಾಗಲಿ ತೆರೆದುಕೊಳ್ಳದಿದ್ದರೆ, ತೇಜಸ್ವಿ ಅವರ ಕೃತಿಗಳಿಗೂ ಹೀಗಾಗುತ್ತಿದ್ದಿರಬಹುದೇನೊ ಎಂಬ ಭಾವನೆ ಒಂದು ಕ್ಷಣ ಹಾದು ಹೋಗುವುದು ಸಹಜ. ಅವು ಸಹ ವೈಚಾರಿಕ ಅಥವಾ ಸೃಜನೇತರ ವಿಜ್ಞಾನ ಸಾಹಿತ್ಯದ ಭಾಗವಾಗುತ್ತಿದ್ದವೋ ಏನೊ. ಕುವೆಂಪು ನಾಡಿನ ಮಹಾನ್ ವ್ಯಕ್ತಿಯಾಗಿದ್ದು ಅವರ ಕೃತಿಗಳು ಸೃಷ್ಟಿಸಿರುವ ಓದುಗ ಬಳಗದ ಪ್ರಭಾವದಿಂದಲೋ, ಮಗನ ಚಿಂತನೆಗಳು ಕೃತಿಗಳಲ್ಲಿ ಯಾವ ದಿಕ್ಕಿನೆಡೆಗೆ ಸಾಗುತ್ತಿವೆ ಎಂಬುದನ್ನು ಕಂಡುಕೊಳ್ಳಲು ಹಾಗೂ ಸ್ವಯಂ ಕೈಗೊಂಡ ತೀರ್ಮಾನಗಳಂತೆಯೇ ಜೀವಿಸಿದ ಮತ್ತು ಹಾಗೆಯೇ ಬದುಕು ನಡೆಸಿದ ಅವರ ಜೀವನ ಕ್ರಮದ ಆಸಕ್ತಿಯ ಭಾಗವಾಗಿಯೋ, ಅಥವಾ ಸಮಾಜವಾದ ಮತ್ತು ಲೋಹಿಯಾ ಚಿಂತನೆಗಳಿಂದ ಪ್ರಭಾವಿತರಾಗಿದ್ದು ಸಾಮಾಜಿಕ ವ್ಯವಸ್ಥೆಯ ಅಸಂಬದ್ಧ ನಿಲುವುಗಳಿಗೆ, ಪ್ರಕೃತಿಯನ್ನು ಕಡೆಗಾಣಿಸುವ ಸರ್ಕಾರದ ನೀತಿ ನಿರೂಪಣೆಗಳಿಗೆ ರಾಜಿಯಾಗದ ಅವರ ನೇರ, ನಿರ್ದಾಕ್ಷಿಣ್ಯ, ನಿಷ್ಠುರ ವ್ಯಕ್ತಿತ್ವದ ಕುತೂಹಲವೂ ಕೂಡ ಒಟ್ಟಾಗಿ ಸೇರಿಕೊಳ್ಳುತ್ತಾ ತೇಜಸ್ವಿ ಕೃತಿಗಳು ಹೆಚ್ಚು ವಿಮರ್ಶಿಸಲು ಮತ್ತು ಬಹು ಆಯಾಮಗಳ ದೃಷ್ಟಿಕೋನದೊಂದಿಗೆ ಅವುಗಳಲ್ಲಿರುವ ವಸ್ತು ವಿಷಯವನ್ನು ಅವಲೋಕಿಸಲು ಕನ್ನಡ ಸಾಹಿತ್ಯ ಸಂದರ್ಭಗಳು ಮುಂದಾದವು ಎಂದೆನಿಸುವುದು.

ಅಪ್ಪಿಕೋ ಚಳುವಳಿಯಲ್ಲಿ ನೇರವಾಗಿ ಭಾಗಿಯಾಗಿದ್ದ ಭೂವಿಜ್ಞಾನ ಪ್ರಾಧ್ಯಾಪಕರಾಗಿದ್ದ ನಾಗೇಶ ಹೆಗಡೆ ಅವರು ಕನ್ನಡ ಪತ್ರಿಕೋದ್ಯಮ ಕಂಡ ಅಪರೂಪದ ಪರಿಸರ ತಜ್ಞ. ಎರಡೂವರೆ ದಶಕಗಳಿಗೂ ಮೀರಿ 'ವಿಜ್ಞಾನ ವಿಶೇಷ' ಅಂಕಣವನ್ನು ಪ್ರಜಾವಾಣಿ ಪತ್ರಿಕೆಗೆ ಬರೆದ ಕೀರ್ತಿ ಅವರದ್ದು. ವಿಜ್ಞಾನವನ್ನು ಸಾಧ್ಯವಾದಷ್ಟೂ ಸರಳವಾಗಿ ನಿರೂಪಿಸಬೇಕು ಹಾಗೆಯೇ ಪರಿಸರದ ಬಗ್ಗೆ ಓದುಗರನ್ನು ಪ್ರಜ್ಞಾವಂತರನ್ನಾಗಿಸಬೇಕೆಂಬ ತುಡಿತ ಅವರ ಬಹುತೇಕ ಲೇಖನಗಳಲ್ಲಿ ವ್ಯಕ್ತವಾಗಿದೆ.

ನಾಡಿನ ಐತಿಹಾಸಿಕ ದೃಷ್ಟಿಯಿಂದ 'ಕೈಗಾ' ಪರಮಾಣು ಸ್ಥಾವರ ಸ್ಥಾಪನೆಯ ವಿರುದ್ಧ ಅವರ ಲೇಖನಾಧಾರಿತವಾಗಿ ಹರಿತಗೊಂಡ ಚಳುವಳಿ ಇಂದಿಗೂ ಸ್ಮರಣಾರ್ಹ. ಭವಿಷ್ಯಕ್ಕೆ ನ್ಯೂಕ್ಲಿಯಾರ್ ಎನರ್ಜಿ ಒಡ್ಡುವ ಆತಂಕಗಳ ಬಗ್ಗೆ ಜನಸಮುದಾಯವನ್ನು ಹೆಗಡೆ ಎಚ್ಚರಿಸಿದ್ದು

ಈಗ ಇತಿಹಾಸ. ಭವಿಷ್ಯಮುಖಿ ಆಲೋಚನೆಗಳಿಗೆ ಅವರ ಲೇಖನಗಳು ಮುಖಾಮುಖಿಯಾಗಿದ್ದರೂ, ಅಣುಸ್ಥಾವರಕ್ಕೆ ವಿರೋಧ ಒಡ್ಡಿದರೂ ಅದನ್ನು ನಿಲ್ಲಿಸಲಾಗಲಿಲ್ಲ ಎಂಬ ವಿಷಾದವು ನಮ್ಮೊಂದಿಗಿದೆ. ನಾವೀಗ ಅವನ್ನೆಲ್ಲಾ ದಾಟಿ ಬಹುದೂರ ಬಂದಿದ್ದೇವೆ. ಆದರೆ ಮುಂದೆ? ಮತ್ತೆ ಮತ್ತೆ ಕೇರಳ ಮತ್ತು ಕೊಡಗು ನೆನಪಾಗುತ್ತಲೇ ಇರುತ್ತದೆ. ಇಂದಿನ ನಮ್ಮ ಪರಿಸರದ ದಾರುಣ ಸ್ಥಿತಿಯಲ್ಲಿ ಹೆಗಡೆ ಅವರ ಲೇಖನಗಳು ಸೋತು ಗೆದ್ದು ಪ್ರಸ್ತುತವಾಗುತ್ತಿವೆ.

ಸುಧಾ ಪತ್ರಿಕೆಯನ್ನು ವಿಜ್ಞಾನ ಮುಖಿಯಾಗಿಸುವಲ್ಲಿ ಅವರ ಶ್ರಮ ಅನನ್ಯ. 'ಚೇತನ ಶೀತಲಭಾವಿ', 'ಷಡಕ್ಷರಿ', 'ಎನ್ನೆಚ್' ಮತ್ತಿತರ ಗೌಪ್ಯನಾಮಗಳಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ನಡೆದ ಅಂತಾರಾಷ್ಟ್ರೀಯ ಮಟ್ಟದಲ್ಲಿನ ಚಳುವಳಿಗಳ ಕುರಿತು ಆಪ್ತಲೇಖನಗಳನ್ನವರು ಬರೆದಿದ್ದಾರೆ. ಅವರ ಜನಪ್ರಿಯ ಪುಸ್ತಕಗಳಾದ 'ಇರುವುದೊಂದೇ ಭೂಮಿ', 'ಪ್ರತಿದಿನ ಪರಿಸರ ದಿನ', 'ನಮ್ಮೊಳಗಿನ ಬ್ರಹ್ಮಾಂಡ'ಗಳು ಮಕ್ಕಳಿಗೆ ಪಠ್ಯದಲ್ಲೂ ಸಿಗದ ಸರಳ ವಿಜ್ಞಾನ ಬರವಣಿಗೆಯೆನ್ನಬಹುದು.[೨೧] ಜಾಗತೀಕರಣ ಉದಾರೀಕರಣ, ಕೈಗಾರಿಕಾಭಿವೃದ್ಧಿ, ಒಟ್ಟಿನಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಪರಿಸರದ ಮೇಲಾಗುತ್ತಿರುವ ಪರಿಣಾಮ ಮತ್ತು ಅದರೊಂದಿಗೆ ಇಡೀ ಸಮುದಾಯವೇ ಎದುರಿಸುತ್ತಿರುವ ಆತಂಕಗಳಿಗೆ ಪೂರಕವಾದ ಪರಿಸರ ಹೋರಾಟಗಳು ನಡೆಯುತ್ತಿವೆ. ಇದಕ್ಕೆ ಪೂರಕ ಮಾಹಿತಿ ಒದಗಿಸುವ ಮತ್ತು ಜನಜಾಗೃತಿ ಮೂಡಿಸುವ ಕಾರ್ಯವನ್ನು, ಎಲ್ಲಾ ಬಗೆಯ ಸಮೂಹ ಮಾಧ್ಯಮಗಳನ್ನು ಬಳಸಿಕೊಂಡು ಪರಿಸರ ವಿಜ್ಞಾನಿಗಳು ಮಾಡುತ್ತಿದ್ದಾರೆ. ಸುಂದರಲಾಲ್ ಬಹುಗುಣ ಅವರು ಹಿಮಾಲಯದ ತಪ್ಪಲಿನಲ್ಲಿ ಆಯೋಜಿಸಿದ ಚಿಪ್ಕೋ ಚಳುವಳಿಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಬೇಡ್ತಿ, ಅಘನಾಶಿನಿ, ಕಾಳಿ ಯೋಜನೆಯಿಂದಾಗಿ ಆಗುತ್ತಿದ್ದ ಅರಣ್ಯನಾಶವನ್ನು ಪ್ರತಿಭಟಿಸಲು 'ಅಪ್ಪಿಕೊ' ಚಳುವಳಿಯೆಂಬ ಹೆಸರಿನಿಂದ ಸಂಘಟಿಸಿದವರು ನಾಗೇಶ ಹೆಗಡೆ. ೧೯೮೦ರಲ್ಲಿ ಪ್ರಜಾವಾಣಿ ಮತ್ತು ಸುಧಾ ಬಳಗವನ್ನು ಸೇರಿದ ಹೆಗಡೆ 'ಪತನದ ದಾರಿಯಲ್ಲಿ ಪಶ್ಚಿಮಘಟ್ಟ', 'ನದಿ ನೀರಿಗೆ ಪಾಷಾಣ', 'ಇದು ಗ್ರೀನ್‌ಪೀಸ್', 'ಕಾಳಿ ಕಣಿವೆಗೆ ಕಣ್ಣೀರು', 'ಅಣುಶಕ್ತಿ ವರವೇ, ಶಾಪವೇ' ಮುಂತಾದ ಲೇಖನಗಳಿಂದ ಜನರಿಗೆ ಪರಿಸರ ಸಮಸ್ಯೆಯ ಅರಿವು ಮೂಡಿಸಿದ್ದಾರೆ.[೨೨]

೮.೨.೩ ಕೃತಿಕಾರರ ಕೃತಿಗಳಲ್ಲಿ ಭಾಷೆಯ ನಿರೂಪಣೆ:

'ಪರಿಸರ' ಎಂಬುದು ಕೇವಲ ಮನುಷ್ಯನನ್ನು ಸುತ್ತುವರಿದ ಸನ್ನಿವೇಶವಲ್ಲ. ಅದು ಜೀವಿ-ಜೀವಿಗಳ ನಡುವಿನ ಅಂತರ್ ಸಂಬಂಧ. ಜೀವಿ-ನಿರ್ಜೀವಿಗಳ ನಡುವಿನ ಅಂತರ್ ಸಂಬಂಧ. ಪರಿಸರದ ಹಲವು ಘಟಕಗಳ ನಡುವಿನ ಅಂತರ್ ಸಂಬಂಧ. ಈ ತತ್ವ ಪ್ರತಿಪಾದನೆಯನ್ನು ತೇಜಸ್ವಿ ಮತ್ತು ನಾಗೇಶ್ ಹೆಗಡೆ ಇಬ್ಬರೂ ತಮ್ಮ ಕೃತಿಗಳಲ್ಲಿ ಅಚ್ಚುಕಟ್ಟಾಗಿ ಮತ್ತು ಪರಿಣಾಮಕಾರಿಯಾಗಿ ಮಂಡಿಸುತ್ತಾರೆ. ಮಂಡಿಸುವ ರೀತಿಗೆ ಆಯ್ಕೆ ಮಾಡಿಕೊಂಡಿರುವ ಮಾರ್ಗ ಮಾತ್ರ ಬೇರೆಯಾಗಿದೆ ಅಷ್ಟೇ. ಮೂಲತಃ ಪತ್ರಕರ್ತ, ಪರಿಸರ ತಜ್ಞ, ಭೂಗರ್ಭ ವಿಜ್ಞಾನಿಯಾಗಿರುವ ನಾಗೇಶ ಹೆಗಡೆ ಪರಿಸರದ ಚಿಂತನೆಗಳನ್ನು ನಿರ್ದಿಷ್ಟ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಜಾಗತಿಕ ದೃಷ್ಟಾಂತಗಳೊಂದಿಗೆ ಉದಾಹರಿಸುತ್ತಾ, ದತ್ತಾಂಶಗಳೊಂದಿಗೆ ವಿವರಿಸುತ್ತಾ, ವೈಜ್ಞಾನಿಕವಾಗಿ ಸರಳವಾದ ಭಾಷೆಯಲ್ಲಿ ಸಮರ್ಥವಾಗಿ ಮಂಡಿಸಿದರೆ, ತೇಜಸ್ವಿ

ಅದೇ ತೆರನಾದ ಪರಿಕಲ್ಪನೆಗಳನ್ನು ಹೆಚ್ಚು ಶಾಸ್ತ್ರೀಯಬದ್ಧಗೊಳಿಸದೆ ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕಥೆ ಕಾದಂಬರಿಗಳಲ್ಲಿ ಅದನ್ನು ಸಮನ್ವಯಗೊಳಿಸುತ್ತಾರೆ.

ವಿಭಿನ್ನ ಪಾತ್ರಗಳ ಸೃಷ್ಟಿಯ ಜೊತೆಗೆ ಪರಿಸರದ ವಿವಿಧ ಸನ್ನಿವೇಶಗಳ ಆಯ್ಕೆಗಳೊಡನೆ ಸೂಕ್ಷ್ಮತೆ ಮತ್ತು ಆತಂಕಗಳನ್ನು ಪ್ರಬುದ್ಧವಾಗಿ ಮಂಡಿಸುತ್ತಾರೆ. ಆದರೂ ಸೃಜನಶೀಲ ಕೃತಿಗಳಲ್ಲಿ ತರುವಂತಹ ಕ್ರಿಯಾತ್ಮಕತೆಯನ್ನು ಸೃಜನೇತರ ಕೃತಿಗಳಾದ ವಿಸ್ಮಯ, ಮಿಸ್ಸಿಂಗ್ ಲಿಂಕ್‌ನಂತಹ ಕೃತಿಗಳಲ್ಲಿ ತರಲಾರರು. ಅವುಗಳಲ್ಲಿ ಇಕಾಲಜಿ ವಿಶ್ಲೇಷಣೆ ಇದ್ದಾಗ್ಯೂ ಹಲವು ಬಾರಿ ಮಾಹಿತಿಯಿರುವ ಪಠ್ಯದಂತೆ ಕಾಣುತ್ತವೆ. ಹೆಗಡೆ ಅವರದ್ದು ಬಹುಪಾಲು ಸೃಜನೇತರ ಕೃತಿಗಳ ಬರವಣಿಗೆಯೇ ಆಗಿರುವುದರಿಂದ ನಿರೂಪಣೆಗಳಲ್ಲಿ ಹೆಚ್ಚು ಕ್ರಿಯಾತ್ಮಕತೆ ಕಾಣಲು ಸಾಧ್ಯವಾಗುತ್ತದೆ. ಜಾಗತೀಕರಣ, ಉದಾರೀಕರಣ, ಆಧುನೀಕರಣದ ಸೌಲಭ್ಯಗಳ ನಡುವೆ ಸಂಪನ್ಮೂಲಗಳ ಹಂಚಿಕೆ ಮತ್ತು ಸಮಾನತೆಗೆ ಹಪಾಹಪಿಸುವ ಚಿತ್ರಣವನ್ನು ಇಬ್ಬರಲ್ಲೂ ಕಾಣಬಹುದು.

ನಾಗೇಶ ಹೆಗಡೆ ಅವರ ಬರವಣಿಗೆಗಳ ಓದು ಸಾಕಷ್ಟು ಅರಿವಿಲ್ಲದ ಹೊಸಲೋಕಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಇಲ್ಲೇನು ನೋಡುವುದಿದೆ! ಎಂದುಕೊಂಡ ಸ್ಥಳದಲ್ಲಿ ಹೊಸದನ್ನು ತೋರಿಸುತ್ತಾರೆ. ಸಾಮಾನ್ಯವಾದ ಸಂಗತಿಗಳಲ್ಲಿ ಅಸಮಾನ್ಯವಾದ ಮಗ್ಗುಲನ್ನು ಪರಿಚಯಿಸುತ್ತಾರೆ. ಪರಿಸರದ ಬಗ್ಗೆ ಹೊಸ ದೃಷ್ಟಿಕೋನವನ್ನು ನೀಡುತ್ತಾರೆ. ತೇಜಸ್ವಿ ಅವರ ಕೃತಿಗಳೊಂದಿಗೆ ಹೋಲಿಸಿದಾಗ ಕತೆ ಕಾದಂಬರಿಯಂತಿರದ ಹೆಗಡೆ ಅವರ ಬರವಣಿಗೆಗಳು ಓದುಗರ ಗ್ರಹಿಕೆಯನ್ನು ಬಹಳ ಸಮಯದವರೆಗೂ ಹಿಡಿದಿಡಲಾರವು. ಅವರ ಬರವಣಿಗೆಗಳಲ್ಲಿ ಪರಿಸರ ವಿಜ್ಞಾನದ ವಸ್ತುನಿಷ್ಠತೆ ಮತ್ತು ಭಾವನಾತ್ಮಕತೆ ಒಟ್ಟೊಟ್ಟಿಗೆ ಇದೆ. ಆದರೆ ಬರಹಕ್ಕೆ ಓದುಗರನ್ನು ಸೃಷ್ಟಿಸಿಕೊಳ್ಳುವ ತಾಕತ್ತಿದೆ. ಪ್ರಕೃತಿ ವಿಕೋಪ, ಪರಿಸರ ವ್ಯವಸ್ಥೆಯ ಪರಿಣಾಮಗಳು ಮತ್ತು ವಿಸ್ಮಯಗಳನ್ನು ನಿಯಾಮಾನುಸಾರವೇ ಅವರು ಬಿಡಿಸಿ ಹೇಳುತ್ತಿದ್ದರೂ ಅದು ಸಾಂಪ್ರದಾಯಿಕ ವಿಜ್ಞಾನವೆನಿಸದಂತೆ ನಿರೂಪಿಸುತ್ತಾರೆ ಮತ್ತು ಎಚ್ಚರವಹಿಸುತ್ತಾರೆ. ಜನಸಾಮಾನ್ಯರ ಗ್ರಹಿಕೆಗೆ ಪೂರಕವಾಗಿ ನಿತ್ಯದ ನಿದರ್ಶನಗಳೊಂದಿಗೆ ಸನ್ನಿವೇಶವನ್ನು ವಿವರಿಸುತ್ತಾರೆ. ಇಂತಹ ಬರಹಗಾರರ ಸಂಖ್ಯೆ ತೀರಾ ಅಪರೂಪ. ಬಿ.ಜಿ.ಎಲ್ ಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಸಿ.ಆರ್.ಚಂದ್ರಶೇಖರ್, ನೇಮಿಚಂದ್ರ ಹೀಗೆ.... ಬೆರಳೆಣಿಕೆಯಷ್ಟು ಜನ ಮಾತ್ರ ವಸ್ತುವಿಷಯವನ್ನು ಜನಸಾಮಾನ್ಯರಿಗೆ ಹತ್ತಿರಗೊಳಿಸುವರು.

ತೇಜಸ್ವಿ ಅವರ ಸಹಜ ಕೃಷಿ, ಮಿಂಚುಳ್ಳಿ, ಮಿಸ್ಸಿಂಗ್ ಲಿಂಕ್, ವಿಸ್ಮಯ-೧ ಮತ್ತು ವಿಸ್ಮಯ-೨ ರಂತೆಯೇ ಮತ್ತು ಕೆಲವು ಕೃತಿಗಳಲ್ಲಿ ಅದಕ್ಕಿಂತಲೂ ನವಿರಾದ ಭಾಷಾ ಬಳಕೆಯ ಪ್ರಯೋಗವನ್ನು ನಾಗೇಶ ಹೆಗಡೆ ಅವರು ಸೃಜನಾತ್ಮಕವಾಗಿ ತಂದಿದ್ದಾರೆ. ಉದಾ: ಹಳ್ಳಿಮುಕ್ಕ ಎಲ್ಲೆಲ್ ಹೊಕ್ಕ, ಅಭಿವೃದ್ಧಿಯ ಅಂಧಯುಗ, ಪ್ರತಿದಿನ ಪರಿಸರದಿನ, ದುಂದುಮಾರದ ಲೇಖನಗಳು ಇತ್ಯಾದಿ. ವಿಶೇಷವೆಂದರೆ ೨೦ನೇ ಶತಮಾನದ ಶ್ರೇಷ್ಠ ಮಕ್ಕಳ ಕತೆಗಳ ಸಾಲಿಗೆ ಸೇರ್ಪಡೆಗೊಂಡ ಅವರ 'ಕೆರೆಯಲಿ ಚಿನ್ನ ಕೆರೆಯೇ ಚಿನ್ನ' ಕೃತಿಯ ನಿರೂಪಣೆ ಫ್ಯಾಂಟಸಿಯಾಗಿದ್ದು ಮಕ್ಕಳ ಮಟ್ಟಕ್ಕೆ ಖುಷಿಕೊಡುವ ಪ್ರಯತ್ನವಾಗಿದೆ. ಅಧ್ಯಯನ

ಸಂದರ್ಭದಲ್ಲಿ ಓದುಗರ ಸಂಗ್ರಹಿತ ಅಭಿಪ್ರಾಯಗಳು ಈ ಕೃತಿ ಕುರಿತಂತೆ ಹೆಚ್ಚಾಗಿ ಕಾಣಸಿಗುವುದಿಲ್ಲ.

ನಾಗೇಶ ಹೆಗಡೆ ಅವರ ಕೃತಿಗಳು ಸೈದ್ಧಾಂತಿಕ ಖಚಿತತೆ ಮತ್ತು ವಿಶಿಷ್ಟ ಬರಹದ ಶೈಲಿಯಿಂದಾಗಿ ಓದುಗರಿಗೆ ಆಪ್ತವಾಗುತ್ತದೆ. ಒಂದು ಸಣ್ಣ ಘಟನೆ, ಒಂದು ಸಣ್ಣ ಕತೆ, ಒಂದು ಸಣ್ಣ ತಮಾಷೆ ಎನ್ನಬಹುದಾದ ಸಂಗತಿಗಳಿಂದ ಪ್ರಾರಂಭವಾಗುವ ಮೂಲಕ ಉದ್ದೇಶವನ್ನು ಈಡೇರಿಸಲು ಅನುಕೂಲ ಮಾಡಿಕೊಡುತ್ತದೆ. ಕೆಲವು ಲೇಖನಗಳು ಶೀರ್ಷಿಕೆಯಿಂದಲೇ ಆಕರ್ಷಿಸಿ ಓದುವಂತೆ ಪ್ರೇರೇಪಿಸುತ್ತವೆ. ಉದಾ: 'ಕೆರೆಯಲಿ ಚಿನ್ನ ಕೆರೆಯೇ ಚಿನ್ನ, ದರಿದ್ರ ಲಕ್ಷ್ಮಿಯ ವರ್ಗಾವಣೆ ಪ್ರಸಂಗ, ಹಳ್ಳಿಮುಕ್ಕ ಎಲ್ಲೆಲ್ ಹೊಕ್ಕ, ಲೋಕಲ್ ಮೊದಲು ಲೋಕದ್ದು ಆಮೇಲೆ, ತಾಜ್‌ಮಹಲ್ ವರ್ಸಸ್ ವಂಡರ್‌ಕಪ್ಪೆ, ಮುದಿನದಿಗಳ ಪೂರ್ವಾಪರ, ಇಲ್ಲೀಗಲ್ ಮಣ್ಣಿಂಗಟ್ಟಿ, ಇರುವುದೊಂದೇ ಭೂಮಿ, ಇನ್ನೆಂಟು ಭೂಮಿಗಳು ಬೇಕು' ಇತ್ಯಾದಿ ಶೀರ್ಷಿಕೆಗಳು ಸಾಹಿತ್ಯವನ್ನು ಪ್ರವೇಶಿಸಲು ಓದುಗನಿಗೆ ಪ್ರೇರಣೆ ಯಾಗುವವು.

ನಾಗೇಶ ಹೆಗಡೆ ಅವರ ಕೃತಿಗಳನ್ನು ಮತ್ತಷ್ಟು ವಿಶ್ಲೇಷಿಸಿದರೆ ಪಠ್ಯರೂಪ ಪಡೆದ ವಿಷಯ ನಿರೂಪಣೆಗಳಿಗೂ ವಿಚಾರ ಸಾಹಿತ್ಯಕ್ಕೂ ನಡುವೆ ಒಂದಿಷ್ಟು ವ್ಯತ್ಯಾಸವನ್ನು ಗುರುತಿಸಬಹುದು. ಹೆಗಡೆ ಅವರ ಪರಿಸರ ಲೇಖನಗಳು ಕೆಲವು ತರಗತಿಗಳಿಗೆ ಭಾಷಾ ಪಠ್ಯವಾಗಿಯೂ ಸೇರ್ಪಡೆಗೊಂಡಿವೆ. ಉದಾ: 'ಪ್ರತಿದಿನ ಪರಿಸರ ದಿನ' ಕೃತಿಯ ಲೇಖನಗಳು. ಒಂದು ಪಠ್ಯವಾಗಿ ಪರಿಸರವನ್ನು ಪರಿಗಣಿಸುವ ಸನ್ನಿವೇಶವೇ ಬೇರೆ. ವಿಚಾರ ಸಾಹಿತ್ಯವಾಗಿ ಪರಿಸರವನ್ನು ಪರಿಗಣಿಸುವುದೇ ಬೇರೆ. ಪಠ್ಯದಲ್ಲಿ ಪರಿಸರವು ವಿದ್ಯಾರ್ಥಿಗಳಿಗೆ ಸಂಗತಿಗಳ ಆವಿಷ್ಕಾರ, ಸಮಸ್ಯೆಗಳ ಸ್ವರೂಪ, ಅದಕ್ಕಿರುವ ಕಾರಣ ಮತ್ತು ಪರಿಣಾಮಗಳ ವಿಸ್ತೃತ ಜ್ಞಾನದ ಅಂಶಗಳನ್ನು ಒಳಗೊಳ್ಳುತ್ತದೆ. ಅದರಲ್ಲೂ ಭಾಷಾ ವಿಷಯವನ್ನು ಹೊರತುಪಡಿಸಿ ಪರಿಸರ ಒಂದು ಕೋರ್ ವಿಷಯವಾದಾಗ ಉದ್ದಿಷ್ಟಗಳಾದ ಅನ್ವಯ ಮತ್ತು ಕೌಶಲಗಳ ತಳಹದಿಯಲ್ಲಿ ವಿದ್ಯಾರ್ಥಿಗಳಿಗೆ ಜ್ಞಾನ ಸಂರಚನೆಗೆ ವಿಫುಲ ಅವಕಾಶ ಕಲ್ಪಿಸಬೇಕಾಗುತ್ತದೆ. ಪ್ರಾತ್ಯಕ್ಷಿಕೆಯಿಂದ ಕೂಡಿದ ಕ್ರಿಯಾತ್ಮಕತೆಯ ಅಂಶಗಳು ಪರಿಸರ ಕಲಿಕೆಯ ಬಹುಮುಖ್ಯ ಆಯಾಮವೆನಿಸಿಕೊಳ್ಳುತ್ತವೆ. ಆದರೆ ಜನಸಾಮಾನ್ಯರಿಗೆ ತಲುಪಿಸಬಹುದಾದ ಪರಿಸರ ಸಂಗತಿಗಳ ಸಾಹಿತ್ಯವಾಗಲಿ, ಇಕಾಲಜಿಯ ತತ್ವ ಅಳವಡಿಕೆಯ ನಿರೂಪಣೆಗಳಾಗಲಿ ಇವು ಸಂಕೀರ್ಣತೆಯಿಂದ ಕೂಡಿದ ದೀರ್ಘ ವಿವರಣೆಗಳ ಚೌಕಟ್ಟಿನಿಂದ ಹೊರಬರಲೇಬೇಕಾಗುತ್ತದೆ. ಮತ್ತವು ಪರಿಕಲ್ಪನೆಗಳ ಬಿಡಿಸುವಿಕೆಯಲ್ಲಿ ಮಿತಿಗೊಳ್ಳಬೇಕಾಗುತ್ತದೆ. ಬರವಣಿಗೆಯು ಅಗತ್ಯ ಪ್ರಮಾಣದ ಮಿತಿಯನ್ನು ನಿರ್ಬಂಧಿಸಿಕೊಳ್ಳದಿದ್ದರೆ ಓದುಗನನ್ನು ಸೆಳೆಯಲಾರವು. ಅಂಕಿಅಂಶಗಳು, ದತ್ತಾಂಶಗಳು, ಸಮೀಕರಣಗಳು, ದೃಷ್ಟಾಂತಗಳು ಇತ್ಯಾದಿಗಳ ಪ್ರಸ್ತಾಪದಂತಹ ಪರಿಸರ ಪ್ರಜ್ಞೆಯ ಬರವಣಿಗೆಗಳು ಓದುಗವಲಯದಲ್ಲಿ ಜನಸಾಮಾನ್ಯರ ದೃಷ್ಟಿಯಿಂದ ಯಾವತ್ತೂ ಶುಷ್ಕವೆನಿಸಿಗೊಳ್ಳುತ್ತವೆ. ಸಮಾಜದ ಯಾವುದೋ ಒಂದು ಸೀಮಿತ ವರ್ಗಕ್ಕೆ ಮಾತ್ರ ಇವು ಪ್ರಯೋಜನಕಾರಿಯಾಗಬಲ್ಲವು. ಪರಿಸರದ ವಿಚಾರದಲ್ಲಿ ಎಲೈಟ್ ಪೀಪಲ್ ಅಂತವರನ್ನು ಮಾತ್ರ ಅವು ಅರಿವಿನ ಸಾಕ್ಷರತೆಯ ಕಡೆಗೆ ಕರೆದೊಯ್ಯಬಲ್ಲವು. ಸಾಂಸ್ಕೃತಿಕ ದೃಷ್ಟಿಯಿಂದಲೂ ನೋಡುವುದಾದರೆ ಜೀವನಾಧಾರ ಭಾಗವಾಗಿ ಪಾರಂಪರಿಕ ವೃತ್ತಿಯ ಅವಲಂಬಿತರಾಗಿ ಕೆಲವು

ಸಮುದಾಯಗಳು ಅರಣ್ಯದಂಚಿನಲ್ಲಿಯೇ ತಮ್ಮ ನೆಲೆಗಳನ್ನು ಕಂಡುಕೊಂಡಿವೆ. ನೆಲಮೂಲ ಪರಿಸರವನ್ನು ಉಳಿಸಿಕೊಳ್ಳುವಂತಹ ಅನಿವಾರ್ಯತೆಯ ಸಂದರ್ಭಗಳಲ್ಲಿ ಈ ಸಮುದಾಯಗಳ ಕೊಡುಗೆ ಅಪಾರ. ಪರಿಸರ ಸಂರಕ್ಷಣೆಯಲ್ಲಿ ಪ್ರತಿ ವರ್ಗದವರೂ ಯಾವುದೇ ಭೇದಭಾವವಿಲ್ಲದೆ ನಡೆದುಕೊಳ್ಳಲೇಬೇಕಾದ ಕಂಕಣಬದ್ಧ ಆಚರಣೆಗಳಿವೆ. ಕಡ್ಡಾಯವಾಗಿ ಪಾಲಿಸುವಂತಹ ಅನುಪಾಲನೆಯ ಚಟುವಟಿಕೆಗಳಿವೆ. ಅದು ಆದಿವಾಸಿಯಾಗಿರಲಿ, ತಾಂಡದವರಾಗಿರಲಿ, ಕಾಡು ಕುರುಬರಾಗಿರಲಿ, ಕಾರ್ಪೋರೇಟ್ ವಲಯಕ್ಕೆ ಸೇರಿದವರಾಗಿರಲಿ ಎಲ್ಲರ ಪಾತ್ರವು ಬಹುಮುಖ್ಯ. ಇಂತವರ ಆದ್ಯ ಗಮನ ಸೆಳೆಯುವ ಪರಿಸರ ಲೇಖನಗಳ ಸೃಜನೆ ಒಂದು ಸವಾಲು ಎನಿಸಿಕೊಳ್ಳುತ್ತದೆ.

ಅಪ್ಪಿಕೋ ಚಳುವಳಿಯ ಸನ್ನಿವೇಶ ನೆನಪಿಸಿಕೊಳ್ಳುವುದಾದರೆ, ಹೆಗಡೆ ತಮ್ಮ ಚಿಂತನೆಗಳಿಂದ ಪರಿಸರ ಹೋರಾಟಕ್ಕೆ ಮತ್ತು ಹೋರಾಟಗಾರರಿಗೆ ತಾತ್ವಿಕತೆಯನ್ನು ಒದಗಿಸಿದ್ದರೂ, ಪರಿಸರ ಸಂರಕ್ಷಣೆಗೆ ಜಾಗೃತಗೊಳಿಸುವ ವಿಚಾರದಲ್ಲಿ ಬೀದಿ ನಾಟಕಗಳು, ರೂಪಕಗಳು, ಸಮೂಹ ಗಾನಗಳು, ಕಲಾ ಜಾಥಗಳು, ಲಾವಣಿಗಳು ಒಟ್ಟಾರೆ ಮೌಖಿಕ ಸಾಹಿತ್ಯ ಪರಂಪರೆಗಳು ಜನಸಾಮಾನ್ಯರನ್ನು ಸೆಳೆದಿರುವಷ್ಟು ಬಗೆಯಲ್ಲಿ ಶಿಷ್ಟಾಚಾರದ ಲೇಖನಗಳು ಅಷ್ಟಾಗಿ ಪ್ರಭಾವಿಸಿಲ್ಲದಿರುವುದನ್ನು ಗಮನಿಸಬಹುದಾಗಿದೆ. ಜಾಗೃತಿ ಆಧಾರಿತ ಬರವಣಿಗೆಗಳು ಕೆಲವೊಮ್ಮೆ ಶಿಷ್ಟಾಚಾರದ ಮಡಿವಂತಿಕೆಯಿಂದ, ಶುದ್ಧತೆಯಿಂದ ಆಚೆ ಸರಿಯಬೇಕಾದ ಅಗತ್ಯತೆಯನ್ನು ಬಯಸುವವು. ಚಿಪ್ಕೋ, ಅಪ್ಪಿಕೋ ಚಳುವಳಿಗಳು ಗ್ರಾಮ ಸಮುದಾಯದವರೆಲ್ಲರ ಸ್ವಪ್ರೇರಣೆ ಮತ್ತು ಪ್ರಾತ್ಯಕ್ಷಿಕೆಯಿಂದಲೇ ಹೆಸರಾದವು. ಕೊಡಗು ಮತ್ತು ಕೇರಳದ ಭೂಕಂಪನ ಮತ್ತು ಜಲಕಂಪನದಿಂದಾದ ಘೋರ ದೃಶ್ಯಗಳನ್ನು ಹತ್ತಿರದಿಂದಲೇ ಕಂಡಂತಹ ಜನಸಾಮಾನ್ಯರು ಪರಿಸರದ ರುದ್ರ ಭಯಾನಕತೆಯನ್ನು ಕುರಿತು ಚಿಂತನೆಗೊಳಗಾಗಿದ್ದಾರೆ. ಹಾಗಾಗಿ ಪರಿಸರ ಪ್ರಜ್ಞೆ ಮೂಡಿಸುವ ಬರವಣಿಗೆಗಳಲ್ಲಿ ಜನಸಾಮಾನ್ಯರ ಅರಿವಿನ ಸಾಕ್ಷರತೆಗೆ ಧಕ್ಕೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಲೇಖಕರದ್ದಾಗಿರುತ್ತದೆ. ಈ ದೃಷ್ಟಿಯಲ್ಲಿ ಹೆಗಡೆ ಅವರ ಬರಹಕ್ಕೆ ಸರಳತೆಯ ಲೇಪನದ ಅಗತ್ಯತೆ ಎದ್ದುಕಾಣುತ್ತದೆ.

ಜಾಗತಿಕ ವೇದಿಕೆಗಳಲ್ಲಿ ಪ್ರಸ್ತಾಪಿಸುವ ಪರಿಸರ ವಿಚಾರಗಳ ಮಂಡನೆಯೇ ಬೇರೆ. ರಾಜಕೀಯ ಧೋರಣೆಗಳನ್ನು ಮತ್ತು ಸರ್ಕಾರದ ನೀತಿನಿರೂಪಣೆಗಳ ಲೋಪವನ್ನು ವಿಶ್ಲೇಷಿಸಿ ಬರೆಯುವುದೇ ಬೇರೆ. ಕೆಲವು ಸಂದರ್ಭದಲ್ಲಿ ಪರಿಸರ ಪ್ರಜ್ಞೆ ಕುರಿತ ಬರವಣಿಗೆಗಳು ಕೆಲವು ಪುಟಗಳಿಗೆ ಸೀಮಿತಗೊಳ್ಳುವುದು ಕೆಲವೊಮ್ಮೆ ಅಪಾಯಕಾರಿಯೇ. ಏಕೆಂದರೆ ಇದು ಅಪ್ಲಿಕೇಶನ್ ಆಧಾರಿತ ವಿಷಯವಾಗಿದ್ದು ಪರಿಸರದ ವಿಶಾಲ ದೂರದರ್ಶಿತ್ವ ಆಚರಣೆಗೆ ಬರಬೇಕಾಗುತ್ತದೆ. ಹೆಗಡೆ ಒಬ್ಬ ಪರಿಸರ ಆಕ್ಟಿವಿಸ್ಟ್ ಆದ್ದರಿಂದ ಸಾರ್ವತ್ರಿಕ ವೇದಿಕೆಗಳಲ್ಲಿ ಉದ್ದೇಶಿಸಿ ಆಡುವ ಇವರ ಮಾತುಗಳೇ ಜನಸಾಮಾನ್ಯರ ಪರಿಸರ ಜಾಗೃತಿಗೆ ಪ್ರೇರಣೆಯಾಗಬಲ್ಲವು ಎಂಬುದನ್ನು ಗ್ರಹಿಸಲೇಬೇಕು. ಈ ಬಗ್ಗೆ ಅವರ ಬ್ಲಾಗ್‌ನ ವಿಡಿಯೋ ತುಣುಕುಗಳನ್ನು ಅವಲೋಕಿಸಬಹುದು. ವಿಚಾರ ಸಂಕಿರಣದಲ್ಲಿ ಒಂದು ನಿರ್ದಿಷ್ಟ ವಿಷಯ ಕುರಿತು ಮಾತನಾಡುವಾಗ ಬಹಳ ಹತ್ತಿರವಾಗುತ್ತಾರೆ ಹೆಗಡೆ.

ಶುದ್ಧ ವಿಜ್ಞಾನ ವಿಷಯ, ಸರಳಭಾಷೆ, ಸುಂದರ ಉಪಮೆ, ಆಕರ್ಷಕ ನಿರೂಪಣೆ ಹಾಗೂ ಪುರಾಣಗಳ ಸಂಗತಿಗಳನ್ನು ಹಿತಮಿತವಾಗಿ ಬೆರೆಸಿ ವಿಜ್ಞಾನ ಸಾಹಿತ್ಯಕ್ಕೆ ನಿರ್ದಿಷ್ಟ ಮಾನ್ಯತೆಯೊಂದಿಗೆ ಓದುಗರ ಗುಂಪನ್ನು ಸೃಷ್ಟಿಸುವುದರಲ್ಲಿ ನಾಗೇಶ ಹೆಗಡೆ, ಅನಂತರಾಮು, ಬಿ.ಜಿ.ಎಲ್.ಸ್ವಾಮಿ ಅಗ್ರಗಣ್ಯರು.[(೨೩)]

ಹೆಗಡೆ ಅವರ 'ವಿಜ್ಞಾನ ಬರಹ' ಟಿಪ್ಪಣಿಗಳು ಕುರಿತು ವಿವೇಚಿಸುವುದಾದರೆ "ಲೇಖನದ ಹರವು ತೀರಾ ವಿಸ್ತಾರವಾದುದು. ವಿಜ್ಞಾನ, ಪ್ರಕೃತಿ, ಅಣುಸ್ಥಾವರ, ಪರಿಸರ, ಜಾಗತೀಕರಣ, ಭಾಷೆ, ಆಹಾರ, ಔಷಧ, ವೈದ್ಯಕೀಯ, ಕಾಡು, ನದಿ, ಪ್ರಾಣಿ ಪ್ರಪಂಚ, ಆಧುನಿಕತೆ ಹೀಗೆ ವೈವಿಧ್ಯಪೂರ್ಣವಾದ ಲೇಖನಗಳು ಬಹುತೇಕ ಒಂದು 'ಅಂಕಣದ ಮಿತಿಗೆ' ಒಳಪಟ್ಟಿವೆ. ೨–೩ ಪುಟಗಳಲ್ಲಿ ಲೇಖನವನ್ನು ಮುಗಿಸಬೇಕಾಗಿರುವುದರಿಂದ ಪ್ರತಿ ವಿಚಾರದಲ್ಲೂ ಕಂಜೂಸುತನ ಎದ್ದು ಕಾಣುತ್ತದೆ. ಆದರೆ ಎಲ್ಲೂ ವಾಚಾಳಿತನ ಇಣಕುವುದಿಲ್ಲ. ಇದು ಇವರ ಬರಹದ ಹೆಚ್ಚುಗಾರಿಕೆಯು ಹೌದು."[(೨೪)] ಹೆಗಡೆ ಅವರು ಪರಿಸರ ಪ್ರಜ್ಞೆ ಮೂಡಿಸುವ ಕೆಲಸವನ್ನು ತಮ್ಮ ಕೃತಿಗಳಲ್ಲಿ ಮಿತಿಯೊಳಗೆ ಸೃಜನಾತ್ಮಕತೆಯಿಂದಲೂ ಮಾಡಿದ್ದಾರೆ. ಈಗಾಗಲೇ ಚರ್ಚಿಸಿದಂತೆ ಅವರ ಬಿಡಿ ಲೇಖನಗಳು ಒಮ್ಮೆ ಆಸಕ್ತಿ ಪಡೆದುಕೊಳ್ಳುವ ತನಕ ಹೆಣಗಾಡುತ್ತವೆ. ಆಮೇಲೆ ಸರಾಗವಾಗುತ್ತವೆ. ಕೆಲವು ಬರವಣಿಗೆಗಳು ಪ್ರಸ್ತುತ ವಿದ್ಯಾರ್ಥಿಗಳಿಗೆ ಪಠ್ಯವೂ ಆಗಿವೆ. ವೈಚಾರಿಕ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ಹೊಂದಿರುವ ಲೇಖನಗಳಲ್ಲಿ ಓದುಗನ ದೃಷ್ಟಿಯಿಂದ ಮಿತಿ ಅವಶ್ಯಕ ಎಂಬುದನ್ನು ಚರ್ಚಿಸಲಾಗಿದೆ. ಇಲ್ಲವಾದಲ್ಲಿ ಶುಷ್ಕವೆನಿಸಿಕೊಳ್ಳುತ್ತವೆ. ಆದ್ದರಿಂದಲೇ ಹೆಗಡೆ ಅವರ ಲೇಖನಗಳಾಗಲಿ ಅಥವಾ ಬರವಣಿಗೆಗಳಾಗಲಿ ಒಂದು ಅಂಕಣಗಳ ಮಿತಿಗೆ ಮುಕ್ತಾಯಗೊಳ್ಳುವುದನ್ನು ಕಂಜೂಸುತನ ಎನ್ನದೆಯೂ ಧನಾತ್ಮಕವಾಗಿ ನೋಡಬಹುದು ಎಂಬ ಅಭಿಪ್ರಾಯವು ಸಹ ಮೂಡುತ್ತದೆ.

ಸಾಮಾನ್ಯವಾಗಿ 'ವಿಜ್ಞಾನ ಬರಹ' ಶುಷ್ಕವಾದದ್ದು ಎಂಬ ನಂಬಿಕೆ ಸಾರ್ವತ್ರಿಕವಾಗಿದೆ. ಪಾರಿಭಾಷಿಕ ವಿಜ್ಞಾನ ಪದಗಳ ಪರಿಚಯವಿಲ್ಲದಿದ್ದರೆ ವಿವರಣೆಯನ್ನು ಅರ್ಥಮಾಡಿಕೊಳ್ಳಲು ಕಷ್ಟವೆನಿಸುತ್ತದೆ. ಎಲ್ಲಾ ಕಾಲಕ್ಕೂ ನಿಯಮ, ಸೂತ್ರ ಮತ್ತು ಭೌತಿಕ ಸಂಬಂಧಗಳ ಮೂಲಕ ನಿರ್ವಚನೆಗೊಳ್ಳುವ ವಿಜ್ಞಾನ ಬಹುತೇಕವಾಗಿ ಅನ್ಯಭಾಷೆಯಲ್ಲಿ ಪ್ರಕಟವಾಗಿದ್ದೇ ಹೆಚ್ಚು. ವಿಜ್ಞಾನ ಸಾಹಿತ್ಯದಲ್ಲಿ ಬಳಕೆಯಾಗುವ ಪರಿಭಾಷೆಗಳು ನಮಗೆ ಅನ್ಯವಾಗಿಯೇ ಉಳಿದುಕೊಂಡಿವೆ. ಭಾಷೆಯ ತೊಡಕಿನಿಂದ ಜನಸಾಮಾನ್ಯರನ್ನು ಅದು ಒಳಗೊಳ್ಳಲು ಸಾಧ್ಯವಾಗುತ್ತಿಲ್ಲ. ಭಾರತೀಯರು ವಿಜ್ಞಾನದ ಪ್ರಯೋಜನವನ್ನು ನಮ್ಮದಾಗಿಸಿಕೊಳ್ಳಲು ಆಸಕ್ತಿ ವಹಿಸಿದರೇ ಹೊರತು ವೈಜ್ಞಾನಿಕ ಮನೋಭಾವವನ್ನು ನಮ್ಮದಾಗಿಸಿಕೊಳ್ಳಲು ಆಸಕ್ತಿ ವಹಿಸಲಿಲ್ಲ ಎಂಬ ಅಪವಾದವೂ ಇದೆ. ಇನ್ನೊಂದೆಡೆ ವಿಜ್ಞಾನವನ್ನು ಕನ್ನಡದಲ್ಲಿ ತಿಳಿಯಾಗಿ ಹೇಳಲು ಸಾಧ್ಯವಿಲ್ಲವೆಂದೇ ಹಲವು ವರ್ಷಗಳ ಕಾಲ ನಂಬಿಕೊಳ್ಳಲಾಗಿತ್ತು. ಜನಸಾಮಾನ್ಯರ ಓದಿಗೆ ಅದು ಎಟುಕುತ್ತಿರಲಿಲ್ಲ.

ಹಾಗಾಗಿ ಇದನ್ನು ಸಾಹಿತ್ಯದ ಭಾಗವಾಗಿ ಪರಿಗಣಿಸಲಿಲ್ಲ. ಹೀಗೆ ಕನ್ನಡದಲ್ಲಿ ವಿಜ್ಞಾನವನ್ನು ತಿಳಿಯಾಗಿ ಹೇಳದಿರುವುದು ಆಕಸ್ಮಿಕವೆಂದು ತಿಳಿಯಬೇಕಿಲ್ಲ. ಇದರ ಹಿಂದೆ ಇರುವ ವರ್ಗಹಿತಾಸಕ್ತಿಯನ್ನು ನಾವು ಸೂಕ್ಷ್ಮವಾಗಿ ಗ್ರಹಿಸಬೇಕು. ವಿಜ್ಞಾನ ಅಂಕಿ ಅಂಶಗಳ ಮೂಲಕ,

ಸಾಕ್ಷ್ಯಾಧಾರಗಳ ಮೂಲಕ ಹೊರಟರೆ ಸಾಹಿತ್ಯವು ಭಾವನಾತ್ಮಕ ತರ್ಕ ಮತ್ತು ಬದುಕಿನ ಅನುಭವದ ರೂಪಕದ ಮೂಲಕ ಹೊರಡುತ್ತದೆ. ಅಂತಿಮವಾಗಿ ಎರಡೂ ಸ್ಪಂದಿಸುವುದು ಮನುಷ್ಯನ ಬದುಕಿನ ಸುಂದರ ಸ್ಥಿತಿಯ ನಿರ್ಮಾಣದಲ್ಲಿಯೆ. ವಿಜ್ಞಾನಕ್ಕೂ ಕಲ್ಪನೆಗೂ ಸಂಬಂಧವೇ ಇಲ್ಲವೇ?[೨೫] ಸಾಹಿತ್ಯಕ್ಕೆ ಮಾತ್ರ ಅಗಾಧ ಕಲ್ಪನೆಯ ಅಗತ್ಯತೆಯಿದೆ ಎಂಬುದು ಅಷ್ಟು ಸರಿಯಲ್ಲ ಎಂದು ನೇಮಿಚಂದ್ರ ಹೇಳುತ್ತಾರೆ. ನಿಜವಾಗಿ ನೋಡಿದರೆ ವಿಜ್ಞಾನಕ್ಕೆ ಕಲ್ಪನೆಯ ಅವಶ್ಯಕತೆ ಹೆಚ್ಚಾಗಿದೆ. ಕಣ್ಣಿಗೆ ಕಾಣದ ಒಳಜಗತ್ತನ್ನು ಕಲ್ಪನೆಯ ಕಣ್ಣುಗಳಿಂದ ಊಹಿಸಬೇಕು. ಅದರ ಕಾರಣ ಪರಿಣಾಮಗಳನ್ನು ಅರಿಯಬೇಕು.

"ನಾಗೇಶ ಹೆಗಡೆ ಕ್ಲಿಷ್ಟ ವೈಜ್ಞಾನಿಕ ವಿಚಾರಗಳನ್ನು ಸ್ವಚ್ಛ ಕನ್ನಡದಲ್ಲಿ ಅಂದವಾಗಿ ಹೇಳಬಲ್ಲ ಪ್ರತಿಭಾವಂತ ಪತ್ರಕರ್ತರು. 'ಅಪರಂಜಿ' ಪತ್ರಿಕೆಗೆಂದು ಅಂಕಣರೂಪದಲ್ಲಿ ಬರೆದ ಲೇಖನಗಳಲ್ಲಿ ಅವರು ತಮ್ಮ ನಗುಮುಖವನ್ನು ತೆರೆದಿಟ್ಟಿದ್ದಾರೆ. ಪರಿಸರ ವಿಜ್ಞಾನಿಯಾಗಿ ಪತ್ರಿಕೋದ್ಯಮಕ್ಕೆ ಬಂದ ಇವರು ತಮ್ಮ ಗುರುಗಳಿಂತಿದ್ದ ವೈಎನ್ಕೆಯವರಂತೆಯೇ ಹಾಸ್ಯದ ಹೊನಲು ಹರಿಸುತ್ತಲೇ ಡಾಂಭಿಕ ರಾಜಕಾರಣಿಗಳಿಗೆ, ಹಾದಿತಪ್ಪಿದ ಪ್ರಾಣಿಪ್ರೇಮಿಗಳಿಗೆ, ಅಂತೆಯೇ ಮೌಢ್ಯ ಮತ್ತು ದುರಾಸೆ ತುಂಬಿದ ಜನರಿಗೆ ನವಿಲುಗರಿ ಪೊರಕೆಯ ರುಚಿ ಕಾಣಿಸುತ್ತಾರೆ" ಎಂದಿದ್ದಾರೆ ಡಾ.ಉಲ್ಲಾಸ ಕಾರಂತರು.

ಸಾಹಿತ್ಯವು ಕಲ್ಪನೆ ಮತ್ತು ಭಾವನಾತ್ಮಕ ಸಂಬಂಧದ ಮೂಲಕ ಸತ್ಯದೆಡೆಗೆ ಪಯಣಿಸಿದರೆ ವಿಜ್ಞಾನವು ಪ್ರಶ್ನೆ, ಕುತೂಹಲ ಮತ್ತು ಭೌತಿಕ ಸಂಬಂಧದ ಮೂಲಕ ಸತ್ಯದೆಡೆಗೆ ಪ್ರಯಾಣ ಬೆಳೆಸುತ್ತದೆ. ಸಾಹಿತ್ಯ ರೂಪಕದ ಮೂಲಕ ಮಾತಾಡಿದರೆ ವಿಜ್ಞಾನವು ನೇರನುಡಿಯಲ್ಲಿ ಮಾತನಾಡುತ್ತದೆ. ಹಾಗಾಗಿ ಒಬ್ಬ ವಿಜ್ಞಾನಿ ಮತ್ತು ಒಬ್ಬ ಸಾಹಿತಿ ಇವರಿಬ್ಬರ ನಡುವೆ ಇರುವ ಸೃಜನಶೀಲ ಚಿಂತನೆ ಮೂಲತ: ಒಂದೇ ಮೂಲದಿಂದ ಹೊರಟಿದ್ದು. ಇದು ಮೂಲ ಮನುಷ್ಯನ ಬದುಕಿನ ಸೌಂದರ್ಯಕ್ಕೆ ಸಂಬಂಧಿಸಿದ್ದು ಎಂಬ ಮಾತಿದೆ. ಸಂಶೋಧನಾ ಅಧ್ಯಯನದ ಈ ಇಬ್ಬರೂ ಲೇಖಕರು ತಮ್ಮ ಕಲಾಪ್ರತಿಮೆಗಳಲ್ಲಿ ರೂಪಕ ಮತ್ತು ನೇರ ನುಡಿಯನ್ನು ಮೀರಿದಂತಹ ಸೃಜನಾತ್ಮಕತೆಯನ್ನು ಕ್ರಿಯಾತ್ಮಕತೆಯನ್ನು ಅಳವಡಿಸಿಕೊಂಡಿದ್ದಾರೆ. ಸಾಹಿತಿಯಾದ ತೇಜಸ್ವಿ ಮತ್ತು ಪರಿಸರವಾದಿ ಹಾಗೂ ಭೂಗರ್ಭ ವಿಜ್ಞಾನಿಯಾಗಿದ್ದ ನಾಗೇಶ ಹೆಗಡೆ ಇವರಿಬ್ಬರೂ ಪರಿಸರದ ಬಗೆಗಿನ ದೂರದೃಷ್ಟಿಯಲ್ಲಿ ಹೆಚ್ಚು ಪ್ರಾಯೋಗಿಕವಾಗಿದ್ದಾರೆ. ಇಬ್ಬರಲ್ಲೂ ವಾಸ್ತವ ನೆಲೆಯ ಪರಿಸರ ದರ್ಶನದ ಮಂಡನೆಗಳೇ ಮುಖ್ಯವಾಗುವವು. ಇಬ್ಬರೂ ಅದರೊಳಗೆ ಆಧ್ಯಾತ್ಮವನ್ನಾಗಲಿ ಭಾವುಕತೆಯನ್ನಾಗಲಿ ತುಂಬುವುದೇ ಇಲ್ಲ. ಭಾವಪರವಶರಾಗಿ ನಿಸರ್ಗವನ್ನು ಆರಾಧಿಸುವುದಿಲ್ಲ.

೮.೨.೩. ಪರಿಸರ ಪ್ರಜ್ಞೆಯ ಸಮಗ್ರತೆಯಲ್ಲಿ ಸಾಮ್ಯತೆ ಹಾಗೂ ಭಿನ್ನತೆಗಳು:

ಹತ್ತೊಂಬತ್ತನೇ ಶತಮಾನದ ತಾತ್ವಿಕ ಚಿಂತನೆಗಳಿಗೆ ಡಾರ್ವಿನ್ನನ ಜೀವಿಗಳ ವಿಕಾಸವಾದ ಬೆನ್ನೆಲುಬಾಯಿತು. ನಾಗರಿಕತೆ, ಸಂಸ್ಕೃತಿಗಳ ವಿಕಾಸವನ್ನು ಜೀವವಿಕಾಸದ ದೃಷ್ಟಿಕೋನದಿಂದಲೇ ನೋಡುವ ಪರದಾಟ ಆರಂಭವಾಯಿತು. **"ಗುರುತ್ವಾಕರ್ಷಣೆಯ ಸರಳ ಸೂತ್ರದ ಮೇಲೆ ಮೆಲ್ಲಗೆ ಸುತ್ತುತ್ತಿರುವ ಈ ಭೂಗೋಲದಲ್ಲಿ ಅತ್ಯಂತ ಸರಳವಾದ ಯಾವುದೋ ಹಲವು ರೂಪಗಳಲ್ಲಿ**

ಅಥವಾ ಒಂದೇ ರೂಪದಲ್ಲಿ ಮೂಡಿದ ಜೀವತಂತು ಭೂಮಿ ತಿರುಗಿದಂತೆ ತಿರುಗಿದಂತೆ ಎಂತೆಂಥ ಕೊನೆಯಿರದ ಅಂತ್ಯವರಿಯದ ಕೋಟ್ಯಂತರ ಜೀವರೂಪಗಳಿಗೆ ಕಾರಣವಾಯ್ತು" ಎಂಬ ಧನ್ಯತೆಯ ಉದ್ಗಾರಗಳನ್ನು ಚಾರ್ಲಸ್ ಡಾರ್ವಿನ್ ತನ್ನ 'ಆರಿಜನ್ ಆಫ್ ಸ್ಪೀಷೀಸ್' ಪುಸ್ತಕದಲ್ಲಿ ಉಲ್ಲೇಖಿಸಿದ್ದಾನೆ. ಡಾರ್ವಿನ್ನನ ನೈಸರ್ಗಿಕ ಆಯ್ಕೆಯ ಸಿದ್ಧಾಂತದಲ್ಲಿ ಯಾವುದೇ ಜೀವಿಯು ತನ್ನ ಉಳಿವಿಗಾಗಿ ತನ್ನ ರಕ್ಷಣೆಯಲ್ಲಿ ತೊಡಗುತ್ತದೆ. ಆ ರಕ್ಷಣೆಯು ಇತರ ಬೇರೆ ಜೀವಿಗಳ ವಿರುದ್ಧವಾದ ಹೋರಾಟವಾಗಬಹುದು. ತಮ್ಮ ಆಹಾರಕ್ಕಾಗಿ, ವಸತಿಗಾಗಿ, ವಂಶಾಭಿವೃದ್ಧಿಗಾಗಿಯಾದರೂ ಸರಿ ತನ್ನದೇ ಅಥವಾ ಬೇರೆ ವರ್ಗಗಳ ಜೀವಿಯೊಡನೆಯ ಹೋರಾಟದಲ್ಲಿ ಯಾವ ಜೀವಿಯು ಆ ಉಳಿವಿನಲ್ಲಿ ಬದುಕುಳಿಯುತ್ತದೋ ಅದು ಮತ್ತು ಅದರ ಸಂತತಿಗಳು ಮಾತ್ರ ಬದುಕುಳಿಯುತ್ತವೆ ಎಂಬುದು ಈ ಸಿದ್ಧಾಂತದ ಅರ್ಥ. ಆ ಜೀವಿಯ ಹೋರಾಟವು ಇತರ ಜಾತಿಯ ಜೀವಿಗಳ ವಿರುದ್ಧವಾಗಬಹುದು ಅಥವಾ ಪ್ರಾಕೃತಿಕ ವಿಪತ್ತುಗಳ ವಿರುದ್ಧವಾಗಬಹುದು. ಎಲ್ಲವನ್ನೂ ಮೀರಿ ಉಳಿಯುವ ಜೀವಿ ಬದುಕಿ ಉಳಿಯುತ್ತದೆ. ತೇಜಸ್ವಿ ಮತ್ತು ನಾಗೇಶ ಹೆಗಡೆ ಇಬ್ಬರೂ ಇಕಾಲಜಿಯ ವಸ್ತು ವಿಷಯಗಳಲ್ಲಿ ವಿಕಾಸವಾದದ ನಿಯಮವನ್ನು ಅನ್ವಯಿಸಿದವರಾಗಿದ್ದಾರೆ. ಈ ಕುರಿತ ಕೆಲವು ಉದಾಹರಣೆಗಳನ್ನು ಹೀಗೆ ನೋಡಬಹುದು.

ವಿಸ್ಮಯ–೧ ರಲ್ಲಿ ತೇಜಸ್ವಿಯವರು **"ಪ್ರತಿಯೊಂದು ಜೀವಿಯೂ ತಾನು ಬೆಳೆಯುವ ಹಾದಿಯಲ್ಲಿ ಹಸಿವೆ, ಅಪಘಾತ, ವೈರಿಗಳಿಗೆ ಆಹಾರ, ಕ್ಷಾಮ ಮುಂತಾದ ಅನೇಕ ಅಡೆ ತಡೆಗಳನ್ನು ಎದುರಿಸಬೇಕಾಗುತ್ತದೆ. ಇದನ್ನೇ 'ಪರಿಸರ ಪ್ರತಿರೋಧ' ಎಂದು ಇಕಾಲಜಿಯಲ್ಲಿ ಕರೆಯುತ್ತಾರೆ. ಪ್ರತಿಯೊಂದು ಜೀವಿಯೂ ಜೀವನ ಸಂಗ್ರಾಮದಲ್ಲಿ ಬದುಕಿ ಉಳಿಯಲು ಅಥವಾ ಪ್ರತಿರೋಧವನ್ನೆದುರಿಸಲು ಸಶಕ್ತವಾಗಿರಬೇಕು. ಇಲ್ಲದಿದ್ದರೆ ಈ ಜೀವ ನಿಃಶೇಷವಾಗುತ್ತದೆ. ಈ ಪ್ರತಿರೋಧವನ್ನೆದುರಿಸಲು ಜೀವಿಗಳು ಅನುಸರಿಸುವ ಬಹುಮುಖ್ಯ ಸೂತ್ರ ಹೊಂದಾಣಿಕೆ. ಪ್ರತಿರೋಧವೇ ಇಲ್ಲದ ಪರಿಸರದಲ್ಲಿ ಜೀವಿಗಳ ವಿಕಾಸ ಸ್ಥಗಿತವಾಗಿರುವುದನ್ನು ನಾವು ಕಾಣಬಹುದು"** ಎನ್ನುತ್ತಾರೆ.

'ವಿಸ್ಮಯ–೨'ರಲ್ಲಿ ತೇಜಸ್ವಿಯವರು ಜೀವವಿಕಾಸವಾದ ಕುರಿತಾಗಿ **"ಈ ಜಗತ್ತಿನ ಜೀವ ಸಂಕುಲಗಳ ವಿಕಾಸದ ಹಾದಿಯನ್ನು ರೂಪಿಸುವಲ್ಲಿ ಪರಿಸರ ಅತ್ಯಂತ ಮುಖ್ಯವಾದ ಪಾತ್ರ ವಹಿಸಿದೆ. ಜೈವಿಕ ಹಾಗು ಪರಿಸರದ ಒತ್ತಡಗಳು ಒಂದಕ್ಕೊಂದು ಪೂರಕವಾಗಿ ಪ್ರತಿಕ್ರಿಯಿಸಿ, ಎಲ್ಲ ಜೀವಿಗಳ ವಿಕಾಸವೂ ಒಂದು ನಿರ್ದಿಷ್ಟವಾದ ದಿಕ್ಕು ಹಾಗೂ ಗತಿಯಲ್ಲಿ ಸಾಗುವಂತೆ ಮಾಡಿವೆ"** ಎಂಬುದಾಗಿ ವಿಶ್ಲೇಷಿಸುತ್ತಾರೆ.

'ಕರ್ವಾಲೋ'ದಲ್ಲಿ **'೬೦ ಕೋಟಿ ವರ್ಷಗಳ ಹಿಂದೆ ಈ ಜೀವಜಗತ್ತಿನಲ್ಲಿ ಒಂದು ಹಾರುವ ಓತಿಯಿತ್ತು. ಅದಕ್ಕೆ ರೆಕ್ಕೆಗಳಿದ್ದವು. ಜೀವವಿಕಾಸದ ಮುನ್ನಡೆಯಲ್ಲಿ ಈ ಹಾರುವ ಓತಿ ಮೆದುಳನ್ನು ಮೀರಿ ಮೈ ಬೆಳೆಸಿಕೊಂಡಿತು. ಮುಂದೆ ಭೌಗೋಳಿಕ ಪರಿಸರದಲ್ಲಿ ವ್ಯತ್ಯಾಸ ಉಂಟಾದಾಗ ಬದಲಾದ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ ಹಾರುವ ಓತಿಯ ವಂಶ ಅಳಿಯಿತು'** ಎಂಬ **ನಿರೂಪಣೆಯೊಂದಿಗೆ ಜೀವವಿಕಾಸದ ತತ್ವವನ್ನು ಅಲ್ಲಿಯೂ ಅನ್ವಯಿಸುತ್ತಾರೆ. ಅವು ಓದುಗರಿಗೆ ಕಾದಂಬರಿ ಎನಿಸಿಕೊಂಡರೂ ಇಕಾಲಜಿಯ ವಿಕಾಸವಾದದ ತತ್ವವನ್ನು ಬೇಸ್ ಆಗಿ**

ಇಟ್ಟುಕೊಳ್ಳುತ್ತವೆ. **"ಜೀವಜಾಲವನ್ನೇ ಹೊಸಕಿ ಹಾಕುತ್ತಾ ಕೊನೆಗೆ ಇಡೀ ಮಾನವ ಕುಲವೇ ನಶಿಸಿ ಹೋದರೂ ಭೂಮಿಗೆ ಅಂತ ಭಾರೀ ನಷ್ಟವೇನೂ ಆಗಲಾರದೆಂದೂ, ಅದು ಮತ್ತೆ ಜೀವವಿಕಾಸದ ಮಾರ್ಗವನ್ನೇ ಸರಿಪಡಿಸಿಕೊಂಡು ಹೊಸ ಜೀವಿಗಳ ಸೃಷ್ಟಿಕ್ರಿಯೆಯಲ್ಲಿ ತೊಡಗುತ್ತದೆಂದೂ ಆತ ಅರಿತಿದ್ದಾನೆ"** ಎಂದವರು ವಿಶ್ಲೇಷಿಸುತ್ತಾರೆ. ಜೀವವಿಕಾಸದ ಸ್ಥಿತ್ಯಂತರದ ವಿಕಾಸಗಳನ್ನು ಬೇಧಿಸುತ್ತಾ, ಪ್ರಕೃತಿಯ ನಿಗೂಢತೆ, ಜೀವ ಸಂಕುಲಗಳ ನಾಶ ಮತ್ತು ಅವುಗಳನ್ನು ಹಿಡಿಯಲು ಯತ್ನಿಸುವ ಮನುಷ್ಯನ ವಿಫಲತೆಯನ್ನು ಕರ್ವಾಲೋ ಕಾದಂಬರಿಯು ಚಿತ್ರಿಸುತ್ತದೆ.

'ಪ್ರತಿದಿನ ಪರಿಸರದಿನ' ಕೃತಿಯಲ್ಲಿ ನಾಗೇಶ ಹೆಗಡೆ ಅವರ **" ಭೂಮಿ ತನ್ನ ಕೋಟಿ ವರ್ಷಗಳ ಇತಿಹಾಸದಲ್ಲಿ ಅದೆಷ್ಟೋ ಬಾರಿ ಭಾರೀ ಹೊಡೆತನಗಳನ್ನು ಎದುರಿಸಿಯೂ ಜೀವಿಗಳ ವಿಕಾಸಕ್ಕೆ ಅನುಕೂಲಕರ ವಾತಾವರಣವನ್ನು ನಿರ್ಮಿಸಿಕೊಂಡಿದೆ. ಈ ವಿಕಾಸ ಮಾರ್ಗದಲ್ಲಿ ಅದೆಷ್ಟೋ ಬಾರಿ ಜೀವಿಗಳು ಭೂಪರಿಸರವನ್ನು ಬದಲಾಯಿಸಿಕೊಂಡಿವೆ. ಇಲ್ಲವೆ ಬದಲಾದ ಪರಿಸರಕ್ಕೆ ಹೊಂದುವಂಥ ಹೊಸ ಜೀವಿಗಳ ಸೃಷ್ಟಿಯಾಗಿದೆ. ಹೊಸ ಪರಿಸರಕ್ಕೆ ಹೊಂದಿಕೊಳ್ಳಲಾಗದ ಬಲಾಢ್ಯ ಜೀವಿಗಳೂ ಹೇಳ ಹೆಸರಿಲ್ಲದಂತೆ ನಿರ್ನಾಮವಾಗಿವೆ. ಆಗಾಗ ಬಂದ ಭಾರೀ ಹಿಮಯುಗಗಳಲ್ಲಿ ಇಡೀ ಜೀವಸಂಕುಲವೇ ನಲುಗಿ, ಕೋಟ್ಯಾಂತರ ಜೀವಿಗಳು ನಾಶವಾದರೂ ಮತ್ತೆ ವಿಕಾಸ ಪ್ರಕ್ರಿಯೆ ಮುಂದುವರೆದು ಮನುಷ್ಯನ ಉಗಮ ಮತ್ತು ವಿಕಾಸದವರೆಗೂ ಬಂದಿದೆ"**[೨೬] ಎಂಬ ವಿಕಾಸವಾದದ ಹೇಳಿಕೆಗಳನ್ನು ಕಾಣಬಹುದು.

ಹಾಗೆಯೇ, **"೨೦೦ ಕೋಟಿ ವರ್ಷಗಳ ಹಿಂದೆ ಇಂಗಾಲ ಆಮ್ಲವನ್ನೇ ಹೀರಿ ಸಾಗರದಲ್ಲಿ ಬದುಕುತ್ತಿದ್ದ ಅಸಂಖ್ಯಾತ ಸೂಕ್ಷ್ಮ ಏಕಾಣು ಜೀವಿಗಳು ಆಮ್ಲಜನಕವೆಂಬ ವಿಷ ಗಾಳಿಯನ್ನು ವಾಯುಮಂಡಲಕ್ಕೆ ಕಕ್ಕಿ ಕಕ್ಕಿ ಕೊನೆಗೆ ತಾವೇ ಉಸಿರುಗಟ್ಟಿ ನಿರ್ನಾಮವಾದವು. ಮುಂದೆ ಈ ವಿಷದ ಅನಿಲವನ್ನೇ ಕುಡಿದು ಬದುಕುವ ಹೊಸ ಜೀವಿಗಳು ವಿಕಾಸವಾದವು. ಅವೇ ಮಾನವನಿಗೆ ಜನ್ಮ ಕೊಟ್ಟವು. ಹಾಗಿದ್ದರೆ ವಿಷ ಗಾಳಿಯನ್ನೇ ಕುಡಿದು ಬದುಕುವ ಬೇರೆ ಜೀವಿಗಳು ಉದಯಿಸಬಹುದೇ? ಅಂದರೆ ನಾವು ನಮ್ಮ ಪೀಳಿಗೆಯನ್ನು ನಾಶ ಮಾಡುತ್ತೇವೆಯೇ ಹೊರತು ಭೂಮಿಯ ಜೀವಮಂಡಲವನ್ನು ನಾಶಮಾಡಲಾರೆವು ಅಲ್ಲವೇ ಎಂಬ ಪ್ರಶ್ನೆಗಳು ಉಳಿಗಾಗಿ ಹೋರಾಡುವಲ್ಲಿ ಮನುಷ್ಯ ಯಾವ ಲೆಕ್ಕ? ಆತ ಏನಿದ್ದರೂ ನಿಮಿತ್ತ ಎಂಬುದನ್ನು ಅರ್ಥೈಸುತ್ತವೆ"** ಎಂಬ ಡಾರ್ವಿನ್ನನ ವಿಕಾಸವಾದದ ಫಲಿತವನ್ನು ಹೆಗಡೆ ಅವರು ಕೃತಿಗಳಲ್ಲಿ ಅನಾವರಣಗೊಳಿಸುವರು. "ಇಪ್ಪತ್ತನೇ ಶತಮಾನದ ಮತ್ತೊಂದು ವೈಶಿಷ್ಟ್ಯವೆಂದರೆ ವಿಫುಲವಾದ ಜನಪ್ರಿಯ ಸಾಹಿತ್ಯದ ಸೃಷ್ಟಿ. ಅಸಿಮೋವ್, ಕಾರ್ಲ್‌ಸಗಾನ್, ರಿಚರ್ಡ್ ಡಾಕಿನ್ಸ್, ಎ.ಓ.ವಿಲ್ಸ್, ಗ್ಯಾರಿಜುಕೋವ್, ಮಿಚಿಯೋ ಕಾಕು, ಫ್ರಿಟ್ಯಾಪ್ ಕಾಪ್ರ, ಸ್ಟೀಫನ್ ಹಾಕಿಂಗ್ ಅಸಂಖ್ಯಾತ ಬರಹಗಾರರು ತಮ್ಮ ಕೃತಿಗಳ ಮೂಲಕ ಜನಪ್ರಿಯ ವಿಜ್ಞಾನಕ್ಕೆ ಒಂದೊಂದು ಮಹತ್ವ ದೊರಕಿಸಿಕೊಟ್ಟರು. ಯಾವುದೇ ಸೃಜನಶೀಲ ಸಾಹಿತ್ಯದಷ್ಟೇ ಹಲವೊಮ್ಮೆ ಅದನ್ನು ಮೀರಿಸಿದ ಜನಪ್ರಿಯತೆಯನ್ನು ವೈಜ್ಞಾನಿಕ ಕೃತಿಗಳು ಗಳಿಸಿದೊಂದು ವಿಶೇಷ. ವಿಜ್ಞಾನ ಜನಮನವನ್ನು ಪ್ರಭಾವಿಸಿರುವ ರೀತಿಗೆ ಇದೊಂದು ನಿದರ್ಶನ"[೨೭] ಇಬ್ಬರಲ್ಲೂ ಅಭಿವ್ಯಕ್ತಗೊಳ್ಳುವ ವೈಜ್ಞಾನಿಕ ನಿರೂಪಣೆಗಳು ಶುಷ್ಕ ಹಾಗೂ ಸಾಂಪ್ರದಾಯಿಕವೆನಿಸುವ ನಿರೂಪಣೆಗಳಿಗಿಂತಲೂ ಭಿನ್ನವಾಗಿವೆ. ಸೃಜನೇತರ ಕೃತಿಗಳಾದ ವಿಸ್ಮಯ, ಮಿಸ್ಸಿಂಗ್ ಲಿಂಕ್,

ಇರುವುದೊಂದೇ ಭೂಮಿ, ಪ್ರತಿದಿನ ಪರಿಸರ ದಿನ, ಭೂಮಿಯೆಂಬ ಗಗನನೌಕೆಗಳಲ್ಲಿನ ಲೇಖನಗಳಲ್ಲಿ ಪಶ್ಚಿಮದ ಬರವಣಿಗೆ ಮಾದರಿಗಳ ಅನುಸರಣೆ ಸ್ವಲ್ಪಮಟ್ಟಿಗೆ ಕಂಡುಬರುತ್ತದೆ. ಪರಿಸರವನ್ನು ಕೇಂದ್ರವಾಗಿಸಿಕೊಂಡು ಸತ್ಯಾನ್ವೇಷಣೆಗೆ ತೊಡಗಿಕೊಳ್ಳುವ ಪ್ರವೃತ್ತಿಯನ್ನು ಇಬ್ಬರಲ್ಲೂ ಕಾಣಬಹುದಾಗಿದೆ. ಪರಿಸರ ಪ್ರಜ್ಞೆಯ ಭಾಗವಾಗಿ ವಿವೇಚಿಸುವುದಾದರೆ ಈ ಇಬ್ಬರನ್ನೂ ಅರ್ಥೈಸಿಕೊಳ್ಳಲು ವೈಜ್ಞಾನಿಕ ಕತೆಗಳ ತಾತ್ವಿಕ ಸ್ವರೂಪದ ಹಿನ್ನೆಲೆಯು ಒಂದರ್ಥದಲ್ಲಿ ಮುಖ್ಯವಾಗುವುದು.

'ಇರುವುದೊಂದೇ ಭೂಮಿ' ಕೃತಿಯಲ್ಲಿ ರೆಡ್ ಇಂಡಿಯನ್ ಜನಾಂಗದ ಮುಖ್ಯಸ್ಥನಾದ ಚೀಫ್ ಸೀಟ್ಲ್ ಹೇಳಿಕಗಳನ್ನು ಹೆಗಡೆ ದಾಖಲಿಸುವ ಮೂಲಕ ಭೂಮಿ ಉಳಿವನ್ನು ಸಮರ್ಥಿಸುವ ಧೋರಣೆಯನ್ನು ಹೊಂದಿದವರಾಗಿದ್ದರು. ಚೀಫ್ ಸೀಟ್ಲ್‌ನ ಈ ಧೋರಣೆಯನ್ನು ತೇಜಸ್ವಿಯು ಸಹ ಹೊಂದಿದ್ದರು. ಇನ್ನೂ ಸಹ ಪೂರ್ಣವಾಗಿ ಪರಿಶೋಧನೆಗೊಳಗಾಗದ, ಹಲವು ವಿಸ್ಮಯಗಳನ್ನು ಗರ್ಭೀಕರಿಸಿಕೊಂಡಿರುವ ಪಶ್ಚಿಮಘಟ್ಟ, ಅದರೊಳಗಿರುವ ಎಲ್ಲಾ ಜೀವಿಗಳ ಬದುಕಿನ ಬಗ್ಗೆ ಅವರ ಅನ್ವೇಷಣೆ ಮುಂದುವರೆದಿತ್ತು. ಆದರೆ ವಿಧಿ ಬಿಡಲಿಲ್ಲ.(೨೮) ಅಂತಿಮವಾಗಿ ಮನುಷ್ಯನ ವರ್ತನೆ, ಆಲೋಚನೆ, ಅವನ ಬದುಕಿನ ದಾರಿ ಈ ಪರಿಸರದೊಡನೆ ಬೆಸೆದುಕೊಂಡೇ ಬಂದಿದೆ. ಅಭಿವೃದ್ಧಿ ಅಥವಾ ಬೆಳವಣಿಗೆ ಎಂಬುದಕ್ಕೆ ಒಂದು ಹೊಸ ವ್ಯಾಖ್ಯಾನ ಹುಡುಕುವ ತುರ್ತಿದೆ. ಪರಿಸರವನ್ನು ಉಳಿಸಿ, ತಾನೂ ಉಳಿದು ಬೆಳೆಯುವ ಹೊಸ ಹಾದಿಯ ಅನ್ವೇಷಣೆಯಾಗಬೇಕಿದೆ ಎಂಬ ಖಚಿತ ನಿಲುವು ಅವರದ್ದಾಗಿತ್ತು ಎಂಬ ಅಭಿಪ್ರಾಯಗಳು ಅವರಲ್ಲಿ ಸುಪ್ತವಾಗಿದ್ದ ಪರಿಸರ ಪ್ರಜ್ಞೆಗೆ ಸಾಕ್ಷಿಯಾಗುತ್ತವೆ.

ಕೃತಿಕಾರರ ಪರಿಸರ ಪ್ರಜ್ಞೆ ಕುರಿತ ಸಾಹಿತ್ಯಿಕ ಅಂಶಗಳು ಬಹುತೇಕ ವೈಚಾರಿಕತೆಯ ಉದ್ದೇಶವನ್ನು ಮೊದಲುಗೊಳ್ಳುವುದರಿಂದ ಇಂತಹ ಸಾಹಿತ್ಯಗಳು ಅಥವಾ ಜನಸಾಮಾನ್ಯರಿಗೆ ಹತ್ತಿರವಾಗುವ ಪರಿಸರ ವಸ್ತು ವಿಷಯಗಳು ಪರಿಸರ ವಿಜ್ಞಾನದ ಆವಿಷ್ಕಾರಗಳಿಗೆ ಮತ್ತು ಅವು ಹೊರಹೊಮ್ಮಿಸುವ ಫಲಿತಗಳಿಗೆ ಯಾವತ್ತೂ ಮುಖಾಮುಖಿಯಾಗುವುದನ್ನು ಗುರುತಿಸಬಹುದಾಗಿದೆ. ಸಾಹಿತ್ಯಾಂಶ ಮತ್ತು ವಿಜ್ಞಾನಾಂಶ ಆಧಾರಿತ ಸೃಜನೇತರ ಸಾಹಿತ್ಯಗಳ ಸೃಷ್ಟಿಯಲ್ಲಿ ತೇಜಸ್ವಿಯಾಗಲಿ, ನಾಗೇಶ ಹೆಗಡೆ ಅವರಾಗಲಿ ಪ್ರತ್ಯೇಕತೆಯ ಮಡಿವಂತಿಕೆಯ ಧೋರಣೆ ಹೊಂದದೆ ಜ್ಞಾನ ಸಂರಚನೆಗೆ ಅಂತರ್ ಶಿಸ್ತನ್ನು ಅಗತ್ಯಾನುಸಾರ ಬಳಕೆಮಾಡುತ್ತಾ, ವಿಶಾಲತೆಯೊಂದಿಗೆ ಅದರ ಲಾಭ ಪಡೆದುಕೊಳ್ಳುವುದನ್ನು ಗ್ರಹಿಸಬಹುದಾಗಿದೆ. ಪರಿಸರ ವಿಜ್ಞಾನ, ಕೀಟಶಾಸ್ತ್ರ, ಮಾನವಶಾಸ್ತ್ರ, ಜೀವಿಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳಶಾಸ್ತ್ರದ ಸಂಬಂಧಗಳನ್ನು ಬೆರೆಸಿಕೊಳ್ಳುತ್ತಾರೆ. ಹಾಗಾಗಿ ಇವರ ಕೃತಿಗಳಲ್ಲಿ ಸಾಮಾಜಿಕ ವಿಜ್ಞಾನ, ಪರಿಸರ ವಿಜ್ಞಾನದ ಶಿಸ್ತಿನಲ್ಲಿಯೂ ಜೀವ ಸಂಕುಲಗಳ ಮತ್ತು ಮಾನವಸಂಬಂಧದ ಪಾತ್ರಗಳು ಸೃಜನೆಯಾಗುತ್ತವೆ.

ಸೃಜನಶೀಲ ಸಾಹಿತ್ಯದ ಪ್ರಾಕೃತಿಕ ಪರಿಸರದ ನಿರೂಪಣೆಗಳಲ್ಲಿ ತೇಜಸ್ವಿ **'ಜೈವಿಕ ಮಾನವ'** ಸಂಬಂಧದ ನಂಟನ್ನು ಅನಾವರಣಗೊಳಿಸಿದರೆ ನಾಗೇಶ ಹೆಗಡೆ ಅವರು ತಮ್ಮ ಸೃಜನೇತರ ಕೃತಿಗಳಲ್ಲಿ **'ಭೂ ಮಾನವ/ಜಿಯಾಲಜಿಕಲ್ ಮಾನವ'** ಸಂಬಂಧಗಳಿಗೆ ಹಾಗೂ ಆಧುನಿಕ

ಮಾನವ ಕಲ್ಪನೆಗೆ ಮುಖಾಮುಖಿಯಾಗುತ್ತಾರೆ. ನಾಗೇಶ ಹೆಗಡೆ ಅವರು ಅಂತರ್ ಪಠ್ಯ ಶಾಸ್ತ್ರಗಳನ್ನು ಹೆಚ್ಚಾಗಿ ಬಳಸಿದರೂ ಪರಿಸರದ ವ್ಯಾಪಕತೆ ಬಗ್ಗೆ ಚರ್ಚಿಸುವಾಗ, ಪರಿಸರಮುಖಿಯಾದ ಅಲೋಚನೆಗಳಿಗೆ ಬರಹದ ಮೆರುಗು ನೀಡುವಾಗ, ಜೀವಸಂಕುಲಗಳ ವಿಸ್ಮಯ, ಕೌತುಕ, ರಹಸ್ಯ, ವಿಕೋಪ, ಆಪತ್ತುಗಳ ಅನಾವರಣ ಮಾಡುವಾಗ ಅವರು ಹೆಚ್ಚಾಗಿ 'ಭೂ ಮಾನವ/ಜಿಯಾಲಜಿಕಲ್ ಮಾನವ' ಸಂಬಂಧಗಳನ್ನು ಬಿಡಿಸುತ್ತಾರೆ. ಪ್ರತಿ ಹಂತದಲ್ಲೂ ಮಾನವ ಕಲ್ಪನೆಯಾಗಲಿ, ಪರಿಸರವಾಗಲಿ 'ಭೂಮಿ ಉಳಿವಿನ' ಪ್ರಜ್ಞೆಯೊಂದಿಗೆ ತಳುಕು ಹಾಕಿಕೊಳ್ಳುತ್ತದೆ. ಅಂಕಣ ಬರವಣಿಗೆ, ಲೇಖನಗಳ ಸಿದ್ಧತೆಗಳು ಹೆಗಡೆ ಅವರ ಆಸಕ್ತಿ ಕ್ಷೇತ್ರವಾದ್ದರಿಂದ ಜೈವಿಕ ಪರಿಸರದ ಸಾಮಾಜಿಕ ಜೀವನ ಅಥವಾ ಸಮಾಜ ವಿಜ್ಞಾನದ ನಿರೂಪಣೆಗಳಿಗೆ ಹೆಚ್ಚು ಅವಕಾಶ ನೀಡಲಾರವು. ಆದರೆ ಮನುಷ್ಯನ ಆಧುನಿಕ ಜೀವನಶೈಲಿಯ ಸಾಮಾಜಿಕತೆಯನ್ನು, ಆರ್ಥಿಕ ಸಂಕಷ್ಟವನ್ನು ಮತ್ತದರ ಪರಿಣಾಮಗಳನ್ನು ಹಸಿರು ಪರಿಸರದ ಸಂಬಂಧದೊಂದಿಗೆ ಬೆಸೆಯುವವು.

'ಸಹಜ ಕೃಷಿ' ರಾಸಾಯನಿಕ ಕೃಷಿ ಪದ್ಧತಿಯಂತೆ ಆಹಾರ ಬೆಳೆಯುವ ಸಿದ್ಧ ಸಮೀಕರಣವನ್ನು ನೀಡುವುದಿಲ್ಲ. ಅದು ಒಂದು ಜೀವನ ಕ್ರಮ, ಆಲೋಚನಾ ವಿಧಾನ, ಆಧ್ಯಾತ್ಮಿಕ ದೃಷ್ಟಿಯನ್ನೂ ಬೋಧಿಸುತ್ತದೆ. **"ಮನುಷ್ಯ ಹಠಮಾರಿ. ಪ್ರಕೃತಿಯನ್ನು ತನ್ನ ಪ್ರಚಂಡ ಬುದ್ಧಿಶಕ್ತಿಯಿಂದ ಗೆಲ್ಲಬಹುದು ಹಾಗೂ ತನಗೆ ಬೇಕಾದ ಹಾಗೆ ಪ್ರಕೃತಿಯನ್ನೇ ಬದಲಿಸಬಹುದೆಂಬ ಸೊಕ್ಕಿನ ಭ್ರಮೆಯಲ್ಲಿದ್ದಾನೆ. ಅದೇ ಭ್ರಮೆಯಲ್ಲಿ ಪರಿಸರವನ್ನು ವಿನಾಶದ ಹಂಚಿಗೆ ದೂಡುತ್ತಿದ್ದಾನೆ"** ಎನ್ನುತ್ತಾರೆ ಫುಕುವೂಕ. ಗ್ರಾಮೀಣ ಬದುಕಿನ ಜೀವನಾಡಿಯಾಗಿರುವ ಕೃಷಿಯಾಧಾರಿತ ಅಭಿವೃದ್ಧಿಯ ಚಿಂತನೆಗಳಲ್ಲಿ ಮತ್ತು ಆರ್ಥಿಕ ಸ್ವಾವಲಂಬನೆ ಹಾಗೂ ಪ್ರಗತಿ ಮಾರ್ಗದ ಪ್ರತಿಪಾದನೆಗಳಲ್ಲಿ 'ಗಾಂಧಿ ಮತ್ತು ಫುಕುವೊಕ' ಅವರ ಚಿಂತನೆಗಳಿಂದಲೂ ಈ ಇಬ್ಬರೂ ಲೇಖಕರು ಪ್ರೇರಿತರಾಗಿದ್ದಾರೆ ಎಂಬುದಕ್ಕೆ ಕೃತಿಗಳಲ್ಲಿ ನಮಗೆ ಲಭ್ಯವಾಗಬಹುದಾದ ಉಲ್ಲೇಖವೆಂದರೆ, ತೇಜಸ್ವಿ ಅವರು ಫುಕುವೊಕರವರ **'ಸಹಜ ಕೃಷಿ'** ಬಗ್ಗೆ ಸಮಗ್ರತೆಯನ್ನು ಪರಿಚಯಿಸುವ ಕೃತಿಯೊಂದನ್ನು ರಚಿಸಿರುವುದು ಮತ್ತು ನಾಗೇಶ ಹೆಗಡೆ ಸಹಜ ಕೃಷಿ ಸಂತನ ಬಗ್ಗೆ **'ಫುಕುವೊಕ ಎಂಬ ಡೇಂಜರ್ ಸಿಗ್ನಲ್'** ಎಂಬ ಲೇಖನವೊಂದನ್ನು ರಚಿಸಿ 'ಅಭಿವೃದ್ಧಿಯ ಅಂಧಯುಗ' ಕೃತಿಯಲ್ಲಿ ಸೇರಿಸಿರುವುದು.

'ಸಹಜ ಕೃಷಿ' ಕೃತಿಯ ಮುನ್ನುಡಿಯಲ್ಲಿ **"ನಾವಿನ್ನೂ ಗಾಂಧೀಜಿಯವರ ಗ್ರಾಮ ಸ್ವರಾಜ್ಯ, ವಿಕೇಂದ್ರೀಕರಣ, ಸರಳ ಜೀವನ ಇತ್ಯಾದಿಗಳ ಹಂಬಲದಲ್ಲೇ ಇದ್ದೇವೆ. ಆರ್ಥಿಕ ಜಾಗತೀಕರಣದತ್ತ ಧಾವಿಸುತ್ತಿರುವ ನಾಗರೀಕತೆಯಲ್ಲಿ ಸ್ವಾವಲಂಬನೆ ಆರ್ಥಿಕ ಅಪರಾಧದಂತೆ ಕಾಣುತ್ತದೆ. ದಿನವೂ ನೂರಾರು ವಸ್ತುಗಳನ್ನು ಉತ್ಪಾದಿಸಿ ಜಾಹೀರಾತುಗಳ ಮೂಲಕ ಪ್ರಚೋದಿಸುತ್ತಿರುವ ಆಧುನಿಕ ಕೈಗಾರಿಕೆಗಳಿಗೆ ಸರಳ ಜೀವನವೆಂಬುದು ಸೋಂಕು ರೋಗದಂತೆ ಭಯಾನಕವಾಗಿ ಕಾಣುತ್ತದೆ. ಆಶಾವಾದ, ನಿರಾಶಾವಾದಗಳ ಆಚೆ ನಿಂತು ಕೃಷಿ ಬಗ್ಗೆ ಮಾತಾಡುತ್ತಿರುವ ಫುಕೋಕ ಅವರು ಗಾಂಧಿ, ಲೋಹಿಯಾ, ಜೆಪಿ ಮೊದಲಾದವರು ಹೇಳಿದ್ದನ್ನೇ ಕೃಷಿಯ ಪರಿಭಾಷೆಯಲ್ಲಿ ಹೇಳುತ್ತಿದ್ದಾರೆಂದು ನನ್ನ ಅನಿಸಿಕೆ"**[೨೯] ಎನ್ನುತ್ತಾರೆ ತೇಜಸ್ವಿ.

ನಾಗೇಶ ಹೆಗಡೆ ಅವರು 'ಅಭಿವೃದ್ಧಿಯ ಅಂಧಯುಗ'ದಲ್ಲಿ **"ಆಧುನಿಕ ಮಾನವನ ಸಾಧನೆಗಳ ಮಹಾಧಾರೆಯಲ್ಲಿ ಸಮಸ್ತರೂ ಕೊಚ್ಚಿ ಹೋಗುತ್ತಿರುವಾಗ ಬೆರಳೆಣಿಕೆಯ ಕೆಲವರು ಮಾತ್ರ ಹೇಗೋ ದಡ ಸೇರಿ ಗಟ್ಟಿ ನೆಲದ ಮೇಲೆ ನಿಂತು ಪ್ರಳಯಧಾರೆಯನ್ನು ನೋಡುವ ತಾಕತ್ತನ್ನು ಪಡೆಯುತ್ತಾರೆ. ದಕ್ಷಿಣ ಜಗತ್ತಿನ ಗಾಂಧೀಜಿಗೆ ಆ ಶಕ್ತಿ ಸಿದ್ಧಿಸಿತ್ತು. ಪಶ್ಚಿಮದಲ್ಲಿ ಹೆನ್ರಿ, ಥೊರೊ, ಮಧ್ಯ ಯೂರೋಪ್‌ನಲ್ಲಿ ಶ್ಯುಮಾಕರ್, ಉತ್ತರದಲ್ಲಿ ಐವಾನ್ ಇಲೀಚ್ ಇದ್ದಂತೆ, ಪೂರ್ವಜಗತ್ತಿನ ಪ್ರತಿನಿಧಿಯಾಗಿ ಫುಕುವೊಕಾಗೆ ಅದೇ ದರ್ಶನ ಲಭಿಸಿತ್ತು. ಇವರೆಲ್ಲಾ ಒಂದರ್ಥದಲ್ಲಿ ಬಾವುಟಗಳೇ. ಮನುಷ್ಯ ಇಂದು ಪೃಥ್ವಿಯ ಎಲ್ಲವನ್ನೂ ಆಕ್ರಮಿಸುತ್ತಾ ಎಲ್ಲವನ್ನೂ ತನ್ನಿಷ್ಟದಂತೆ ಬದಲಾಯಿಸುತ್ತಾ ಹೊರಟಿದ್ದನ್ನು ನೋಡಿ ದಿಗಿಲುಗೊಂಡ ಈ ಭೂಮಿ ತನ್ನ ಎಲ್ಲಾ ಮಗ್ಗುಲಲ್ಲೂ ಒಂದೊಂದು ಎಚ್ಚರಿಕೆಯ ಕೆಂಪು ಬಾವುಟವನ್ನು ನೆಟ್ಟಂತೆ ಫೂಕುವೊಕ ಒಂದು ಬಾವುಟವಾಗಿದ್ದನ್ನಷ್ಟೇ"**[೩೦] ಎನ್ನುತ್ತಾರೆ.

ಜೀವಿತದಲ್ಲಿ ಇಬ್ಬರೂ ಲೇಖಕರು ಕೃಷಿಯೊಂದಿಗೆ ಬದುಕು ಕಟ್ಟಿಕೊಂಡವರು ಮತ್ತು ಸಹಜೀವನ ನಡೆಸಿದವರು. ಈ ದೇಶದ ಪರಿಸರ ಹೋರಾಟ ಮತ್ತು ಚಳುವಳಿಗಳ ಕಾಲಘಟ್ಟದಲ್ಲಿ ಐತಿಹಾಸಿಕ ವಿಲಕ್ಷಣತೆಗೆ ಒಳಗಾದವರಂತೆ ಕಂಡುಬರುವ ನಾಡಿನ ಸುಶಿಕ್ಷಿತರಿವರು. ಆಧುನಿಕ ಸಮಾಜದ ಧಿಮಾಕು ಮತ್ತು ದಾಂಗುಡಿ ಎರಡೂ ನಿಸರ್ಗದ ಕೌಶಲಗಳ ಎದುರು ಅದೆಷ್ಟು ಪೊಳ್ಳು ಎಂಬುದನ್ನು ಬಲವಾಗಿ ನಂಬಿದವರು. **'ಮನುಷ್ಯನ ಆರೈಕೆಗೆ ಒಗ್ಗಿಕೊಂಡ ನಿಸರ್ಗವನ್ನು ಓಲೈಸಿ ಮತ್ತೆ ಅದು ತನ್ನ ಸತ್ವವನ್ನು ಕಂಡುಕೊಳ್ಳುವಂತೆ ಮಾಡಲು ದೀರ್ಘ ಸಮಯ-ಸಂಯಮ ಬೇಕು'** ಎಂಬ ಕೃಷಿ ದಾರ್ಶನಿಕ ಫುಕುವೊಕರ ಮಾತನ್ನು ರೈತಾಪಿವರ್ಗದವರ ದೃಷ್ಟಿಯಿಂದ ಮಾತ್ರವಲ್ಲದೆ, ಸ್ವಪ್ರೇರಣೆಯಿಂದಲೂ ಇಬ್ಬರೂ ಕಿವಿಗೊಟ್ಟು ಗಹನವಾಗಿ ಆಲಿಸಿಕೊಂಡಿದ್ದರು. ಏಕೆಂದರೆ ಬದುಕಲ್ಲಿ ಇಬ್ಬರಿಗೂ ಕೃಷಿ ದೀಕ್ಷೆಯಾಗಿತ್ತು. "ರೈತರ ಪಡಿಪಾಟಲು ನೋಡಿದ ಸಾಲಕೊಟ್ಟವರು ಆತ್ಮಹತ್ಯೆ ಮಾಡಿಕೊಳ್ಳಬೇಕೇ ಹೊರತೂ ನಮ್ಮ ರೈತರಲ್ಲ, ಹಾಗಾಗಿದೆ ಅವರ ಸ್ಥಿತಿ" ಎಂದು ಕನಿಕರಿಸಿದ್ದರು ತೇಜಸ್ವಿ. ಹಾಗೆಯೇ ರೈತರ ಬವಣೆಗಳನ್ನು ಎದುರಾಗುತ್ತಿರುವ ಸಂಧಿಗ್ಧತೆಗಳನ್ನು ನಾಗೇಶ ಹೆಗಡೆ ಅವರು ಅರಿತಿದ್ದರು. ಇದಕ್ಕೆ ಒಂದು ಉದಾಹರಣೆ ಎಂದರೆ ಬದನವಾಳು ಗ್ರಾಮದ ಸತ್ಯಾಗ್ರಹದಲ್ಲಿ ನಾಗೇಶ ಹೆಗಡೆ ಸಭಿಕರನ್ನು ಉದ್ದೇಶಿಸಿ ಮಾತನಾಡಿದ್ದು. ಪರಿಸರ ಪ್ರಜ್ಞೆಯ ಭಾಗವಾಗಿ ಇಲ್ಲಿ ದಾಖಲಿಸಿದೆ. "ಇಲ್ಲಿ ನಾವು ಸಮಾವೇಶಗೊಂಡಿರುವುದು ಅಪರೂಪದ ವಿದ್ಯಮಾನ. ಇದೇ ಸಂದರ್ಭದಲ್ಲಿ ಯಾರ ಬಳಿಯಾದ್ರು ಲ್ಯಾಪ್‌ಟಾಪ್ ಇದ್ದಲ್ಲಿ 'ಪ್ರೊಟೆಸ್ಟ್ ಇಂಡಿಯಾ' ಎಂದು ಗೂಗಲ್ ಹಾಕಿ ನೋಡಿದರೆ ಸುಮಾರು ೨೦೦ಕ್ಕಿಂತಲೂ ಹೆಚ್ಚು ಸತ್ಯಾಗ್ರಹಗಳು, ಪ್ರತಿಭಟನೆಗಳು ಇದೇ ದಿನ ಏಕಕಾಲಕ್ಕೆ ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ರಾಜ್ಯದಲ್ಲಿ ನಡೆಯುತ್ತಿರುವುದನ್ನು ನೀವು ಕಾಣಬಹುದು.

ಈ ಕ್ಷಣ ದಿಲ್ಲಿಯಲ್ಲಿ ಮೂರು ಲಕ್ಷ ರೈತರು ಒಂದು ಪಕ್ಷದ ಕಾರ್ಯಕ್ರಮವನ್ನು ಗಟ್ಟಿಗೊಳಿಸುವುದಕ್ಕಾಗಿ ಭೂಸ್ವಾಧೀನದ ವಿರುದ್ಧ ಅಲ್ಲಿ ಸೇರಿದ್ದಾರೆ. ಇದೇ ಸಂದರ್ಭದಲ್ಲಿ ಪಶ್ಚಿಮ ಬಂಗಾಳದಲ್ಲಿ ಜೂಟ್ ಬೆಳೆಗಾರರರು ಸೇರಿದ್ದಾರೆ. ಗುಜರಾತ್‌ನಲ್ಲಿಯೂ ರೈತರು ಸೇರಿದ್ದಾರೆ. ಮಹಾರಾಷ್ಟ್ರದಲ್ಲಿ ರೈತರು ರಸ್ತೆಗಳಲ್ಲಿ ಟೋಲ್ ಬೇಡ ಅಂತ ಸತ್ಯಾಗ್ರಹ ಮಾಡ್ತಾ

ಇದ್ದಾರೆ. ಕೆಲವು ಕಡೆ ನೀರಾವರಿ ಬೇಕು ಅಂತ ಸತ್ಯಾಗ್ರಹ ಮಾಡ್ತಾ ಇದ್ರೆ, ಇನ್ನು ಕೆಲವು ಕಡೆ ನಮಗೆ ಅಣೆಕಟ್ಟು ಬೇಡ ಎಂದು ಸತ್ಯಾಗ್ರಹ ನಡೀತಾ ಇದೆ. ಕೆಲವರು ಹೆದ್ದಾರಿ ಬೇಕು ಅಂದ್ರೆ ಮತ್ತೆ ಕೆಲವರು ಹೆದ್ದಾರಿ ಬೇಡ ಎನ್ನುತ್ತಿದ್ದಾರೆ. ಎಲ್ಲರಿಗಿಂತ ಹೆಚ್ಚಾಗಿ ಹೆಮ್ಮೆ ಪಡಬೇಕಾದ ಸತ್ಯಾಗ್ರಹ ನಮ್ಮದು. ಸುಸ್ಥಿರ ಬದುಕಿಗಾಗಿ ಸತ್ಯಾಗ್ರಹ ಮಾಡ್ತಾ ಇದ್ದೇವೆ. ಸುಸ್ಥಿರ ಬದುಕು ನಮಗೆ ಬೇಕು. ನಮಗಷ್ಟೇ ಅಲ್ಲ ರಾಷ್ಟ್ರಕ್ಕೂ ನೆರೆ ರಾಜ್ಯಗಳಿಗೂ ಸುಸ್ಥಿರ ಬದುಕು ಬೇಕು. ಅದಕ್ಕಾಗಿ ಒಂದು ವಾಣಿಜ್ಯವನ್ನು ರೂಪಿಸಿಕೊಡಿ. ಅದಕ್ಕಾಗಿ ಒಂದು ಆಡಳಿತ ವ್ಯವಸ್ಥೆ ರೂಪಿಸಿಕೊಡಿ ಎಂದು ಇಲ್ಲಿ ಸೇರಿದ್ದೇವೆ.

ಇದೇ ೬೦ ವರ್ಷಗಳ ಹಿಂದೆ ಬದನವಾಳುವಿನಲ್ಲಿ ಒಂದು ಸತ್ಯಾಗ್ರಹ ನಡೀತಾ ಇದ್ದಿದ್ರೆ... ಕಬ್ಬಿಣದ ಕಂಬ ಇರುತ್ತಿರಲಿಲ್ಲ. ಸೋಗೆ ಚಪ್ಪರವಿರುತ್ತಿತ್ತು. ಕಬ್ಬಿಣದ ಬದಲಿಗೆ ಬೊಂಬಿನ ಕಂಬವಿರುತ್ತಿತ್ತು. ಸೋಗೆಯ ಚಪ್ಪರದಿಂದಾಗಿ ನೂರಾರು ಹಳ್ಳಿಯವರಿಗೆ ಅನುಕೂಲವಾಗ್ತಿತ್ತು. ಬೊಂಬನ್ನು ಬೆಳೆಸಿದವರಿಗೂ ಅನುಕೂಲವಾಗ್ತಿತ್ತು. ಬೊಂಬನ್ನು ಬೆಳೆಸಿದ್ದರಿಂದ ಮಳೆ ಬೆಳೆ ಚೆನ್ನಾಗಿರ್‍ತಿತ್ತು. ಪ್ಲಾಸ್ಟಿಕ್ ಬದಲಿಗೆ ಮಣ್ಣಿನ ಕುಡಿಕೆಗಳಲ್ಲಿ ನೀರು ಸಿಗ್ತಿತ್ತು. ಇದೆಲ್ಲಾ ಈಗ ಹೊರಟೋಗಿದೆ. ನಮ್ಮ ಬದುಕು ಹ್ಯಾಗಾಗಿದೆ ಅಂದ್ರೆ, ನಾವು ಅಂಬಾನಿ ಮೇಲೆ ಡಿಪೆಂಡ್ ಆಗಿದ್ದೇವೆ. ಸತ್ಯಾಗ್ರಹ ಮಾಡೊಕ್ಕೂ ಅಂಬಾನಿನಾ ಕೇಳ್ಬೇಕ್ಕಾಗಿದೆ. ಅದಿರು, ಕಲ್ಲಿದ್ದಲು, ಪೆಟ್ರೋಲಿಯಂ ಕಚ್ಚಾತೈಲವನ್ನ ಎರಡೂವರೆ ಸಾವಿರ ಅಡಿಯ ಭೂಮಿಯಿಂದ ಬಗೆದು, ಅದೆಲ್ಲೋ ಮೆಕ್ಸಿಕೋದಲ್ಲಿ ಸಾವಿರಾರು ಅಡಿ ಆಳಕ್ಕೆ ಕೊರೆದು ಮೇಲೆತ್ತಲು ಕೊಳವೆಗಳನ್ನು ಅಳವಡಿಸಿ, ಅಲ್ಲೆಲ್ಲಿಂದಲೋ ಎತ್ತಿ ಸಂಸ್ಕರಿಸಿ ಹಡಗಿನಲ್ಲಿ ತುಂಬಿಸಿ ಭಾರತಕ್ಕೆ ತಂದು ನಗರಗಳಿಗೆ ಕೊಡ್ತಾ ಇದ್ದೇವೆ. ಭೂಮಿ ಇದುವರೆಗೂ ಯಾವುದನ್ನ ಅಪಾಯಕಾರಿಯೆಂದು ತನ್ನೊಳಗೆ ಅಡಗಿಸಿ ಇಟ್ಟಿತ್ತೋ ಅದನ್ನೆಲ್ಲಾ ನಾವು ಬಗೆಯುತ್ತಾ ಇದ್ದೇವೆ. ಭೂಮಿ ಯಾವುದನ್ನು ಚೆನ್ನಾಗಿರಲಿ ಎಂದು ಬೆಳೆಸಿಟ್ಟಿತ್ತೋ ಅದನ್ನೆಲ್ಲಾ ಧ್ವಂಸ ಮಾಡ್ತಾ ಇದ್ದೇವೆ. ಭೂಮಿ ಬಿಸಿಯಾಗದೇ ಇರುತ್ತಾ? ಇಷ್ಟೆಲ್ಲಾ ಯಾಕ್ ಮಾಡ್ತಿದೀವಿ ಅಂತಾ ಕೇಳಿದ್ರೆ ಜಿ.ಡಿ.ಪಿ. ಏರಸ್ಲಿಕ್ಕೆ ಅಂತಾರೆ ಸ್ವಾಮಿ. ನಾವು ನೀವು ಆರೋಗ್ಯವಾಗಿದ್ರೆ ಜಿ.ಡಿ.ಪಿ ಏರೋದಿಲ್ಲ. ಆಸ್ಪತ್ರೆ, ಮೆಡಿಕಲ್ ಕಾಲೇಜ್, ಡಯಾಗ್ನೋಸ್ಟಿಕ್ ಸೆಂಟರ್‌ಗಳು ಜಾಸ್ತಿ ಆದ್ರೆ ಜಿ.ಡಿ.ಪಿ ಏರುತ್ತೆ. ಒಂದು ಮರ ಸುಮ್ಮನೆ ನಿಂತ್ಕೊಂಡಿದ್ರೆ ಜಿ.ಡಿ.ಪಿ ಏರೊದಿಲ್ಲ. ಅದನ್ನ ಕಡಿದು ಸೀಳಿ ಸಾಮಿಲ್‌ಗೆ ಹಾಕಿ ಫರ್ನಿಚರ್ ಮಾಡಿ ಪಾಲಿಶ್ ಹಾಕಿ, ಬೆಂಗಳೂರಿಗೊ ದಿಲ್ಲಿಗೊ ಮಾರಾಟ ಮಾಡಿದ್ರೆ ಜಿ.ಡಿ.ಪಿ ಏರುತ್ತೆ. ಅಂತಹ ಆರ್ಥಿಕ ಕಷ್ಟದಲ್ಲಿ ನಾವು ನೀವೆಲ್ಲಾ ಸಿಕ್ಕಾಕ್ಕೊಂಡಿದ್ದೇವೆ. ಅದರಿಂದ ಹೊರಬರೋಕೆ ಇಂತಹ ಸತ್ಯಾಗ್ರಹ ನಮಗೆ ಬೇಕು. ಈ ಬಗೆಯ ಅಸ್ಥಿರ ಬೆಳವಣಿಗೆ ಬೇಡ ಸುಸ್ಥಿರ ಬದುಕು ಬೇಕು ಅಂತಾ ೨೦೧೨ರಲ್ಲಿ ವಿಶ್ವಸಂಸ್ಥೆ ಕರೆ ಕೊಟ್ಟಿದೆ. ೩೮ ರಾಷ್ಟ್ರಗಳ ತಜ್ಞರು ಜೀವಸ್ತೋಮ ನಾಶವಾಗುತ್ತೆ, ಮನುಕುಲ ನಾಶವಾಗುತ್ತೆ ಅಂತ ಹೇಳಿ ಸುಸ್ಥಿರ ಬದುಕಿಗೆ ನಾಲ್ಕು ಸೂತ್ರಗಳನ್ನ ಕೊಟ್ಟಿದ್ದಾರೆ. ಆರನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇದನ್ನೆಲ್ಲಾ ಯಾವುದೇ ರಾಜ್ಯಪಾಲರಾಗಲಿ, ಪ್ರಧಾನಿಯಾಗಲಿ ಜನರಿಗೆ ಹೇಳ್‌ಲಿಲ್ಲ. ಇದನ್ನೆಲ್ಲಾ ಯಾವುದೇ ಪ್ಲಾನಿಂಗ್ ಕಮಿಷನ್ ಮಾಡಿ ಎಂದು ಹೇಳ್‌ಲಿಲ್ಲ. ಮೈಸೂರಿನ ಸಮೀಪವಿರೊ ಬದನವಾಳು ಗ್ರಾಮದಲ್ಲಿ ನಾವ್ ಮಾಡ್ತಾ ಇದ್ದೇವೆ. ಒಂದೆರಡು ಚಿಂತನೆ ಮಾಡೋ ವಿಷಯಗಳಿವೆ. ಏನಪ್ಪಾ ಅಂದ್ರೆ,

ನಮ್ಮ ಅಭಿವೃದ್ಧಿಯಲ್ಲಿ ಕೆಲವು ಸ್ಪಷ್ಟ ಹಾಗೂ ಅಸ್ಪಷ್ಟವಾದ ಸೂತ್ರಗಳಿವೆ. ಇಂದು ಹಳ್ಳಿಗಳನ್ನು ಖಾಲಿ ಮಾಡುಸ್ತಾ ಇದ್ದೇವೆ.

ಕಾರಣ ಇಷ್ಟೆ. ಭಾರತ ೧೨೦ ಕೋಟಿ ಕನ್‌ಜ್ಯೂಮರ್ ಅನ್ನು ಒಳಗೊಂಡಿದೆ ಎಂದು ಹೇಳಿದ್ದೇವೆ. ಬೆಂಗಳೂರು, ಕೋಲ್ಕತ್ತಾ, ಚೆನ್ನೈ, ಹೈದರಾಬಾದ್ ಮಹಾನಗರಗಳ ಕನ್‌ಜ್ಯೂಮರ್ ಲೆಕ್ಕಾ ಹಾಕಿದ್ರೆ ಸಿಗೋದು ೪೦ ಕೋಟಿ ಅಷ್ಟೇ. ಹಳ್ಳಿಯವರೆಲ್ಲಾ ಒಂದೆಡೆ ಬಂದು ಬಿದ್ರೆ ಉತ್ಪಾದನಾ ವಸ್ತುಗಳ ಮಾರಾಟ ದುಪ್ಪಟವಾಗುತ್ತೆ. ಅದರ ಬಳಕೆಯ ಪ್ರಮಾಣ ಹೆಚ್ಚಾಗುತ್ತೆ. ರಾಜಕಾರಣಿಗಳಿಗೂ ಇದನ್ನೇ ಹೇಳಲಾಗಿದೆ. ಸಾವಿರಾರು ಮೈಲುಗಳ ದೂರಕ್ಕೆ ಓಟ್ ಕೇಳೋಕೆ ಹೋಗೊ ಬದಲು ಅವರೆಲ್ಲಾ ಒಂದೆಡೆ ಇದ್ರೆ ಇಲ್ಲೆ ಶಾಲೆ, ಆಸ್ಪತ್ರೆ, ಸ್ಮಶಾನ ಕಟ್ಟೋಕೆ ಸಾಧ್ಯ ಅಂತಾ ಅವರನ್ನೂ ನಂಬಿಸಿದ್ದೇವೆ. ೬೦ ವರ್ಷಗಳ ಹಿಂದೆ ನಾವು ಹೀಗೆ ಅವಲಂಬಿತರಾಗಿದ್ದೆವಾ? ಇಂದು ನಾವು ಸ್ವಾವಲಂಬಿಯಾಗಿ ಬದಕೋದನ್ನ ಕಳಕೊಂಡಿದ್ದೇವೆ. ಬೀಜ, ಗೊಬ್ಬರ, ನೀರು, ಮೇವು ಎಲ್ಲದಕ್ಕೂ ಇನ್ನೊಬ್ಬರ ಮೇಲೆ ಅವಲಂಬಿತರಾಗಿದ್ದೇವೆ. ಇಂತಹ ಸ್ಥಿತಿಯಿಂದ ನಮಗೆ ಮುಕ್ತಿ ಬೇಕಿದೆ. ಅದಕ್ಕಾಗಿ **'ಹಸಿರು ಆರ್ಥಿಕತೆ' ನಮ್ಮದಾಗಬೇಕು"** ನಾಗೇಶ ಹೆಗಡೆ ಅಭಿಪ್ರಾಯಿಸುವ ಅಭಿವೃದ್ಧಿಯ ಚಿಂತನಾ ಕ್ರಮವಿದು. ಜಾಗತೀಕರಣದ ವಿರೋಧದ ಚಿಂತನಾ ಕ್ರಮವಿದು. ಎಲ್ಲಕ್ಕಿಂತ ಗಾಂಧಿಯನ್ ಪರಿಸರಮುಖಿ ಅಭಿವೃದ್ಧಿಯ ಮಾದರಿಯನ್ನು ಹೆಗಡೆ ಪ್ರತಿಪಾದಿಸುತ್ತಿದ್ದಾರೆ ಎಂಬುದಕ್ಕೆ ಒಂದು ಉತ್ತಮ ನಿದರ್ಶನವನ್ನಾಗಿ ಬದನವಾಳು ಸತ್ಯಾಗ್ರಹವನ್ನು ದಾಖಲಿಸಬಹುದಾಗಿದೆ.

ಕುದುರೆಮುಖ ಗಣಿಗಾರಿಕೆ ವಿರುದ್ಧದ ಹೋರಾಟ, ಜಲಸಂಪನ್ಮೂಲಗಳ ಉಳಿವಿನ ಹೋರಾಟ, ಕಾರ್ಖಾನೆ ಮಾಲೀಕರು, ಗಂಧ ಸಾಗಾಣಿಕೆ, ಮರಳು ದಂಧೆ, ಇದಕ್ಕೆ ಕುಮ್ಮಕ್ಕು ನೀಡುವ ಅಧಿಕಾರಿಗಳ ವಿರುದ್ಧದ ಅವರ ಹೋರಾಟ ನಿರಂತರವಾಗಿದ್ದಿತು. ಎಲ್ಲಕ್ಕಿಂತ ಆದಿವಾಸಿಗಳನ್ನು ಕಾಡಿನಿಂದ ಸ್ಥಳಾಂತರಿಸುವುದಕ್ಕೆ ವ್ಯಕ್ತವಾಗುತ್ತಿರುವ ವಿರೋಧವನ್ನು ಅಂದು ತೇಜಸ್ವಿ ಖಂಡಿಸಿದರು. **"ಆದಿವಾಸಿಗಳನ್ನು ಒಕ್ಕಲೆಬ್ಬಿಸದಂತೆ ಒತ್ತಾಯಿಸುತ್ತಿರುವವರು ಪ್ರಾಮಾಣಿಕವಾಗಿ ಯೋಚನೆ ಮಾಡಬೇಕು. ನಮ್ಮ ಮಕ್ಕಳನ್ನು ಎಂಜಿನಿಯರಿಂಗ್, ಎಂಬಿಬಿಎಸ್ ಓದಿಸುತ್ತೇವೆ. ಗಿರಿಜನರು ಮಾತ್ರ ಕಾಡಲ್ಲೇ ಇರಲಿ ಎನ್ನುವುದು ಯಾವ ನ್ಯಾಯ? ನಾವು ಯಾವ ರೀತಿ ಬದುಕುವುದಿಲ್ಲವೋ ಆ ರೀತಿ ಬೇರೆಯವರು ಬದುಕಲಿ ಎಂದು ಹೇಳುವ ಅಧಿಕಾರ ನಮಗ್ಯಾರಿಗೂ ಇಲ್ಲ"** ಎಂದರು. ಆದಿವಾಸಿಗಳ ಮಕ್ಕಳು ಮುಖ್ಯವಾಹಿನಿಗೆ ಬರುವ ಬಗ್ಗೆ ತೇಜಸ್ವಿ ಅವರಲ್ಲಿ ಸಹಮತವಿತ್ತು.

ನಾಗೇಶ ಹೆಗಡೆ ಅವರು ಆದಿವಾಸಿಗಳನ್ನು ಸ್ಥಳಾಂತರಿಸುವುದಕ್ಕೆ ವ್ಯಕ್ತವಾಗುತ್ತಿರುವ ವಿರೋಧದ ಪರವಾಗಿ ನಿಂತವರು. "ಭಾಷೆ ಮತ್ತು ಸಾಂಸ್ಕೃತಿಕ ಅಸ್ಮಿತೆಯ ದೃಷ್ಟಿಯಿಂದ ಅವರು ಮೂಲಪರಿಸರದಲ್ಲಿಯೇ ನೆಲೆಸಬೇಕೆನ್ನುವ ಭಿನ್ನ ಮನೋಭಾವ ಅವರದ್ದಾಗಿತ್ತು. ಅಲ್ಲಿನ ಸಸ್ಯಜಾತಿ, ಪ್ರಾಣಿಜಾತಿ, ಗಿಡಮೂಲಿಕೆ, ಬೇರು, ತೊಗಟೆ ಇತ್ಯಾದಿಗಳನ್ನು ಬಲ್ಲವರಾದ ಆದಿವಾಸಿಗಳು ಅವರದೇ ಜೀವನಕ್ರಮದಲ್ಲಿ ಬದುಕಲು ಮತ್ತು ನೈಜ ಪರಿಸರದ ಮುಗ್ಧತೆಯ ಮನಸ್ಸನ್ನು ಹೊಂದಿರಲು ಬಿಡಬೇಕೆನ್ನುವುದು" ಹೆಗಡೆ ಅವರ ವಾದ. ಹಾಗೆಯೇ,

ಹೆಗಡೆ ಅವರು ಭೂಮಿಯೆಂಬ ಗಗನನೌಕೆ ಕೃತಿಯ 'ನಿಸರ್ಗದೊಂದಿಗೆ ಮರುಸಂಧಾನ' ಎಂಬ ಲೇಖನದಲ್ಲಿ **"ಸಾಕ್ಷರತೆಯ ಬಹುದೊಡ್ಡ ಆತಂಕ ಏನು ಗೊತ್ತೆ? ಮಕ್ಕಳು ಶಿಕ್ಷಣದಲ್ಲಿ ಮುಂದುವರೆಯುತ್ತಾ ಹೋದಂತೆ, ನೆಲದ ಸಂಬಂಧ ಸಡಿಲವಾಗುತ್ತಾ, ಭಾಷಾ ನೆಲೆಗಟ್ಟು ಶಿಥಿಲವಾಗುತ್ತಾ ಹೋಗುತ್ತದೆ. ಪ್ರಕೃತಿಯೊಂದಿಗಿನ ಕಳ್ಳುಬಳ್ಳಿ ಸಂಬಂಧವೂ ಸಡಿಲವಾಗುತ್ತದೆ. ಅದರ ಪರಿಣಾಮವಾಗಿ ಜೀವಿವೈವಿಧ್ಯವೂ ಕಡಿಮೆ ಆಗುತ್ತಾ ಹೋಗುತ್ತದೆ. ಅಂಥ ನೆಲಮೂಲದ ಭಾಷಾಜ್ಞಾನ ಮರೆತು ಹೋಗದಂತೆ ಗ್ರಾಮಮಟ್ಟದಲ್ಲಿ ಹೊಸಪಠ್ಯಗಳು ಬೇಕಾಗಿವೆ"** ಎಂದಿದ್ದಾರೆ. 'ಆಯಾ ತಾಲ್ಲೂಕಿಗೆ ವಿಶಿಷ್ಟವಾದ ಪಠ್ಯಪುಸ್ತಕ ಬೇಕಾಗಿದೆ' ಎಂದಿರುವ ಅಂಶವನ್ನು ಭಿನ್ನಮತದಿಂದಲೂ ನೋಡಬಹುದಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಏಕರೂಪ ಶಿಕ್ಷಣ ಪಠ್ಯಕ್ರಮಕ್ಕೆ ಬೇಡಿಕೆ ಕಾಣಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಹೆಗಡೆ ಅವರ ಮಾತುಗಳು ಅಚ್ಚರಿಮೂಡಿಸುತ್ತವೆ. ಜ್ಞಾನದ ಅರಿವು ಮೂಡಿಸುವ ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಮಾರ್ಗದಲ್ಲಿ ನಗರ ಮತ್ತು ಗ್ರಾಮದ ನಡುವೆ ಇಂದಿಗೂ ೧೦ ವರ್ಷಗಳಷ್ಟು ಅರಿವಿನ ಅಂತರ ನಿರ್ಮಾಣವಾಗಿದೆ. ಏಕರೂಪ ಪಠ್ಯಕ್ರಮದ ಆಶಯವೇ ಇನ್ನೂ ಈಡೇರಿಲ್ಲ. ಸಂಯೋಜಿತ ಪಠ್ಯಕ್ರಮ ಅಳವಡಿಕೆ ಅಥವಾ ಅಂತರ್‌ಶಿಸ್ತು ಆಧಾರಿತ ಪಠ್ಯವಸ್ತು ಆಶಯವೂ ನಿರೀಕ್ಷಿತ ಮಟ್ಟದಲ್ಲಿ ಸಾಧಿಸಲು ಸಾಧ್ಯವಾಗಿಲ್ಲ. ಶಿಕ್ಷಣ ಪಡೆಯುವ ಮೂಲಕ ಮೂಲ ಪರಿಸರದ ಮುಗ್ಧತೆ ಉಳಿಸಿಕೊಳ್ಳುತ್ತಲೇ ಪ್ರಾಪಂಚಿಕ ಅರಿವು ಹೊಂದುತ್ತಾ ಎಲ್ಲರಂತೆ ಅವರು ಸಹ ಮುಖ್ಯವಾಹಿನಿಗೆ ಬರುವುದು ಬೇಡವೇ? ಮಾತೃಭಾಷೆಯ ಅಸ್ಮಿತೆಯೊಂದಿಗೆ ಜ್ಞಾನಗಳಿಕೆಗಾಗಿ ಇತರೆ ಭಾಷೆ ಮತ್ತು ಕೋರ್ ವಿಷಯಗಳ ವಿವಿಧತೆಗಳನ್ನು ಅರ್ಥೈಸಿಕೊಳ್ಳುವ ಅಗತ್ಯ ಅವರ ಬದುಕಿಗಿಲ್ಲವೇ? ಟಚ್‌ಸ್ಕ್ರೀನ್ ಮೊಬೈಲ್ ನೊಂದಿಗೆ ಅಂಗೈಯಲ್ಲಿ ಅಂತರ್‌ಜಾಲವಿರಿಸಿಕೊಂಡು ಓಡಾಡುವ ಮಕ್ಕಳು ಕಣ್ಣೆದುರಿಗೆ ಕಾಣುತ್ತಿರುವಾಗ ಆದಿವಾಸಿ ಮಕ್ಕಳು ಜೀವಿಗಳ ಗಣತಿಮಾಡಿಕೊಂಡು ಉಳ್ಳವರ ಸಂಶೋಧನೆಗೆ ಬಾಯ್ದರೆ ಲೆಕ್ಕ ಕೊಡಬೇಕಿದೆಯೇ ಎನಿಸುತ್ತದೆ. ಹಾಡಿಗಳು, ತಾಂಡಗಳು, ಆದಿವಾಸಿಗಳ ಅರಣ್ಯ ತಪ್ಪಲುಗಳು ಗೌಪ್ಯವಾಗಿಯೇ ಪಟ್ಟಭದ್ರ ಹಿತಾಸಕ್ತಿಗಳ ಪಾಲಾಗುತ್ತಿದ್ದು, ನಿಸರ್ಗದ ಸ್ವರೂಪವನ್ನೇ ವಿಕೃತಗೊಳಿಸುವ ಹೊಸ ಹೊಸ ಯೋಜನೆಗಳಿಂದಾಗಿ ಅವರ ಬದುಕಿನ ನೆಲೆಗಳು ಮೂರಾಬಟ್ಟೆಯಂತಾಗಿವೆ. ಪರಿಸರ ವಿದ್ವಾಂಸರು ಅಥವಾ ತಜ್ಞರು ಪರಿಸರ ಪ್ರಜ್ಞೆಯ ದೃಷ್ಟಿಕೋನಕ್ಕೆ ತಾತ್ವಿಕತೆಯ ಚೌಕಟ್ಟು ಕಟ್ಟಿಕೊಡಬಲ್ಲರು. ಹೋರಾಟಗಾರರು ಹಕ್ಕೊತ್ತಾಯಕ್ಕೆ ಮುಂದಾಗಬಲ್ಲರು. ಆಗೊಮ್ಮೆ ಈಗೊಮ್ಮೆ ಕಂಡುಬರುವ ಪರಿಸರ ಹೋರಾಟಗಳು ಮತ್ತು ಪರಿಸರವಾದಿಗಳು ಅವರ ಬದುಕಿಗೆ ಭದ್ರ ನೆಲೆಯನ್ನು ಒದಗಿಸುವರೇ ಎಂಬ ಜಿಜ್ಞಾಸೆಗಳೂ ಸಹ ಇದರೊಂದಿಗೆಯೇ ಮೂಡುತ್ತವೆ.

ಪ್ರಕೃತಿ ವಿಜ್ಞಾನದ ಎಲ್ಲಾ ಸತ್ಯಗಳು ವಿಸ್ಮಯಗಳೇ. ಪ್ರಕೃತಿ ವಿಜ್ಞಾನದ ಯಾವುದೇ ಸತ್ಯವನ್ನು ಮೊದಲ ಬಾರಿಗೆ ತಿಳಿದ ಸಂದರ್ಭದಲ್ಲಿ ಓದುಗನಿಗೆ ಅದು ವಿಸ್ಮಯವಾಗದಿರದು. ಅಷ್ಟೇ ಅಲ್ಲದೆ ಅದ್ಭುತಕ್ಕೆ ಆಧಾರವಾದ ವಿಸ್ಮಯವನ್ನು ಎಲ್ಲರೂ ಅನುಭವಿಸುತ್ತಾರೆ; ಸಚೇತನ ಪ್ರಾಣಿಗಳ ಚರ್ಯೆಯನ್ನು ನೋಡಿ ಮಾತ್ರವಲ್ಲ. ಅಚೇತನವಾದ ಪ್ರಕೃತಿಯಲ್ಲೂ ಇದರ ಅನುಭವವನ್ನು ಪಡೆದಿರುತ್ತಾರೆ. ಮಗು ಕಣ್ಣು ತೆರೆದಾಗಿನಿಂದ ಈ ಜಗತ್ತಿನ ಪ್ರಾಕೃತಿಕ ಕೌತುಕಕ್ಕೆ ಮೊದಲಾಗುತ್ತದೆ. ಜೀವಮಾನದ ಕೊನೆಯ ತನಕ ಇಂತಹ ಕೌತುಕಗಳು ಮನಸ್ಸಿನಲ್ಲಿ ನೆಲೆಗೊಂಡೇ ಇರುತ್ತವೆ. ಸೃಷ್ಟಿಯಲ್ಲಿ ಎಲ್ಲೆಲ್ಲೂ–ಬೆಟ್ಟದಲ್ಲಿ ಮರದಲ್ಲಿ, ಹೂವಿನಲ್ಲಿ, ಹಕ್ಕಿಯಲ್ಲಿ,

ಮೃಗಗಳಲ್ಲಿ, ಮಾನವನಲ್ಲಿ ಎತ್ತ ಕಣ್ಣು ಹರಿದರೆ ಅತ್ತ ಮನುಷ್ಯನು ವೈಚಿತ್ರ್ಯವನ್ನು ಕಾಣಬಲ್ಲನು. ವಿಸ್ಮಯವನ್ನು ಪಡೆಯಬಲ್ಲನು. ಈ ನಿಟ್ಟಿನಲ್ಲಿ ಇಬ್ಬರ ಕೃತಿಗಳನ್ನು ಅವಲೋಕಿಸುವುದಾದರೆ ತೇಜಸ್ವಿ ಮತ್ತು ನಾಗೇಶ ಹೆಗಡೆ ಇಬ್ಬರೂ ಸಚೇತನ ಮತ್ತು ಅಚೇತನ ಪರಿಸರದ ಎಲ್ಲಾ ಸಂಗತಿಗಳಲ್ಲೂ ವಿಶಿಷ್ಟ ತೆರನಾದ ಕೌತುಕವನ್ನು ಮತ್ತು ಪರಿಸರದ ಚಿಕ್ಕ ಚಿಕ್ಕ ಸಂಗತಿಗಳ ಗ್ರಹಿಕೆಯಲ್ಲೂ ಆಸಕ್ತಿಯನ್ನು ಹೊಂದಿದವರಾಗಿದ್ದರು ಎಂಬುದನ್ನು ಅವರ ಕೃತಿಗಳು ಅನಾವರಣಗೊಳಿಸುತ್ತವೆ.

ಚರ್ಚಾರ್ಹ ಅಂಶಗಳು:

ಕೃತಿಕಾರರ ಈ ಎಲ್ಲಾ ಸಾಮ್ಯತೆ ಮತ್ತು ಭಿನ್ನತೆಗಳ ನಡುವೆಯೂ ಕೆಲವು ಚರ್ಚಾರ್ಹ ಅಂಶಗಳನ್ನು ಹೀಗೂ ನೋಡಬಹುದಾಗಿದೆ. ತೇಜಸ್ವಿ ಮತ್ತು ಹೆಗಡೆ ಅವರ ಅಪ್ಪಟ ಕಾಳಜಿ ತುಂಬಿದ ಪರಿಸರ ಪ್ರಜ್ಞೆಗಳು ಬಹುತೇಕ ಪ್ರಾದೇಶಿಕ ಪರಿಧಿಯೊಳಗಿನ ವಸ್ತು ವಿಚಾರಗಳಿಗೆ ಮುಖಾಮುಖಿಯಾಗುತ್ತಾ ಅಲ್ಲಲ್ಲೇ ಚಲನೆಹೊಂದುವವು. ಮಲೆನಾಡು ಪ್ರಾದೇಶಿಕತೆಯಲ್ಲಿ ಚಿಕ್ಕಮಗಳೂರು, ಮೂಡಿಗೆರೆಯ ಪರಿಸರ ತೇಜಸ್ವಿ ಅವರನ್ನು ಬಹುವಾಗಿ ಆವರಿಸಿಕೊಂಡರೆ, ಹೆಗಡೆ ಅವರನ್ನು ಪಶ್ಚಿಮಘಟ್ಟದ ಉತ್ತರ ಕನ್ನಡ ಮತ್ತು ಸಿದ್ದಾಪುರ ಪರಿಸರದ ಪ್ರಾದೇಶಿಕತೆ ಹೆಚ್ಚಾಗಿ ಪ್ರಭಾವಿಸುತ್ತದೆ. ಇವರಿಬ್ಬರೂ ತಮ್ಮ ಕೆಲವು ಕೃತಿಗಳ ಮೂಲಕ ಓದುಗರಿಗೆ ಇಕಾಲಜಿಯ ವಿಶ್ವರೂಪ ದರ್ಶನವನ್ನು ಮಾಡಿಸಿದರೂ, ಜಾಗತಿಕ ಆತಂಕ ಅಥವಾ ತಲ್ಲಣಗಳ ಬಗ್ಗೆ ಗಮನ ಸೆಳೆದರೂ ನಾಡಿನ ವಿವಿಧ ಪ್ರಾದೇಶಿಕತೆಯನ್ನೊಳಗೊಂಡಂತೆ ಪರಿಸರ ಪ್ರಜ್ಞೆ ಜಾಗೃತಗೊಳ್ಳುವಂತೆ ಮಾಡಿರುವ ವಿವರಗಳು ಮತ್ತು ಟೀಕೆ ಟಿಪ್ಪಣಿಗಳು ಓದುಗರಿಗೆ ಮತ್ತು ಪರಿಸರಾಸಕ್ತರಿಗೆ ಅಷ್ಟು ಸಾಕಾಗದೇನೊ ಅನ್ನಿಸುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿ ಅಂತಹ ಲೇಖನಗಳ ಅಗತ್ಯತೆ ಹೆಚ್ಚು ಕಂಡುಬರುತ್ತದೆ. ಉದಾಹರಣೆಗೆ ದುಂದುಮಾರ ಕೃತಿಯ 'ನಿಸರ್ಗದೊಂದಿಗೆ ಮರುಸಂಧಾನ' ಲೇಖನದಲ್ಲಿ ನಾಗೇಶ ಹೆಗಡೆ ಅವರು "ಸಿದ್ಧಾಪುರ ತಾಲ್ಲೂಕನ್ನು ಹೋಲಬಲ್ಲ ಇನ್ನೊಂದು ತಾಣ ಇರಲಿಕ್ಕಿಲ್ಲ. ಪಶ್ಚಿಮಘಟ್ಟದ ದಟ್ಟ ವನಸಿರಿಯ ಅತ್ಯಂತ ರೋಚಕ ಭಾಗದಲ್ಲಿ ಈ ತಾಲ್ಲೂಕು ಸ್ಥಿತಗೊಂಡಿದೆ. ಉತ್ತರ ಕನ್ನಡ ಜಿಲ್ಲೆಯ ೧೧ ತಾಲ್ಲೂಕುಗಳಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಗಿರಿಕಣಿವೆಗಳಿರುವ ತಾಲೂಕು ಸಿದ್ದಾಪುರವೆಂದು ನಾವು ಹೆಮ್ಮೆಯಿಂದ ಹೇಳಿಕೊಳ್ಳಬೇಕು ಎಂದಿದ್ದಾರೆ. 'ಅಘನಾಶಿನಿ ನಿನಗೆ ಧನ್ಯವಾದ' ಎಂದು ಹೇಳುತ್ತಾ ನಾವು ಅದೃಷ್ಟವಂತರು. ಇಲ್ಲಿ ಯಾವುದೇ ಭೀಕರ ನಿಸರ್ಗ ಪ್ರಕೋಪ ಸಂಭವಿಸಿದ ಉದಾಹರಣೆಯಿಲ್ಲ. ಭೂಕಂಪನವಾಗಲಿ, ಮಹಾಪೂರವಾಗಲಿ, ಭೀಕರ ಬರಗಾಲವಾಗಲೀ ಇಲ್ಲಿ ಬರಲಾರದು" ಎಂದಿದ್ದಾರೆ. ಇದು ನಾಡಿನ ಒಂದು ಭೂಭಾಗದ ನಿಸರ್ಗ ರಮಣೀಯತೆಯ ಆರಾಧನೆ ಅಥವಾ ಆಸ್ವಾದನೆ ಎನಿಸಿಕೊಳ್ಳುವುದು. ನಿಸರ್ಗದ ಸೌಂದರ್ಯ ಆಸ್ವಾದನೆಯ ಪ್ರಜ್ಞೆಯಿದು. ಜಾಗತಿಕ ಪರಿಸರದ ಅಖಂಡತೆ ಬಗ್ಗೆ ಪ್ರಸ್ತಾಪಿಸುವ ಪರಿಸರ ತಜ್ಞರ ಅಭಿವ್ಯಕ್ತಿಗಳು ಮತ್ತು ವಿಷಯವನ್ನು ನಿರ್ದಿಷ್ಟಗೊಳಿಸುವ ಅಭಿಪ್ರಾಯಗಳು ಪ್ರಾದೇಶಿಕತೆಯ ಆಪ್ತತೆಯನ್ನು ಸೀಮಿತ ಭೂಭಾಗದ ಪರಿಧಿಯನ್ನು ಯಾವತ್ತೂ ದಾಟಬೇಕು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಪ್ರಪಂಚದಲ್ಲಿ ಭೂಸ್ವರೂಪಗಳಿಗೆ ತಕ್ಕಂತೆ ನಿಸರ್ಗದ ಒಲವು ಚೆಲುವು ಮೈದುಂಬಿಕೊಳ್ಳುತ್ತದೆ. ಬೆಟ್ಟ, ಗುಡ್ಡ, ಕಣಿವೆ, ಪ್ರಪಾತ, ಜಲಪಾತ, ಬಯಲು, ಮರುಭೂಮಿ,

ಹಿಮಖಂಡ, ಮೈದಾನ, ನದಿತೀರ, ಶಿಖರ, ಸಾಗರ ಎಲ್ಲವೂ ಈ 'ಪ್ಲಾನೆಟ್ ಅರ್ಥ್'ನ ವೈಶಿಷ್ಟ್ಯದ ಸ್ವರೂಪಗಳೇ ಆಗಿವೆ. ಮನುಷ್ಯನ ಬದುಕು ಅದಕ್ಕನುಗುಣವಾದ ನಿಸರ್ಗದಲ್ಲಿ ಅದರದ್ದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಳ್ಳುತ್ತಾ ಹೋಗುತ್ತದೆ ಎಂಬುದನ್ನು ಲೇಖಕರು ತಮ್ಮ ಕೃತಿಗಳಲ್ಲಿ ಹಲವು ಬಾರಿ ಅನಾವರಣಗೊಳಿಸಿದ್ದಾರೆ. ಈ ನಿಟ್ಟಿನಲ್ಲಿ ನೋಡುವುದಾದರೆ ಕೋಲಾರದ ಗುಡಿಬಂಡೆ, ತುಮಕೂರಿನ ದೇವರಾಯನ ದುರ್ಗ, ಚಾಮರಾಜನಗರದ ಬಿಳಿಗಿರಿ ರಂಗನಬೆಟ್ಟ, ಮಧುಗಿರಿಯ ಸಿದ್ಧರಬೆಟ್ಟ, ರಾಮನಗರದ ಮೇಕೆದಾಟು ಅರಣ್ಯವಲಯ, ಮಂಡ್ಯದ ಬ್ಲಫ್ ಮತ್ತು ಮುತ್ತತ್ತಿ ಭಾಗದಲ್ಲೂ ಸಂರಕ್ಷಿಸಬೇಕಾಗಿರುವ ಕಾಡುಗಳಿವೆ. ಆ ಪ್ರಾದೇಶಿಕವನ್ನು ಪ್ರತಿನಿಧಿಸುವ ಜೀವವೈವಿಧ್ಯದ ಪರಿಸರವಿದೆ. ಅವು ಪಶ್ಚಿಮಘಟ್ಟದಷ್ಟು ಸಮೃದ್ಧಿಯಾಗಿಲ್ಲದಿರಬಹುದು. ದಟ್ಟ ಹಸಿರು ಅಗಾಧವಾಗಿ ಕಾಣದಿರಬಹುದು. ಆದರೆ ಈ ಭೂಮಿಯ ಒಂದಂಗುಲದ ಉಳಿವಿನಲ್ಲಿಯೂ ಆ ಭೂಭಾಗದಲ್ಲಿನ ಜೀವವೈವಿಧ್ಯಗಳ ಅಸ್ತಿತ್ವವೂ ಮುಖ್ಯವಾಗುತ್ತದೆ. ಭೂ ಮಾಫಿಯದಲ್ಲಿ ಒಳಗೊಳಗೆ ಅವುಗಳ ಅಸ್ತಿತ್ವ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತಕ್ಕೆ ಸಿಕ್ಕು ಎತ್ತಕಡೆ ಸಾಗುತ್ತಿದೆಯೋ ಏನೋ! ಇಂತವರಿಗೆ ಭೂಮಿ ಎಂದರೆ ಕೇವಲ ಅದಿರಿನ ಗಣಿಗಳಂತೆ, ಕಡಪ ಕಲ್ಲುಗಳಂತೆ, ಗ್ರಾನೈಟ್ ದಿಂಡಿನಂತೆ, ತೇಗ-ಬೀಟೆ ಶ್ರೀಗಂಧದ ದಿಮ್ಮಿಗಳಂತೆ, ಆನೆಗಳ ದಂತದಂತೆ, ಹುಲಿ-ಜಿಂಕೆಗಳ ಚರ್ಮದಂತೆ, ಕಡವೆಗಳ ಮಾಂಸದಂತೆ, ರೆಸಾರ್ಟ್-ಶಾಪಿಂಗ್‌ಮಾಲ್-ಅಪಾರ್ಟ್‌ಮೆಂಟ್‌ಗಳಿಗೆ ಆದಾಯದ ಅಡಿಪಾಯದಂತೆ ಕಾಣುವುದು. ಅಖಂಡ ಕರ್ನಾಟಕದ ಪ್ರಾಕೃತಿಕ ಪರಿಸರದ ಬಗೆಗಿನ ರಾಜಕೀಯ ಧೋರಣೆಗಳನ್ನು, ಅಭಿವೃದ್ಧಿಯ ನೆಪದಲ್ಲಾಗುತ್ತಿರುವ ಅತಿಕ್ರಮಣ ಚಟುವಟಿಕೆಗಳನ್ನು ಶೋಧಿಸಿ ಕಟುವಾಗಿ ಟೀಕಿಸುವ, ನಿಸರ್ಗಪರ ಮಂಡಿತವಾದ ಪ್ರಮುಖ ವರದಿಗಳ ಅನುಷ್ಠಾನಕ್ಕೆ ಒತ್ತಾಯಿಸುವ, ಸರ್ಕಾರದ ಇಚ್ಛಾಶಕ್ತಿಯ ಕೊರತೆಯನ್ನು ಆಧಾರಗಳ ಸಹಿತ ಪ್ರಶ್ನಿಸುವ ತೀಕ್ಷ್ಣ ಬರಹಗಳ ಪ್ರಸ್ತುತತೆ ಎದ್ದುಕಾಣುತ್ತಿದೆ.

ಕೊಡಗು ಮತ್ತು ಕೇರಳ ಪ್ರಕೃತಿ ವಿಪತ್ತುಗಳ ನಂತರ ಜನಸಾಮಾನ್ಯರಲ್ಲೂ ಪರಿಸರದ ಘೋರ ಪರಿಣಾಮ ಎಷ್ಟು ತೀವ್ರವಾದದ್ದು! ಪ್ರಕೃತಿಯಲ್ಲಿ ಹೀಗೂ ಉಂಟೆ? ಎಂಬ ಮೂಕ ವಿಸ್ಮಿತ ಆಲೋಚನೆಗಳು ಮೂಡತೊಡಗಿವೆ. ಮನುಷ್ಯನೇ ಮಾಡಿದ ಅವಮಾನಗಳಿಗೆ ಪ್ರತಿರೋಧವೆಂಬಂತೆ ಪ್ರಕೃತಿ ಸೇಡು ತೀರಿಸಿಕೊಳ್ಳುತ್ತಿರುವುದನ್ನು ಕಣ್ಣಾರೆ ಕಾಣುವಂತಾಗಿದೆ. ಎಲ್ಲಿಯವರೆಗೂ ನಿಸರ್ಗದ ಬಳಕೆಯ ಮೇಲೆ ಇತಿಮಿತಿಗಳನ್ನೂ ಮತ್ತು ನಿರ್ಬಂಧಗಳನ್ನು ನಾವು ಸ್ವಯಂ ವಿಧಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ವಿನಾಶ ತಪ್ಪಿದ್ದಲ್ಲ ಎಂಬುದಕ್ಕೆ ಮುನ್ಸೂಚನೆ ಈಗಾಗಲೇ ಸಿಕ್ಕಿದೆ. ಪ್ರಮುಖ ದೈನಿಕಗಳು ಹಾಗೂ ಮುಖ್ಯವಾಹಿನಿಯ ವಿಚಾರಸಾಹಿತ್ಯದಲ್ಲಿನ ಬರಹಗಳು ಭೂಭಾಗದ ಪ್ರಾಕೃತಿಕತೆಯನ್ನು ಉಳಿಸುವ ಧ್ಯೇಯವಾಗಿ ಕೆಲಸ ಮಾಡುವುದು ಹಿಂದೆಂದಿಗಿಂತಲೂ ಈಗ ಹೆಚ್ಚು ಅಗತ್ಯವೂ ಮತ್ತು ಅನಿವಾರ್ಯವೂ ಆಗಿದೆ.

ಜೀವಿತದಲ್ಲಿ ಯಾವುದೇ ಪ್ರತಿಭಟನೆಗಳಲ್ಲೂ ಭಾಗವಹಿಸದ ಫ್ಯಾನಿನ ಕೆಳಗೋ, ಎ.ಸಿ. ಕೊಠಡಿಯಲ್ಲೋ ಕುಳಿತು ನೈತಿಕ ಬೆಂಬಲವನ್ನೂ ಸಹ ನೀಡದ ಒಂದು ವರ್ಗದವರು ಈ

ನಾಡಿನ ಕೊನೆಯ ಮನುಷ್ಯರು ತಮ್ಮ ಉಳಿವಿಗಾಗಿ ನಡೆಸುವ ಯಾವುದೇ ಹೋರಾಟಗಳಿಗೆ ಮೂಲತಃ ಇಂತಹ ದಲಿತ, ಆದಿವಾಸಿ ಹಾಗೂ ಕೆಳವರ್ಗಗಳ ಹೋರಾಟದವರ ವಿರೋಧಿಗಳಾಗಿ ಕಂಡುಬರುತ್ತಾರೆ. ಇವರಿಗೆ ತಳವರ್ಗಕ್ಕೆ ಯಾವುದನ್ನಾದರೂ ಮೀಸಲಿಡುವುದಾಗಲೀ, ಅವರ ಅಸ್ತಿತ್ವವನ್ನು ಸ್ಥಿರಪಡಿಸುವುದಾಗಲೀ ದೇಶದ್ರೋಹದ ಚಟುವಟಿಕೆಗಳಂತೆ ಕಾಣುತ್ತವೆ. ಯಾವುದೋ ಪ್ರತಿಷ್ಠಿತ ಕಾರ್ಪೋರೇಟ್ ವಲಯಗಳಿಂದ ದೊಡ್ಡ ಮೊತ್ತದ ಹಣ ತೆಗೆದುಕೊಂಡು, ಅದರ ಹೆಸರಿನಲ್ಲಿ 'ಪರಿಸರ ಉಳಿಸಿ' ಎಂಬ ಘೋಷಣೆಗಳ ಕೆಲವು ಸ್ಟಿಕ್ಕರ್‌ಗಳನ್ನು ಮಾಡಿಸಿ ಕಾರುಗಳ ಮೇಲೆ ಅಂಟಿಸುವ "ಪರಿಸರವಾದಿಗಳು" ಇವರಿಗೆ ಮಾವೋನ 'ಗ್ರೀನಿಸ್ಟ್' ಮರುಹುಟ್ಟಿನಂತೆ ಕಾಣುತ್ತಾರೆ. ಪರಿಸರದ ಬಗ್ಗೆ ಅಲ್ಲಲ್ಲಿ ಮಾಹಿತಿ ಕೂಡಿಸಿ ಒಂದು ಲೇಖನವನ್ನೋ, ಪದ್ಯವನ್ನೋ ಬರೆದ ಲೇಖಕರು ವರ್ಡ್ಸ್‌ವರ್ತನ, ರಾಖೆಲ್ ಕಾರ್ಸನ್ನಳ ಪುನರ್ಜನ್ಮದಂತೆ ಕಾಣುತ್ತಾರೆ. ಸಾಲುಮರದ ತಿಮ್ಮಕ್ಕನಿಗೆ ಸನ್ಮಾನ ಮಾಡುವ ಜನ, ತಿಮ್ಮಕ್ಕನ ಮೂಲಕ ಪರಿಸರದಲ್ಲಿ ಸ್ಥಾನಮಾಡಿಕೊಳ್ಳಲು ಹೊರಟ್ಟಿದ್ದನ್ನು ಪರಿಸರವಾದದ ಪರಮ ಶ್ರೇಷ್ಠ ಸಂಗತಿಯಾಗಿ ಕಾಣುತ್ತಾರೆ. ಆದರೆ ಉಳಿಸಬೇಕಾಗಿರುವುದು ಯಾವ ಪರಿಸರವನ್ನ? ಯಾರ ಪರಿಸರವನ್ನ? ಮತ್ತು ಏಕೆ ಉಳಿಸಬೇಕು ಎಂಬ ವಿಷಯದಲ್ಲಿ ಮಾತ್ರ ಮೌನ ವಹಿಸುತ್ತಾರೆ. ಈ ದೇಶದ ದುರಾದೃಷ್ಟವೆಂದರೆ ನಮ್ಮ ನಾಡಿನ ಪ್ರಭುತ್ವದ ನೀತಿನಿಯಮಗಳು ಇವರ ಮಾತುಗಳನ್ನೇ ಆಧರಿಸಿವೆ. ನಾಗೇಶ ಹೆಗಡೆ ಅವರು ಬದನವಾಳುವಿನಲ್ಲಿ ಮಾತನಾಡುತ್ತಾ ಹೇಳುವಂತೆ ಸತ್ಯಾಗ್ರಹ ಮಾಡಲು ಅಂಬಾನಿಯನ್ನ ಕೇಳಬೇಕು ಎಂದಿರುವುದು ಈ ದೇಶದ ಸ್ಥಿತಿಯನ್ನು ನೆನಪಿಸುತ್ತದೆ. ಹೀಗಾಗಿಯೇ ಇಂದು ಪರಿಸರದ ಬಗ್ಗೆ ಚಿಂತಿಸುವ, ಬರೆಯುವ, ತೊಡಗಿಸಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯು ಪರಿಸರ ಸಂರಕ್ಷಣೆಯಷ್ಟೇ ಮುಖ್ಯವಾಗಿ ಇಂತಹ ಜೀವವಿರೋಧಿ ವ್ಯಕ್ತಿತ್ವಗಳ ಸೋಗಲಾಡಿತನವನ್ನೂ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇದಾಗದೇ ಹೋದಲ್ಲಿ ಈ ದೇಶದಲ್ಲಿ ಪರಿಸರ ಪ್ರಜ್ಞೆಯು ಮತ್ತು ಪರಿಸರವಾದವು ತನ್ನ ಮುಖಮೌಲ್ಯದಲ್ಲಿ ಗುರುತಿಸಿಕೊಂಡು ಪ್ರಾಕೃತಿಕ ಪರಿಸರದ ಸಹಜತೆಯನ್ನು ಕಾಪಾಡಲು ಮತ್ತು ಸಾಮಾಜಿಕ ನ್ಯಾಯದ ಪ್ರಕ್ರಿಯೆಯಾಗಿ ಜನಸಾಮಾನ್ಯರ ನೆರವಿಗೆ ಒದಗಲು ಸಾಧ್ಯವೇ ಇಲ್ಲದಂತಾಗುವುದು.

ಪ್ರಸ್ತುತ ಪರಿಸರದ ಬಗ್ಗೆ ಮಾತನಾಡುವ ಬಹುಪಾಲು ಜನ ಮುಖ್ಯವಾಗಿ ಪರಿಸರ ನಿರಾಶ್ರಿತರಾಗಲೀ, ಪರಿಸರಕ್ಕಾಗಿ ಎಂದೂ ಕ್ಷೇತ್ರಕಾರ್ಯ ಮಾಡಿದವರಾಗಲೀ, ಬೇರು ಮಟ್ಟದ ಪರಿಸರ ಸಂರಕ್ಷಣೆಗೆ ಹೋರಾಡುವುದಿರಲಿ, ಪ್ರಯತ್ನಮಾಡಿವರಾಗಲಿ ಆಗಿರದೆ ನಗರದ ಪ್ರತಿಷ್ಠಿತ ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಬರೆಯುವುದಕ್ಕಾಗಿಯೇ ಸಂಬಳ ಪಡೆಯುವ ಅಥವಾ ವಿದೇಶಿ ಧನಸಹಾಯದ ಮೂಲಕ ಬರವಣಿಗೆ, ಸಂರಕ್ಷಣೆಗಿಳಿದ ಸುರಕ್ಷಿತ ವಲಯದಲ್ಲಿ ಕುಳಿತ ಜನರಾಗಿರುವುದರಿಂದ. ಅತ್ತ ಸಾಂಸ್ಕೃತಿಕ, ಇತ್ತ ವೈಜ್ಞಾನಿಕ, ಸೈದ್ಧಾಂತಿಕ ಸ್ಪಷ್ಟತೆಯಾಗಲಿ ಕಾಣದೇ ಹೋದರೂ ಕೆಲವರ ಬದ್ಧತೆ ಹಾಗೂ ಬರವಣಿಗೆಯ ಪ್ರಾಮಾಣಿಕತೆಯನ್ನು ಮೆಚ್ಚಲೇ ಬೇಕಾಗುತ್ತದೆ. ಆದರೆ ಈ ಮೆಚ್ಚುಗೆಯ ಮೂಲಕವೇ ಅವರ ಬರಹಗಳು ಗುರಿ ತಲುಪುವುದಿಲ್ಲವಾದ್ದರಿಂದ ಸಹಜವಾಗಿಯೇ ಹೆಚ್ಚೆಚ್ಚು ವ್ಯಾಪಕತೆಯನ್ನೂ ನಿರ್ದಿಷ್ಟತೆಯನ್ನೂ ಪರಿಸರದ ವಿಷಯಗಳು ಬಯಸುತ್ತವೆ. ಹೀಗಾಗಿ ಈ ಕಲ್ಪನೆಯ ಪರಿಧಿಯೊಳಗೆ ಸುತ್ತುವ ಇವೂ ಮರು ಪರಿಶೀಲನಾರ್ಹವಾಗಿ ಉಳಿಯುತ್ತವೆ.

ಭ್ರಷ್ಟತೆ, ನಿರುದ್ಯೋಗ, ಬಡತನ, ಪರಿಸರ ನಾಶ ಆವರಿಸಿರುವ ಇಂತಹ ಪರಿಸ್ಥಿತಿಯಲ್ಲಿಯೂ ನಾವು ಆಧುನೀಕರಣ ಮತ್ತು ಜಾಗತೀಕರಣದತ್ತ ಹೆಜ್ಜೆ ಹಾಕಬೇಕಿದೆ. ಪಶ್ಚಿಮದ ಅತ್ಯಾಧುನಿಕ ತಂತ್ರಜ್ಞಾನವನ್ನು ರೂಢಿಸಿಕೊಳ್ಳಬೇಕಿದೆ. ಯಂತ್ರ ನಾಗರೀಕತೆಯು ಪಲ್ಲಟಗೊಳಿಸುವ ಲಕ್ಷಾಂತರ ರೈತರ ಭವಿಷ್ಯ, ನಿರಾಶ್ರಿತರಿಗೆ ಆಶ್ರಯ ಇನ್ನೆಲ್ಲಿ ಎಂಬ ಬಗ್ಗೆ ತೇಜಸ್ವಿಯವರು ಆಲೋಚಿಸುತ್ತಾರೆ. ಭ್ರಷ್ಟ ಆಡಳಿತ ಯಂತ್ರ, ಗೊಡ್ಡು ಬಿದ್ದಿರುವ ಕಾನೂನುಗಳು, ಸ್ವಜನಪಕ್ಷಪಾತ ರಾಜಕೀಯ ಧೋರಣೆಗಳನ್ನು ಕಟುವಾಗಿ ಟೀಕಿಸಿದ್ದಾರೆ. ಗಾಂಧಿಯವರ ದೇಸಿ ಚಿಂತನೆಗಳನ್ನು, ಅಭಿವೃದ್ಧಿಯ ಮಾರ್ಗವನ್ನು ತೇಜಸ್ವಿ ಸಹಮತಿಸಿದವರು. ಸ್ತ್ರೀ ಶಕ್ತಿ ಸಂಘಟನೆ ಮತ್ತು ಅವರ ಆರ್ಥಿಕ ಸ್ವಾವಲಂಬನೆಗೆ ನೆರವಾದವರನ್ನು ಅವರು ಶ್ಲಾಘಿಸಿದ್ದಾರೆ. ಜಗತ್ತಿನ ಮುಂದುವರೆದ ರಾಷ್ಟ್ರಗಳು ತಂತ್ರಜ್ಞಾನದ ಬೆನ್ನೇರಿ ನಾಗಾಲೋಟದಿಂದ ಸಾಗುತ್ತಿದ್ದರೆ, ಹಿಂದುಳಿದ ರಾಷ್ಟ್ರಗಳು ಕಾಡು, ನದಿ, ಸರೋವರಗಳನ್ನು, ಸಸ್ಯ, ಜೀವವೈವಿಧ್ಯಗಳನ್ನು ಉಳಿಸಿಕೊಂಡು ಬರುತ್ತಿವೆ. ಇವೂ ಕೂಡ ಪರಿಸರ ವಿನಾಶದಿಂದೇರ್ಪಡುವ ಪರಿಸರ ಬೆಲೆ ತೆರಬೇಕಾಗಿರುವುದರಿಂದ ಮತ್ತು ಸಮತೋಲನ ಕಾಯ್ದುಕೊಳ್ಳಬೇಕಾಗಿರುವುದರಿಂದ ಮುಂದುವರೆದ ರಾಷ್ಟ್ರಗಳು ಕೊಂಚವಾದರೂ ಬೆಲೆ ತೆರಬೇಕೆಂಬುದಾಗಿ ತೇಜಸ್ವಿಯವರು ಹಿಂದುಳಿದ ರಾಷ್ಟ್ರಗಳ ಪರವಾಗಿ ಆಗ್ರಹಿಸಿದ್ದನ್ನು ಉಲ್ಲೇಖಿಸಬಹುದು.

ವರ್ಧಾದಲ್ಲಿ ಇದ್ದುಕೊಂಡೇ 'ಸೈನ್ಸ್ ಫಾರ್ ವಿಲೇಜ್' ಪತ್ರಿಕೆ ಬರೆಯುವ ಮೂಲಕ ಗ್ರಾಮಮುಖಿ ಸಮಾಜಕ್ಕೆ ಕೈಜೋಡಿಸಿದವರು ಹೆಗಡೆ. ದೆಹಲಿಯಲ್ಲಿದ್ದ ಇವರನ್ನು ವರ್ಧಾ ಚಿಂತನಾಕ್ರಮಗಳು ಬಹುವಾಗಿ ಆಕರ್ಷಿಸಿದ್ದವು. ಅಭಿವೃದ್ಧಿ ವಿಚಾರದಲ್ಲಿ ಗಾಂಧಿ ತತ್ವವನ್ನು ಒಪ್ಪಿಕೊಳ್ಳುತ್ತಲೇ ಯಂತ್ರ ನಾಗರೀಕತೆಯನ್ನು ಹೆಗಡೆ ಅವರು ವಿರೋಧಿಸುತ್ತಾರೆ. ಗಾಂಧೀಜಿ ಪರಿಸರ ಪೂರಕ ಸಿದ್ಧಾಂತವಾಗಿ ಮರುಬಳಕೆ ಮತ್ತು ಪುನರ್ ಬಳಕೆ ಸಿದ್ಧಾಂತವನ್ನು ಪ್ರತಿಪಾದಿಸಿದರು. ಭಾರತದಲ್ಲಿಯೂ ಸಹ ಅಪ್ಪಿಕೋ ಚಳುವಳಿಯ ಸುಂದರ್‌ಲಾಲ್ ಬಹುಗುಣ, ಚಂಢೀಪ್ರಸಾದ್ ಭಟ್, ಬಾಬಾ ಆಮ್ಟೆ ಮುಂತಾದವರಿಗೆ ಗಾಂಧೀಜಿ ಪ್ರಣೀತ ಮಾರ್ಗ ಭರವಸೆಯ ಕಿರಣಗಳಾಗಿ ಕಂಡುಬಂದವು. ಪರಿಸರವಾದಿ ಮೇಧಾಪಾಟ್ಕರ್ ಅವರ ಗ್ರಾಮಸ್ವರಾಜ್ಯದ ಕಿರುಮಾದರಿಗಳು ಗಮನಾರ್ಹ. ಈ ದಿಸೆಯಲ್ಲಿ ಆಲೋಚಿಸುವವರು ನಾಗೇಶ ಹೆಗಡೆ. ಆದರೂ, 'ಕರೆದರೆ ಬಂದು ಅತ್ಯಂತ ಶ್ರದ್ಧೆಯಿಂದ ಪರಿಸರ ಕುರಿತು ಮಾತನಾಡುತ್ತಾರೆ. ಹೆಗಡೆ ಅಗೆನೆಸ್ಟ್ ಟು ಡೆವಲೆಪ್‌ಮೆಂಟ್ ಅವರು ಪಾಲಿಸಿ ರೂಪಿಸುವ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ' ಎನ್ನುವ ಆರೋಪಗಳೂ ಇವೆ.

ಇಂದು ತೇಜಸ್ವಿ ನಮ್ಮೊಂದಿಗೆ ಇಲ್ಲ. ಇದ್ದಿದ್ದರೆ ಇಂದಿನ ವಿವೇಕಾರಹಿತ ಮತ್ತು ನಿಸರ್ಗ ಕೇಂದ್ರಿತ ಹಾಗೂ ತಂತ್ರಜ್ಞಾನ ಆಧಾರಿತ ಅಭಿವೃದ್ಧಿ ಚಿಂತನೆಗಳಿಗೆ ಮುಖಾಮುಖಿಯಾಗುತ್ತಿದ್ದರು. 'ಪ್ರಗತಿರಂಗ'ದ ಪ್ರಣಾಳಿಕೆಯಲ್ಲಿ ಕಾಡುಗಳ ಬಗ್ಗೆ ಪರಿಸರದ ಬಗ್ಗೆ ವ್ಯಾಪಕವಾದ ಕಾರ್ಯಕ್ರಮಗಳನ್ನು ರೂಪಿದ್ದರು ತೇಜಸ್ವಿ. ಪಕ್ಷ ಅಧಿಕಾರಕ್ಕೆ ಬಂದರೆ ಕೆಲವೊಂದು ಅರಣ್ಯೀಕರಣದ ಅಥವಾ ಪುನರುಜ್ಜೀವನದ ಕಾರ್ಯಗಳಾದರೂ ನಡೆಯಲಿ ಎಂದು ಅವರು ಆಶಿಸಿದ್ದರು. ಲಕ್ಷಾಂತರ ಹೆಕ್ಟೇರ್ ಬೆಲೆಬಾಳುವ ಕಾಡನ್ನು ಬೆಳೆಸುವ ಮೂಲಕ ನಿರುದ್ಯೋಗಿ ಯುವಕರನ್ನು ಬಳಸಿಕೊಂಡು ಆರ್ಥಿಕ, ಸಾಮಾಜಿಕ ಮತ್ತು ಪ್ರಾಕೃತಿಕ ಹಿತ

ಕಾಪಾಡುವ ಯೋಜನೆ ರೂಪಿಸಿದ್ದರು. ಈ ಅರಣ್ಯೀಕರಣ ಆಂದೋಲನ ಜನರ ನೈತಿಕ ನೆಲೆಗಟ್ಟಿನ ಮೇಲೆ ನಿಂತಿರುವುದಾಗಿದ್ದು, ಭಾರತದಲ್ಲಿ ಮೊದಲಬಾರಿಗೆ ನಿಸ್ವಾರ್ಥವನ್ನು ತನ್ನ ಮೂಲ ಚೈತನ್ಯವನ್ನಾಗಿ ಉಳ್ಳ ಕಾರ್ಯಕ್ರಮ ಜಾರಿಗೆ ಬರಬೇಕೆಂದು ಅವರು ಆಶಿಸಿದ್ದರು.

ಅಭಿವೃದ್ಧಿಯ ಭರಾಟೆಯಲ್ಲಿ ಜೀವವೈವಿಧ್ಯನಾಶ, ಸಾಮಾಜಿಕ ಅಸಮಾನತೆ ಮತ್ತು ಮುಂದಿನ ಪೀಳಿಗೆಯ ಕ್ಲೇಶಗಳು ಹೆಚ್ಚದಂತೆ ಇಂದಿನ ಜನರನ್ನು ಎಚ್ಚರಿಸುವುದೇ ಪರಿಸರವಾದದ ಸ್ಥೂಲ ಉದ್ದೇಶವೆಂದು ಪರಿಗಣಿಸಿದರೆ ಕರ್ನಾಟಕದಲ್ಲಿ ಪರಿಸರ ಹೋರಾಟ ಸೋತಿದೆಯೆಂದು ಪೂರ್ತಿ ಕೈಚೆಲ್ಲಬೇಕಾಗಿಲ್ಲ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಜಾಗೃತಿ ನಾನಾ ಸ್ತರಗಳಲ್ಲಿ ಕೆಲಸ ಮಾಡುತ್ತಿದೆ. ಪಶ್ಚಿಮಘಟ್ಟಗಳಲ್ಲಿ ಅಘನಾಶಿನಿ, ಬೇಡ್ತಿಯಂಥ ನದಿಗಳು ಇಂದಿಗೂ ಸ್ವತಂತ್ರವಾಗಿ ಹರಿಯುತ್ತಿವೆ. ಜೀವಿವೈವಿಧ್ಯ ದಾಖಲಾತಿಯಲ್ಲಿ ಇತರೆಲ್ಲ ರಾಜ್ಯಗಳಿಗಿಂತ ಕರ್ನಾಟಕ ಮುಂಚೂಣಿಯಲ್ಲಿದೆ. ಸಮಾಜವನ್ನು ಎಚ್ಚರಿಸಲೆಂದು ಬೀದಿಗಿಳಿದು ಘೋಷಣೆ ಕೂಗುವವರ ಸಂಖ್ಯೆ ಇಂದು ತೀರಾ ಕಡಿಮೆಯಾಗಿದೆ. ಆದರೆ ಸಾಹಿತ್ಯದಲ್ಲಿ ಕತೆ ಕಾದಂಬರಿಗಳಲ್ಲಿ ಆ ಪ್ರಜ್ಞೆ ಅಂತಃಸ್ರೋತವಾಗಿದೆ. ಪಠ್ಯಪುಸ್ತಕಗಳಲ್ಲಿ ಪರಿಸರ ಪಾಠಗಳು ಸೇರ್ಪಡೆಗೊಂಡಿವೆ. ಅಂದು ಬೀದಿಗಿಳಿದು ಘೋಷಣೆ ಕೂಗುತ್ತಿದ್ದ ಬಿಸಿರಕ್ತದ ಯುವಕರಲ್ಲಿ ಕೆಲವರು ಇಂದು ಸರಕಾರದ ಧೋರಣೆಗಳನ್ನು ಬದಲಾಯಿಸಲು ಶಕ್ತರಾಗಿದ್ದಾರೆ. ಆದ್ದರಿಂದಲೇ ಇಂದು ಎಂಡೊಸಲ್ಫಾನ್‌ಗೆ ನಿಷೇಧ ಹಾಕಲು ಸರ್ಕಾರ ನಿರ್ಧರಿಸಿದೆ. ಪಶ್ಚಿಮಘಟ್ಟಗಳಲ್ಲಿ ನೀಲಗಿರಿ ನೆಡುತೋಪು ಬೆಳೆಸಕೂಡದೆಂದು ಸರ್ಕಾರ ನಿರ್ಧರಿಸಿರುವುದಾಗಿ ಅರಣ್ಯ ಸಚಿವರು ಹೇಳಿಕೆ ನೀಡಿದ್ದಾರೆ. ಇಪ್ಪತ್ತಕ್ಕೂ ಹೆಚ್ಚು ಸಕ್ಕರೆ ಕಾರ್ಖಾನೆಗಳಲ್ಲಿ ವಿದ್ಯುತ್ ಉತ್ಪಾದನೆ ಸಾಧ್ಯವಾಗಿದೆ. ಸೌರಶಕ್ತಿಯ ಬಳಕೆ ಹಾಗೂ ಮಳೆನೀರಿನ ಶೇಖರಣೆ ಕಡ್ಡಾಯವಾಗಿದೆ. ವಾಹನ ಮಾಲಿನ್ಯವನ್ನು ತಗ್ಗಿಸಬಲ್ಲ ಜೈವಿಕ ಇಂಧನಗಳ ಬಳಕೆಯಲ್ಲಿ ಕರ್ನಾಟಕವೇ ಮುಂದಿದೆ ಎನ್ನುತ್ತಾರೆ ನಾಗೇಶ ಹೆಗಡೆ ಅವರು.

'ಲೋಕಲ್ ಮೊದಲು, ಲೋಕದ್ದು ಆಮೇಲೆ' ಎಂದಿದ್ದರೂ ನಾಗೇಶ ಹೆಗಡೆ ಅವರ ಬಹಳಷ್ಟು ಮಂಡನೆಗಳು ಪಶ್ಚಿಮಘಟ್ಟದಿಂದ ಆರಂಭವಾಗಿ ಜಾಗತಿಕದೆತ್ತರಕ್ಕೆ ಹಾರಿಬಿಡುತ್ತವೆ. ಪ್ರಕೃತಿ ವಿಕೋಪಗಳಿಗೆ ಮತ್ತು ಜಾಗತಿಕಮಟ್ಟದ ಪರಿಸರದ ಸಮಸ್ಯೆಗಳಿಗೆ ಹಾಗೂ ಎದುರಾಗುತ್ತಿರುವ ಭೂಗ್ರಹದ ವೈರುಧ್ಯಗಳಿಗೆ ನಿರಂತರ ಮುಖಾಮುಖಿಯಾಗುತ್ತಾರೆ. ೨೦೧೧ ಫೆಬ್ರವರಿ ೧೪ರಂದು ಚಿಕ್ಕಬಳ್ಳಾಪುರ-ಕೋಲಾರ ಜಿಲ್ಲೆಯ ಜನಸಾಮಾನ್ಯರು ನೀರಿಗಾಗಿ ಹೋರಾಟ ಆರಂಭಿಸಿ ಬೀದಿಗಿಳಿದಿದ್ದರು. **"ನೇತ್ರಾವತಿ ನದಿಯನ್ನು ತಿರುಗಿಸಿ ಈ ಎರಡೂ ಬರಪೀಡಿತ ಜಿಲ್ಲೆಗಳಿಗೆ ನೀರು ಕೊಡಿ' ಎಂಬುದು ಅವರ ಬೇಡಿಕೆಯಾಗಿತ್ತು. 'ನದಿ ತಿರುಗಿಸಿ' ಎಂಬ ಬೇಡಿಕೆಯು ೩೦ ವರ್ಷಗಳ ಕರ್ನಾಟಕದ ಪರಿಸರ ಹೋರಾಟದ ಚರಿತ್ರೆಯನ್ನು ಪೂರ್ತಿ ತಿರುಗಿಸಿ ನಿಲ್ಲಿಸಿದೆ ಎಂದೇ ಹೇಳಬಹುದು ಎನ್ನುತ್ತಾರೆ"** [೩೧] ಹೆಗಡೆ. ಈ ರಾಜ್ಯದಲ್ಲಿ ಪ್ರಾದೇಶಿಕವಾಗಿ ಮತ್ತು ಸಮಗ್ರ ನಾಡಿಗಾಗಿ ರೂಪುಗೊಂಡ ಅಭಿವೃದ್ಧಿ ಯೋಜನೆಗಳು ನಿಜವಾಗಿಯೂ ಆಯಾಯ ನೆಲಭಾಗದವರಿಗೆ ಮತ್ತು ಅಲ್ಲಿನ ಪರಿಸರದಲ್ಲಿ ಅಂತರ್ಯವಾಗಿ ಬದುಕು ಕಟ್ಟಿಕೊಂಡು ಜೀವಿಸುತ್ತಿದ್ದವರಿಗೆ ಮತ್ತು ನಾಡಿನ ಫಲಾನುಭವಿಗಳಿಗೆ ತಲುಪಿದವೇ ಎಂಬ ಪ್ರಶ್ನೆಗಳಿವೆ. ಉತ್ತರ ಕರ್ನಾಟಕದ ಆಲಮಟ್ಟಿ ಯೋಜನೆಯ ನಿಜವಾದ ಲಾಭ ಪಡೆದವರಾರು?

ನದಿ ತಪ್ಪಲನ್ನು ಆಶ್ರಯಿಸಿ ಬದುಕುತ್ತಿದ್ದ ಅಲ್ಲಿನ ಸಮುದಾಯಕ್ಕೆ ಅದು ನೆರವಾಯಿತೇ? ಇತ್ತ ಹೈದರಾಬಾದ್ ಕರ್ನಾಟಕ ಭಾಗದಲ್ಲೂ ಭೂ ಸ್ವರೂಪಗಳಿವೆ, ನೀರಿನ ಸಮಸ್ಯೆಯಿದೆ. ಕೋಲಾರ-ಚಿಕ್ಕಬಳ್ಳಾಪುರದಲ್ಲೂ ನೀರಿನ ಒರತೆಗಳು ಮುಚ್ಚಿಹೋಗಿವೆ. ಅಂತರ್‌ಜಲ ಮರಿಚಿಕೆಯಾಗಿದೆ. ಕೃಷಿಯಿರಲಿ ಇಲ್ಲಿನವರಿಗೆ ಉಸಿರಿನ ಭಾಗವಾಗಿ ನೀರಹನಿಯ ಬೇಡಿಕೆಯಿದೆ. ಮೊನ್ನೆ ಮೊನ್ನೆಯಷ್ಟೇ ರಾಮಚಂದ್ರ ಗುಹಾ ಅವರು ಪ್ರಜಾವಾಣಿಯಲ್ಲಿ ಎತ್ತಿನಹೊಳೆ ಯೋಜನೆ ಕುರಿತು ನಿಸರ್ಗಾಧಾರಿತ ಅಭಿವೃದ್ಧಿಯ ಸರ್ಕಾರದ ರಾಜಕೀಯ ಧೋರಣೆಗಳನ್ನು ಕುರಿತು ಚರ್ಚಿಸಿದ್ದಾರೆ. ಪಶ್ಚಿಮದ ಯಂತ್ರ ನಾಗರೀಕತೆಯು ಪ್ರಕೃತಿಗೆ ವೈರುಧ್ಯವಾಗಿದ್ದು ಅವುಗಳ ಅನುಕರಣೆ ಭಾರತದ ನಗರಗಳನ್ನು ಎಲ್ಲೆಮೀರಿ ನಾಜೂಕುಗೊಳಿಸುತ್ತಿರುವಾಗ ದೂರದಲ್ಲೆಲ್ಲೋ ಕುಡಿಯುವ ನೀರಿನ ಬೇಡಿಕೆಗಾಗಿ ಜನಸಾಮಾನ್ಯರ ಧ್ವನಿ ಎದ್ದಿರುವುದು ಬದುಕುವ ಚೈತನ್ಯದ ದೃಷ್ಟಿಯಿಂದ ಮಾರ್ಮಿಕವಾದುದು. ಒಂದೆಡೆ ಇದಕ್ಕಾಗಿ ನಡೆಯುತ್ತಿರುವ ನಿಸರ್ಗದ ಮೇಲಿನ ಮನುಷ್ಯನ ಹಲ್ಲೆ, ಅತಿಕ್ರಮಣ ಮತ್ತು ಸಂಘರ್ಷ ಹಾಗೂ ವಿವೇಕರಹಿತವಾದ ಇಂಜಿನಿಯರ್‌ಗಳ ನೀಲಾನಕಾಶೆಯ ರೂಪುರೇಷೆ ಅಷ್ಟೇ ಕ್ರೂರವಾದುದು. ಎತ್ತಿನಹೊಳೆ ಕಾಮಗಾರಿ ಆರಂಭವಾಗಿದೆ. ಪ್ರಗತಿ ಕಾರ್ಯಗಳ ಸಮೀಕ್ಷೆ ಪ್ರಾರಂಭಿಸಿದ್ದಾರೆ ಜಲಸಂಪನ್ಮೂಲ ಸಚಿವರು.

ಒಂದೆಡೆ ಚಿತ್ರದುರ್ಗದಿಂದ ಧರ್ಮಸ್ಥಳಕ್ಕೆ ಜೋಡಿ ಹೆದ್ದಾರಿ ಕಾರ್ಯ ನಡೆಯುತ್ತಿದೆ. ಪತ್ರಕರ್ತರೂ ಆಗಿದ್ದ ಇಂದಿನ ಮೈಸೂರು ಸಂಸದರು ಬೆಂಗಳೂರಿಂದ-ಮೈಸೂರಿಗೆ ೯೦ ನಿಮಿಷದಲ್ಲಿ ತಲುಪುವ ಜೋಡಿ ಹೆದ್ದಾರಿ ಅಭಿವೃದ್ಧಿ ಕಾರ್ಯ ಆರಂಭಿಸುವ ಬಗ್ಗೆ ಮಾಧ್ಯಮವೊಂದರಲ್ಲಿ ಮಾತನಾಡಿದ್ದಾರೆ. ಇವೆಲ್ಲವೂ ಪರಿಸರದ ಬಗ್ಗೆ ಇರುವ ಅಂಧತ್ವ, ಅಪ್ರಜ್ಞೆಯ, ವಿವೇಕಾರಹಿತ ರಾಜಕೀಯ ಧೋರಣೆಗಳಾಗಿವೆ. ಇದೇ ಅಧ್ಯಾಯದ ಆರಂಭದಲ್ಲಿ ಹಿನ್ನಲೆಯಾಗಿ ಚರ್ಚಿಸಿದ ಸಂಗತಿಗಳಲ್ಲಿ ಭಾರತೀಯ ಪರಿಸರೀಯತೆಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಸಂಘರ್ಷ ಮತ್ತು ಹಸಿರು ಚಳುವಳಿಗಳು ಮಾಧ್ಯಮದ ಗಮನ ಸೆಳೆಯುವಂತೆ ಪತ್ರಕರ್ತರು ಕೆಲಸ ಮಾಡಿದರು ಎಂಬುದನ್ನು ಉಲ್ಲೇಖಿಸಿದೆ. ವಿಪರ್ಯಾಸವೆಂದರೆ ಪತ್ರಕರ್ತರಾಗಿದ್ದ ಸಂಸದರೇ ಹೆದ್ದಾರಿ ಕುರಿತು ಮಾತನಾಡಿರುವುದು ಇಂದಿನ ಪರಿಸರೀಯತೆಯ ದುರಂತವನ್ನು ನೆನಪಿಸುತ್ತದೆ.

ಈಗಿನ ಸಂದರ್ಭದಲ್ಲಿ ನಾಡಿನ ಪರಿಹಾರದ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಸರವಾದಿಗಳು, ಸಾಹಿತಿಗಳು ಮತ್ತು ಹಿರಿಯ ಪರಿಸರ ಹೋರಾಟಗಾರರೆಲ್ಲರೂ ಕೂಡಿ ಚಿಂತಿಸಬೇಕಿದೆ. ಆರೋಗ್ಯಕರವಾದ ಪರಿಸರ ಪೂರಕ ಅಭಿವೃದ್ಧಿಯ ಯೋಜನೆಗಳು, ಅಗತ್ಯ ನೀತಿ-ನಿರೂಪಣೆಗಳು ಹಾಗೂ ಹಸಿರು ಆರ್ಥಿಕತೆ ನಿರ್ಮಾಣಕ್ಕಾಗಿ ರೂಪುರೇಷೆಗಳು ತುರ್ತು ರೂಪುಗೊಳ್ಳಬೇಕಿದೆ. ಎಲ್ಲಾ ಸ್ತರದ ಭಾಗೀದಾರರೆಲ್ಲರೂ ಪರಿಸರ ಸಂರಕ್ಷಣೆಗೆ ಒಂದಾಗುವ ತುರ್ತು ಪರಿಸ್ಥಿತಿಯ ಘಂಟೆ ಮೊಳಗುತ್ತಿದ್ದರೂ ಆಧುನಿಕ ಜೀವನ ಶೈಲಿಯ ಭರಾಟೆಯಲ್ಲಿ ಅದರ ಶಬ್ದ ಅಸ್ಪಷ್ಟವಾಗಿ ಕೇಳುತಿದೆಯಷ್ಟೇ. ಸ್ವಲ್ಪ ಯಾಮಾರಿದರೂ ಕೊಡಗಿನಲ್ಲಾದ ಸ್ಥಿತಿ ಯಾವುದೇ ಭೂಭಾಗವನ್ನು ಆವರಿಸಬಹುದಾಗಿದೆ. ವೈಜ್ಞಾನಿಕತೆಯನ್ನೆ ಬದುಕಾಗಿಸಿಕೊಂಡಿರುವ ಮಾನವನು ಪರಿಸರ ಹಾಗೂ ಪ್ರಾಣಿ ಸಂಕುಲ ರಕ್ಷಣೆಯಲ್ಲಿ ಮಾತ್ರ ಅವೈಜ್ಞಾನಿಕವಾಗಿ

ವರ್ತಿಸುತ್ತಿರುವುದು ನಿಜವಾಗಿಯೂ ಆತಂಕಕಾರಿ ಸಂಗತಿಯಾಗಿದೆ. ನಮ್ಮ ಹಿರಿಯರು ಕಂಡ ಪ್ರಾಣಿ ಸಂಕುಲವನ್ನು ನಾವು ಕಂಡಿಲ್ಲ. ನಾವು ಕಂಡಷ್ಟನ್ನು ನಮ್ಮ ಮಕ್ಕಳಿಗೆ ತೋರಿಸಲಾರದಷ್ಟು ಪ್ರಕೃತಿಯ ವಿನಾಶ ಅವ್ಯಾಹತವಾಗಿ ನಡೆಯುತ್ತಿದೆ. ಇಷ್ಟಾದರೂ ಜಾಗೃತಿ ಮೂಡದಿರುವುದು ನಮ್ಮ ಸೋಲನ್ನು ತೋರಿಸುತ್ತಿರುವುದು. ಭೂಮಂಡಲದಲ್ಲಿ ಶ್ರೇಷ್ಠವೆನಿಸಿರುವ ಮನುಷ್ಯನೆಂಬ ಪ್ರಾಣಿಯು ತನ್ನ ಸುಖಮಯ ಜೀವನಕ್ಕಾಗಿ ಉಳಿದ ಜೀವ ಸಂಕುಲಕ್ಕೆ ನೀಡುತ್ತಿರುವ ಹಿಂಸೆ ಹಾಗೂ ಕೌರ್ಯಗಳೆಲ್ಲವೂ ತನ್ನ ಸರ್ವನಾಶಕ್ಕೆ ಎಂಬುದನ್ನು ಆತ ಮರೆತಂತಿದೆ. ಪರಿಸರದ ಬಗ್ಗೆ ಸಮಾಧಾನಕರ ಸಂಗತಿಯೆಂದರೆ ಹಿಂದೆಂದಿಗಿಂತ ಹೆಚ್ಚಿನ ಮಾಹಿತಿ ಈಗ ಲಭ್ಯವಿದ್ದು ಕರ್ನಾಟಕದ ಅನೇಕ ವಿಶ್ವವಿದ್ಯಾಲಯಗಳು ಪರಿಸರ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಪದವಿಗಳನ್ನು ನೀಡುತ್ತಿವೆ. ಎಲ್ಲ ದೊಡ್ಡ ನಗರಗಳಲ್ಲಿ, ಕಾರ್ಖಾನೆಗಳಲ್ಲಿ, ಕಾರ್ಪೊರೇಟ್ ವಲಯದಲ್ಲಿ ನೂರಕ್ಕೂ ಹೆಚ್ಚು 'ಪರಿಸರ ತಂತ್ರಜ್ಞರು' ಉದ್ಯೋಗ ನಿರತರಾಗಿವುದು. ಔದ್ಯಮಿಕ ರಂಗದಲ್ಲಿನ ಬೆಳವಣಿಗೆ ಏರುಗತಿಯಲ್ಲಿದ್ದು, ಪರಿಸರ ತಜ್ಞರ ಉದ್ಯೋಗಾವಕಾಶಗಳೂ ಹೆಚ್ಚುತ್ತಿವೆ; ಅದೇ ವೇಳೆಗೆ ಕನ್ನಡದ ಪ್ರಕೃತಿ-ಪರಿಸರಕ್ಕೆ ಒದಗಿರುವ ಸಂಕಟಗಳೂ ಹೆಚ್ಚುತ್ತಿವೆ; ಇವನ್ನೆಲ್ಲ ಜೊತೆಗಿಟ್ಟು ನೋಡಿದಾಗ ನಮ್ಮ ಸಮಾಜದ ಚಲನಶೀಲತೆಗೆ ಗರಬಡಿದಂತೆ ಕಾಣುತ್ತದೆ. ಸುಸ್ಥಿರ ಅಭಿವೃದ್ಧಿ ನಮಗೆಲ್ಲ ಬೇಕು ನಿಜ. ಆದರೆ ಅದರ ಹೆಸರಿನಲ್ಲಿ ಶಕ್ತಿಬಾಕ, ಕೊಳ್ಳುಬಾಕ, ದುಂದುಮಾರಿ, ಬಿಸಾಕು ಪ್ರವೃತ್ತಿಯ ಸಮಾಜ ಸೃಷ್ಟಿಯಾಗುತ್ತಿದೆ. ನಿಸರ್ಗದಿಂದ ದೂರ ಸಾಗುವ ಕೃತಕ ಬದುಕಿಗೇ ಆದ್ಯತೆ ಸಿಗುತ್ತಿದೆ. ಅದನ್ನು ವಿಶ್ಲೇಷಿಸಬೇಕಾದ ಸಮಕಾಲೀನ 'ಅಭಿವೃದ್ಧಿ ಸಾಹಿತ್ಯ' ಮಾತ್ರ ಎದ್ದು ಕಾಣುತ್ತಿಲ್ಲ ಎಂದೂ, ನಮ್ಮ ಅದೃಷ್ಟಕೆ ಎಚ್.ಎಸ್ ದೊರೆಸ್ವಾಮಿ ನಮ್ಮೊಂದಿಗೆ ಇದ್ದಾರೆ, ಸಂತೋಷ ಹೆಗಡೆ ಇದ್ದಾರೆ, ಯಲ್ಲಪ್ಪರೆಡ್ಡಿ ಇದ್ದಾರೆ, ಎಸ್.ಆರ್. ಹಿರೇಮಠ್ ಇದ್ದಾರೆ. ಆದರೆ ಅವರು ನಡೆಸುವ ಹೋರಾಟಗಳ ಕತೆಗಳನ್ನು ಅಕ್ಷರಗಳ ಮೂಲಕ ಹೇಳುವವರಿಲ್ಲ. ಕಾರಂತರಿಲ್ಲ, ಕೃಷ್ಣಾನಂದ ಕಾಮತರಿಲ್ಲ. ತೇಜಸ್ವಿ ಇಲ್ಲ, ಕೆ.ವಿ.ಸುಬ್ಬಣ್ಣ ಇಲ್ಲ, ಅನಂತಮೂರ್ತಿ ಇಲ್ಲ. ಕನ್ನಡಮ್ಮ ಅನಾಥೆಯಾಗಿದ್ದಾಳೆ. ನಮ್ಮ ಬಂಡೆಗಳು, ನಮ್ಮ ಕಿರು ಜಲಪಾತಗಳು, ಹಾಡಿ ಹೊಗಳಿದ ಹಿಂದಿನವರ ಹೆಸರುಗಳು ಬಾಯಿಪಾಠ ಆಗ್ತವೆ; ಅವುಗಳ ಉಳಿವಿಗೆ ಹೋರಾಡುತ್ತಿರುವ ಇಂದಿನ ಧೀರರ ಹೆಸರುಗಳು ಮುಂದಿನ ಪೀಳಿಗೆಗೆ ದಾಟುತ್ತಿಲ್ಲ ಎನ್ನುತ್ತಲೇ ಹೆಗಡೆ ಅವರು ಸಾಹಿತ್ಯ ಪ್ರಜ್ಞೆಯ ಬಗ್ಗೆ ವಿಷಾದಿಸುತ್ತಾರೆ. ಮೇಲಾಗಿ ಪರಿಸರ ಕಾಳಜಿಯ ವಿಷಯ ಕುರಿತು ನಾನು ಹೇಳಬೇಕಾದ್ದೇ ಇಲ್ಲ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಪರಿಸರ ಕಾಳಜಿಯ ಬಗ್ಗೆ ನಿಮಗೆಲ್ಲ ಗೊತ್ತೇ ಇದೆ. ಬಹುಶಃ ಕರ್ನಾಟಕದಲ್ಲಿ ಅತ್ಯಂತ ಹೆಚ್ಚಿನ ಪರಿಸರ ಪ್ರಜ್ಞೆ, ಅತ್ಯಂತ ಹೆಚ್ಚು ಪರಿಸರ ಹೋರಾಟಗಳು ಇರೋ ಜಿಲ್ಲೆ ಯಾವುದು ಅಂತ ಕೇಳಿದರೆ ದಕ್ಷಿಣ ಕನ್ನಡ ಅಂತ ಥಟ್ ಅಂತ ಹೇಳಬಹುದು. ಪರಿಸರ ವಿಷಯವನ್ನು ಎತ್ತಿಕೊಂಡು ಎಲ್ಲರಿಗಿಂತ ಮೊದಲು ಘಂಟಾನಾದ ಮಾಡಿದ ಮೇರುವ್ಯಕ್ತಿ ಡಾ.ಶಿವರಾಮ ಕಾರಂತರು ಇಲ್ಲಿನವರು. ಇಡೀ ಭಾರತದಲ್ಲಿ ಮೊದಲ ಬಾರಿಗೆ ಪರಿಸರ ಅಭ್ಯರ್ಥಿ ಎಂದು ಲೋಕಸಭೆಗೆ ಚುನಾವಣೆಗೆ ಸ್ಪರ್ಧಿಸಿದ್ದವರು ಅವರು. ಇಲ್ಲಿನ ಸ್ವಚ್ಛಂದ ಪರಿಸರದ ಮೇಲೆ ಅತ್ಯಂತ ವಿಕ್ಷಿಪ್ತ ದಾಳಿ ಎದುರಾಗಿದ್ದೂ ಇಲ್ಲೇ. ಅದು ಹಡಗು ಒಡೆಯುವ ಉದ್ಯಮವಾಗಿರಬಹುದು; ಕೊಜೆಂಟ್ರಿಕ್ಸ್ ಉಷ್ಣಸ್ಥಾವರ ಇರಬಹುದು. ಎಂಡೊಸಲ್ಫಾನ್ ಸುರಿಮಳೆ ಇರಬಹುದು. ಅಂಥದ್ದು ರಾಜ್ಯದ

ಬೇರೆ ಯಾವ ಜಿಲ್ಲೆಯಲ್ಲೂ ಆಗಿರಲಿಲ್ಲ. ಆ ಎಲ್ಲವುಗಳ ವಿರುದ್ಧ ಏಕತ್ರವಾಗಿ ಹೋರಾಟ ನಡೆಸಿದ ಜಿಲ್ಲೆ ಇದು. ಅದರ ನಂತರವೂ ಎಸ್ಸೀಝಡ್ ವಿವಾದ ಇರಬಹುದು, ಈಚಿನ 'ಎತ್ತಿನಹೊಳೆ' ಯೋಜನೆ ಇರಬಹುದು. ಅದರ ವಿರುದ್ಧ ರಾಜ್ಯಕ್ಕೆಲ್ಲ ಕೇಳಿಸುವಷ್ಟು ಸ್ಪಷ್ಟ ದನಿ ಎದ್ದದ್ದೂ ಇಲ್ಲೇ. ಪರಿಸರ ಕಾಳಜಿ ಅನ್ನೋದು ಇಲ್ಲಿನ ಜನರ ಉಸಿರಿನಲ್ಲೇ ಇದೆ. ಹೋರಾಟದ ಹಾದಿ ಹಳತಾಗಿದೆ. ಈಗೀಗ ಹೋರಾಟಕ್ಕೆ ಜನ ಬರುವುದೂ ಕಡಿಮೆಯೇ. ಹಿಂದೊಂದು ಕಾಲದಲ್ಲಿ ತುಂಬಾ ಜನ ಬರುತ್ತಿದ್ದರು. ಈಗ ಸಮುದಾಯ ಅನ್ನೋದು ಒಡೆದು ಚೂರು ಚೂರಾಗಿದೆ. ಹೊಸ ಹಾದಿಯ ಹುಡುಕಾಟ ಆರಂಭವಾಗಬೇಕಿದೆ. ಹೋರಾಟಕ್ಕಿಳಿಯಲಾಗದ ಯುವಪೀಳಿಗೆ ಬಗ್ಗೆ ನನಗೆ ಆತಂಕ ಇದೆ ಎನ್ನುತ್ತಾರೆ ನಾಗೇಶ ಹೆಗಡೆ. ಪರಿಸರ ಹೋರಾಟಗಳಲ್ಲಿ ಕರ್ನಾಟಕವೇ ಇತರೆಲ್ಲ ರಾಜ್ಯಗಳಿಗಿಂತ ಮುಂದಿತ್ತು. ಇಲ್ಲಿ ನಡೆದಷ್ಟು ಪ್ರತಿಭಟನೆಗಳು ಭಾರತದ ಬೇರೆ ಯಾವ ರಾಜ್ಯದಲ್ಲೂ ನಡೆದಿರಲಿಲ್ಲ. ದೊಡ್ಡ ಅಣೆಕಟ್ಟುಗಳ ವಿರುದ್ಧ, ಏಕಜಾತಿ ಬೆಳೆಗಳ ವಿರುದ್ಧ, ಕುಲಾಂತರಿ ಸಸ್ಯಗಳ ವಿರುದ್ಧ, ಕೆಮಿಕಲ್ ಕಾರ್ಖಾನೆಗಳ ವಿರುದ್ಧ, ಕೋಳಿಮಾಂಸದ ಹೋಟಲ್ ವಿರುದ್ಧ, ಬಹುರಾಷ್ಟ್ರೀಯ ಬೀಜಕಂಪನಿ ವಿರುದ್ಧ, ಪೆಟ್ರೋಲಿನಲ್ಲಿ ಸೀಸ ಸೇರ್ಪಡೆ ವಿರುದ್ಧ, ಗಣಿಕಾರಿಕೆ ವಿರುದ್ಧ, ಹಡಗು ಒಡೆಯುವ ಉದ್ಯಮದ ವಿರುದ್ಧ, ತ್ಯಾಜ್ಯಾತಿಪ್ಪೆಗಳ ವಿರುದ್ಧ, ಅಷ್ಟೇಕೆ ಹೈಟೆನ್ಶನ್ ಪವರ್ ಲೈನ್ ವಿರುದ್ಧ ಚಳವಳಿಗಳು ನಡೆದಿವೆ. ಕನ್ನಡದ ಉದ್ದಾಮ ಸಾಹಿತಿಗಳೇ ಇಂಥ ಹೋರಾಟಗಳ ಮುಂಚೂಣಿಯಲ್ಲಿದ್ದರು. ಡಾ.ಶಿವರಾಮ ಕಾರಂತರು, ಕೆ.ವಿ.ಸುಬ್ಬಣ್ಣ. ಡಾ.ಯು.ಆರ್. ಅನಂತಮೂರ್ತಿ ಇವರೆಲ್ಲ ತಮ್ಮ ಬರಹ, ಭಾಷಣಗಳ ಮೂಲಕ ಪ್ರತಿಭಟನೆ ನಡೆಸುತ್ತಿದ್ದರು. ಬೀದಿ ಪ್ರತಿಭಟನೆಗಳಷ್ಟೇ ಅಲ್ಲ, ಇಲ್ಲಿ ನಡೆದ ನ್ಯಾಯಾಂಗ ಹೋರಾಟಗಳೂ ರಾಷ್ಟ್ರಮಟ್ಟದಲ್ಲಿ ಅಪ್ರತಿಮವೆನಿಸಿವೆ. ಹೀಗಿದ್ದರೂ ಇಂತ ಪರಂಪರೆಯನ್ನು ಮುಂದುವರೆಸುವವರು ಯಾರೂ ಕಾಣುವುದಿಲ್ಲ. ನಮ್ಮ ನಿಸರ್ಗದ ಮೇಲೆ ಅತಿ ದೊಡ್ಡ ಪ್ರಹಾರಗಳು ನಡೆಯುತ್ತಿರುವ ಸಂದರ್ಭದಲ್ಲೇ ಯುವಜನರು ತಂತಮ್ಮ ವೃತ್ತಿಯಲ್ಲಿ ಔನ್ನತ್ಯ ಸಾಧಿಸಲು ಹೆಣಗುತ್ತಿದ್ದಾರೆ ಎನ್ನುವ ಮೂಲಕ ಪರಿಸರ ಪ್ರಜ್ಞೆಯ ಹೋರಾಟದ ಕೆಲಸಕ್ಕೆ ಯುವ ಸಮುದಾಯ ಮತ್ತು ಪ್ರಜ್ಞಾವಂತ ಸಾಹಿತಿಗಳ ಅವಶ್ಯಕತೆಯನ್ನು ಹೆಗಡೆ ನೆನಪಿಸಿದ್ದಾರೆ.

ಪರಿಸರ ಹೋರಾಟವಾಗಲಿ, ಪರಿಸರವಾದವಾಗಲಿ ಅಥವಾ ನಿಸರ್ಗದ ಮೇಲಿನ ಅತಿಯಾದ ಒತ್ತಡವನ್ನು ತಡೆಗಟ್ಟುವ ದಿಟ್ಟ ಪ್ರಯತ್ನವಾಗಲಿ ಸಾಧ್ಯವಾಗುವಂತದ್ದು ಅಕೆಡೆಮಿಶಿಯನ್ಸ್‌ಗಳಿಂದ. ನಿಸರ್ಗವನ್ನು ಲಾಭಿಗಾಗಿ ದೋಚುತ್ತಿರುವ ರಾಜಕಾರಣಿಗಳಿಗೆ ಮತ್ತು ಅನುದಾನ ಒದಗಿಸಲು ನಿಂತಿರುವ ವಿದೇಶಿ ಕಂಪನಿಗಳಿಗೆ ಹಾಗೂ ಹೊಸ ಹೊಸ ಎಸ್.ಇ.ಜೆಡ್‌ಗಳಿಗಾಗಿ ಕಾಯುತ್ತಿರುವ ಕಾರ್ಪೋರೇಟ್ ಸಂಸ್ಕೃತಿಗೆ ಎಚ್ಚರದ ಘಂಟೆ ಮೊಳಗಿಸುವ ಮೂಲಕ ಈ ನಾಡಿನ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ಹಾಗೂ ಅದರೊಂದಿಗಿನ ಕನ್ನಡ ನಾಡಿನ ಜೀವನಾಕ್ರಮವನ್ನು ರಕ್ಷಿಸುವ ಮತ್ತು ಪೋಷಿಸುವ ಹೊಣೆಗಾರಿಕೆಯು ನಮ್ಮೆಲ್ಲರ ಮುಂದಿದೆ. ಸುಮಾರು ೩೦ ವರ್ಷಗಳ ನಂತರ ೭೦-೮೦ ರ ದಶಕದಲ್ಲಿ ಭಾರತದಲ್ಲಿ ರೂಪುಗೊಂಡ ಚಿಪ್ಕೋ ಮತ್ತು ನಾಡಿನಲ್ಲಿ ರೂಪುಗೊಂಡ ಅಪ್ಪಿಕೋ ಮಾದರಿಯ ಪರಿಸರ ಚಳುವಳಿಗೆ ಮತ್ತೊಮ್ಮೆ ಕರುನಾಡು ಮೂಖಭಾವದಿಂದ ಕಾಯುತ್ತಿದ್ದು, ದೇಶದ ಪರಿಸರವಾದಿಗಳನ್ನೆಲ್ಲಾ ತನ್ನತ್ತ ಬರುವಂತೆ ಮತ್ತು ತನಗೆ ನ್ಯಾಯಸಿಗುವಂತೆ ಮಾಡಲು ಆಹ್ವಾನಿಸುತ್ತಿದೆ. ಶಿರಸಿಯಲ್ಲಿ ಲಿಂಗೇಶ್‌ಶರ್ಮ ಅವರು ಆಯೋಜಿಸಿದ್ದ ರಾಷ್ಟ್ರಮಟ್ಟದ ವಿಚಾರ ಸಂಕಿರಣದಂತಹ

ಆಯೋಜನೆಯು ಹೆಚ್ಚು ಪ್ರಸ್ತುತವಾಗುತ್ತಿದೆ. ಸಮರ್ಥ ನಾಯಕತ್ವದೊಂದಿಗೆ ಹೋರಾಟಗಾರರನ್ನು ಪ್ರೇರೇಪಿಸಬಲ್ಲ ಹಾಗೂ ಈಗಿನ ಸಂದರ್ಭದಲ್ಲಿ ಯುವಕರನ್ನು ಒಗ್ಗೂಡಿಸಲು ನೆರವಾಗಬಲ್ಲ ಪರಿಸರ ಕುರಿತ ಬರವಣಿಗೆಗಳು ಇನ್ನಷ್ಟು ಶಕ್ತಿಯುತವಾಗಬೇಕಿದೆ. ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಸಂಘರ್ಷದಿಂದಲೂ ಮತ್ತು ಅವುಗಳ ಹಂಚಿಕೆಯಿಂದಲೂ ವಂಚಿತರಾದ ಸಮುದಾಯದವರು, ಆದಿವಾಸಿಗಳು, ಸ್ಥಳೀಯರು, ಸುಶಿಕ್ಷಿತರು, ಪ್ರಜ್ಞಾವಂತರೆಲ್ಲರೂ ಪರಿಸರದ ಉಳಿವಿನ ಹೋರಾಟದಲ್ಲಿ ಪ್ರಮುಖ ಭಾಗೀದಾರರಾಗಬೇಕಾಗುವ ಅನಿವಾರ್ಯತೆ ಎದುರಾಗಿದ್ದು ನಾಡಿನ ಸಮಗ್ರ ಪರಿಸರದ ರಕ್ಷಣೆ ನಾಡು ನುಡಿಯಷ್ಟೇ ಮುಖ್ಯವಾಗುವುದರ ಜೊತೆಗೆ ಎಲ್ಲರ ಒತ್ತಾಸೆಯನ್ನು ನಿರೀಕ್ಷಿಸುವುದೇ ಅಂತಿಮ ಆಶಯವೆನ್ನಬಹುದಾಗಿದೆ.

ಕೊನೆ ಟಿಪ್ಪಣಿಗಳು

೧. ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ಮಾರ್ಚ್೨೭,೨೦೧೩ರ ಲೇಖನ, ಶೀರ್ಷಿಕೆ: 'ದಿ ಪಾಸ್ಟ್ ಅಂಡ್ ಪ್ರಸೆಂಟ್ ಆಫ್ ಇಂಡಿಯನ್ ಎನ್‌ವಿರಾನ್‌ಮೆಂಟಲಿಸಮ್'

೨. ನಾಗೇಶ ಹೆಗಡೆ ದುಂದುಮಾರ ಪುಟ:೪೯-೫೨

೩. ಪ್ರೊ.ಎಚ್.ಆರ್.ರಾಮಕೃಷ್ಣರಾವ್, ಟಿ.ಆರ್. ಅನಂತರಾಮು, ಕನ್ನಡದಲ್ಲಿ ವಿಜ್ಞಾನ ಸಂವಹನೆ, ಕನ್ನಡದಲ್ಲಿ ವಿಜ್ಞಾನ ಕಥಾ ಸಾಹಿತ್ಯ, ಪುಟ:೧೯೭

೪. ಅದೇ ಪು ಪುಟ:ಪುಟ:೧೬

೫. ಅದೇ ಪು ಪುಟ: ಆಧುನಿಕ ಕನ್ನಡ ಸಾಹಿತ್ಯ-ವಸ್ತು ವೈವಿಧ್ಯ, ಪುಟ:೦೮

೬. ಕೆ.ಪಿ ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪು:೧೫೬-೧೫೭

೭. ಅದೇ ಪು ಪುಟ:೮೭

೮. ಆರ್.ಡಿ.ಜಿ. ಸಂಪಾದನೆ, ತೇಜಸ್ವಿಯನ್ನು ಹುಡುಕುತ್ತಾ, ಪುಟ:೨೬೫

೯. ಗೌರಿ ಸುಂದರ್ ಸಂಪಾದನೆ ಪೂರ್ಣಚಂದ್ರ ತೇಜಸ್ವಿ ಅವರ ಕುರಿತು, ಪುಟ:೧೮೭

೧೦. ಗೌರಿ ಸುಂದರ್ ಸಂಪಾದನೆ ಪೂರ್ಣಚಂದ್ರ ತೇಜಸ್ವಿ ಅವರ ಕುರಿತು, ಪುಟ:೫-೭

೧೧. ಕೆ.ಪಿ ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪು: ೯೭

೧೨. ಗೌರಿ ಸುಂದರ್ ಸಂಪಾದನೆ ಪೂರ್ಣಚಂದ್ರ ತೇಜಸ್ವಿ ಅವರ ಕುರಿತು, ಪುಟ:೫-೭

೧೩. ಕೆ.ಪಿ ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪು: ೧೦೨

೧೪. ಅದೇ ಪುಟ: ೮೬-೮೯

೧೫. ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ಮಾರ್ಚ್೨೭,೨೦೧೩ರ ಲೇಖನ

೧೬. 'ವರ್ತಮಾನ' ಇ ಪತ್ರಿಕೆಯ ಪಶ್ಚಿಮಘಟ್ಟ ಆಧಾರಿತ ಲೇಖನ

೧೭. ಅದೇ ಲೇಖನ

೧೮. ನಾಗೇಶ ಹೆಗಡೆ ಬ್ಲಾಗ್‌ನ ವಿಡಿಯೋ ಭಾಷಣಗಳು

೧೯. ನಾಗೇಶ ಹೆಗಡೆ ಬ್ಲಾಗ್ ಟಿಪ್ಪಣಿಗಳು

೨೦. ನಾಗೇಶ ಹೆಗಡೆ ಬ್ಲಾಗ್ ಟಿಪ್ಪಣಿಗಳು

೨೧. ಪ್ರೊ.ಎಚ್.ಆರ್.ರಾಮಕೃಷ್ಣರಾವ್, ಟಿ.ಆರ್. ಅನಂತರಾಮು, ಕನ್ನಡದಲ್ಲಿ ವಿಜ್ಞಾನ ಸಂವಹನೆ, ಪುಟ: ೧೨

೨೨. ಕನ್ನಡದಲ್ಲಿ ವಿಜ್ಞಾನ ಕಥಾ ಸಾಹಿತ್ಯ, ಪುಟ:೧೯೭

೨೩. ಪ್ರೊ.ಎಚ್.ಆರ್.ರಾಮಕೃಷ್ಣರಾವ್, ಟಿ.ಆರ್. ಅನಂತರಾಮು, ಕನ್ನಡದಲ್ಲಿ ವಿಜ್ಞಾನ ಸಂವಹನೆ, ಕನ್ನಡದಲ್ಲಿ ವಿಜ್ಞಾನ ಕಥಾ ಸಾಹಿತ್ಯ, ಪುಟ:೦೮

೨೪. ವಿಠ್ಠಲ್ ಭಂಡಾರಿ ಅವರ ಬ್ಲಾಗ್ ಟಿಪ್ಪಣಿಗಳು

೨೫. ನಾಗೇಶ ಹೆಗಡೆ ಬ್ಲಾಗ್ ಟಿಪ್ಪಣಿಗಳು

೨೬. ನಾಗೇಶ ಹೆಗಡೆ, ಪ್ರತಿದಿನ ಪರಿಸರ ದಿನ, ಪುಟ: ೨೪–೨೫

೨೭. ಆರ್.ಡಿ.ಜಿ. ಸಂಪಾದನೆ, ತೇಜಸ್ವಿಯನ್ನು ಹುಡುಕುತ್ತಾ, ಪುಟ:೨೬೬–೨೬೭

೨೮. ಅದೇ ಪುಸ್ತಕ ಪುಟ:೨೬೫,

೨೯. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಸಹಜ ಕೃಷಿ, ಪುಟ:೪

೩೦. ನಾಗೇಶ ಹೆಗಡೆ, ಅಭಿವೃದ್ಧಿಯ ಅಂಧಯುಗ–ಪುಟ:೧೦೦

೩೧. ನಾಗೇಶ ಹೆಗಡೆ, ದುಂದುಮಾರ, ಪುಟ:೪೯

ಆಕರ ಗ್ರಂಥಗಳು

೧. ಪ್ರಾಥಮಿಕ ಆಕರಗಳು

೨. ಆನುಷಂಗಿಕ ಆಕರಗಳು

೧. ಪ್ರಾಥಮಿಕ ಆಕರಗಳು

೧.೧ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಮೂಲ ಪಠ್ಯಗಳು

೧. ಪರಿಸರದ ಕಥೆ, ಪುಸ್ತಕ ಪ್ರಕಾಶನ, ೨೦೧೩

೨. ಕರ್ವಾಲೋ, ಪುಸ್ತಕ ಪ್ರಕಾಶನ,

೩. ವಿಸ್ಮಯ–೧, ೨,೩, ಪುಸ್ತಕ ಪ್ರಕಾಶನ, ೨೦೧೩

೪. ಮಿಂಚುಳ್ಳಿ, ಕನ್ನಡ ನಾಡಿನ ಹಕ್ಕಿಗಳು–೧, ಪುಸ್ತಕ ಪ್ರಕಾಶನ, ೨೦೧೩

೫. ಚಿದಂಬರ ರಹಸ್ಯ, ಪುಸ್ತಕ ಪ್ರಕಾಶನ

೬. ಅಲೆಮಾರಿಯ ಅಂಡಮಾನ್ ಮತ್ತು ನೈಲ್ ನದಿ, ಪುಸ್ತಕ ಪ್ರಕಾಶನ, ೨೦೧೪

೭. ಹೊಸವಿಚಾರಗಳು, ಪುಸ್ತಕ ಪ್ರಕಾಶನ

೮. ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ೨೦೧೦

೯. ಸಹಜ ಕೃಷಿ, ಪುಸ್ತಕ ಪ್ರಕಾಶನ, ೨೦೧೬

೧೦. ಜುಗಾರಿ ಕ್ರಾಸ್, ಪುಸ್ತಕ ಪ್ರಕಾಶನ,

೧೧. ನಿಗೂಢ ಮನುಷ್ಯರು, ಪುಸ್ತಕ ಪ್ರಕಾಶನ,

೧೨. ಮಾಯಾಲೋಕ, ಪುಸ್ತಕ ಪ್ರಕಾಶನ, ೨೦೧೮

೧. ೨ ನಾಗೇಶ ಹೆಗಡೆ ಅವರ ಮೂಲ ಪಠ್ಯಗಳು

೧. ದುಂದುಮಾರ, ಭೂಮಿ ಬುಕ್ಸ್, ೨೦೧೨

೨. ಅಭಿವೃದ್ಧಿಯ ಅಂಧಯುಗ, ಭೂಮಿ ಬುಕ್ಸ್, ೨೦೧೦

೩. ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು, ಭೂಮಿ ಬುಕ್ಸ್, ೨೦೧೩

೪. ಪ್ರತಿದಿನ ಪರಿಸರದಿನ, ಅಂಕಿತ ಪುಸ್ತಕ, ೨೦೧೧

೫. ಇರುವುದೊಂದೇ ಭೂಮಿ, ಅಂಕಿತ ಪುಸ್ತಕ, ೨೦೧೨

೬. ಹಳ್ಳೀಮುಕ್ಕ ಎಲ್ಲೆಲ್ ಹೊಕ್ಕ, ಭೂಮಿ ಬುಕ್ಸ್, ೨೦೧೬

೭. ಕೆರೆಯಲಿ ಚಿನ್ನ ಕೆರೆಯೇ ಚಿನ್ನ, ಭೂಮಿ ಬುಕ್ಸ್, ೨೦೧೧

೮. ಭೂಮಿಯೆಂಬ ಗಗನನೌಕೆ, ಭೂಮಿಬುಕ್ಸ್, ೨೦೧೬

೯. ಸುರಿಹೊಂಡ ಭರತ ಖಂಡ, ಅಂಕಿತ ಪುಸ್ತಕ, ೨೦೧೦

೨. ಆನುಷಂಗಿಕ ಆಕರಗಳು

೧. ಆರ್.ಡಿ.ಜಿ-ಸಂಪಾದನೆ, ೨೦೧೫, ತೇಜಸ್ವಿಯನ್ನು ಹುಡುಕುತ್ತಾ, ಸಪ್ನಾ ಬುಕ್ ಹೌಸ್, ಬೆಂಗಳೂರು

೨. ಎ.ಓ.ಆವಲಮೂರ್ತಿ, ೨೦೧೨, ಸಂಶೋಧನಾ ಮಹಾಪ್ರಬಂಧ, ಜನಪ್ರಿಯ ವಿಜ್ಞಾನ ಸಾಹಿತ್ಯ, ಬೆಂ.ವಿ

೩. ಎಸ್.ಬಿ.ಯೋಗೀಶ, ೨೦೧೬, ಲಂಕೇಶ್ ಮತ್ತು ತೇಜಸ್ವಿ ಅವರ ನವ್ಯ ಮತ್ತು ನವ್ಯೋತ್ತರ ಕಾದಂಬರಿಗಳ ಸ್ವರೂಪ, ಮೈ.ವಿ.

೪. ಕಸ್ತೂರಿ ರಂಗನ್ ವರದಿ ಹಾಗೂ ಇ-ಪತ್ರಿಕೆಗಳು

೫. ಕರಿಗೌಡ ಬೀಚನಹಳ್ಳಿ, ತೇಜಸ್ವಿ ಬದುಕು-ಬರಹ,

೬. ಗೌರಿ ಸುಂದರ್ ಸಂಪಾದನೆ, ೨೦೧೬, ಪೂರ್ಣಚಂದ್ರ ತೇಜಸ್ವಿಗಳ ಕುರಿತು, ಸುಂದರ ಪ್ರಕಾಶನ,

೭. ಡಾ.ಹೆಚ್.ಆರ್. ಕೃಷ್ಣಮೂರ್ತಿ, ೨೦೧೦, ಪರಿಸರ ಅಧ್ಯಯನ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ

೮. ಡಾ.ಪಿ.ಕೃಷ್ಣಪ್ಪ ಶೆಟ್ಟಿ, ಡಿ.ಆರ್.ನಟರಾಜ್-ಸಂಪಾದನೆ, ೧೯೯೮, ಪರಿಸರ: ಮುಂದೇನು? ಪರಿಸರ ವಿಜ್ಞಾನ ಪರಿಷತ್ತು, ಜವಾಹರ್‌ಲಾಲ್ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್

೯. ಡಾ.ಎನ್.ಎ.ಮಧ್ಯಸ್ಥ, ೧೯೯೮, ಜೀವವೈವಿಧ್ಯ, ಪರಿಸರ ವಿಜ್ಞಾನ ಪರಿಷತ್ತು, ಜವಾಹರ್‌ಲಾಲ್ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್,

೧೦. ಡಾ.ಗುರುಪಾದ ಮರಿಗುದ್ದಿ, ೨೦೦೪, ಕುವೆಂಪು ಕಾದಂಬರಿಗಳು, ಕುವೆಂಪು ಕಾದಂಬರಿಗಳಲ್ಲಿ ಜೈವಿಕಜಾಲ, ಪ್ರಕಾಶಕರು ಕರ್ನಾಟಕ ಸಾಹಿತ್ಯ ಅಕಾಡೆಮಿ,

೧೧. ಡಾ.ಹೆಚ್.ಆರ್.ಕೃಷ್ಣಮೂರ್ತಿ, ೨೦೦೮, ಕಲ್ಪವೃಕ್ಷದ ಜಾಡು ಹಿಡಿದು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ

೧೨. ಡಾ.ಹೆಚ್.ಆರ್.ಕೃಷ್ಣಮೂರ್ತಿ, ೨೦೧೦, ಪರಿಸರ ಅಧ್ಯಯನ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ

೧೩. ಡಾ.ಪಿ.ಕೃಷ್ಣಪ್ಪ ಶೆಟ್ಟಿ, ಡಿ.ಆರ್.ನಟರಾಜ್ ಸಂಪಾದನೆ, ೧೯೯೮, ಪರಿಸರ:ಮುಂದೇನು? ಪರಿಸರ ವಿಜ್ಞಾನ ಪರಿಷತ್ತು, ಜವಾಹರ್‌ಲಾಲ್ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್

೧೪. ಡಾ.ಎಚ್.ಎಂ.ಮಹೇಶ್ವರಯ್ಯ, ೨೦೧೩, ಪೂರ್ಣಚಂದ್ರ ತೇಜಸ್ವಿ ನವಕರ್ನಾಟಕ ಪ್ರಕಾಶನ

೧೫. ಡಾ.ಎನ್.ಕೆ.ಕೋದಂಡರಾಮ, ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ

೧೬. ಡಾ.ಹೆಚ್.ಎಂ.ಗಣೇಶಯ್ಯ, ೨೦೧೧, ಕನ್ನಡದಲ್ಲಿ ವಿಜ್ಞಾನ ಸಂವಹನ, ಉದಯಭಾನು ಅಧ್ಯಯನ ಕೇಂದ್ರ,
೧೭. ಡಿ.ಪುರುಷೋತ್ತಮ, ೨೦೧೬, ಕುವೆಂಪು ಮತ್ತು ತೇಜಸ್ವಿ–ಬದುಕು ಬರಹಗಳ ಸಾಮ್ಯ ಮತ್ತು ವೈವಿದ್ಯತೆ, ಮೈ.ವಿ
೧೮. ಜಿ.ಎಸ್.ಭಟ್ಟ ಸಂಪಾದನೆ, ೨೦೧೫, ತೇಜಸ್ವಿಯವರ ಕೃತಿಗಳು, ತನುಮನ ಪ್ರಕಾಶನ
೧೯. ಜೀವ ವೈವಿಧ್ಯದ ಅಂತರ್‌ಜಾಲ ಮಾಹಿತಿ ಲಭ್ಯತೆಗಳು
೨೦. ಟಿ.ಎಸ್.ವಿವೇಕಾನಂದ, ೨೦೦೫, ಭೂಮಿಗೀತೆ, ಕಿಕ್ಕೇರಿ ಪಬ್ಲಿಕೇಷನ್ಸ್, ಬೆಂಗಳೂರು
೨೧. ಟಿ.ಎಸ್.ವಿವೇಕಾನಂದ, ೨೦೧೦, ಪರಿಸರ ಕಥನ, ಕಿಕ್ಕೇರಿ ಪಬ್ಲಿಕೇಷನ್ಸ್, ಬೆಂಗಳೂರು
೨೨. ಟಿ.ಎಸ್.ವಿವೇಕಾನಂದ, ಜೀವ ಪಲ್ಲಟಗಳ ಆತ್ಮಕಥನ,
೨೩. ಟಿ.ಪಿ.ಅಶೋಕ, ತೇಜಸ್ವಿ ಕಥನ, ೨೦೧೨
೨೪. ಧನಂಜಯ ಜೀವಾಳ ಬಿ.ಕೆ., ೨೦೧೧, ಕಾಖನ ಸಂತ –ತೇಜಸ್ವಿ, ಅಂಕಿತ ಪುಸ್ತಕ, ಬೆಂಗಳೂರು.
೨೫. ನರಹಳ್ಳಿ ಬಾಲಸುಬ್ರಹ್ಮಣ್ಯ, ಸಾಹಿತ್ಯ ಸಂಸ್ಕೃತಿ
೨೬. ನಾಗೇಶ ಹೆಗಡೆ, ಈಶ್ವರ ಪ್ರಸಾದ್, ೨೦೧೪, ತೇಜಸ್ವಿ–ಕೀಟ ಮತ್ತು ಆರ್ಕಿಡ್ ಲೋಕ, ಪರಿಸರ ನಸರ್ಗ ಸಂರಕ್ಷಣಾ ಸಂಸ್ಥೆ, ಬೆಂಗಳೂರು
೨೭. ನಾಗೇಶ ಹೆಗಡೆ – ವಿಶ್ವ ಭೂಮಿಯ ದಿನದಂದು ಗಾಂಧೀ ಭವನದಲ್ಲಿ ಮಾತನಾಡಿದ ಸಂದರ್ಭ, ಬ್ಲಾಗ್ ವಿಡಿಯೋ
೨೮. ನಾಗೇಶ ಹೆಗಡೆ, ದಿನಾಂಕ: ೦೨/೧೨/೨೦೧೫ ರಂದು ಪ್ರಜಾವಾಣಿಯಲ್ಲಿ ಪ್ರಕಟವಾದ ವಿಜ್ಞಾನ ವಿಶೇಷ ಅಂಕಣದಲ್ಲಿನ 'ತಳಬಾಚು ಮೀನುಗಾರಿಕೆ (ಬಾಟಮ್ ಟ್ರಾಲಿಂಗ್)' ಹಾಗೂ 'ಗಿಲ್ ನೆಟ್ಟಿಂಗ್' ಲೇಖನದ ಅಂಶಗಳು
೨೯. ನಾಗೇಶ ಹೆಗಡೆ, ೧೯೯೮, ಲೇಖನ–ಮಾಲಿನ್ಯ ನಲ್ದಾಣ!? ಪರಿಸರ ವಿಜ್ಞಾನ ಪರಿಷತ್ತು, ಜವಾಹರ್‌ಲಾಲ್ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್
೩೦. ನಾಗೇಶ ಹೆಗಡೆ, ೨೦೧೧, ಬೆಳಗಾವಿ ವಿಶ್ವಕನ್ನಡ ಸಮ್ಮೇಳನ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಲೇಖನ
೩೧. ನಾಗೇಶ ಹೆಗಡೆ ಬ್ಲಾಗ್ ಟಿಪ್ಪಣಿಗಳು
೩೨. ನಾಗೇಶ ಹೆಗಡೆ, ದಿನಾಂಕ: ೧೪.೦೧.೨೦೧೬ ರಂದು ಪ್ರಜಾವಾಣಿ ದೈನಕದ ವಿಜ್ಞಾನ ವಿಶೇಷ ಅಂಕಣದಲ್ಲಿ ಪ್ರಕಟಗೊಂಡ 'ತಿಮಿಂಗಿಲಗಳಿಗೆ ಮರಳಶಯ್ಯೆಯೇ ಮರಣಶಯ್ಯೇ' ಎಂಬ ಲೇಖನದ ಅಂಶಗಳು

೩೩. ನಾಗೇಶ ಹೆಗಡೆ, ದುಂದುಮಾರ, ಪುಟ:೪೯-೫೫ ಹಾಗೂ ಬೆಳಗಾವಿ ವಿಶ್ವಕನ್ನಡ ಸಮ್ಮೇಳನ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಲೇಖನ, ೨೦೧೧.

೩೪. ನಾಗೇಶ ಹೆಗಡೆ ಬ್ಲಾಗ್‌ನ ವಿಡಿಯೋ ಭಾಷಣಗಳು

೩೫. ನೇಮಿಚಂದ್ರ: ೧೯೯೩,

೩೬. ಪ್ರಜಾವಾಣಿ ದೈನಿಕದಲ್ಲಿ ದಿನಾಂಕ:೬, ಜುಲೈ ೨೦೧೮ ರಂದು ಪ್ರಕಟಗೊಂಡ ರಾಮಚಂದ್ರ ಗುಹಾ ಅವರ ಲೇಖನದ ಅಂಶಗಳು

೩೭. ಪ್ರಜಾವಾಣಿ ದೈನಿಕದಲ್ಲಿ ೨೦ ಜೂನ್ ೨೦೧೨ ರಲ್ಲಿ ಪ್ರಕಟವಾದ ಲೇಖನದ ಅಂಶಗಳು

೩೮. ಪ್ರಜಾವಾಣಿ ದೈನಿಕದಲ್ಲಿ ಜೂನ್ ೪, ೨೦೧೧ರಲ್ಲಿ 'ಭೂಮಿಕಾ' ವಿಶೇಷ ಅಂಕಣದಲ್ಲಿ ಪ್ರಕಟಗೊಂಡ ಅಂಶಗಳು.

೩೯. ಪ್ರೊ.ಕೆ.ಭೈರಪ್ಪ, ೨೦೧೨, ಪರಿಸರ ಪ್ರಜ್ಞೆ, ಸಪ್ನಾ ಬುಕ್ ಹೌಸ್, ಬೆಂಗಳೂರು.

೪೦. ಪ್ರೊ.ಎಚ್.ಆರ್.ರಾಮಕೃಷ್ಣರಾವ್, ಟಿ.ಆರ್.ಅನಂತರಾಮು, ೨೦೧೧, ಆಧುನಕ ಕನ್ನಡ ಸಾಹಿತ್ಯ–ವಸ್ತುವೈವಿಧ್ಯ, ಉದಯಭಾನು ಅಧ್ಯಯನ ಕೇಂದ್ರ.

೪೧. ಮಾಧವ ಗಾಡ್ಗೀಳ್ ಮತ್ತು ರಾಮಚಂದ್ರ ಗುಹಾ, ೨೦೦೩, ಪರಿಸರ ನ್ಯಾಯದ ತಕ್ಕಡಿಯಲ್ಲಿ, ಅನು.ಶಾರದಾಗೋಪಾಲ.

೪೨. ಮಾಧವ ಗಾಡ್ಗೀಳರ ಪಶ್ಚಿಮಘಟ್ಟ ವರದಿ.

೪೩. ರಾಮಚಂದ್ರ ಗುಹಾ ಅವರ ಹಿಂದೂ ಪತ್ರಿಕೆಯಲ್ಲಿ ಪ್ರಟವಾದ ಎನ್‌ವಿರಾನ್‌ಮೆಂಟಲಿಸಂ ಲೇಖನದ ಅಂಶಗಳು.

೪೪. 'ವರ್ತಮಾನ' ಇ ಪತ್ರಿಕೆಯ ಪಶ್ಚಿಮಘಟ್ಟ ಆಧಾರಿತ ಲೇಖನಗಳು.

೪೫. ವಿಠ್ಠಲ್ ಭಂಡಾರಿ, ವಿಜ್ಞಾನ ಬರಹ ಟಿಪ್ಪಣಿಗಳು, ನಾಗೇಶ್ ಹೆಗಡೆ ಬ್ಲಾಗ್ ಸಂಗ್ರಹ.

೪೬. ವಿಜ್ಞಾನ ವಿಶೇಷ (ಪ್ರಜಾವಾಣಿ) ಅಂಕಣದ ಬರವಣಿಗೆಗಳು.

೪೭. ಶಿವರಾಮ ಕಾರಂತ, ವಿಜ್ಞಾನ ಪ್ರಪಂಚ, ನಾಲ್ಕನೇ ಸಂಪುಟದ ಮುನ್ನುಡಿ.

೪೮. ಶಿವ ವಿಶ್ವನಾಥನ್, ಪ್ರತಿಭೆಯ ಒಂದು ಪ್ರವಾಹ, ಅಂಕಿತ ಪ್ರಕಾಶನ, ಬೆಂಗಳೂರು.

೪೯. ಶೂದ್ರ ಶ್ರೀನವಾಸ ಸಂಪಾದನೆ, ೨೦೦೨, ನೆಲದ ಮಾತು, ಶೂದ್ರ ಪ್ರಕಾಶನ.

೫೦. ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ಮಾರ್ಚ್೨೭, ೨೦೧೩ರ ಲೇಖನ, ಶೀರ್ಷಿಕೆ: 'ದಿ ಪಾಸ್ಟ್ ಅಂಡ್ ಪ್ರಸೆಂಟ್ ಆಫ್ ಇಂಡಿಯನ್ ಎನ್‌ವಿರಾನ್‌ಮೆಂಟಲಿಸಮ್'.

೫೧. ಹಿಂದೂ ಪತಿ+ಕೆಯಲ್ಲಿ ಮಾರ್ಚ್೨೭, ೨೦೧೩ರಲ್ಲಿ ಪ್ರಕಟವಾದ ರಾಮಚಂದ್ರ ಗುಹಾ ಅವರ 'ದಿ ಪಾಸ್ಟ್ ಅಂಡ್ ಪ್ರಸೆಂಟ್ ಆಫ್ ಇಂಡಿಯನ್ ಎನ್‌ವಿರಾನ್‌ಮೆಂಟಲಿಸಮ್' ಲೇಖನದ ಅಂಶಗಳು.



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಶಾಸನ ಶಾಸ್ತ್ರ ಅಧ್ಯಯನ ವಿಭಾಗ